
ಕನ್ನಡಮೇರು

ಪ್ರೊ. ಟಿ.ವಿ.ವಿ. ೭೫ ಅಭಿನಂದನ ಸಂಪುಟ



ಪ್ರಧಾನ ಸಂಪಾದಕರು

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ

ಕನ್ನಡಮೇರು

ಕನ್ನಡಮೇರು

ಪ್ರೊ.ಟಿ.ವಿ.ವೆಂಕಟಾಚಲ ಶಾಸ್ತ್ರೀ - ೭೫
ಅಭಿನಂದನಸಂಪುಟ

ಪ್ರಧಾನ ಸಂಪಾದಕರು
ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ

ಸಂಪಾದಕರು
ಎಸ್.ನರಹರಿ
ಎಲ್.ಎಸ್.ಶಿವಮೂರ್ತಿ

ಪ್ರಕಾಶಕರು
ಸಂಸ್ಕೃತಿ ಪಬ್ಲಿಷಿಂಗ್ ಹೌಸ್
೬೬೮, ಕಾಶೀಪತಿ ಅಗ್ರಹಾರ, ಕೆ.ಆರ್.ಮೊಹಲ್ಲಾ
ಮೈಸೂರು ೫೭೦ ೦೨೪

KANNADAMĒRU

Prof. T.V.Venkatachala Sastry Feliciation Volume

Chief Editor

Prof. Mallepuram G.Venkatesha

Poornapreeti # 296, 10th Main, M.E.I.Lay-out

Bagalagunte, Bangalooru 560 073

Ph: 080-22731190 M : 94480 91802

Editor's

N.Narahari

160, I[st] Floor, 2[nd] Main

Kasturi Nagar

Bangalore 560043

L.S.Shivamurthy

'Sudhadri'

Mahalakshmi Layout

Kolar 563101

Publisher

Samskrithi Pablishing House

668, Kaashipathi Agrahaara

K.R.Mohalla, Mysore 570 024

M: 99459 66979

Pages: xvi + 356, **Rs. 350/-**

First Impression : **2008**

Paper Use: 70 GSM NS Maplitho

D.T.P

Yaji Graphics, Hospet

Cell: 94499 22800

Printed at

Harsha Printers, Mysore, 2332176

Cover Design & Printing

Svan Printers, Bangalore, 080-26262233

ಪ್ರಧಾನ ಸಂಪಾದಕನ ನುಡಿ

ಕಳೆದ ಒಂದು ವರ್ಷದ ಹಿಂದೆ ನನ್ನ ಗುರುಗಳಾದ ಪ್ರೊ.ಟಿ.ವಿ.ವೆಂಕಟಾಚಲ ಶಾಸ್ತ್ರಿಯವರ ಮಕ್ಕಳಾದ ಟಿ.ವಿ.ವಿದ್ಯಾಶಂಕರ ಅವರು ದೂರವಾಣಿಯಲ್ಲಿ ಸಂಪರ್ಕಿಸಿ ೨೦೦೮ ಆಗಸ್ಟ್ ೨೬ರಂದು ನಮ್ಮ ತಂದೆಯವರಿಗೆ ಎಪ್ಪತ್ತೈದು ಸಂವತ್ಸರಗಳು ತುಂಬುತ್ತವೆಂದೂ ಆ ಹೊತ್ತಿಗೆ ಅಭಿನಂದನ ಗ್ರಂಥವೊಂದನ್ನು ಸಿದ್ಧಪಡಿಸಲು ಸಾಧ್ಯವೆ ಎಂದೂ ಕೇಳಿದರು. ಆಗ ತಾನೆ ಪ್ರಿಯ ಮಿತ್ರರಾದ ಪ್ರೊ.ಕೆ.ಈ. ರಾಧಾಕೃಷ್ಣ ಕುರಿತ ಅಭಿನಂದನ ಗ್ರಂಥವೊಂದನ್ನು ಸಿದ್ಧಪಡಿಸಿ ಬಿಡುಗಡೆ ಮಾಡಲಾಗಿತ್ತು. ಆ ಸಂಪುಟವನ್ನು ಟಿ.ವಿ.ವಿದ್ಯಾಶಂಕರ ಗಮನಿಸಿದ್ದರೆಂದು ಅನಂತರ ತಿಳಿಯಿತು. ನನಗೂ ಉತ್ಸಾಹ ಇತ್ತು. ಪ್ರಿಯ ಗುರುಗಳಾದ ಶಾಸ್ತ್ರಿಯವರ ಎಪ್ಪತ್ತೈದರ ಸಂಭ್ರಮದಲ್ಲಿ ಗ್ರಂಥದ ಸಂಪಾದಕನಾಗುವ ಭಾಗ್ಯ ಅಯಾಚಿತವಾಗಿ ಬಂದುದು ನನಗೆ ಹರ್ಷವನ್ನು ಉಂಟುಮಾಡಿತ್ತು. ಅನಂತರ ಟಿ.ವಿ.ವಿದ್ಯಾಶಂಕರ, ಎನ್.ನರಹರಿ ಮತ್ತು ಎಲ್.ಎಸ್.ಶಿವಮೂರ್ತಿ ಮತ್ತು ನಾನು ಒಂದೆಡೆ ಸೇರಿ ಸಂಪುಟದ ಬಗೆಗೆ ವ್ಯಾಪಕವಾಗಿ ಚರ್ಚಿಸಿದೆವು. ಆ ಹೊತ್ತಿಗಾಗಲೇ ಎನ್.ನರಹರಿಯವರು, ಶಾಸ್ತ್ರಿಯವರಿಗೆ ಬರೆದ ಪತ್ರ, ಲೇಖನ ಮುಂತಾದ ಸಾಮಗ್ರಿಗಳನ್ನು ಕೂಡಿ ಹಾಕಿದ್ದರು. ಸಂಪುಟದ ಸಕಲ ಅರ್ಧಭಾಗದಷ್ಟು ಕೆಲಸ ಮುಗಿದಿತ್ತು. ನಾನು ಹರ್ಷಚಿತ್ತನಾಗಿ ಸಂಪುಟದ ಒಟ್ಟು ರೂಪುರೇಖೆಗಳನ್ನು ಅವರ ಮುಂದೆ ಸಿದ್ಧಪಡಿಸಿದೆ. ಅದಕ್ಕನುಗುಣವಾಗಿ ಸಂಪುಟವು ಕಳೆದ ಒಂದೂವರೆ ವರ್ಷಗಳ ಅವಧಿಯಲ್ಲಿ ಹಲವು ರೂಪಗಳನ್ನು ಪಡೆದು ಕನ್ನಡಮೇರು ಈಗ ನಿಮ್ಮ ಮುಂದಿದೆ.

ಪ್ರೊ.ಟಿ.ವಿ.ವೆಂಕಟಾಚಲ ಶಾಸ್ತ್ರಿಯವರು ಪಂಡಿತ ಪರಂಪರೆಯ ಹಾಗೂ ಕನ್ನಡ ಶಾಸ್ತ್ರೀಯತೆಯ ಮುಖ್ಯ ಪ್ರತಿನಿಧಿಯಷ್ಟೆ. ಪಾಂಡಿತ್ಯ ಕೇವಲ ಜಡವಾಗದೆ ಅದೊಂದು ಸಂಸ್ಕೃತಿಯ ಜೀವಚೈತನ್ಯ ಎಂಬ ಅಂಶಕ್ಕೆ ನಿದರ್ಶನವಾಗಿ ಶಾಸ್ತ್ರಿಯವರ ಬರೆಹಗಳು ನಮ್ಮ ಮುಂದಿವೆ. ಶಾಸ್ತ್ರಿಯವರ ಬರೆಹಗಳನ್ನು ಓದದೆ ಪ್ರಾಚೀನ ಸಾಹಿತ್ಯದ ಅಧ್ಯಯನ ಮುಗಿಯುವುದಿಲ್ಲ. ಅವರು ಛಂದಸ್ಸು, ಅಲಂಕಾರ, ವ್ಯಾಕರಣ, ಶಬ್ದಜಿಜ್ಞಾಸೆ ಮತ್ತು ಹಳೆಗನ್ನಡ ಸಾಹಿತ್ಯ ವಿಮರ್ಶೆಗಳಲ್ಲಿ ತೋರಿಸುವ ಅಪೂರ್ವವಾದ ಒಳನೋಟಗಳು ಯಾರಿಗಾದರೂ ಬೆರಗುತರುತ್ತದೆ. ಶಾಸ್ತ್ರಿಯವರ ಬರವಣಿಗೆಯಲ್ಲಿ ಶಾಸ್ತ್ರ ನಿರ್ದುಷ್ಟತೆಯನ್ನು ನಾವು ಉದ್ದಕ್ಕೂ ಕಾಣಬಹುದು. ಅವರು ಪ್ರಾಚೀನ ಸಾಹಿತ್ಯ ಕುರಿತ ಬರೆಹಗಳಲ್ಲಿ ಅಸಾಧಾರಣವಾದ ಸೋಪಜ್ಞತೆಯನ್ನು ಬರೆಹದ ಉದ್ದಕ್ಕೂ ತೋರಿಸಿದ್ದಾರೆ.

ಅವರು ಸಂಪಾದಿಸಿರುವ ಪ್ರಾಚೀನ ಹಳಗನ್ನಡ ಗ್ರಂಥಗಳು ತೋರಮಾಣಿಕ್ಯದಂತೆ ಫಳಫಳ ಹೊಳೆಯುತ್ತವೆ. ಶಬ್ದಮಣಿದರ್ಪಣಂ, ಆದಿಪುರಾಣಂ ಮತ್ತು ಪಂಪಸಂಪುಟ ನನ್ನ ಮಾತಿಗ ಸರ್ವಶ್ರೇಷ್ಠ ಉದಾಹರಣೆಗಳಾಗಿವೆ. ಗ್ರಂಥ ಸಂಪಾದನೆಯಲ್ಲಿ ತಮ್ಮದೇ ಆದ ಛಾಪನ್ನು

ಶಾಸ್ತ್ರಿಯವರು ಮೂಡಿಸಿದ್ದಾರೆ. ಅವರು ಸಂಪಾದಿಸಿರುವ ಗ್ರಂಥದ ಪ್ರತಿ ಪುಟಗಳೂ ಈ ಮಾತಿಗೆ ಸಾಕ್ಷಿನುಡಿಯುತ್ತವೆ. ಪ್ರತಿ ಸಂಪುಟಕ್ಕೂ ಅವರು ಬರೆದಿರುವ ದೀರ್ಘ ಪ್ರಸ್ತಾವನೆಗಳನ್ನು ಓದಿಯೇ ಬೆರಗಾಗಬೇಕು. ಶಾಸ್ತ್ರಿಯವರ ವಿಸ್ತಾರವಾದ ಓದಿಗೆ ಇವು ಸಂಕೇತಗಳಾಗಿವೆಯೆಂಬುದು ನನ್ನ ತಿಳಿವಳಿಕೆ. ಪ್ರಾಚೀನ ಗ್ರಂಥ ಸಂಪಾದನೆಗೆ ಅವರ ವಿಶಿಷ್ಟ ಕೊಡುಗೆ ಇರುವಂತೆ ಆಧುನಿಕ ಗ್ರಂಥ ಸಂಪಾದನೆಗೂ ಅವರಿಂದ ಆಗಿರುವ ಕೆಲಸಗಳು ಬೆಲೆ ಕಟ್ಟಲಾರದವು. ಇವರು ಸಂಪಾದಿಸಿರುವ 'ಎಸ್.ಜಿ. ನರಸಿಂಹಾಚಾರ್ಯರ ಕವಿತೆಗಳು' ಎಂಬ ಸಂಪುಟವನ್ನು ಆಸಕ್ತರು ಗಮನಿಸಬಹುದು. ಈ ಸಂಪುಟದ ಸಂಪಾದನೆ ಮತ್ತು ಪ್ರಸ್ತಾವನೆಯ ಭಾಗಗಳಲ್ಲಿ ಹತ್ತೊಂಬತ್ತನೆಯ ಶತಮಾನದ ಸಾಹಿತ್ಯ ಮತ್ತು ಸಂಸ್ಕೃತಿ ಚಿಂತನೆಗಳು ಹರಳುಗಟ್ಟಿವೆ. ಎಸ್.ಜಿ.ನ. ಅವರ ಸಾಹಿತ್ಯ ಕುರಿತು ಚರ್ಚಿಸುತ್ತಿರುವಂತೆಯೇ ಸಮಕಾಲೀನ ಕವಿಗಳ ಹಾಗೂ ಪಾಶ್ಚಿಮಾತ್ಯ ಸಾಹಿತ್ಯವನ್ನು ಕುರಿತು ತೌಲನಿಕವಾಗಿ ಚರ್ಚಿಸಿರುವುದನ್ನು ಗಮನಿಸಬಹುದು.

ನಾನು ಮೊದಲೇ ತಿಳಿಸಿದ್ದಂತೆ ಛಂದಸ್ಸು ಮತ್ತು ವ್ಯಾಕರಣಗಳು ಜೋಡುಬಗೆಯವು. ಛಂದಸ್ಸು ಕಾವ್ಯದ ಒಳಗನ್ನೂ ಹೊರಗನ್ನೂ ಸೂಕ್ಷ್ಮ ಪ್ರತಿಭೆಯಿಂದ ರೂಪಣಗೊಳಿಸುತ್ತದೆ. ವ್ಯಾಕರಣವು ಶಾಬ್ದಿಕ ವ್ಯಾಪಾರದ ವಿವಿಧ ಬಗೆಗಳನ್ನೂ, ಸಾಂಸ್ಕೃತಿಕ ಸಂಗತಿಗಳನ್ನೂ ತಿಳಿಸುತ್ತದೆ. ಇವರೆಡೂ ಜ್ಞಾನ ಕ್ಷೇತ್ರಗಳು ಶಾಸ್ತ್ರಿಯವರಿಗೆ ಬಹುಪ್ರಿಯವಾದವುಗಳೇ ಸರಿ. ಈ ಎರಡೂ ಜ್ಞಾನಕ್ಷೇತ್ರಗಳಲ್ಲಿ ಶಾಸ್ತ್ರಿಯವರು ಸಾಧಿಸಿರುವ ಮೇಲ್ಮೆಯನ್ನು ತಿಳಿಯಬಯಸುವವರು 'ಕನ್ನಡ ಛಂದೋಮೀಮಾಂಸೆ' ಹಾಗೂ 'ಶಬ್ದಮಣಿದರ್ಪಣಂ' ಗ್ರಂಥಗಳನ್ನು ಅವಲೋಕಿಸಬಹುದು. ಶಾಸ್ತ್ರೀಯ ಸಂಪುಟಗಳ ಬರೆಹಗಳು ಅವರ ವಿದ್ವತ್ತನ್ನೂ ಸೂಕ್ಷ್ಮ ಸಂವೇದನೆಯನ್ನೂ ಖಾಚಿತ್ಯವನ್ನೂ ಪ್ರತಿಮಿಸುತ್ತವೆ. ಆ ಸಂಪುಟಗಳ ವಿಷಯ ವೈವಿಧ್ಯವಂತೂ ಯಾರನ್ನಾದರೂ ಮೂಕವಿಸ್ಮಿತನನ್ನಾಗಿಸುತ್ತದೆ. ಅವರು ತಮ್ಮ ಗುರುಗಳಾದ ಪ್ರೊ.ಡಿ.ಎಲ್.ನರಸಿಂಹಾಚಾರ್ಯರ ಹಾದಿಯಲ್ಲಿ ನಡೆದವರು. ವಿಚಾರಸರಣಿ, ಶೋಧನಾತ್ಮಕ ದೃಷ್ಟಿಕೋನ, ವಿಷಯ ಮಂಡನೆ, ಸೂಕ್ಷ್ಮ ಒಳನೋಟ ಇವೇ ಮುಂತಾದ ಗುಣಗಣಗಳು ಪ್ರೊ.ಡಿ.ಎಲ್.ಎನ್. ಅವರಿಂದ ನೇರವಾಗಿ ದತ್ತವಾಗಿವೆ.

ಪ್ರೊ.ಟಿ.ವಿ.ವೆಂಕಟಾಚಲ ಶಾಸ್ತ್ರಿಯವರನ್ನು ಕುರಿತ ಈ ಸಂಪುಟವು ಪ್ರಮುಖವಾಗಿ ಮೂರು ಭಾಗಗಳನ್ನು ಒಳಗೊಂಡಿದೆ. ಪ್ರೊ.ಟಿ.ವಿ.ವಿ. ಅವರಿಗೆ ಗುರುಗಳು, ಸ್ನೇಹಿತರು, ಆತ್ಮೀಯ ಶಿಷ್ಯರು ಬರೆದ ಅಪರೂಪ ಪತ್ರಗಳು ಈ ಸಂಪುಟದ ಮೊದಲನೆಯ ಭಾಗದಲ್ಲಿವೆ. ಶಾಸ್ತ್ರಿಯವರ ಕುಟುಂಬದ ಸದಸ್ಯರ ಬರೆಹಗಳು ಈ ಭಾಗದಲ್ಲಿ ಸೇರಿಕೊಂಡಿರುವುದು ಉಚಿತವೇ ಆಗಿದೆ. ಬಂಧು-ಬಳಗದವರ ಬರೆಹಗಳಲ್ಲಿ ತೋರುವ ಪ್ರೀತಿ, ವಾತ್ಸಲ್ಯ, ಗೌರವಗಳು ಓದುಗರಾದ ನಮ್ಮಲ್ಲಿ ಅಪೂರ್ವ ಸಹಸ್ಪಂದನಗಳನ್ನು

ಮೂಡಿಸುತ್ತವೆ. ಕುಟುಂಬದ ಹಿರಿಯರಾಗಿ ಟಿ.ವಿ.ವಿ.ಯವರು ನಡೆದುಕೊಂಡ ಹಲವು ಪ್ರಸಂಗಗಳು ಇಲ್ಲಿ ಚೆಲುವಾಗಿ ಮೈದಾಳಿವೆ. ಈ ಸಂಪುಟದ ಎರಡನೆಯ ಭಾಗವು ಶಾಸ್ತ್ರಿಯವರ ಸಮಕಾಲೀನ ಹಾಗೂ ಕಿರಿಯ ಸಮಕಾಲೀನರ ಬರೆಹಗಳನ್ನು ಹೊಂದಿವೆ. ಪಾಂಡಿತ್ಯ ಮತ್ತು ಶಾಸ್ತ್ರೀಯತೆ ಟಿ.ವಿ.ವಿ. ಅವರ ಎರಡು ಕಣ್ಣುಗಳು. ಪಾಂಡಿತ್ಯವಿಲ್ಲದೆ ಶಾಸ್ತ್ರೀಯತೆ ಸಿದ್ಧಿಸಲಾರದು. ಶಾಸ್ತ್ರೀಯತೆ ಇಲ್ಲದೆ ಪಾಂಡಿತ್ಯ ಬರಲಾರದು. ಇವೆರಡೂ ಅನ್ಯೋನ್ಯಾಶ್ರಯವನ್ನು ಪಡೆದಿವೆ. ಅನೇಕ ಗಣ್ಯ ವಿದ್ವಾಂಸರ ಬರೆಹಗಳಲ್ಲಿ ಈ ರಹಸ್ಯವನ್ನು ನಾವು ಕಾಣಬಹುದು. ಶಾಸ್ತ್ರಿಯವರ ಗ್ರಂಥಗಳನ್ನು ಕುರಿತ ಬರೆಹಗಳಲ್ಲಿ ಈ ಅಂಶವನ್ನು ಕಾಣಬಹುದು. ಹಿರಿಯ ಲೇಖಕರಾದ ಹಾ.ಮಾ.ನಾ., ಎಚ್ಚೆಸ್ಕೆ ಅವರ ಬರೆಹಗಳು ಹಾಗೂ ಕಿರಿಯ ಲೇಖಕರಾದ ಶ್ರೀರಾಮ ಭಟ್ಟ, ನರಹಳ್ಳಿ, ನಂಗಲಿ ಇವರ ಬರೆಹಗಳು ಅನೇಕ ಒಳನೋಟಗಳನ್ನು ಒಳಗೊಂಡಿವೆ. ಶಾಸ್ತ್ರಿಯವರ ಒಟ್ಟು ಬರೆಹಗಳ ನಿಶ್ಚಿತ ಧೋರಣೆ, ವಸ್ತುನಿಷ್ಠತೆಗಳನ್ನು ಎಲ್ಲ ಲೇಖಕರೂ ಕೊಂಡಾಡಿದ್ದಾರೆ. ಈ ಸಂಪುಟದ ಮೂರನೆಯ ಭಾಗವು ಹಲವಾರು ಅನುಬಂಧಗಳನ್ನು ಒಳಗೊಂಡಿದೆ. ಶಾಸ್ತ್ರಿಯವರ ಒಟ್ಟು ಕೃತಿಗಳನ್ನು ತಿಳಿಯಲು ಇವು ಸಹಾಯಕ ಸಾಮಗ್ರಿಯಾಗಿವೆ.

ಪ್ರೊ. ಟಿ.ವಿ.ವೆಂಕಟಾಚಲ ಶಾಸ್ತ್ರಿಯವರು ನಮ್ಮ ನಡುವಣ ಅಪೂರ್ವ ಕನ್ನಡ ವಿದ್ವಾಂಸರೆಂಬುದು ರುಜುವಾತಾಗಿದೆ. ಅವರಿಂದ ವಿದ್ವತ್‌ಲೋಕ ಬೆಳಗಿದೆ. ಈ ಮಹನೀಯರನ್ನು ಕುರಿತು ಒಂದು ಅಭಿನಂದನ ಸಂಪುಟ ತರುವಾಗ ಸಾಕಷ್ಟು ಎಚ್ಚರವಹಿಸಿದ್ದೇನೆ. ಈ ಮಹಾಸಂಪುಟವನ್ನು ಮಹಾಜನರಿಗೆ ಒಪ್ಪಿಸುವಾಗ ಅನೇಕರ ನೆರವನ್ನು ನೆನೆಯುವುದು ನನಗೆ ಪ್ರಿಯವಾದ ಕೆಲಸ. ನಾನು ಮೊದಲಿಗೆ ಈ ಸಂಪುಟದ ಎಲ್ಲ ಬರಹಗಾರರನ್ನು ತುಂಬು ಮನಸ್ಸಿನಿಂದ ನೆನೆಯುತ್ತೇನೆ. ಟಿ.ವಿ.ವಿ. ಅವರ ಮೇಲಿನ ಪ್ರೀತಿಯಿಂದ ಅವರ ಬಂಧು-ಬಳಗದವರು ಪ್ರೀತಿ ಗೌರವಗಳಿಂದ ಕೂಡಿರುವ ಅನೇಕ ಕಿರು ಲೇಖನಗಳನ್ನು ನೀಡಿದ್ದಾರೆ. ಆ ಎಲ್ಲ ಬಂಧುಗಳಿಗೂ ನನ್ನ ವಂದನೆಗಳು ಸಲ್ಲುತ್ತವೆ. ಎರಡನೆಯ ಭಾಗದಲ್ಲಿರುವ ಒಡನಾಟದ ನೆನಪುಗಳು ಅಪೂರ್ವವಾಗಿವೆ. ಹಿರಿಯರಾದ ಶ್ರೀ ಎಚ್.ಎಸ್. ದೊರೆಸ್ವಾಮಿ ಅವರಿಂದ ಹಿಡಿದು ಶಿಷ್ಯ ಮಿತ್ರರಾದ ಶ್ರೀ ಕೂ.ಗಿ. ಗಿರಿಯಪ್ಪ ಇವರ ವರೆಗೂ ಬರೆದಿರುವ ಲೇಖನಗಳು ಆಪ್ತವಾಗಿವೆ, ಗಣ್ಯವಾಗಿವೆ. ಈ ಭಾಗದಲ್ಲಿ ಟಿ.ವಿ.ವಿ. ಅವರ ಗ್ರಂಥಾವಲೋಕನವೂ ಉಂಟು. ಹಿರಿ ಕಿರಿಯ ಗಣ್ಯ ವಿದ್ವಾಂಸರು ಶಾಸ್ತ್ರಿಯವರ ಪ್ರಕಟಿತ ಗ್ರಂಥಗಳ ಅವಲೋಕನವನ್ನು ಮಾಡಿಕೊಟ್ಟಿದ್ದಾರೆ. ಆ ಗ್ರಂಥಗಳ ಸತ್ವಸ್ವರೂಪವನ್ನು ಮೇಲ್ಮೆಯಿಂದ ವಿಮರ್ಶಾತ್ಮಕ ವಾಗಿ ಚರ್ಚಿಸಿದ್ದಾರೆ. ಈ ಎಲ್ಲಾ ಮಹನೀಯ ವಿದ್ವಾಂಸರಿಗೆ ನನ್ನ ಕೃತಜ್ಞತೆಗಳನ್ನು ನಮಸ್ಕಾರಪೂರ್ವಕ ಸಲ್ಲಿಸುತ್ತೇನೆ. ಇದೇ ಭಾಗದಲ್ಲಿ ಎರಡು ಸಂದರ್ಶನ ಲೇಖನಗಳಿವೆ. ಮೊದಲನೆಯ ಸಂದರ್ಶನ ಲೇಖನ ದಿ.ಎಂ.ರಾಜಗೋಪಾಲಾಚಾರ್ಯ ಅವರದ್ದು ಎರಡನೆಯ ಸಂದರ್ಶನ ಡಾ.ವಿ.ರಘು ಅವರದ್ದು. ಈ ಎರಡೂ ಸಂದರ್ಶನ ಲೇಖನಗಳು ಶಾಸ್ತ್ರಿಯವರ

ಅಂತರಂಗದ ನೆಲೆಗಳನ್ನು ಸ್ಪರ್ಶಿಸುತ್ತವೆ. ಮೊದಲ ಸಂದರ್ಶನ ಲೇಖನ ಬರೆದ ಪ್ರೊ.ಎಂ.ರಾಜಗೋಪಾಲಾಚಾರ್ಯರು ಈಗ ನಮ್ಮೊಂದಿಗಿಲ್ಲ. ಅವರನ್ನು ನೆನೆಯುವುದಷ್ಟೇ ನಮ್ಮ ಶ್ರದ್ಧೆಯ ಕೆಲಸ. ಎರಡನೆಯ ಸಂದರ್ಶನ ಲೇಖನ ಬರೆದ ಡಾ.ವಿ.ರಘು ಅವರಿಗೆ ವಂದನೆಗಳು. ಮೂರನೆಯ ಭಾಗದ ಅನುಬಂಧಗಳ ಸಿದ್ಧತೆಯಲ್ಲಿ ಸಾಹಿತ್ಯ ಪ್ರೀತಿಯುಳ್ಳ ತರುಣ ಸ. ಕಾರ್ತೀಕ್ ಶ್ರಮವಹಿಸಿ ಗ್ರಂಥ-ಲೇಖನಸೂಚಿ ಮಾಡಿಕೊಟ್ಟಿದ್ದಾರೆ. ಈ ಮೇಲೆ ಹೇಳಿದ ಎಲ್ಲಾ ಲೇಖಕ ವಿದ್ವಾಂಸರಿಗೆ ಕೃತಜ್ಞತೆಗಳನ್ನು ಬರಿ ಮಾತುಗಳಿಂದ ಹೇಳಲು ಸಾಧ್ಯವಿಲ್ಲ. ಅವರೆಲ್ಲರಿಗೂ ವಂದನೆಗಳನ್ನು ಸಲ್ಲಿಸುವುದು ನನ್ನ ಕರ್ತವ್ಯ.

ಈ ಸಂಪುಟದ ಸಿದ್ಧತೆಯಲ್ಲಿ ನನ್ನ ಜೊತೆಗೂಡಿ ದುಡಿದ ಶ್ರೀ ಎನ್.ನರಹರಿ ಮತ್ತು ಎಲ್.ಎಸ್.ಶಿವಮೂರ್ತಿ ಈ ಇಬ್ಬರು ತರುಣ ಲೇಖಕರು ಹೆಜ್ಜೆ ಹೆಜ್ಜೆಯಲ್ಲೂ ನನ್ನೊಂದಿಗೆ ದುಡಿದು ಸಂಪುಟದ ಪೂರ್ಣತೆಗೆ ಭಾಜನರಾಗಿದ್ದಾರೆ. ಇವರಿಬ್ಬರನ್ನೂ ನಾನು ಕೃತಜ್ಞತೆಯಿಂದ ನೆನೆಯುತ್ತೇನೆ. ನಾನು ಕೊಟ್ಟ ಅನೇಕ ತೊಂದರೆಗಳನ್ನು ಸಹಿಸಿಕೊಂಡು ಅತಿ ಮುತುವರ್ಜಿವಹಿಸಿ ಅಕ್ಷರ ಸಂಯೋಜನೆ ಮಾಡಿ, ಪುಟವಿನ್ಯಾಸ ರೂಪುಗೊಳಿಸಿದ ಶ್ರೀಮತಿ ಸವಿತಾ ಯಾಜಿ ಅವರಿಗೆ ಕೃತಜ್ಞತೆಗಳು ಸಲುತ್ತವೆ. ಈ ಮಹಾಸಂಪುಟವನ್ನು ತಮ್ಮ ಪ್ರಕಾಶನ ಸಂಸ್ಥೆಯಿಂದ ಹೊರತರಲು ಸಾಹಸ ಮಾಡಿದ ಸಂಸ್ಕೃತಿ ಪಬ್ಲಿಷಿಂಗ್ ಹೌಸ್ ಮಾಲೀಕರಾದ ಶ್ರೀ ಸುಬ್ರಹ್ಮಣ್ಯಂ ಅವರಿಗೂ ಮುದ್ರಿಸಿ ಕೊಟ್ಟ ಹರ್ಷ ಪ್ರಿಂಟರ್ಸ್ ಮಾಲೀಕರಿಗೂ ಪರೋಕ್ಷವಾಗಿ, ಪ್ರತ್ಯಕ್ಷವಾಗಿ ನೆರವಾದ ಎಲ್ಲರನ್ನೂ ನೆನೆಯುತ್ತೇನೆ. ಈ ಮಹಾಸಂಪುಟದ ಕೆಲಸ ಪ್ರಾರಂಭವಾದಂದಿನಿಂದ ಲೋಕಾರ್ಪಣಗೊಳ್ಳುವವರೆಗೂ ನನ್ನೊಡನೆ ಸಮಜೊತೆಯಾಗಿ ನಿಂತವರು ಶ್ರೀ ಟಿ.ವಿ.ವಿದ್ಯಾಶಂಕರ. ಇವರ ಉತ್ಸಾಹ, ಕರ್ತೃತ್ವಶಕ್ತಿ, ವಿನಯಶೀಲತೆ-ಒಂದಕ್ಕೊಂದು ಹೊಯ್‌ಕಯ್ ಆಗಿ ಪರಿಣಮಿಸಿರುವುದನ್ನು ಕಳೆದ ಒಂದು ವರ್ಷದಿಂದ ಕಂಡಿದ್ದೇನೆ. ಇವರ ನೆರವಿಲ್ಲದಿದ್ದರೆ ಈ ಮಹಾಸಂಪುಟವನ್ನು ಮುಕ್ತಾಯ ಗೊಳಿಸಲು ಸಾಧ್ಯವಿರುತ್ತಿರಲಿಲ್ಲ ಇವರಿಗೆ ನನ್ನ ಹೃದಯಪೂರ್ವಕ ಧನ್ಯವಾದಗಳು. ಪ್ರಿಯ ಗುರುಗಳಾದ ಪ್ರೊ.ಟಿ.ವಿ.ವೆಂಕಟಾಚಲಶಾಸ್ತ್ರಿ ಅವರು ಈ 'ಕನ್ನಡಮೇರು' ಅಭಿನಂದನ ಸಂಪುಟವನ್ನು ಪ್ರೀತಿಯಿಂದ ಸ್ವೀಕರಿಸಬೇಕೆಂದು ವಿನಯಪೂರ್ವಕವಾಗಿ ಕೋರುತ್ತೇನೆ. ಈ ಮಹಾಸಂಪುಟವನ್ನು ಮಹಾಜನರ ಕೈಗೆ ಇಡುತ್ತ ಹಂಸಕ್ಷೀರನ್ಯಾಯ ದಂತೆ ಪರಿಗ್ರಹಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಆಗಸ್ಟ್ ೧೫, ೨೦೦೮ | ಮಲ್ಲೇಪುರಂ ಜಿ. ವೆಂಕಟೇಶ
ವಿದ್ಯಾರಣ್ಯ

ಸಂಪಾದಕರ ಮಾತು

ಅವರೊಂದು ಹಿರಿಯ ಮಹಾನ್ ಚೇತನ, ಸಂಶೋಧನ ದಿಗ್ಗಜ. ಶೈಕ್ಷಣಿಕ ಸಾಂಸ್ಕೃತಿಕ ವೈಚಾರಿಕ ಪ್ರತಿನಿಧಿ. ಲಕ್ಷಾಂತರ ಮಂದಿಗೆ ಗುರು.

೨೦೦೭ರ ಒಂದು ದಿನ ನಾವಿಬ್ಬರೂ ಲೋಕಾಭಿರಾಮ ಮಾತಾಡುತ್ತ ೭೫ನೆಯ ವರ್ಷಕ್ಕೆ ಹೆಜ್ಜೆ ಹಾಕಿದ ವಿದ್ವಾಂಸ ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿಯವರಿಗೆ ಅಭಿನಂದನ ಗ್ರಂಥದ ಮೂಲಕ ಗೌರವ ಸಲ್ಲಿಸಿದರೆ ಹೇಗೆ? ಎಂಬ ಪ್ರಶ್ನೆಯನ್ನು ಹಾಕಿಕೊಂಡೆವು. ಈ ಬಗ್ಗೆ ಸನ್ಮಾನ್ಯ ಶಾಸ್ತ್ರಿಯವರನ್ನು, ಅವರ ಮಗ ವಿದ್ಯಾಶಂಕರ್ ಅವರನ್ನು, ಮಗಳು ಹರಿಪ್ರಿಯಾ ಅವರನ್ನು ಸಂಪರ್ಕಿಸಿದೆವು. ಫಲಶ್ರುತಿಯಾಗಿ ಅಭಿನಂದನಗ್ರಂಥದ ರೂಪರೇಷೆಗಳು ಸ್ಥೂಲವಾಗಿ ಸಾಕಾರ ಪಡೆದವು. ಅದೊಂದು ಕಾಟಾಚಾರದ ಪ್ರಕಟಣೆಯಾಗದಂತೆ, ಸಾಹಿತ್ಯದ ವಿದ್ಯಾರ್ಥಿಗಳಿಗೆ ಪರಾಮರ್ಶನ ಕೃತಿಯಾಗುವಂತೆ ಹೊರತರಲು ಎಚ್ಚರ ತಳೆಯಲು ನಾವು ನಿರ್ಧರಿಸಿದೆವು. ಮುಂದಿನ ಹಂತವಾಗಿ, ಎಲ್ಲರ ಅಪೇಕ್ಷೆಯಂತೆ, ಹಂಪಿ ವಿಶ್ವವಿದ್ಯಾಲಯದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಅವರನ್ನು ಪ್ರಧಾನ ಸಂಪಾದಕರಾಗಲು ಕೇಳಿಕೊಂಡೆವು. ಶಾಸ್ತ್ರಿಯವರ ಬಗ್ಗೆ ಅಪಾರ ಪ್ರೀತಿ-ಗೌರವಗಳನ್ನು ಇಟ್ಟುಕೊಂಡಿದ್ದ ಅವರು ಸಂತೋಷದಿಂದ ಈ ಮಹತ್ಕಾರ್ಯಕ್ಕೆ ಹಸಿರು ನಿಶಾನೆಯನ್ನು ತೋರಿಸಿದರು.

ಆರಂಭಿಕವಾಗಿ ಶಾಸ್ತ್ರಿ ಅವರ ಮೈಸೂರಿನ ಮನೆಯಿಂದ ಗ್ರಂಥಕ್ಕೆ ಬೇಕಾದ ಅಪಾರ ಲಿಖಿತ ಸಾಮಗ್ರಿಯನ್ನು ತರಲಾಯಿತು. ಅದರಲ್ಲಿ ಶಾಸ್ತ್ರಿಯವರಿಗೆ ಬಂದ ಹಿರಿಯರ, ಮಿತ್ರರ, ವಿದ್ಯಾರ್ಥಿಗಳ, ಬಂಧುಗಳ ಖಾಸಗೀ ಹಾಗೂ ಅಭಿನಂದನ ಪತ್ರಗಳು, ಪತ್ರಿಕೆಗಳಲ್ಲಿ ಪ್ರಕಟವಾದ ಅವರ ಸಾಹಿತ್ಯ ಕುರಿತ ಬರೆಹಗಳು, ಶಾಸ್ತ್ರಿಯವರ ಭಾಷಣ ಪ್ರತಿಗಳು, ಸಂದರ್ಶನಗಳು, ಅಪ್ರಕಟಿತ ಲೇಖನಗಳು ಹೀಗೆ ಸಾಕಷ್ಟು ವೈವಿಧ್ಯವಿತ್ತು. ಈ ಎಲ್ಲವನ್ನೂ ವಿಭಾಗೀಕರಿಸಿ, ಸಾರ್ವಕಾಲಿಕ ಸಾಹಿತ್ಯಕ ಬೆಲೆಯುಳ್ಳವನ್ನು ಮಾತ್ರ ಪ್ರಕಟಣೆಗೆ ಉಳಿಸಿಕೊಂಡು, ಕೇವಲ ಸಾಂದರ್ಭಿಕ ಹಾಗೂ ಪುನರಾವರ್ತಿತ ಸಂಗತಿಗಳನ್ನು ಒಳಗೊಂಡ ಬರೆಹಗಳನ್ನು ಕೈಬಿಡಲಾಯಿತು.

ಈ ಮಧ್ಯೆ ಪ್ರೊ. ಮಲ್ಲೇಪುರಂ ಅವರು ವೈಯಕ್ತಿಕವಾಗಿ ಅನೇಕ ಹಿರಿಯರಿಗೆ ಪತ್ರ ಬರೆದು, ದೂರವಾಣಿ ಮಾಡಿ, ಅಭಿನಂದನಗ್ರಂಥಕ್ಕ ಲೇಖನಗಳನ್ನು ಕೋರಿ ಪಡೆದರು. ಹೀಗೆ ಬರೆದವರಲ್ಲಿ ಶಾಸ್ತ್ರಿಯವರ ಹತ್ತಿರದ, ದೂರದ ಪ್ರಸಿದ್ಧರಿದ್ದರು. ಅವರು ತಮ್ಮ ನೆನಪು ನೋಟಗಳನ್ನು ತುಂಬಾ ವಸ್ತುನಿಷ್ಠವಾಗಿ ಹಂಚಿಕೊಂಡಿದ್ದಾರೆ. ಇಷ್ಟಕ್ಕೇ ಮಲ್ಲೇಪುರಂ ಅವರು ಸುಮ್ಮನಾಗಲಿಲ್ಲ. ಅಭಿನಂದನ ಗ್ರಂಥಕ್ಕೆ ಬರೀ ಹೊರಗಿನ ಪರಿಮಳ ನೀಡಿದರೆ ಸಾಲದು, ಶಾಸ್ತ್ರೀಯವರ ಬಂಧು ಬಳಗದವರು

ಪ್ರತಿಕ್ರಿಯಿಸಬೇಕು, ಆಗ ಗ್ರಂಥ ಒಳಗಿನಿಂದಲೂ ಸಹಜ ಸುಗಂಧ ಬೀರುವಂತಾಗುತ್ತದೆ ಎಂದರು. ಅದರ ಫಲವಾಗಿ ಶಾಸ್ತ್ರಿ ಅವರ ಒಡಹುಟ್ಟಿದವರು, ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು ಹೀಗೆ ಆತ್ಮೀಯವಾಗಿ ಉತ್ಪ್ರೇಕ್ಷೆಯಿಲ್ಲದೆ ಬರೆದವರು ಬಹಳಷ್ಟು. ಈ ಎಲ್ಲ 'ಸಾಹಿತ್ಯ'ವನ್ನು ಯಥಾವತ್ತಾಗಿ ಪ್ರಕಟಿಸಲು ಸಾಧ್ಯವಿಲ್ಲ. ಹಾಗಾಗಿ ಅದರ ಗುಣನಿರ್ಣಯವನ್ನು ಮಾಡಿದೆವು. 'ತೀರ ಖಾಸಗಿ' ಎಂಬಂತಹ ಜೊಳ್ಳನ್ನು ತೆಗೆದು 'ಗಟ್ಟಿ' ಎಂಬಂತಹ ಕಾಳನ್ನು ಉಳಿಸಿಕೊಂಡೆವು. 'ಪತ್ರ ಸಾಹಿತ್ಯ'ದಲ್ಲಿ ಈ ಕೆಲಸವನ್ನು ಹೆಚ್ಚಿಗೆ ಮಾಡಲಾಯಿತು. ಡಾ.ಟಿ.ವಿ.ವಿ. ಅಜಾತಶತ್ರುವಾದ್ದರಿಂದ ಯಾರದೇ ಅಪಶ್ರುತಿ ಇರಲಿಲ್ಲ. ಬರವಣಿಗೆಯಲ್ಲಿ ನಾವು ಗಮನಿಸಿದ್ದು ಕೇವಲ 'ಶುದ್ಧತೆ'ಯನ್ನಷ್ಟೆ. ಅದು ಫಲ ನೀಡಿದೆಯೆಂದು ಭಾವಿಸುತ್ತೇವೆ.

ಇಷ್ಟು ಮಾಡಿದ ನಾವು ಅವೆಲ್ಲವನ್ನೂ ಪ್ರೊ. ಮಲ್ಲೇಪುರಂ ಅವರಿಗೆ ಒಪ್ಪಿಸಿದೆವು. ನಾವು ಮಾಡಿದ್ದು ಸಂಪಾದನೆಯಲ್ಲ, ಸಂಗ್ರಹವಷ್ಟೆ. ನಿಜವಾದ ಸಂಪಾದನಕಾರ್ಯ ಮಲ್ಲೇಪುರಂ ಅವರದಾಗಿತ್ತು. ಗ್ರಂಥದ ಬಾಹ್ಯ ಮತ್ತು ಆಂತರಿಕ ಸ್ವರೂಪ ಹೇಗಿರಬೇಕು, ಲೇಖನಗಳ ವಿಭಾಗೀಕರಣ ಹೇಗಾಗಬೇಕು, ಯಾವುದನ್ನು ಉಳಿಸಿಕೊಳ್ಳಬೇಕು, ಯಾವುದನ್ನು ಬಿಡಬೇಕು, ಯಾವ ಕಾಲಾನುಕ್ರಮಣಿಕೆಯನ್ನು ಅನುಸರಿಸಬೇಕು ಇಲ್ಲಿಯತನಕ ಅಪ್ರಕಟಿತ ಚಿತ್ರಗಳೆಷ್ಟನ್ನು ಬಳಸಿಕೊಳ್ಳಬೇಕು ಗ್ರಂಥದ ಗಾತ್ರವೆಷ್ಟಿರಬೇಕು, ಎಂಥ ಮುದ್ರಣ ಸಾಮಗ್ರಿ ಬಳಕೆಯಾಗಬೇಕು ಹೀಗೆ ಅತಿಸೂಕ್ಷ್ಮ ಚಿಂತನೆ ಅವರದಾಗಿತ್ತು. ಗ್ರಂಥ ಶೀರ್ಷಿಕೆಯ ಬಗ್ಗೆಯೂ ಅವರ ಆಲೋಚನೆ ಉನ್ನತ ಮಟ್ಟದ್ದಾಗಿತ್ತು. 'ಕನ್ನಡಮೇರು' ಎಂದು ಶೀರ್ಷಿಕೆಯನ್ನು ಸೂಚಿಸಿದ ಅವರು ಕನ್ನಡಕ್ಕಿರಬಹುದಾದ ಅರ್ಥವೈಶಾಲ್ಯವನ್ನು ಸ್ಪಷ್ಟಪಡಿಸಿ ಶಾಸ್ತ್ರಿ ಅವರನ್ನು ಬೇರೆ ಏನೆಂದೂ ಕರೆಯಲು ಸಾಧ್ಯವಿಲ್ಲ, ಅವರು ನಿಜಕ್ಕೂ 'ಕನ್ನಡಮೇರು'ವೇ ಆಗಿದ್ದಾರೆಂದು ಅಪ್ಪಣೆ ಕೊಡಿಸಿದರು. ನಾವು ಸಂತಸದಿಂದ ತಲೆದೂಗಿದೆವು.

ಅಭಿನಂದನಗ್ರಂಥದ ಕರಡು ಪ್ರತಿಯನ್ನು ಡಾ.ಟಿ.ವಿ.ವಿ. ಅವರು ನಡುನಡುವೆ ನಮ್ಮ ಒತ್ತಾಯದ ಮೇಲೆ ಪರಿಶೀಲಿಸಿ ತಮ್ಮ ಅಮೂಲ್ಯ ಸಲಹೆ ಸೂಚನೆಗಳನ್ನು ನೀಡುತ್ತಿದ್ದರು. ಅದಕ್ಕಾಗಿ ನಾವೆಲ್ಲರೂ ಅವರಿಗೆ ಆಭಾರಿ ಆಗಿದ್ದೇವೆ. ಶ್ರೀ ಟಿ.ವಿ.ವಿದ್ಯಾಶಂಕರ ಅವರಂತೂ ಒಂದು ರೀತಿಯಲ್ಲಿ ಸಂಪರ್ಕಾಧಿಕಾರಿಯಾಗಿ ಕೆಲಸ ಮಾಡಿ ಗ್ರಂಥ ಹೊರಬರುವಲ್ಲಿ ಮುಖ್ಯ ಭೂಮಿಕೆಯನ್ನು ವಹಿಸಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು.

ಇಡೀ ಅಭಿನಂದನಗ್ರಂಥದ ಅಕ್ಷರ ಜೋಡಣೆಯನ್ನು ಮಾಡಿದ ಹೊಸಪೇಟೆಯ ಯಾಜಿ ಗ್ರಾಫಿಕ್ಸ್, ಪ್ರಕಟಣೆಯ ಭಾರ ಹೊತ್ತ ಮೈಸೂರಿನ ಸಂಸ್ಕೃತಿ ಪಬ್ಲಿಷಿಂಗ್ ಹೌಸ್ ಈ ಗ್ರಂಥವನ್ನು ಮುದ್ರಿಸಿದ ಮುದ್ರಕ ಬಂಧುಗಳಿಗೂ ಹಾಗು ಸಹಕರಿಸಿದ ಎಲ್ಲರಿಗೂ ನಾವು ತುಂಬು ಹೃದಯದ ಆಭಾರವನ್ನು ಸಲ್ಲಿಸುತ್ತೇವೆ.

ಜುಲೈ ೧೦, ೨೦೦೮

ಎನ್. ನರಹರಿ
ಎಲ್.ಎಸ್.ಶಿವಮೂರ್ತಿ

ಪ್ರಕಾಶಕರ ಮಾತು

ಪ್ರೊ. ಟಿ. ವಿ. ವೆಂಕಟಾಚಲಶಾಸ್ತ್ರಿ-೭೫ರ ಸಂಭ್ರಮದ ಸಂದರ್ಭದಲ್ಲಿ ಬಿಡುಗಡೆಯಾಗುತ್ತಿರುವ 'ಕನ್ನಡಮೇರು' ಅಭಿನಂದನ ಗ್ರಂಥಕ್ಕೆ ಪ್ರಕಾಶಕನಾಗಲು ಆಹ್ವಾನ ಬಂದಾಗ ನನ್ನ ಸ್ಥಿತಿ ಅಜ್ಜಿ-ಮೊಮ್ಮಗನ ಕಥೆಯ ಹುಡುಗನ ಹಾಗಾಯಿತು. (ಅಜ್ಜಿಯೊಬ್ಬಳು ಪ್ರೀತಿ ಮೊಮ್ಮಗನಿಗೆ ರಾತ್ರಿ ಊಟದ ಸಮಯಕ್ಕೆ ಮಧ್ಯಾಹ್ನದ ಅನ್ನವಿದೆ ತಿನ್ನುತ್ತೀಯೋ, ಅಥವಾ ರೊಟ್ಟಿ ಇದೆ ತಿನ್ನುವೆಯೋ ಅಥವಾ ಬಿಸಿ ಅನ್ನ ಮಾಡಲೋ ಎಂದು ಕೇಳಿದಾಗ ಮೊಮ್ಮಗನು ಬೆಳಗಿನ ಅನ್ನವನ್ನು ತಿಂದು ಬಿಸಿ ಅನ್ನ ಆಗುವವರೆಗೆ ರೊಟ್ಟಿ ತಿನ್ನುತ್ತಿರುತ್ತೇನೆ ಎಂದನಂತೆ !) ಶಾಸ್ತ್ರಿಗಳಿಗೆ ಸಂಬಂಧಪಟ್ಟ ಪುಸ್ತಕವನ್ನು ಓದುವುದೇ ಪುಸ್ತಕಪ್ರಿಯನಾದ ನನಗೆ ಒಂದು ಸಂತಸ, ಹತ್ತಾರು ಆಸಕ್ತರಿಗೆ ಅದನ್ನು ತಲುಪಿಸುವುದಂತೂ ಮಾರಾಟಗಾರನೂ ಆದ ನನಗೆ ಪುಣ್ಯದ ಕೆಲಸ ; ಹೀಗಿದ್ದಾಗ ಇಂತಹ ಅಪೂರ್ವ ಪುಸ್ತಕದ ಪ್ರಕಾಶನದ ಹೆಮ್ಮೆಯೂ ನನಗೆ ಒದಗಿ ಬಂದಾಗ ಅದು ನನ್ನ ಪಾಲಿನ ಭಾಗ್ಯವೇ ಹೌದು.

ತಮ್ಮ ವಿದ್ವತ್ ಪ್ರಕಟಣೆಗಳ ಮೂಲಕ ಶಾಸ್ತ್ರಿಗಳು ನನಗೆ ಅನೇಕ ವರ್ಷಗಳಿಂದ ಪರಿಚಿತರೇ ಆದರೂ ಇತ್ತೀಚಿನ ಕೆಲವು ವರ್ಷಗಳಲ್ಲಿ ಅವರ ಪ್ರೀತಿ-ಒಡನಾಟಗಳು ಮತ್ತೆ-ಮತ್ತೆ ಲಭ್ಯವಾಗಿರುವುದು ನನ್ನ ಅದೃಷ್ಟವೇ ಸರಿ. ಅದರಲ್ಲೂ ಕೆಲವು ಹಿರಿಯರ-ವಿದ್ವಾಂಸರ ಜೊತೆ ಅವರು ಸಾಹಿತ್ಯಿಕ ಚರ್ಚೆಗಳನ್ನು ಮಾಡುತ್ತಿದ್ದಾಗ ಹಾಜರಿದ್ದು ಕೇಳುತ್ತಾ ಕುಳಿತಿರುವುದರಲ್ಲಿಯೇ ಒಂದು ರೀತಿಯ ಆನಂದ. ಜತೆಗೆ ನನಗೂ-ಶಾಸ್ತ್ರಿಗಳಿಗೂ ಇರುವ ವಯಸ್ಸು ಹಾಗೂ ವಿದ್ವತ್ತಿನ ಅಜಗಜಾಂತರ ವ್ಯತ್ಯಾಸವನ್ನೆಣಿಸದೇ ಯಾವುದೇ ವಿಷಯದಲ್ಲಿ ಚರ್ಚೆ ಮಾಡಿದಾಗ ಅವರು ತೋರುವ ಸರಳತನ, ಸಜ್ಜನಿಕೆ ಹಾಗೂ ಮುಕ್ತ ಮನೋಭಾವಕ್ಕಾಗಿ ವಿಸ್ಮಯವೂ ಆಗಿದೆ.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮೈಲಿಗಲ್ಲುಗಳಾಗಬಹುದಾದ ಸಂಶೋಧನ ಲೇಖನಗಳಷ್ಟೇ ಅಲ್ಲದೆ ಜನಸಾಮಾನ್ಯರಿಗೆ ದಾರಿದೀಪಗಳಾಗಬಹುದಾದ 'ಉದಾರಚರಿತರು ಉದಾತ್ತ ಪ್ರಸಂಗಗಳು', 'ಮಾರ್ಗದರ್ಶಕ ಮಹನೀಯರು' ಹಾಗೂ ಆಪ್ತರು-ಆಚಾರ್ಯರುಗಳಂತಹ ಮನಕಲಕುವ, ನೈತಿಕವಾಗಿ ಅಧಃಪತನ ಹೆಚ್ಚುತ್ತಿರುವ ಇಂದಿನ ದಿನಗಳಲ್ಲಿ ನಮ್ಮ ಜನಾಂಗಕ್ಕೆ ಅತ್ಯಗತ್ಯವಾಗಿ ಬೇಕಾದ ಆಕರ್ಷಕ ಶೈಲಿಯ ಪುಸ್ತಕಗಳನ್ನೂ ಕನ್ನಡಕ್ಕೆ ನೀಡಿರುವುದು ಶಾಸ್ತ್ರಿಗಳ ಹಿರಿಮೆ. ನಮ್ಮ ಸಂಸ್ಥೆಯು ಪ್ರಕಟಿಸಿದ ಕನ್ನಡದ ಉತ್ತಮ ಹಾಗೂ ಜನಪ್ರಿಯ ವ್ಯಾಕರಣಗಳಲ್ಲಿ ಒಂದಾದ 'ಕನ್ನಡ ವ್ಯಾಕರಣ ದರ್ಶನ'ದ ಮುನ್ನುಡಿಯಲ್ಲಿ ಪುಸ್ತಕವನ್ನು ಮೆಚ್ಚಿ "ವ್ಯಾಕರಣವನ್ನು ಕಲಿಸಬೇಕಾದ ರೀತಿಯೇ ಹೀಗೆ ; ಇಲ್ಲಿ ಶಾಸ್ತ್ರ ವಿಷಯ ಶುಷ್ಕವಾಗಿಲ್ಲ, ರಸಾಯನವಾಗಿದೆ..."

ಎಂದು ಹೇಳಿದ ಶಾಸ್ತ್ರಿಗಳ ಬರಹಗಳೂ ಈ ಶೈಲಿಯವೇ ಎಂಬುದು ಗಮನಾರ್ಹ. ಪಾಂಡಿತ್ಯ-ಪ್ರತಿಭೆ, ಸಜ್ಜನಿಕೆ-ಸರಳತನ ಇವುಗಳ ಮೂರ್ತರೂಪವೇ ಡಾ. ಟಿ. ವಿ. ವೆಂಕಟಾಚಲ ಶಾಸ್ತ್ರಿಗಳೆಂದರೆ ಅತಿಶಯೋಕ್ತಿಯಲ್ಲ. ಇವುಗಳನ್ನು ಒಟ್ಟಾರೆ ಸೇರಿಸಿ 'ಶಾಸ್ತ್ರಿತನ'ವೆಂದರೆ ತಪ್ಪಾಗಲಾರದು. ೭೫ರ ಈ 'ಶಾಸ್ತ್ರಮೇರು'ವಿಗೆ ಗೌರವಪೂರ್ವಕ ನಮಸ್ಕಾರಗಳು.

ಈ ಗ್ರಂಥದ ಪ್ರಕಾಶಕನಾಗಲು ಆಹ್ವಾನಿಸಿದ ಅಭಿನಂದನ ಸಮಿತಿಗೂ, ಅತ್ಯುತ್ತಮ ಶೈಕ್ಷಣಿಕ ಲೇಖನಗಳನ್ನು ಕಲೆಹಾಕಿರುವ ಪ್ರಧಾನ ಸಂಪಾದಕ ಶ್ರೀ ಮಲ್ಲೇಪುರಂ ವೆಂಕಟೇಶ ಅವರಿಗೂ ಸಂಪಾದಕರಾದ ಶ್ರೀ ನರಹರಿ ಹಾಗೂ ಎಲ್. ಎಸ್. ಶಿವಮೂರ್ತಿ ಅವರಿಗೂ ಹಾಗೂ ಸೌಜನ್ಯ, ಸಜ್ಜನಿಕೆಯಲ್ಲಿ ಶಾಸ್ತ್ರಿಗಳ ಪಡಿಯಚ್ಚಾದ ಅವರ ಮಗ ಶ್ರೀ ವಿದ್ಯಾ ಶಂಕರ್ ಅವರಿಗೂ, ಸೀಮಿತ ಕಾಲಾವಧಿಯಲ್ಲಿ ಸವಾಲಾಗಿ ಸ್ವೀಕರಿಸಿ ಸರ್ವಾಂಗ ಸುಂದರವಾಗಿ ಈ ಪುಸ್ತಕವನ್ನು ಮುದ್ರಿಸಿದ ಹರ್ಷ ಪ್ರಿಂಟರ್ಸ್, ಮೈಸೂರಿನ ಶ್ರೀ ಎಂ. ಚಿನ್ನಸ್ವಾಮಿ ಮತ್ತು ಮಕ್ಕಳಿಗೂ ನನ್ನ ಹೃತ್ಪೂರ್ವಕ ಧನ್ಯವಾದಗಳು.

ಇದರ ಬಿಡುಗಡೆ ಸಮಾರಂಭವನ್ನು ಏರ್ಪಡಿಸಲು ಸಹಕರಿಸಿದ ಬೆಂಗಳೂರಿನ ವಿವಿಧ ಸಂಘ ಸಂಸ್ಥೆಗಳಿಗೂ, ವಿವಿಧ ಹಂತಗಳಲ್ಲಿ ಪ್ರೋತ್ಸಾಹಿಸಿದ ಪ್ರೊ. ವಿ. ಗುಂಡಣ್ಣ ನವರಿಗೂ, ಶಾಸ್ತ್ರಿಗಳ ಮೇಲಿನ ಸ್ನೇಹ ಪ್ರೀತಿಯಿಂದ ಸಮಾರಂಭದಲ್ಲಿ ಹಾಜರಿರುವ ಎಲ್ಲಾ ಹಿರಿಯರಿಗೂ, ಪುಸ್ತಕ ಪ್ರೇಮಿಗಳಾದ ತಮಗೂ ಅನಂತ ಪ್ರಣಾಮಗಳು.

೨೫.೦೮.೨೦೦೮
ಮೈಸೂರು

ಸಂಸ್ಕೃತಿ ಸುಬ್ರಹ್ಮಣ್ಯ
ಪ್ರಕಾಶಕ

ಪರಿವಿಡಿ

ಪ್ರಧಾನ ಸಂಪಾದಕನ ನುಡಿ **v**

ಸಂಪಾದಕರ ಮಾತು **ix**

ಪ್ರಕಾಶಕರ ಮಾತು **xi**

ಭಾಗ - ೧ **೧-೭೮**

ಪತ್ರಸಾಹಿತ್ಯ

ಡಿ. ಎಲ್. ಎನ್. ಪತ್ರಗಳು / ೩

ಪು.ತಿ.ನ. ಪತ್ರಗಳು / ೭

ಎಂವಿಸೀ ಪತ್ರಗಳು / ೮

ಬಿ.ಜಿ.ಎಲ್.ಸ್ವಾಮಿ ಪತ್ರಗಳು / ೯

ಜಿ.ವಿ. ಪತ್ರಗಳು / ೧೧

ಚಿ.ಮೂ. ಪತ್ರಗಳು / ೧೨

ಚಾರುಕೀರ್ತಿ ಭಟ್ಟಾರಕರ ಪತ್ರಗಳು / ೧೭

ಇನ್ನಷ್ಟು ಗಣ್ಯರ ಪತ್ರಗಳು / ೧೮

ಬಂಧು - ಬಳಗ

ಸೋದರತ್ತೆಯ ಸವಿನೆನಪು -ಹಾರೋಹಳ್ಳಿ ವೆಂಕಟಲಕ್ಷ್ಮಮ್ಮ / ೪೫

ಅಣ್ಣನೊಂದಿಗೆ -ಟಿ.ವಿ.ಸಾವಿತ್ರಮ್ಮ / ೪೭

ಸಹೃದಯಿ ಅಣ್ಣ -ಡಿ.ಎಸ್.ಶಾಸ್ತ್ರೀ / ೪೯

ಮೇರುಪರ್ವತ -ಟಿ.ವಿ.ಭುವನೇಶ್ವರಿ ಸುಂದರೇಶ್ / ೫೧

ಪ್ರೀತಿಯ 'ಅಣ್ಣ' -ಟಿ.ವಿ.ಹರಿಪ್ರಿಯಾ / ೫೫

'ಮೇಷ್ಟ್ರು' ಮಾವ! -ಎಲ್.ಎಸ್.ಶಿವಮೂರ್ತಿ / ೫೮

ನಾ ಕಂಡಂತೆ ನನ್ನ ತಂದೆ -ಟಿ.ವಿ.ವತ್ಸಲಾ / ೬೨

ಅಧಿಕಪ್ರಸಂಗಿಯ ಅರಿಕೆ -ಟಿ.ವಿ.ಚಿತ್ಕಲಾ / ೬೫

ಹಠಯೋಗಿ -ಟಿ.ವಿ.ವಿದ್ಯಾಶಂಕರ / ೬೯

'ತಾಜಾ' ತಾತ -ಟಿ.ವಿ.ಅಮೋಘವರ್ಷ / ೭೩
ಮುದ್ದಿನ ಮೊಮ್ಮಗಳ ಮುದ್ದಿನ ತಾತ -ಟಿ.ವಿ.ಅಲಂಕೃತ / ೭೫
MY GRANDFATHER -Arnava Yashaswi / ೭೬
LEGENDARY GRANDPA -L.S.Sri Adrija / ೭೭

ಭಾಗ - ೨ ೭೯-೨೯೪
ಒಡನಾಟದ ನೆನಪುಗಳು
ಕನ್ನಡ ವಿದ್ವಾಂಸ - ಎಚ್.ಎಸ್.ದೊರೆಸ್ವಾಮಿ / ೮೧
ಸಜ್ಜನರ ಸಂಗವದು ಹೆಜ್ಜೇನು ಮೆದ್ದಂತೆ -ಜಿ.ಟಿ.ನಾರಾಯಣ ರಾವ್ / ೮೩
ಚಾವಟಿಯಿಲ್ಲದೆ ಬುಗುರಿಯೇ? -ನ.ಸುಬ್ರಹ್ಮಣ್ಯಂ / ೮೮
ಪಾಂಡಿತ್ಯದ ಮಹಾಪರ್ವತ -ಜಿ.ಬ್ರಹ್ಮಪ್ಪ / ೯೧
ಬಾಲ್ಯದ ಸಂಗಾತಿ -ಪಾಣ್ಯಂ ರಾಮಶೇಷ ಶಾಸ್ತ್ರೀ / ೯೨
ಮಿಂಚುಗಣ್ಣಿನ ವ್ಯಕ್ತಿತ್ವದ ಸ್ನೇಹ -ಕೆ.ಕುಶಾಲಪ್ಪಗೌಡ / ೯೮
ಡಾ.ಟಿ.ವಿ.ವಿ. ಅವರ ಜೊತೆಗಿನ ಒಡನಾಟ -ಬಿ.ರಾಮಚಂದ್ರರಾವ್ / ೧೦೦
ವಿದ್ವಾಂಸವರಿಷ್ಠ -ಸಿ.ಪಿ.ಕೆ. / ೧೦೧
ಹಳಗನ್ನಡ ವಿದ್ವನ್ಮಣಿ, ಸ್ನೇಹದ ಗಣಿ -ಜಿ.ಅಶ್ವತ್ಥನಾರಾಯಣ / ೧೦೪
ಧೀಮಂತ ಸನ್ಮಿತ್ರ -ಎಸ್.ಶ್ರೀನಿವಾಸನ್ / ೧೦೮
ಶಾಸ್ತ್ರ ಮತ್ತು ಸಂಶೋಧನೆಯ ಶ್ರೇಯಭೋಗಿ -ಎಂ.ಜಿ.ನಾಗರಾಜ್ / ೧೧೧
ವಿದ್ವತ್‌ಪ್ರಭೆ -ಸಿ.ಯು.ಮಂಜುನಾಥ್ / ೧೧೪
ಸಜ್ಜನರ ಸಂಗವಿದು -ಎಂ.ಎಸ್.ಸುಜಯ / ೧೧೭
ಪಂಡಿತವಾಹಿನಿಯ ಯೋಗ್ಯ ವಾರಸುದಾರ -ಷೆಲ್ಡನ್ ಪೋಲಾಕ್ / ೧೨೦
ಕನ್ನಡಮೇರು -ಎಚ್.ಎಂ.ನಾಗರಾಜರಾವ್ / ೧೨೨
ಸಾಹಿತ್ಯರತ್ನ -ಬಿ.ನಂಜುಂಡಸ್ವಾಮಿ / ೧೨೫
ಪಾಂಡಿತ್ಯದ ಪಣತ -ಟಿ.ಎನ್.ನಾಗರತ್ನ / ೧೨೯
ವಿದ್ವನ್ಮಾನಸರಾಜಹಂಸ -ಎಸ್.ಸೂರ್ಯಪ್ರಕಾಶ್ ಪಂಡಿತ್ / ೧೩೩
ಕನ್ನಡ ಛಂದಃಪ್ರಭೆ -ಎಸ್.ಎಂ.ಗಿರಿಜಾಪತಿ / ೧೩೮
ಸಾರ್ಥಕಜೀವಿ -ಆರ್.ವೆಂಕಟೇಶ್ / ೧೪೧
ಆದರ್ಶ ಅಧ್ಯಾಪಕ -ಬಿ.ಎಸ್.ಸಣ್ಣಯ್ಯ / ೧೪೩
ವಿದ್ವತ್ತಿನ ಪರ್ವತ -ವೈ.ಸಿ.ಭಾನುಮತಿ / ೧೪೬

ವಿನಯಸಂಪನ್ನರು -ಕೆ.ಎಸ್.ಎನ್.ಉಡುಪ / ೧೪೯
ವಿದ್ವನ್ಮಣಿ ಗುರುವರ್ಯ -ಕೆ.ಅನಂತರಾಮು / ೧೫೩
ಹಾಸ್ಯಪ್ರಜ್ಞೆಯ ಘನವಿದ್ವಾಂಸ -ಡಿ.ಕೆ.ರಾಜೇಂದ್ರ / ೧೫೭
ಗುರುಸನ್ನಿಧಿಯಲ್ಲಿ -ಕೆ.ಜಿ.ನಾರಾಯಣಪ್ರಸಾದ್ / ೧೬೦
ವಿದ್ವತ್‌ಲೋಕದ ಜಲಚಿಹ್ನೆ -ಕ್ಯಾತನಹಳ್ಳಿ ರಾಮಣ್ಣ / ೧೬೫
ಘನವಂತರು -ನಾಗತಿಹಳ್ಳಿ ಚಂದ್ರಶೇಖರ / ೧೬೮
ಮೇರುಗುರು -ಸರಸ್ವತಿ ವಿಜಯಕುಮಾರ್ / ೧೬೯
ಗುರುವರ್ಯ -ತುಳಸೀ ರಾಮಚಂದ್ರ / ೧೭೨
ಪ್ರೊ. ದೇಶಿ ಮತ್ತು ಪ್ರೊ. ಶಿಷ್ಟ -ಮೊಗಳ್ಳಿ ಗಣೇಶ್ / ೧೭೬
ಒಂದು ಸ್ಮರಣೆ -ಕೂ.ಗಿ.ಗಿರಿಯಪ್ಪ / ೧೭೭

ಗ್ರಂಥಾವಲೋಕನ

‘ಶಾಸ್ತ್ರಿಯ’ ಸಂಪುಟಗಳು -ಹಾ.ಮಾ.ನಾಯಕ / ೧೭೯
ಶಾಸ್ತ್ರಶ್ರೀರೋಹಣ ಗಿರಿಧಾರಿ -ಎಚ್ಚೆಸ್ಕೆ / ೧೮೫
‘ಮುದ್ರಾಮಂಜೂಷವು’ -ಟಿ.ಕೇಶವ ಭಟ್ಟ / ೧೯೦
ಭಾಷೆ-ಕಲ್ಪನೆಗಳ ಮನೋಹರ ಅಭಿವ್ಯಕ್ತಿ:
‘ಸದ್ದೆಂತೆಂಬರ ಗಂಡ’ -ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟ / ೧೯೫
ಕನ್ನಡ ನೇಮಿನಾಥ ಪುರಾಣಗಳ ತೌಲನಿಕ ಅಧ್ಯಯನ -ಬಿ.ಎಸ್.ಕುಲಕರ್ಣಿ / ೨೦೨
ವಿದ್ವತ್ ವಿಸ್ತಾರದ ಸಂಗ್ರಾಹ್ಯ ಕೃತಿಶ್ರೇಣಿ : ‘ಶಾಸ್ತ್ರಿಯ’ -ಶ್ರೀರಾಮಭಟ್ಟ / ೨೦೮
‘ಶ್ರೀಮುಖ’ ಸಂಶೋಧನೆ ವಿದ್ವತ್ತುಗಳ ಪ್ರಾತಿನಿಧಿಕ ಗ್ರಂಥ
-ನರಹಳ್ಳಿ ಬಾಲಸುಬ್ರಹ್ಮಣ್ಯ / ೨೧೩
ಕನ್ನಡ ಭಾಷಾಲಕ್ಷಣಶಾಸ್ತ್ರಮಕುಟ -ಕೊತ್ತಪಲ್ಲಿ ಶೇಖರ / ೨೧೯
‘ಸಾಹಿತ್ಯಶೋಧ’ -ವಿ.ಚಂದ್ರಶೇಖರ ನಂಗಲಿ / ೨೨೮
ಈ ಪುಸ್ತಕಕ್ಕೊಂದು ಜಾತಿಹೊದಿಕೆ ಇಲ್ಲದೆ ಹೋಗಿದ್ದಿದ್ದರೆ... -ರವಿ ಬೆಳಗೆರೆ / ೨೩೫
ಮೆಲುಗಾಳಿಯ ಮಾತುಗಳು -ಎ.ಎಸ್.ವೇಣುಗೋಪಾಲ ರಾವ್ / ೨೩೯
ಶಬ್ದಮಣಿದರ್ಪಣಂ -ಮಲ್ಲೇಪುರಂ ಜಿ.ವೆಂಕಟೇಶ್ / ೨೪೧
‘ಕನ್ನಡ ಚಿತ್ರಕಾವ್ಯ’ -ಹೀ.ಚಿ.ಶಾಂತವೀರಯ್ಯ / ೨೪೩
‘ಗಜಶಾಸ್ತ್ರಶಬ್ದಕೋಶ’ - ಒಂದು ಸಮೀಕ್ಷೆ -ಸ.ಕಾರ್ತೀಕ್ / ೨೪೬
ಕನ್ನಡ ಸಾಹಿತ್ಯ ಸಂಶೋಧನೆಯ ತ್ರಿವಿಕ್ರಮ -ಹೊರೆಯಾಲ ದೊರೆಸ್ವಾಮಿ / ೨೫೨

ವಿದ್ವಾಂಸಲೋಕದ ದಿಗ್ಗಜ -ಚಂದ್ರಯ್ಯ ನಾಯ್ಡು / ೨೫೬
ಸಾಹಿತ್ಯ, ಸಂಶೋಧನಕ್ಷೇತ್ರದ ಸಾಧಕ -ಎಚ್.ಜಿ.ಶ್ರೀಧರ / ೨೬೦
ಗ್ರಂಥಸಂಪಾದನೆ : ಟಿ.ವಿ.ವಿ. ಅವರ ಸಾಧನೆ -ಎಸ್.ಎಸ್.ಅಂಗಡಿ / ೨೬೫
ಭಾಷೆ ಮತ್ತು ನಿಘಂಟುವಿನ ಅಧ್ಯಯನಕ್ಕೆ ಟಿ.ವಿ.ವಿ. ಅವರ ಕೊಡುಗೆ -
ಎಸ್.ಎಸ್.ಅಂಗಡಿ / ೨೭೬

ದರ್ಶನ - ಸಂದರ್ಶನ
ಹಿರಿಯರೊಡನೆ ಒಂದು ಹರಟೆ -ಎಂ.ರಾಜಗೋಪಾಲಾಚಾರ್ಯ / ೨೮೬
ಶಾಸ್ತ್ರಿಯವರೊಂದಿಗೆ ಒಂದು ಸಂದರ್ಶನ -ವಿ.ರಘು / ೨೯೨

ಭಾಗ - ೩ ೨೯೫-೩೫೮
ಅನುಬಂಧ - ೧
ಪ್ರಶಸ್ತಿ-ಪುರಸ್ಕಾರ / ೨೯೭
ಅನುಬಂಧ - ೨
ಪುಸ್ತಕ ವಿಮರ್ಶೆ / ೩೦೩
ಅನುಬಂಧ - ೩
ಗ್ರಂಥ-ಲೇಖನಸೂಚಿ / ೩೧೫






ಪ್ರೊ. ಟಿ.ವಿ. ವೆಂಕಟಾಚಲ ಶಾಸ್ತ್ರೀ


ಕನ್ನಡಮೇರು

ಅಭಿನಂದನಗ್ರಂಥ





ತಾಯಿಯ ತಂದೆ ಹಾರೋಹಳ್ಳಿ ಸುಬ್ಬಾಭಟ್ಟರು



ತಾಯಿಯ ಚಿಕ್ಕಪ್ಪ ಹಾರೋಹಳ್ಳಿ ಶ್ಯಾಮಶಾಸ್ತ್ರಿ






ತಂದೆ ಟಿ.ವಿ. ವೆಂಕಟಸುಬ್ಬಾ ಶಾಸ್ತ್ರಿಗಳು
ತಾಯಿ ಸುಬ್ಬಮ್ಮನವರು




ಮಾವನವರು ಬನವತಿ ರಾಮಕೃಷ್ಣ ಶಾಸ್ತ್ರಿಗಳು
ಅತ್ತೆ ಸಾವಿತ್ರಮ್ಮನವರು





ಶಾಸ್ತ್ರೀ ದಂಪತಿ





ಮೊಮ್ಮಗ ಅರ್ಣವ ಯಶಸ್ವಿಯೊಂದಿಗೆ



ಮೊಮ್ಮಗಳು ಅಲಂಕೃತಾ ಜೊತೆಗೆ




ಮಕ್ಕಳು ಮೊಮ್ಮಕ್ಕಳೊಂದಿಗೆ




ತೋಗೆರೆ : ಪೂರ್ವಿಕರ ಸ್ಥಳ




ಹಾರೋಹಳ್ಳಿ : ಹುಟ್ಟಿದ ಮನೆ







ಕರಡು ತಿದ್ದುವಾಗ




'ಮುದ್ರಾಮಂಜೂಷ'ದ ಸಂಪಾದನಕಾರ್ಯದಲ್ಲಿ






ಇಂಟರ್‌ಮೀಡಿಯೆಟ್ ವಿದ್ಯಾರ್ಥಿ



ಒಂದು ಚಿಂತನಭಂಗಿಯಲ್ಲಿ






ಷಷ್ಟ್ಯಬ್ದದ ಸಮಾರಂಭ



ಧರ್ಮಸ್ಥಳದ ೭೦ನೆಯ ಸಾಹಿತ್ಯಸಮ್ಮೇಳನದ ಅಧ್ಯಕ್ಷತೆ

ಸಮಾರಂಭ






'ಕನಕಪುರ ಎಂಬ ಕಾನಕಾನ ಹಳ್ಳಿಯ ಚರಿತ್ರೆ' ಪುಸ್ತಕದ ಬಿಡುಗಡೆ



'ಶ್ರೀಮುಖ' ಸಂಭಾವನಗ್ರಂಥದ ಬಿಡುಗಡೆ ಸಮಾರಂಭ



'ಕನ್ನಡ ಚೆನ್ನುಡಿ'ಯ ಬಿಡುಗಡೆ



ಗುರುವಂದನೆ



‘ಸಿರಿಭೂವಲಯ’ದ ಪ್ರಥಮಸಂಪುಟದ ಬಿಡುಗಡೆ



ಶಂ.ಬಾ. ಜೋಶಿ ವಿಚಾರವೇದಿಕೆಯ ಗೋಷ್ಠಿ



ಕಾರ್ಕಳ ಸಾಹಿತ್ಯಸಂಘದ ದಶಮಾನೋತ್ಸವ



'ಶಾಸ್ತ್ರೀಯ' ಕೃತಿಶ್ರೇಣಿಯ ಬಿಡುಗಡೆ





'ಕರ್ನಾಟಕ ಭಾಗವತ' ಕೃತಿಯ ಬಿಡುಗಡೆ



ಪ್ರೊ. ಎ.ಎನ್.ಮೂರ್ತಿರಾಯರ ಗೌರವಸಮಾರಂಭ



ಪ್ರೊ. ಎನ್. ಬಾಲಸುಬ್ರಹ್ಮಣ್ಯ ಅವರಿಗೆ
ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರೀ ವಿದ್ವತ್ ಪ್ರಶಸ್ತಿ



ಸಂಸ್ಕೃತಿ ಪಬ್ಲಿಷಿಂಗ್ ಹೌಸ್ ಪುಸ್ತಕ ಬಿಡುಗಡೆ ಕಾರ್ಯಕ್ರಮ





ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವಪ್ರಶಸ್ತಿ
೧೯೯೬



ಶ್ರೀ ಗೋಮಟೇಶ್ವರ ವಿದ್ಯಾಪೀಠ ಪ್ರಶಸ್ತಿ






ಶಂಬಾ ಜೋಶಿ ಪ್ರಶಸ್ತಿ
ಶಿವಮೊಗ್ಗೆಯ ಕರ್ನಾಟಕಸಂಘ



ಶಂಬಾ ವಿಚಾರವೇದಿಕೆಯ ಸನ್ಮಾನ
ಬೆಂಗಳೂರು






ಐ.ಬಿ.ಎಚ್. ಶಿಕ್ಷಣ ಟ್ರಸ್ಟ್ ಪ್ರಶಸ್ತಿ



ಮಾಸ್ತಿ ಪ್ರಶಸ್ತಿ – ೨೦೦೮





ಆಳ್ವಾಸ್ ನುಡಿಸಿರಿ ಪ್ರಶಸ್ತಿ - ೨೦೦೫



ಚಾವುಂಡರಾಯ ಪ್ರಶಸ್ತಿ



'ಗ್ರಂಥಲೋಕ'ದ ವರ್ಷದ ಲೇಖಕ ಪ್ರಶಸ್ತಿ



ಕರ್ನಾಟಕ ರಾಜ್ಯಪ್ರಶಸ್ತಿ



ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ
ಶ್ರೇಷ್ಠ ಸೃಜನೇತರ ಕೃತಿ ಬಹುಮಾನ




ಶ್ರೀ ಕೃಷ್ಣ ಪ್ರಶಸ್ತಿ



ಕೇಂದ್ರ ಸಾಹಿತ್ಯ ಅಕಾಡೆಮಿಯ ಭಾಷಾಸಮ್ಮಾನ್ ಪ್ರಶಸ್ತಿ
೨೦೦೧





ಜಿ.ವೆಂಕಟಸುಬ್ಬಯ್ಯ, ಎಚ್.ತಿಪ್ಪೇರುದ್ರಸ್ವಾಮಿ
ಹಂಪ. ನಾಗರಾಜಯ್ಯ ಅವರೊಂದಿಗೆ



ಚಿತ್ರಸಾಹಿತಿ ಎಚ್.ಕೆ. ವಿಜಯನಾರಸಿಂಹ ಅವರೊಂದಿಗೆ



ಎ.ಎನ್. ಮೂರ್ತಿರಾಯರೊಂದಿಗೆ




ಎಂ.ವಿ. ರಾಜಶೇಖರನ್ ಅವರೊಂದಿಗೆ



ಚಿತ್ರನಿರ್ದೇಶಕ ಎನ್. ಲಕ್ಷ್ಮೀನಾರಾಯಣ್ ಅವರೊಂದಿಗೆ



ಜಿ.ಎಸ್. ದೀಕ್ಷಿತ್, ಬಾ.ರಾ. ಗೋಪಾಲ್, ಹಾ.ಮಾ.ನಾಯಕ
ಹಾಗೂ ವಿದೇಶದ ಇತಿಹಾಸಕಾರರೊಂದಿಗೆ






ನಿಟ್ಟೂರು ಶ್ರೀನಿವಾಸರಾಯರೊಂದಿಗೆ



ಸಂಸ್ಕೃತ ವಿದ್ವಾಂಸ ಷೆಲ್ಡನ್ ಪೋಲಾಕ್ ಅವರೊಂದಿಗೆ






ವಿದ್ವಾನ್ ಎನ್. ರಂಗನಾಥ ಶರ್ಮಾ,
ಗಮಕಿ ಎಂ. ರಾಘವೇಂದ್ರ ರಾವ್ ಅವರೊಂದಿಗೆ



ಕರ್ನಾಟಕದ ಮಾಜಿ ರಾಜ್ಯಪಾಲ ಟಿ.ಎನ್. ಚತುರ್ವೇದಿ ಅವರೊಂದಿಗೆ





ಕನ್ನಡ ಅಧ್ಯಯನ ಸಂಸ್ಥೆಯ
ನಿರ್ದೇಶಕರ ಕಛೇರಿಯಲ್ಲಿ ಹಿರಿಯ ಸಾಹಿತಿಗಳೊಂದಿಗೆ



ಎ.ಕೆ. ರಾಮಾನುಜನ್ ಅವರೊಂದಿಗೆ



ಗಣ್ಯರೊಂದಿಗೆ



ಸುಜನಾ ಹಾಗೂ ಎಂ. ಚಿದಾನಂದ ಮೂರ್ತಿ ಅವರೊಂದಿಗೆ



ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಅವರೊಂದಿಗೆ



ಕನ್ನಡ ಅಧ್ಯಯನ ಸಂಸ್ಥೆಯ ಬೆಳ್ಳಿಹಬ್ಬ
ದೇ.ಜ.ಗೌ. ಅವರೊಂದಿಗೆ



ಚೆನ್ನೈ ಏಷ್ಯನ್ ಅಧ್ಯಯನಗಳ ಸಂಸ್ಥೆ
ಬಹುಭಾಷಿಕ ನಿಘಂಟು ಯೋಜನೆಯ ಸಮಿತಿಯ ಸದಸ್ಯರೊಂದಿಗೆ



'ಶಾಸ್ತ್ರೀಯ' ಕೃತಿಶ್ರೇಣಿಯ ಬಿಡುಗಡೆ
ಅತಿಥಿಗಳೊಂದಿಗೆ



ಸಂ.ಶಿ.ಭೂಸನೂರಮಠ ಮತ್ತು ಹಾ.ಮಾ. ನಾಯಕರೊಂದಿಗೆ

ಭಾಗ - ೧

ಪತ್ರಸಾಹಿತ್ಯ

ಬಂಧು-ಬಳಗ

ಪತ್ರಸಾಹಿತ್ಯ

ಡಿ ಎಲ್ ಎನ್ ಪತ್ರಗಳು

ಕನ್ನಡ ಸಾಹಿತ್ಯ ಪರಿಷತ್ತು
ಬೆಂಗಳೂರು ೩೦.೬.೫೫

ಪ್ರಿಯ ವೆಂಕಟಾಚಲ ಶಾಸ್ತ್ರೀ,

ನಿಮ್ಮ ಕೆಲಸದ ವಿಚಾರವಾದ ಸಮಸ್ಯೆಯನ್ನು ಬಿಡಿಸುವುದು ಕಷ್ಟ. ಅಲ್ಲಿಯೇ ಸ್ಥಾಪಿತವಾಗುವ ಕಾಲೇಜಿನಲ್ಲಿ ನಿಮಗೆ ಅಧ್ಯಾಪಕರಾಗಿರುವ ಕೆಲಸ ಸಿಕ್ಕಿದೆಯೆಂದು ಹೇಳುತ್ತೀರಿ. ಇದನ್ನು ಒಪ್ಪಿಕೊಳ್ಳುವುದು ಮೇಲು. ಏಕೆಂದರೆ ನಿಮ್ಮ ಸ್ಥಳದಲ್ಲಿಯೇ ಕೆಲಸ ದೊರೆತಿರುವುದರಿಂದ ಕೆಲವು ಸೌಕರ್ಯಗಳು ಇದ್ದೇ ಇರುತ್ತವೆ. ಅಲ್ಲಿ ೧೦೦ ರೂ. ಸಂಬಳ ಬರುವುದು ಒಂದೇ, ಬೇರೆ ಕಡೆ ೨೫೦ ಸಂಬಳ ಬರುವುದೂ ಒಂದೇ.... ನಿಮ್ಮ ಊರಿನಲ್ಲಿ ಈಗ ದೊರೆತಿರುವ ಕೆಲಸಕ್ಕೆ ಅಂಟಿಕೊಂಡಿದ್ದು ಒಂದೆರಡು ವರ್ಷ ಕಾದು ನೋಡುವುದು ಒಳ್ಳೆಯದು. ನೀವು ನಿಮ್ಮ ಊರನ್ನು ಬಿಡಲು ಸಿದ್ಧವಾಗಿದ್ದರೆ ಯಾದಗಿರಿಗೆ ಹೋಗುವುದು ಉತ್ತಮ. ಅಲ್ಲಿಯೇ ಇದ್ದು ಹೈದರಾಬಾದು ಸರ್ಕಾರದಲ್ಲಿ ಯಾವುದಾದರೂ ಕೆಲಸವನ್ನು ಸಂಪಾದಿಸಲು ಪ್ರಯತ್ನಪಡಬಹುದು. ಅಲ್ಲಿನ ಸಂಬಳ ಸಾರಿಗೆಗಳು ನಿಜವಾಗಿಯೂ ಚೆನ್ನಾಗಿವೆ.....

ಕನ್ನಡಕೋಶಕ್ಕೆ ಸಂಬಂಧಿಸಿದ ಕೆಲಸವನ್ನು ನೀವು ಮಾಡಿಕೊಟ್ಟಿರುವುದಕ್ಕಾಗಿ ನಿಮಗೆ ಕೃತಜ್ಞತೆಗಳು... ನಿಮ್ಮಲ್ಲಿ ಬೇಂದ್ರೆ ಅವರ ಕೃತಿಗಳಿದ್ದರೆ ಅವುಗಳಿಂದ ಶಬ್ದಸಂಗ್ರಹ ಮಾಡಲು ಆರಂಭಿಸಬಹುದಲ್ಲವೆ? ನಿಮ್ಮ ಕೆಲಸದ ವಿಷಯ ಒಂದು ನಿಲುಗಡೆಗೆ ಬಂದರೆ ಶಾಂತಚಿತ್ತರಾಗಿ ಆಮೇಲೆ ಕೆಲಸ ಮಾಡಬಹುದು....

ಇಂತೀ ನಿಮ್ಮವ
ಡಿ.ಎಲ್.ನರಸಿಂಹಾಚಾರ್

❄

೨೮೭೬, ಚಾಮರಾಜ ಮೊಹಲ್ಲ
ಮೈಸೂರು ೨೨.೮.೧೯೫೫

ಪ್ರಿಯ ವೆಂಕಟಾಚಲ ಶಾಸ್ತ್ರೀ ಅವರಿಗೆ,

..... ನಿಮಗೆ ಒಳ್ಳೆಯ ಕೆಲಸ ಸಿಕ್ಕಿದ್ದು ದೇವರ ಅನುಗ್ರಹವೆಂದು ಹೇಳದಿರಲಾರೆ. ಕೆಲಸ ಈಗ ಖಾಯಂ ಇಲ್ಲದೇಹೋದರೂ ಮುಂದಕ್ಕೆ ಆಗಬಹುದು. ನೀವು ಕೂಡಲೇ ಹೋಗಿ ಸೇರಿಕೊಳ್ಳುವುದು ಒಳ್ಳೆಯದು. ಅಲ್ಲಿನ ಸ್ಥಳೀಯ ರಾಜಕೀಯಕ್ಕೆ ಪ್ರವೇಶಿಸದೆ ನಿಮ್ಮ ಕೆಲಸದಲ್ಲಿ ಆಸಕ್ತರಾಗಿದ್ದುಕೊಂಡು ಅಲ್ಲಿನ ಕೆಲವು ಹಿರಿಯರೊಡನೆ ವಿನಯ ದಿಂದಲೂ ಸೌಹಾರ್ದದಿಂದಲೂ ನಡೆದುಕೊಂಡರೆ ನಿಮಗೆ ಮುಂದಕ್ಕೆ ಏನೂ ತೊಂದರೆ ಆಗಲಾರದು. ಹೈದ್ರಾಬಾದು ನಗರ ಒಳ್ಳೆಯ ನಗರ. ಜನರೂ ಒಳ್ಳೆಯವರು. ನಿಮಗೆ ಎಲ್ಲಾ ವಿಧವಾದ ಶ್ರೇಯಸ್ಸು ಬರಲಿ ಎಂದು ಹಾರೈಸುತ್ತೇನೆ....

ಇಂತೀ ನಿಮ್ಮವ
ಡಿ.ಎಲ್.ನರಸಿಂಹಾಚಾರ್

❄

೨೮೭೬, ಸರಸ್ವತೀಪುರಂ, ಮೈಸೂರು ೫
೨೨.೯.೬೪

ಶ್ರೀಮಾನ್ ಟಿ.ವಿ.ವೆಂಕಟಾಚಲ ಶಾಸ್ತ್ರೀ ಅವರಿಗೆ,

.....ನಿಮ್ಮ ಸಮಸ್ಯೆ ನನಗೆ ಅರ್ಥವಾಗಿದೆ. ಇತರ ಕವಿಗಳ ಮೇಲೆ ಪಂಪನ ಪ್ರಭಾವ ಎಷ್ಟರಮಟ್ಟಿಗೆ ಇರುವುದೆಂಬ ವಿಷಯವನ್ನು ನೀವು ನಿಮ್ಮ ನಿಬಂಧಕ್ಕಾಗಿ ಆರಿಸಿಕೊಳ್ಳ ಬಹುದೇ ಎಂಬುದನ್ನು ಆಲೋಚಿಸಿ ನೋಡಿದೆ. ಇದೇನೂ ಹೊಸ ವಿಷಯವಲ್ಲ. ಎಲ್ಲ ಪ್ರಮುಖ ಕವಿಗಳ ಮೇಲೂ ಸಾಧಾರಣವಾಗಿ ಪಂಪನ ಪ್ರಭಾವವುಂಟು. ಇಲ್ಲಿ ನಿಮ್ಮ ಬುದ್ಧಿವ್ಯಾಪಾರಕ್ಕೆ ಬೇಕಾದಷ್ಟು ಸಾಮಗ್ರಿ ಸಿಕ್ಕಲಾರದು. ಎಲ್ಲಾ ಕವಿಗಳಲ್ಲಿರುವ ಪ್ರಭಾವಗಳನ್ನು ಗುರುತು ಹಾಕಬಹುದು ಆಮೇಲೆ ಏನು ಮಾಡಬಹುದು? ಒಂದು ಸಣ್ಣ ಪ್ರಬಂಧ ಬರೆಯಬಹುದು ಅಷ್ಟೆ. Ph.D ನಿಬಂಧಕ್ಕೆ ಈ ವಿಷಯ ತೀರ ಸಾಲದು. ಆದ್ದರಿಂದ ಇದನ್ನು ಬಿಡುವುದು ಲೇಸೆಂದು ತೋರುತ್ತದೆ.

ಇನ್ನು ಪಂಪನ ಮೇಲೆ ಆಗಿರುವ ಇತರ ಕವಿಗಳ ಪ್ರಭಾವವನ್ನು ಪರಿಶೀಲಿಸ ಬಹುದು. ಇದು ಒಳ್ಳೆಯ ವಿಷಯ. ಇದಕ್ಕೆ ನೀವು ಪಂಪಪೂರ್ವ ಸಂಸ್ಕೃತ ಸಾಹಿತ್ಯದ ಮಹಾಕಾವ್ಯಗಳನ್ನೂ, ನಾಟಕಗಳನ್ನೂ, ಶಾಸ್ತ್ರಗ್ರಂಥಗಳನ್ನೂ ಅವಲೋಕಿಸ ಬೇಕಾಗು ತ್ತದೆ; ಅಲ್ಲದೆ ಪ್ರಾಕೃತಸಾಹಿತ್ಯವನ್ನೂ ಪರಿಶೀಲಿಸಬೇಕಾಗುತ್ತದೆ; ಸಂಸ್ಕೃತ ದಲ್ಲಿರುವ ಜೈನ ಸಾಹಿತ್ಯವನ್ನೂ ಓದಬೇಕಾಗುತ್ತದೆ; ವ್ಯಾಸಕೃತ ಮಹಾಭಾರತವನ್ನು ಎಚ್ಚರಿಕೆಯಿಂದ ನೋಡಬೇಕಾಗುತ್ತದೆ. ಮಾಡಲಿಕ್ಕೆ ಕೆಲಸವೇನೋ ಹೇರಳವಾಗಿದೆ. ಪಂಪನು ತನ್ನ

ಸ್ವೀಕರಣಗಳನ್ನು ಯಾವಯಾವ ರೀತಿಗಳಲ್ಲಿ ತನ್ನ ಕಾವ್ಯಗಳಲ್ಲಿ ಬಳಸಿಕೊಂಡಿರುವನೆಂದು ತಿಳಿಯುವುದರಲ್ಲಿ ಬುದ್ಧಿವ್ಯಾಪಾರಕ್ಕೆ ಮಿಗಿಲಾದ ಅವಕಾಶವುಂಟು. ಈ ವಿಷಯ ನಿಮಗೆ ರುಚಿಸಿದರೆ ಆಗಬಹುದು. ಇಲ್ಲದಿದ್ದಲ್ಲಿ ಬೇರೆ ಏನನ್ನಾದರೂ ನೋಡಬೇಕಾಗುತ್ತದೆ. ಎರಡನ್ನು ನಾನು ಇಲ್ಲಿ ಸೂಚಿಸಬಹುದು.

೧. Linguistic Analysis of ವಡ್ಡಾರಾಧನೆ. ಶ್ರೀ ಬಿ.ರಾಮಚಂದ್ರರಾಯರು ಪಂಪಭಾರತಕ್ಕೆ ಮಾಡಿರುವ ಹಾಗೆ ನೀವು ವಡ್ಡಾರಾಧನೆಗೆ ಮಾಡಬಹುದು. ಈ ವಿಷಯದಲ್ಲಿ ಶ್ರೀರಾಮಚಂದ್ರರಾಯರಿಂದಲೂ ಪ್ರೊ.ಭದ್ರಿರಾಜು ಕೃಷ್ಣಮೂರ್ತಿಯವರಿಂದಲೂ ಸಲಹೆಗಳನ್ನು ಪಡೆಯಬಹುದು.

೨. ಕನ್ನಡ ನೇಮಿನಾಥಪುರಾಣಗಳು - ತುಲನಾತ್ಮಕ ಅಭ್ಯಾಸ. ಇದಕ್ಕೆ ಸಂಸ್ಕೃತ ಪ್ರಾಕೃತಗಳಲ್ಲಿರುವ ನೇಮಿನಾಥ ಚರಿತೆಗಳ ಅಭ್ಯಾಸ ಅವಶ್ಯಕ. ವಿಷಯ ಸಾಕಷ್ಟು ತೂಕವಾದದ್ದು. ಇದರಲ್ಲಿ ಎರಡು ಮೂರು ಸಂಪ್ರದಾಯಗಳಿರುವಂತಿದೆ. ಇದನ್ನು ನೀವು ಇಷ್ಟಪಟ್ಟರೆ ಆಗಬಹುದು. ವಿವರಗಳೆಲ್ಲ ಆಮೇಲೆ.

ಹಳಗನ್ನಡದ ಯಾವ ಗ್ರಂಥವನ್ನು ತೆಗೆದುಕೊಂಡರೂ ನೀವು ಸಂಸ್ಕೃತ ಪ್ರಾಕೃತಗ್ರಂಥಗಳನ್ನು ನೋಡಬೇಕಾಗುತ್ತದೆ. ಬೇರೆ ಮಾರ್ಗವಿಲ್ಲ....

ಇಂತೀ ನಿಮ್ಮವ

ಡಿ.ಎಲ್.ನರಸಿಂಹಾಚಾರ್

❄

೨೮೭೬, ಸರಸ್ವತೀಪುರಂ, ಮೈಸೂರು ೫

೧೧.೧೨.೬೪

ಶ್ರೀಮಾನ್ ಟಿ.ವಿ.ವೆಂಕಟಾಚಲ ಶಾಸ್ತ್ರೀ ಅವರಿಗೆ,

....ನೀವು ನೇಮಿನಾಥ ಪುರಾಣದ ಬಗ್ಗೆ ವ್ಯಾಸಂಗವನ್ನು ನಡೆಸುತ್ತಿರುವುದು ಸರಿಯಷ್ಟೇ. ಕನ್ನಡದಲ್ಲಿರುವ ನೇಮಿನಾಥ ಚರಿತೆಗಳನ್ನು ನೀವು ನೋಡಿರುತ್ತೀರೆಂದು ನಿಮ್ಮ ಪತ್ರ ತಿಳಿಸುತ್ತದೆ. ಇವುಗಳ ಜೊತೆಗೆ ಹರಿವಂಶ ಎಂಬ ಹೆಸರಿನ ಜೈನಗ್ರಂಥಗಳನ್ನು ನೀವು ನೋಡಬೇಕು. ಹೆಚ್.ಡಿ.ವೇಲಣಕರ್ ಅವರ 'ಜಿನರತ್ನಕೋಶ' ಎಂಬ ಪುಸ್ತಕವನ್ನು ನೋಡಿರಿ. ಅದರಲ್ಲಿ ಕಾಣುವ ನೇಮಿನಾಥ ಚರಿತೆಗಳು, ಹರಿವಂಶಗಳು, ಭಾರತಕಥೆಗಳು ಸಂಸ್ಕೃತ ಪ್ರಾಕೃತಗಳಲ್ಲಿರುವುವುಗಳು. ಇವುಗಳ ಪಟ್ಟಿಯನ್ನು ಮಾಡಿಕೊಳ್ಳಿರಿ. ಯಾವುದು ನಿಮಗೆ ಲಭ್ಯವಾಗುತ್ತದೋ ಅವನ್ನು ಓದಿರಿ. ನೇಮಿನಾಥಚರಿತೆಗಳಲ್ಲಿ ಎರಡು ಸಂಪ್ರದಾಯಗಳಿರುವಂತೆ ತೋರುತ್ತದೆ. ಒಂದನೆಯದು ಮೊದಲನೆಯ ಜಿನಸೇನನ (ಕ್ರಿ.ಶ.೭೮೩) ಹರಿವಂಶದ ಸಂಪ್ರದಾಯ, ಇದು ಸಂಸ್ಕೃತದಲ್ಲಿದೆ, ನೀವು ಅವಶ್ಯ ಓದಬೇಕು. ಈ ಸಂಪ್ರದಾಯಕ್ಕೆ ಕರ್ಣಪಾರ್ಯಕೃತ ಕನ್ನಡ ನೇಮಿನಾಥಪುರಾಣ

ಸೇರುತ್ತದೆ. ಎರಡನೆಯದು ಗುಣಭದ್ರಕೃತ ನೇಮಿನಾಥ ಚರಿತ್ರೆ- ಅವನ 'ಉತ್ತರಪುರಾಣ' ದಲ್ಲಿರುವುದು; ಇದೂ ಸಂಸ್ಕೃತ. ಈ ಸಂಪ್ರದಾಯಕ್ಕೆ ನೇಮಿಚಂದ್ರನ ಅರ್ಧನೇಮಿ ಸೇರುತ್ತದೆ. ಇವೆರಡಕ್ಕೂ ವ್ಯತ್ಯಾಸಗಳನ್ನು ನೀವು ಕಂಡುಹಿಡಿಯಬೇಕಾಗಿದೆ. ಇವಲ್ಲದೆ ಬೇರೆ ಸಂಪ್ರದಾಯಗಳೂ ಇರಬಹುದು. ವ್ಯಾಸಂಗ ಮಾಡುತ್ತ ಇವುಗಳನ್ನು ಕಂಡುಕೊಳ್ಳಬೇಕಾಗಿದೆ. ಪ್ರಾಕೃತದಲ್ಲಿರುವ ನೇಮಿಚರಿತ್ರೆಗಳನ್ನು ಕೆಲವನ್ನಾದರೂ ಓದಬೇಕು. ಕೆಲಸ ಬೇಕಾದಷ್ಟಿದೆ. ನಿಮ್ಮ ಅಭ್ಯಾಸ ಮುಂದುವರಿಯಲಿ...

ಇಂತೀ ನಿಮ್ಮವ

ಡಿ.ಎಲ್.ನರಸಿಂಹಾಚಾರ್

❄

೨೮೭೬, ಸರಸ್ವತಿಪುರಂ

ಮೈಸೂರು-೫

೨೩.೭.೧೯೬೭

ಶ್ರೀಮಾನ್ ವೆಂಕಟಾಚಲ ಶಾಸ್ತ್ರೀ ಅವರಿಗೆ,

ತಮ್ಮ ಪತ್ರವೂ ಅದರೊಡನೆ ಇದ್ದ ನೇಮಿಪುರಾಣವಿಷಯಕವಾದ ಲೇಖನವೂ ತಲಪಿವೆ. ಲೇಖನವನ್ನು ಓದಿ ನೋಡಿದೆ. ಅಲ್ಲಿನ ಕಥಾವಿವರಗಳೆಲ್ಲ ನನಗೆ ನೆನಪಿಲ್ಲ. ಆದ್ದರಿಂದ ನಾನೇನೂ ಹೇಳಲಾರೆ. ನೀವು ಹಿಡಿದಿರುವ ದಾರಿ ಸರಿಯಾಗಿದೆ ಎಂದು ತಿಳಿಯುತ್ತದೆ. ಕರ್ಣಪಾರ್ಯನ ನೇಮಿಪುರಾಣಕ್ಕೆ ಸ್ವತಂತ್ರವಾದ ಆಕರವೊಂದು ಇರಬಹುದು. ಅಲ್ಲಿನ ವ್ಯತ್ಯಾಸಗಳಿಗೆ ಆ ಕವಿಯ ವೈಯಕ್ತಿಕ ದೃಷ್ಟಿ ಕಾರಣವಾಗಬಹುದು. ಈ ವಿಷಯದಲ್ಲಿ ನೀವು ಹಿಂದಿನ ನೇಮಿಕಥೆಗಳನ್ನೆಲ್ಲಾ ಪರಿಶೀಲನೆ ಮಾಡಿದ್ದೀರಿ. ಪುಷ್ಪದಂತನೆಂಬ ಅಪಭ್ರಂಶಕವಿಯ (ಕಾಲ ಕ್ರಿ.ಶ.೯೫೯) 'ತಿಸಟ್ಠಿ ಮಹಾಪುರಿಸ ಗುಣಾಲಂಕಾರ'ದಲ್ಲಿರುವ ನೇಮಿಕಥೆಯನ್ನು ನೋಡಿರಿ. ಈ ಗ್ರಂಥ ಮೂರು ಸಂಪುಟಗಳಾಗಿ ಸಂಪಾದಿತವಾಗಿ (by P.L.Vaidya) ಪ್ರಕಟವಾಗಿದೆ. ಮೂರನೆಯ ಭಾಗದಲ್ಲಿ ನೇಮಿಜಿನನ ಕಥೆ ಇದೆ. ಅದರ ಸಾರಾಂಶವನ್ನು ಇಂಗ್ಲಿಷಿನ ಮುನ್ನುಡಿಯಲ್ಲಿ ಹೇಳಿದೆ. ಇದನ್ನು ಪರಿಶೀಲಿಸಿದರೆ ಪ್ರಕೃತ ನಿಮ್ಮ ಸಮಸ್ಯಾಪರಿಹಾರಕ್ಕೆ ನೆರವು ದೊರೆಯಬಹುದು. ಹಾಗೆ ಮಾಡುವಿರೆಂದು ಭಾವಿಸುತ್ತೇನೆ.

ಇಂತೀ ನಿಮ್ಮವ

ಡಿ.ಎಲ್.ನರಸಿಂಹಾಚಾರ್

❄

೨೯.೬.೭೨

ಪ್ರಿಯ ಶಾಸ್ತ್ರಿಗಳಲ್ಲಿ ವಿಜ್ಞಾಪನೆಗಳು.

ಈ ದಿನ ರಾಮಾಯಣ ಓದುತ್ತಿದ್ದಾಗ ಈ ಶ್ಲೋಕಪಾದಗಳು ಸಿಕ್ಕಿದವು:

"ಯಥೋಕ್ತಕಾರೀ ವಚನಮುತ್ತರಂ ಚೈವ ಸೋತ್ತರಂ" (ಕಿ.೩೨-೧೨)

"ತಾನ್ ಗೃಹೀತ ಪ್ರಹರಣಾನ್" (ಕಿ.೩೨-೧೯)

"ತಸ್ಯ ವಾಕ್ಯಂ ಯದಿ ರುಚಿಃ" (ಕಿ.೩೨-೩೪)

"ರಾಜಂಸ್ತಿಷ್ಠಸ್ವಸಮಯೇ" (ಕಿ.೩೨-೫೧)

ಒಂದು ಮೂರನೆಯ ಪಾದಗಳಲ್ಲಿ ಪಂಚಮಾಷ್ಟಾಕ್ಷರಗಳು ಯಾವುದಾದರೂ ಗುರುವಾದಾಗ ನಡುವೆ ಮೂರು ಲಘುಗಳು ಸಾಧಾರಣವಾಗಿ ಇರುತ್ತವೆ. ಕಥಾಸರಿತ್ಸಾಗರದಲ್ಲೂ ಉದಾಹರಣೆಗಳು ಸಿಕ್ಕುತ್ತವೆ. ಅಮರದಲ್ಲಿ "ಸುಪರ್ವಾಣಸ್ಸುಮನಸಃ" ಎಂದು ಸ್ವರ್ಗವರ್ಗದಲ್ಲಿ ಬರುತ್ತದೆ. ನನ್ನ ಅನುಷ್ಟುಪ್‌ಸೂಕ್ತಿಗಳಿಗೆ ಸಾಕಷ್ಟು ಪೂರ್ವಾಧಾರಗಳು ಸಿಕ್ಕಿತಲ್ಲವೆ? ಕಾಳಿದಾಸನದರ ಜತೆಗೆ "ತದನ್ವಯೇ ಶುದ್ಧಿಮತಿ."

ಇತಿ ಶಂ

ಪುತಿನ

❄

೧.೫.೮೧

ಪ್ರಿಯ ಶಾಸ್ತ್ರಿಗಳವರಲ್ಲಿ ವಿಜ್ಞಾಪನಾ.

ತಮ್ಮ "ಮಹಾಮಹೋಪಾಧ್ಯಾಯ ಡಾ.ಆರ್.ಶಾಮಾಶಾಸ್ತ್ರೀ" ಓದಿ ತುಂಬಾ ಸಂತೋಷವಾಯಿತು. ಅವರನ್ನು ಅದೃಷ್ಟಶಾಲಿಗಳೆಂದು ಮಾತ್ರ ನಾನು ಭಾವಿಸಿದ್ದೆ. ಆದರೆ ಅದೃಷ್ಟ ಗುಣವಂತರನ್ನು ಮಾತ್ರ ಆರಿಸಿಕೊಳ್ಳುತ್ತದೆ ಎಂಬುದನ್ನು ನಿಮ್ಮ ಪುಸ್ತಕ ಓದಿ ಅರಿತೆ. ಪುಸ್ತಕ ಚಿಕ್ಕದು, ನಿಶ್ಚಯ. ಆದರೆ ಎಷ್ಟು ಶ್ರಮಪಟ್ಟಿದ್ದೀರಿ! ಈ ಮಹಾವಿದ್ವಾಂಸರ ಗ್ರಂಥಗಳೇನಾದರೂ ತಮ್ಮಲ್ಲಿದೆಯೇ? ಪುಟ ೪೧-೫ರಲ್ಲಿ ಹೇಳಿರುವ ಗ್ರಂಥವೆಲ್ಲಿ ಸಿಕ್ಕುತ್ತದೆ? ಒಬ್ಬ ಮಹಾಗುಣವಂತರಾದ ದೊಡ್ಡ ವಿದ್ವಾಂಸರನ್ನು ನನ್ನ ಅಂತಃಕರಣದೊಳಕ್ಕೆ ತಂದು ಹರ್ಷಗೊಳಿಸಿದ್ದಕ್ಕಾಗಿ ನಾನು ತಮಗೆ ಕೃತಜ್ಞ... ಅಭಿನಂದನೆಗಳು.

ಇತಿ ಶಂ

ಪು.ತಿ.ನರಸಿಂಹಾಚಾರ್

❄

ಬೆಂಗಳೂರು ೧೯
೧೦.೨.೧೯೭೨

ಮಿತ್ರರಾದ ಶ್ರೀ ವೆಂಕಟಾಚಲ ಶಾಸ್ತ್ರಿಗಳಿಗೆ, ವಿಶ್ವಾಸದ ವಂದನೆ.

.....ಛಂದಸ್ಸಿನ ಬಗೆಗೆ ನಾನು ಈವರೆಗೆ ವಿಶೇಷ ಅಧ್ಯಯನ ಮಾಡಿರಲಿಲ್ಲ. ಸಂಬಂಧಪಟ್ಟ ಸಾಹಿತ್ಯವನ್ನು ಗ್ರಂಥಗಳನ್ನು, ಲೇಖನಗಳನ್ನು ಬಿಡುವಾದರೆ ಓದಿ, ಮರೆಯುತ್ತಿದ್ದೆ. ಈ ವರ್ಷ ಎಂ.ಎ. ತರಗತಿಗೆ ಛಂದಸ್ಸು ಪಾಠ ಹೇಳುವುದು ನನ್ನ ತಲೆಗೆ ಕಟ್ಟಿತು. ಆ ಸಂಬಂಧದಲ್ಲಿ ನಿಮ್ಮ ಪುಸ್ತಕ -ಕನ್ನಡ ಛಂದಸ್ಸು- ಅದನ್ನೂ ಓದಿದೆನು; ಓದಿದ್ದು ಮಾತ್ರವಲ್ಲ, ಉಪಯೋಗಿಸಿಕೊಳ್ಳುತ್ತ ಇದ್ದೇನೆ. ಪಾಠ ಹೇಳುವ ಅಧ್ಯಾಪಕರಿಗೂ ಕಲಿಯುವ ವಿದ್ಯಾರ್ಥಿಗಳಿಗೂ ತುಂಬಾ ಉಪಯುಕ್ತವಾಗಿದೆ. ಶಾಸ್ತ್ರವಿಚಾರಗಳನ್ನು ಅದೆಷ್ಟು ಚೆನ್ನಾಗಿ, ಅಡಕವಾಗಿ, ಪ್ರಮಾಣಭೂತವಾಗಿ ಬರೆದಿರುವಿರಿ! ನಿಮ್ಮ ಹಸನಾದ ಬರವಣಿಗೆಯನ್ನು ಓದಿ, ತುಂಬ ಸಂತೋಷವಾಗಿದೆ. ನನ್ನ ಕೆಲಸ ತುಂಬ ಹಗುರವೆನಿಸಿದೆ. ವಿಶೇಷ ಅಧ್ಯಯನವನ್ನೂ ಮಾಡಬೇಕಾಗಿ ಬಂದು, ಕೆಲವು ಹೊಸ ಅಂಶಗಳನ್ನೂ ಗ್ರಹಿಸುವಂತಾಗಿದೆ. ಏಳೆಯ ಮೇಲೆ ಒಂದು ಚಿಕ್ಕ ಟಿಪ್ಪಣಿ ಬರೆದು ಬೇರೆಯ ಕಡೆ ಪ್ರಕಟನೆಗೆ ಕೊಟ್ಟಿದ್ದೇನೆ. ಉದ್ದಂಡ ಷಟ್ಪದಿಯ ಲಯದ ಬಗೆಗೆ ಹೊಸ ಅಂಶ ಗೋಚರಕ್ಕೆ ಬಂದಿದೆ. ಸದ್ಯದಲ್ಲಿಯೇ ಒಂದು ಟಿಪ್ಪಣಿ ಬರೆದು ಪ್ರ.ಕ.ಕ್ಕೆ ಕಳಿಸುತ್ತೇನೆ. ಬರುವ ಸಂಚಿಕೆಯಲ್ಲಿ ಅಲ್ಲದಿದ್ದರೆ, ಅದರ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಬಹುದು...

ಇಂತೀ ನಮಸ್ಕಾರಗಳು
ಎಂ.ವಿ.ಸೀತಾರಾಮಯ್ಯ

❄

ಬೆಂಗಳೂರು ೧೯
೨೦.೪.೧೯೮೩

ಪ್ರಿಯರಾದ ಡಾ.ವೆಂಕಟಾಚಲ ಶಾಸ್ತ್ರೀ ಅವರಿಗೆ ನಮಸ್ಕಾರ.

...... ನಿಮ್ಮ ಲೇಖನವನ್ನು ಕೈಗೆ ಬಂದೊಡನೆಯೆ ಓದಿದೆ. ಅಚ್ಚುಕಟ್ಟಾಗಿ ಬಂದಿದೆ. ವಾದ ಪೊಗದ(ರ್ದ)ಸ್ತಾಗಿದೆ. ಅನಂತನಾಥಪುರಾಣದ ಪದ್ಯದ ನೆರವಿನಿಂದ "ನೆರೆದರ ನೀತಿ ಸುರಲೋಕಂ" ಎಂದು ಮೂರನೆಯ ಸಾಲಿನ ಪಾಠವನ್ನು ಸಮರ್ಥಿಸಿ ನಿಲ್ಲಿಸಿರುವುದು ಕೊನೆಯ ಮಾತಾಗಿಯೇ ಉಳಿಯುತ್ತದೆ ಎಂದು ನನ್ನ ಅಭಿಮತ.

ಈ ಸಾಲಿಗೆ ನೀವು “ಕೂಡಿದವರ ನಡೆವಳಿಕೆ ಸುರಲೋಕವೇ” ಎನ್ನುವಲ್ಲಿ ‘ಸುರಲೋಕ’ದ ಮೇಲಿನ ಅವಧಾರಣೆ ‘ನಡೆವಳಿಕೆ’ಗೆ ಬಿದ್ದರೆ ಮೇಲಲ್ಲವೆ?(“ಕೂಡಿದವರ ನಡೆವಳಿಕೆಯೇ ಸುರಲೋಕ”).

ಪತ್ರಿಕೆಯ ಬಗ್ಗೆ ನನ್ನ ಕೂಡ ಮಾತಾಡಬೇಕು ಎಂಬ ನಿಮ್ಮ ಆಸೆಗೆ ನನ್ನ ಸ್ವಾಗತ.... ಹೆಸರು ‘ಶ್ರೀಮಾರ್ಗ’ ಎಂದು ಮಾರ್ಪಡಲಿ ಎಂದು ಡಾ.ಕಲಬುರ್ಗಿ. ತಮ್ಮ ಅಭಿಪ್ರಾಯ ಹೇಗೆ? ತಿಳಿಸಿ... ಶ್ರೀ ಎನ್.ಎಸ್.ತಾರಾನಾಥ್ ಅವರು “ಲೋಚನ”ವೇ ಇರಲಿ ಎನ್ನುತ್ತಾರೆ. ವಂದನೆಗಳು

ತಮ್ಮವನಾದ

ಎಂ.ವಿ.ಸೀತಾರಾಮಯ್ಯ

❄

ಬಿ.ಜಿ.ಎಲ್.ಸ್ವಾಮಿ ಪತ್ರಗಳು

ಪ್ರೊ.ಬಿಜಿಎಲ್.ಸ್ವಾಮಿ, ಸಸ್ಯಶಾಸ್ತ್ರದ ಪ್ರಾಧ್ಯಾಪಕರು
ಪ್ರೆಸಿಡೆನ್ಸಿ ಕಾಲೇಜು, ಮದರಾಸು ೫
೧೯.೧.೭೪

ಮಾನ್ಯ ಶ್ರೀ ವೆಂಕಟಾಚಲ ಶಾಸ್ತ್ರಿಗಳಿಗೆ ನಮಸ್ಕಾರಗಳು.

ನಾನು ಹೈಸ್ಕೂಲಿನಲ್ಲಿ ಓದಿದ್ದು ಸಂಸ್ಕೃತವೆಂಬ ಕಾಕಲಿಪಿ. ಕಾಲೇಜಿಗೆ ಹೋಗುವಾಗ ಅಪ್ಲಿಕೇಷನಿನಲ್ಲಿ ದಾಖಲೆ ಮಾಡಿದ ಐಚ್ಛಿಕಭಾಷೆಯೇನೋ ಕನ್ನಡವೇ ಆದರೂ ಹೋಗಿ ಕುಳಿತು ಕೇಳಿದ್ದೆಲ್ಲ ಸಂಸ್ಕೃತ ತರಗತಿಗಳಲ್ಲಿ(ದಿ.ಹರಿಯಪ್ಪ, ಶಿವರಾಮಶಾಸ್ತ್ರೀ, ರಾಮಚಂದ್ರರಾವ್). ಓದು ಮುಗಿದಮೇಲೆ ಅಮೆರಿಕಾ ವಾಸ, ಸುಮಾರು ೧೦ ವರ್ಷಗಳು; ಕಲಿತದ್ದನ್ನೆಲ್ಲ ಮರೆಯುವುದಕ್ಕೆ ಕಾಲ ಸಾಕಲ್ಲವೆ? ಅಲ್ಲಿಂದ ಹಿಂತಿರುಗಿದಂದಿನಿಂದ ತಮಿಳುನಾಡನ್ನು ಬಿಡದಿ ಮಾಡಿಕೊಂಡಿದ್ದೇನೆ. ಹೀಗಾಗಿ ಕನ್ನಡ ಭಾಷಾಜ್ಞಾನವನ್ನಾಗಲಿ ಸಾಹಿತ್ಯಜ್ಞಾನವನ್ನಾಗಲಿ ಶಾಸ್ತ್ರೋಕ್ತವಾಗಿ ಗುರುಮುಖೇನ ಕಲಿತುಕೊಳ್ಳುವ ಅವಕಾಶವನ್ನು ಅರ್ಧ ಸ್ವಪ್ರಯತ್ನದಿಂದ ತಪ್ಪಿಸಿಕೊಂಡೆ. ಅರ್ಧ ಅನಿವಾರ್ಯದಿಂದ ತಪ್ಪಿಸಿಕೊಂಡೆ.

ಈ ಪೀಠಿಕೆ ಈ ಪತ್ರಕ್ಕೆ ಅಗತ್ಯವಾಗಿದೆ. ನೀವು ಆಶಿಸಿರುವ ಕೆಲಸಕ್ಕೆ ಧುಮುಕಲು ಅಳುಕುತ್ತಿದ್ದೇನೆ. ೧೮-೨೦ ವರ್ಷಗಳ ಹಿಂದೆ ಯಾವಾಗಲೋ ಪಂಪನ ಕೃತಿಗಳನ್ನೋದಿ ಟಿಪ್ಪಣಿ ಮಾಡಿಕೊಂಡಿದ್ದೆ. ಸಸ್ಯಗಳನ್ನು ಗುರುತು ಹಾಕಿಕೊಂಡಿದ್ದೆ. ನೀವು ಕೇಳಿರುವ ಲೇಖನಕ್ಕೆ ಈ ಟಿಪ್ಪಣಿ ಒದಗದು. ಮೂಲವನ್ನೇ ಪಕ್ಕದಲ್ಲಿಟ್ಟುಕೊಳ್ಳಬೇಕಾಗಿದೆ...

ಆದರೆ ಒಂದು ಬಿನ್ನಹವನ್ನು ಈಗಲೇ ನಿಮ್ಮ ಮುಂದಿಡುತ್ತೇನೆ. ನಾನು ಸಾಹಿತ್ಯ ಸೃಷ್ಟಿಗಾಗಲಿ ಸಾಹಿತ್ಯವಿಮರ್ಶೆಗಾಗಲಿ ಕೈಹಾಕಿದವನಲ್ಲ. ಅವಕ್ಕೆ ಅಗತ್ಯವಾದ ಶಿಕ್ಷೆ

ಅಧಿಕಾರಗಳು ನನಗಿಲ್ಲ; ಈ ಲೋಪವನ್ನು ನಾನೇ ಚೆನ್ನಾಗಿ ಅರಿತುಕೊಂಡಿದ್ದೇನೆ. ನನ್ನ ಬರವಣಿಗೆಯಲ್ಲಿ ಕಂಡುಬರುವ ಭಾಷಾನ್ಯೂನತೆಗಳನ್ನು ಸುಧಾರಿಸಲು ನೀವು ಒಪ್ಪಿಕೊಳ್ಳುವುದಾದರೆ ನನಗೆ ಬಹಳ ಸಂತೋಷ, ಹೆಮ್ಮೆ.

ಒಂದು ತಿಂಗಳೊಳಗಾಗಿ ಕೆಲಸ ಮುಗಿಯುತ್ತದೆಯೆಂಬ ನಿರೀಕ್ಷೆ ನನಗಿಲ್ಲ. ಶಾಸ್ತ್ರ ಸಂಬಂಧವಾದ ಸಂಶೋಧನೆಯೊಂದರಲ್ಲಿ ಮುಳುಗಿದ್ದೇನೆ. ತೇಲಿಬಂದ ಮೇಲೆ ಪಂಪ ಪುಷ್ಪಗಳನ್ನು ಅರಳಿಸುತ್ತೇನೆ.

ಹೀಗೆಯೇ ವಿಶ್ವಾಸವಿರಬೇಕು.

ಇತಿ

ಸ್ವಾಮಿ

❄

ಪ್ರೆಸಿಡೆನ್ಸಿ ಕಾಲೇಜು

ಮದರಾಸು ೫

೨೯.೭.೭೪

ಪ್ರಿಯ ಡಾ.ವೆಂಕಟಾಚಲ ಶಾಸ್ತ್ರಿಯವರಿಗೆ ನಮಸ್ಕಾರ.

ನಿಮ್ಮ 'ಜ್ಞಾಪಕ' ಪತ್ರಗಳು ಬಂದು ಕೆಲವು ದಿನಗಳಾದವು. ಚಿತ್ರಗಳನ್ನು ತಯಾರು ಮಾಡಿ ಕಳುಹಿಸೋಣವೆಂದಿದ್ದೆ. ಸಾಧ್ಯವಾಗಲಿಲ್ಲ. ಶಾಸ್ತ್ರಾಧ್ಯಯನಸಂಬಂಧವಾದ ಗಂಟುಗಳಲ್ಲಿ ಸಿಕ್ಕಿಹಾಕಿಕೊಂಡುಬಿಟ್ಟಿದ್ದೇನೆ. ಕಳೆದ ಎರಡು ತಿಂಗಳಿಂದ ೨೪ ಗಂಟೆಗಳಲ್ಲಿ ೨೦ ಗಂಟೆಗಳನ್ನು ಲ್ಯಾಬೊರೆಟರಿಯಲ್ಲಿ ಕಳೆಯುತ್ತಿದ್ದೇನೆ.

ನನ್ನ ಲೇಖನದ ವಿಷಯ: ನಾನು ಚಿತ್ರಗಳನ್ನು ಬಿಡಿಸುವುದಕ್ಕೆ ೧೫ ದಿನವಾದರೂ ಬೇಕಾಗುತ್ತದೆ. ಅದುವೇಳೆಗೆ ನಿಮಗೂ ಎಲ್ಲೆಮೀರುತ್ತದೆಯೆಂದು ಭಾವಿಸುತ್ತೇನೆ. ಚಿತ್ರರಹಿತವಾಗಿಯೇ ಅಚ್ಚುಮಾಡಿಬಿಡಿ; ಇಲ್ಲವೆ ಮುಂದಿನ ಸಂಚಿಕೆಯೊಂದಕ್ಕೆ ಕಾದಿರಿಸಿ ಕೊಳ್ಳಬಹುದು. ನಿಮ್ಮ ತೀರ್ಮಾನವನ್ನು ಕೂಡಲೇ ತಿಳಿಸಬೇಕಾಗಿ ಕೋರುತ್ತೇನೆ.

ಪಂಪಭಾರತದ 'ಥಾಳಪ್ರಿಯ'- ಇದುವರೆಗೆ ಅಚ್ಚಾಗಿರುವ ವ್ಯಾಖ್ಯಾನಗಳನ್ನು ನಾನು ಒಪ್ಪಿಕೊಳ್ಳಲಾರೆ. ಮೂಲ ಓಲೆಪ್ರತಿಗಳನ್ನು ನೋಡುವ ಅವಕಾಶವನ್ನು ಎದಿರು ನೋಡುತ್ತಿದ್ದೇನೆ. ನೀವು ತಿಳಿಸುವಂತೆ ಅಚ್ಚಾದ ಪಾಠದಲ್ಲಿಯೇ ಕೊರತೆಗಳಿರಬಹುದು. ನೀವಾದರೂ ಇದನ್ನು ಸರಿಪಡಿಸಲು ಪಾಂಡಿತ್ಯವನ್ನೂ ಕಾರ್ಯಸೌಕರ್ಯವನ್ನೂ ಪಡೆದಿದ್ದೀರಿ. ಮುಂದಕ್ಕೆ ನೋಡೋಣ...

ಇತಿ ನಿಮ್ಮವ

ಸ್ವಾಮಿ

❄

ಪ್ರೊ.ಜಿ.ವೆಂಕಟಸುಬ್ಬಯ್ಯ
ಅಧ್ಯಕ್ಷರು ಮತ್ತು ಪ್ರಧಾನ ಸಂಪಾದಕ
ಕನ್ನಡ ನಿಘಂಟು ಕಛೇರಿ
ಕನ್ನಡ ಸಾಹಿತ್ಯ ಪರಿಷತ್ತು
ದಿನಾಂಕ ೨೩.೩.೮೮

ಪ್ರಿಯ ವೆಂಕಟಾಚಲ ಶಾಸ್ತ್ರಿಗಳಲ್ಲಿ ವಿಜ್ಞಾಪನೆಗಳು.

'ಪಂಪ' ಕೃತಿಯನ್ನು ಇಂದು ಓದಲು ಅವಕಾಶ ಸಿಕ್ಕಿತು. ಒಂದೇ ಓದಿನಲ್ಲಿ ಪುಸ್ತಕವನ್ನು ಓದಿದೆನೆಂದರೆ ಆ ಪುಸ್ತಕದ ವಾಚನಸೌಲಭ್ಯಕ್ಕೆ ಅದು ದೃಷ್ಟಾಂತವಲ್ಲದೆ ಬೇರೆಯಲ್ಲ. ಪಂಪನ ಬಗ್ಗೆ ಹೇಳಬೇಕಾದುದೆಲ್ಲವನ್ನೂ ಸಂಗ್ರಹವಾಗಿಯಾದರೂ ನಿರ್ದಿಷ್ಟವಾಗಿ ಹೇಳಿರುವುದು ಮೆಚ್ಚಿಕೆಗೆ ಅರ್ಹವಾದುದು. ಪಂಪನ ಎರಡು ವಿವಿಧ ಶೈಲಿಗಳ ಅಂದರೆ ಎರಡು ಗ್ರಂಥಕ್ಕೆ ಅವನು ಬೇರೆಯಾಗಿಯೇ ವಿನಿಯೋಗಿಸಿದ್ದಾನೆಂದು ಹೇಳಬಹುದಾದ ಸಂಸ್ಕೃತಪ್ರಚುರ, ದೇಸೀಪ್ರಚುರ ಭಾಷೆಯ ಬಗ್ಗೆ ಒಂದು ಸಣ್ಣ ಟಿಪ್ಪಣಿ ಇದ್ದಿದ್ದರೆ ಎನ್ನಿಸಿತು. ಅದು ಪುಸ್ತಕದ ಗಾತ್ರಕ್ಕೆ ಅಡ್ಡಿ ಬಂದಿರಬಹುದು. ಎರಡು ಗ್ರಂಥಗಳ ವ್ಯಕ್ತಿವೈಶಿಷ್ಟ್ಯ ಉದ್ದೇಶ ಸಾರ್ಥಕ್ಯಗಳು ಸ್ಪಷ್ಟವಾಗಿ ಅನುಮಾನಕ್ಕೆ ಎಡೆಯಿಲ್ಲದಂತೆ ನಿರೂಪಿತವಾಗಿವೆ. ಚಾರಿತ್ರಿಕಹಿನ್ನೆಲೆ, ಕವಿಪ್ರಶಸ್ತಿ ಇವು ಸ್ವಸಂಪೂರ್ಣ ವಾಗಿವೆ. ಕನ್ನಡದ ಅಗ್ರಕವಿಗೆ ಸಂದ ಉಚಿತವಾದ ಆಧುನಿಕಪ್ರಶಸ್ತಿಯೆಂದು ನಿಮ್ಮ ಗ್ರಂಥವನ್ನು ನಾನು ಕರೆಯುತ್ತೇನೆ.

ಮುಂದಿನ ವಾರದ ಸಭೆಗೆ ಬರುತ್ತೀರಿ ತಾನೆ?

ಇಂತಿ ತಮ್ಮವ
ಜಿ.ವೆಂಕಟಸುಬ್ಬಯ್ಯ

❄

೫೮, ೩೧ನೇ ಕ್ರಾಸ್, ೭ನೇ ಬ್ಲಾಕ್
ಜಯನಗರ
ಬೆಂಗಳೂರು ೧೧
ದಿನಾಂಕ ೭.೬.೮೮

ಪ್ರಿಯ ವೆಂಕಟಾಚಲ ಶಾಸ್ತ್ರಿಗಳಲ್ಲಿ ವಿಜ್ಞಾಪನೆಗಳು.

ಕನ್ನಡ ಚಿತ್ರಕಾವ್ಯವನ್ನು ಓದುತ್ತಿದ್ದೇನೆ. ಇದು ಕಾದಂಬರಿಯಲ್ಲವಲ್ಲ, ಒಂದೇ ಓದಿನಲ್ಲಿ ಪೂರೈಸಲು. ನಿಧಾನವಾಗಿ ಪ್ರತಿಯೊಂದು ದೃಷ್ಟಾಂತವನ್ನು ಪರಿಶೀಲಿಸಬೇಕು. ಇದೊಂದು ವ್ಯಾಯಾಮ. ಆಸಕ್ತರಿಗೆ ಸವಿಯಾದುದೇನೋ ಸರಿ. ಕೇವಲ ಕಾವ್ಯ

ರಸಾಸ್ವಾದನೆಯ ದೃಷ್ಟಿಯಿಂದ ನಿಷ್ಪ್ರಯೋಜಕ. ಈ ವಿಚಾರವನ್ನು ಗ್ರಂಥದ ಪ್ರಾರಂಭ ದಲ್ಲಿಯೇ ನೀವು ಸ್ಪಷ್ಟಪಡಿಸಿದ್ದೀರಿ.

ನನಗೆ ಆಶ್ಚರ್ಯವೇನೆಂದರೆ ಈ ವಿಷಯವನ್ನು ನಿಷ್ಠೆಯಿಂದ ಅಭ್ಯಾಸಮಾಡುವ ದೃಷ್ಟಿಯ ಹಿಂದಿನ ಆಹ್ವಾನ -ಧಾರವಾಡದ ಅರ್ಥದಲ್ಲಿ challenge. ನಿಮ್ಮನ್ನು ಎಷ್ಟು ಅಭಿನಂದಿಸಿದರೂ ಸಾಲದು- ಈ challenge ಅನ್ನು ನೀವು ಸ್ವೀಕರಿಸಿರುವುದಕ್ಕಾಗಿ. ನನ್ನ ವಾಚನ ಪೂರ್ತಿಯಾದ ವೇಳೆ ಇತರ ವಿಚಾರಗಳು ಇರಲಿ...

ಈ ಸಲದ ಸಭೆಗೆ ಬರುವಾಗ ಅನಂತನಾಥಪುರಾಣದ ಮತ್ತು ಪುಣ್ಯಾಸ್ರವದ ಒಂದೊಂದು ಪ್ರತಿಗಳನ್ನು ನನಗಾಗಿ ಕೊಂಡುತನ್ನಿ. ನನ್ನ ಈ ಪುಸ್ತಕಗಳನ್ನು ತೆಗೆದು ಕೊಂಡು ಹೋದವರು ಹಿಂದಿರುಗಿಸಲಿಲ್ಲ. ನನ್ನ ಟಿಪ್ಪಣಿಗಳೂ ನಾಶವಾದಂತಾಯಿತು. ಎಲ್ಲ ನಂಬಿಕೆಯ ಫಲ! ...

ಸಭೆಯಲ್ಲಿ ನೋಡೋಣ.

ಇಂತು ತಮ್ಮವ
ಜಿ.ವೆಂಕಟಸುಬ್ಬಯ್ಯ

❄

ಚಿ.ಮೂ. ಪತ್ರಗಳು

ಬೆಂಗಳೂರು ೫೬
೨೮.೧೧.೮೦

ಪ್ರಿಯ ಡಾ.ಶಾಸ್ತ್ರೀ,

... ಪರಿಷತ್ತಿನ ನಿಘಂಟಿನ ಬಗ್ಗೆ ನಿನ್ನ ನಿಲುವು ನನಗೆ ಅನಿರೀಕ್ಷಿತವಲ್ಲ.... ನಿಘಂಟಿನ ಭವಿಷ್ಯ ಚಿಂತಾಜನಕವಾಗಿದೆ...

... ಗ್ರಂಥಸಂಪಾದನೆ ಗೋಷ್ಠಿಗೆ ನೀನು ಬರಲೇಬೇಕು. ಪ್ರೊ.ಎಂ.ವಿ.ಸೀ. ಕೂಡ ಬರೆದಿರಬೇಕು. ನೀನಿಲ್ಲದೆ ಈ ಗೋಷ್ಠಿಯನ್ನು ಊಹಿಸಿಕೊಳ್ಳಲಾರೆ. ಪ್ರಪ್ರಥಮವಾಗಿ ನಡೆಯಲಿರುವ ಅಂತಹ ಗೋಷ್ಠಿ ಯಶಸ್ವಿಯಾದರೆ ಗ್ರಂಥಸಂಪಾದನೆಯ ಚಟುವಟಿಕೆಗೆ ಹೆಚ್ಚಿನ ಪ್ರೋತ್ಸಾಹ, ಶಾಸ್ತ್ರೀಯತೆ ಲಭ್ಯವಾದಾವು. ನೀನು ಭಾಗವಹಿಸದಿದ್ದರೂ ಗೋಷ್ಠಿ ಗಳು ನಡೆಯುತ್ತವೆ, ನಿಜ; ಆದರೆ ಸಪ್ಪೆಯಾಗುತ್ತವೆ. ದಯಮಾಡಿ ಒಪ್ಪಿಕೊ...

... 'ನೆಳಲು' ಬಗ್ಗೆ ಯೋಚಿಸು. ನೆಲವತ್ತಿ=ನ್ಯಾಮತಿ; ನೆಲವತ್ತಿಯ ವರ್ತಕರಿಂದ ಬಳಕೆಗೆ ಬಂದ ಅಡಕೆ ಎಂಬುದಕ್ಕೆ ಹೆಚ್ಚಿನ ಸಮರ್ಥನೆ ದೊರಕಿದೆ.

ಇತಿ, ವಿಶ್ವಾಸದಿಂದ
ಚಿದಾನಂದಮೂರ್ತಿ

❄

೩.೨.೮೧

ಪ್ರಿಯ ಡಾ.ಶಾಸ್ತ್ರೀ,

ಮೂರು ದಿನಗಳ ಒಕ್ಕೂಟ ಹಿತವಾಗಿತ್ತು.

ತ್ರಿಪದಿ ಸಮಸ್ಯೆ. ಅಂತ್ಯ ಹೀಗೇ ಇರಬೇಕು ಎಂದಿರುವಂತಿದೆ ಎಂದಿದ್ದಿರಿ. ಇದನ್ನು ಗಮನಿಸಿ:

೧. ಅಂಜೆನು | ಸಿಂಹಕ್ಕೆ | ಅಂಜೆ ಮಾ | ತಂಗಕ್ಕೆ
ಅಂಜೆನಂ | ಜಿಸುವ | ಸಿಡಿಲಿಗೆ | ಕೆಳೆಯಳೆ
ಅಂಜುವೆ | ಪರರ | ನಿಂದೆಗೆ ||

(ಚಂದನೆಯ ಕಥೆ ಸಂ. ತರಂಗ ಪು.೨೨೭)

೨. ಅಡಿಗಿಯ...........
....
ಮಡದಿ | ತವರಿಗೆ | ಹೋಗ್ಯಾಳ ||

೩. ಹಿಡಿಹೊನ್ನ..........
....
ನಮ್ಮವರು | ಕಂಡು | ಬೋದರು ||

ಅಂತ್ಯ ವಿಷ್ಣುಗಣ ಗುರ್ವಾದಿ ಸಾಧ್ಯ ಅಲ್ಲವೆ?

ಇತಿ, ನಿಮ್ಮವ
ಚಿದಾನಂದಮೂರ್ತಿ

❄

ಬೆಂಗಳೂರು ೫೬
೨೧.೨.೮೩

ಪ್ರಿಯ ಡಾ.ಶಾಸ್ತ್ರೀ,

.... ಮತ್ತೆ ಶ್ರವಣಬೆಳ್ಗೊಳಕ್ಕೆ ಹೋಗಿ, ಹಳೆಯ ಬೆಳ್ಗೊಳಕ್ಕೂ ಹೋಗಿದ್ದೆ. ನನ್ನ ಊಹೆ ಈಗ ಖಚಿತನಿರ್ಧಾರವಾಗಿದೆ. ಚಾವುಂಡರಾಯನ ಮಗ ಜಿನದೇವಣ ಕಟ್ಟಿಸಿದ ಬಸದಿ ಅತಿಜೀರ್ಣಾವಸ್ಥೆಯಲ್ಲಿದೆ. ಈ ವರ್ಷ ಅಥವಾ ಮುಂದಿನ ವರ್ಷ ಬಿದ್ದು ಹೋಗಬಹುದು. ಈ ಬಗ್ಗೆ ಪತ್ರಿಕೆಯಲ್ಲಿ ಹೇಳಿಕೆ ಕೊಡಲಿದ್ದೇನೆ.

'ಹೊಸಗನ್ನಡ ಸಾಹಿತ್ಯ - ಕೆಲವು ನೋಟಗಳು' ಪುಸ್ತಕವನ್ನು ನನಗೆ ಅರ್ಪಿಸಿ ನನ್ನ ಮೇಲೆ ದೊಡ್ಡ ಸ್ನೇಹದ ಹೊರೆಯನ್ನು ಹೊರಿಸಿದ್ದೀಯೆ. ನಾನು ಆ ಅರ್ಪಣೆಯನ್ನು ಬಹಳ ಅಮೂಲ್ಯವೆಂದು ಭಾವಿಸಿದ್ದೇನೆ. ಅದರಲ್ಲಿ ಕಷ್ಟಪಟ್ಟು ಹೆಕ್ಕಿತೆಗೆದ ಅನೇಕ ಹೊಸಸಂಗತಿಗಳಿವೆ; ಹೊಸ ದಾಖಲೆಗಳಿವೆ. ನಿನ್ನ ಜ್ಞಾಪಕಶಕ್ತಿ ಅದ್ಭುತ ಮತ್ತು ನೀನು

ವಿಶ್ವಾಸಾರ್ಹ ವಿದ್ವಾಂಸನೆಂಬಲ್ಲಿ ಅನುಮಾನ ಹಿಂದೆಯೂ ಇರಲಿಲ್ಲ, ಈಗಲೂ ಇಲ್ಲ. ನಿನ್ನ ಪುಸ್ತಕ ಅನೇಕ ವಿಷಯಗಳಿಗೆ ಒಂದು ready reference ಆಗಬಲ್ಲದು.

ಪುಸ್ತಕದ ಅರ್ಪಣೆಗೆ ನಾನು ಕೃತಜ್ಞತೆ ಹೇಳುವುದು ಕಷ್ಟವಾಗಿದೆ. ನಿಜವಾಗಿಯೂ ನನಗೆ ಸಂಕೋಚ. ಆದರೂ, ನಾನು ಕೃತಜ್ಞ ಎಂದು ಹೇಳಿಬಿಡುತ್ತೇನೆ.

ಇತಿ, ನಿನ್ನ ವಿಶ್ವಾಸಿ

ಎಂ.ಚಿದಾನಂದಮೂರ್ತಿ

❄

೨೨.೧೨.೮೩

ಬೆಂಗಳೂರು-೫೬

ಪ್ರಿಯ ಡಾ.ಶಾಸ್ತ್ರೀ,

ನನಗೆ ಆ ದಿನ ಸ್ವಲ್ಪ ನಾಚಿಕೆಯಾಯ್ತು. ನಿನ್ನ ಮಾತು ಮನಸ್ಸು ಮುಟ್ಟಿತು, ಭಾವವನ್ನು ಕೆರಳಿಸಿತು...

ಸ್ವಾರಸ್ಯದ ವಿಷಯ ನೋಡು : ಶಾಂತಿನಾಥನ ಸು.ಚ. (ಪು.೪೦, ೩-೬, ವ) "ತಥಾಗತ ಮತೋಪಾಸಕನಂತೆ ತಾರಾಪಥಕ್ಕೆಱಗಿ" ಶ್ಲೇಷೆ ಇದೆ. ಆದರೆ ಬೌದ್ಧಧರ್ಮದ ತಾರಾ ವಿಷಯವಿದೆ. ಶಾಂತಿನಾಥ ಬಳ್ಳಿಗಾವೆಯಲ್ಲಿ ವಿತ್ತಾಧಿಕಾರಿ. ಅವನ ಶಾಸನಕಾಲ ೧೦೬೮; ಅದರಲ್ಲಿ ಬಳ್ಳಿಗಾವೆಯಲ್ಲಿ ಬೌದ್ಧಮಠವಿದ್ದ ಹೆಸರಿದೆ. ಆ ಶಾಸನದಲ್ಲಿ ಸು.ಚ. ಕೃತಿ ಹೆಸರಿದೆ. ಕೃತಿಯ ಕಾಲ ಸ್ಪಷ್ಟವಾಗಿ ೧೦೬೮ ಕ್ಕೆ ಹಿಂದೆ. DLN ಸು.ಚ.ಕಾಲ C. ೧೦೬೦ ಎಂದಿದ್ದಾರೆ. ಆದರೆ, ಸು.ಚ.ಯಲ್ಲಿ ಬಂದಿರುವ ತಾರಾ ಉಲ್ಲೇಖ ಕ್ರಿ.ಶ.೧೦೬೫ರಲ್ಲಿ ಬಳ್ಳಿಗಾವೆಯಲ್ಲಿ ನಿರ್ಮಾಣವಾದ ತಾರಾಭಗವತಿಯೇ ಇರಬೇಕು. ಅವನು ನೋಡಿರ ಬಹುದಾದ ತಾರಾವಿಗ್ರಹ ಅದೇ ಇರಬೇಕಲ್ಲವೇ? ಹಾಗಾದರೆ, ಸು.ಚ.ಯು ೧೦೬೫-೬೮ ರ ಅವಧಿಯಲ್ಲಿ ರಚಿತವಾಗಿದೆಯೆಂದು ಖಚಿತವಾಗಿ ಹೇಳಬಹುದಲ್ಲವೇ?

DLN. ಶಾಂತಿನಾಥ ತನ್ನ ಸು.ಚ.ಯಲ್ಲಿ ಆಶ್ರಯದಾತ ಲಕ್ಷ್ಮಣನನ್ನು ಹೆಸರಿಸಿಲ್ಲ, ಆ ಕಾರಣ, ೧೦೬೨ ಕ್ಕಿಂತ ಹಿಂದೆ ಎನ್ನುತ್ತಾರೆ. ಆದರೆ, 'ಕವಿತಾಗುಣಾರ್ಣವ' ಎಂದು ಆ.ಪು.ದಲ್ಲಿ ಕರೆದುಕೊಂಡಿರುವ ಪಂಪ ತನ್ನ ಆಶ್ರಯದಾತ ಅರಿಕೇಸರಿಯನ್ನೂ ಹೆಸರಿಸಿಲ್ಲ. Narrative evidenceಗೆ ಎಷ್ಟೋ ಅಷ್ಟೇ ಬೆಲೆ. ಹಾಗೇ ಶಾಂತಿನಾಥನು ಲಕ್ಷ್ಮಣನನ್ನೂ ಹೆಸರಿಸಿಲ್ಲದಿರಬಹುದು. ಆ ಕಾರಣ, ೧೦೬೫ ಕ್ಕೆ ಈಚೆ ೧೦೬೮ಕ್ಕೆ ಆಚೆ ಸು.ಚ. ಕಾಲ ಎನ್ನಬಹುದು.

ಜೊತೆಗೆ, ಸು.ಚ.ಪದ್ಯಗಳು ಶಾಸನದಲ್ಲಿ ಬಂದಿವೆ. ಕಾವ್ಯ ರಚನೆಗೊಂಡು ಬಹಳಕಾಲ ಆಗಿರಲಾರದು -ಪದ್ಯಗಳು ಹಾಗೇ ಮನಸ್ಸಿನಲ್ಲಿ ಹೊಸದಾಗಿರಬಹುದು. ಬಳ್ಳಿಗಾವೆಯ

ತಾರಾಭಗವತಿಯ ಸಮಕಾಲೀನ ಪ್ರತ್ಯಕ್ಷದರ್ಶಿಯೊಬ್ಬನ -ಜೈನನ- ಹೇಳಿಕೆ ಗಮನಾರ್ಹ. ಈ ಬಗ್ಗೆ ಲೇಖನ ಬರೆಯಲಿದ್ದೇನೆ... ನಿನ್ನ ಪ್ರತಿಕ್ರಿಯೆ ತಿಳಿಸು, ನನಗೆ ಮುಖ್ಯ.

ಇತಿ, ನಿನ್ನ ವಿಶ್ವಾಸಿ
ಚಿದಾನಂದಮೂರ್ತಿ

❄

೧೬.೬.೮೪
ಬೆಂ- ೫೬

ಪ್ರಿಯ ಡಾ.ಶಾಸ್ತ್ರೀ,
"ರತ್ತ"ದ ಬಗ್ಗೆ.
ಅಗ್ನಿ > ಪ್ರಾ - ಅಗ್ಗಿ
ಭಗ್ನ > ಪ್ರಾ - ಭಗ್ಗ
ಲಗ್ನ > ಪ್ರಾ - ಲಗ್ಗ
ಪತ್ನೀ > ಪ್ರಾ - ಪತ್ತೀ
ವಿಘ್ನ > ಪ್ರಾ - ವಿಗ್ಘ

ಪ್ರಾಸಂಗಿಕವಾಗಿ "ಪಾಇಅ..."ದಲ್ಲಿ ಸಿಕ್ಕ ಉದಾಹರಣೆಗಳು. ಹುಡುಕಿದರೆ ಇನ್ನೂ ಹತ್ತಾರು ಸಿಗಬಹುದು. ಸಂ.ದಲ್ಲಿ ದ್ವಿತ್ವದ ಮೊದಲಭಾಗ ಸ್ಪರ್ಶವ್ಯಂಜನ ವಾಗಿದ್ದು, ಎರಡನೆಯದು "ನ್" ಆಗಿದ್ದರೆ ಅದು ಸಜಾತೀಯವಾಗಬಲ್ಲುದೆಂಬುದಕ್ಕೆ ಉದಾಹರಣೆಗಳು ರತ್ನ>"ರಯಣ" ಎಂದಿದೆ("ಪಾಇಅ..."). ಬೇರೆ ಪ್ರಾಕೃತದಲ್ಲಿ ರನ್ನ, ರಣ್ಣ ಸಿಗಬಹುದು. "ರತ್ತ" ಇದ್ದರೂ ಇರಬಹುದು. ರತ್ನ>ರತ್ತ ಆಗಲು ಭಾಷಿಕ ನಿಯಮದ ಅಡ್ಡಿ ಇಲ್ಲ. ಜನಸಾಮಾನ್ಯರಲ್ಲೂ ಅದು ತೀರ ಸಹಜ. ಅದರಲ್ಲೂ ಹೆಸರುಗಳಲ್ಲಿ ಕೃಷ್ಣ>ಕಿಟ್ಟ('ಟ್' ಗಮನಿಸು)- ಏನು ನಿಯಮ? ಭಾಷೀಯವಾಗಿ ಅದನ್ನೂ ವಿವರಿಸಲು ಸಾಧ್ಯ. ಆ ಕಾರಣ, ರತ್ನ>ರತ್ತ ಈ ಸಾಧ್ಯತೆಯನ್ನು ತಳ್ಳಿ ಹಾಕುವುದು ಕಷ್ಟ. ಚರ್ಚಿಸೋಣ.

ಇತಿ, ಸ್ನೇಹದಿಂದ
ಚಿದಾನಂದಮೂರ್ತಿ

❄

೧೮.೧೧.೮೭
ಬೆಂ- ೪೦

ಪ್ರಿಯ ಡಾ.ಶಾಸ್ತ್ರೀ,

ನನ್ನ ಒಳಗಿನ ಆಳದಲ್ಲಿರುವ ಸಂಶೋಧಕ ತನ್ನ ಮೇಲೆ ಕೂತಿರುವ ಚಳವಳಿಗಾರನನ್ನು ಅತ್ತ ತಳ್ಳಿ ಮೇಲೆದ್ದಾಗ, ಒಂದು ಲೇಖನ/ಆಲೋಚನೆ ಹೊರಬರುತ್ತದೆ.

'ಕಗ್ಗ' ಲೇಖನ ಸಿದ್ಧವಾಗಿದೆ. ಅದರ ನಿಷ್ಪತ್ತಿ ಬಹುಮಟ್ಟಿಗೆ ಖಚಿತ(<ಖಡ್ಗ ಪ್ರಾ. ಖಗ್ಗ). ಆ ಅರ್ಥದ ಬೆಳವಣಿಗೆಯನ್ನು ನಿನ್ನ ಜೊತೆ ಹಂಚಿಕೊಂಡಿದ್ದೇನೆ.

ಈಗ ಮತ್ತೆ 'ಬೆದಂಡೆ' ಕಾಡುತ್ತಿದೆ. "ನುಡಿಗೆಲ್ಲಂ ಸಲ್ಲದ... ಈಗಡಿನ... ಪುರಾತನರ್..." ಈ ಪದ್ಯ ಗಮನಿಸು. ಪುರಾತನರ್ = ಶ್ರೇಷ್ಠರು, ಹಿರಿಯರು (ಹಳೆಯ ಕಾಲದ ಸತ್ತುಹೋಗಿರುವ ಕವಿಗಳು ಎಂದೇ ಆಗಬೇಕಿಲ್ಲ. ಬಸವಣ್ಣ: "ಪುರಾತನರು ಎನ್ನ ಮನೆಗೆ ಬಂದಹರಯ್ಯಾ...). ಬೆದಂಡೆ ಮೂಲತಃ ಜನಪದ ಹಾಡು. ಅದರಲ್ಲಿ 'ಜಾತಿ' ಪದ್ಯಗಳು ಹೆಚ್ಚು(ಅಕ್ಷರೇತರ ವೃತ್ತಗಳು ಜಾಸ್ತಿ). ಅದರಲ್ಲಿ ಒಂದು ಕಂದ, ಒಂದು ವೃತ್ತ; ಉಳಿದವೆಲ್ಲ ಜಾತಿ. ಕಂದ, ವೃತ್ತ ಎಂಬ ಕಲಿತವರ -ವಿದ್ವಾಂಸರ-ರಚನೆ ಬಿಟ್ಟರೆ ಉಳಿದುವೆಲ್ಲ 'ಜಾತಿ'ಗಳು. ಚತ್ತಾಣ: ಕಂದ, ವೃತ್ತಗಳು ಅಲ್ಲಿ ಹೆಚ್ಚು. ಮಧ್ಯೆ ಮಧ್ಯೆ ಒಂದೊಂದು ಗೀತಿಕೆ, ತಿವದಿ, ಅಕ್ಕರ ಉಂಟು. ಚಂಪೂ ಹಾಗೆ(ಗದ್ಯವಿಲ್ಲ, ಅಷ್ಟೇ). ತೀನಂಶ್ರೀ ವ್ಯಾಖ್ಯಾನ ಗಮನಿಸಿದ್ದೇನೆ. ಈ ಬಗ್ಗೆ ನೀನು ಮಧ್ಯೆ ಚತ್ತಾಣ, ಬೆದಂಡೆ ಉಲ್ಲೇಖವಿರುವ ಆಕರಗಳನ್ನು ಮನನ ಮಾಡಿಕೊಂಡು ಮಂಗಳೂರಿಗೆ ಬಾ. ಅಲ್ಲಿ ನಿನ್ನ ಜೊತೆ ಚರ್ಚಿಸಲು ಇಷ್ಟ. ಇಂತಹ 'ಕಗ್ಗ'ದ ವಿಷಯಗಳ ಬಗ್ಗೆ ಚರ್ಚಿಸಲು ಬೆಂಗಳೂರಿನಲ್ಲಿ ಶಿವಣ್ಣ ಬಿಟ್ಟರೆ ಬೇರೆ ಜನವೇ ಇಲ್ಲ.

ಉತ್ತರ ಕನ್ನಡ ಜಿಲ್ಲೆಯಲ್ಲಿ 'ಹಗಣ' ಉಂಟು(ಹಿಂದಿನ ಹಗರಣ); ತಾರ್ಲೆ ಪದ್ಯ ಉಂಟು(eg.ತಾರೆಲೆ). ಹಳಗನ್ನಡದ ರೂಪ ಉಳಿಸಿರುವ ಹವ್ಯಕರ ಕನ್ನಡ ಅಲ್ಲೇ ಹೆಚ್ಚು: ಪ್ರಾಚೀನ ಕರ್ನಾಟಕದ ಎಷ್ಟೋ ವಿಷಯಗಳ ಶೀತಕ ಅದು. ಹಾಗೆಯೇ, 'ಬೆದಂಡೆ'ಯೂ ಅಲ್ಲಿದೆಯೇ? ನೀನು ಕೇಳಿದ್ದೀಯಾ "ಬೆದ್ರುಂಡೆ" ಹಾಡು ಕುಣಿತ. 'ರ್' ಬಿಟ್ಟರೆ ಅದು ಬೆದಂಡೆ ಜ್ಞಾಪಕಕ್ಕೆ ತರುತ್ತಿದೆ. ಬೆಳೆ, ಸಂತಾನಗಳಿಗೆ (ಎರಡೂ 'ಕ್ಷೇತ್ರ'ದಲ್ಲಿ ಬೆಳೆಯತಕ್ಕವು) ಸಂಬಂಧಿಸಿದ್ದು ಅದು. ಹಿಂದಿನ ಬೆದಂಡೆ ಇರಬಹುದೇ? 'ರ್' ಒಂದು ಅಡ್ಡಿ, ನಿಜ. ಈ ಬಗ್ಗೆ ವಿಚಾರ ಮಾಡಲು ಸಾಕಷ್ಟು ಅವಕಾಶಗಳಿವೆ.

ಇಂದಿನ ಬೆದ್ರುಂಡೆ ಪದ್ಯಗಳು ಯಾವ ಛಂದಸ್ಸು -ತಿಳಿಯದು. ಸಿಕ್ಕಿರುವ ಒಂದೆರಡು ದ್ವಿಪದಿಗಳು ಅವು ತ್ರಿಪದಿಗಳ ಭಾಗವಾಗಿರಬಹುದು- ತಿಳಿಯದು. ಬೆದ್ರುಂಡೆ- ಬೆದಂಡೆ ಭಾಷಿಕಸಾಮ್ಯ ಎದ್ದು ಕಾಣುತ್ತದೆ. ವಸ್ತುಸಾಮ್ಯವೂ ಇದೆ. ಎರಡೂ ಜಾನಪದಗಳು; ಭಾಷೆ ಅಶ್ಲೀಲ (ಶೃಂಗಾರ)......

ಇತಿ, ಸ್ನೇಹದಿಂದ
ಚಿದಾನಂದಮೂರ್ತಿ

ಚಾರುಕೀರ್ತಿ ಭಟ್ಟಾರಕರ ಪತ್ರಗಳು

ಜಗದ್ಗುರು ಕರ್ಮಯೋಗಿ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ
ಶ್ರವಣಬೆಳಗೊಳ ಮಠ, ಕರ್ನಾಟಕ-೫೭೩೧೩೫
ದಿನಾಂಕ ೯.೯.೧೯೯೭

ಧರ್ಮಬಂಧು ಶ್ರೀ ಡಾ.ಟಿ.ವ್ಹಿ.ವೆಂಕಟಾಚಲ ಶಾಸ್ತ್ರಿಗಳವರಿಗೆ,

ಕನ್ನಡ ಭಾಷೆ, ವ್ಯಾಕರಣ, ಛಂದಸ್ಸು, ಗ್ರಂಥಸಂಪಾದನೆ, ನಿಘಂಟುರಚನೆ, ಸಾಹಿತ್ಯ ಚರಿತ್ರೆ ಹೀಗೆ ಹಲವಾರು ಕ್ಷೇತ್ರದಲ್ಲಿನ ನಿಮ್ಮ ಸಾಧನೆಯಿಂದ ಕನ್ನಡ ಸಾಹಿತ್ಯ ಶ್ರೀಮಂತ ಗೊಂಡಿದೆ.

ಕನ್ನಡ ಭಾಷಾಲೋಕದಲ್ಲಿ ನೀವು ನಡೆದದ್ದೆ ದಾರಿಯಾಗಿ, ಬರೆದದ್ದೆ ಸಾಹಿತ್ಯವಾಗಿ ಆ ಸಾಹಿತ್ಯದ ಸುಧೆಯನ್ನು ಕನ್ನಡ ಕುಲಕೋಟಿಗೆ ಧಾರೆಯೆರೆದಿದ್ದೀರಿ. ನಿಜಕ್ಕೂ ಕನ್ನಡ ಜನತೆ ಧನ್ಯ. ದಿನಾಂಕ ೩೦.೮.೯೭ರಂದು ಕನ್ನಡ ಸಾಹಿತ್ಯ ಸಭಾಂಗಣದಲ್ಲಿ ನಿಮ್ಮ ಅಭಿಮಾನಿ ಬಂಧು-ಮಿತ್ರರು ನಿಮ್ಮನ್ನು ಅಭಿನಂದಿಸಿದ್ದು, ನಾಡು ನುಡಿಯ ಬಗ್ಗೆ ನಿಮಗಿರುವ ಶ್ರದ್ಧೆ, ಶ್ರಮಕ್ಕೆ ಸಂದ ಗೌರವವೆಂದೇ ಹೇಳಬಹುದು. ಈ ಸಂದರ್ಭದಲ್ಲಿ "ಶ್ರೀಮುಖ" ಎಂಬ ಅಭಿನಂದನಾಗ್ರಂಥವನ್ನೂ ಬಿಡುಗಡೆ ಮಾಡಿದ್ದು ಗಾತ್ರದಲ್ಲಿಯೂ ಪಾತ್ರದಲ್ಲಿಯೂ ಹಿರಿದಾಗಿದ್ದು ನಿಮ್ಮ ವಿದ್ವತ್ಪೂರ್ಣ ಪ್ರಭಾವಿ ವ್ಯಕ್ತಿತ್ವವನ್ನು ಪ್ರತಿ ಬಿಂಬಿಸುವಂತಿದೆ. ತಮ್ಮ ವ್ಯಕ್ತಿತ್ವಕ್ಕೆ ತಕ್ಕಂತೆ "ಶ್ರೀಮುಖ" ಕೃತಿ ಮೂಡಿಬಂದಿದ್ದು, ಕೃತಿತ್ವಕ್ಕೆ ತಕ್ಕಂತೆ ತಮ್ಮ ವ್ಯಕ್ತಿತ್ವವನ್ನು ಶ್ರೀಮುಖದಲ್ಲಿ ಬಿಂಬಿಸಲಾಗಿದೆ.

ಠೀವಿಯಿಂದಲೇ ಸಾಹಿತ್ಯಲೋಕದಲ್ಲಿ ಸಂಚರಿಸಿದ ನಿಮ್ಮ ಹೆಜ್ಜೆಗುರುತುಗಳು ಕನ್ನಡ ಭಾಷಾಪ್ರೇಮಿಗಳಿಗೆ ಗುರಿಸೇರುವ ಮೈಲಿಗಲ್ಲಾಗುವುದರಲ್ಲಿ ಸಂಶಯವಿಲ್ಲ. ನಿಮ್ಮಿಂದ ಕನ್ನಡನಾಡು, ನುಡಿಗೆ ಇನ್ನೂ ಹೆಚ್ಚಿನ ಸೇವೆ ಸಲ್ಲಲಿ...

ಶುಭಾಶೀರ್ವಾದಗಳು.

ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ

❄

ದಿ ೨೯.೦೬.೨೦೦೦

ಧರ್ಮಬಂಧು ಡಾ.ಶ್ರೀ ಟಿ.ವಿ.ವೆಂಕಟಾಚಲ ಶಾಸ್ತ್ರೀಜಿ ಇವರಿಗೆ ಅನೇಕ ಶುಭಾ ಶೀರ್ವಾದಗಳು.

ನಿಮ್ಮ 'ಶಾಸ್ತ್ರೀಯ'ದ ನಾಲ್ಕು ಸಂಪುಟಗಳನ್ನು ಓದುವುದೇ ಒಂದು ಪರಮಪುಣ್ಯದ ಕೆಲಸ. ಓದಿ ಮುಗಿಸಿದ ಮೇಲೆ ದೊರೆಯುವ ಅನುಭವ ಅನನ್ಯವಾದುದು. ಕನ್ನಡ ಮತ್ತು ಸಂಸ್ಕೃತ ಭಾಷೆಗಳ ಮೇಲಿನ ನಿಮ್ಮ ಪಾಂಡಿತ್ಯ, ಅಗಾಧ ಜ್ಞಾನಸಂಪತ್ತು,

ಶ್ರಮ ಮತ್ತು ವೈವಿಧ್ಯಮಯವಾದ ವಿಷಯವಿಶೇಷಗಳು, ಅದನ್ನು ಅಭಿವ್ಯಕ್ತಿಸಿರುವ ಕ್ರಮ ಇವೆಲ್ಲವೂ ನಿಮ್ಮ ಪ್ರತಿಭೆಗೆ ಕನ್ನಡಿ ಹಿಡಿದಂತಿವೆ. 'ಶಾಸ್ತ್ರೀಯ' ಶೀರ್ಷಿಕೆ ಅರ್ಥಪೂರ್ಣವಾಗಿದ್ದು, ಶಾಸ್ತ್ರೀಯವಾದ ಅಭ್ಯಾಸದ ಶಿಸ್ತನ್ನು ಇದು ಬೇಡುತ್ತದೆ.

ಒಂದು ಸಂಸ್ಥೆ ಮಾಡಬೇಕಾದಂತಹ ಕೆಲಸವನ್ನು ನೀವೊಬ್ಬರೇ ಮಾಡಿರುವುದು ನಿಮ್ಮ ಅಸಾಧಾರಣ ಪ್ರತಿಭೆ, ತಾಳ್ಮೆ, ವಿಷಯದ ಬಗೆಗಿರುವ ಕಾಳಜಿಯನ್ನು ವ್ಯಕ್ತ ಪಡಿಸುತ್ತದೆ. ಅದಕ್ಕಾಗಿ ತಮಗೆ ಹಾರ್ದಿಕ ಅಭಿನಂದನೆಗಳು.

ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ
ಶ್ರೀಕ್ಷೇತ್ರ, ಶ್ರವಣಬೆಳಗೊಳ

❄

ಇನ್ನಷ್ಟು ಗಣ್ಯರ ಪತ್ರಗಳು

೨೨೩, ೧೨ನೆಯ ಮೆಯಿನ್
ಸರಸ್ವತೀಪುರಂ, ಮೈಸೂರು-೫
೧೭.೧೨.೬೭

ಮಿತ್ರರಾದ ಟಿ.ವಿ.ವೆಂಕಟಾಚಲ ಶಾಸ್ತ್ರಿಗಳವರಿಗೆ ವಂದನೆಗಳು.

.... ಶ್ರೀ ವರದರಾಜರಾಯರು ನನಗೆ ಸಿಕ್ಕಿಲ್ಲ(ನಿಮಗೆ ಗೊತ್ತಿರಬಹುದು, ಈಗವರು ಮಹಾರಾಜ ಕಾಲೇಜಿನಲ್ಲಿ ರೀಡರಾಗಿದ್ದಾರೆ). ನಾನು ಈ ದಿನವೇ ಬೀದರ್‌ಗೆ ಹೊರಡು ತ್ತಿದ್ದೇನೆ. ಕರ್ನಾಟಕ ವಿಶ್ವವಿದ್ಯಾನಿಲಯದವರು ಬಸವಣ್ಣನವರನ್ನು ಕುರಿತ ವಿಚಾರಗೋಷ್ಠಿಯನ್ನು ಅಲ್ಲಿ ಏರ್ಪಡಿಸಿದ್ದಾರೆ. ಅದರಲ್ಲಿ ಭಾಗವಹಿಸಲು ಹೋಗು ತ್ತಿದ್ದೇನೆ. ಅಲ್ಲಿಂದ ಬಸವಕಲ್ಯಾಣಕ್ಕೆ ಹೋಗುತ್ತೇನೆ. ಆದುದರಿಂದ ಇನ್ನೂ ೧೫ ದಿನ ಗಳಾಗುತ್ತವೆ ನಾನು ಬರುವುದು. ಶ್ರೀ ನಾಯಕರಿಗೆ ವಿಚಾರಿಸುವಂತೆ ಹೇಳಿದ್ದೇನೆ. ಅವರು ಹೇಳಿದ ಪ್ರಕಾರ ಅವರು ತಮ್ಮಲ್ಲಿದ್ದ ಎಲ್ಲ ಲೇಖನಗಳನ್ನೂ ಕೊಟ್ಟಿದ್ದಾರಂತೆ. ಆದು ದರಿಂದ ನಾನು ಬಂದನಂತರ ಕೇಳಿ ಬರೆಯುವುದರ ಬದಲು ಸಾಧ್ಯವಾದರೆ ಮತ್ತೊಮ್ಮೆ ಬರೆದು ಕಳುಹಿಸಿಬಿಡಿ. ಮುಂದಿನ ಸಂಚಿಕೆಗೆ ಹಾಕಲು ಅನುಕೂಲವಾಗುತ್ತದೆ.

ಇತರ ಲೇಖನಗಳಿದ್ದರೂ ಕಳಿಸಿ.

ಇಂತು, ತಮ್ಮವ
ಹೆಚ್.ತಿಪ್ಪೇರುದ್ರಸ್ವಾಮಿ

❄

ಚಿತ್ರದುರ್ಗ

೨೪.೩.೭೫

ಪ್ರಿಯ ಡಾ.ಶಾಸ್ತ್ರಿಯವರಲ್ಲಿ ಸಪ್ರೇಮ ವಂದನೆ.

ಈ ಸಲದ ಪರಿಷತ್ ಪತ್ರಿಕೆಯಲ್ಲಿ ನಿಮ್ಮ ಲೇಖನ "ಬೆಂಗಳೂರು ಜಿಲ್ಲೆಯ ಇತಿಹಾಸ ಸಾಹಿತ್ಯ" ನೋಡಿದೆ. ತುಂಬ ಚೆನ್ನಾಗಿದೆಯೆಂದು ಹೇಳಿದರೆ ಸಾಲದು. ಸಾಹಿತ್ಯ, ಇತಿಹಾಸಗಳಿಗೆ ಪ್ರತಿ ಜಿಲ್ಲೆಯ ಕೊಡುಗೆ ಏನೆಂಬ ವಿಚಾರದಲ್ಲಿ ನಿಮ್ಮ ಲೇಖನ ನಾಂದಿಯಾಗಿದೆಯೆನಿಸುತ್ತದೆ. ಪ್ರತಿ ಜಿಲ್ಲೆಯ ವಿಚಾರವಾಗಿಯೂ ಇಂಥ ಅಧ್ಯಯನ ನಡೆದು ಲೇಖನಗಳು ಬಂದರೆ ಸಾಹಿತ್ಯಚರಿತ್ರೆಗೆ ಅದೊಂದು ವಿಶಿಷ್ಟವಾದ ಕೊಡುಗೆ ಯಾದೀತು. ಯಾಕೆಂದರೆ ಇಡೀ ನಾಡಿನ ಸಾಹಿತ್ಯಚರಿತ್ರೆ ಬರೆಯುವಾಗ ಜಿಲ್ಲೆ ಸೀಮಿತ ಕ್ಷೇತ್ರವೆನಿಸಿ ಅಲ್ಲಿನ ಕವಿಗಳ ಬಗ್ಗೆ ಸಾಕಷ್ಟು ಗಮನ ಹರಿಯುವದಿಲ್ಲ. ಜಿಲ್ಲಾ ವ್ಯಾಪ್ತಿಯೇ ಕಣ್ಣೆದುರಿಗಿದ್ದಾಗ ಈ ದೋಷಕ್ಕೆ ಅವಕಾಶವಿರುವದಿಲ್ಲ. ಅಂತೂ ನೀವೊಂದು ಹೊಸದಾರಿ ತೆರೆದಿದ್ದೀರಿ. ಅಭಿನಂದನೆಗಳು.

ನಿಮ್ಮ,

ಜಯತೀರ್ಥರಾಜಪುರೋಹಿತ

❄

ಜಿ.ನಾರಾಯಣ (ಮಾಜಿಮೇಯರ್)

ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು

ದಿನಾಂಕ ೨೧.೩.೭೭

ಮಾನ್ಯರೆ,

ಕನ್ನಡ ಸಾಹಿತ್ಯ, ಸಂಸ್ಕೃತಿ ಮತ್ತು ಕಲೆ ಇವುಗಳ ಅಭಿವೃದ್ಧಿಗಾಗಿ ಕಳೆದ ೬೨ ವರ್ಷಗಳಿಂದ ದುಡಿದ ಕನ್ನಡ ಸಾಹಿತ್ಯ ಪರಿಷತ್ತಿನ ವಜ್ರಮಹೋತ್ಸವವು ಏಪ್ರಿಲ್ ೨೩ರಿಂದ ೨೮ರವರೆಗೆ ಬೆಂಗಳೂರು ನಗರದಲ್ಲಿ ನಡೆಯುವುದು. ಆ ಸಂದರ್ಭದಲ್ಲಿ ದಿನಾಂಕ ೨೪.೪.೭೭ರಂದು ಸಂಜೆ ಕನ್ನಡಸಾಹಿತ್ಯ ಮತ್ತು ಕಲೆಗೆ ಸಂಬಂಧಪಟ್ಟಂತೆ ವಿಶೇಷಸೇವೆ ಸಲ್ಲಿಸಿರುವ ಮಹನೀಯರನ್ನು ಸನ್ಮಾನಿಸಬೇಕೆಂದು ಪರಿಷತ್ತು ಯೋಜಿಸಿದೆ. ತಾವು ಕನ್ನಡ ಸಂಶೋಧನಕ್ಷೇತ್ರದಲ್ಲಿ ಹೆಚ್ಚು ಸೇವೆ ಸಲ್ಲಿಸಿ ನಮ್ಮ ನಾಡು ನುಡಿಗೆ ವಿಶೇಷಗೌರವ ತಂದುಕೊಟ್ಟಿದ್ದೀರಿ. ಆ ಕಾರಣ ಪರಿಷತ್ತಿನ ವಜ್ರ ಮಹೋತ್ಸವ ಸಂದರ್ಭದಲ್ಲಿ ತಮ್ಮನ್ನು ಗೌರವಿಸಬೇಕೆಂದು ತೀರ್ಮಾನಿಸಲಾಗಿದೆ.

ತಾವು ದಯವಿಟ್ಟು ಪರಿಷತ್ತಿನ ಪ್ರಾರ್ಥನೆಯನ್ನು ಮನ್ನಿಸಿ ಪರಿಷತ್ತಿನ ಗೌರವ ಸ್ವೀಕರಿಸಲು ಒಪ್ಪಿ ಮರುಟಪಾಲಿಗೆ ಉತ್ತರ ಬರೆಯಬೇಕಾಗಿ ವಿನಂತಿ ಮಾಡಿಕೊಳ್ಳು ತ್ತೇನೆ.

ವಂದನೆಗಳು,

ತಮ್ಮ ವಿಶ್ವಾಸಿ,
ಜಿ.ನಾರಾಯಣ

❄

೨೫.೯.೭೯

ಡಾ.ವೆಂಕಟಾಚಲ ಶಾಸ್ತ್ರೀ ಅವರಿಗೆ,

ತಮ್ಮ 'ಛಂದಃಸ್ವರೂಪ' ಮತ್ತು 'ಶಬ್ದಾರ್ಥವಿಹಾರ' ತಲಪಿದವು. ಇಂಥ ವ್ಯಾಸಂಗ ದಲ್ಲಿ ನಿರತರಾಗಿರುವವರಲ್ಲಿ ನಿಮ್ಮ ಶ್ರದ್ಧೆ, ಮನಸ್ಸಿನ ಚುರುಕು, ಕೂಲಂಕಷವಾಗಿ ಒಂದೊಂದು ವಿಷಯವನ್ನೂ ಪರಿಶೀಲಿಸಬೇಕೆಂಬ ಮನಸ್ಸು ನನಗೆ ಗೊತ್ತಾಗಿದೆ. ೬೦೦-೭೦೦ ಪುಟಗಳ ಛಂದಸ್ಸಿನ ಮೇಲಿನ ಗ್ರಂಥ ತುಂಬಾ ಸಾಕಲ್ಯದಿಂದ ಕೂಡಿದೆ.... ನನಗೆ ಶಾಸ್ತ್ರವಾದ ನಿಮ್ಮ ಗ್ರಂಥದಲ್ಲಿ ಒಂದು ಸ್ಥಾನ ಸಿಕ್ಕಿದ್ದು ಒಂದು ಹೊಸ ಹುದ್ದೆಯೇ ಎನ್ನಿಸುತ್ತದೆ. ಹೆಚ್ಚಾಗಿ ಗದ್ಯವನ್ನು ಕುರಿತಲ್ಲದೆ ಇತರ ಬಗೆಯಲ್ಲಿ ನಾನು ಯಾವು ದಾದರೂ ಸ್ಥಾನವನ್ನು ಕಲ್ಪಿಸಿಕೊಂಡಿದ್ದೇನೋ ಇಲ್ಲವೊ. ಆದರೆ ನೀವು ವಿಶ್ವಾಸದಿಂದ ಇಲ್ಲಿ ೨-೩ ಕಡೆ ನನ್ನ ಹೆಸರನ್ನೆತ್ತಿ ಟೀಕೆಗಳೊಡನೆಯೊ ಪ್ರತ್ಯೇಕವಾಗಿಯೊ ನಿಮ್ಮ, ಇತರರ ಮಾತು ನುಡಿದಿರುವುದು "ಐತರೇಯ"ಕ್ಕೆ ಒಂದು ಸ್ಥಾನ ಕೊಟ್ಟ ಹಾಗಾಗಿದೆ. ಅದು 'ಇತರ'ನಿಗೆ ಸಂಬಂಧಿಸಿದ ಉಪನಿಷತ್ತು, ಬ್ರಾಹ್ಮಣ. ಬ್ರಾಹ್ಮಣ- ಬ್ರಾಹ್ಮಣಗಳಲ್ಲಿ ಆ 'ಇತರ'ನಿಗೆ ಸ್ಥಾನ ಇರಲಿಲ್ಲ. ಹುಟ್ಟನ್ನು ನಮ್ಮ ಜನ ತಿಳಿಯರು.

ನಿಮ್ಮ ಗ್ರಂಥ ಚೆನ್ನಾಗಿದೆ. ಅಲ್ಲಿಷ್ಟು ಇಲ್ಲಿಷ್ಟು ಮಾತ್ರ ಓದಿದ್ದೇನೆ. ಪೂರ್ತಿ ಓದಿ ಗ್ರಹಿಸಲು ನನಗೆ ಈಗ ದೇಹಶಕ್ತಿ ಇಲ್ಲ. ನಿಧಾನವಾಗಿ ಓದುತ್ತೇನೆ... ನನಗೆ ವಯಸ್ಸಾಗಿ ರುವುದರಿಂದ ನನಗಿಂತ ತುಂಬ ಯುವಕರಾದ ನೀವು ಶತಾಯುಷಿಯಾಗಿ ಇಂಥ ಕಾರ್ಯ ಗಳನ್ನು ಮುಂದುವರಿಸಬೇಕೆಂದು ಆಶಿಸುತ್ತೇನೆ.

ಇಂತೀ
ವಿ.ಸೀತಾರಾಮಯ್ಯ

❄

'ಉದಯರವಿ'
ವಾ.ವಿ.ಪುರಂ, ಮೈಸೂರು ೨
೧.೮.೧೯೮೦

ಶ್ರೀ ವೆಂಕಟಾಚಲ ಶಾಸ್ತ್ರಿಗಳಿಗೆ, ನಮಸ್ಕಾರ.

ಅಗತ್ಯವಾಗಿ ಬನ್ನಿ, ನಿಮ್ಮ ಲೇಖನ ತನ್ನಿ. ಬೆಳಿಗ್ಗೆಯಾದರೆ ೯ ಗಂಟೆಗೆ ಅನುಕೂಲ. ಸಂಜೆಯಾದರೆ ೫ರ ಮೇಲೆ. ಬರುವ ಮುನ್ನ ಸಾಧ್ಯವಾದರೆ ಫೋನ್ ಮಾಡಿ ತಿಳಿಸಿರಿ. ನಮ್ಮ ಫೋನ್ ನಂಬರು ೨೫೭೦೭. ಕ್ಷೇಮ ತಾನೇ?

ನಿಮ್ಮ
ಕುವೆಂಪು

❄

ಹಂಪ ನಾಗರಾಜಯ್ಯ
ಅಧ್ಯಕ್ಷರು
ಕನ್ನಡ ಸಾಹಿತ್ಯ ಪರಿಷತ್ತು
ಬೆಂಗಳೂರು-೧೮
ದಿನಾಂಕ ೧೮.೧೧.೮೦

ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರೀ ಅವರಿಗೆ,

ಮಾನ್ಯರೆ,

ಈಗ ತೆರವಾಗಿರುವ ಕನ್ನಡ ಕನ್ನಡ ನಿಘಂಟಿನ ಪ್ರಧಾನಸಂಪಾದಕರ ಹುದ್ದೆಗೆ ನಿಮ್ಮ ಸೇವೆಯನ್ನು ಬಳಸಿಕೊಳ್ಳತಕ್ಕದ್ದೆಂದು ಸಂಪಾದಕ ಮಂಡಳಿಯ ಸದಸ್ಯರೆಲ್ಲಾ ಒಮ್ಮತದಿಂದ ಸೂಚಿಸಿದ್ದಾರೆಂದು ತಿಳಿಸಲು ನನಗೆ ಸಂತೋಷವಾಗುತ್ತಿದೆ. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನಸಂಸ್ಥೆಯಿಂದ ನಿಮ್ಮ ಸೇವೆಯನ್ನು ನಿಘಂಟಿನ ಕಾರ್ಯ ಪೂರೈಸುವವರೆಗೆ ಎರವಲಾಗಿ ಪಡೆಯತಕ್ಕದ್ದೆಂದು ಅಭಿಪ್ರಾಯಪಡಲಾಗಿದೆ. ಶ್ರೇಷ್ಠವಿದ್ವಾಂಸರೂ ಮತ್ತು ನಿಘಂಟುಕಾರ್ಯದ ವಿಧಾನವನ್ನು ಚೆನ್ನಾಗಿ ತಿಳಿದಿರುವವರೂ ಆದ ನೀವು ಪ್ರಧಾನಸಂಪಾದಕರಾಗಿ ಬರುವುದರಿಂದ ಈ ಕಾರ್ಯ ತೃಪ್ತಿಕರವಾಗಿ ವೇಗವಾಗಿ ಮುಂದುವರಿಯುತ್ತದೆ ಎಂಬ ಪೂರ್ಣವಿಶ್ವಾಸ ನನಗಿದೆ. ಈಗಾಗಲೇ ಒಪ್ಪಿಕೊಂಡಿರುವ ಕಾರ್ಯಗೌರವಗಳು ನಿಮಗೆ ಕೈತುಂಬಾ ಇವೆಯೆಂದು ನಾನೂ ಬಲ್ಲೆ. ಆದರೂ ಇದು ನಿಮಗೂ ನಾಡಿಗೂ ಪ್ರಿಯವಾದ ಮಹತ್ವದ ಕೆಲಸವೆಂದು ಅರಿತು ಈ ಪತ್ರ ಬರೆಯುತ್ತಿದ್ದೇನೆ.

ದಯವಿಟ್ಟು ನಿಮ್ಮ ಒಪ್ಪಿಗೆಯನ್ನು ಬೇಗ ತಿಳಿಸಬೇಕಾಗಿ ಕೋರುತ್ತೇನೆ.

ಇಂತು, ನಿಮ್ಮ ವಿಶ್ವಾಸಿ
-ಹಂಪನಾ

ಶಾರದಾಮಂದಿರ,
ರಾಮಯ್ಯರ್ ರಸ್ತೆ
ಮೈಸೂರು-೪
೨೨.೨.೮೧

ಪ್ರಿಯ ಮಿತ್ರರಾದ ಡಾ.ಶಾಸ್ತ್ರಿಗಳಲ್ಲಿ ನಮಸ್ಕಾರಪೂರ್ವಕ ವಿಜ್ಞಾಪನೆಗಳು.

ನಾನು ಈಗ ಕೋಟುಪೇಟ ಕಳೆದುಕೊಂಡವನು. ಈಗ ನನ್ನ ಬಳಿ ಯಾರೂ ಬರುತ್ತಿಲ್ಲ. ದೂಷಿಸುವವರೇ ಹೆಚ್ಚು. ಅಲ್ಲದೆ ಮೊದಲು ಪುಸ್ತಕ ಕೊಡುತ್ತಿದ್ದವರು ಈಗ ಹತ್ತಿರ ಕೂಡ ಸುಳಿಯುತ್ತಿಲ್ಲ. ಪುಸ್ತಕ ಕೊಡುವ ಪರಿಪಾಠ ಇಟ್ಟುಕೊಂಡಿರುವವರು ನೀವೊಬ್ಬರು; ಡಾ.ಬಿ.ಆರ್.ಗೋಪಾಲ್ ಒಬ್ಬರು.

ಮೊದಲು, ನಿನ್ನೆ ನೀವು ಮನೆಯವರೆಗೆ ಬಂದು ಪುಸ್ತಕ ಕೊಟ್ಟಿದ್ದಕ್ಕಾಗಿ ನಿಮಗೆ ಕೃತಜ್ಞನಾಗಿದ್ದೇನೆ. ಬರವಣಿಗೆ ಮುದ್ದಾಗಿದ್ದು, ವಿಷಯಗಳು ಪೂರ್ಣವಾಗಿ ಅಡಕವಾಗಿ ಬಂದಿವೆ. ಇದಕ್ಕಾಗಿ ನಮ್ಮ ಜನ ನಿಮ್ಮನ್ನು ಅಭಿನಂದಿಸಲೇಬೇಕು. ನಿನ್ನೆ ಅದನ್ನು ಎಷ್ಟು ಬಾರಿ ಓದಿದೆನೋ! ಈ ದಿನ ಅದನ್ನು ನನ್ನ ಮಕ್ಕಳು ಮೊಮ್ಮಕ್ಕಳು ಓದುವಂತೆ ಹೇಳಿದ್ದೇನೆ.

ನಾನು ಡಾ.ಅವರನ್ನು ನೋಡಿದ್ದೆ. ಅವರ ಉಪನ್ಯಾಸಗಳನ್ನು ಕೇಳಿದ್ದೆ. ಅವರ ಕೀರ್ತಿಯನ್ನು ಅರಿತಿದ್ದೆ. ಆದರೆ ಅವರ ವಿಷಯ, ಕೃತಿಗಳ ವಿಚಾರವಾಗಿ ಇಷ್ಟೊಂದು ಅಂಶಗಳು ನನಗೆ ತಿಳಿದುಬಂದಿರಲಿಲ್ಲ. ಇವೆಲ್ಲವನ್ನೂ ಸಂಗ್ರಹಿಸಿ ಕನ್ನಡಿಗರಿಗೆ ಉಪಕಾರ ಮಾಡಿದ್ದೀರಿ. ಇನ್ನು ಹಣದ ವಿಚಾರ. ಅದು ಅಲ್ಪವಿಷಯ, 'ಭಾಗ್ಯಾಯತ್ತಮತಃ ಪರಂ ನ ಖಲು ತದ್ ವಾಚ್ಯಂ.'

ಹೀಗೆಯೇ ನಿಮ್ಮ ಔದಾರ್ಯ ನನ್ನ ಮೇಲೆ ಯಾವಾಗಲೂ ಇರಲಿ. ಡಾ.ಗೋಪಾಲರವರನ್ನು ಒಮ್ಮೆ ನೋಡಬೇಕಿತ್ತು. ತಿಳಿಸಿ.

ವಿಶ್ವಾಸ ಅಭಿಮಾನ ಏಕರೀತಿ ಇರಲಿ.

ಇತಿ, ನಿಮ್ಮವ
ಎಚ್.ಎಂ.ಶಂಕರನಾರಾಯಣ ರಾವ್

❄

ಎಸ್.ಜಿ.ನರಸಿಂಹಯ್ಯ
ಸರಕಾರದ ನಿವೃತ್ತ ಸಹಾಯಕ ಕಾರ್ಯದರ್ಶಿ
ಬೆಂಗಳೂರು ೫೬೦೦೨೪
೨೩ ಅಕ್ಟೋಬರ್ ೧೯೮೪

ಸನ್ಮಾನ್ಯ ಹಿರಿಯರಲ್ಲಿ ನಮಸ್ಕಾರಗಳು.

ತಾವು ಪ್ರೀತಿಯಿಂದ ಕಳುಹಿಸಿಕೊಟ್ಟ 'ಶ್ರೀವತ್ಸ ನಿಘಂಟು' ಒಂದು ಸಲ ಓದಿ ತೆಗೆದಿಡಬಹುದಾದ ಪುಸ್ತಕವಲ್ಲ. ಕ್ರಮವಾದ ಅಧ್ಯಯನಾರ್ಹವಾದುದು. ಪ್ರೊ.ಶಂಕರ ನಾರಾಯಣರಾಯರು ಬರೆದಿರುವಂತೆ ಈ ನಿಘಂಟು ತಮ್ಮ ಪ್ರತಿಭಾಸಾಮರ್ಥ್ಯದ ದ್ಯೋತಕವಾಗಿದೆ.

ಗ್ರಂಥಶರೀರದ ಪ್ರಥಮಪರಿಚಯದಿಂದಲೇ ನನ್ನ ಕಿರಿತನದ ಅರಿವಾಯಿತು. ಉದಾ. (೧) ನನ್ನ ಪುಸ್ತಕದಲ್ಲಿ '೨' ಎಂಬ ಸಂಖ್ಯಾಸಂಬಂಧವಾದ 'ಅಗ್ನಿ' ಪ್ರಸ್ತಾವನೆಯು ಕೇವಲ ಒಂದು ಪಙ್ಕ್ತಿಯಲ್ಲಿ ಮುಗಿದಿರುವಲ್ಲಿ, ತಮ್ಮ ಗ್ರಂಥವು 'ಅ' ಉಪಶೀರ್ಷಿಕೆಗಳಿಂದ ಕೂಡಿ ಎರಡು ಪುಟಗಳಷ್ಟು ಬೋಧೆಯನ್ನಿತ್ತಿದೆ. (೨) 'ಶಿವತತ್ತ್ವರಹಸ್ಯ'ವು ಅಪ್ಸರೆಯರು ೭ ಮಂದಿ ಎನ್ನುತ್ತದೆ; ತಾವು ೭ ಮಂದಿ, ೧೨ ಮಂದಿ, ೧೬ ಮಂದಿ ಎಂಬ ಎರಡು ಪುಟಗಳಷ್ಟು ವಿವರಗಳನ್ನು ತಿಳುಹಿಸಿರುವಿರಿ. (೩) 'ಅವಸ್ಥಾತ್ರಯ' ವಿವರಣೆ ನನ್ನ ಪುಸ್ತಕದಲ್ಲಿ ೧೦-೧೨ ಪಙ್ಕ್ತಿಗಳಲ್ಲಿ ಮುಕ್ತಾಯವಾಗಿದೆ. ಅದರ ಮತ್ತು ಅದರಿಂದ ಉತ್ಪನ್ನವಾದ ಪದಗಳ ವರ್ಣನೆಗೆ ಈ ನಿಘಂಟು ೨ ೧/೩ ಪುಟಗಳನ್ನಿತ್ತಿದೆ. ಹೀಗೆಯೇ ದೇವತಾರ್ಚನೆಯ ಅಂಗಗಳು, ಕರ್ಮ ಕರ್ಮಾಂಗಗಳು, ಯೋಗ ರತ್ನ ರಾಗ ಲಕ್ಷಣ ಲೋಕಗಳು, ಸಂಸ್ಕಾರ ಸ್ವರ ಸಿದ್ಧಿ ಮೊದಲಾದ ವಿಷಯಗಳ ಪ್ರತಿಪಾದನೆ ಗಮನಾರ್ಹವಾಗಿದೆ. ಜ್ಯೋತಿಶ್ಶಾಸ್ತ್ರದಲ್ಲಿ ಸಂಖ್ಯಾಕ್ರಮವನ್ನು ತಿಳುಹಿಸುವ 'ಏಕಂ ದಶ ಶತಮಸ್ಮಾತ್ಸಹಸ್ರಮಯುತಂ ತತಃ ಪರಂ ಲಕ್ಷಂ...' ಇತ್ಯಾದಿಯಾಗಿರುವ ಶ್ಲೋಕವನ್ನು ಸ್ಖಾಲಿತ್ಯಗಳಿಲ್ಲದೆ ಬರೆದುಕೊಡಿರೆಂದು ಖ್ಯಾತ ಜೋಶ್ಯರೊಬ್ಬರಲ್ಲಿ ಪ್ರಾರ್ಥಿಸಿದ್ದೆ. ಈಗ ತಮ್ಮಿಂದ 'ಸಂಖ್ಯಾಸ್ಥಾನ'ವೆಂಬ ಭಾಗದಲ್ಲಿ ಈ ವಿವರಗಳು ಅಪ್ರಾರ್ಥಿತವಾಗಿ ಸಿಕ್ಕಿದಂತಾಗಿದೆ.

ಇಂತಹ ಕಾರಣಗಳಿಂದ ನನ್ನ ಪಾಲಿಗೆ ಒಂದಂಶವು ಸದ್ಯದಲ್ಲಿ ಸ್ಥಿರವಾಗಿದೆ. ನಿಘಂಟನ್ನು ಸಾವಧಾನವಾಗಿ ಅವಲೋಕಿಸಿದರೆ, ನನ್ನ ಪುಸ್ತಕಕ್ಕೆ ಹೇರಳವಾಗಿ ಪ್ರಯೋಜನವಾಗುವುದೇನೋ ನಿಜ; ಆದರೆ ಆ ಮಹಾಗ್ರಂಥದೊಡನೆ ನನ್ನ ಕಿರುಹೊತ್ತಿಗೆಯನ್ನು ಹೋಲಿಸಿದರೆ, ಇದನ್ನು ಎಷ್ಟೇ ಪರಿಷ್ಕರಿಸಿದರೂ, ಎಷ್ಟೇ ವಿಸ್ತರಿಸಿದರೂ, ನೋಡುವವರಿಗೆ 'ಅನಾಮಿಕ'ವಾಗಿಯೇ ಕಂಡುಬಂದೀತು.

ತಮ್ಮನ್ನು ಕಾಣಬೇಕೆಂಬ ಸಲಹೆಯನ್ನಿತ್ತ ಸನ್ಮಿತ್ರ ವಿ.ಟಿ.ದೊರೆಸ್ವಾಮಿಯವರಿಗೆ ನನ್ನ ವಂದನೆ ಸಲ್ಲಬೇಕಾಗಿದೆ. ತಮ್ಮ ಅಮೂಲ್ಯಗ್ರಂಥವನ್ನು ತಂದುಕೊಟ್ಟ

ಡಾ.ಎಂಕೆವಿಎಲ್‌ಎನ್ ಅವರ ಸಹಾಯವನ್ನು ಮರೆಯಲಾರೆ. ತಮ್ಮ ಅವ್ಯಾಜಪ್ರೇಮಕ್ಕಾಗಿ ನಾನು ಚಿರಋಣಿ.

ಇಂತು, ತಮ್ಮವ

ಎಸ್.ಜಿ.ನರಸಿಂಹಯ್ಯ

❄

೭.೮.೮೨

ಮಿತ್ರರಾದ ಡಾ.ಶಾಸ್ತ್ರೀ ಅವರಿಗೆ ವಂದನೆಗಳು.

"ಕನ್ನಡ ಚಿತ್ರಕಾವ್ಯ" ಕೈಸೇರಿದೆ. ನಿಮ್ಮ ಶ್ರಮಸಹಿಷ್ಣುತೆ, ಸಹನಶೀಲತೆಗೆ ಬೆರಗಾಗಿದ್ದೇನೆ. ವಿಷಯಸಂಗ್ರಹ, ವರ್ಗೀಕರಣ, ಪ್ರತಿಪಾದನೆಗಳಲ್ಲಿ 'ಶಾಸ್ತ್ರೀತ್ವ' ಎದ್ದು ಕಾಣುತ್ತದೆ. ಉಪೇಕ್ಷಿತವಾಗಿದ್ದ ಒಂದು ಸಾಹಿತ್ಯಪ್ರಕಾರವನ್ನು ಪ್ರಥಮಬಾರಿಗೆ ಎತ್ತಿತಂದ ತಮ್ಮ ಕೂರ್ಮಸಾಹಸಕ್ಕೆ ಧನ್ಯವಾದಗಳು. ಈ ಪುಸ್ತಕಕ್ಕೆ ಸರಿಯಾದ ಪ್ರಚಾರ, ಪುರಸ್ಕಾರ ಸಿಗಲೆಂದು ಹಾರೈಸುತ್ತೇನೆ.

ವಂದನೆಗಳು,

ವಿಶ್ವಾಸದ

ಎಂ.ಎಂ.ಕಲಬುರ್ಗಿ

❄

"ಜ್ಞಾನಗಂಗಾ"

ಗುಲಬರ್ಗಾ ವಿಶ್ವವಿದ್ಯಾಲಯ

ಗುಲಬರ್ಗಾ ೫೮೫೧೦೬

ಫೆಬ್ರವರಿ ೮, ೧೯೮೬

ಪ್ರಿಯ ಡಾ.ಶಾಸ್ತ್ರೀ,

... ದುರ್ದೈವದಿಂದ ನಾನು ಈಚೆಗೆ ಬೆಂಗಳೂರಿಗೆ ಹೋಗಲಾಗಲಿಲ್ಲ. ಪರಿಷತ್ತಿನ ಚುನಾವಣೆಯ ಗಲಾಟೆ ಗಡಿಬಿಡಿಗಳು ನಡೆದಿರುವುದು ನಿಮಗೆ ತಿಳಿದೇ ಇದೆ... ಹೇಗೂ ಇಷ್ಟುದಿನ ತಾಳಿದ್ದೀರಿ; ಇನ್ನೂ ಕೆಲದಿನ ತಡೆಯಿರಿ. ಸಂಬಂಧಿಸಿದವರೊಡನೆ ಮಾತಾಡಿ ಯಾರೇ ಅಧ್ಯಕ್ಷರು ಬರಲಿ ಪ್ರಕಟಣೆ ಕಾರ್ಯಗತವಾಗುವಂತೆ ಮಾಡೋಣ... ನನ್ನ ಅಭಿಪ್ರಾಯದಲ್ಲಿ ಈ ಪುಸ್ತಕವನ್ನೂ ಕ.ಅ.ಸಂಸ್ಥೆಯೇ ಪ್ರಕಟಿಸಬಹುದಾಗಿತ್ತು. ನಿಮ್ಮ ಒಂದು ಪುಸ್ತಕ ಅಚ್ಚಿನಲ್ಲಿದೆ ಎಂಬುದು ನಿಜವಾದರೂ ಇಂಥ ಪುಸ್ತಕಗಳು ಸಂಸ್ಥೆಯ ಪ್ರತಿಷ್ಠೆಯನ್ನು ಹೆಚ್ಚಿಸುತ್ತವೆ ಎಂಬುದರಲ್ಲಿ ನನ್ನ ಪೂರ್ಣನಂಬಿಕೆಯಿದೆ. ವ್ಯಕ್ತಿಗಳಿಗಿಂತಲೂ ಇದು ತುಂಬ ಮುಖ್ಯವಾದದ್ದು... ನನ್ನ ಕೆಲಸಗಳು ಎಂದಿನಂತೆ ನಡೆ

ಯುತ್ತಿವೆ. ಆದರೆ ನಾನು ಅಪೇಕ್ಷಿಸುವ ವೇಗ ಇಲ್ಲ; ಉತ್ಸಾಹಿಗಳೂ ಇಲ್ಲ. ಆದ್ದರಿಂದ ನಿರಾಶೆಗೆ ಪಕ್ಕಾಗಿದ್ದೇನೆ. ಇದನ್ನು ಬಿಟ್ಟು ಕೇವಲ ಓದಿಬರೆಯುವ ಕೆಲಸಕ್ಕೇ ಹಿಂದಿರುಗ ಬೇಕೆಂಬ ಭಾವನೆ ಬೆಳೆಯುತ್ತಿದೆ. ನನ್ನ ಬದುಕಿನ ಅಮೂಲ್ಯವೇಳೆಯನ್ನು ಇಲ್ಲಿ ಹಾಳು ಮಾಡುತ್ತಿದ್ದೇನೆ...

ನೀವು ಅನಾಥ ಲೇಖಕರಲ್ಲ; ಅಂಥ ಭಾವನೆ ನಿಮ್ಮಲ್ಲಿ ಸುಳಿಯಬಾರದು.

ಆದರಗಳೊಡನೆ,

ಹಾ.ಮಾ.ನಾ.

❄

ಬೆಂಗಳೂರು

೧೩.೨.೮೭

ಪ್ರಿಯ ಡಾ.ವೆಂಕಟಾಚಲ ಶಾಸ್ತ್ರಿಗಳೆ ನಮಸ್ಕಾರ.

ನಿಮ್ಮ ಲೇಖನ ಓದಿದೆ. ತುಂಬಾ ಚೆನ್ನಾಗಿ ಬಂದಿದೆ. ಅಡಕವಾಗಿ, ಆದರೆ ಖಚಿತವಾಗಿ ಹೇಳುವ ಕಲೆ ನಿಮಗೆ ಒಲಿದಿದೆ. ವಿದ್ವತ್ತು ಹೊರೆಯಾಗದೆ ಕಿರೀಟವಾದರೆ, ಬೇಡಿ ಯಾಗದೆ ಬಂಗಾರದ ಕಡಗವಾದರೆ ಇದು ಸಾಧ್ಯ. ನಿಮ್ಮ ಲೇಖನವನ್ನು ಕೆಡದಂತೆ ಅನುವಾದಮಾಡುವುದು ಸಮಸ್ಯೆ.

Illustrated manuscripts ಎನ್ನುವ ವಿಷಯವಾಗಿ ಸುಮಾರು ೫೦೦ ಪದಗಳ ಲೇಖನ ಬೇಕಾಗಿದೆ. ಇದು ಎರಡನೆಯ ಸಂಪುಟದಲ್ಲೇ ಸೇರುವ ಲೇಖನ ಆದದ್ದರಿಂದ ತುರ್ತಾಗಿಯೇ ಬೇಕಾಗಿದೆ. ನೀವೇ ಬರೆದರೆ ತುಂಬಾ ಸಂತೋಷ. ಅಥವಾ ಬರೆಯಬಲ್ಲ ವರಿಗೆ ನನ್ನ ಪರವಾಗಿ ಹೇಳಿ ನನಗೆ ತಿಳಿಸಿದರೆ, ನಾನೂ ಅವರಿಗೆ ಬರೆಯುತ್ತೇನೆ.....

ಕಡೆಯ ಮಾತನ್ನು ಸಂಕೋಚದಿಂದ ಬರೆಯುತ್ತಿದ್ದೇನೆ. ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿಗಳನ್ನು ಕುರಿತು ೨೫೦-೩೦೦ ಶಬ್ದಗಳ ಲೇಖನ ಬೇಕಾಗಿದೆ. ನಿಮ್ಮ ಕೃತಿಗಳನ್ನು ಶ್ರದ್ಧೆಯಿಂದ ಅಭ್ಯಾಸ ಮಾಡಿದವರು ಯಾರು ಎಂದು ನೀವು ತಿಳಿಸಿದರೆ ನಾನು ನೇರವಾಗಿ ಅವರಿಗೆ ಬರೆಯುತ್ತೇನೆ. ಈ ವಿಷಯದಲ್ಲಿ ನಿಮಗೆ ಸಂಕೋಚವಾಗುತ್ತದೆ ಎಂದು ಬಲ್ಲೆ. ಆದರೆ ಲೇಖನವನ್ನು ಸಮರ್ಥರಾದವರು ಬರೆಯಬೇಕು ಎಂಬ ಬಯಕೆಯಿಂದ ನಿಮಗೆ ತೊಂದರೆ ಕೊಟ್ಟಿದ್ದೇನೆ.

ನನ್ನ ವಿಷಯದಲ್ಲಿ ಎಂದೂ ಅಭಿಮಾನದಿಂದ ನಡೆದುಕೊಂಡಿದ್ದೀರಿ. ವಿಶ್ವಾಸ ಇದೇ ರೀತಿ ಇರಲಿ. ನಮಸ್ಕಾರ.

ವಿಶ್ವಾಸದ

ಎಲ್.ಎಸ್.ಶೇಷಗಿರಿ ರಾವ್

ಡಾ.ರಂ.ಶ್ರೀ ಮುಗಳಿ
ಶ್ರೀ ಕಮಲಾಲಯ
೬೫ ಬಿ, ೧ನೆಯ 'ಎನ್' ಬ್ಲಾಕ್
ರಾಜಾಜಿನಗರ, ಬೆಂಗಳೂರು ೧೦
ದಿನಾಂಕ ೧೮.೧.೮೮

ಡಾ.ವೆಂಕಟಾಚಲ ಶಾಸ್ತ್ರಿಗಳಿಗೆ ಸಪ್ರೇಮ ನಮಸ್ಕಾರಗಳು.

ನಿಮ್ಮ 'ಕನ್ನಡ ಚಿತ್ರಕಾವ್ಯ'ದ ಬಗ್ಗೆ ನನ್ನ ಸಂಕ್ಷಿಪ್ತ ಅಭಿಪ್ರಾಯವನ್ನು ಕಳಿಸುತ್ತಿದ್ದೇನೆ. 'ಗ್ರಂಥಲೋಕ'ದಲ್ಲಿ ಇದನ್ನು ಪ್ರಕಟಿಸಬಹುದು.

ನಿಮ್ಮ ಗ್ರಂಥದ ೧೯ನೆಯ ಪುಟದಲ್ಲಿ ಚಿತ್ರಭಾರತದ ಪ್ರಸ್ತಾಪ ಮಾಡಿ 'ಈ ಕೃತಿ ದೊರೆತ ಹಾಗೆ ತೋರುವುದಿಲ್ಲ' ಎಂದು ಉಲ್ಲೇಖಿಸಿದ್ದೀರಿ. ಆದರೆ ಇದು ದೊರೆತು ಎಷ್ಟೋ ವರ್ಷವಾಗಿದೆ. ಅದರ ಹಸ್ತಪ್ರತಿಯನ್ನು ಬೇಂದ್ರೆಯವರು ಪರಿಶೀಲಿಸಿ ಲಕ್ಷ್ಮೀಶನ ಕಾಲವಿಚಾರದಲ್ಲಿ ಅದರಲ್ಲಿರುವ ಆಧಾರಗಳನ್ನು ಗಮನಿಸಿದ್ದರು, ಒಂದು ಲೇಖನವನ್ನೂ ಬರೆದಿದ್ದರು. ನನ್ನ ಸಾಹಿತ್ಯಚರಿತ್ರೆಯಲ್ಲಿಯೂ ಅದರ ಉಲ್ಲೇಖವಿದೆ. ಅದು ಅಚ್ಚಾಗಿರುವ ವಿಷಯ ನನಗೆ ಖಚಿತವಾಗಿ ಗೊತ್ತಾಗಿಲ್ಲ. ಶ್ರೀ ಜಿ.ಬಿ.ಜೋಶಿ, ಮನೋಹರ ಗ್ರಂಥಮಾಲೆ, ಧಾರವಾಡ ಇವರಿಗೆ ಬರೆದು ವಿಚಾರಿಸಬಹುದು.

ಇನ್ನೊಂದು ವಿಷಯ, 'ಬೆಡಗಿನ ವಚನಗಳು'. ಈ ವಿಷಯವನ್ನು ಕುರಿತು ಶ್ರೀಮತಿ ಜಯಶ್ರೀ ದಂಡೆಯವರು ಮಹಾಪ್ರಬಂಧವನ್ನು ಬರೆದು ಇತ್ತೀಚೆಗೆ ಪಿಎಚ್.ಡಿ ಪದವಿಯನ್ನು ಪಡೆದಿದ್ದಾರೆ. ನಾನೊಬ್ಬ ಪರೀಕ್ಷಕನಾಗಿದ್ದೆ. ಈ ಗ್ರಂಥದಲ್ಲಿ ವಿಸ್ತಾರವಾದ ವಿವೇಚನೆಯಿದೆ, ಪಾರಿಭಾಷಿಕಪದಗಳ ಕೋಶವಿದೆ...

ನಿಮ್ಮ
ರಂ.ಶ್ರೀ.ಮುಗಳಿ

❄

ಚಂದ್ರಯ್ಯನಾಯ್ಡು ಎಂ.ಎ.
ಕನ್ನಡ ಉಪನ್ಯಾಸಕರು, ಸರ್ಕಾರಿ ಕಾಲೇಜು
ಚಿಕ್ಕಮಗಳೂರು
೨೫.೭.೮೮

ಪೂಜ್ಯ ವೆಂಕಟಾಚಲ ಶಾಸ್ತ್ರೀಜೀಯವರಿಗೆ ನಮಸ್ಕಾರಗಳು.

ಹಾ.ಮಾ.ನಾಯಕರು ಬರೆದ ದಿನಾಂಕ ೨೪.೭.೮೮ರ ಪ್ರಜಾವಾಣಿಯ 'ಸಂಪ್ರತಿ' ಓದಿದೆ. ಲೇಖನ ಅತ್ಯಂತ ಸುಂದರವಾಗಿ ಒಡಮೂಡಿದೆ. ಇದಕ್ಕೆ ನಿಮ್ಮ ವ್ಯಕ್ತಿತ್ವ ಶೋಭೆ ತಂದಿದೆ, ಮೆರಗು ನೀಡಿದೆ. ನಿಮ್ಮನ್ನು ಹೃದಯತುಂಬಿ ಅಭಿನಂದಿಸುತ್ತೇನೆ.

ನೀವು ಗಂಗೋತ್ರಿಗೆ ಒಂದು ತೂಕ ತರುವ ಪ್ರಾಧ್ಯಾಪಕರಲ್ಲಿ ಮೊದಲಿಗರು. ನಿಮ್ಮ ಹೆಜ್ಜೆಗಳು ಪ್ರತಿಯೊಬ್ಬರಿಗೂ ದಾರಿದೀಪ. ನಿಮ್ಮಿಂದ ಕನ್ನಡ ಅಧ್ಯಯನಸಂಸ್ಥೆಗೆ ಕೀರ್ತಿ ಬಂದಿದೆ, ಬೆಲೆ ಹೆಚ್ಚಿದೆ. ನಿಮ್ಮಂತಹ ಸರಳ ನಿಷ್ಪಕ್ಷಪಾತ ಘನವಿದ್ವಾಂಸರು ಇಂದಿನ ದಿನಗಳಲ್ಲಿ ವಿರಳ.

'ಗ್ರಂಥಲೋಕ' ಪ್ರಶಸ್ತಿ ಬಂದಿರುವುದು, 'ಸಂಪ್ರತಿ' ಪ್ರಕಟವಾಗಿರುವುದು, ಸದಾ ನಿಮ್ಮ ನೆನಪು, ಆದರ್ಶಗಳು ನನಗೆ ಹೆಮ್ಮೆ ಎನಿಸುತ್ತವೆ. ನಾನು 'ನಿಮ್ಮ ವಿದ್ಯಾರ್ಥಿ' ಎಂದು ಹೇಳಿಕೊಳ್ಳಲು ಅಭಿಮಾನವಾಗುತ್ತದೆ.

ನಾಯಕರು ಬರೆಯುವಂತೆ "ಕನ್ನಡದಲ್ಲಿ ಇಂದು ಅವರಿಗೆ ಸರಿದೊರೆಯಾದ ಇನ್ನೊಬ್ಬ ವಿದ್ವಾಂಸರನ್ನು ಹುಡುಕುವುದು ಸುಲಭವಲ್ಲ". ಈ ಮಾತು ನೂರಕ್ಕೆ ನೂರು ಸತ್ಯ. ವಸ್ತುನಿಷ್ಠ, ಮೌಲ್ಯಯುತವಾದ ಮಾತು. 'ಪಾಂಡಿತ್ಯವೀರ' ಎಂಬ ಶೀರ್ಷಿಕೆ ನಿಮಗೆ ತೊಡಿಸಿದ ಬಂಗಾರದ ಕಿರೀಟ. ನಿಮಗೆ ಹೃತ್ಪೂರ್ವಕವಾದ ಅಭಿನಂದನೆಗಳು.

ನಮಸ್ಕಾರಗಳೊಂದಿಗೆ,

ಇಂತು, ತಮ್ಮ ಅಭಿಮಾನಿ
ಚಂದ್ರಯ್ಯ ನಾಯ್ಡು

❄

ವಿದ್ವಾನ್ ಬ.ನ.ಗುಂಡೂರಾವ್
'ಸಾಹಿತ್ಯರತ್ನ'
ಚಿಕ್ಕಬಳ್ಳಾಪುರ
೧೬.೫.೮೮

ಪ್ರಿಯಮಿತ್ರ ಶ್ರೀ ಶಾಸ್ತ್ರಿಯವರಲ್ಲಿ ವಿನಂತಿ.

ನೀವು ಕನ್ನಡ ಸಾಹಿತ್ಯಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸುವ ವಿದ್ವನ್ಮಣಿಗಳಾಗಿ ಖ್ಯಾತಿಹೊಂದುತ್ತೀರೆಂದು ಬಹುಕಾಲದ ಹಿಂದೆಯೇ ಊಹೆ ಮಾಡಿದ್ದೆ ನಾನು. ಪ್ರತಿಭೆ ಗುಪ್ತವಾಗಿದ್ದು, ವಿಕಸಿತವಾಗಲು ಸೂಕ್ತ ಕಾಲ, ಸೂಕ್ತ ಸನ್ನಿವೇಶ ದೊರೆಯಬೇಕು. ವ್ಯಕ್ತಿಯ ವೃತ್ತಿ ಬೇರೆ, ಮನಃಪ್ರವೃತ್ತಿ ಬೇರೆ. ಮನಃಪ್ರವೃತ್ತಿಯೆಂಬುದು ಬಹುಶಃ ಅವನ ಆನ್ತರಿಕ ವಿಕಾಸ ಹಾಗೂ ಸಂಸ್ಕಾರಕ್ಕೆ ಸಂಬಂಧಪಟ್ಟಿರುತ್ತದೆ.

ನಿಮ್ಮಿಂದ ರಚಿತವಾದ 'ಕನ್ನಡ ಚಿತ್ರಕಾವ್ಯ' ನಾನು ನೋಡಿಲ್ಲ. ಅದರ ಬಗ್ಗೆ ಸ್ಥೂಲಪರಿಚಯ 'ಕನ್ನಡ ಪ್ರಭ'ದ ಶ್ರೀ ಎಂ.ಜಿ.ವೆಂಕಟೇಶರ ಲೇಖನದಲ್ಲಿ ಪಡೆದೆ.

ವಿಚಾರ ಎಲ್ಲೆಲ್ಲಿಗೋ ಹೋಗುತ್ತದೆ. ನನ್ನ ಬರವಣಿಗೆಯೇ ಹಾಗೆ. ಇದು ನಿಮಗೆ ಗೊತ್ತುಂಟು... ನಿಮ್ಮನ್ನು ಭೇಟಿ ಮಾಡಲೇಬೇಕೆನ್ನಿಸುತ್ತಿದೆ ಶಾಸ್ತ್ರಿಗಳೆ.

ಅವಕಾಶವಾದರೆ ಪತ್ರ ಬರೆಯಿರಿ.

ಇಂತು, ತಮ್ಮ ವಿಶ್ವಾಸಿ

ಬ.ನ.ಗುಂಡೂರಾವ್

❄

ನಿಟ್ಟೂರು

೨೩.೬.೧೯೮೯

ಪೂಜ್ಯಗುರುಗಳಿಂದ ಚಿ.ಶಾಂತಾರಾಮನು ಬೇಡುವ ಆಶೀರ್ವಾದಗಳು. ಕುಶಲ.

.... ತಾವು ಪ್ರೀತಿಪೂರ್ವಕವಾಗಿ ಕಳುಹಿಸಿಕೊಟ್ಟ "ಛಂದೋವಿಹಾರ"ದ ಪ್ರತಿ ತಲುಪಿತು... ತಾವು ಈ ಕೃತಿಯನ್ನು ರಚಿಸಲು ಮಾಡಿದ ಚಿಂತನೆ ಕಲ್ಪನೆಗಳು ಒಂದು ಘನತರವಾದ ತಪಸ್ಸೇ ಸರಿ. ಛಂದಶ್ಶಾಸ್ತ್ರದ ಪಾರಿಭಾಷಿಕ ಶಬ್ದಗಳನ್ನು ಇಷ್ಟೊಂದು ಕಾವ್ಯಾತ್ಮಕವಾಗಿ ನಮ್ಮ ಪೂರ್ವಸೂರಿಗಳು ಬಳಸಿದ್ದಾರೆಂಬ ವಿಚಾರ ನನಗೆ ಹೊಸತು. ನಮ್ಮ ಪೂರ್ವಜರುಗಳು ತಮ್ಮ ಪ್ರಗಲ್ಭಪಾಂಡಿತ್ಯವನ್ನು ಹೀಗೆ ಮೆರೆದಿರುವರೆಂಬ ಅಧ್ಯಯನ ಒಂದು ಚೇತೋಹಾರಿ ಅನುಭವ. ಅಂತಹ ರಸಸ್ಯಂದಿಗಳಾದ ಭಾಗಗಳಲ್ಲಿ ತಾವು ವಿಹಾರಮಾಡಿ, ಅವುಗಳನ್ನು ಒಂದೆಡೆ ಜೋಡಿಸಿ, ತಾವು ಅನುಭವಿಸಿದ ರಸಾನಂದವನ್ನು ನಾವೂ ಅನುಭವಿಸಿ ಆನಂದಿಸಲು ಅವಕಾಶಮಾಡಿಕೊಟ್ಟ ತಮ್ಮ ಈ ಅನುಪಮಸಾಧನೆ ಅತ್ಯಂತ ಪ್ರಶಂಸಾರ್ಹವಾದುದು. ಹಾಗೂ ಕನ್ನಡ ಸಾರಸ್ವತಲೋಕದಲ್ಲಿ ತಾವು ಅಭಿನಂದನೀಯರೂ ಅಭಿವಂದನೀಯರೂ ಆಗಿರುವಿರಿ.

ಈಗ ಒಂದೆರಡು ದಿನಗಳಿಂದ ಮಳೆ ಆರಂಭವಾಗಿದೆ. 'ಮೊದಲ ಮಳೆಯಲಿ ಮಿಂದ ಮಲೆಗಳ ಹಸಿರು' ಕಣ್ಮನಗಳಿಗೆ ದಣಿಯದ ಆನಂದವನ್ನಿತ್ತಿದೆ. ಗಾಳಿ ಮಳೆ ಚಳಿಗಳ ತ್ರಿವೇಣೀಸಂಗಮದಲ್ಲಿ ನಾವು ಮುಳುಗಿಹೋಗಿದ್ದೇವೆ...

ಇಂತೀ, ಬೇಡುವ ಆಶೀರ್ವಾದಗಳು

ಶಾಂತಾರಾಮ ಪ್ರಭು

❄

ಬೆಂಗಳೂರು ೫೬೦೦೭೮
ಜೂನ್ ೯, ೧೯೯೦

ಮಾನ್ಯ ಡಾ.ವೆಂಕಟಾಚಲ ಶಾಸ್ತ್ರೀ ಅವರಲ್ಲಿ ವಿಜ್ಞಾಪನೆಗಳು.

ತಾವು ವಿಶ್ವಾಸದಿಂದ ಕಳುಹಿಸಿಕೊಟ್ಟ 'ಮೆಲುಗಾಳಿಯ ಮಾತುಗಳು' ಪ್ರತಿ ಕೈ ತಲುಪಿದೆ... ಅತ್ಯಂತ ಮಿತವಾದ ಕಾಲಾವಕಾಶದಲ್ಲಿ ಒಂದು ಸಂಗತಿ, ಒಂದು ವಿಷಯದ ಪ್ರತಿಪಾದನೆಯನ್ನು ಓದುಗರ ಅಥವಾ ಕೇಳುಗರ ಮನಸ್ಸಿಗೆ ತಟ್ಟುವ ಹಾಗೆ ಮಾಡುವುದು ಕಷ್ಟಸಾಧ್ಯವೇ ಸರಿ. ಅದೂ ಆಕಾಶವಾಣಿಯಂತಹ ನಿಯಂತ್ರಿತಮಾಧ್ಯಮದ ಮೂಲಕ. ಈ ನೇರದಲ್ಲಿ ತಾವು ಮಾಡಿರುವ ಸಾಧನೆ ಅಪೂರ್ವವಾದದ್ದೇ ಸರಿ.

ಒಂದು ಪಾಂಡಿತ್ಯಪೂರ್ಣವೂ ಸುಸಂಸ್ಕೃತವೂ ಆದ ಬುದ್ಧಿಯು ಯಾವುದೇ ವಿಷಯದ ಬಗ್ಗೆ ದಿಢೀರ್ ಚಿಂತನೆಯನ್ನು -ಅದೂ ಪದ ಹಾಗೂ ಕಾಲಮಿತಿಯಲ್ಲಿ- ಮಾಡಬೇಕಾದಾಗ ಆಯ್ದುಕೊಳ್ಳುವ ಶಬ್ದಗಳು, ವಿಷಯಮಂಡನೆ ಇವುಗಳು ಹೇಗೆ ಆಕರ್ಷಕವಾಗಿರಲು ಸಾಧ್ಯ ಎಂಬುದಕ್ಕೆ ತಮ್ಮ ಪ್ರಸಕ್ತ ಸಂಕಲನದ ಅನೇಕ ಪ್ರಬಂಧಗಳು ಮಾದರಿಯಾಗುತ್ತವೆ...

ಆದರೆ, ಚಿಕ್ಕ ಭಾಷಣಗಳ ಶೈಲಿಯಲ್ಲಿರುವ ಇಲ್ಲಿನ ಪ್ರಸಾರಿತ ಪ್ರಬಂಧಗಳು ಒಂದು ದೊಡ್ಡ ಕೊರತೆಯನ್ನೂ ಒಳಗೊಂಡಿವೆ. ಮೊಟ್ಟಮೊದಲನೆಯದಾಗಿ, ಚಿಕ್ಕದಾದದ್ದು ಚೊಕ್ಕವಾಗಿದ್ದರೂ ಇದು ಯಾವಾಗಲೂ ಅಪೇಕ್ಷಣೀಯವಲ್ಲ ಎಂಬುದು ಇಲ್ಲಿನ ಕೆಲವಾರು ಪ್ರಬಂಧಗಳನ್ನು ಓದಿದಾಗ ಮನವರಿಕೆಯಾಗುತ್ತವೆ. ಯಾಕೆಂದರೆ ಓದುತ್ತ ಓದುತ್ತ ಓದುಗ ತನ್ಮಯತೆಯ ಘಟ್ಟ ಮುಟ್ಟುತ್ತಿರುವಂತೆ ದಿಢೀರನೆ ಪ್ರಬಂಧವೇ ಮುಗಿದುಹೋಗಿರುತ್ತದೆ. ತಾವು ಏನನ್ನು ಹೇಳದೆ ಬಿಟ್ಟಿದ್ದೀರಿ ಎಂಬ ಬಗ್ಗೆ ಓದುಗನ ಕುತೂಹಲ ಹಾಗೇ ಉಳಿದುಬಿಡುತ್ತದೆ.

ತಮ್ಮ ಪಾಂಡಿತ್ಯವನ್ನು ದೂರದಿಂದಲೇ ಬಲ್ಲ ನಾನು ಈ ಮಾತುಗಳನ್ನು ಒಬ್ಬ ಅಭಿಮಾನಿಯಾಗಿಯೇ ಬರೆಯುತ್ತಿದ್ದೇನೆ. ತಾವು ಇಲ್ಲಿ ಸಂಕಲಿಸಲಾಗಿರುವ ಪ್ರತಿಯೊಂದು ಲೇಖನದಲ್ಲೂ ಎತ್ತಿಕೊಂಡಿರುವ ವಿಷಯದ ಬಗ್ಗೆ ಇನ್ನೂ ಹೆಚ್ಚಿನದನ್ನು ಹೇಳಲು ತಮಗೆ ಸಾಧ್ಯವಿದೆ ಎಂದೇ ನನ್ನ ನಂಬಿಕೆ... ಆದಕಾರಣ ಇವುಗಳಲ್ಲಿ ಕೆಲವನ್ನಾದರೂ ಆರಿಸಿಕೊಂಡು ಅಲ್ಲಿ ಪ್ರಸ್ತಾಪಿಸಲಾದ ವಿಷಯದ ಬಗ್ಗೆ ತಮ್ಮ ಪಾಂಡಿತ್ಯ ಶೈಲಿಗಳ ವೈಶಾಲ್ಯಕ್ಕೆ ತಕ್ಕಹಾಗೆ ದೊಡ್ಡ ಲಲಿತಪ್ರಬಂಧವನ್ನೇ ಬರೆಯಲು ತಾವು ಮನಸ್ಸು ಮಾಡಬಹುದೆ?

ವಂದನೆಗಳು.

ತಮ್ಮವ
ಜಯಸುದರ್ಶನ

❄

ಧಾರವಾಡ

೧೩.೯.೯೧

ಆತ್ಮೀಯರಾದ ಡಾ.ವೆಂಕಟಾಚಲ ಶಾಸ್ತ್ರೀ ಅವರಿಗೆ ವಂದನೆಗಳು.

"ಅಭಿನಂದನೆಗಳು" ಪದದಿಂದಲೇ ಈ ಪತ್ರವನ್ನು ಪ್ರಾರಂಭಿಸುತ್ತೇನೆ. ನೀವು ನಿರ್ದೇಶಕರಾದ ವಿಷಯ ನನಗೆ ಸಂತೋಷವನ್ನುಂಟುಮಾಡಿತೆಂದು ಬೇರೆ ಹೇಳಬೇಕೆ? ನಿಮಗೆ ಸಕಲ ಯಶಸ್ಸುಗಳಿರಲಿ.

ಪೂಜ್ಯ ಶ್ರೀ ವೆಂಕಣ್ಣಯ್ಯ - ಕುಂದಣಗಾರರ ಅವಧಿಯಲ್ಲಿ ಕನ್ನಡ ಚಟುವಟಿಕೆ ''ವಿಭಾಗ"ವಾಗಿ ರೂಪಗೊಂಡಿತು. ಇದರ ಪುಣ್ಯತೀರುತ್ತಲೇ ಡಾ.ದೇಜಗೌ-ಡಾ.ಹಿರೇಮಠರ ಕಾಲದಲ್ಲಿ "ಸಂಸ್ಥೆ"ಯಾಗಿ ರೂಪಗೊಂಡಿತು. ಈಗ ಇದರ ಪುಣ್ಯವೂ ತೀರಿದೆ. ಯಾವುದೇ ಪ್ರಯೋಗಕ್ಕೆ ಒಂದಿಷ್ಟು ಅವಧಿಯಿರುತ್ತದೆ. ಅದು ತೀರುತ್ತಲೇ ಹೊಸಪ್ರಯೋಗ ಮಾಡಬೇಕಾಗುತ್ತದೆ. ಈಗ "ಅಧ್ಯಯನಸಂಸ್ಥೆ"ಗಳನ್ನು ಹೊಸ ಪ್ರಯೋಗಕ್ಕೆ ಒಡ್ಡಬೇಕಾಗಿದೆ. ನಮ್ಮ ಹಿರಿಯರು ಮಾಡಿದ ಧೈರ್ಯ, ತೋರಿದ ಉತ್ಸಾಹ ನಾವು ತೋರಬೇಕಿದೆ. ಅಂಥ ಯಾವುದೇ ಪುನರ್‌ರಚನಾಪ್ರಯೋಗ ಮಾಡುವ ವಿಷಯ ದಲ್ಲಿ ನಿಮಗೆ ನನ್ನ ಸಹಕಾರವಿದೆ. ಇದು ಆಗಲೇ ಬೇಕು. ನೀವಂತೂ ವೆಂಕಣ್ಣಯ್ಯ, ಕೃಷ್ಣಶಾಸ್ತ್ರೀ, ಕುವೆಂಪು, ತೀನಂಶ್ರೀ ಅವರ ಉತ್ತರಾಧಿಕಾರಿಗಳಾಗಿ ಬಂದಿರುವಿರಿ. ನಾನು ಮೇಲೆ ಸೂಚಿಸಿದ ವಿಷಯವಾಗಿ ಆಲೋಚಿಸಿರಿ.

ನಿಮಗೆ ಇನ್ನೊಮ್ಮೆ ಸಕಲಯಶಸ್ಸನ್ನೂ ಕೋರುತ್ತೇನೆ.

ಎಂ.ಎಂ.ಕಲಬುರ್ಗಿ

❄

ಬೆಂಗಳೂರು

೧೯.೯.೯೧

ಹಿರಿಯರಾದ ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರೀ ಅವರಲ್ಲಿ... ವಿಜ್ಞಾಪನೆಗಳು

ಇಂದಿನ ಪತ್ರಿಕೆಯಲ್ಲಿ ಅಧಿಕೃತಸುದ್ದಿ ನೋಡಿದೆ. ನಿಜಕ್ಕೂ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನಸಂಸ್ಥೆ ಧನ್ಯ ಎನಿಸಿತು. ಹಾಲು-ಜೇನು ಸೇವಿಸಿದಷ್ಟು ಸಂತಸವಾಯಿತು. ವಿದ್ವನ್ಮಣಿಗಳ ಸಾಲಿನಲ್ಲಿ ತಾವು ಅದ್ವಿತೀಯರೆಂಬುದು ನನ್ನ ಭಾವನೆ. ನಿಮ್ಮ ಮಾತು, ಬರವಣಿಗೆ ಎಲ್ಲ ಬಲು ಸೊಗಸಿನಿಂದ ಕೂಡಿರುತ್ತದೆ... ಅಭಿನಂದನೆಗಳು.

ಎಂ.ಆರ್.ಸತ್ಯನಾರಾಯಣ

ಕಾರ್ಯಕ್ರಮನಿರ್ವಾಹಕರು, ಆಕಾಶವಾಣಿ

❄

ಸಿದ್ದಾಪುರ (ಉ.ಕ)

೨೧.೯.೯೧

ಮಾನ್ಯ ಡಾ.ವೆಂಕಟಾಚಲ ಶಾಸ್ತ್ರೀ ಅವರಿಗೆ ವಂದನೆಗಳು.

ಮಹೋದಯ,

ತಾವು ಕನ್ನಡ ಅಧ್ಯಯನಸಂಸ್ಥೆಯ ಮುಖ್ಯಸ್ಥರಾಗಿ ನೇಮಕಗೊಂಡ ಸಂಗತಿಯನ್ನು ಪತ್ರಿಕೆಯಲ್ಲಿ ಓದಿದೆ. ತುಂಬ ಸಂತೋಷವಾಯಿತು. ಕನ್ನಡ ಕುರಿತ ಕಾಳಜಿ ಕಳಕಳಿಯಷ್ಟೇ ಅಲ್ಲದೆ, ಕನ್ನಡಭಾಷೆ ಹಾಗೂ ಸಾಹಿತ್ಯದಲ್ಲಿ ತಲಸ್ಪರ್ಶಿಯಾದ ಪಾಂಡಿತ್ಯವನ್ನು ಪಡೆದಿರುವ ತಾವು ಅಧ್ಯಯನಪೀಠದ ಮುಖ್ಯಸ್ಥರಾಗಿ ಅದರ ಘನತೆಯನ್ನು ಮತ್ತಷ್ಟು ಎತ್ತರಕ್ಕೆ ಏರಿಸುವುದರಲ್ಲಿ ಯಾವ ಸಂಶಯವಿಲ್ಲ. ತಮ್ಮ ವಿದ್ವತ್ತನ್ನು, ಅದಕ್ಕೆ ಭೂಷಣಪ್ರಾಯವಾದ ವಿನಯ ಸಜ್ಜನಿಕೆಗಳನ್ನು ಕಂಡು ತಮ್ಮ ಬಗ್ಗೆ ಆದರ ಭಾವನೆ ತಾಳಿದವನು ನಾನು.

ತಮಗೆ ಅಭಿನಂದನೆಗಳು. ತಮ್ಮಿಂದ ಕನ್ನಡದ ಕೆಲಸಕ್ಕೆ ಮತ್ತಷ್ಟು ಬಲ ಬರುತ್ತದೆಂಬ ನಂಬುಗೆಯೊಂದಿಗೆ ತಮ್ಮ ಚಟುವಟಿಕೆಗಳಿಗೆ ಶುಭಹಾರೈಸುತ್ತೇನೆ.

ಆರ್.ಪಿ.ಹೆಗಡೆ

❄

ಮುಖ್ಯಸ್ಥರು

ಕನ್ನಡ ಅಧ್ಯಯನಸಂಸ್ಥೆ

ಗುಲಬರ್ಗಾ ವಿಶ್ವವಿದ್ಯಾಲಯ

ಗುಲಬರ್ಗಾ

೨೩.೯.೯೧

ಆತ್ಮೀಯರೆ,

ತಾವು ನಿರ್ದೇಶಕರಾಗಿ ಅಧಿಕಾರ ವಹಿಕೊಂಡುದನ್ನು ತಿಳಿದು ಆನಂದ, ಅಭಿಮಾನ. ಸಮರ್ಥರ ಸೇವೆ ಸಂದಾಗಲೇ ಸಂಸ್ಥೆಗಳಿಗೆ ಸಾರ್ಥಕತೆ ಪ್ರಾಪ್ತವಾಗುವುದು. ಅಂತೂ ಸೇವಾಂತ್ಯದಲ್ಲೊಂದು ಸ್ಥಾನಗೌರವ ಅಷ್ಟೇ. ತಮ್ಮ ವಿದ್ವತ್ತು, ಪಾಂಡಿತ್ಯಕ್ಕೆ ಈ ಹೊಣೆಗಾರಿಕೆ ಅಡ್ಡಿಬರದಿರಲೆಂಬುದೇ ನನ್ನ ಹಾರೈಕೆ. ಸಮರ್ಥರು ಎಲ್ಲ ಸ್ಥಾನಗಳಲ್ಲೂ ಸಮರ್ಥರೇ ಎಂಬುದನ್ನು ನಂಬಿದ ನನಗೆ ಹೆಚ್ಚಿನ ಹಾರೈಕೆಯ ಅಭಿಲಾಷೆ ಇಲ್ಲ.

ನನ್ನ ಅನಂತ ಸಹಕಾರ ಎಂದೂ ನಿಮ್ಮ ಜೊತೆಗಿದೆ.

ಮ.ಗು.ಬಿರಾದಾರ

❄

ಡಾ.ಬಿ.ಎ.ವಿವೇಕ ರೈ
ಅಧ್ಯಕ್ಷರು, ಕನ್ನಡ ವಿಭಾಗ
ಮಂಗಳೂರು ವಿಶ್ವವಿದ್ಯಾಲಯ
ಮಂಗಳಗಂಗೋತ್ರಿ (ದ.ಕ)
೨೪.೯.೯೧

ಪ್ರಿಯ ಪ್ರೊ.ಶಾಸ್ತ್ರೀ ಅವರೆ,

ನೀವು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನಸಂಸ್ಥೆಯ ನಿರ್ದೇಶಕರಾಗಿ ಕಾರ್ಯಭಾರವನ್ನು ವಹಿಸಿಕೊಂಡ ವಿಷಯ ತಿಳಿದು ಬಹಳ ಸಂತೋಷವಾಯಿತು. ನಿಮಗೆ ಹಾರ್ದಿಕ ಅಭಿನಂದನೆಗಳು. ನಮ್ಮ ನಾಡಿನ ಹಿರಿಯ ಹಾಗೂ ಉನ್ನತ ಸಂಸ್ಥೆಯ ಕರ್ಣಧಾರತ್ವವನ್ನು ನಿಮ್ಮಂತಹ ಹಿರಿಯ ಹಾಗೂ ಉನ್ನತ ವಿದ್ವಾಂಸರು ವಹಿಸಿಕೊಂಡಿರುವುದು ನಮಗೆ ಅಭಿಮಾನದ ಸಂಗತಿ. ನಿಮ್ಮ ಯೋಚನೆ ಯೋಜನೆಗಳಿಗೆ ಯಶಸ್ಸು ದೊರೆಯಲಿ ಎಂದು ಹಾರೈಸುತ್ತೇನೆ.

ಗೌರವಪೂರ್ವಕ,

ಬಿ.ಎ.ವಿವೇಕ ರೈ

❄

ಪ್ರೊ.ಜಿ.ಎಸ್.ದೀಕ್ಷಿತ್
ಅಧ್ಯಕ್ಷರು, ಕರ್ನಾಟಕ ಇತಿಹಾಸ ಅಕಾಡೆಮಿ
ಬೆಂಗಳೂರು
೮.೮.೯೧

ಡಾ.ವೆಂಕಟಾಚಲ ಶಾಸ್ತ್ರಿಗಳಿಗೆ ನಮಸ್ಕಾರಗಳು.

ಮೊನ್ನೆ ಮಿಥಿಕ್ ಸೊಸೈಟಿಯಲ್ಲಿ ನಿಮ್ಮ ವಿದ್ವತ್ಪೂರ್ಣಭಾಷಣವನ್ನು ಕೇಳಿ ಸಂತೋಷಿಸಿದೆ...

ಡಾ.ಎಂ.ಹೆಚ್. ಕೃಷ್ಣರ ಜನ್ಮಶತಾಬ್ದಿಯನ್ನು ಕರ್ನಾಟಕ ಇತಿಹಾಸ ಅಕಾಡೆಮಿಯವರು ಆಚರಿಸಲು ತೊಡಗಿದ್ದೇವೆ. ಅವರ ಹಿಂದೂಚರಿತ್ರಸಾರ (ಶ್ರೀ ವೆಂಕಟಕೃಷ್ಣಯ್ಯನವರ ಜತೆಗೆ ಬರೆದಿದ್ದು) ನಮ್ಮ ಕಾಲದಲ್ಲಿ ಅತ್ಯಂತ ಜನಪ್ರಿಯ ಪಠ್ಯಪುಸ್ತಕ. ಅದನ್ನು ಪುನಃ ನೋಡಬೇಕು. ಪುನರ್ಮುದ್ರಣಕ್ಕೆ ಯೋಗ್ಯವೇ ಎಂದು ಆಲೋಚಿಸಬೇಕು. ಪ್ರತಿಗಳು ಎಲ್ಲಿಯೂ ಸಿಕ್ಕುತ್ತಿಲ್ಲ. ನಿಮ್ಮ ಅಧ್ಯಯನಸಂಸ್ಥೆಯವರು ಬೇರೆಬೇರೆಯವರ ಪುಸ್ತಕಸಂಗ್ರಹಗಳನ್ನು ದೊರಕಿಸಿದ್ದಾರೆಂದು ಕೇಳಿದ್ದೇನೆ. ಅಂತಹ ಸಂಗ್ರಹದಲ್ಲಿ ಅಥವಾ ವಿಶ್ವವಿದ್ಯಾಲಯದಲ್ಲಿ ಈ ಪುಸ್ತಕ ಸಿಕ್ಕಬಹುದೆ? ವಿಶ್ವವಿದ್ಯಾನಿಲಯದ ಲೈಬ್ರೆರಿಯಲ್ಲಿ ನೋಡಲಿಕ್ಕೆ ಬೇರೆ ಸ್ನೇಹಿತರಿಗೆ ಹೇಳುತ್ತೇನೆ. ನಿಮ್ಮ ಲೈಬ್ರೆರಿಯಲ್ಲಿ ಈ ಪುಸ್ತಕ ಮತ್ತು

ಅವರ ಇತರ ಪುಸ್ತಕಗಳು ಇವೆಯೆ ಎನ್ನುವುದನ್ನು ಹೇಳಲು ಸಾಧ್ಯವೆ? Archaeological Report ಗಳು ಬೇಡ...

ಇಂತೀ, ತಮ್ಮ ವಿಶ್ವಾಸಿ

ಜಿ.ಎಸ್.ದೀಕ್ಷಿತ್

❄

ಆದರ್ಶ ಶಿಕ್ಷಣಸಮಿತಿಯ ವಾಣಿಜ್ಯಮಹಾವಿದ್ಯಾಲಯ

ಗದಗ ೫೮೨೧೦೨

೧೭ ಡಿಶಂಬರ್ ೧೯೯೧

ಮಾನ್ಯರೆ,

ನಿಮ್ಮ ನೇತೃತ್ವದಲ್ಲಿ ೨೦ ದಿನಗಳ ಕಾಲ ನಡೆದುಹೋದ 'ಪುನಶ್ಚೇತನ' ಕಾರ್ಯಕ್ರಮದಲ್ಲಿ ಭಾಗವಹಿಸಿದ ನನ್ನ ಅನುಭವ ಒಂದು ಒಳ್ಳೆಯ ನೆನಪು. ಕೊನೆಯ ದಿನ ನಿಮ್ಮಿಂದ ಕೊಂಡುಕೊಂಡು ಬಂದ 'ಕನ್ನಡ ಚೆನ್ನುಡಿ' ಸಂಪುಟ ಕೂಡ ಅಷ್ಟೇ ಸಂಗ್ರಹಾರ್ಹ ಕೊಡುಗೆ. ಗ್ರಂಥವನ್ನು ಅವಲೋಕಿಸಿದ ಮೇಲೆ, ಇದರ ಕುರಿತು ಇತರ ಅನೇಕರಿಗೂ ತಿಳಿದುಬರಲಿ ಮತ್ತು ಸತ್ಕೃತಿಗೆ ಪ್ರಚಾರ ಸಿಕ್ಕು ಲೇಖಕರ ಪ್ರಕಾಶಕರ ಉದ್ದೇಶ ಇನ್ನೂ ಅನೇಕರ ವರೆಗೆ ತಲುಪಲಿ.

"ವಿಬುಧಕದಂಬಕಂ ಅರಿಗುಂ ವಿಬುಧಪರಿಶ್ರಮಮನ್..." ಎಂಬಂತೆ ನಾವೆಲ್ಲ ಸೇರಿ ಉತ್ತಮಕೃತಿಗಳನ್ನು, ಕೃತಿಕಾರರನ್ನು ಮೇಲಿಂದ ಮೇಲೆ ಉತ್ತೇಜಿಸುತ್ತಲಿರಬೇಕಾಗಿದೆ.

'ಕನ್ನಡ ಚೆನ್ನುಡಿ'ಯನ್ನು ನನ್ನಲ್ಲಿ ನೋಡಿದವರೆಲ್ಲರೂ ಮನಸಾರೆ ಮೆಚ್ಚಿದ್ದಾರೆ. ತಾತ್ಪರ್ಯ ಓದಿ ಆಕರ್ಷಿತರಾಗಿದ್ದಾರೆ. ನನಗಂತೂ ಇದೊಂದು ಸ್ವತಃಸಿದ್ಧ ಕೈಪಿಡಿ.

ಹೃತ್ಪೂರ್ವಕ ಅಭಿನಂದನೆಗಳು,

ತಮ್ಮವ

ಶ್ಯಾಮಸುಂದರ ಬಿದರಕುಂದಿ

❄

PABAK KANUNGO
Member-Secretary
NATIONAL ENCYCLOPAEDIA CENTRE
Jnanmandal centre
c-1, Nilakantha Nagar
Bhubaneswar-751 012
July 15, 1993

Dear Dr. Sastry,

We are extremely thankful for your kind acceptance of the membership of the Advisory Council of the National Encyclopaedia Centre(NEC), set up by the Jnanamandal Foundation. We are sure, your active involvement will go a long way in developing the NEC into a focal point of encyclopaedic activities in the Country. A detailed draft report outlining the aims and proposed activities of the centre is under preparation and would be sent to you shortly for your comments/suggestions.

We deem it a pleasure to invite you to the first meeting of the Advisory Council, scheduled to be held on 26th and 27th August 93 at Bhubaneswar.... Your August presence is considered indispensable.

The Jnamandal foundation shall pay airfare for your journey and would provide local hospitality during your stay in Bhubaneswar.

We shall be greatful to receive your kind confirmation at an early date.

With kind regards,

Yours sincerely
Pabak Kanungo

Justice M.L.JAIN (Retd)
Senior Advocate, Supreme Court
New Delhi-110019
Date: 11.8.94

Respected Shri Shastri,

I have recently come across your collection of poems on Bahubali, but this collection does not contain the poem of Doddayya which has been described variously as Bhujbali shatakam/ Bhujabali charitam/ Bahubali charitram. Right from the day of introduction to Inscriptions of Shravan Belagola by Narasinghachar, scholar after scholar leave referred to this poem; but it seems to me only few have seen the poem. I have contacted the Public Library, Banagalore, The Archaeological Dept of Mysore and Universities of Bangalore and Mysore, but have drawn blank. I wonder if you can help me locate the text. If you could, I shall be immensely greateful. Thanks for the trouble.

With regards,

Yours Sincerely
M.L.Jain

❄

ಬೆಂಗಳೂರು ೫೬೦೦೦೧
೧೨.೮.೯೪

ಮಾನ್ಯರೆ,

ತಮ್ಮ ಮಗನ ಕೈಯಲ್ಲಿ ತಾವು ಕಳುಹಿಸಿದ "ಕೇಶಿರಾಜವಿರಚಿತ ಶಬ್ದಮಣಿ ದರ್ಪಣಂ" ಗ್ರಂಥ ತಲುಪಿದೆ. ಡಾ.ಡಿ.ಎಲ್.ನರಸಿಂಹಾಚಾರ್ ನಂತರ ಇಂತಹ ಗ್ರಂಥಗಳನ್ನು ಅಷ್ಟೇ ಸಮರ್ಥವಾಗಿ ಹೊರತರುವ ವಿದ್ವಾಂಸರ ಪೈಕಿ ತಾವು ಅಗ್ರಗಣ್ಯರು. ಕೇಶಿರಾಜನ ಅಧ್ಯಯನಕ್ಕೆ ಈ ಗ್ರಂಥ ತುಂಬಾ ಸಹಕಾರಿಯಾಗಿದೆ. ಇಂತಹ ಅಮೂಲ್ಯ ಕೃತಿಯನ್ನು ಕನ್ನಡದಲ್ಲಿ ಮಾಡಿದ ತಮಗೆ ಹೃತ್ಪೂರ್ವಕವಾದ ಅಭಿನಂದನೆಗಳು.

ವಂದನೆಗಳು.

ತಮ್ಮ ವಿಶ್ವಾಸಿ,
ಎಂ.ವೀರಪ್ಪ ಮೊಯಿಲಿ
ಮುಖ್ಯಮಂತ್ರಿಗಳು

ಡಾ.ಟಿ.ಎಸ್.ಕೃಷ್ಣಮೂರ್ತಿ
ಸಂಸ್ಕೃತ ಪ್ರಾಧ್ಯಾಪಕರು (ನಿವೃತ್ತ)
ದಿನಾಂಕ ೨.೧೧.೯೭

ಮಾನ್ಯರಾದ ಪ್ರೊ.ಟಿ.ವಿ.ವೆಂಕಟಾಚಲ ಶಾಸ್ತ್ರಿಗಳ ಸಮಕ್ಷಮದಲ್ಲಿ ವಿಜ್ಞಾಪನೆಗಳು.

ತಮಗೆ ಕೈತುಂಬ ಕೆಲಸ. ಜೊತೆಗೆ ಓಡಾಟ. ಇಷ್ಟಿದ್ದರೂ ಒಂದು ಹೊಸ ಪ್ರಬಂಧ ವನ್ನೇ ಬರೆದು ಕಳಿಸಿದ್ದೀರಿ. ಇದು ತಮ್ಮ ಸೌಜನ್ಯ ಸ್ನೇಹಗಳಿಗೆ ಸುಂದರದೃಷ್ಟಾಂತ. ನಾನು ಮಾಡಿದ ಒತ್ತಾಯವನ್ನು ಮನ್ನಿಸಿ, ನಮ್ಮ ಅಪೇಕ್ಷೆಯನ್ನು ಸಿದ್ಧಿಗೊಳಿಸಿದ್ದೀರಿ. ಇದಕ್ಕಾಗಿ ಹೃದಯಪೂರ್ವಕವಾದ ನನ್ನ ವಂದನೆಗಳು, ಹಾಗೂ 'ಶ್ರೀ ಹರ್ಷಪ್ರಶಸ್ತಿ'ಯ ಸಂಪಾದಕ ಮಂಡಳಿಯ ಕೃತಜ್ಞಾಭರಿತ ವಂದನೆಗಳು.

ಲೇಖನವನ್ನು ಓದಿದೆ. ಕೈಗೆತ್ತಿಕೊಂಡಮೇಲೆ ಕೊನೆಯವರೆಗೂ ಕೆಳಗಿಡಲು ಮನಸ್ಸು ಬರಲಿಲ್ಲ... ಮಧುಕರನಾಗಿ ನೀವು ಎಷ್ಟು ಕಾವ್ಯಾರಾಮದಲ್ಲಿ, ಶಾಸ್ತ್ರೋದ್ಯಾನದಲ್ಲಿ, ಸಾಹಿತ್ಯನಂದನದಲ್ಲಿ ಅರ್ಥಪೂರ್ಣವಾಗಿ ವಿಹರಿಸಿದ್ದೀರಿ ಎಂಬುದನ್ನು ಮನಗಂಡೆ. ಪ್ರಸಿದ್ಧ ಕನ್ನಡ ಕವಿಗಳ ಸಾಲುಗಳನ್ನು ದೃಷ್ಟಾಂತವಾಗಿ ಔಚಿತ್ಯವರಿತು ಉದ್ಧರಿಸಿದ್ದೀರಿ. ವಸ್ತುವಿನ ಆಯ್ಕೆಯ ಬಗೆಗೆ ನನಗೆ ಮೊದಲು ಕೊಂಚ ಮುಗ್ಧ ಅಸಂತೋಷವಿತ್ತು. ತಮ್ಮ ಲೇಖನದಿಂದ ನನ್ನ ವಿವೇಕಕ್ಕೂ ಪರಿಷ್ಕಾರ ದೊರಕಿತು. ಒಟ್ಟಿನಲ್ಲಿ ಈ ಲೇಖನಕ್ಕೆ ಒಂದು ಸ್ವತ್ವ, ಆತ್ಮೀಯತೆ ಇದ್ದು ನಮಗೆ ಹರ್ಷ ತಂದಿದೆ. ಎಲ್ಲೆಲ್ಲಿ ಈ ಗುರಿ ಸಾಧಿತವಾಗುತ್ತದೆಯೋ ಅಲ್ಲೆಲ್ಲ ಕೃತಕೃತ್ಯತೆಯ ತೃಪ್ತಿ ದೊರಕುತ್ತದೆ...

ವಂದನೆಗಳು.

ಇಂತು ತಮ್ಮ ವಿಶ್ವಾಸದ
ಟಿ.ಎಸ್.ಕೃಷ್ಣಮೂರ್ತಿ

❄

ಧಾರವಾಡ ೭
೭.೧೨.೯೭

ಪ್ರೀತಿಯ ಪ್ರಿಯಮಿತ್ರ ಶಾಸ್ತ್ರೀ,

ನಿನ್ನ ಅಭಿನಂದನಗ್ರಂಥ 'ಶ್ರೀಮುಖ' ನಿನ್ನ ವಿದ್ವತ್ತು, ಸಾಧನೆ, ವ್ಯಕ್ತಿತ್ವಕ್ಕೆ ತಕ್ಕಂತೆ ಬಂದಿದೆ. ಇದು ಕನ್ನಡ ಸಂಶೋಧನೆ, ಸಾಹಿತ್ಯ ಚರಿತ್ರೆ, ವ್ಯಾಕರಣ, ಛಂದಸ್ಸು ಇ.ಇ.ಗಳ ಅಧ್ಯಯನಕ್ಕೆ ಶ್ರೀಕಾರ ಹಾಕುವ ಶ್ರೀಮುಖ ಹಾಗೂ ಕನ್ನಡ ಸಾಹಿತ್ಯಸಂಸ್ಕೃತಿಪ್ರಿಯರಿಗೆ ದಾರಿತೋರುವ ಶ್ರೀಮುಖ. ಅಯ್ಯಾ, ನಿನ್ನ 'ಭಾಗ್ಯ'ಕ್ಕೆ ಅಭಿನಂದನೆಗಳು. ಈ 'ಸಾಹಸ' ವನ್ನು ಮಾಡಿದ ನಿನ್ನ ಮಿತ್ರ ಶಿಷ್ಯ ಅಭಿಮಾನಿಗಳಿಗೆಲ್ಲ ಅಭಿವಂದನೆಗಳು. ಅವಸರದಲ್ಲಿ ಆದರೂ, ನಾನೊಂದು 'ಪ್ರಾಮಾಣಿಕ ನೆನಪುಗಳ' ಕಿರುಲೇಖನ ಬರೆದು, ಶ್ರೀಮುಖದಲ್ಲಿ

ಸೇರುವಂತಾಗಿ, ನಿನ್ನ 'ಅಭಿಮಾನಿ ಬಳಗ'ದಲ್ಲಿ ನಾನೊಬ್ಬನಾಗಿ ಉಳಿದುಕೊಂಡುದು, ಆತ್ಮೀಯತೆಯ ದಾಖಲು ಆದುದು ಸಂತಸದ ವಿಷಯ. ಈ ಲೇಖನ 'ದೇವರ ಮುಂದೆ' ನನ್ನ ಬಗೆಗೆ ಸಾಕ್ಷಿ ಹೇಳುತ್ತದೆ!

ಪ್ರಿಯ ಶಾಸ್ತ್ರೀ, ನಿನ್ನ ಸಾಹಸಜೀವನದ ನೆನಪಿನ ಸುರುಳಿ ಅತ್ಯಂತ ಪ್ರಾಮಾಣಿಕವಾಗಿದೆ. ಬದುಕನ್ನು ನೀನು ಕಟ್ಟಿಕೊಂಡ ವಿಧಾನಗಳು, ಏರಿದ ಇಳಿದ ಎತ್ತರ ಜಾರುಗಳು, ದೈವ ಕರೆದುಕೊಂಡುಹೋದ ರೀತಿ, ಒಂದು ಮಹತ್ವದ ದಾಖಲೆ; ಪ್ರಾಮಾಣಿಕ ವ್ಯಕ್ತಿಯೊಬ್ಬನ ಒಳಬದುಕಿನ ಕೈಫಿಯತ್. ನಿನ್ನನ್ನು ಕುರಿತು ಬರೆದ ಮಿತ್ರರುಗಳು ಹೃದಯದಿಂದ, ತುಟಿಯಿಂದ, ಅಷ್ಟೇ ಅಲ್ಲ ಬರೆವ ಪೆನ್ನಿನ ಮುಖದಿಂದ ಮಾತ್ರ ತಮ್ಮ ಅನಿಸಿಕೆಗಳನ್ನು ದಾಖಲಿಸಿದ್ದಾರೆ. ನೂರಾರು ವಿದ್ಯಾರ್ಥಿಗಳು, ಅವರಲ್ಲಿ ಸಮರ್ಥರೂ ಇದ್ದಾರೆ, ಅಂಥವರ ಭಾವನೆಗಳೂ ಇಲ್ಲಿ ದಾಖಲಾಗಬೇಕಿದ್ದಿತು. ಅನೇಕ 'ಹಿರಿಯರು' ಅವರಷ್ಟೇ 'ಹಿರಿತನ' 'ವಯೋಮಾನ' 'ಕೀರ್ತಿ' ಸಾಧಿಸಿದ್ದರೂ ಮುಕ್ತ ಮನಸ್ಸಿನಿಂದ ಬರೆದಿಲ್ಲವಲ್ಲ ಎಂದೂ ಅನಿಸುತ್ತದೆ. 'ಕನ್ನಡ ನಿಘಂಟು' ಕೆಲಸದಲ್ಲಿ ನೀನು ಮಾಡಿದ ಸೇವೆ ಪ್ರತ್ಯೇಕವಾಗಿ ಉಲ್ಲೇಖವಾಗಬೇಕಿತ್ತು. ಕನ್ನಡ ಸಾಹಿತ್ಯಚರಿತ್ರೆ ಸಂಪುಟಗಳ ರಚನೆಯಲ್ಲಿ ಹರಿದ ನಿನ್ನ 'ರಕ್ತ' ಹಾಗೂ ಸುರಿದ 'ಬೆವರಿನ' ದಾಖಲೆ ಇಲ್ಲವಲ್ಲಾ ಎನಿಸಿತು. 'ಅಪ್ಪನನ್ನು ಅಪ್ಪ ಎನ್ನಲಾರದ' ಈ ಕಾಲದಲ್ಲಿ ಕೆಲವೇ ಅಭಿಮಾನಿಗಳು, ಈ ಚರಿತ್ರಾರ್ಹ ದಾಖಲೆ ಮಾಡಿದರೆಂಬುದೇ ತೃಪ್ತಿಯ ಮಾತು, ಅಲ್ಲವೆ? ಎಂಥೆಂಥವರೋ ಎಲ್ಲೋ ತೇಲಿಹೋಗಿರುವ ಈ ಕಾಲದಲ್ಲಿ, ನನ್ನ ನಿನ್ನಂಥ ಕೆಲವರನ್ನು ಗೌರವಿಸಿ, ಗ್ರಂಥ ಅರ್ಪಿಸಿ, ನಮ್ಮ ಬದುಕು ಸಾಹಿತ್ಯಕ್ಷೇತ್ರದಲ್ಲಿ 'ಚಿರಂತನ'ವಾಗುವಂತೆ ಮಾಡಿರುವುದು ಪುಣ್ಯಪ್ರಸಂಗ. ನಮ್ಮ ಭಾಗ್ಯ, ಅವರ ಪುಣ್ಯ.

ಇನ್ನು ನಿನ್ನ ಸಂಶೋಧನತ್ಮಕ ಲೇಖನಗಳು ಕನ್ನಡ ಸಾಹಿತ್ಯ ಸಂಸ್ಕೃತಿಗೆ ಹೊಸ ಆಯಾಮ, ಹೊಸ ದಿಕ್ಕು ತೋರಿಸುತ್ತಿವೆ. ಅಲ್ಲದೆ, ನಿನ್ನ ಗ್ರಂಥಗಳು, ಲೇಖನಗಳು, ಇ.ಇ.ಗಳು ಅತ್ಯಂತ ವ್ಯಾಪಕ ವಿಶಾಲ ಮಹತ್ವದ ದಾಖಲೆಗಳು. 'ಅನುಬಂಧ'ಗಳಂತೂ ಅತ್ಯಂತಸಮರ್ಥ ಸೂಚಿಗಳು. ಒಟ್ಟಿನಲ್ಲಿ 'ಶ್ರೀಮುಖ' ಕನ್ನಡ ಸಂಶೋಧನೆಯ ಶ್ರೀಕಾರ ಮುಖ. ಡಾ.ತಾರಾನಾಥ ಮೊದಲಾದ ಎಲ್ಲ ಕಿರಿಯ ಅಭಿಮಾನಿ ಮಿತ್ರರಿಗೆ ನನ್ನ ಅಭಿನಂದನೆಗಳು.

ಹೇಗಿದ್ದೀಯಪ್ಪಾ.... ಆಗಾಗ ಬರೆಯುತ್ತಿರು.

ನಿನ್ನ

ಎಸ್.ಎಂ.ವೃಷಭೇಂದ್ರಸ್ವಾಮಿ

❄

ಬೆಂಗಳೂರು ೫೬೦೦೭೦
೨೨.೧.೯೮

ಪ್ರಿಯ ಡಾ.ಶಾಸ್ತ್ರಿಯವರೆ,

........ನನ್ನ ಕೆಲವು 'ಹೊಸ ಪ್ರಯೋಗ'ಗಳನ್ನು ನಿಮ್ಮ ಗಮನಕ್ಕೆ ಹಾಗೂ ಪ್ರತಿಕ್ರಿಯೆಗಾಗಿ ಲಗತ್ತಿಸಿದ್ದೇನೆ. ಬೇರೆ ಬೇರೆ ವಿಶೇಷ ಸಂಚಿಕೆಗಳಲ್ಲಿ ಪ್ರಕಟವಾದ ಈ ಕೆಲವು ಕವನಗಳ 'ರಚನೆ'ಯ ಬಗೆಗಾಗಲಿ, ಛಂದೋವೈವಿಧ್ಯತೆಯ ಬಗೆಗಾಗಲಿ ನಮ್ಮ ಬುದ್ಧಿಜೀವಿ ಓದುಗವರ್ಗ ಯಾವುದೇ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದ್ದು ನನ್ನ ಗಮನಕ್ಕೆ ಬಂದಿಲ್ಲ. ಕವಿತೆ ತನ್ನ 'ಪದ್ಯಬಂಧ'ವನ್ನು ಕಾಯ್ದುಕೊಂಡು 'ಮುಕ್ತ'ವಾಗುವ, ಅಥವಾ ಒಂದು ಪದ್ಯ ತನ್ನ ನಿಯತಬಂಧದೊಳಗಿಂದ ಇನ್ನೊಂದು ಪದ್ಯಬಂಧದೊಳಕ್ಕೆ ಪ್ರವಹಿಸುವ ಅಥವಾ ಮುಂದುವರಿಯುವ ಈ ಹೊಸಮಾದರಿಗೆ ಏನೆಂದು ಹೆಸರಿಡಬೇಕೆಂಬುದು ನನಗೆ ತಿಳಿಯದೆ, run on stanza pattern ಎಂದು ನಾನು ಹೇಳಿಕೊಳ್ಳುತ್ತಿದ್ದೇನೆ. ನೀವೇನು ಹೆಸರು ಕೊಡುತ್ತೀರಿ, ನೋಡಿ. ಯಾಕೆಂದರೆ ಛಂದಸ್‌ಶಾಸ್ತ್ರದ ಕಡಲಲ್ಲಿ ಈಜಿದವರು ನೀವು.

ನಮಸ್ಕಾರ.

ನಿಮ್ಮ
ಜಿ.ಎಸ್.ಶಿವರುದ್ರಪ್ಪ

❄

ಪ್ರೊ.ಕೆ.ಎಸ್.ನಾರಾಯಣಾಚಾರ್ಯ
ನಿವೃತ್ತ ಇಂಗ್ಲಿಷ್ ಪ್ರಾಧ್ಯಾಪಕರು, ಧಾರವಾಡ
ದಿನಾಂಕ ೧.೬.೧೯೯೮

ಶ್ರೀಯುತ ಹೆರಂಜೆ ಕೃಷ್ಣಭಟ್ಟ ಅವರಿಗೆ,

ಶ್ರೀ ಟಿ.ವಿ.ವೆಂಕಟಾಚಲ ಶಾಸ್ತ್ರಿಗಳು ನನ್ನ ಬಾಲ್ಯಸ್ನೇಹಿತರೂ, ಒಂದೇ ಊರಿನವರೂ, ಪರಮಮಿತ್ರರೂ ಆಗಿರುವ ಮಹಾವಿದ್ವಾಂಸರು. ಕನ್ನಡ ಭಾಷೆ, ವ್ಯಾಕರಣ, ಛಂದಸ್ಸು, ಹಳಗನ್ನಡ ಸಾಹಿತ್ಯ, ಅಲಂಕಾರ ಮುಂತಾದ ನಾನಾ ಪ್ರಕಾರಗಳಿಗೆ ಅವರ ಸೇವೆ ಅಪಾರವಾಗಿ ಸಂದಿದ್ದು, ಸೇಡಿಯಾಪು ಪ್ರಶಸ್ತಿಗೆ ಅವರು ಅತ್ಯಂತ ಯೋಗ್ಯರಾದ ವಿದ್ಯಾನಿಧಿಗಳು. ಅವರ ಬಗ್ಗೆ ಹೆಚ್ಚು ಬರೆದರೆ, ಸ್ನೇಹದ ಪಕ್ಷಪಾತ ಎಂಬ ಭಾವ ಬಂದೀತೆಂದು ಕೈ ಹಿಂಜರಿದರೂ, ಮನ ಬಿಡುತ್ತಿಲ್ಲ! ಎಲೆಮರೆಕಾಯಿಯಂತೆ ಅನೇಕ ವರ್ಷಗಳಿಂದ ಅವರು ಮಾಡಿದ ಸಾಧನೆ, ಪಡೆದ ಸಿದ್ಧಿ ಅತ್ಯಪೂರ್ವವಾದುದು. ಸೌಜನ್ಯ, ಪ್ರಚಾರದೂರತೆ, ಸಾಹಿತ್ಯದ ನೈಜಗೀಳು ಹತ್ತಿರುವ ಇವರು ಸೇಡಿಯಾಪು ಅವರಿಗೆ ತುಂಬ ಸಾಮ್ಯವಿರುವ ಧೀಮಂತರು.

ಇಂಥವರನ್ನು ಗೌರವಿಸಿ ರಾ.ಗೋ.ಪೈ.ಸಂ. ಕೇಂದ್ರವೂ ನೀವೂ ಸೇಡಿಯಾಪು ಅವರ ನೆನಪನ್ನು ಹಸಿರಾಗಿಟ್ಟು ಧನ್ಯರಾಗಿರುತ್ತೀರಿ.

ಸಮಾರಂಭ ಯಶಸ್ವಿಯಾಗಿ ನಡೆಯಲಿ.

ಇಂತು, ನಿಮ್ಮ ವಿಶ್ವಾಸಿ
ಕೆ.ಎಸ್.ನಾರಾಯಣಾಚಾರ್ಯ

(ಸೇಡಿಯಾಪು ಪ್ರಶಸ್ತಿ ಪಡೆದ ಡಾ.ಟಿ.ವಿ.ವಿ.ಶಾಸ್ತ್ರಿಯವರ ಬಗ್ಗೆ ರಾಷ್ಟ್ರಕವಿ ಗೋವಿಂದಪೈ ಸಂಶೋಧನ ಕೇಂದ್ರದ ನಿರ್ದೇಶಕ ಪ್ರೊ.ಎಚ್.ಕೃಷ್ಣಭಟ್ ಅವರಿಗೆ ಬರೆದ ಪತ್ರ)

❄

ಬೆಂಗಳೂರು ೫೬೦೦೮೨
ದಿನಾಂಕ ೩.೩.೧೯೯೯

ಡಾ.ಶಾಸ್ತ್ರೀವಾರಿಕಿ ಸಪ್ರೇಮ ವಂದನೆಗಳು.

ಮೊನ್ನೆಯ ದಿನ ನಿಮ್ಮೊಡನೆ ಕಳೆದ ಸುಮಾರು ಮೂರು ಗಂಟೆಗಳು ಬಹಳ ಆಪ್ಯಾಯಮಾನವಾಗಿದ್ದವು. ಸಮಯ ಕಳೆದುದೇ ತಿಳಿಯಲಿಲ್ಲ. ಆತ್ಮೀಯರೊಡನೆ ನಡೆಸಿದ ಸಂಭಾಷಣೆ ಒಂದು liberal education ಎಂದು ಪ್ರಾಜ್ಞರು ಹೇಳಿದ್ದಾರೆ. ಆ ವಚನ ನನ್ನ ಅನುಭವಕ್ಕೆ ಮತ್ತೊಮ್ಮೆ ಬಂದಿತು.

ತಾವು ಶ್ರೀಮುಖದಲ್ಲಿ ಬಹಳ ಹೃದಯಂಗಮವಾಗಿ ನಿರೂಪಿಸಿರುವ ತಮ್ಮ ಬಾಲ್ಯದ ದಿನಗಳು ಮತ್ತು ಶೈಕ್ಷಣಿಕವರ್ಷಗಳು, ತದನಂತರದ ತಮ್ಮ ಬವಣೆ ನನ್ನ ವೃದ್ಧ ಕಣ್ಣುಗಳಲ್ಲಿಯೂ ನೀರೂರಿಸಿತು. ನನಗೆ ತಿಳಿದಂತೆ, ತೋಗೆರೆ ವಂಶಸ್ಥರೆಲ್ಲರಿಗೂ ಬಡತನ, ಕಾರ್ಪಣ್ಯ, ಕಷ್ಟನಷ್ಟಗಳು ಕಟ್ಟಿಟ್ಟ ಬುತ್ತಿ. ಆದರೆ ದೈವದತ್ತವಾಗಿ ಬಂದಿರುವ ಚುರುಕುಮತಿ, ಸಮಯಪ್ರಜ್ಞೆ ಮತ್ತು ಸಹನಾಶಕ್ತಿ ಅವರಲ್ಲಿ ಬಹುತೇಕ ಜನರನ್ನು ರಕ್ಷಿಸಿ, ಉನ್ನತಮಟ್ಟಕ್ಕೆ ತಂದಿವೆ. ನನ್ನ ವೈಯಕ್ತಿಕ ಜೀವನವೇ ಇದಕ್ಕೆ ಒಂದು ಜ್ವಲಂತ ನಿದರ್ಶನ. ನಿಮ್ಮ ಹಿಂದಿನ ಜನ್ಮಗಳ ಸುಕೃತ, ಹಿರಿಯರ ಆಶೀರ್ವಾದ ಮತ್ತು ಭಗವಂತನ ಅಪಾರಕೃಪೆ ನಿಮ್ಮ ಈಗಿನ ಔನ್ನತ್ಯ, ಯೋಗಕ್ಷೇಮ ಮತ್ತು ಸುಸ್ಥಿತಿಗೆ ಕಾರಣವೆಂದು ನಾನು ಭಾವಿಸಿದ್ದೇನೆ. ಮುಂದೆಯೂ ಸಹ ತಾವು ಸುಖಸಂತೋಷ, ಆನಂದೋತ್ಸಾಹ, ಕೀರ್ತಿ ಖ್ಯಾತಿಗಳ ಸುಧಾಂಬುಧಿಯಲ್ಲೇ ತೇಲಾಡುತ್ತಿರುವಂತೆ ಆಗಲೆಂದು ಆ ಜಗನ್ನಿಯಾಮಕನಲ್ಲಿ ನಾನು ಪ್ರಾರ್ಥಿಸುತ್ತೇನೆ.....

ಇತಿ, ತಮ್ಮ ಶ್ರೇಯೋಭಿಲಾಷಿ
ಎನ್.ನಂಜುಂಡ ಶಾಸ್ತ್ರೀ

ಉಡುಪಿ
೧೦.೧೦.೯೯

ಪ್ರಿಯ ಶ್ರೀ ವೆಂಕಟಾಚಲ ಶಾಸ್ತ್ರೀ ಅವರಿಗೆ,

ತಮ್ಮ 'ಶಾಸ್ತ್ರೀಯ'ದ ನಾಲ್ಕು ಸಂಪುಟಗಳನ್ನು ನೋಡಿದೆ. ಮೊದಲಿನ ಒಂದನ್ನು ಬಿಡದೆ ಓದಿದೆ. ತಮ್ಮ ವಿದ್ವತ್ತಿಗೆ ಆಶ್ಚರ್ಯಚಕಿತನಾದೆ. ಏಕೆಂದರೆ ಹಿಂದೆ ನಾನು ನಿಮ್ಮನ್ನು ಕೇಳಿಕೆಯ ಮೇಲಿಂದಲೇ ಅರಿತದ್ದು. ಕೃತಿಗಳನ್ನೋದಿರಲಿಲ್ಲ. ಈಗ ನಾಲ್ಕನ್ನೂ ಓದುವ ನಿರ್ಧಾರ ಮಾಡಿದ್ದೇನೆ. ನಾವು ದ.ಕ.ದವರು ಹೆಮ್ಮೆಪಡುವ ನಮ್ಮ ಪಂಡಿತಪರಂಪರೆಯನ್ನು ಇನ್ನಷ್ಟು ಉತ್ಕರ್ಷಿತಪರಿಯಲ್ಲಿ ರೂಢಿಸಿ ಅನರ್ಘ್ಯವಾದ ಸಂಶೋಧನೆಯ ಫಲಗಳನ್ನು ಕನ್ನಡಲೋಕಕ್ಕೆ ಕೊಟ್ಟಿದ್ದೀರಿ. ನಾನು ಒಂದು ಕಾಲದಲ್ಲಿ ಹಳಗನ್ನಡದ ಬಲ ಕಂಡು, ಬೆಂಬಲ ಪಡೆದು, ನನ್ನ ಕನ್ನಡವನ್ನು ರೂಪಿಸಿಕೊಂಡವನಾದ್ದರಿಂದ ಅದು ಕನ್ನಡಕ್ಕೆ ಕಸುವು ನೀಡಬಲ್ಲ ಒಂದು ಶಕ್ತಿಯೆಂದು ಇಂದಿಗೂ ನಂಬಿರುವವನು. ಒಟ್ಟಿನಲ್ಲಿ ನಿಮ್ಮ ಶಾಸ್ತ್ರೀಯದ ಎಲ್ಲ ಲೇಖನಗಳೂ ನನಗಿಷ್ಟವಾದುವು- ಒಂದಾನೊಂದು ಕಾಲದಲ್ಲಿ ನಾನೂ ಈ ಕಡಲಲ್ಲಿ ಈಜಾಡಿರುವೆನಾದ್ದರಿಂದ ಆ ನೆನಪು ಇನ್ನೂ ಭದ್ರವಾಗಿ ನನ್ನಲ್ಲಿ ಸೇರಿಕೊಂಡಿರುವುದರಿಂದ.

ಸಂಶೋಧಕರಿಗೆ ಅಸಾಮಾನ್ಯ ಮಾರ್ಗದರ್ಶನ ನೀಡಬಲ್ಲ ನಿಮ್ಮ ಪ್ರಬಂಧಮಾಲೆಗೆ, ನಿಮಗೆ ನನ್ನ ಅಭಿನಂದನೆ, ವಂದನೆ.

ಇತಿ ಭವದೀಯ
ಕು.ಶಿ.ಹರಿದಾಸಭಟ್ಟ

ಪಶ್ಚಲೇಖ:

ಒಂದು ತಮಾಷೆ ಏನೆಂದರೆ, ಈ ಬಾರಿಯ ನನ್ನ 'ಲೋಕಾಭಿರಾಮ'ದಲ್ಲಿ ನಿಮ್ಮ ಒಂದು ಪ್ರಬಂಧದ ಮಸಾಲೆಯನ್ನು ಎತ್ತಿಕೊಂಡಿದ್ದೇನೆ. ಕಪ್ಪೆ ಅರಭಟ್ಟ. ಅದನ್ನು ನಿಮಗೆ ರವಾನಿಸಿದ್ದೇನೆ.

❄

೬-೨-೮೯೨, ಪೋಸ್ಟ್ ಆಫೀಸು ರಸ್ತೆ,
ರಾಮನಗರ, ಅನಂತಪುರ
೨೧.೧.೨೦೦೦

ಪಾಣ್ಯಂ ರಾಮಶೇಷಶಾಸ್ತ್ರಿಯಿಂದ

ಗೆಳೆಯ ವೆಂಕಟಾಚಲನಿಗೆ ನಮಸ್ಕಾರಪೂರ್ವಕ ಬಿನ್ನಹ.

ನನ್ನ ನಿಘಂಟುವಿನಲ್ಲಿ ತೆಲುಗು ಮೂಲಪದಗಳು ತೆಲುಗು ಲಿಪಿಯಲ್ಲಿರಬೇಕೆ ಅಥವಾ ಆಂಗ್ಲ ಕನ್ನಡಲಿಪಿಗಳಲ್ಲಿರಬೇಕೆ ಎಂಬ ವಿಷಯ ಬಹಳ ಹಿಂದೆಯೇ

ಆಲೋಚಿಸಿದ್ದುಂಟು. ಅನಂತರವೇ ತೆಲುಗು ಮೂಲಪದಗಳು ತೆಲುಗು ಲಿಪಿಯಲ್ಲಿ, ಕನ್ನಡ ಅರ್ಥಗಳು ಕನ್ನಡ ಲಿಪಿಯಲ್ಲಿರಬೇಕು ಎಂದು ತೀರ್ಮಾನಿಸಿ ಆ ರೀತಿ ರಚಿಸಿದ್ದಾಯಿತು... ನನ್ನ ಪ್ರಯತ್ನ ತೆಲುಗುಸಾಹಿತ್ಯವನ್ನು, ತೆಲುಗುಪತ್ರಿಕೆಗಳನ್ನು ಓದ ಬಯಸುವ ಕನ್ನಡಿಗರಿಗೆ ನೆರವಾಗಲೆಂದು.

ಮತ್ತೊಂದು ವಿಷಯ ತೆಲುಗು ಕನ್ನಡ ಲಿಪಿಗಳ ನಡುವೆ ಬಹು ಹತ್ತಿರದ ಸಾರೂಪ್ಯ ವಿದೆ.... ಭಾಷೆಯನ್ನು ಅರಿಯುವುದು, ಅರ್ಥಮಾಡಿಕೊಳ್ಳುವುದು ಅಷ್ಟು ಸುಲಭವಲ್ಲ. ಅದಕ್ಕೆ ನಿಘಂಟುಗಳ ನೆರವು ಬೇಕೇ ಬೇಕು...

ಈ ವಿಷಯ ಆಲೋಚಿಸು. ಅಲ್ಲಿಯ ತಜ್ಞರೊಂದಿಗೆ ಸಾಹಿತ್ಯಅಕಾಡೆಮಿಯ ಕಾರ್ಯದರ್ಶಿಗಳೊಂದಿಗೆ ಚರ್ಚಿಸು. ನೀನಿಲ್ಲಿಗೆ ಬಂದಾಗ ಅವರೇನೆಂದರೆಂಬುದನ್ನು ಅರಹುವಿಯಂತೆ.

ಇಂತು

ರಾಮಶೇಷ ಶಾಸ್ತ್ರೀ

❄

ಕಲ್ಲಿಕೋಟೆ

೧೬.೭.೦೪

ಪ್ರಿಯ ವೆಂಕಟಾಚಲ ಶಾಸ್ತ್ರಿಗಳಿಗೆ ವಂದನೆಗಳು.

ಈಗೊಂದು ಹತ್ತು ದಿನಗಳ ಕೆಳಗೆ ಡಾ.ಗುರುದತ್ ಮೈಸೂರಿನಿಂದ ಫೋನ್ ಮಾಡಿ ಒಂದು ಸುದ್ದಿ ತಿಳಿಸಿದರು. ಅದು ದೃಢಪಡಲೆಂದು ನಾನು ಕಾದೆ. ಇಂದು ಪ್ರಜಾವಾಣಿ ಮತ್ತು ಕನ್ನಡಪ್ರಭಗಳಲ್ಲಿ ಆ ಸುದ್ದಿ ಪ್ರಕಟವಾಗಿದೆ ಮತ್ತು ಪರಿಷತ್ತಿನಿಂದ ಕಾಗದ ಬಂದಿದೆ.

ಪಾಂಡಿತ್ಯಕ್ಕಾಗಿ ನಿಮ್ಮ ಹೆಸರಿನಲ್ಲಿ ಸ್ಥಾಪಿಸಿರುವ ಪ್ರಶಸ್ತಿಗೆ ನಾನು ಆಯ್ಕೆಯಾಗಿರುವುದು ನನಗೆ ಆಶ್ಚರ್ಯ ಸಂತೋಷ ತಂದಿದೆ. ಆದರೆ ಪಾಂಡಿತ್ಯಕ್ಕಾಗಿ ಸಲ್ಲಬೇಕಾಗಿರುವ ಪ್ರಶಸ್ತಿಯನ್ನು ನನಗೆ ನೀಡಬೇಕಾಗಿ ಬಂದ ಪರಿಸ್ಥಿತಿಗೆ ಸ್ವಲ್ಪ ಖೇದವೂ ಆಗಿದೆ. ಮತ್ತೊಂದು ದೃಷ್ಟಿಯಿಂದ ಈ 'ಮುಲಕನಾಡು ಪ್ರಶಸ್ತಿ' ಪ್ರಪ್ರಥಮವಾಗಿ ಒಬ್ಬ ಮುಲಕನಾಡಿನವನಿಗೆ ಸಿಕ್ಕಿರುವುದು ವಿಧಿನಿಯಂತ್ರಿತವೋ ಯೋಗಾಯೋಗವೋ ಆಗಿದ್ದರೂ ಅದರ ಔಚಿತ್ಯವನ್ನು ಯಾರೂ ನಿರಾಕರಿಸುವುದಿಲ್ಲ ಎಂದು ಭಾವಿಸಿದ್ದೇನೆ. ನನ್ನ ಬರೆಹಗಳ ನಿಜವಾದ ಮೌಲ್ಯ ಏನೇ ಆಗಿರಲಿ, ಅದು ಪ್ರಶಸ್ತಿಗೆ ಅರ್ಹವಾದುದು ಎಂದು ಪಂಡಿತರ ಸಮಿತಿಯೊಂದು ಸಾರ್ವಜನಿಕವಾಗಿ ತೀರ್ಮಾನಿಸಿರುವುದು ನನಗೆ ವೈಯಕ್ತಿಕವಾಗಿ ಸಮಾಧಾನವನ್ನು ನೀಡಿದೆ. ಆ ಪ್ರಶಸ್ತಿಯನ್ನು ಸ್ಥಾಪಿಸಿರುವ ನಿಮಗೆ

ನನ್ನ ಕೃತಜ್ಞತೆಗಳನ್ನು ಸಲ್ಲಿಸುವುದು ನನ್ನ ಮೊದಲನೆಯ ಕರ್ತವ್ಯವೆಂದು ಈ ಪತ್ರವನ್ನು ಬರೆದಿದ್ದೇನೆ...

ಇಲ್ಲಿ ಪ್ರತಿದಿನವೂ ಮಳೆ ಬರುತ್ತಿದೆ. ಹೊರಕ್ಕೆ ಎಲ್ಲಿಗೂ ಹೋಗುವಂತಿಲ್ಲ. ಓದುವ ಅಭ್ಯಾಸವಿರುವುದರಿಂದ ಹೊತ್ತು ಕಳೆಯುವುದು ಸಮಸ್ಯೆಯಾಗಿಲ್ಲ. ಬೇಕಾದ ಪುಸ್ತಕಗಳನ್ನು ಮೈಸೂರಿನಿಂದ ತಂದುಕೊಂಡಿದ್ದೇನೆ. ಮೈಸೂರಿನ ಹಂಬಲವೇನೋ ಬಿಟ್ಟಿಲ್ಲ. ಆದರೆ ವಯೋಧರ್ಮದ ಒತ್ತಡಗಳಿಂದಾಗಿ ಇಲ್ಲಿ ಇರಬೇಕಾಗಿದೆ. ಸ್ವಭಾವತಃ ನಾನು ವಿವಿಕ್ತ. ಆದ್ದರಿಂದ ಇಲ್ಲಿನ ಏಕಾಂತಜೀವನಕ್ಕೆ ಹೊಂದಿಕೊಂಡಿದ್ದೇನೆ. ಆರೋಗ್ಯ ತಕ್ಕಮಟ್ಟಿಗೆ ಚೆನ್ನಾಗಿದೆ. ಕಣ್ಣಿನ ತೊಂದರೆಯಿಂದ ಹೆಚ್ಚು ಹೊತ್ತು ಓದಲಾಗುತ್ತಿಲ್ಲ. ಬರೆಯುವ ಇಚ್ಛೆಯೇ ಬತ್ತಿಹೋಗಿರುವುದರಿಂದ ಬರವಣಿಗೆಯನ್ನು ನಿಲ್ಲಿಸಿದ್ದೇನೆ. ಅದರಿಂದ ಯಾವ ಖೇದವೂ ಇಲ್ಲ. 'ವ್ಯಶೇಮ ದೇವಹಿತಂ ಯದಾಯುಃ' ಎಂಬ ಭಾವನೆಯಿಂದ ಜೀವನ ಸಾಗಿಸುತ್ತಿದ್ದೇನೆ.

ಇತ್ತೀಚೆಗೆ ನೀವು ಬೆಂಗಳೂರಿನಲ್ಲಿಯೇ ಹೆಚ್ಚಾಗಿ ಇರುತ್ತೀರೆಂದು ಶಾರದಾಪ್ರಸಾದ್ ತಿಳಿಸಿದ. ನಿಮ್ಮ ಆರೋಗ್ಯ ಚೆನ್ನಾಗಿದೆಯೆಂದೂ ನಿಮ್ಮ ಸಾರಸ್ವತೋಪಾಸನೆ ಮುಂದುವರೆಯುತ್ತಿದೆಯೆಂದೂ ಭಾವಿಸುತ್ತೇನೆ. ಪರಿಷತ್ತು, ಬಿ.ಎಂ.ಶ್ರೀ ಪ್ರತಿಷ್ಠಾನ ಮತ್ತು ಕನ್ನಡದಲ್ಲಿ ಕೆಲಸ ಮಾಡುತ್ತಿರುವ ಉತ್ಸಾಹಿ ತರುಣರ ಗುಂಪು ಮತ್ತು ಶಿವರುದ್ರಪ್ಪ, ಚಿದಾನಂದಮೂರ್ತಿ ಮುಂತಾದ ಸ್ನೇಹಿತರ ಸಮುದಾಯ ಬೆಂಗಳೂರಿನಲ್ಲಿರುವುದರಿಂದ ನಿಮಗೆ ಬೆಂಗಳೂರಿನ ಪರಿಸರ ಒಗ್ಗಿರುವುದರಲ್ಲಿ ಆಶ್ಚರ್ಯವಿಲ್ಲ. ಕನ್ನಡದ ಅಧ್ಯಯನ, ಅಧ್ಯಾಪನ ಮತ್ತು ಲೇಖನಗಳಿಗೆ ಹಿಂದೆ ಮೈಸೂರಿನಲ್ಲಿದ್ದ ವಾತಾವರಣ ಈಗ ಬೆಂಗಳೂರಿಗೆ ವಲಸೆ ಹೋಗಿರುವುದು ಎಲ್ಲರಿಗೂ ಮನವರಿಕೆಯಾಗಿರುವ ಸಂಗತಿ.

ಪ್ರಶಸ್ತಿಪ್ರದಾನಕ್ಕೆ ಯಾವ ಸ್ಥಳ ಆರಿಸಿದ್ದಾರೆಯೋ ನನಗೆ ತಿಳಿಯದು. ಅದನ್ನು ಮೈಸೂರಿನಲ್ಲಿ, ನೀವು ಶ್ರಮವಹಿಸಿ ನಿರ್ಮಾಣಮಾಡಿಸಿರುವ ಮುಲಕನಾಡು ಸಭಾಂಗಣದಲ್ಲಿ ಏರ್ಪಡಿಸಿದರೆ ಔಚಿತ್ಯಪೂರ್ಣವಾಗಿರುತ್ತದೆ ಎಂದು ನನ್ನ ಅನಿಸಿಕೆ.... ಅದರಿಂದ ನಿಮ್ಮ ಮುಲಕನಾಡು ಸಭಾಭವನಕ್ಕೆ ಅಖಿಲಕರ್ನಾಟಕಪತ್ರಿಕಾಪ್ರಸಿದ್ಧಿ ದೊರೆಯಬಹುದೆಂಬುದಷ್ಟೇ ನನ್ನ ನಿರೀಕ್ಷೆ.

ಮತ್ತೊಮ್ಮೆ ನಿಮಗೆ ನನ್ನ ಕೃತಜ್ಞತಾಪೂರ್ವಕ ವಂದನೆಗಳು.

ನಿಮ್ಮ

ನ.ಬಾಲಸುಬ್ರಹ್ಮಣ್ಯಂ

❄

ಸ್ವಿಟ್ಜರ್‌ಲ್ಯಾಂಡ್
೨೭.೧೨.೨೦೦೫

ಪ್ರಿಯರಾದ ಡಾ.ವೆಂಕಟಾಚಲ ಶಾಸ್ತ್ರಿಗಳಿಗೆ ಸ್ನೇಹಪೂರ್ವಕ ನಮಸ್ಕಾರಗಳು.

ನೀವು ತುಂಬ ವಿಶ್ವಾಸದಿಂದಲೂ ಹಾಸ್ಯದಿಂದಲೂ ನನಗೆ ಬರೆದ ಪತ್ರ ತಲುಪಿತು. ಆರು ತಿಂಗಳು!! ಇದರಿಂದ ನಗಬೇಕು! ಆದರೆ ನನ್ನ ಲೋಕದಲ್ಲಿ (ಬಸವನಹುಳ ಲೋಕದಲ್ಲಿ) ಆರು ತಿಂಗಳು=ಆರು ಕಲ್ಪ! ನಿಮಗೆ ಇನ್ನೂ ನಿಮ್ಮ ಸೂಕ್ಷ್ಮವಾದ ಹಾಸ್ಯಸ್ವಭಾವ ಇದೆ. ಇದನ್ನು ತುಂಬ ಮೆಚ್ಚುತ್ತೇನೆ.

ಆದರೆ, ಇದನ್ನು ತಿಳಿಯಬೇಕು: ನಾನು ವಿಶ್ವವಿದ್ಯಾನಿಲಯದಲ್ಲಿ ಸುಖಕರವಾದ ಕೆಲಸ ಮಾಡುವುದಿಲ್ಲ - ಎಂಟುಗಂಟೆ ಬೇಜಾರು ತುಂಬಿದ ಕೈಗಾರಿಕೆಯ ಅನುವಾದ ಗಳನ್ನು ಮಾಡಬೇಕು. ಆಮೇಲೆ ಸಾಹಿತ್ಯದ ಅನುವಾದಗಳನ್ನು ಮಾಡಲಿಕ್ಕೆ ತುಂಬ ಹೊತ್ತು ಇಲ್ಲ, ಹೇಗಾದರೂ ಈ ಕರ್ಣಪಾರ್ಯನ ಅನುವಾದ ಈಗ ಸಂಪೂರ್ಣ ವಾಗಿದೆ. ಆದರೆ ಹೇಗೆ ಇದನ್ನು ಪ್ರಕಾಶಿಸಬೇಕು? ನನಗೆ ಗೊತ್ತಿಲ್ಲ!... ಒಟ್ಟಿನಲ್ಲಿ ನನ್ನ ಜೀವ ಇಲ್ಲಿ ಚೆನ್ನಾಗಿದೆ. ನನಗೆ ಈ ಸಣ್ಣ ನೆಮ್ಮದಿಯ ದೇಶ ಅಮೆರಿಕಕ್ಕಿಂತ ಇಷ್ಟ! ಆದರೆ ನನಗೆ ಒಂದು ದೊಡ್ಡ ಹಂಬಲ ಇದೆ; ಇನ್ನೊಂದು ವೇಳೆ ಕರ್ನಾಟಕಕ್ಕೆ ಬರಬೇಕು! ಆದರೆ ಈ ಸಾರಿ ಎಲ್ಲ ದೊಡ್ಡ ದೇವಸ್ಥಾನಗಳನ್ನೂ ನೋಡಬೇಕು(ಒರಿಸ್ಸಾ ದಲ್ಲಿರುವ ದೇವಸ್ಥಾನಗಳನ್ನು ಕೂಡ ನೋಡಬೇಕು). ಆದ್ದರಿಂದ ತುಂಬ ಹೊತ್ತು ಬೇಕು. ಹಾಗೇ ನನ್ನ ಚಾಕರಿಯಿಂದ ನಿವೃತ್ತಿಯಾದ ಮೇಲೆ ಭಾರತಕ್ಕೆ ಹೋಗುತ್ತೇನೆ. ಇನ್ನು ಮೂರು ವರ್ಷ ಕೆಲಸ ಮಾಡಬೇಕು. ಆಮೇಲೆ ಸ್ವತಂತ್ರ! ನಿಶ್ಚಯವಾಗಿ, ಈ ಸಂದರ್ಭದಲ್ಲಿ ನಿಮ್ಮನ್ನು ನೋಡಬೇಕು. ನೀವು ನನ್ನ ಕನ್ನಡ ಸಾಹಿತ್ಯದ ಗುರುಗಳು, ಅಲ್ಲದೆ, ನನ್ನ ಸ್ನೇಹಿತರು! ....

ನನ್ನ ವಂದನೆಗಳೊಡನೆ,

ನಿಮ್ಮ ಸ್ನೇಹಿತ ಮತ್ತು ಶಿಷ್ಯ
ಸ್ಟೀಫನ್ ಅನಕರ್

❄

ಬಂಧು-ಬಳಗ

ಸೋದರತ್ತೆಯ ಸವಿನೆನಪು

ಹಾರೋಹಳ್ಳಿ ವೆಂಕಟಲಕ್ಷ್ಮಮ್ಮ

ವೆಂಕಟಾಚಲನ ಬಗ್ಗೆ ಎರಡು ಮಾತು ಬರೆಯಲು ಕೇಳಿದಾಗ, ಎಷ್ಟು ಬರೆಯಬೇಕು, ಏನು ಬರೆಯಬೇಕು ಎಂದು ಒಂದೆರೆಡು ಬಾರಿ ಯೋಚಿಸಿದೆ. ಅವನ ಬಾಲ್ಯದ ಬಗ್ಗೆ ಲೇಖನ ಇರಲಿ ಎಂದೂ ತಿಳಿಸಿದ್ದರು. ಇರುವ ನೆನಪನ್ನೇ ಸ್ವಲ್ಪ ಕೆದಕಿ ನನಗನ್ನಿಸಿದ್ದನ್ನು ಇಲ್ಲಿ ಲೇಖನದಲ್ಲಿ ಮೂಡಿಸಿದ್ದೇನೆ.

ಬರೆಯುವ ಮುನ್ನ ಒಂದೆರಡು ಸಂಬಂಧಗಳನ್ನು ವಿವರಿಸಬೇಕು. ನಾನು ವೆಂಕಟಾಚಲನಿಗೆ ಸೋದರತ್ತೆ. ಅಂದರೆ ಅವರ ತಾಯಿ ಸುಬ್ಬಮ್ಮನವರ ತಮ್ಮ ಕೃಷ್ಣಶಾಸ್ತ್ರೀ ಅವರ ಹೆಂಡತಿ. ಹುಟ್ಟಿದ್ದು ಮೈಸೂರಿನಲ್ಲಿ, ಮದುವೆಯಾಗಿ ಸೇರಿದ್ದು ಹಾರೋಹಳ್ಳಿ. ನನ್ನದು ಎರಡೂ ಕಡೆಯ ಸಂಬಂಧ, ಅಂದರೆ, ಮದುವೆಗೆ ಮುನ್ನ ತಾಯಿಯ ಕಡೆಯಿಂದ, ಮದುವೆಯ ನಂತರ ಗಂಡನ ಕಡೆಯಿಂದ. ವೆಂಕಟಾಚಲನ ತಂದೆಯ ಅಕ್ಕನ ಮಗಳು ನಾನು. ಹಾಗಾಗಿ ವೆಂಕಟಾಚಲ ಎಳೆಯ ಮಗುವಾಗಿದ್ದಾಗಿನಿಂದ ಅವನನ್ನು ನಾನು ಬಲ್ಲೆ; ಹತ್ತಿರದಿಂದ ನೋಡಿದ್ದೇನೆ; ಎತ್ತರಕ್ಕೆ ಬೆಳೆದದ್ದನ್ನು ಕಂಡಿದ್ದೇನೆ, ಕಾಣುತ್ತಿದ್ದೇನೆ.

ವೆಂಕಟಾಚಲ ನನ್ನ ಮದುವೆಗೆ ಮುಂಚೆ ಹುಟ್ಟಿದ್ದು. ಹುಟ್ಟಿದಾಗ ಮುದ್ದಾಗಿ ಕಳೆಕಳೆಯಾಗಿ ಇದ್ದವನು. ಬೆಳೆದಂತೆ ಕಂಡಿದ್ದು ಚುರುಕುಬುದ್ಧಿ, ಆಟ ಆಡುವ ಹುಡುಗುತನ. ಇವನ ಜೊತೆಯವರೆಂದರೆ ಯಲಹಂಕದಲ್ಲಿ Modern Education Centre ವಿದ್ಯಾಸಂಸ್ಥೆ ನಡೆಸುತ್ತಿರುವ ಚಂದ್ರಶೇಖರ ಹಾಗೂ ಅವನ ತಮ್ಮ ಸೂರ್ಯನಾರಾಯಣ ಶಾಸ್ತ್ರಿ(ಚಂದ್ರ-ಸೂರ ಎಂದೇ ನಾವು ಕರೆಯುವುದು). ಚಂದ್ರ-ಸೂರ ಅವರ ಜೊತೆ ಬಾಲ್ಯದ ಆಟ, ಜೊತೆಯಲ್ಲಿ ಸೋದರಮಾವ ಸತ್ಯನ ಸ್ನೇಹ. ಆಟದಲ್ಲಿ ಅನ್ಯೋನ್ಯ; ಜಗಳ ಗಲಾಟೆಗಳು ಕಡಿಮೆ. ಬಿಡುವಿದ್ದರೆ ತನ್ನ ಪಾಡಿಗೆ ತಾನು ಓದುತ್ತಾ ಕುಳಿತುಕೊಳ್ಳುತ್ತಿದ್ದ.

ಓದುವುದರಲ್ಲಿ ವೆಂಕಟಾಚಲನಿಗೆ ಆಸಕ್ತಿ ಹೆಚ್ಚು, ನಮ್ಮ ಮನೆಯಲ್ಲಿ ಕೆಲವು ಓಲೆಗರಿಯ ಗ್ರಂಥಗಳು ಇದ್ದವು. ಹಿರಿಯರು ಅದನ್ನು ನೋಡುತ್ತಿದ್ದಾಗ ತಾನೂ ಜೊತೆಗೂಡಿ ಅದನ್ನು ಗಮನಿಸುತ್ತಿದ್ದ. ಒಬ್ಬನೇ ಇದ್ದಾಗ ತೆಗೆದುಕೊಂಡು ಅವುಗಳನ್ನು ಓದುತ್ತಿದ್ದ. ಅಂದು ಅವನು ಎಂ.ಎ ಪದವಿ ಪಡೆದಾಗ ನಾವೆಲ್ಲ ಸಂತಸಪಟ್ಟಿದ್ದುಂಟು.

ನಮ್ಮ ವಂಶದಲ್ಲೇ ಮೊದಲು ಎಂ.ಎ. ಮಾಡಿದವನು ಎಂಬ ಹೆಮ್ಮೆ ನಮಗೆ. ವೆಂಕಟಾಚಲನ ಅಜ್ಜಿ-ತಾತ, ಅಂದರೆ ನಮ್ಮ ಅತ್ತೆ ಮಾವನವರು, ಅವನನ್ನು ವಾತ್ಸಲ್ಯದಿಂದ ಕಾಣುತ್ತಿದ್ದರು, ಸಂತಸ ಪಡುತ್ತಿದ್ದರು.

ಎಂ.ಎ. ಮಾಡಿದ ನಂತರ, ಮನೆಯಲ್ಲಿ ಬಡತನ ಸಾಕಷ್ಟಿದ್ದರೂ, ತಂದೆ ನಿರ್ವಹಿಸುತ್ತಿದ್ದ ಹೋಟೆಲ್ ವೃತ್ತಿಗೆ ವಿದಾಯ ಹೇಳಿಸಿ ಮನೆಯ ಪೋಷಣೆಯ ಜವಾಬ್ದಾರಿ ಹೊತ್ತ. ನಮ್ಮ ವೆಂಕಟಾಚಲ ಮನೆಯಲ್ಲಿ ಹೆಣ್ಣು ಮಕ್ಕಳ ಮದುವೆಯ ಜವಾಬ್ದಾರಿ ನಿರ್ವಹಿಸಿ ತಂದೆಗೆ ಮಗನಾಗಿ, ತಂಗಿಯರಿಗೆ ಅಣ್ಣನಾಗಿ, ತನ್ನ ಕರ್ತವ್ಯಪಾಲನೆಯನ್ನು ಮಾಡಿದ. ಬರುತ್ತಿದ್ದ ಸಂಬಳದಲ್ಲಿ ೮೦-೧೦೦ ರೂಪಾಯಿಗಳನ್ನು ಮನೆಗಾಗಿ ಕಳುಹಿಸಿ ಮನೆಯ ಸಮಸ್ಯೆಗಳನ್ನು ಬಗೆಹರಿಸುತ್ತಿದ್ದ.

ಇಲ್ಲಿ ಹೇಳಲೇಬೇಕಾದ ವಿಷಯವೆಂದರೆ ಇಷ್ಟು ಬಡತನದಲ್ಲೂ ವೆಂಕಟಾಚಲನ ಮನೆಯಲ್ಲಿ ವಾರಾನ್ನದ ಪದ್ಧತಿ ಇತ್ತು. ವಿದ್ಯಾರ್ಥಿಗಳು ಊಟಕ್ಕಾಗಿ ಅಲ್ಲಿಗೆ ಹೋಗುತ್ತಿದ್ದದ್ದು ಇತ್ತು. ನಮ್ಮ ಮನೆಯಲ್ಲೂ ಅಂತಹ ಉತ್ತಮಸ್ಥಿತಿ ಇರದಿದ್ದ ಕಾರಣ ನನ್ನ ಹಿರಿಯ ಮಗ ವಾಸುದೇವಶಾಸ್ತ್ರಿ ಕನಕಪುರದಲ್ಲಿ ಹೈಸ್ಕೂಲ್ ಓದುವಾಗ ವಾರಾನ್ನಕ್ಕೆ ಹೋಗಬೇಕಾಯಿತು. ಆದರೆ ವೆಂಕಟಾಚಲ ತನ್ನ ತಂದೆ ತಾಯಿಯರಿಗೆ ಹೇಳಿ, ಅವರನ್ನು ಒಪ್ಪಿಸಿ, ನನ್ನ ಮಗನನ್ನು ಅವರ ಮನೆಯಲ್ಲೇ ಇರಿಸಿಕೊಂಡು ಓದಲು ಅನುವು ಮಾಡಿಕೊಟ್ಟಿದ್ದ.

ಇತ್ತೀಚೆಗೆ ನನಗೆ 'ಕನಕಾಭಿಷೇಕ' ನಡೆಯಿತು. ಆ ಸಂದರ್ಭದಲ್ಲಿ ವೆಂಕಟಾಚಲ ನನ್ನ ಬಳಿ ಬಂದು ಆತ್ಮೀಯವಾಗಿ ಹೇಳಿದ್ದು, "ನೀವು ನನಗೆ ಮಾರ್ಗದರ್ಶಕರು" ಎಂದು; ಆದರೆ ನನಗೆ ಯಾವಾಗಲೂ ಅನಿಸುವುದು ಅವನೇ ನನಗೆ 'ಸ್ಫೂರ್ತಿ' ಎಂದು. ಅವನು ಓದಿದಂತೆ ನನ್ನ ಮಕ್ಕಳನ್ನು ನಾನೂ ಓದಿಸಲು ಪ್ರಯತ್ನಿಸಿದೆ, ಓದಿಸಿದೆ. ಎಲ್ಲರೂ ಈಗ ಸಾಕಷ್ಟು ಸುಸ್ಥಿತಿಯಲ್ಲಿ ಇದ್ದಾರೆ. ಆ ದಿಕ್ಕಿನಲ್ಲಿ ಬೆಳೆಯಲು ವೆಂಕಟಾಚಲನೇ ಮಾರ್ಗದರ್ಶಕ ಎನ್ನಬೇಕು. ದುಃಖದ ಸಂಗತಿಯೆಂದರೆ ಇವನ್ನೆಲ್ಲ ನೋಡಲು ಅವನ ತಂದೆ ತಾಯಿ ಈಗ ಇಲ್ಲ. ಅವರ ಕೀರ್ತಿಯನ್ನು ಎತ್ತಿ ಹಿಡಿದ ಅವನಿಗೆ ಅವರ ಕುಟುಂಬಕ್ಕೆ ನನ್ನ ಹೃದಯಪೂರ್ವಕ ಆಶೀರ್ವಾದಗಳು.

ಅಣ್ಣನೊಂದಿಗೆ

ಟಿ.ವಿ.ಸಾವಿತ್ರಮ್ಮ

ನಾನು ಸಾವಿತ್ರಿ. ನನ್ನ ತಂದೆ ವೆಂಕಟಸುಬ್ಬಾಶಾಸ್ತ್ರಿ. ತಾಯಿ ಸುಬ್ಬಮ್ಮ. ನನ್ನ ತಂದೆಯನ್ನು ಎಲ್ಲರೂ ಕುನ್ನಪ್ಪ ಎಂದು ಕರೆಯುತ್ತಿದ್ದರು. ನನ್ನ ತಂದೆ ತಾಯಿಗೆ ನಾವು ಏಳು ಜನ ಮಕ್ಕಳು. ನನ್ನ ತಂದೆ ನಾವಿದ್ದ ಕನಕಪುರದಲ್ಲಿಯೇ ಹೋಟೆಲ್ ನಡೆಸುತ್ತಾ ನಮ್ಮನ್ನು ಸುಖವಾಗಿ ಯಾವ ಕಷ್ಟವೂ ತಿಳಿಯದಂತೆ ಸಾಕುತ್ತಿದ್ದರು. ಏಳು ಜನ ಮಕ್ಕಳಲ್ಲಿ ನಾಲ್ಕು ಜನ ತಂಗಿಯರು ಮತ್ತು ಅಣ್ಣ ಹಾಗೂ ತಮ್ಮನೊಬ್ಬ ನಿದ್ದಾನೆ. ಎಲ್ಲರಿಗಿಂತ ಹಿರಿಯನೇ ವೆಂಕಟಾಚಲ. ನಮ್ಮಿಬ್ಬರಿಗೂ ಎರಡೂವರೆ ವರ್ಷ ಅಂತರವಷ್ಟೇ. ಅದರಿಂದ ನಮ್ಮಿಬ್ಬರಲ್ಲೂ ತುಂಬಾ ಮೈತ್ರಿ ಬೆಳೆದು ನಾವು ಒಬ್ಬರ ನ್ನೊಬ್ಬರು ಬಿಟ್ಟಿರದೆ ಜೊತೆಜೊತೆಯಲ್ಲೇ ಆಟ ಪಾಟ ಊಟದೊಂದಿಗೆ ಎಲ್ಲಾ ಅಣ್ಣ ತಂಗಿಯರಂತೆ ನಾವೂ ಸಹಾ ಜಗಳವಾಡುತ್ತಾ ಒಂದಾಗುತ್ತಾ ಬೆಳೆದೆವು.

ನಾವಿಬ್ಬರೂ ಎಲ್ಲಿಗೇ ಹೋಗಬೇಕಾದರೂ ಜೊತೆಜೊತೆಯಲ್ಲೇ ಓಡಾಡುತ್ತಿದ್ದರೆ ಎಲ್ಲರೂ ನಮ್ಮನ್ನು 'ಕನಕತಾರ' ಓಡಾಡುತ್ತಿದ್ದಾರೆ ಎಂದು ಹಾಸ್ಯಮಾಡುತ್ತಿದ್ದರು. ಕನಕತಾರ ಎಂದರೆ ಅವರಿಬ್ಬರೂ ಆಗಿನ ಪ್ರಸಿದ್ಧ ಸಿನಿಮಾದ ಅಣ್ಣ ತಂಗಿ. ನನ್ನ ಅಣ್ಣನ ಸ್ವಭಾವ ತುಂಬಾ ಮೃದು. ತಂದೆ ತಾಯಿಯರನ್ನು ಕಂಡರೆ ತುಂಬಾ ಪ್ರೀತಿಯೊಂದಿಗೆ ಭಯಭಕ್ತಿಯೂ ಸೇರಿ ಅವರು ಹೇಳಿದ ರೀತಿಯಲ್ಲಿ ನಡೆಯಬೇಕೆನ್ನುವ ಆದರ್ಶವನ್ನು ಇಟ್ಟುಕೊಂಡಿದ್ದನು.

'ಬೆಳೆಯುವ ಪೈರು ಮೊಳಕೆಯಲ್ಲಿ' ಎಂಬಂತೆ ಚಿಕ್ಕವಯಸ್ಸಿನಿಂದಲೂ ಓದಿನಲ್ಲಿ ತುಂಬಾ ಆಸಕ್ತಿ. ಇಂದು ನನಗೆ ಓದುವ ಹವ್ಯಾಸ ತುಂಬಾ ಇದೆಯೆಂದರೆ ಅದು ನನ್ನ ಅಣ್ಣ ಮತ್ತು ತಾಯಿಯ ಬಳುವಳಿ. ಶಾಲೆಯಲ್ಲಿ ಉಪಾಧ್ಯಾಯರು ಕೊಟ್ಟ ಕೆಲಸವನ್ನು ಬೆಳಗ್ಗೆ ಐದು ಗಂಟೆಗೇ ಎದ್ದು ಓದಿಕೊಂಡು ಒಪ್ಪಿಸಿಬಿಡುತ್ತಿದ್ದನು. ಆದ್ದರಿಂದ ಅವನನ್ನು ಕಂಡರೆ ಎಲ್ಲರಿಗೂ ಅಚ್ಚುಮೆಚ್ಚು.

ಊಟದ ವಿಷಯಕ್ಕೆ ಬಂದರೆ ಊಟದಲ್ಲಿ ತುಪ್ಪ ಎಂದರೆ ತುಂಬಾ ಪ್ರೀತಿ. ಯಾವುದೇ ತರಕಾರಿಯ ಹುಳಿಯಾಗಲಿ ಸಾರಾಗಲಿ ಮಾಡಿದರೆ, ತುಪ್ಪ ಹಾಕದೆ ತುತ್ತು ಎತ್ತು ತ್ತಿರಲಿಲ್ಲ. ನಮ್ಮಿಬ್ಬರಿಗೂ ತುಪ್ಪದ ದೋಸೆ ಎಂದರೆ ತುಂಬಾ ಪ್ರಾಣ. ಈಗಿನ ಮಸಾಲೆ ಆಗ ಅಷ್ಟಾಗಿ ಇರಲಿಲ್ಲ. ಆಗ ತುಪ್ಪದ ದೋಸೆ ತುಂಬಾ ಗ್ರೇಟ್. ತುಪ್ಪ ಎಷ್ಟು ಇಷ್ಟ ಪಡುತ್ತಿದ್ದರೂ ಮೊಸರು ಎಂದರೆ ಅಷ್ಟೇ ಅಲರ್ಜಿ, ಮೊಸರೇ ತಿನ್ನುತ್ತಿರಲಿಲ್ಲ.

ಕಾಲೇಜು ಓದಲು ನನ್ನ ಸೋದರತ್ತೆ ಮನೆಗೆ ಮೈಸೂರಿಗೆ ಹೋದಾಗ ಅವರು ಮೊಸರನ್ನು ತಿನ್ನಲು ಕಲಿಸಿದರು. ಹೇಗೆಂದರೆ ರಾತ್ರಿಯ ಹೊತ್ತು ತುತ್ತುಗಳು ಹಾಕುವಾಗ ಮೊಸರನ್ನದ ಕೈನಲ್ಲಿ ಸಾರು ಅನ್ನ ಕಲೆಸಿ ಕಲೆಸಿ ಸ್ವಲ್ಪ ಸ್ವಲ್ಪವೇ ಸೇರಿಸಿ ಹಾಕುವುದು. ಅವರನ್ನು ಕಂಡರೆ ಭಯಪಡುತ್ತಿದ್ದ ನನ್ನ ಅಣ್ಣ ಮರುಮಾತನಾಡದೆ, ಬೇಡ ಎನ್ನದೆ ತಿನ್ನುವುದನ್ನು ರೂಢಿಸಿಕೊಂಡನು.

ಹೈಸ್ಕೂಲಿಗೆ ಬಂದ ಮೇಲೆ ಅವನ ಸ್ನೇಹಿತರು ರಾಮಶೇಷಶಾಸ್ತ್ರಿ, ರುದ್ರಾಚಾರ್, ನಂಜುಂಡಶಾಸ್ತ್ರಿ, ಮೂರ್ತಿ, ಸುಂದರ್‌ರಾಜ್, ಶಿವಶಂಕರ್ ಎಲ್ಲರೂ ನನ್ನಣ್ಣನೊಂದಿಗೆ ಓದಿಕೊಳ್ಳಲು ನಮ್ಮ ಮನೆಗೆ ಬರುತ್ತಿದ್ದರು. ಅಣ್ಣನಂತೆಯೇ ಅವರೂ ಸಹಾ ಗುಣವಂತರಾಗಿದ್ದರು. ಅವರು ನನ್ನ ಅಣ್ಣನ ಮಕ್ಕಳ ಮದುವೆಗಳು ನಡೆದಾಗ ಬಂದಿದ್ದರು.

ಇಂದು ಕ್ಯಾಸೆಟ್ ರೂಪದಲ್ಲಿ ಪ್ರಸಿದ್ಧಿಯಾಗಿರುವ 'ಮೈಸೂರು ಮಲ್ಲಿಗೆ' ಆಗ ಪುಸ್ತಕರೂಪದಲ್ಲಿ ಹೊಸದಾಗಿ ಬಿಡುಗಡೆಯಾಗಿತ್ತು. ನನ್ನ ಮದುವೆಯಲ್ಲಿ "ರಾಯರು ಬಂದರು ಮಾವನ ಮನೆಗೆ" ಹಾಡನ್ನು ಹಾಡಿ ಎಲ್ಲರಿಂದಲೂ ಶಹಭಾಷ್‌ಗಿರಿ ಪಡೆದುಕೊಂಡಿದ್ದನು. ಜನ ಆ ಹಾಡನ್ನೇ ಎರಡು ಮೂರು ಬಾರಿ ಹಾಡಿಸಿದ್ದರು.

ಇಂದಿಗೂ ನಾಗರಪಂಚಮಿ ಹಬ್ಬಕ್ಕೆ ನನ್ನ ಅಣ್ಣ ಬರುತ್ತಾನೆಂದರೆ ನನಗೆ ಹೇಳಲಾರದ ಸಂಭ್ರಮ.

ನಮ್ಮಿಬ್ಬರ ಒಡನಾಟದ ಬಗ್ಗೆ ಬರೆಯುತ್ತಾ ಸಾಗಿದರೆ ಪುಟಗಳೇ ಸಾಲದಾಗುತ್ತವೆ.

ಸಹೃದಯಿ ಅಣ್ಣಾ

ಡಿ.ಎಸ್.ಶಾಸ್ತ್ರೀ

"ನೂತ್ನತೆಯ ಪೂರ್ಣತೆಯನನ್ಯೂನತೆಯ ಗಳಿಪ
ಯತ್ನಮೇ ಪೌರುಷ ಪ್ರಗತಿ; ಅದೇ ಪ್ರಕೃತಿ
ವಿಜ್ಞಾನ ಶಾಸ್ತ್ರ ಕಲೆ ಕಾವ್ಯ ವಿದ್ಯೆಗಳೆಲ್ಲ
ಧನ್ಯತೆಯ ಬೆದಕಾಟ -ಮಂಕುತಿಮ್ಮ

ಪ್ರಕೃತಿಗನುಗುಣವಾದ ಪೌರುಷ ಪ್ರಗತಿಗೆ ತಮ್ಮನ್ನು ಆಳವಾಗಿ ತೊಡಗಿಸಿಕೊಂಡು, ಕಲೆ ಕಾವ್ಯ ವಿದ್ಯೆಗಳೆಲ್ಲಾ ಧನ್ಯತೆಯ ಬೆದಕಾಟ ಎಂಬ ಅದ್ಭುತಚಿಂತನಶೀಲ ವ್ಯಕ್ತಿತ್ವವುಳ್ಳ ನನ್ನ ಅಣ್ಣನವರ ಬಗ್ಗೆ ಬರೆಯಲು ಕೂತಾಗ ಅನಿರ್ವಚನೀಯ ಭಾವೋದ್ವೇಗ ನನ್ನಲ್ಲಿ ಉಂಟಾಗುತ್ತದೆ. ಮೇಲಿನ 'ಕಗ್ಗ' ನನ್ನ ನೆನಪಿನಂಗಳದಲ್ಲಿ ಮೂಡಿ ಅದರಲ್ಲಿರುವ ಆತ್ಮಾನುಭೂತಿಯ ಚರ್ಯೆಯೇ ನನ್ನ 'ಅಣ್ಣ' ಎಂದೆನಿಸುತ್ತದೆ.

ಅವರ ಒಡನಾಟದ ಬೆದಕಾಟದಲ್ಲಿ ನಾನು ಎರಡು ಅಂಶಗಳನ್ನು ಅವರಲ್ಲಿ ಗುರುತಿಸಿಕೊಳ್ಳುತ್ತೇನೆ. ಒಂದು ಅವರ ಸಾಹಿತ್ಯಲೋಕದ ಹರವು, ಕನ್ನಡ ಸಾರಸ್ವತಲೋಕದಲ್ಲಿ ಅವರು ಮೂಡಿಸಿದ ಛಾಪು, ಏರಿದ ಮಟ್ಟ, ಪಡೆದ ಗೌರವ, ಗಳಿಸಿಕೊಂಡ ಆತ್ಮಾನಂದ, ಅವರು ಜೀವನದಲ್ಲಿ ಸಾಧಿಸಿದ ಮಜಲು ಮತ್ತು ಧನ್ಯತೆ; ಅವರ ಪರಿಪಕ್ವ ವೈಚಾರಿಕತೆ, ಕನ್ನಡ ಭಾಷೆಗೆ ಅವರಿತ್ತ ಅಮೂಲ್ಯಕೊಡುಗೆ. ಅದು ಎಂದೆಂದೂ ಅವಿಸ್ಮರಣೀಯ. ಇದನ್ನೆಲ್ಲಾ ಜೀರ್ಣಿಸಿಕೊಂಡು ಅನುಭವಿಸುವ ಸಾಮರ್ಥ್ಯ ನನ್ನಲ್ಲಿಲ್ಲ. ಏಕೆಂದರೆ ನನ್ನ ಸಾಹಿತ್ಯಕೃಷಿ ಏನೇನೂ ಇಲ್ಲ. ಅವರು ವ್ಯಾಕರಣಶಾಸ್ತ್ರದಲ್ಲಿ ಮಿಂಚಿದ ನಕ್ಷತ್ರ. 'ಕೃಷಿ ಮಾಡಿದರೆ ಹೀಗೆ ಮಾಡಬೇಕು' ಎಂದು ನನ್ನಲ್ಲೇ ಎಷ್ಟೋ ಬಾರಿ ಅಂದುಕೊಂಡಿದ್ದೇನೆ. ಈ ವಿಷಯದಲ್ಲಿ ನನ್ನ ಹೃದಯ ತುಂಬಿಬಂದಿದೆ. ಆ ಮಟ್ಟಕ್ಕೆ ಏರಿದ ವ್ಯಕ್ತಿ ನನ್ನ 'ಅಣ್ಣ' ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾ ಅಭಿಮಾನದಿಂದ ಬೀಗಿದ್ದೇನೆ.

ಎರಡನೆಯದಾಗಿ ನಮ್ಮ ನಿಕಟಸಂಬಂಧವಾಗಿ ಹೇಳುವುದಾದರೆ, ಇಲ್ಲಿ "ಮಾತಿಗಿಂತ ಹೆಚ್ಚಾಗಿ ಮೌನವೇ ಮಾತನಾಡುತ್ತಿದೆ." ಕಾರಣ ನಮ್ಮ ವಯಸ್ಸಿನ ಅಂತರ. ಬಾಲ್ಯದಿಂದಲೂ ಒಂದಾಗಿ, ಕೂಡಿ, ಆಡಿ ನಲಿದು ಬೆಳೆದಿದ್ದು ನನಗೆ ಜ್ಞಾಪಕವಿಲ್ಲ. ಮುಂದೆ ಒಟ್ಟಾಗಿ ಸೇರಿದಾಗ ಹತ್ತಿರದಲ್ಲಿ ಕುಳಿತು ಮಾತಿನ ಸಂಪರ್ಕ ನಡೆಯುತ್ತಿದ್ದುದು, ಭಾವನೆಗಳ ಹಂಚಿಕೆ ಎಲ್ಲವೂ ವಿರಳ. ಅಲ್ಲದೆ ಮಾತನಾಡುವ ವಿಷಯವೂ ಸಂದರ್ಭೋ

ಚಿತವಾಗಿರುತ್ತಿರಲಿಲ್ಲ. ಅಂದರೆ ಪ್ರೀತಿ, ಆತ್ಮೀಯತೆ, ವಿಶ್ವಾಸ ಗುಪ್ತವಾಗಿ ಹರಿದು ಮೌನದಲ್ಲೇ ವ್ಯಕ್ತವಾಗುತ್ತಿದ್ದುದನ್ನು ಅವರ ಮುಖದಲ್ಲೇ ಕಂಡು ಮನಸ್ಸಿನಲ್ಲೇ ಹರ್ಷಿಸುತ್ತಿದ್ದೆ. ಮಾತನಾಡುವ ತವಕ ಮಾತನಾಡುವ ರೀತಿ ಕಾಣದೆ ಮೌನದಲ್ಲೇ ಕರಗಿಹೋಗುತ್ತಿತ್ತು. ನಮ್ಮೆಲ್ಲರ ಮೇಲಿನ ಅತ್ಯಂತ ಆಳವಾದ, ಘನವಾದ, ಸ್ನಿಗ್ಧ ಆತ್ಮೀಯತೆ ಆಗಾಗ್ಗೆ ನಾವೆಲ್ಲ ಸೇರಿದಾಗ, ಅವರ ಮೃದುಮಧುರ ಹಾಸ್ಯಪೂರಿತ ಕೆಲವೇ ಮಾತುಗಳಲ್ಲಿ ವ್ಯಕ್ತವಾಗುತ್ತಿರುತ್ತದೆ. 'ಬಾಲಕ ಸ್ವಭಾವದ ಪ್ರೀತಿಯ ಭಾವನೆ ಮಾತಿಗಿಂತ ಹೆಚ್ಚು ಪ್ರಭಾವಶಾಲಿ' ಎಂಬುದನ್ನು ಅವರ ಒಡನಾಟದಲ್ಲಿ ಕಂಡುಕೊಂಡಿದ್ದೇನೆ. ಒಮ್ಮೆ ನಾನು ಒಂದು ಸಂಕೀರ್ಣಸಮಸ್ಯೆಯನ್ನು ಅವರಲ್ಲಿ ಹೇಳಿಕೊಂಡಾಗ, ಆ ಸಮಸ್ಯೆ ತಮ್ಮದೇ ಎನ್ನುವಷ್ಟು ಭಾವುಕರಾಗಿ, ಪರಿಹಾರಕ್ಕೆ ಮುಂದಾಗಿ ಪ್ರಾಮಾಣಿಕವಾಗಿ ಪ್ರಯತ್ನ ಮಾಡಿದರು. ಅಂದು ನನಗೆ ಎಷ್ಟೋ ಸಮಾಧಾನವಾಗಿತ್ತು.

ಸಾಮಾನ್ಯರಂತೆ ಹುಟ್ಟಿ, ಸಾಮಾನ್ಯರಂತೆ ಬೆಳೆದು, ಬೆಳಗಿ, ತನಗೊಲಿದು ಬಂದ ಬಿರುದು ಸನ್ಮಾನಗಳನ್ನು ಸಾಮರ್ಥ್ಯದಿಂದ ಪಡೆದೆನೆಂಬ ಅಹಮಿಕೆ ತೊರೆದು, ನಿರ್ಲಿಪ್ತತೆಯಿಂದ ಸಾಹಿತ್ಯಸೇವೆಯಲ್ಲಿ ತೊಡಗಿರುವ ನನ್ನ 'ಅಣ್ಣ' ಧನ್ಯರೇ ಸರಿ! ನಾನು ಅವರ ಒಡನಾಟದಲ್ಲಿ ಕಂಡಿದ್ದು, ಸಾಮರ್ಥ್ಯಕ್ಕನುಗುಣವಾದ ಕ್ಷೇತ್ರ ಆರಿಸಿಕೊಂಡು, ಸಾಧನೆಮಾಡಿ ಉನ್ನತಿಗೇರಿರುವ, ಏರುತ್ತಿರುವ ಅವರಿಗೆ, ಪೂಜೆ ಪ್ರಾರ್ಥನೆ ಎಲ್ಲವೂ ಅದೇ! ಅದೇ ಅವರ ವಿಶೇಷ. ಅವರ ಏಳಿಗೆಗೆ, ಮಾತೃಸಮಾನರಾದ ನನ್ನ ಅತ್ತಿಗೆಯವರ ಪ್ರೇರಣೆ, ಸಹಕಾರ ಅಪಾರ.

ಸ್ವಂತದವರಲ್ಲಿ ಅಖಂಡ ಆತ್ಮೀಯತೆ, ಬಂಧುಗಳಲ್ಲಿ ಅಪಾರಪ್ರೇಮ, ಸರಳತೆ ಮತ್ತು ಸಾಹಿತ್ಯಕ್ಷೇತ್ರದಲ್ಲಿ ಅಪಾರಯಶಸ್ಸು ಹೊಂದಿರುವ ಅವರಿಗೆ ಆಯಸ್ಸು, ಆರೋಗ್ಯಭಾಗ್ಯ ಅನವರತ ಕೃಪೆ ಮಾಡಲಿ ಎಂದು ಭಗವತಿಯಲ್ಲಿ ಹೃದಯತುಂಬಿ ಪ್ರಾರ್ಥಿಸುತ್ತೇನೆ.

ಶ್ರೀರಾಮಕೃಷ್ಣಾರ್ಪಣಮಸ್ತು.

ಮೇರುಪರ್ವತ

ಟಿ.ವಿ.ಭುವನೇಶ್ವರಿ ಸುಂದರೇಶ್

ಬಾಲ್ಯದಲ್ಲಿ ಅಣ್ಣತಮ್ಮಂದಿರೊಡನೆ ಬೆಳೆಯುವ ಅವಕಾಶ ಸಿಕ್ಕಿದವರೇ ಧನ್ಯರು. ಐದು ಜನ ಹೆಣ್ಣುಮಕ್ಕಳಲ್ಲಿ ನಾನೇ ಕಡೆಯವಳು. ನಾನು ಜನಿಸುವ ವೇಳೆಗೆ ಅಣ್ಣ ಸ್ನಾತಕೋತ್ತರ ಪದವಿ ತರಗತಿಗೆ ಸೇರಿ ಮೈಸೂರಿನಲ್ಲಿ ವಾಸ್ತವ್ಯಹೂಡಿದ್ದ. ವಯಸ್ಸಿನ ಅಂತರದಿಂದ ಅಣ್ಣನೊಡನೆ ಸಲುಗೆ ಕಡಿಮೆ.

ಅಣ್ಣ ಅತ್ತಿಗೆಯರ ವಿವಾಹಸಮಯಕ್ಕೆ ನಾನು ಎರಡು ವರ್ಷದ ಮಗು. ಹೈದರಾಬಾದಿನ ವಿಶ್ವವಿದ್ಯಾಲಯ(ಉಸ್ಮಾನಿಯ)ದಲ್ಲಿ ಪ್ರಾಧ್ಯಾಪಕರಾಗಿಹೋದ ಅಣ್ಣ ಅಲ್ಲಿನ ಫೋಟೋಗಳನ್ನು ಕಳಿಸಿದ್ದರು. ವಿಶ್ವವಿದ್ಯಾಲಯದ ಆ ಚಿತ್ರಗಳನ್ನು ನೋಡಿ ನಾನು ಅರಮನೆಯ ಚಿತ್ರಗಳೆಂದು ತಿಳಿದಿದ್ದೆ. ಹೈದರಾಬಾದಿನ ಅಣ್ಣನ ಮನೆಗೆ ಡಾ.ಜಿ.ಎಸ್.ಶಿವರುದ್ರಪ್ಪನವರೇ ಮೊದಲಾದ ಅನೇಕ ಗಣ್ಯಸಾಹಿತಿಗಳು ಬರುತ್ತಿದ್ದ ರೆಂದು ನನ್ನ ತಾಯಿತಂದೆ ಹೇಳುತ್ತಿದ್ದರು, ಬಾಲ್ಯದಿಂದ ಪುಸ್ತಕಪ್ರೀತಿ ನನಗೆ. ಅದು ವಂಶವಾಹಿನಿಯಾಗಿ ಬಂದಿರಬೇಕು. ಮನೆಯ ಅಟ್ಟದ ಮೇಲೆ ಹಳೆಯ ಪುಸ್ತಕಗಳ ಸಂಗ್ರಹವಿರುತ್ತಿತ್ತು. 'ಕಿನ್ನರ' ತೆಲುಗುಪತ್ರಿಕೆ, 'ಕೊರವಂಜಿ' ಸಂಚಿಕೆ, ಪ್ರಬುದ್ಧ ಕರ್ಣಾಟಕ, ಕನ್ನಡನುಡಿ(ಸಾಹಿತ್ಯಪರಿಷತ್ತಿನ ಪತ್ರಿಕೆ), ಸೈಲಾಸ್ ಮಾರ್ನರ್, ಷೇಕ್ಸ್‌ಪಿಯರ್‌ನ ಇಂಗ್ಲಿಷ್ ನಾಟಕಗಳು, ಒಂದೇ ಎರಡೇ? ಬೇಸಿಗೆಯ ರಜೆಯಲ್ಲಿ ಅದು ನನ್ನ ಗ್ರಂಥಾಲಯ. ಆ ಗ್ರಂಥಾಲಯದಲ್ಲಿ ನನ್ನ ಮಾನಸಿಕ ಗುರು ದ್ರೋಣಾ ಚಾರ್ಯರಿದ್ದಂತೆ ನನ್ನ ಅಣ್ಣ ಟಿ.ವಿ.ವೆಂಕಟಾಚಲ ಶಾಸ್ತ್ರೀ. ನನ್ನನ್ನು ಏಕಲವ್ಯನಿಗೆ ಹೋಲಿಸಿಕೊಂಡು ಆ ಪುಸ್ತಕಗಳನ್ನು ಓದಲಾರಂಭಿಸುತ್ತಿದ್ದೆ. ಓದಿದ್ದನ್ನೆಲ್ಲ ತಂದೆಯವ ರೊಡನೆ ಚರ್ಚೆ ಮಾಡುತ್ತಿದ್ದೆ. ತಂದೆಯವರು, ನನ್ನ ಅಣ್ಣ ಹಿರಿಯರ ಬಗ್ಗೆ ತೋರುವ ಗೌರವಾದರ, ವಿನೀತಭಾವವನ್ನು ನೆನಪಿಸಿಕೊಳ್ಳುತ್ತಿದ್ದರು. ಅಣ್ಣನಿಗೆ ಬಾಲ್ಯದಲ್ಲಿಯೇ ಇದ್ದ ಸಾಹಿತ್ಯಾಭಿರುಚಿಯ ಬಗ್ಗೆ, ಕರ್ಣಾಟಕ ಸಂಘವನ್ನು ಸ್ಥಾಪನೆಮಾಡಿ ಮಹಾನ್ ಸಾಹಿತಿ ಶ್ರೀ ದೇವುಡು ನರಸಿಂಹಶಾಸ್ತ್ರಿಗಳನ್ನು ನನ್ನೂರಿಗೆ ಕರೆತಂದ ಬಗ್ಗೆ ಊರಿನವರೆಲ್ಲ ಹೆಮ್ಮೆಯಿಂದ ಹೇಳುತಿದ್ದುದನ್ನು ಕೇಳಿಕೊಂಡೇ ಬೆಳೆದವಳು ನಾನು. ತಂದೆಯವರೊಡನೆ ಸದಾ ಚರ್ಚಿಸುತ್ತಿದ್ದ ನನಗೆ ಸಾಹಿತ್ಯಚಟುವಟಿಕೆಗಳಲ್ಲಿ ಅಪಾರ ಆಸಕ್ತಿ. ಆ ರೀತಿ ಭಾಗವಹಿಸಿ ಬಹುಮಾನ ಗಳಿಸಿದಾಗ ನನ್ನ ದ್ರೋಣಾಚಾರ್ಯ ಗುರುಗಳಿಗೆ (ಅಣ್ಣನಿಗೆ) ಪತ್ರ ಬರೆಯುತ್ತಿದ್ದೆ. ಅಣ್ಣನಿಗೆ ಬಿಡುವಿಲ್ಲದಿದ್ದರೂ ನನ್ನ ಕಾಟ ತಡೆಯಲಾರದೆ ನನ್ನ

ಪತ್ರ ಸಿಕ್ಕಿದ ತಕ್ಷಣ ಉತ್ತರಿಸುತ್ತಿದ್ದರು. ಅಣ್ಣನ ಕಾರ್ಯಗಳ ವ್ಯಾಪ್ತಿಯನ್ನು ಅರಿಯದ ನಾನು ಆಗಿಂದಾಗ್ಗೆ ಪತ್ರ ಬರೆಯುತ್ತಲೇ ಇರುತ್ತಿದ್ದೆ. ಸಾಧನೆಯಿಲ್ಲದ ವ್ಯಕ್ತಿತ್ವವನ್ನು ಅಣ್ಣ ಗೌರವಿಸುವುದಿಲ್ಲವೆಂದು ನಾನು ಅರಿತಿದ್ದೆ. ಪ್ರತಿಕ್ಷಣವೂ ಅಮೂಲ್ಯವೆಂಬುದು ನನ್ನ ಅಣ್ಣನ ನಿತ್ಯ ಪೂಜಾಮಂತ್ರವಾಗಿತ್ತು.

ಮಕ್ಕಳೆಂದರೆ ಹೂವುಗಳಿದ್ದಂತೆ ಎನ್ನುವರು ನನ್ನ ಅಣ್ಣ. ಸಣ್ಣಮಕ್ಕಳನ್ನು ಮೃದುವಾಗಿ ಎತ್ತಿಕೊಳ್ಳದಿದ್ದರೆ ಅಣ್ಣನಿಗೆ ಸಿಟ್ಟೇ ಬರುತ್ತಿತ್ತು. 'ಪಾಂಡಿತ್ಯವೀರ'ನೆನಿಸಿಕೊಂಡವನ ಮನಸ್ಸಿನಲ್ಲಿ ತುಂಬಾ ಮೃದು. ಅಣ್ಣನ ಮೊದಲ ಮಗು ಶ್ರೀವತ್ಸ ಸತ್ತಾಗ ಕನಕಪುರದ ಮನೆಗೆ ಬಂದಿದ್ದ ನನ್ನ ಅಣ್ಣ ಒಳಗೆ ಬರದೆ ಕಿಟಕಿಯ ಬಳಿ ನಿಂತು ಕಣ್ಣೀರು ಹಾಕಿದ್ದನ್ನು ಕಂಡಿದ್ದೇನೆ. ತಾಯಿಯವರ ಕಣ್ಣಲ್ಲೂ ನೀರು. ಚಿಕ್ಕವಳಾಗಿ ಮೂಕಪ್ರೇಕ್ಷಕಳಾಗಿ ಬೆಪ್ಪಾಗಿದ್ದೇನೆ.

ಅಣ್ಣ ಊರಿಗೆ ಬಂದಾಗ ಅಣ್ಣನ ಹಾಸಿಗೆಯನ್ನು ಅಪ್ಪ ಶುಭ್ರವಸ್ತ್ರಗಳಿಂದ (ಅಗಸರ ಮನೆಯಿಂದ ಬಂದ ವಸ್ತ್ರ) ಹಾಸುತ್ತಿದ್ದರು. ಅವರಿಗೆ ಕಲ್ಲುಮರಗೆಯಲ್ಲಿ ಹಾಕಿದ ಮಜ್ಜಿಗೆ ಹಿಡಿಸುವುದಿಲ್ಲವೆಂದು ಇದ್ದ ಒಂದೇ ಸ್ಟೀಲ್ ತಂಬಿಗೆಗೆ ಮೊಸರು ಹಾಕಿಡುತ್ತಿದ್ದರು. ಅಣ್ಣ ತನ್ನ ಕನ್ನಡಕವನ್ನು ತೆಗೆದು ಹಾಸಿಗೆಯ ಪಕ್ಕದಲ್ಲಿ ಇಟ್ಟು ಕೈ ಹಣೆಯ ಮೇಲಿರಿಸಿ ಮಲಗುವವರೆಗೂ ನಾನು ದೂರದಲ್ಲಿ ನಿಂತು ನೋಡುತ್ತಿದ್ದೆ. ಅಣ್ಣ ದೀರ್ಘಾಲೋಚನೆಯಲ್ಲಿ ಇದ್ದಂತೆ ತೋರುತ್ತಿತ್ತು ನನಗೆ. ಆದರೆ ಆ ವಯಸ್ಸಿನ ನನಗೆ ಅಣ್ಣನ ತಲೆಯ ಮೇಲಿದ್ದ ನನ್ನ ಮತ್ತು ಅಕ್ಕಂದಿರ ಭಾರವಾದ ಜವಾಬ್ದಾರಿ ಅರ್ಥವಾಗುತ್ತಿರಲಿಲ್ಲ.

ಅಣ್ಣನಿಗೆ ಪಗಡೆಯಾಟ ಗೊತ್ತಿತ್ತು. ಕನಕಪುರಕ್ಕೆ ಬಂದಾಗ ನನ್ನ ಅತ್ತಿಗೆ ಅಣ್ಣ ಅಕ್ಕಂದಿರು ಪಗಡೆ ಆಟಕ್ಕೆ ಕೂರುತ್ತಿದ್ದರು. ಆಟದ ಗಮ್ಮತ್ತು ನೋಡಲು ನಾನೂ ಚಿಕ್ಕ ಅಣ್ಣ ಸಿದ್ಧವಾಗಿರುತ್ತಿದ್ದೆವು. ಗೆಲುವು ಯಾವಾಗಲೂ ಅತ್ತಿಗೆಯವರ ಪಕ್ಷವೇ. ಆಟದಲ್ಲಿ ಅಣ್ಣ ಸೋತಾಗ ಅವನ ಕೋಪದ ಗಮ್ಮತ್ತೇ ಗಮ್ಮತ್ತು. ಪಗಡೆಯ ಹಾಸನ್ನು ಕೆದರಿ ಎದ್ದುಬಿಡುತ್ತಿದ್ದರು. ನಮಗೆ ಆ ಸಮಯದಲ್ಲಿ ಜೋರಾಗಿ ನಗಲೂ ಭಯ. ಹೈದರಾಬಾದಿನಿಂದ ಮೈಸೂರು ಮಾನಸಗಂಗೋತ್ರಿಗೆ ಬರುತ್ತಿರುವ ಸಂದರ್ಭದಲ್ಲಿ ಅಣ್ಣ ಶ್ರೀ ದೇ.ಜವರೇಗೌಡರ, ಶ್ರೀ ಡಿ.ಎಲ್. ನರಸಿಂಹಾಚಾರ್‌ರವರ, ಕುವೆಂಪುರವರ ವಿಚಾರವನ್ನು ತಂದೆಯವರೊಡನೆ ಮಾತನಾಡುತ್ತಿದ್ದುದನ್ನು ನಾನು ನಿಂತು ನೋಡಿದ್ದೇನೆ. ಹಾಗೆ ತಂದೆಯವರೊಡನೆ ಮಾತನಾಡುವಾಗ ಕೈಕಟ್ಟಿ ವಿಧೇಯ ವಿದ್ಯಾರ್ಥಿಯಂತೆ ಗೌರವದಿಂದ ಮಾತನಾಡುತ್ತಿದ್ದ ಅಣ್ಣನ ವಿನಯ ಇಂದಿಗೂ ನನ್ನ ಮನಸ್ಸಿನಲ್ಲಿ ಹಸಿರಾಗಿದೆ. ಹಿರಿಯ ಸಾಹಿತಿಗಳ ಪುಸ್ತಕಗಳನ್ನು ಓದುವ ನನ್ನ ಹವ್ಯಾಸಕ್ಕೆ ಪ್ರಮುಖ ಕಾರಣವೇ ನನ್ನ ಅಣ್ಣ. ಎಪ್ಪತ್ತರ ದಶಕದಲ್ಲಿ ಕನಕಪುರ ತಾಲೂಕು ಸಾಹಿತ್ಯ ಸಮ್ಮೇಳನ ನಡೆದಾಗ ವೇದಿಕೆಯ ಮೇಲೆ ಕ್ಲೋಸ್ ಕಾಲರಿನ ಕಪ್ಪು ಕೋಟ್ ಧರಿಸಿದ್ದ

ನನ್ನ ಅಣ್ಣ ಗಣ್ಯಸಾಹಿತಿಗಳ ಮಧ್ಯೆ ವಿಚಾರಗೋಷ್ಠಿಯಲ್ಲಿ ಕುಳಿತಿದ್ದ ಚಿತ್ರಣವನ್ನು ಮನೆಗೆ ಬಂದು ಅಮ್ಮನ ಮುಂದೆ ಹತ್ತಾರು ಸಲ ವರ್ಣಿಸಿದ್ದೆ. ಆ ಸಮಯದಲ್ಲಿ ಕವಿ ರಸಿಕ ಪುತ್ತಿಗೆ, ಟಿ.ಕೆ.ರಾಮರಾವ್ ಮುಂತಾದವರ ಪರಿಚಯ ನನಗಾಗಿತ್ತು.

ಹೆಣ್ಣುಮಕ್ಕಳ ವಿದ್ಯಾಭ್ಯಾಸದ ಬಗ್ಗೆ ತಂದೆಯವರು ಸ್ವಲ್ಪ ಹಿಂಜರಿಕೆಯಲ್ಲಿರುತ್ತಿದ್ದರು. ಅದಕ್ಕೆ ಕಾರಣ ಆರ್ಥಿಕವಾಗಿ ಸ್ವಲ್ಪ ತೊಂದರೆಯ ಕಾರಣವಿತ್ತು. ಆದರೆ ನನ್ನ ಅಣ್ಣ ನನ್ನ ವಿಷಯಕ್ಕೆ ತಂದೆಯವರ ಹತ್ತಿರ ಮಾತನಾಡಿ ಒಪ್ಪಿಸಿದರು. ಅವರು ನನ್ನ ಸಹಾಯಕ್ಕೆ ಬಂದಿದ್ದರಿಂದ ನಾನೂ ಎಂ.ಎ. ಪದವೀಧರೆಯಾಗಲು ಸಾಧ್ಯವಾಯಿತು. ನನ್ನಲ್ಲಿನ ಸಾಹಿತ್ಯಾಭಿರುಚಿಗೆ, ಸಾಹಿತ್ಯರಚನೆಗೆ ಸೋಪಾನವಾಯಿತು.

ವೈಯಕ್ತಿಕವಾಗಿ ನಮ್ಮ ಸಂಸಾರದ ಸಂಪೂರ್ಣ ಹೊಣೆ ನನ್ನ ಹಿರಿಯಣ್ಣನ ತಲೆಯ ಮೇಲೆ ಬಿದ್ದಿತ್ತು. ಆ ಜವಾಬ್ದಾರಿಯ ಸಿಂಹಪಾಲನ್ನು ತನ್ನ ಮೇಲೆ ಹಾಕಿಕೊಂಡು ನಿರ್ವಹಿಸಿದವರು ನನ್ನ ಅತ್ತಿಗೆ ವೆಂಕಟಲಕ್ಷ್ಮಿಯವರು. ಅಣ್ಣನ ಪಾಲಿಗೆ ಆಕೆ ಬರಿಯ ಧರ್ಮಪತ್ನಿಯಾಗಿಲ್ಲ, ಅವರು ಅಣ್ಣನ 'ಆತ್ಮಸಖಿ' ಎಂದರೆ ಆಶ್ಚರ್ಯವಿಲ್ಲ.

ಅಣ್ಣನಿಂದ ನಾನು ಕಲಿತ ಪಾಠ 'ಸಾಧನೆಗಿಂತ ಮಿಗಿಲಾದ ಪ್ರಯತ್ನ ಯಾವುದೂ ಇಲ್ಲ. ಸಾಧನೆಯ ಮುಂದೆ ಯಾವ ವಶೀಲಿಯೂ ಬೇಕಾಗಿಲ್ಲ.'

ಅಣ್ಣನ 'ಬದ್ಧ ಪ್ರಮಿತ್ಯೂಸ್' ಪುಸ್ತಕ, ಕನ್ನಡ ಛಂದಸ್ಸು ಪುಸ್ತಕಗಳು ಅಂಚೆಯಲ್ಲಿ ಬಂದಾಗ ಮನೆಮಂದಿಯೆಲ್ಲ ನಾ ಮೊದಲು ಓದುವುದು, ತಾನೆಂದು ಕೂಗಾಟ. ಗೆಲುವು ನನಗೇ.

ಅನೇಕ ಸನ್ಮಾನಸಮಾರಂಭ, ಪ್ರಶಸ್ತಿಪ್ರದಾನ ಕಾರ್ಯಕ್ರಮಗಳಲ್ಲೂ ನಾನು ಕಾಣುತ್ತಿದ್ದುದು ಅಣ್ಣನ ಅದೇ ವಿನೀತಭಾವ, ಸುಂದರ ಮುಗುಳ್ನಗೆ. ಮುಲಕನಾಡು ಸಮುದಾಯದ ಬಗ್ಗೆ ಬರೆದ 'ಮುಲಕನಾಡು ಬ್ರಾಹ್ಮಣರು' ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ನಮ್ಮ ಸಮುದಾಯದ ಜನ ಹರ್ಷಭರಿತರಾಗಿ ನನ್ನೊಡನೆ ಅವರು ಹಂಚಿಕೊಂಡ ಮಾತುಗಳು ಅವಿಸ್ಮರಣೀಯ.

ಮೈಸೂರಿಗೆ ಹೋದಾಗಲೆಲ್ಲ ನನ್ನನ್ನು ಸೂಜಿಗಲ್ಲಿನಂತೆ ಸೆಳೆಯುವುದು ನನ್ನ ಅಣ್ಣನವರ ಪುಸ್ತಕಸಂಗ್ರಹ.

ನನ್ನ ಅಣ್ಣನ ನಾಲ್ಕು ಮಕ್ಕಳೂ ಒಳ್ಳೆಯ ವಿದ್ಯಾವಂತರು. ಎಲ್ಲರಿಗೂ ಮದುವೆಯಾಗಿ ನೆಮ್ಮದಿಯಿಂದಿದ್ದಾರೆ. ಬಾಲ್ಯದಲ್ಲಿ ಅವರೊಡನೆ ನನ್ನ ಒಡನಾಟದಲ್ಲಿ ಅನೇಕ ತಮಾಷೆಯ ಪ್ರಸಂಗಗಳೂ ಉಂಟು. ಆಗಿಂದಾಗ್ಗೆ ಆ ಹಾಸ್ಯಭರಿತ ಘಟನೆಗಳು ನೆನಪಿಗೆ ಬಂದು ಇಂದಿಗೂ ನಗೆ ಉಕ್ಕಿಸುತ್ತವೆ.

ಇತ್ತೀಚಿನ ದಿನಗಳಲ್ಲಿ ನಾನು ನನ್ನ ಗುರುಗಳಿಗೆ ಒಂದು ಸನ್ಮಾನಸಮಾರಂಭವನ್ನು ಏರ್ಪಡಿಸಿದ್ದೆ. ಆ ದಿನ ವೇದಿಕೆಯಲ್ಲಿ ನನ್ನ ಅಣ್ಣ ನನ್ನನ್ನು ಮೆಚ್ಚಿ ಆಡಿದ ಮಾತುಗಳು ನನ್ನ ಜೀವಮಾನ ಪೂರ್ತಿ ಕಟ್ಟಿಕೊಟ್ಟ ಬುತ್ತಿಯಾಯಿತು. ಗುರು ದ್ರೋಣಾಚಾರ್ಯರು

ಗುರುದಕ್ಷಿಣೆ ಕೇಳಲಿಲ್ಲ, ಅಂದು ಆಶೀರ್ವದಿಸಿದರು. ನನ್ನಂತಹ ಹುಲ್ಲುಕಡ್ಡಿಗೆ ಅಷ್ಟು ಸಾಕು. ಅಣ್ಣ ಮೇರುಪರ್ವತ. ಆ ಪರ್ವತದ ತಪ್ಪಲಿನಲ್ಲಿ ಬೆಳೆದ ಹುಲ್ಲು ನಾವು. ಅಣ್ಣನ ಅದ್ವಿತೀಯ ಸಾಧನೆಗೆ ನನ್ನ ತಂದೆತಾಯಿಗಳು ಅಂತರಿಕ್ಷದಿಂದಲೇ ಆಶೀರ್ವದಿಸುತ್ತಾರೆ. ನನ್ನ ತವರಿನ ಕುಡಿ ಮಹಾವೃಕ್ಷಗಳನ್ನೊಳಗೊಂಡ ಮೇರು.

ಪ್ರೀತಿಯ 'ಅಣ್ಣ'

ಟಿ.ವಿ.ಹರಿಪ್ರಿಯಾ

'ಅಣ್ಣ' ಎಂದೇ ಸಂಬೋಧಿಸುವ ನಾವು ನಾಲ್ವರು ಒಡಹುಟ್ಟಿದವರು. ಎಂದೂ ಅಣ್ಣನ ಹಾಗೆಯೇ ತಂದೆಯನ್ನು ಕಂಡಿದ್ದೇವೆ. ಅದರಲ್ಲೂ ನನಗೆ ಬಹಳ ಚಿಕ್ಕಂದಿನಿಂದಲೂ ಅದೇಕೋ ನನ್ನ ತಂದೆಯವರನ್ನು ಕಂಡರೆ ಬಲು ಇಷ್ಟ, ಗೌರವ, ಅಭಿಮಾನ. 'ಅಣ್ಣ' ಎಂದಾಕ್ಷಣ ನನ್ನ ಕಣ್ಣ ಮುಂದೆ ಬರುವ ಚಿತ್ರ ಅವರ ಮಾತೃ ಹೃದಯ. ತಾಯಿಗಿಂತ ಒಂದು ಕೈ ಮಿಗಿಲಾಗಿ ತಂದೆಯ ಮೇಲಣ ಪ್ರೀತಿ ಅಧಿಕ. ಅವರು ನಮ್ಮನ್ನು ಸಾಕುತ್ತಿದ್ದುದು ನಮಗೆ ಕಷ್ಟದ ಪರಿವೆಯೇ ಗೊತ್ತಾಗದಂತೆ. ಅವರಿಗೆ ಬರುತ್ತಿದ್ದ ಆದಾಯದಲ್ಲಿ ಅವರ ತಂದೆ ತಾಯಿಯರ ಪೋಷಣೆ, ತಂಗಿಯರ ಮದುವೆ -ಇವೆಲ್ಲವನ್ನೂ ನಿಭಾಯಿಸಿ ನಮ್ಮನ್ನೂ ಯಾವುದೇ ಕೊರತೆ ಇಲ್ಲದಂತೆ ನೋಡಿಕೊಳ್ಳುತ್ತಿದ್ದರು. ನಾವು ಎಷ್ಟೇ ತಪ್ಪು ಮಾಡಿದ್ದರೂ ಒಮ್ಮೆಯೂ ಕೈ ಎತ್ತಿ ಬೆದರಿಸಿದವರಲ್ಲ. ಆದರೂ ಸಣ್ಣಪುಟ್ಟ ಕಾರಣಗಳಿಗಾಗಿ ನನ್ನನ್ನು ಬೈದರೆ, ಎಂದೂ ಬೈಸಿಕೊಳ್ಳದಿದ್ದ ನನ್ನ ದುಃಖ ಹೇಳತೀರದು. ಅವರ ಮೇಲಿನ ಸಿಟ್ಟಿಗಾಗಿ ಅಲ್ಲ, ನನ್ನ ತಪ್ಪಿನ ಅರಿವಿಗಾಗಿ. ಅವರು ನಿತ್ಯ ನಿರಂತರ ಬರವಣಿಗೆಯಲ್ಲಿ ತಲ್ಲೀನರಾದಾಗ ನನಗೆ ಮನದಲ್ಲಿ ಅತ್ಯಂತ ಗೌರವಭಾವನೆ. ಅದರೊಂದಿಗೆ ನಾನು ಅವರಂತೆ ಹುಲ್ಲುಕಡ್ಡಿಯಷ್ಟೂ ಸಾಧನೆ ಮಾಡಿಲ್ಲವೆಂಬುದರ ಕೊರತೆ ನನ್ನಲ್ಲಿ ಸೇರಿಹೋಗಿದೆ. ಅವರ ಕೆಲವು ಭಾಷಣಗಳನ್ನು ಕೇಳಿದ ನಾನು ಅವರ ಮಾತಿನ ಧಾಟಿ, ಅಲ್ಲಿಯ ಸ್ಪಷ್ಟತೆ, ನಿಖರತೆಯನ್ನು ಬಹಳ ಮೆಚ್ಚುತ್ತೇನೆ. ಅದು ನನ್ನ ತಂದೆಯೆಂದು ಅಲ್ಲ, ಒಬ್ಬ ಸಾಹಿತಿಯೆಂದು. ನಾನು ಕಂಡಂತೆ ಅವರು ಒಮ್ಮೆಯೂ ನನ್ನ ತಾಯಿಯನ್ನು ಹೆಸರು ಹಿಡಿದು ಕರೆದವರಲ್ಲ. "ರೀ, ಮೇಡಂ" ಎಂದೇ ಸಂಬೋಧಿಸುತ್ತಾರೆ. ಇದು ಅವರ ಮನದಾಳದಿಂದ ಹೊರಹೊಮ್ಮುವ ಮಾತು. ಅವರಿಗೆ ಕೋಪ ತುಸು ಹೆಚ್ಚಾದರೂ ಯಾರ ಮುಂದೆಯೂ ತೋರ್ಪಡಿಸಿಕೊಂಡವರಲ್ಲ. ಮಿತ್ರರೊಂದಿಗೆ ಮಾತುಕತೆಗಳಿದ್ದರೆ ಅವರ ನಗು ಹೃದಯದೊಳಗಿನಿಂದ ಪುಟಿದೇಳುತ್ತದೆ.

ನನ್ನ ತಂದೆಯವರು ಅವರ ವೃತ್ತಿಜೀವನದಲ್ಲಿ ಎಂದೂ ಐಷಾರಾಮಿ ಜೀವನದ ಬಗ್ಗೆ ಒಲವು ತೋರಿಸಿದವರಲ್ಲ. ಸ್ವಂತ ವಾಹನದ ಬಗ್ಗೆ ಆಸೆ ವ್ಯಕ್ತಪಡಿಸಿದವರಲ್ಲ. ಇಂದಿಗೂ ಸಿಟಿ ಬಸ್ಸನ್ನೇ ಅವಲಂಬಿಸುವ ಅವರ ಜೀವನ ಸರಳವ್ಯಕ್ತಿತ್ವಕ್ಕೆ ಹಿಡಿದ

ಕನ್ನಡಿಯಾಗಿದೆ. ಅವರಿಗೆ ಬೆಂಡೇಕಾಯಿಯೆಂದರೆ ಪಂಚಪ್ರಾಣ. ಒಮ್ಮೆ ನಮ್ಮ ತಾಯಿಯವರು ಊರಿನಲ್ಲಿಲ್ಲದ ಕಾರಣದಿಂದ ಬೆಂಡೇಕಾಯಿ ಹುಳಿ ಮಾಡಿದ ಪ್ರಸಂಗ ಇನ್ನೂ ಕಣ್ಣಿಗೆ ಕಟ್ಟಿದಂತಿವೆ. ಅದನ್ನು ನಮಗೆಲ್ಲಾ ಬಡಿಸಲು ಸಿದ್ಧರಾದಾಗ ಬೆಂಡೇಕಾಯಿಯ ಹೋಳುಗಳು ಒಂದಕ್ಕೊಂದು ಅಂಟಿಕೊಂಡು ಜೊತೆಜೊತೆಯಲ್ಲೇ ಬರುತ್ತಿರುವುದನ್ನು ಕಂಡು ನಾನು, ನನ್ನ ಚಿಕ್ಕ ಅಕ್ಕ ಚಿತ್ಕಲಾ ಕಿಸಕ್ಕನೆ ನಕ್ಕಾಗ, ಅವರಿಂದ ಬೈಸಿಕೊಂಡ ಚಿತ್ರ ಇನ್ನೂ ಹಚ್ಚಹಸುರಾಗಿಯೇ ಇದೆ.

ಮತ್ತೊಂದು ಘಟನೆಯನ್ನು ನಾನಿಲ್ಲಿ ಸ್ಮರಿಸಲೇಬೇಕು. ಅವರ ಮಕ್ಕಳಾಗಿ ನಾವು ನಾಲ್ವರಿಗೂ ತಂದೆ ತಾಯಿಯ ಬಗ್ಗೆ ಗೌರವವಿದೆಯೆಂದೂ ಅದನ್ನು ಅವರಿಗೆ ತೋರ್ಪಡಿಸಬೇಕೆಂದೂ ಬಲವಾದ ಆಸೆ ಇತ್ತು. ಅದರಂತೆ ಒಮ್ಮೆ ಅವರಿಬ್ಬರೂ ಹೊರಹೋಗಿದ್ದಾಗ ನಾವು ನಾಲ್ವರೂ ಸೇರಿ ಅವರಿಬ್ಬರ ಫೋಟೋಗಳಿಗೆ ಅತ್ಯಂತ ಭಕ್ತಿ ಭಾವದಿಂದ ಹೂವಿನ ಹಾರ ಹಾಕಿ, ಗಂಧದ ಕಡ್ಡಿ ಹಚ್ಚಿ, ಮಂಗಳಾರತಿ ಮಾಡಿ ಸಂತೋಷ ವ್ಯಕ್ತಪಡಿಸುತ್ತಿರುವಾಗಲೇ ಅವರ ಆಗಮನವಾಯಿತು. ನಾವು ಮಾಡಿದ ಅಲಂಕಾರವನ್ನು ನೋಡಿ ಸಂತೋಷಪಡುತ್ತಾರೆಂದು ಭಾವಿಸಿ ಹೆಮ್ಮೆಯಿಂದ ಬೀಗುತ್ತಿದ್ದ ನಮಗೆ ನಮ್ಮ ತಾಯಿಯವರಿಂದ ಬೈಗುಳಗಳ ಸುರಿಮಳೆಯೇ ಆಯಿತಾದರೂ ನಮ್ಮ ತಂದೆಯವರ ಮುಖಭಾವದಲ್ಲಿ ಮಾತ್ರ ಮಂದಹಾಸವಿತ್ತೆಂದು ಬೇರೆ ಹೇಳಬೇಕಾಗಿಲ್ಲ!

ನಾವು ನಾಲ್ವರಿಗೂ ವಯಸ್ಸಿನಲ್ಲಿ ಒಂದೆರಡು ವರ್ಷ ಮಾತ್ರವೇ ವ್ಯತ್ಯಾಸವಾದ್ದರಿಂದ ತರಗತಿಗಳಲ್ಲೂ ಅಷ್ಟೇ ವ್ಯತ್ಯಾಸವಿತ್ತು. ಮನೆಗೆ ಯಾರಾದರೂ ಅತಿಥಿಗಳು ಬಂದರೆ, ನಿಮ್ಮ ಮಕ್ಕಳು ಏನೇನು ಓದುತ್ತಿದ್ದಾರೆಂದರೆ, ನನ್ನ ತಂದೆ ನಮ್ಮ ಕಡೆಗೆ ಬೆಟ್ಟುಮಾಡಿ ಇವಳು... ಎಂದು ಅಲ್ಲಿಗೇ ನಿಲ್ಲಿಸುತ್ತಿದ್ದರೆ, ನಾವು ನಮ್ಮ ತರಗತಿ ಹೇಳಿ ಪೂರ್ಣಗೊಳಿಸುತ್ತಿದ್ದೆವು. ಮುಂದಿನ ವ್ಯಾಸಂಗಕ್ಕೆ ನಾವು ನಾಲ್ವರೂ ನಮ್ಮ ನಮ್ಮಲ್ಲಿಯೇ ಚರ್ಚಿಸಿ ವಿಷಯಗಳನ್ನು ಆಯ್ಕೆಮಾಡಿಕೊಳ್ಳುತ್ತಿದ್ದೆವು. ಅಷ್ಟು ಸ್ವಾತಂತ್ರ್ಯವನ್ನು ನಮಗೆ ಕೊಟ್ಟಿದ್ದರೆಂಬುದಕ್ಕೆ ಎರಡು ಮಾತಿಲ್ಲ.

ಮೈಸೂರಿನ ಮಾನಸಗಂಗೋತ್ರಿಯ ಕನ್ನಡ ಅಧ್ಯಯನಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದ ಸಂದರ್ಭದಲ್ಲಿ ಅವರಿಗೆ ಬಡ್ತಿ ದೊರೆತು ಮಂಗಳೂರಿಗೆ ವರ್ಗವಾಯಿತು. ಅದರಂತೆ ಅಧ್ಯಯನಸಂಸ್ಥೆಯಲ್ಲಿ ಬೀಳ್ಕೊಡುಗೆ ಸಮಾರಂಭವೂ ಜರುಗಿತು. ಮನೆಗೆ ಬಂದು ಮಂಗಳೂರಿನ ಪ್ರಯಾಣಕ್ಕೆ ಎಲ್ಲ ಪದಾರ್ಥಗಳನ್ನು ಜೋಡಿಸಿಟ್ಟುಕೊಂಡಿದ್ದಾಯ್ತು. ರಾತ್ರಿ ಹತ್ತು ಗಂಟೆಯ ಬಸ್ಸಿಗೆ ಹೊರಡಬೇಕಾಗಿದ್ದವರು ೮ ಗಂಟೆಗೆ ತಮ್ಮ ನಿರ್ಧಾರವನ್ನು ಬದಲಿಸಿ ನಾನು ನಿಮ್ಮೊಂದಿಗೇ ಇರುತ್ತೇನೆಂದರು. ಅವರಿಗೆ ಅಲ್ಲಿಯ ಪದವಿಗಿಂತಲೂ ನಮ್ಮೆಲ್ಲರೊಂದಿಗೆ ಉಳಿಯುವುದೇ ಮುಖ್ಯವಾಗಿತ್ತು. ನಾನು ಕನ್ನಡ ಎಂ.ಎ. ಓದುವಾಗ ನನ್ನ ತಂದೆಯೇ ನನಗೆ ಗುರುಗಳಾಗಿದ್ದರು. ಹಾಗೆಯೇ ನಾನೂ ಶಿಕ್ಷಕಿಯಾಗಿರುವುದರಿಂದ ಹತ್ತನೇ ತರಗತಿಯ ಪಠ್ಯಪುಸ್ತಕದಲ್ಲಿ

ಅವರು ಬರೆದಿರುವ 'ಯೇಸುವಿನ ಕೊನೆಯ ದಿನ' ಎಂಬ ಪಾಠವನ್ನು ವಿದ್ಯಾರ್ಥಿಗಳಿಗೆ ಬೋಧಿಸುತ್ತಿದ್ದರೆ ನನಗದೇನೋ ಹೆಮ್ಮೆ.

ಇಂದಿಗೆ ನನ್ನ ಮದುವೆಯಾಗಿ ೨೦ ವರ್ಷಗಳಾಗಿವೆ. ನಾನಿರುವ ಕೋಲಾರಕ್ಕೆ ಅವರು ಬಂದಾಗ, ನನ್ನ ಸಂಸಾರ ನೋಡಿ ಸಂತೃಪ್ತಭಾವನೆ ವ್ಯಕ್ತಪಡಿಸುವುದನ್ನು ಕಂಡು ನನ್ನ ಮನಸ್ಸು ಹಿಗ್ಗುತ್ತದೆ. ಇಲ್ಲಿಗೆ ಬಂದಾಗಲೂ ಅವರೊಂದಿಗೆ ಪುಸ್ತಕಗಳೂ ಪ್ರೂಫ್‌ಗಳೂ ಇದ್ದೇಇರುತ್ತವೆ. ಬಸ್ಸು ರೈಲಿನಲ್ಲಿ ಪ್ರಯಾಣಿಸುತ್ತಿರುವಾಗಲೂ ಅವು ಇರಲೇಬೇಕು. ಸಮಯವನ್ನು ವ್ಯರ್ಥಮಾಡುವ ಸ್ವಭಾವದವರಲ್ಲ. ಕೋಲಾರದಿಂದ ಮೈಸೂರಿಗೆ ಹೊರಟುನಿಂತ 'ಅಣ್ಣ' ನನ್ನ ಇಬ್ಬರು ಮಕ್ಕಳಿಗೂ ಗರಿಗರಿಯಾದ ೨ ಹತ್ತು ರೂಪಾಯಿಯ ನೋಟುಗಳನ್ನು ಪ್ರೀತಿಪೂರ್ವಕವಾಗಿ ಕೊಡುತ್ತಾರೆ(ಅವರು ಕೊಡುವ ಆ ನೋಟುಗಳು ನಮಗೆ ಸಾವಿರರೂಪಾಯಿ ಇದ್ದಂತೆ!). ನನ್ನನ್ನು ಪ್ರೀತಿಯಿಂದ ಅಪ್ಪಿಕೊಂಡು ತಲೆ ಸವರುವಾಗ ನನ್ನ ಕಣ್ಣಾಲಿಗಳಲ್ಲಿ ನೀರು ಗೊತ್ತಿಲ್ಲದೆಯೇ ತುಂಬುತ್ತದೆ. ಇಂತಹ ಎಷ್ಟೋ ಪ್ರಸಂಗಗಳು ನಡೆದಿದ್ದು ಕೆಲವನ್ನು ಮಾತ್ರವೇ ಮನಬಿಚ್ಚಿ ಹೇಳಿದ್ದೇನೆ. ನಮ್ಮ ನಾಲ್ವರಿಗೂ ಸುಭಾಷಿತಸಂಗ್ರಹದ 'ಕನ್ನಡ ಚೆನ್ನುಡಿ' ಗ್ರಂಥವನ್ನು ಅರ್ಪಿಸಿದ ಇಂಥ ತಂದೆಯನ್ನು ಪಡೆದ ನಾವು ನಿಜಕ್ಕೂ ಧನ್ಯರು!

'ಮೇಷ್ಟ್ರು' ಮಾವ!

ಎಲ್.ಎಸ್.ಶಿವಮೂರ್ತಿ

ಅಂದು ಭಾನುವಾರ. ನಾನು ನನ್ನ ಹೊಸ ಟಿ.ವಿ.ಎಸ್. ಮೊಪೆಡ್ಡನ್ನು ಹೊರಗೆ ತೊಳೆಯುತ್ತಿದ್ದೆ. ನಮ್ಮ ಕುಟುಂಬಸ್ನೇಹಿತರಾದ ಛಾಯಾಪತಿಶಾಸ್ತ್ರಿ ದಂಪತಿಗಳು ನಮ್ಮ ಮನೆಗೆ ಬಂದವರು, ನನ್ನ ತಂದೆಯೊಂದಿಗೆ ಲೋಕಾಭಿರಾಮವಾಗಿ ಮಾತಾಡ ತೊಡಗಿದ್ದರು. ನನ್ನ ಕೆಲಸ ಮುಗಿದು ಒಳಹೊಕ್ಕ ನನ್ನನ್ನು "ವೆಂಕಟಾಚಲ ಶಾಸ್ತ್ರಿಗಳು ನಿನಗೆ ಗೊತ್ತಾ?" ಎಂದು ನನ್ನ ತಂದೆ ಕೇಳಿದಾಗ, ಸಾಹಿತ್ಯವಿದ್ಯಾರ್ಥಿಯಾದ ನಾನು ಸಹಜವಾಗಿ ಅವರು ಮಾನಸಗಂಗೋತ್ರಿಯಲ್ಲಿ ಕನ್ನಡ ಪ್ರೊಫೆಸರ್ ಎಂದೂ ಕನ್ನಡ ಸಾಹಿತ್ಯಕ್ಷೇತ್ರದಲ್ಲಿ ಪ್ರಸಿದ್ಧಿ ಪಡೆದಿರುವ ವಿದ್ವಾಂಸರೆಂದೂ ಹೇಳಿ, ಕುತೂಹಲಕ್ಕಾಗಿ ಯಾಕೆಂದು ಕೇಳಿದೆ. ಆಗ ಛಾಯಾಪತಿಗಳು "ಅವರ ಮಗಳು ಮದುವೆಗೆ ಇದ್ದಾಳೆ, ನಿನಗೆ ನೋಡೋಣ ಅಂತ ಬಂದಿದ್ದೇವೆ" ಎಂದರು. ಅವರ ಮಾತು ಕೇಳಿ ನನಗಂತೂ ಆಶ್ಚರ್ಯವಾಯಿತು!

ಋಣಾನುಬಂಧ ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲವಂತೆ! ಜಾತಕಗಳು ಕುದುರಿ, ಒಂದು ದಿನ ಡಾ. ಶಾಸ್ತ್ರಿಗಳು ತಮ್ಮ ಮಾವನವರೊಂದಿಗೆ ಮಗಳನ್ನು ಕರೆದುಕೊಂಡು ದಿಢೀರ್ ಪ್ರತ್ಯಕ್ಷರಾದಾಗ ಸಂತೋಷ ಗಾಬರಿಗಳು ಒಟ್ಟಿಗೇ ಆದವು. ನಾಡಿನ ಹಿರಿಯ ಸಾಹಿತಿಯೊಬ್ಬರು ನಮ್ಮನೆಗೆ ಬಂದಾಗ, ಸಂತೋಷದಿಂದ ಅವರನ್ನು ಸ್ವಾಗತಿಸಿದೆವು. ಅತಿಥಿ ಉಪಚಾರಕ್ಕೆ ನನ್ನ ತಾಯಿ ಅಣಿಯಾದರು. ಮಾತುಕತೆಗಳು ಮುಂದುವರಿದು ಸ್ವಲ್ಪ ಹೊತ್ತಿನನಂತರ, ಡಾ.ಟಿ.ವಿ.ವಿ. ಅವರು ಪ್ರೀತಿಯಿಂದ ನನ್ನನ್ನು ಬಾಚಿ ತಬ್ಬಿ ಕೊಂಡು, ಬೆನ್ನುತಟ್ಟಿ ಹೊರನಡೆದರು. ಛಾಯಾಪತಿಗಳು "ಅವರಿಗೆ ನಿಮ್ಮ ಹುಡುಗ, ಸಂಬಂಧ ಇಷ್ಟವಾಗಿದೆ. ನಿಮ್ಮ ಅಭಿಪ್ರಾಯ ಕೇಳ್ತಿದ್ದಾರೆ" ಎಂದಾಗ, ನನ್ನ ತಂದೆ ಪ್ರಶ್ನಾರ್ಥಕವಾಗಿ ನನ್ನ ಮುಖ ನೋಡಿದರು. ಆಗ ನಾನು ಗಂಭೀರವಾಗಿ "ನೋಡಿ, ನನ್ನ ಕೆಲಸ ಟೆಂಪರರಿ, ಸಂಬಳ ಕೇವಲ ೧೪೮೦ ರೂಪಾಯಿ, ಜೀವನ ಕಷ್ಟ" ಎಂದೆ. ಬಹುಶಃ ನಾನು ಖಾಯಂ ಉಪನ್ಯಾಸಕ ಎಂದವರು ಭಾವಿಸಿದ್ದರು ಎಂಬ ಅನುಮಾನ ನನ್ನದಾಗಿತ್ತು. ಛಾಯಾಪತಿಗಳು ಈ ಸಂಗತಿಯನ್ನು ಶಾಸ್ತ್ರಿಗಳ ಗಮನಕ್ಕೆ ತಂದಾಗ, ಅವರು ಮರುಮಾತನಾಡದೆ, ಮಗಳ ಭವಿಷ್ಯವನ್ನೂ ಲೆಕ್ಕಿಸದೆ, ಮೀನಮೇಷ ಎಣಿಸದೆ, ವಿವಾಹಕ್ಕೆ ಮುಂದಾದದ್ದು ನನಗಿವತ್ತಿಗೂ ಅಚ್ಚರಿಯ ಸಂಗತಿಯಾಗಿದೆ.

ನನ್ನ ಮದುವೆಯಾಗಿ ಸುಮಾರು ಒಂಬತ್ತು ವರ್ಷಗಳ ಕಾಲ ನನ್ನ ಉಪನ್ಯಾಸಕ ವೃತ್ತಿ ಖಾಯಂ ಆಗದೆ, ಎರಡು ಮಕ್ಕಳ ತಂದೆಯಾದರೂ ನನ್ನ ಹಾಗೂ ನನ್ನ ಕುಟುಂಬದ ವಿಷಯದಲ್ಲಿ ಅಪಸ್ವರ ಎತ್ತದೆ, ಎಂದಿನಂತೆ ಹಿಂದಿನ ಪ್ರೀತಿ ವಿಶ್ವಾಸದಲ್ಲೇ ನನ್ನನ್ನು ಕಂಡರು. ನಮ್ಮ ಮನೆಗೆ ಆಗಿಂದಾಗ್ಗೆ ಬಂದು ಒಂದೆರಡು ರಾತ್ರಿ ನಮ್ಮೊಂದಿಗಿದ್ದು ಸಂತೋಷವಾಗಿ ಕಾಲಕಳೆದು ಹೋಗುವುದು ಇಂದಿಗೂ ಪದ್ಧತಿಯಾಗಿದೆ(ಡಾ. ಟಿ.ವಿ.ವೆಂಕಟಾಚಲ ಶಾಸ್ತ್ರಿಗಳು ನನಗೆ ಹೆಣ್ಣು ಕೊಟ್ಟ ಮಾವ ಆದರೂ ನಾನವರನ್ನು ಇಂದಿಗೂ ಗೌರವದಿಂದ 'ಸಾರ್' ಎಂದೇ ಸಂಬೋಧಿಸುವುದು). ಹಾಗವರು ಬಂದಾಗಲೆಲ್ಲ ನನ್ನೊಂದಿಗೆ ಸಾಹಿತ್ಯಿಕಚರ್ಚೆಗಳನ್ನು ನಡೆಸುವುದುಂಟು. ನಾನು ನನ್ನ ಬೋಧನಾ ವಿಷಯಕ್ಕೆ ಸಂಬಂಧಿಸಿದ ಅನೇಕ ಮಾಹಿತಿಗಳನ್ನು ಅವರಿಂದ ಪಡೆದಿರುವುದುಂಟು. ನನಗೆ ಬೇಕಾದ, ನನ್ನಲ್ಲಿಲ್ಲದ ಕೆಲವು ಅಪರೂಪದ ಕೃತಿಗಳನ್ನು ಅವರಿಂದ ಪಡೆದಿದ್ದೇನೆ. ಒಂದು ರೀತಿಯಲ್ಲಿ ಪ್ರತ್ಯಕ್ಷವಾಗಿ ನನಗೆ ವಿದ್ಯಾಗುರುಗಳಾಗಿಲ್ಲದಿದ್ದರೂ ಪರೋಕ್ಷವಾಗಿ ವಿದ್ಯಾಗುರುಗಳೆಂದು ನಂಬಿದವನು ನಾನು. ಹೀಗೆ ಅವರು ನನಗೆ 'ಮಾವ' ಎನ್ನುವುದಕ್ಕಿಂತಲೂ 'ಮೇಷ್ಟ್ರು' ಎಂಬುದೇ ಸರಿ ಅನ್ನಿಸುತ್ತದೆ!

ನನ್ನ ಇಬ್ಬರು ಮಕ್ಕಳಿಗೆ 'ಅದ್ರಿಜಾ' ಮತ್ತು 'ಸುಧಾಂಶು' ಎಂಬ ಹೆಸರನ್ನು ಇಟ್ಟವರು ನನ್ನ ಮಾವನವರೆ. ನನ್ನ ಮಗಳು 'ಅದ್ರಿಜಾ' ಅವರಿಗೆ ಬಹಳ ಅಚ್ಚುಮೆಚ್ಚು. ಕಾರಣ ಅವಳು ಅವರ ಮನೆಯ ಚೊಚ್ಚಲ ಮೊಮ್ಮಗಳು. ತಮ್ಮ ಚಿಂತನಗಳ ಸಂಗ್ರಹ 'ಮೆಲುಗಾಳಿಯ ಮಾತುಗಳು' ಕೃತಿಯ ಮೊದಲ ಆವೃತ್ತಿಯನ್ನು ಅದ್ರಿಜಾಳಿಗೆ ಅರ್ಪಿಸಿರುವುದುಂಟು!

ನಂತರದ ವರ್ಷಗಳಲ್ಲಿ ನನ್ನ ಕೆಲಸ ಖಾಯಂಗೊಂಡು, ಒಂದು ನಿವೇಶನ ಪಡೆದು, ಮನೆಯನ್ನು ಕಟ್ಟಿದಾಗ ನನ್ನ ಮಾವನವರು ಪಟ್ಟ ಸಂಭ್ರಮ ಹೇಳತೀರದು. ಅವರ ಮುಖದಲ್ಲಿ ಅದೆಂಥದೋ ಸಂತೃಪ್ತಿ.

ನಾ ಕಂಡಂತೆ, ಅವರಿಗೆ ಮುಖಕ್ಷೌರ ಕಡ್ಡಾಯ. ಶುಭ್ರ ವಸ್ತ್ರಧಾರಿ, ಕಾಫಿಪ್ರಿಯರು, ಮಿತಪ್ರಮಾಣದ ತಿಂಡಿ-ಊಟ, ತುಪ್ಪ-ಮೊಸರು ಕಡ್ಡಾಯ ಮತ್ತು ಆರೋಗ್ಯದ ಬಗ್ಗೆ ತೀವ್ರ ಎಚ್ಚರಿಕೆ ಹಾಗೂ ಅಧ್ಯಯನಶೀಲರು.. ಸಂಧ್ಯಾವಂದನೆ, ಪೂಜೆ, ವ್ರತ ಇವುಗಳ ಬಗ್ಗೆ ಆಸಕ್ತಿ ಕಡಿಮೆ. ಅನಿವಾರ್ಯಕಾರಣಗಳಿಂದ ದೇವಸ್ಥಾನ ಪುಣ್ಯಕ್ಷೇತ್ರಗಳಿಗೆ ಭೇಟಿ ನೀಡಿದರೆ, ಅಲ್ಲಿನ ತೀರ್ಥ ಪ್ರಸಾದ ಮಂಗಳಾರತಿಗಳಿಗೆ ಮುಗಿಬೀಳದೆ ಅಲ್ಲಿನ ಪೌರಾಣಿಕ, ಐತಿಹಾಸಿಕ ಹಿನ್ನೆಲೆಗಳ ಕುರಿತು ಅಧ್ಯಯನ, ಚಿಂತನೆ ಮತ್ತು ಸಂಶೋಧನೆ ನಡೆಸುತ್ತಾರೆ. ಅಲ್ಲಿನ ಶಿಲ್ಪಕಲೆ, ಕೆತ್ತನೆ ಮತ್ತು ಶಾಸನಗಳ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸುತ್ತಾರೆ.

ಮಾವನವರು ನಾನಾ ಸಾಹಿತ್ಯಪ್ರಶಸ್ತಿ ಗೌರವಗಳಿಗೆ ಪಾತ್ರರಾಗಿದ್ದಾರೆ. ಆಗೆಲ್ಲ ತಮ್ಮ ಸಂತಸವನ್ನು ಮನೆಮಂದಿಯೊಂದಿಗೆ, ಬಂಧು-ವರ್ಗದೊಂದಿಗೆ, ಗೆಳೆಯರೊಂದಿಗೆ

ಹಂಚಿಕೊಂಡು ಸಂಭ್ರಮಪಟ್ಟಿರುವುದನ್ನು ನಾನು ಗಮನಿಸಿದ್ದೇನೆ. ಜೊತೆಗೆ ಇಲ್ಲದಿರುವ ಗುರುಗಳನ್ನು, ತಂದೆ-ತಾಯಿಗಳನ್ನು ಜ್ಞಾಪಿಸಿಕೊಂಡು ದುಃಖಿಸಿರುವುದನ್ನು ಕಂಡಿದ್ದೇನೆ.

ಅವರು ಯಾವುದೇ ಪ್ರಶಸ್ತಿ ಗೌರವಗಳಿಗೆ ಲಾಬಿ ನಡೆಸಿದವರಲ್ಲ; ಹಂಬಲಿಸಿದವರಲ್ಲ, ದುಂಬಾಲು ಬಿದ್ದವರಲ್ಲ. ಶಿಫಾರಸುಗಳಿಗೆ ಹಾತೊರೆದವರಲ್ಲ. ಆದರೆ ಪ್ರಶಸ್ತಿಗಳು ಅರಸಿ ಬಂದಾಗ ಸಂತೋಷದಿಂದ ಸ್ವೀಕರಿಸಿ ಅದಕ್ಕೆ ಕಾರಣಕರ್ತರಾದ ಪೂರ್ವಸೂರಿಗಳನ್ನು ಕೃತಾರ್ಥಭಾವದಿಂದ ಸ್ಮರಿಸಿದ್ದನ್ನು ನೋಡಿದ್ದೇನೆ.

ಶಿಫಾರಸುಗಳಿಗೆ ಹಾತೊರೆಯದ ಅವರು ಶಿಫಾರಸುಗಳನ್ನು ಮಾಡಲೂ ಬಯಸುತ್ತಿರಲಿಲ್ಲ. ಪ್ರೊ.ಜಿ.ಎಸ್.ಸಿದ್ಧಲಿಂಗಯ್ಯ ಅವರು ಕಾಲೇಜು ಶಿಕ್ಷಣ ಇಲಾಖೆಯ ನಿರ್ದೇಶಕರಾಗಿದ್ದಾಗ, ನಾನು ಮುಳಬಾಗಿಲಿನಿಂದ ಕೋಲಾರಕ್ಕೆ ವರ್ಗಾವಣೆ ಪಡೆಯಲು ಶಿಫಾರಸು ಮಾಡುವಂತೆ ಮಾವನವರಲ್ಲಿ ಕೇಳಿದೆ. ಆದರೆ ಅವರು ಸುತರಾಂ ಒಪ್ಪಲಿಲ್ಲ. ಒಬ್ಬರ ಮುಂದೆ ತಲೆಬಾಗುವುದು, ಕೈಕಟ್ಟಿ ನಿಲ್ಲುವುದು, ದುಂಬಾಲು ಬೀಳುವುದು, ಮುಲಾಜಿಗೆ ಒಳಗಾಗುವುದು ಅವರ ಜಾಯಮಾನವಲ್ಲವೆಂದು ನನ್ನ ಶ್ರೀಮತಿ (ಹರಿಪ್ರಿಯಾ) ತಿಳಿಸಿದಾಗ ಮಾವನವರ ಬಗ್ಗೆ ಅಭಿಮಾನ ಗೌರವ ಮತ್ತಷ್ಟು ಹೆಚ್ಚಿತು.

ಮಾವನವರು ನಾಡಿನ ಅನೇಕ ಸಭೆ-ಸಮಾರಂಭಗಳಿಗೆ, ಪ್ರತಿಷ್ಠಿತ ಸಂಘ-ಸಂಸ್ಥೆಗಳಿಗೆ ಅತಿಥಿಗಳಾಗಿ ಆಮಂತ್ರಿತರಾಗಿ ಹೋದ ಸಂದರ್ಭಗಳಲ್ಲಿ ಪ್ರಶಸ್ತಿಪ್ರದಾನ ಸಮಾರಂಭಗಳಲ್ಲಿ ಅವರು ನೀಡಿರುವ ವಿದ್ವತ್‌ಪೂರ್ಣ ಭಾಷಣಗಳನ್ನು ಕೇಳಿ ಸಂತೋಷಪಟ್ಟ ಹಲವು ಮಂದಿಯಲ್ಲಿ ನಾನೂ ಒಬ್ಬ. ಹೇಳಬೇಕಾದ ವಿಷಯ ಅವರಿಗೆ ಮೊದಲೇ ಕರತಲಾಮಲಕವಾಗಿರುತ್ತದೆ. ಜೊತೆಗೆ ಸಂಶಯಕ್ಕೆ, ಗೊಂದಲಕ್ಕೆ ಈಡಾಗದ, ತಡವರಿಸದ ನಿರರ್ಗಳವಾದ ಅವರ ಮಾತುಗಳು ಕೇಳುಗರನ್ನು ಮೂಕವಿಸ್ಮಿತರನ್ನಾಗಿ ಮಾಡಿದ್ದನ್ನು ನಾನು ಗಮನಿಸಿದ್ದೇನೆ. ಅವರ ಸಮಯಪ್ರಜ್ಞೆ, ಕಾರ್ಯತತ್ಪರತೆ, ಜ್ಞಾಪಕಶಕ್ತಿಗಳನ್ನು ನಾನು ಸಾಹಿತ್ಯಿಕ ಸಂದರ್ಭಗಳಲ್ಲಿ ವಿಶೇಷವಾಗಿ ಗಮನಿಸಿದ್ದೇನೆ. ಕೃತಿಗಳಲ್ಲಿ ಮುದ್ರಣದೋಷ, ಮಾತಿನಲ್ಲಿ ಉಚ್ಚಾರಣದೋಷ, ಬರವಣಿಗೆಯಲ್ಲಿ ಕಾಗುಣಿತ ದೋಷ -ಇವುಗಳನ್ನು ಕಂಡರೆ ಅವರು ಕಿಡಿ ಕಾರಿರುವುದುಂಟು.

ಆದರ್ಶದಾಂಪತ್ಯದ ಬದುಕು ನನ್ನ ಮಾವನವರದು. ಗಂಡ-ಹೆಂಡತಿ ಒಬ್ಬರನ್ನೊಬ್ಬರು ಅರ್ಥಮಾಡಿಕೊಂಡು ಜೀವನಪಥ ಸವೆಸಿದವರು, ಪ್ರೀತಿಯಿಂದ ಒಬ್ಬರನ್ನೊಬ್ಬರು ಕಂಡವರು. ಹೆಂಡತಿ-ಮಕ್ಕಳ ಆಸೆ ಆಕಾಂಕ್ಷೆಗಳಿಗೆ ತೊಡರುಗಳನ್ನು ಒಡ್ಡಿದವರಲ್ಲ. ಆಕ್ಷೇಪಣೆಗಳನ್ನು ಮಾಡಿದವರಲ್ಲ. ತಮಗಲ್ಲದ ಹಣಕ್ಕೆ ಹಂಬಲಿಸಿದವರಲ್ಲ. ಅವರ ಸಂಪಾದನೆ ಅವರ ಕುಟುಂಬಕ್ಕೆ ವಿನಿಯೋಗಿಸುವ ಜಾಯಮಾನ ಅವರದು. ಸಾಹಿತ್ಯಕೃಷಿಯ ಸಂಬಂಧದ ಹೊರತಾಗಿ ಮೋಜಿಗೆ ಹೊರಗೆ ಸುತ್ತಾಡಿ ಕಾಲಹರಣ ಮಾಡಿದವರಲ್ಲ. ತಮ್ಮ ಶ್ರೀಮತಿ ಊರಲ್ಲಿಲ್ಲದಾಗ ಒಂಟಿಯಾಗಿ ಮನೆಯಲ್ಲಿದ್ದು, ತಿಂಡಿ ಊಟಗಳಿಗೆ ಹೋಟೆಲುಗಳನ್ನು ವಾರಗಟ್ಟಲೆ ಆಶ್ರಯಿಸಿ ಅಧ್ಯಯನ

ಬರವಣಿಗೆಯಲ್ಲಿ ಮಗ್ನರಾಗಿದ್ದ ಸಂದರ್ಭಗಳನ್ನೂ ತಿಳಿದವನಾಗಿದ್ದೇನೆ. ವಿದೇಶಗಳಲ್ಲಿ ವಿಸಿಟಿಂಗ್ ಪ್ರೊಫೆಸರ್ ಆಗಿ ಕಾರ್ಯ ನಿರ್ವಹಿಸಲು ಅವಕಾಶಗಳು ಒದಗಿ ಬಂದಾಗ ಅವುಗಳನ್ನು ನಿರಾಕರಿಸಿದ್ದುಂಟು.

ಹೀಗೆ ನನ್ನ ಮಾವನವರು ತಂದೆಯಿಲ್ಲದ ನನಗೀಗ ತಂದೆಯಾಗಿ, ಮೇಷ್ಟ್ರಾಗಿ, ಸರಳ ಸಜ್ಜನಿಕೆಯ ಹಿರಿಯ ಚೇತನವಾಗಿ ನನ್ನ ಮತ್ತು ನನ್ನ ಸಂಸಾರದ ಬೆನ್ನಿಗಿದ್ದಾರೆ. ಅವರಿಗೆ ನನ್ನ ನಮಸ್ಕಾರ.

ನಾ ಕಂಡಂತೆ ನನ್ನ ತಂದೆ

ಟಿ.ವಿ.ವತ್ಸಲಾ

ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿಗಳು ಮಹಾವಿದ್ವಾಂಸರು, ಪಂಡಿತರು, ಬುದ್ಧಿಜೀವಿ, ಸ್ನೇಹಶೀಲರು, ಸರಳಜೀವನಕ್ಕೆ ಹೊಂದಿಕೊಂಡಂತೆ ಇರುವ ಸರಳ ಹೃದಯದವರು... ಹೀಗೆ ಅವರ ಸದ್ಗುಣಗಳ ಪಟ್ಟಿ ಬೆಳೆಯುತ್ತಲೇ ಇರುತ್ತದೆ. ಇದು ಹೊರಜಗತ್ತಿಗೆ. ಅವರ ಆಪ್ತರು, ಸ್ನೇಹಿತರು, ಹಿತೈಷಿಗಳು, ಹಿರಿಯರು, ಕಿರಿಯರು ಹಾಗೂ ವಿದ್ಯಾರ್ಥಿಗಳು ಅವರನ್ನು ಕಂಡಂತಹ ದೃಷ್ಟಿ.

ಆದರೆ ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿಗಳು ತಮ್ಮ ಮಕ್ಕಳಿಗೆ ತಂದೆಯಾಗಿ ಕಂಡಂತಹ ರೀತಿಯೇ ಬೇರೆ. ಶಾಸ್ತ್ರಿಗಳ ದೊಡ್ಡಮಗಳಾದ ನಾನು ಅವರಲ್ಲಿ ಶಿಸ್ತು, ಮೃದುಸ್ವಭಾವ, ಪ್ರಾಣಿಪ್ರಿಯತೆಯನ್ನು ಕಂಡವಳು. ಅವರು ಛಲದಿಂದ ಹಿಡಿದ ಕೆಲಸವನ್ನು ಸಾಧಿಸುವವರು. ಆದರೆ ತಮ್ಮ ಅಭಿಪ್ರಾಯವನ್ನು ಯಾರ ಮೇಲೂ ಹೇರುವವರಲ್ಲ. ನಮ್ಮ ಓದಿನ ವಿಚಾರದಲ್ಲೂ ನೀನು ಇದನ್ನೇ ಓದು ಎಂದು ಹೇಳಿದವರಲ್ಲ. ನಾನು ಆಂಗ್ಲ ಸಾಹಿತ್ಯಕ್ಕೆ ಬದಲಾಗಿ ಪತ್ರಿಕೋದ್ಯಮ ತೆಗೆದುಕೊಂಡಾಗ ಸಮಾಧಾನವಿಲ್ಲದಿದ್ದರೂ 'ಸರಿ, ನಿನ್ನ ಇಷ್ಟ' ಎಂದರೂ ನಂತರ ಸಂತೋಷದಿಂದ ಒಪ್ಪಿಕೊಂಡರು. ನಮ್ಮ ಕಛೇರಿಯ ಸಂಪಾದಕೀಯ ಕೆಲಸ ಮಾಡುತ್ತಿರುವ ನನ್ನನ್ನು ತೋರಿಸಿ 'ನನ್ನ ಮಗಳೂ ಸ್ವಲ್ಪ ಬರೆಯುತ್ತಾಳೆ' ಎಂದು ಹೇಳುವಾಗ ವಿದ್ಯೆಯ ಸಾಗರದಲ್ಲಿರುವ ನನ್ನ ತಂದೆ ನನ್ನಂತಹ ಒಂದು ಹನಿಯನ್ನೂ ಗುರುತಿಸುವ ಸರಳತೆ ಮತ್ತು ಮಗಳ ಬಗೆಗಿನ ಅವರ ಪ್ರೀತಿ ನನ್ನ ಮನಸ್ಸಿಗೆ ಮುದ ನೀಡುತ್ತದೆ.

ನಾನು ಮಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದಾಗ ಪ್ರತಿ ಸೋಮವಾರ ತಪ್ಪದೆ ಮನೆಗೆ ಫೋನ್ ಮಾಡುತ್ತಿದ್ದೆ. ಎಂದಾದರೂ ಫೋನ್ ಮಾಡಲು ತಡಮಾಡಿದರೆ ಕಾಲೇಜಿಗೆ ಫೋನ್ ಮಾಡಿ, 'ಅಲ್ಲಿ ನಿನಗೆ ಕೆಲಸ ಕಷ್ಟವಾದರೆ ಬಿಟ್ಟು ಬಂದುಬಿಡು. ನಿನಗೆ ಒಂದು ತುತ್ತು ಊಟಹಾಕುವುದು ನನಗೇನೂ ಕಷ್ಟವಿಲ್ಲ' ಎಂದು ಕಾಳಜಿ ತೋರಿಸುತ್ತಿದ್ದರು. ಮಂಗಳೂರು, ಉಡುಪಿ ಅಥವಾ ದಕ್ಷಿಣ ಕನ್ನಡದ ಇತರ ಸ್ಥಳಗಳಲ್ಲಿ ಯಾವುದಾದರೂ ಸಾಹಿತ್ಯಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳು ಇದ್ದರೆ ಅವರಿಗೆ ಅಷ್ಟು ದೂರ ಪ್ರಯಾಣ ಮಾಡಲು ಇಷ್ಟವಿಲ್ಲದಿದ್ದರೂ ನನಗಾಗಿ ಅಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ನನ್ನ ಯೋಗಕ್ಷೇಮವನ್ನು ವಿಚಾರಿಸಿಕೊಂಡು ಹೋಗುತ್ತಿದ್ದರು. ಇದಲ್ಲದೆ ನಾನು ಪತ್ರಿಕೋದ್ಯಮಿಯಾಗಿದ್ದಾಗ ರಾತ್ರಿ ಮನೆಗೆ ಬರುವುದು

ತಡವಾದರೆ ತಮ್ಮ ಬರವಣಿಗೆ ಕೆಲಸ ಬಿಟ್ಟು ಮನೆಯ ಮುಂದಿನ ಅಂಗಳದಲ್ಲಿ ಶತಪಥ ಹಾಕುತ್ತಿದ್ದರು. ನನ್ನ ಮುಖ ಕಂಡಕೂಡಲೇ ಮತ್ತೆ ಬರವಣಿಗೆಯನ್ನು ಮುಂದುವರಿಸು ತ್ತಿದ್ದರು. ಇದು ಅವರಿಗೆ ತಮ್ಮ ಮಗಳ ಮೇಲಿದ್ದ ಪ್ರೀತಿಯ ಪರಿ. ಇದು ಶಾಸ್ತ್ರಿಗಳ ಒಂದು ಮುಖವಾದರೆ ಅವರ ಇನ್ನೊಂದು ಮುಖ ಹೀಗಿದೆ: ಮೃದು ಸ್ವಭಾವವಾದರೂ ಶಾಸ್ತ್ರಿಗಳು ಖಂಡಿತವಾದಿಗಳು ಮತ್ತು ಅನ್ಯಾಯವನ್ನು ಎಂದೂ ಸಹಿಸರು. ಇದಕ್ಕೆ ಪೂರಕವಾಗಿ ಒಂದು ಘಟನೆಯನ್ನು ಹೇಳಬಯಸುತ್ತೇನೆ:

ಒಮ್ಮೆ, ಸುಮಾರು ೨೫ ವರ್ಷಗಳ ಹಿಂದೆ ನನ್ನ ತಾಯಿಯ ತವರಾದ ಬೆಂಗಳೂರಿನಿಂದ ಮೈಸೂರಿಗೆ ರೈಲಿನಲ್ಲಿ ಬರುವುದಿತ್ತು. ಮಲ್ಲೇಶ್ವರದ ಅಜ್ಜಿಯ ಮನೆಯಿಂದ ರೈಲ್ವೇಸ್ಟೇಷನ್‌ಗೆ ಆಟೋದಲ್ಲಿ ಬಂದಿಳಿದೆವು. ಆಟೋದವನು ಮೀಟರ್‌ಗಿಂತ ಒಂದು ರೂಪಾಯಿ ಹೆಚ್ಚಾಗಿ ಕೇಳಿದನು. ನನ್ನ ತಂದೆಯವರು 'ನ್ಯಾಯವಾಗಿ ಮೀಟರ್ ಎಷ್ಟಾಗಿದೆಯೋ ಅಷ್ಟೇ ತಗೋ' ಎಂದು ಹೇಳಿದರೂ ಆಟೋದವ ಕೇಳದೆ ವಾದಿಸುತ್ತಲೇ ಇದ್ದನು, ಹಣಕ್ಕಾಗಿ ಪೀಡಿಸುತ್ತಲೇ ಇದ್ದನು. ಇದರಿಂದ ಕೋಪಗೊಂಡ ನನ್ನ ತಂದೆ "ನಿನಗೆ ನ್ಯಾಯ, ನೀತಿ, ಧರ್ಮ ಎನ್ನುವುದೇ ಇಲ್ಲವೆ" ಎಂದು ಅವರ ಪರ್ಸಿನಲ್ಲಿದ್ದ ಅಷ್ಟೂ ದುಡ್ಡನ್ನು ಅವನ ಮಡಿಲಿಗೆ ಹಾಕಿದರು. ಅದರಲ್ಲಿ ನೂರರ ನೋಟುಗಳೂ ಇದ್ದವು. ಈ ಘಟನೆಯಿಂದ ಚಕಿತಗೊಂಡ ಆಟೋದವನು ತನ್ನ ತಪ್ಪಿನ ಅರಿವಾಗಿ ಮೀಟರ್ ದುಡ್ಡನ್ನು ಮಾತ್ರ ತೆಗೆದುಕೊಂಡು ಹೋದನು.

ನನ್ನ ತಂದೆಯಲ್ಲಿ ನಾನು ಕಂಡ ಇನ್ನೊಂದು ವಿಶೇಷವೆಂದರೆ ಅವರಿಗೆ ಪ್ರಾಣಿಗಳ ಮೇಲಿದ್ದ ಸುಪ್ತಪ್ರೀತಿ. ನಾನು ಪಿಯುಸಿ ಓದುತ್ತಿದ್ದಾಗ ಕಾಲೇಜಿಗೆ ಹೋಗುವ ಸಮಯದಲ್ಲಿ ಅಂದರೆ ಬೆಳಿಗ್ಗೆ ೯.೩೦ಕ್ಕೆ ಸರಿಯಾಗಿ ಒಂದು ಬಿಳಿ ಹಸು ನಮ್ಮ ಮನೆಯ ಗೇಟಿನ ಮುಂದೆ ಬಂದು ನಿಲ್ಲುತ್ತಿತ್ತು. ನಾನು ಅದಕ್ಕೆ ಮಂಗಳ ಎಂದು ಹೆಸರಿಟ್ಟಿದ್ದೆ. ಮಂಗಳೆಯ ಆಗಮನ ನನ್ನ ತಂದೆಯವರಿಗೇ ಮೊದಲು ಗೊತ್ತಾಗುತ್ತಿತ್ತು. ಮನೆಯೊಳಗಿನ ಮುಂದಿನ ಕೋಣೆಯಲ್ಲಿ ಮಲ್ಲಿಗೆ ಬಳ್ಳಿ ಹಬ್ಬಿರುವಂತಹ ಕಿಟಕಿಯ ಬಳಿ ಮಂಚದ ಮೇಲೆ ಕುಳಿತು ಬರೆಯುತ್ತಿದ್ದರು. ಮಂಗಳೆಯ ಆಗಮನದ ಸದ್ದು ಕೇಳುತ್ತಿದ್ದಂತೆ ಜೋರಾಗಿ ಒಂದು ಕೂಗು ಹಾಕುತ್ತಿದ್ದರು. "ಲೇ ವತ್ಸಲಾ, ಹಸು ಬಂತು ನೋಡು." ಇದರ ಅರ್ಥ ಮಂಗಳೆಗೆ ಅಕ್ಕಿಯೋ, ಬೆಲ್ಲವೋ, ಬಾಳೆಹಣ್ಣೋ ಏನಿದ್ದರೆ ಅದನ್ನು ಕೊಡಬೇಕೆಂದು. ಅಷ್ಟಕ್ಕೇ ಬಿಡದೆ ಮಂಗಳೆ ನನ್ನನ್ನು ಕಾಲೇಜಿಗೆ ಬಸ್ ನಿಲ್ದಾಣದ ವರೆಗೆ ಬಿಟ್ಟು ಬರುತ್ತಿತ್ತು. ಈ ವಿಚಾರವನ್ನು ನನ್ನ ತಂದೆಯವರು ಮೈಸೂರು ಆಕಾಶವಾಣಿಯಲ್ಲಿ ಪ್ರಸಾರವಾದ ಚಿಂತನದಲ್ಲೂ ಹೇಳಲು ಮರೆಯಲಿಲ್ಲ. ಇದೇ ತರಹದ ಇನ್ನೊಂದು ಘಟನೆಯೆಂದರೆ, ನನ್ನ ಗೆಳತಿ ಡಾ.ಪೂರ್ಣಿಮಾ (ಕವಿ ಜಿ.ಎಸ್. ಶಿವರುದ್ರಪ್ಪನವರ ಸೊಸೆ) ಮನೆಯ ನಾಯಿಯನ್ನು ಅವರು ಕಾಲೇಜಿಗೆ ಹೋಗಿ ಬರುವ

ದಾರಿಯಲ್ಲಿ ಆಗಾಗ ಪ್ರೀತಿಯಿಂದ ಮೈದಡವುತ್ತಿದ್ದರು. ಅದರ ಪರಿಣಾಮ ಅವರ ಮನೆಯ ನಾಯಿ 'ಜಾನಿ' ನನ್ನ ತಂದೆಯೊಡನೆ ಅವರಿಗೆ ತಿಳಿಯದಂತೆ ಸಿಟಿ ಬಸ್ ಹತ್ತಿ ಬಸ್ಸಿನಲ್ಲೆಲ್ಲಾ ಅವರ ಮೇಲೆ ಹಾರಿ ಗಲಾಟೆ ಎಬ್ಬಿಸುತ್ತಿತ್ತು. ಕಾಲೇಜಿಗೆ ಹೋಗ ದಂತೆ ಅಡ್ಡಿ ಮಾಡುತ್ತಿತ್ತು. ಬಸ್ಸಿನಿಂದ ಕೆಳಗೆ ಇಳಿದು ಇದನ್ನು ಮನೆಗೆ ತಲುಪಿಸಿ ಮತ್ತೆ ಕಾಲೇಜಿಗೆ ಹೊರಡುವ ವೇಳೆಗೆ ಹಲವಾರು ಬಾರಿ ಅವರ ಕ್ಲಾಸಿಗೆ ತಡವಾಗುತ್ತಿತ್ತು. ಅದರ ಕಣ್ಣು ತಪ್ಪಿಸಿ ಕಾಲೇಜಿಗೆ ಹೋಗುವುದು ಹರಸಾಹಸವಾಗುತ್ತಿತ್ತು. ಕಡೆಗೊಂದು ದಿನ ಅವರು ಕಾಲೇಜಿಗೆ ಹೋಗುವ ಮಾರ್ಗವನ್ನೇ ಬದಲಾಯಿಸಬೇಕಾಯಿತು. ನಮ್ಮ ಮನೆಯಲ್ಲೂ ಎರಡು ಕರಿನಾಯಿಗಳು (ಡಾ.ಹಾ.ಮಾ.ನಾಯಕರ ಮನೆಯಿಂದ ವಲಸೆ ಬಂದದ್ದು) ಇದ್ದವು. ನನ್ನ ತಂದೆಯವರು ಹೊರಗೆ ಹೋಗಿಬಂದರೆ ಅವರ ಮೈಮೇಲೆ ಹಾರಿ ಪ್ರೀತಿ ವ್ಯಕ್ತಪಡಿಸುತ್ತಿದ್ದವು. ಆಗ ಅವರು ತಮ್ಮ ಕೈಯಲ್ಲಿ ಇದ್ದ ಛತ್ರಿಯಿಂದ ಮೆಲ್ಲಗೆ ಅವುಗಳ ತಲೆಯನ್ನು ಸವರಿ ಸಮಾಧಾನಪಡಿಸುತ್ತಿದ್ದರು. ನಾಯಿಗಳು ತಪ್ಪು ಮಾಡಿದಾಗ ನಾವು ಬೈದು ಹೊಡೆದರೆ, ಅವುಗಳಿಗೆ ತಿಳಿಯುವುದಿಲ್ಲ, ಪಾಪ ಅವು ಮೂಕ ಪ್ರಾಣಿಗಳು ಎಂದು ನಮ್ಮನ್ನು ಗದರಿ ಅವುಗಳಿಗೆ ಕರುಣೆ ಮತ್ತು ಪ್ರೀತಿಯನ್ನು ತೋರಿಸುತ್ತಿದ್ದರು.

ಹೀಗೆ ಮಕ್ಕಳಿಗೂ ಈ ಪ್ರೀತಿಯಲ್ಲಿ ಕಿಂಚಿತ್ತೂ ಕೊರತೆ ಉಂಟುಮಾಡಿರಲಿಲ್ಲ. ಈ ಪ್ರೀತಿಯ ಹೊಳೆ ಇದೀಗ ತಮ್ಮ ಮೊಮ್ಮಕ್ಕಳ ಕಡೆಗೂ ಅವ್ಯಾಹತವಾಗಿ ಹರಿ ಯುತ್ತಿದೆ- ಇವರು ತರುವ ಬಿಸ್ಕೆಟ್, ಚಾಕಲೇಟ್ ಮತ್ತು ಕದ್ದು ಮುಚ್ಚಿ ಕೊಡುವ ದ್ರಾಕ್ಷಿ ಮತ್ತು ಗೋಡಂಬಿಗಳ ಮೂಲಕ-ಇಂತಹ ತಂದೆಯನ್ನು ಪಡೆದ ನಾವೇ ಧನ್ಯರು.

ಅಧಿಕಪ್ರಸಂಗಿಯ ಅರಿಕೆ

ಟಿ.ವಿ.ಚಿತ್ಕಲಾ

ನನ್ನ ತಂದೆಯವರಿಗೆ ನಾನು ಚಿತ್ಕಲಾ ಎರಡನೆಯ ಮಗಳು. ನಾಲ್ಕು ಜನ ಮಕ್ಕಳಲ್ಲಿ ಸ್ವಲ್ಪ ಅತಿಯೆನ್ನುವಂತೆ ವರ್ತಿಸುತ್ತಿದ್ದ ನನ್ನನ್ನು ಅಧಿಕಪ್ರಸಂಗಿ, ತಲೆಹರಟೆ ಎಂದು ಕರೆಯುತ್ತಿದ್ದರು. ನಮ್ಮ ಗಲಾಟೆ ಕೂಗಾಟಗಳ ನಡುವೆಯೇ ಅವರ ಓದು ಬರೆಹ ಎಲ್ಲಾ ನಡೆಯುತ್ತಿದ್ದುದು.

ಇನ್ನು ನನ್ನ ತಂದೆಯ ಸ್ವಭಾವ, ಜೀವನ, ವ್ಯಕ್ತಿತ್ವ ಮೊದಲಾದವನ್ನು ಕುರಿತು ಹೊಸದಾಗಿ ನಾನು ಹೇಳುವುದೇನೂ ಇಲ್ಲ. ಅವರನ್ನು ಅತ್ಯಂತ ಸಮೀಪದಿಂದ ನೋಡುವ, ಅವರ ಪ್ರೀತಿ ವಾತ್ಸಲ್ಯಗಳ ನೆಲೆಯಲ್ಲಿ ಬೆಳೆಯುತ್ತಾ ಬಂದ ನಾನು, ಕೆಲವೊಂದು ಘಟನೆಗಳನ್ನು ಇಲ್ಲಿ ನೆನೆಯಲು ಇಷ್ಟಪಡುತ್ತೇನೆ.

ವ್ಯಾಸಂಗದಲ್ಲಿ ನಾವು, ಮಕ್ಕಳೆಲ್ಲಾ ಅಷ್ಟೇನೂ ಚಟುವಟಿಕೆಯಿಂದ ಇದ್ದೆವೆಂದು ಹೇಳಲಾರೆ. ಹಾಗಂತ ಅವರು ನಮ್ಮನ್ನು ದಂಡಿಸುತ್ತಲೂ ಇರಲಿಲ್ಲ. ಆದರೆ ಸುಮ್ಮನೆ ಕೂತು ಕಾಡುಹರಟೆ ಹೊಡೆಯುತ್ತಾ ಕಾಲಹರಣಮಾಡಿದರೆ, ಅವರಿಗೆ ಇಷ್ಟವಾಗುತ್ತಿರಲಿಲ್ಲ. ಜೀವನದಲ್ಲಿ ಶಿಸ್ತನ್ನು ಅಳವಡಿಸಿಕೊಳ್ಳಬೇಕು, ಮಾಡುವ ಕೆಲಸದಲ್ಲಿ ಶ್ರದ್ಧೆ ಇರಬೇಕು ಎಂದು ಆಗಾಗ ಹೇಳುತ್ತಲೇ ಇದ್ದರು.

ಸದಾ ವ್ಯಾಸಂಗದ ನಡುವೆಯೂ ಜೀವನದ ಏರುಪೇರುಗಳನ್ನು ನಮ್ಮ ತಾಯಿಯ ಸಹಕಾರದಿಂದ ಸಮರ್ಥವಾಗಿಯೇ ಎದುರಿಸುತ್ತಾ ಬಂದುದನ್ನು ನಾನು ಬಲ್ಲೆ. ತಮ್ಮ ತಂಗಿಯರ ಹಾಗೂ ನಮ್ಮ ಮದುವೆಗಳ ಕೆಲಸವನ್ನೂ ನಿರ್ವಹಿಸಿದರು. ನಾವೆಲ್ಲಾ ಸುಖವಾಗಿ ಸಂತೋಷವಾಗಿ ಬೆಳೆದೆವೆಂದೇ ಹೇಳಬೇಕು. ಹಬ್ಬ ಹರಿದಿನಗಳಲ್ಲಿ ಹೊಸ ಬಟ್ಟೆಗಳಿಗೆ, ರುಚಿಕರವಾದ ಊಟ ತಿಂಡಿಗಳಿಗೆ ಏನೂ ಕೊರತೆಯಿರಲಿಲ್ಲ. ರಜಾ ದಿನಗಳಂದು ಮೈಸೂರಿನ ಸುತ್ತಮುತ್ತಲೂ ಪ್ರೇಕ್ಷಣೀಯ ಸ್ಥಳಗಳನ್ನು ನಮಗೆಲ್ಲಾ ಉತ್ಸಾಹದಿಂದ ತೋರಿಸುತ್ತಿದ್ದರು. ಆಗೆಲ್ಲಾ ನಮ್ಮೊಂದಿಗೆ ಡಾ. ಬಿ.ಆರ್.ಗೋಪಾಲ್ ಹಾಗೂ ಸ್ನೇಹಿತರಾದ ಗಂಗಾಧರ್ ಮತ್ತು ಅವರ ಮನೆಯವರೂ ಸಹ ಬರುತ್ತಿದ್ದರು. ಎಲ್ಲರೂ ಸೇರಿ ಮನೆಯಿಂದ ತಯಾರಿಸಿದ ಬಿಸಿಬೇಳೆಬಾತ್, ಮೊಸರನ್ನ ಹಾಗೂ ಹೋಳಿಗೆ ಬುತ್ತಿಯನ್ನು ಕಾವೇರಿ ನದಿತೀರದಲ್ಲಿ ಕೂತು ಸವಿಯುತ್ತಿದ್ದುದನ್ನು ನಾವೆಂದೂ ಮರೆಯಲಾರೆವು.

ತಂದೆಯವರಿಗೆ 'ಕುವೆಂಪು' ಗುರುಗಳಾಗಿದ್ದರು ಎಂಬ ವಿಚಾರ ನಮಗೆ ಬಾಲ್ಯದಲ್ಲೇ ತಿಳಿದಿತ್ತು. ಕುವೆಂಪು ಅವರು ದಿನವೂ ನಮ್ಮ ಮನೆಯ ಹಿಂದಿನ ರಸ್ತೆಯನ್ನು ಹಾದು ಮಾನಸಗಂಗೋತ್ರಿಯ ವರೆಗೂ ವಾಕಿಂಗ್ ಹೋಗುತ್ತಿದ್ದರು. ಅನೇಕ ಸಲ ನಾನು ಅವರನ್ನು ಹಿಂಬಾಲಿಸಿಕೊಂಡು ಹೋಗುತ್ತಿದ್ದೆ. 'ಅಂಕಲ್' ಎಂದು ಅವರ ಮುಖ ನೋಡಿ ನಗುವಾಗ, ಅವರ ಗಂಭೀರನೋಟಕ್ಕೆ, ಅವರ ನಿರ್ಲಿಪ್ತಭಾವಕ್ಕೆ "ಕುವೆಂಪು ಅವರಿಗೆ ಜಂಭ ಜಾಸ್ತಿ" ಎಂದು ಭಾವಿಸಿದ್ದು ನೆನಪಾಗುತ್ತದೆ. ಗಂಗೋತ್ರಿಯ ಆವರಣದಲ್ಲಿದ್ದ ಬೆಟ್ಟದ ನೆಲ್ಲಿಕಾಯಿ ಮರಕ್ಕೆ ಧಾಪಿಸಿದಾಗ, ಕುವೆಂಪು ಅವರ ಕೈಕಾಲಿಗೆ ತೊಡರಿಕೊಂಡದ್ದು ಎಲ್ಲವನ್ನೂ ನನ್ನ ತಂದೆಗೆ ವರದಿ ಒಪ್ಪಿಸಿದ್ದೆ. ಆಗೆಲ್ಲಾ ಅವರು "ದೊಡ್ಡವರ ಬಗ್ಗೆ ಹಾಗೆಲ್ಲಾ ಮಾಡಬಾರದು. ಗಂಭೀರವಾಗಿ ನಡೆದುಕೊಳ್ಳಬೇಕು" ಎಂದ ಗುಣಪಾಠಗಳು ನನಗಾಗ ತಲೆಗೆ ಹೋಗುತ್ತಿರಲಿಲ್ಲ.

ನನಗೆ ತಿಳಿದಂತೆ ನನ್ನ ತಂದೆ ಬಹುಪಾಲು ಕಾಲೇಜಿಗೆ ನಡೆದುಕೊಂಡೇ ಹೋಗುತ್ತಿದ್ದರು. ಒಮ್ಮೆ ನಾನು ನನ್ನ ಅಮ್ಮನ ಹತ್ತಿರ "ಸಿ.ಪಿ.ಕೆ ಹತ್ತಿರ ಸ್ಕೂಟರ್ ಇದೆ. ಅಣ್ಣಾನೂ ಯಾಕ್ ಒಂದು ಸ್ಕೂಟರ್ ತೊಗೋಬಾರದು? ಆರಾಮವಾಗಿ ಕಾಲೇಜಿಗೆ ಹೋಗಬಹುದು" ಅಂತ ಕೇಳಿದ್ದುಂಟು. ಅದಕ್ಕೆ ಅವರು "ಅಯ್ಯೋ ನಿಮ್ಮಪ್ಪನಿಗೆ ಭಯ ಜಾಸ್ತಿ. ಅವರಿಗೆ ಸೈಕಲ್ ಕೂಡ ಬರೋಲ್ಲ" ಅಂತ ಹೇಳಿ ನಕ್ಕುಬಿಟ್ಟಿದ್ದರು. ನನಗೆ ತಿಳಿದಮಟ್ಟಿಗೆ ನನ್ನ ತಾಯಿ ನನ್ನ ತಂದೆಯನ್ನು ಎಂದೂ ಯಾವುದಕ್ಕೂ ಪೀಡಿಸಿದವರಲ್ಲ. ಅಂತೆಯೇ ನನ್ನ ತಂದೆ ಆಕ್ಷೇಪಣೆಗಳನ್ನು ಮಾಡುವುದಾಗಲಿ, ಜಗಳವಾಡುವುದಾಗಲಿ, ಅಷ್ಟೇಕೆ ನನ್ನ ಅಮ್ಮನೊಂದಿಗೆ ಗಟ್ಟಿಯಾಗಿ ಮಾತನಾಡಿದ್ದಾಗಲಿ ನಮಗೆ ಗೊತ್ತೇ ಇಲ್ಲ.

ಸದಾ ಅಧ್ಯಯನಶೀಲರಾಗಿ, ಗಂಭೀರವಾಗಿರುತ್ತಿದ್ದರೂ ದಿನದ ಒಂದೆರಡು ಗಂಟೆಗಳ ಕಾಲ ನನ್ನ ತಾಯಿಯೊಂದಿಗೆ ಹುಲಿಗಟ್ಟ, ಕೇರಂ ಹಾಗೂ ಪಗಡೆಯಾಟ ಆಡುತ್ತಿದ್ದರು. ಬಹುಪಾಲು ನನ್ನ ತಾಯಿಯದೇ ಗೆಲುವು. ಸೋಲುತ್ತಿದ್ದ ಸಂದರ್ಭದಲ್ಲಿ ಆಟದ ಮಧ್ಯದಲ್ಲೇ ಪಗಡೆಯನ್ನು ಒದರಿ ಹೋಗಿಬಿಡುತ್ತಿದ್ದರು. ನಾವೆಲ್ಲಾ ನನ್ನ ತಾಯಿಯೊಂದಿಗೆ ಮುಸಿಮುಸಿ ನಗುತ್ತಿದ್ದೆವು.

ಉತ್ಸಾಹ ಹಾಗೂ ಜೀವನಪ್ರೀತಿಯನ್ನು ಅವರೆಂದೂ ಕಳೆದುಕೊಂಡವರಲ್ಲ. ಇಂದಿಗೂ ಹಬ್ಬ ಹರಿದಿನಗಳನ್ನು ಮಕ್ಕಳು ಮೊಮ್ಮಕ್ಕಳೊಂದಿಗೆ ಆಚರಿಸುವಾಗ ಸಣ್ಣ ಹುಡುಗರಂತೆ ಸಂತೋಷಿಸುತ್ತಾರೆ, ಸಂಭ್ರಮಿಸುತ್ತಾರೆ.

ವ್ಯಾಸಂಗದ ನಡುವೆ ನಮ್ಮೊಂದಿಗೆ ಹೆಚ್ಚಿನ ಸಮಯವನ್ನು ಕಳೆಯಲಾಗದಿದ್ದರೂ ಊಟದ ಸಮಯದಲ್ಲಂತೂ ಎಲ್ಲರೂ ಒಟ್ಟಿಗೆ ನೆಲದ ಮೇಲೆ ಕೂತು ಊಟ ಮಾಡುವುದು ಪದ್ಧತಿ. ಒಬ್ಬರೇ ಕೂತು ಊಟ ಮಾಡುವುದು ಅವರಿಗೆ ಇಷ್ಟವಾಗದು. ಆಗೆಲ್ಲಾ

ಅವರು ಅಧ್ಯಾಪಕರ ಬಗ್ಗೆ, ಕುಟುಂಬದ ಪೂರ್ವಿಕರ ಬಗ್ಗೆ ಕೆಲವು ಸ್ವಾರಸ್ಯಕರ ಸಂಗತಿಗಳನ್ನು ಹೇಳುತ್ತಿರುತ್ತಾರೆ. ಹಿರಿಯರಿಂದ, ಬಲ್ಲವರಿಂದ ತಮ್ಮ ಕುಟುಂಬದ ಪೂರ್ವಿಕರ ವಿಷಯಗಳನ್ನು ತಿಳಿದು ವಂಶವೃಕ್ಷವನ್ನು ದಾಖಲಿಸಿರುವುದೇ ಅಲ್ಲದೆ ಮಾನವೀಯ ಸ್ಪರ್ಶವಿರುವ ಅನೇಕ ಸಂಗತಿಗಳನ್ನು ನಿರೂಪಿಸುತ್ತಿದ್ದರು. ಹಾಸ್ಯ ವಿನೋದಗಳ ನಡುವೆಯೇ ನಮ್ಮ ಊಟದ ರಸಾಸ್ವಾದ.

ನೆಂಟಸ್ತಿಕೆ ಸಂಬಂಧಗಳು, ಅನ್ಯೋನ್ಯತೆ, ಕಷ್ಟ ಸುಖಗಳನ್ನು ಪರಸ್ಪರ ಹಂಚಿಕೊಳ್ಳುವುದು, ಇವನ್ನು ಅವರು ತುಂಬ ಇಷ್ಟಪಡುತ್ತಿದ್ದರು. ಸಂಬಂಧಗಳು ಆತ್ಮೀಯವಾಗಿರಬೇಕಲ್ಲದೆ ಅಸಹನೀಯವಾಗಿರಬಾರದೆಂಬ ಅವರ ಅನುಭವದ ಮಾತುಗಳು ನಮಗೆ ಹಿತವಚನಗಳೇ ಆಗಿವೆ.

ಸಾಮಾನ್ಯವಾಗಿ ಕೋಪತಾಪಗಳು ಅವರಲ್ಲಿ ಇಲ್ಲವಾದರೂ ಸುಳ್ಳು, ಅಪ್ರಾಮಾಣಿಕತೆ, ಅಗೌರವಗಳಿದ್ದೆಡೆ ಕೆಂಡವಾಗುತ್ತಾರೆ. ಜುಗುಪ್ಸೆಗೊಳ್ಳುತ್ತಾರೆ. ಈ ಸಂದರ್ಭದಲ್ಲಿ ನನ್ನ ಹದಿವಯಸ್ಸಿನಲ್ಲಿ ನಡೆದ ಘಟನೆಯೊಂದನ್ನು ಇಲ್ಲಿ ನೆನಪಿಸಿಕೊಳ್ಳಬೇಕು.

ನನ್ನ ತಂದೆಯವರಿಗೆ ಕೆ.ಪಿ.ಎಸ್.ಸಿ. ಪರೀಕ್ಷೆಯ ಮೌಲ್ಯಮಾಪನಕ್ಕಾಗಿ ಉತ್ತರ ಪತ್ರಿಕೆಗಳು ಬಂದಿದ್ದವು. ಹೇಗೋ ವಿಷಯ ತಿಳಿದು ಯಾರೋ ಒಬ್ಬರು ಮನೆಗೆ ಹುಡುಕಿಕೊಂಡು ಬಂದು ತಮಗೆ ಉಪಕಾರಮಾಡುವಂತೆ ಅಂಗಲಾಚಿದರು. ನನ್ನ ತಂದೆ ತಮಗೆ ಯಾವ ಪೇಪರ್ ಬಂದಿಲ್ಲವೆಂದರೂ ಕೇಳಿಸಿಕೊಳ್ಳದೆ "ನಾವೆಲ್ಲಾ ವಿಚಾರಿಸಿಯೇ ಬಂದಿದ್ದೇವೆ. ನಿಮಗೇ ಬಂದಿದೆ, ಬಂದಿಲ್ಲವಾದರೆ ಮುಂದೆ ಬರುತ್ತದೆ ಸಾರ್, ಏನಾದರೂ ಕೊಡೋಣ ಹೇಳಿ ಸಾರ್" ಎಂದರು. ಈ ಮಾತುಗಳಿಗೆ ನನ್ನ ತಂದೆ ಗಾಬರಿಗೊಂಡರೂ ಸಾವರಿಸಿಕೊಂಡು "ಅಪ್ಪಾ ನನಗೆ ಯಾವ ಉತ್ತರ ಪತ್ರಿಕೆಗಳೂ ಬಂದಿಲ್ಲ. ಹಾಗೆ ಬಂದ ಪಕ್ಷದಲ್ಲಿ ಎಲ್ಲರಿಗೂ ನಾನು ಧಾರಾಳವಾಗಿ ಅಂಕಗಳನ್ನು ಹಾಕುತ್ತೇನೆ, ನೀವೀಗ ಹೊರಡಿ" ಎಂದು ಪ್ರಯಾಸಪಟ್ಟು ಅವರನ್ನು ಸಾಗಹಾಕಿದ್ದರು. ಅಲ್ಲದೆ "ನೀನು ಲಕ್ಷ ಕೊಟ್ಟರೂ ಈಗಲೇ ಶಿರಚ್ಛೇದ ಮಾಡಿದರೂ ಅದು ಆಗದ ಮಾತು. ಮೂವತ್ತೈದು ವರ್ಷಗಳಿಂದ ಮಾಡದಿರುವ ಕೆಲಸವನ್ನು ಈಗ ನಾನು ಮಾಡಲಾರೆ" ಎಂದರು. ಅವರು ಮತ್ತೆ ಮತ್ತೆ ಮನೆಗೆ ಬಂದಾಗ ತಾನು ಮನೆಯಲ್ಲಿಲ್ಲವೆಂದು ಹೇಳಿಸಿ, ಆದಷ್ಟು ಬೇಗ ಮೌಲ್ಯಮಾಪನವನ್ನು ಮುಗಿಸಿಬಿಟ್ಟಿದ್ದರು. "ಏನ್ ಜನಾನೋ ಏನೋ, ಚೆನ್ನಾಗಿ ಓದಿ ಬರೆಯುವುದಕ್ಕೆ ಏನ್ ಧಾಡಿ" ಎಂದು ಬೇಸರಿಸಿಕೊಂಡಿದ್ದರು. ಮುಂದಿನ ವರ್ಷ ಮತ್ತೆ ಮೌಲ್ಯಮಾಪನಕ್ಕೆ ಬಂದಾಗ ಅವರು ತಾವೇ ತಮ್ಮ ಖರ್ಚಿನಲ್ಲಿ ಬೆಂಗಳೂರಿನ ಕಛೇರಿಗೆ ಹೋಗಿ ಇನ್ನು ಮೇಲೆ ಪರೀಕ್ಷೆ ಕೆಲಸ ವಹಿಸಬಾರದೆಂದು ಹಿರಿಯ ಅಧಿಕಾರಿಗಳಿಗೆ ತಿಳಿಸಿ, ಪತ್ರಿಕೆಗಳನ್ನು ಹಿಂದಿರುಗಿಸಿ ಬಂದರು.

ಕಷ್ಟಸಹಿಷ್ಣುತೆ ಗುಣವನ್ನು ಮೈಗೂಡಿಸಿಕೊಂಡು ಬಂದಿರುವ ಅವರು ಇಂದು ಆರ್ಥಿಕವಾಗಿ ನೆಮ್ಮದಿಯಾಗಿದ್ದರೂ, ಅವಶ್ಯವಿದ್ದಲ್ಲಿ ಮಾತ್ರ ಆಟೋ ಬಳಸುತ್ತಾರೆ. ಬಹುಪಾಲು ಬಸ್ಸಿಗಾಗಿ ಕಾದು ಹೋಗುವುದೇ ಅವರ ಪದ್ಧತಿ. ಊರಿಂದೂರಿಗೆ ಪ್ರಯಾಣ ಮಾಡುವಾಗ ಭಾರವಾದ ಕೈ ಚೀಲಗಳನ್ನು ಕೂಲಿಗಳಿಂದ ಹೊರಿಸದೆ ತಾವೇ ಹೊರುತ್ತಾರೆ. ಮಕ್ಕಳಾದ ನಾವು ಇಂಥ ಕೆಲವಂಶಗಳನ್ನು ನಮ್ಮ ಬದುಕಿನಲ್ಲಿ ಅಳವಡಿಸಿಕೊಂಡಲ್ಲಿ ನಮ್ಮ ನಡವಳಿಕೆಗೆ ಸಂಸ್ಕಾರ ದೊರೆತಂತೆ. ನಮ್ಮ ಶ್ರೇಯಸ್ಸಿಗೆ ದಾರಿದೀಪವಿದ್ದಂತೆ.

ಹಠಯೋಗಿ

ಟಿ.ವಿ.ವಿದ್ಯಾಶಂಕರ

ನಾನು ನನ್ನ ತಂದಗೆ ನಾಲ್ಕನೆಯವನು, ಒಬ್ಬನೇ ಮಗ. ನನ್ನ ಜೊತೆಯವರು ಮೂರು ಜನ ಅಕ್ಕಂದಿರು.

ಸಾಮಾನ್ಯವಾಗಿ ತಂದೆಯನ್ನು ಅಪ್ಪ ಎಂದೋ, ಪಪ್ಪ ಎಂತಲೋ ಕರೆಯುವುದು ವಾಡಿಕೆ. ಅಣ್ಣ ಎಂದು ಕರೆಯುವವರೂ ಉಂಟೇನೋ, ತಿಳಿಯದು. ಆದರೆ ನಾವು ನಾಲ್ಕೂ ಜನ ನಮ್ಮ ತಂದೆಯವರನ್ನು ಕರೆಯುವುದು 'ಅಣ್ಣ' ಎಂದೇ. ಇದನ್ನು ಯಾರು ಕಲಿಸಿದರೋ ತಿಳಿಯದು. ಈಗ ನನಗೆ ೪೨ರ ಸಮೀಪ. ಹಿಂದಿರುಗಿ ನೋಡಿದರೆ ನನಗನ್ನಿಸುವುದು ಬಹುಶಃ ನಮ್ಮ ತಂದೆ ನಮ್ಮನ್ನು ತಮ್ಮ ತಂಗಿ ತಮ್ಮಂದಿರಂತೆ ನೋಡಿಕೊಂಡಿರುವುದೇ, ಹಿರಿಯಣ್ಣನ ಹಾಗೆ ಆದರಿಸಿರುವುದೇ, ನಾವು ಅವರನ್ನು 'ಅಣ್ಣ' ಎಂದು ಕರೆಯಲು ಕಾರಣವೇನೋ ಎಂದು. ಎಂದೂ ತಂದೆ ಅಧಿಕಾರ ಚಲಾಯಿಸಿದವರಲ್ಲ. ನನಗೆ ಬುದ್ಧಿ ತಿಳಿದಾಗಿನಿಂದ ಅವರ ಕೈಯಲ್ಲಿ ಏಟು ತಿಂದ ನೆನಪಿಲ್ಲ. ಸಿಟ್ಟಾಗಿ ಬೈದದ್ದೂ ಇಲ್ಲ.

ಮಕ್ಕಳಿಗೆ ಅಣ್ಣನಾದರೆ, ಒಡಹುಟ್ಟಿದ ತಂಗಿ ತಮ್ಮಂದಿರಿಗೆ, ಬಂಧು ಬಾಂಧವರಿಗೆ ನನ್ನ ತಂದೆ 'ವೆಂಕಟಾಚಲ'. ಬಹುಶಃ ನಮಗೆ ಅಣ್ಣನಾದ ಅವರು, ಒಡಹುಟ್ಟಿದವರಿಗೆ ಸ್ನೇಹಿತನ ವರಸೆಯಲ್ಲಿ ಕಂಡಿರುವರೋ ಏನೋ ತಿಳಿಯದು. ಆದರೆ 'ವೆಂಕಟಾಚಲ' ಎಂದು ಕರೆಯುವ ಅವರ ಆ ದನಿಯಲ್ಲಿ ಪ್ರೀತಿ, ವಿಶ್ವಾಸ ಹಾಗೂ ಗೌರವವನ್ನು ಕಂಡಿದ್ದೇನೆ.

ನನ್ನ ತಂದೆಯವರು (ಅಣ್ಣ ಎಂದೇ ಬರೆಯುವ ಮನಸ್ಸಾದರೂ ರೂಢಿಯಲ್ಲಿ ಇರುವ 'ತಂದೆ' ಪದವನ್ನೇ ಇಲ್ಲಿ ಬಳಸುತ್ತೇನೆ) ತಮ್ಮ ಓದು ಬರೆಹದಲ್ಲಿ ಗಹನವಾಗಿ ತೊಡಗಿಕೊಂಡಿರುವುದರಿಂದ ಹೊರಗಿನ ವ್ಯವಹಾರದ ಕಡೆ ನಿಗಾ ಕಡಿಮೆ. ಹಾಗಾಗಿ ನಮ್ಮ ವಿದ್ಯಾಭ್ಯಾಸ, ಶಾಲೆಗೆ ಸೇರಿಸುವುದು, ಫೀಸ್ ಕಟ್ಟುವುದು, ಬಟ್ಟೆ ಕೊಡಿಸುವುದು ಎಲ್ಲ ನಮ್ಮ ಅಮ್ಮನ ಜವಾಬ್ದಾರಿಯೇ. ಒಮ್ಮೊಮ್ಮೆ ನಾಲ್ಕು ಮಕ್ಕಳು ಯಾವ ಯಾವ ತರಗತಿಯಲ್ಲಿ ಇದ್ದೇವೆ ಎಂಬುದೂ ಥಟ್ಟನೆ ಹೊಳೆಯುತ್ತಿರಲಿಲ್ಲ. ಸ್ನೇಹಿತರೊಬ್ಬರು ಮಕ್ಕಳು ಯಾವ ಯಾವ ತರಗತಿಯಲ್ಲಿ ಓದುತ್ತಿದ್ದಾರೆ ಎಂದು ಕೇಳಿದಾಗ ಹೇಳಲು ಕಷ್ಟಪಟ್ಟಿದ್ದೂ ಉಂಟು. ತಾವೇ ನಿಂತು ನಿರ್ವಹಿಸಿದ ತಮ್ಮ ಒಬ್ಬ ತಂಗಿಯ

ಮದುವೆಯ ವರ ಹತ್ತು ದಿನದ ಬಳಿಕ ರಸ್ತೆಯಲ್ಲಿ ಭೇಟಿಯಾದಾಗ ನಮ್ಮಮ್ಮನನ್ನು ಕೇಳಿದ್ದು, "ಇವರನ್ನು ಎಲ್ಲೋ ನೋಡಿದ ಹಾಗಿದೆ. ಎಲ್ಲಿ ಎಂಬುದು ನೆನಪಾಗುತ್ತಿಲ್ಲ" ಎಂದು. ಈ ರೀತಿಯ ಕೆಲವಾರು ಘಟನೆಗಳು ಆಗಿ ರುವುದು, ಅದನ್ನು ನಮ್ಮಮ್ಮ ನಮಗೆ ಹೇಳಿ ನಗುವುದೂ, ನಾವೆಲ್ಲರೂ ಗೇಲಿ ಮಾಡು ವುದೂ, ಆಗ ಅವರೂ ನಮ್ಮ ನಗುವಿಗೆ ಧ್ವನಿ ಸೇರಿಸುವುದೂ ನನಗೆ ಆಗಾಗ್ಗೆ ನೆನಪಾಗುವುದು. ಹಾಗೆಂದಾಕ್ಷಣ ಅವರ ನೆನಪಿನಶಕ್ತಿ ಕಡಿಮೆ ಎಂದು ನಾವು ತಿಳಿದರೆ ತಪ್ಪಾಗುತ್ತದೆ. ಬಹುಶಃ ಅವರ ನೆನಪಿನ ಅಗಾಧಶಕ್ತಿ ನಮಗಿಂತ ಅವರೊಂದಿಗೆ ಹೆಚ್ಚಿನ ಸಮಯ ಕಳೆದಿರುವ ಅವರ ಸ್ನೇಹಿತರಿಗೆ ವಿದ್ಯಾರ್ಥಿಗಳಿಗೆ ಅರಿವಿರುತ್ತದೆ. ಶ್ರೀಯುತ ಹೆಚ್.ಎಸ್.ಬಿಳಿಗಿರಿ ಅವರೊಂದಿಗೆ ನಮ್ಮ ಮನೆಯಲ್ಲಿ ಅವರು ನಡೆಸುತ್ತಿದ್ದ ವ್ಯಾಕರಣದ ನಾಲ್ಕಾರು ತಾಸಿನ ಸುದೀರ್ಘಚರ್ಚೆ, ಡಾ.ಎಂ.ಚಿದಾನಂದಮೂರ್ತಿ, ಸುಜನಾರೊಂದಿಗೆ ದೂರವಾಣಿಯಲ್ಲಿ ನಡೆಸುವ ದೀರ್ಘ ಸಂಭಾಷಣೆಗಳು, ಹಳಗನ್ನಡದ ಪರಿಚಯ ಮಾಡಿಕೊಳ್ಳಲು ಮನೆಗೆ ಬರುತ್ತಿದ್ದ ಚಿಕಾಗೋ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕ ಶೆಲ್ಡನ್ ಪೋಲಾಕ್ ಅವರೊಂದಿಗಿನ ವಿದ್ವತ್‌ಪೂರ್ಣ ಮಾತುಕತೆ ಅವರ ನೆನಪಿನ ಶಕ್ತಿಯ ಅರಿವನ್ನು ನನಗೆ ಮಾಡಿಸಿದೆ.

ನನ್ನ ತಂದೆಗೆ ನನ್ನ ಅಮ್ಮ ಎಂದರೆ ಬಹಳ ಕಾಳಜಿ. ಒಬ್ಬರೆ ಹೊರಗೆ ಎಲ್ಲಾದರೂ ಹೋಗಿದ್ದಾರೆಂದರೆ ಎಲ್ಲಿಲ್ಲದ ತಳಮಳ. ಎಷ್ಟೋ ಬಾರಿ ಅವರಿಗಾಗಿ ರಸ್ತೆಯಲ್ಲಿ ಕಾದಿರುವುದು, ಅವರು ಹೋಗಿರುವ ಅಥವಾ ಹೋಗುತ್ತೇನೆ ಎಂದು ತಿಳಿಸಿರುವ ಮನೆಗಳಿಗೆಲ್ಲ ನಮ್ಮಿಂದ ಫೋನ್ ಮಾಡಿಸುವುದು, ನಾವು ಫೋನ್ ಮಾಡುವಲ್ಲಿ ತಡ ಮಾಡಿದರೆ ಕೂಡಲೇ ಫೋನ್ ಮಾಡೆಂದು ಮೇಲಿಂದ ಮೇಲೆ ಹೇಳುವುದು. ನಡುನಡುವೆ ಮನೆಯ ಹೊರಗೆ ಹೋಗಿ ರಸ್ತೆಯ ದಿಕ್ಕನ್ನು ದಿಟ್ಟಿಸುವುದು, ಯಾರೋ ಕರೆಗಂಟೆ ಒತ್ತಿದರೆ, ಧಡ್ಡನೆದ್ದು ಅಮ್ಮನೇ ಬಂದಿರಬಹುದೆಂದು ನೋಡುವುದು ಇವೆಲ್ಲ ನಾವು ನೋಡುತ್ತಲೇ ಇರುತ್ತೇವೆ. ಅಮ್ಮ ಬಂದಮೇಲೆ, "ಏಕೆ ತಡ? ಎಲ್ಲಿಗೆ ಹೋಗಿದ್ದೆ?" ಎಂದು ಕೇಳುವುದನ್ನು ಬಿಟ್ಟು ಬೇರೇನೂ ಹೇಳುವುದಿಲ್ಲ. ಎಷ್ಟೋ ಬಾರಿ ನಾನು ಈ ವಿಷಯದಲ್ಲಿ ಅಮ್ಮನ ಹತ್ತಿರ 'ಏಕೆ ಹೀಗೆ ಮಾಡುತ್ತೀಯಾ?' ಎಂದು ಕೇಳಿರಬಹುದು. ಆದರೆ ನನ್ನ ತಂದೆ ಮಾತ್ರ ಎಂದೂ ಆಕ್ಷೇಪಿಸಿದವರಲ್ಲ.

ನನ್ನ ಎರಡನೆಯ ಅಕ್ಕ ಚಿತ್ಕಲಾ ಪದವಿಯಲ್ಲಿ ಕನ್ನಡವನ್ನು ಐಚ್ಛಿಕವಾಗಿ ಪಡೆದ ಸಮಯದಲ್ಲಿ ನನ್ನ ತಂದೆ ಅವಳಿಗೆ ಕೆಲವೊಮ್ಮೆ ವ್ಯಾಕರಣ ಕಲಿಸಲು ಕುಳಿತು ಅವಳಿಂದ ಪ್ರಶ್ನೆಗೆ ಸರಿ ಉತ್ತರ ಬಾರದಿದ್ದಾಗ ಬೇಸರದಿಂದ ಎರಡು ಮಾತು ಆಡಿದ್ದುಂಟು. ಕೂಡಲೇ ಅವಳು "ನೀನು ಪಾಠಮಾಡಬೇಡ" ಎಂದು ಹೇಳಿ ಹೊರಟುಹೋದರೆ ಅವರೇ ಅವಳನ್ನು ಓಲೈಸಿ ಮತ್ತೆ ಕರೆದು ಕುಳ್ಳಿರಿಸಿಕೊಳ್ಳುತ್ತಿದ್ದರು. ಏಕೋ ತಿಳಿಯದು,

ಅವರ ನಾಲ್ಕು ಮಕ್ಕಳಲ್ಲಿ ಯಾರಿಗೂ ಅವರ ಕ್ಷೇತ್ರದಲ್ಲಿ ಆಸಕ್ತಿ ಬರಲಿಲ್ಲ. ನಮ್ಮನ್ನು ನಾವೇ ಸಮರ್ಥಿಸಿಕೊಳ್ಳಲು, ನಮ್ಮ ಪಾಲಿನ ಓದನ್ನೂ ಅವರೇ ಮಾಡಿದ್ದಾರೆಂದು ಜಾರಿಕೊಳ್ಳುತ್ತೇವೆ. ಆದರೆ ನಮ್ಮ ನಿರಾಸಕ್ತಿಯ ಬಗ್ಗೆ ಬೇಸರವೂ ಉಂಟು.

ನನಗೆ ತಿಳಿದಮಟ್ಟಿಗೆ ಕೆಲವರು ಮುಂದೊಂದು-ಹಿಂದೊಂದು ಮಾತನಾಡುವುದನ್ನು ಸಹಜವಾಗಿಯೇ ರೂಢಿಸಿಕೊಂಡಿರುತ್ತಾರೆ. ಹೊರಗಿನ ಸಮಾಜಕ್ಕೆ ಇದರ ಗುರುತು ಸಿಗಬಹುದು, ಸಿಗದಿರಬಹುದು. ಆದರೆ ಮನೆಯಲ್ಲಿ ಮನೆಯ ಜನರಿಗೆ ಇದರ ಪರಿಚಯ ಚೆನ್ನಾಗಿಯೇ ಇರುತ್ತದೆ. ನನ್ನ ತಂದೆ ಹಾಗೆ ಎಂದೂ ಮಾಡಿದವರಲ್ಲ. ಯಾರನ್ನೂ ಅಗೌರವದಿಂದ ನಡಸಿಕೊಂಡ ಅಥವಾ ಮನೆಯಲ್ಲಿ ಅವರ ಬಗ್ಗೆ ಹಗುರವಾಗಿ ಮಾತನಾಡಿದ ಘಟನೆ ಇಲ್ಲ. ನಾನೇ ಎಂದಾದರೂ ಹಾಗೆ ಮಾತನಾಡಿದಾಗ, 'ಅದು ಹಾಗಿರಲಿಕ್ಕಿಲ್ಲ' ಎಂದು ಹೇಳಿ ಸಮಾಧಾನಪಡಿಸಿರುವುದೂ ಇದೆ. ಆದರೆ ಅವರು ಬೇಸರದಿಂದ ಯಾವಾಗಲೂ ಹೇಳುವ ಮಾತು ಎಂದರೆ "ಒಬ್ಬ ಸಮಾಜದ ಗೌರವ ಯುತ ವ್ಯಕ್ತಿ ಯಾರ ಮನೆಯಲ್ಲೇ ಇರಲಿ, ಅವರ ಬಗ್ಗೆ ಅವರ ಮಕ್ಕಳು, ತಮ್ಮ ಮಕ್ಕಳು ಮೊಮ್ಮಕ್ಕಳು ಮರಿಮಕ್ಕಳಿಗೆ ತಿಳಿಹೇಳಬೇಕು. ಅದು ಇಂದು ಎಲ್ಲೂ ನಡೆ ಯುತ್ತಿಲ್ಲ" ಎಂದು. ಇದನ್ನು ತಾವೇ ಕೆಲ ಪ್ರಸಿದ್ಧವ್ಯಕ್ತಿಗಳ ಜೀವನದ ಬಗ್ಗೆ ಬರೆಯುವಾಗ ಅನುಭವಿಸಿದ 'ಹಿಂಸೆ' ಎನ್ನುತ್ತಾರೆ. ವ್ಯಕ್ತಿಯ ಮೊಮ್ಮಕ್ಕಳಲ್ಲೋ, ಮರಿಮಕ್ಕಳಲ್ಲೋ ವಿಚಾರಿಸಿದಾಗ 'ಹೌದು ಇದ್ದರಂತೆ! ಪ್ರಸಿದ್ಧರಂತೆ!' ನಮಗೆ ಅಷ್ಟೊಂದು ವಿಷಯ ತಿಳಿದಿಲ್ಲ' ಎಂದಾಗ ನನ್ನ ತಂದೆ ನೊಂದಿದ್ದೂ ಉಂಟು. ಸಮಾಜ ದಲ್ಲಿ ಒಳ್ಳೆಯ ಕೆಲಸ ಮಾಡಿದ ಇಂಥ ವ್ಯಕ್ತಿಗೆ ಸಮಾಜದಲ್ಲಿ ಗೌರವ-ಆದರ-ಸನ್ಮಾನಗಳು ನಡೆದರೆ, ಮನೆಯಲ್ಲಿ ಮನೆಯ ಮಕ್ಕಳು ಬಂಧುಗಳು ಅವರನ್ನು ಗೌರವ ಆತ್ಮೀಯತೆಯಿಂದ ಕಾಣುವುದಿರಲಿ, ಅವರನ್ನು ಅವಮಾನಿಸುವುದೇ ಹೆಚ್ಚು. ಅವರ ಮಾತಿಗೆ ಕಿಂಚಿತ್ತೂ ಗೌರವ ಸೂಚಿಸುವುದಿಲ್ಲ. ಆದರೆ ಅಂಥವರ ಹೆಸರನ್ನು ಬಳಸಿ ಕೊಂಡು ತಮ್ಮ ಕೆಲಸ ಮಾಡಿಸಿಕೊಳ್ಳುತ್ತಾರೆ ಎಂದು ಖೇದದಿಂದ ನುಡಿದದ್ದೂ ಉಂಟು.

ನನಗೆ ನನ್ನ ತಂದೆಯಲ್ಲಿ ವಿಶೇಷವಾಗಿ ಕಂಡ ಗುಣ, ಅವರ ಛಲ. ಹಿಡಿದ ಕೆಲಸವನ್ನು ಪಟ್ಟುಹಿಡಿದು ಮಾಡುವುದು. ಕೆಲಸ ಪ್ರಾರಂಭಿಸಿದಾಗಿನಿಂದ ಕೊನೆಯವರೆಗೂ ಅದೇ ಉತ್ಸಾಹವನ್ನು ಕಾಪಾಡಿಕೊಳ್ಳುವುದು. ಬೇರೆಯವರನ್ನು ಅವಲಂಬಿಸಿರುವ ಕೆಲಸ ವಾದರೂ, ಅವರ ಬೆನ್ನು ಹಿಡಿದು ಹೋಗಿ ಕೆಲಸ ಪೂರ್ಣಗೊಳಿಸುವುದು. ಕೆಲಸ ಎಷ್ಟೇ ಚಿಕ್ಕದಿರಲಿ, ದೊಡ್ಡದಿರಲಿ ತಾವೇ ಸ್ವತಃ ನಿರ್ವಹಿಸುವುದು. ಕೆಲಸ ಮುಗಿಯುವ ವರೆಗೆ ಆಹಾರ ನಿದ್ರೆಗೆ ಕ್ಷೀಣಗಮನ. ಇಷ್ಟು ಶ್ರಮಜೀವಿ. ಕೆಲಸ ಪೂರ್ಣವಾಗಿ ಪುಸ್ತಕ ಹೊರಬಿದ್ದ ನಂತರ ತಾಯಿ ಹೆತ್ತ ಮಗುವನ್ನು ನೋಡಿದಂತೆ, ನೇವರಿಸಿದಂತೆ ಪ್ರತಿಕ್ರಿಯಿ ಸುವುದು ನಿಜಕ್ಕೂ ಅದ್ಭುತ.

ನನ್ನ ಅಕ್ಕಂದಿರ ಮದುವೆಗಳ ಸಮಯದಲ್ಲಿ ನನ್ನ ತಂದೆ ಹಣದ ಜವಾಬ್ದಾರಿ ವಹಿಸಿದರೆ ಮುಗಿಯಿತು. ಮಿಕ್ಕದ್ದೆಲ್ಲಾ ನನ್ನ ಸೋದರಮಾವ ಸತ್ಯನಾರಾಯಣನದ್ದೇ. ಆಗೆಲ್ಲ ಅಮ್ಮ ಹೇಳಿದ್ದುಂಟು: "ಮದುವೆಯಲ್ಲಿ ಮೊದಲ ಪಂಕ್ತಿಯಲ್ಲಿ ಊಟ ಮಾಡಿ ಬಿಟ್ಟೇರಿ" ಎಂದು. ನನ್ನ ಸೋದರಮಾವನ ಈ ಕೆಲಸವನ್ನು ಅವರು ಆಗಾಗ್ಗೆ ನೆನೆಯುತ್ತಿರುತ್ತಾರೆ. ಇಂಥ ಸ್ವಭಾವದ ನನ್ನ ತಂದೆಯನ್ನು ಮೈಸೂರು ಮುಲಕನಾಡು ಸಂಘದ ವತಿಯಲ್ಲಿ ಕಟ್ಟಲಾದ 'ಮುಲಕನಾಡು ಭವನ'ದ ಉದ್ಘಾಟನೆಯ ಸಮಯದಲ್ಲಿ ನೋಡಬೇಕಿತ್ತು, ಆ ಉತ್ಸಾಹವನ್ನು! ಎಪ್ಪತ್ತರ ಹರೆಯದಲ್ಲೂ ಇಪ್ಪತ್ತರ ಉತ್ಸಾಹ. ತಮ್ಮ ಮನೆಯ ಗೃಹಪ್ರವೇಶದಲ್ಲೂ ಇಷ್ಟು ಉತ್ಸಾಹ ತೋರಿದ್ದಿಲ್ಲ. ಮುಲಕನಾಡು ಭವನದ ಕಟ್ಟಡದ ನಿರ್ಮಾಣಕ್ಕೆ ಬಗಲಿಗೆ ಚೀಲ ಹಾಕಿಕೊಂಡು ಹಗಲು ರಾತ್ರಿಗಳೆನ್ನದೆ, ಊರು ಕೇರಿಗಳನ್ನು ಸುತ್ತಿ ಚಂದಾ ಸಂಗ್ರಹಿಸಿದರು, ಎದುರಾದ ಸುಖ ದುಃಖಗಳನ್ನು ಸಮಾನವಾಗಿ ಸ್ವೀಕರಿಸಿದರು. ಇಟ್ಟಿಗೆ ಇಟ್ಟು, ಕಟ್ಟಡ ಕಟ್ಟಲಿಲ್ಲ ಎನ್ನುವುದು ಬಿಟ್ಟರೆ ಪ್ರತಿಯೊಂದು ಹಂತದಲ್ಲೂ ಪುಸ್ತಕಗಳನ್ನು ರಚಿಸುವಾಗಿನ ಶ್ರದ್ಧೆಯನ್ನೇ ನಾನು ಗಮನಿಸಿದ್ದೆ. ನಾವೆಲ್ಲ ಆಗ "ಏನಣ್ಣ ನಿನ್ನ ಮಕ್ಕಳ ಮದುವೆಯಲ್ಲಾಗಲೀ, ನಿನ್ನ ಮನೆಯ ಗೃಹಪ್ರವೇಶದಲ್ಲಾಗಲೀ ನೀನು ಇಷ್ಟು ಓಡಾಡಲಿಲ್ಲ" ಎಂದಾಗ, ಅವರು ಹೇಳಿದ್ದು: "ಮನೆಯ ಕೆಲಸಕ್ಕೆ ಯಾರಾದರೂ ಸಿಗುತ್ತಾರೆ, ಆದರೆ ಸಮಾಜದ, ಸಮುದಾಯದ ಕೆಲಸಕ್ಕೆ ಎಲ್ಲರೂ ಮುಂದಾಗುವುದಿಲ್ಲ" ಎಂದು.

'ಹತ್ತರಲ್ಲಿ ಒಬ್ಬನಾಗಿ ಬಾಳುವುದಲ್ಲ, ಹತ್ತರಲ್ಲಿ ಮೊದಲನೆಯವನಾಗಿ ಬಾಳು' ಎಂದು ಹೇಳುವ ಅವರ ಮಾತು ಯಾವಾಗಲೂ ನನ್ನಲ್ಲಿ ಅನುರಣಿಸುತ್ತಿರುತ್ತದೆ. ನಮ್ಮನ್ನು ತಮ್ಮ ಎಂಥ ಆರ್ಥಿಕ ಮುಗ್ಗಟ್ಟಿನಲ್ಲೂ ಯಾವ ಕೊರತೆಯೂ ಬಾರದಂತೆ ಕಾಪಾಡಿದ, ಕಾಲು ನೋವೆಂದಾಗ ನಮ್ಮ ಕಾಲುಗಳನ್ನು ತಮ್ಮ ಮೃದು ಕೈಗಳಿಂದ ಒತ್ತಿದ, ಬಹಳ ಸಿಟ್ಟು ಬಂದಾಗ 'ಅಯೋಗ್ಯ' ಎಂದು ಬೈದ, ತಿಂಗಳ ಸಂಬಳದ ದಿನ ನಮಗೆ ಸಿಹಿತಿನಿಸು ತಂದು ಕೊಡುತ್ತಿದ್ದ, ಜ್ವರ ಬಂದ ನನ್ನನ್ನು ತಮ್ಮ ಭುಜದ ಮೇಲೆ ಕೂಡಿಸಿಕೊಂಡು ಆಸ್ಪತ್ರೆಗೆ ಕರೆದೊಯ್ಯುತ್ತಿದ್ದ, ಶಾಲೆಯಿಂದ ಪ್ರೇಕ್ಷಣೀಯ ಸ್ಥಳಗಳಿಗೆ ಹೊರಟಾಗ ಎರಡು ಮೂರು ರೂಪಾಯಿಗಳು ಕೊಡುತ್ತಿದ್ದ, ರಾತ್ರಿ ೮.೩೦ಕ್ಕೆ ಮನೆಯವರೆಲ್ಲರೂ ಒಟ್ಟಿಗೆ ಊಟ ಮಾಡಬೇಕೆಂದು ಆಗ್ರಹಿಸುತ್ತಿದ್ದದ್ದು -ಇಂಥ ಎಷ್ಟೋ ಸಂಗತಿಗಳು ನನ್ನಲ್ಲಿ ಅಚ್ಚಳಿಯದಂತೆ ಇವೆ. ಜೀವನದಲ್ಲಿ ಎಷ್ಟೋ ಕಹಿ ಪ್ರಸಂಗಗಳು ನಡೆದಿರುವುದುಂಟು. ಅವೆಲ್ಲವನ್ನೂ ಮೀರಿ ನಿಂತ ಅವರನ್ನು ನೋಡಿದಾಗ ನನಗನ್ನಿಸು ವುದು ಅವರ ಸಾಧನೆ ನನ್ನದಾಗಲಿಲ್ಲ, ಕನಿಷ್ಠ ಅವರ ಸಾತ್ವಿಕತೆ ನನ್ನದಾಗಲಿ ಎಂದು.

'ತಾಜಾ' ತಾತ

ಟಿ.ವಿ.ಅಮೋಘವರ್ಷ
೯ನೆಯ ತರಗತಿ

ತಾ ಎಂದರೆ ತಾಜಾ, ಅಂದರೆ ಹೊಸ ಹೊಸ ಯೋಚನೆಗಳನ್ನು ಮಾಡುವುದು. ತ ಎಂದರೆ ತಂದೆಯ ತಂದೆ-ತಾತ. ಇದು ನನ್ನ ತಾತನ ಬಗ್ಗೆ ನನಗೆ ಅನ್ನಿಸುವುದು. ನನ್ನ ತಾತ ಯಾವಾಗಲೂ ಹೊಸದನ್ನೇ ಯೋಚಿಸುತ್ತಿರುತ್ತಾರೆ. ನನಗೂ ಅದನ್ನೇ ಮಾಡಲು ಹೇಳುತ್ತಾರೆ. ಅಂದ ಹಾಗೆ ನಾನು ಅಮೋಘವರ್ಷ. ನನ್ನ ತಾತನ ಮೊಮ್ಮಕ್ಕಳಲ್ಲಿ ಎರಡನೆಯವನು. ನನಗೆ ರೇಗಿಸುವುದು ಅಂದರೆ ಬಹಳ ಇಷ್ಟ. ಅದರಲ್ಲೂ ನನ್ನ ತಂಗಿ, ಅಜ್ಜಿ ಮತ್ತು ತಾತನನ್ನು ಯಾವಾಗಲೂ ರೇಗಿಸುತ್ತಿರುತ್ತೇನೆ. ನನಗೆ ಈ ಹೆಸರನ್ನು ಇಟ್ಟವರು ನನ್ನ ತಾತ. ನನಗೆ ಇದು ಬಹಳ ಇಷ್ಟ. ಅಮೋಘವರ್ಷ ಹೆಸರನ್ನು ನನ್ನ ತಾತ ನನ್ನ ತಂದೆಗೆ ಇಡಬೇಕಿತ್ತು, ಆದರೆ ಅದು ನನಗೆ ಹಾರಿಬಂತು. ಜೊತೆಗೆ ನಾನು ಹುಟ್ಟಿದ ದಿನ ಜೋರಾಗಿ ಮಳೆ ಬರುತ್ತಿತ್ತಂತೆ.

ನನ್ನ ತಾತನಿಗೆ ನಾನು ಪ್ರತಿದಿನ ರಾತ್ರಿ ಅವರ ಪಕ್ಕ ಐದು ನಿಮಿಷ ಮಲಗಬೇಕು, ಅವರು ನನಗೆ ಕಾಲನ್ನು ಒತ್ತುತ್ತಾರೆ. ಅದೇ ಸಮಯದಲ್ಲಿ ನನಗೆ ನೂರಾರು ಕೆಲಸಗಳು. ನಾನು ಬರುವುದಿಲ್ಲ ಎಂದರೆ ತಾತ ಒಪ್ಪುವುದಿಲ್ಲ, ಬೇಡುತ್ತಾರೆ.

ನನಗೆ ಮತ್ತು ನನ್ನ ತಾತನಿಗೆ ಟೆಲಿಫೋನ್ ಹಾಗೂ ಟೆಲಿವಿಷನ್‌ಗೆ ಜಗಳ ಆಗುತ್ತದೆ. ಅವರು ಗಂಟೆಗಳ ಹೊತ್ತು ದೂರವಾಣಿಯಲ್ಲಿ ಮಾತನಾಡುತ್ತಿರುತ್ತಾರೆ. ಅದೇ ಸಮಯ ದಲ್ಲಿ ನನಗೆ ನನ್ನ ಸ್ನೇಹಿತರ ಜೊತೆ ಮಾತನಾಡಬೇಕಿರುತ್ತದೆ. ಹಾಗೇ ಟಿ.ವಿ.ಯಲ್ಲಿ ನ್ಯೂಸ್ ನೋಡುತ್ತಿರುತ್ತಾರೆ. ನನಗೆ ಬೇರೆ ನೋಡಲು ಆಗುವುದಿಲ್ಲ. ನನಗೆ ಬೇಕಾದ ದನ್ನು ನೋಡಲು ಬಿಡುವುದಿಲ್ಲ.

ಮೈಸೂರಿನಲ್ಲಿ ಅವರು ಬರೆದಿರುವ ಎಷ್ಟೊಂದು ಪುಸ್ತಕಗಳನ್ನು ನಾನು ನೋಡಿ ದ್ದೇನೆ. ಆದರೆ ಓದಿಲ್ಲ. ನಿಜ ಹೇಳಬೇಕೆಂದರೆ ಅವರಿಗೆ ಎಷ್ಟು ಪ್ರಶಸ್ತಿಗಳು ಬಂದಿವೆ, ಎಷ್ಟು ಸನ್ಮಾನಗಳು ಆಗಿವೆ ಎಂಬುದೂ ನನಗೆ ಗೊತ್ತಿಲ್ಲ. ಆದರೆ ಕೆಲವು ಕಾರ್ಯಕ್ರಮ ಗಳಿಗೆ ಹೋಗಿದ್ದೇನೆ ಮತ್ತು ಅಲ್ಲಿ ಬೇರೆಯವರು ನನ್ನ ತಾತನ ಬಗ್ಗೆ ಒಳ್ಳೆಯ ಮಾತು ಗಳನ್ನು ಹೇಳಿದ್ದನ್ನು ಕೇಳಿದ್ದೇನೆ.

ನನ್ನ ತಾತ ಬೆಳಿಗ್ಗೆ ಎದ್ದಾಗಿನಿಂದ ಏನೋ ಒಂದು ಬರೀತಾನೇ ಇರುತ್ತಾರೆ. ಆಗ ನಾನು ಪ್ರಶ್ನಿಸಿದೆ, "ತಾತ, ನಿಮಗೆ ಬೋರ್ ಆಗುವುದಿಲ್ಲವೇ" ಎಂದು. ಏನೇ ಹೇಳಿದರೂ ಅವರು ನಗುತ್ತಾರೆ. ಅವರಿಗೆ ದೋಸೆ ಅಂದರೆ ಬಹಳ ಇಷ್ಟ. ಜೊತೆಗೆ ಮನೆಯಲ್ಲಿ ಯಾವುದು ಇಲ್ಲವೋ ಅದನ್ನೇ ಕೇಳುತ್ತಾರೆ. ಏನೇ ಆದರೂ ನನ್ನ ಈ 'ತಾಜಾ' ತಾತನಿಗೆ ನನ್ನ ದೊಡ್ಡ ನಮಸ್ತೇ.

ಮುದ್ದಿನ ಮೊಮ್ಮಗಳ ಮುದ್ದಿನ ತಾತ

ಟಿ.ವಿ.ಅಲಂಕೃತಾ
೪ನೆಯ ತರಗತಿ

ನಾನು ನನ್ನ ತಾತನಿಗೆ ಕೊನೆಯ ಮತ್ತು ಮುದ್ದಿನ ಮೊಮ್ಮಗಳು. ಅವರು ಮೈಸೂರಿನಿಂದ ಬಂದಾಗ ಮೊದಲು ಬ್ಯಾಗುಗಳನ್ನು ಇಟ್ಟು, 'ಎಲ್ಲರೂ ಚೆನ್ನಾಗಿದ್ದೀರ?' ಎಂದು ಕೇಳುತ್ತಾರೆ. ಪ್ರತಿಸಾರಿ ಬರುವಾಗ ನನಗೆ ಪುಸ್ತಕಗಳನ್ನು ತಂದುಕೊಡುತ್ತಾರೆ. ಅದರಲ್ಲಿ ಕೆಲವು ಕಥೆಗಳು 'ನಡಿ ಕುಂಬಳವೇ ಟರ್ರ ಪುರ್ರ' ಮತ್ತು 'ಗಣೇಶನ ಮದುವೆ'. ಮಕ್ಕಳ ಪದ್ಯಗಳು 'ತಟ್ಟು ಚಪ್ಪಾಳೆ ಪುಟ್ಟ ಮಗು', 'ಜೋಗುಳ' ಮತ್ತು 'ಬಾ ನನ್ನ ಮನೆಗೆ'. ನನಗೆ 'ತಟ್ಟು ಚಪ್ಪಾಳೆ ಪುಟ್ಟ ಮಗು' ತುಂಬಾ ಇಷ್ಟವಾಯಿತು. ರಾತ್ರಿ ಮಲಗುವಾಗ ಅವರು ನನಗೆ ಗುಡ್‌ನೈಟ್ ಹೇಳಲು ಬಲವಂತ ಮಾಡುತ್ತಾರೆ. ಅವರು ಬೆಂಗಳೂರಿನಲ್ಲೇ ಇರಲಿ ಮೈಸೂರಿನಲ್ಲೇ ಇರಲಿ ರೂಮಿನಲ್ಲಿ ಕುಳಿತು ಒಂದೇ ಸಮನೆ ಓದುತ್ತಿರುತ್ತಾರೆ. ಅವರು ಬಿಡುವಾದಾಗ ನನ್ನನ್ನು ಕರೆದು ಮುದ್ದುಮಾಡುತ್ತಾರೆ. ಅವರು ರಾತ್ರಿ ಮಲಗುವಾಗ ನನ್ನನ್ನು ಕೆಲವು ಸಲ ಹರಟೆಗಾಗಿ ತಮ್ಮ ಜೊತೆ ಇರಲು ಕರೆಯುತ್ತಾರೆ.

ಶ್ರವಣಬೆಳಗೊಳದ ಸ್ವಾಮೀಜಿಯವರು ನನಗೆ "ನಿಮ್ಮ ತಾತ ಇನ್ನೂರು ಪುಟ ಬರೆಯುತ್ತಾರೆ, ನೀನು ನಾನೂರು ಪುಟ ಬರೆಯಬೇಕು" ಎಂದು ಹೇಳಿದರು. ಅದಕ್ಕೆ ನಾನು 'ಆಗಲಿ' ಎಂದು ಹೇಳಿದ್ದೆ. ನಮ್ಮ ಮನೆಯಲ್ಲಿ ಅವರನ್ನು ಬಿಟ್ಟರೆ ನಾನೇ ಹೆಚ್ಚಾಗಿ ಪುಸ್ತಕಗಳನ್ನು ಓದುವುದು. ನಾನು ಅವರು ರೂಮಿನಲ್ಲಿ ಕುಳಿತು ಬರೆಯುತ್ತಿರುವಾಗ ಹೋಗಿ ಹಳೆಗನ್ನಡವನ್ನು ಓದುವಾಗ ನನಗೆ ತುಂಬಾ ತಮಾಷೆಯೆನ್ನಿಸುತ್ತದೆ. ಆದರೆ ನಾನು ದೊಡ್ಡವಳಾದ ಮೇಲೆ ಅವನ್ನೆಲ್ಲ ಓದಿ ಅರ್ಥಮಾಡಿಕೊಳ್ಳುತ್ತೇನೆ. ಅವರ ಹಾಗೇ ಆಗುತ್ತೇನೆ.

My Grandfather

Arnava Yashaswi
6th Standred

My grandfather is best. I love him more than my parents. When I was 8-10 months old, my grandfather helped me walk by holding my hands. I like my grandfather, because he always helped me. He visits my place very often and I also visit Mysore whenever I have bolidays to school. My grandfather took me to Mysore palace, Zoo and sometimes to park in Jayalakshmipuram. He used to carry me on his shoulder and sing and dance. He used to secretely get some cashewnuts and dry grapes from the fridge without the knowledge of my grandmother and give me a share. When I am bored he used to cut jokes and play with me. He always believed me and I believed him. Our souls are always together. We are two, but our soul is one.

Legendary Grandpa

L.S.Sri Adrija
II Year Degree

Dr. T.V.Venkatachala Sastry, an attractive and unusual name that would catch anyone's attention. However, to me, he is more than just a scholar. Moreover, sometimes wonder how I became his first grand-daughter. I was named as Sri Adrija by my grandfather. Everybody loves this name. When ever I read his articles in the newspapers, magazines I feel sometime great and special because he is the one who loves me. He is very much concerned about everything regarding me. I am his *putti* and *bangara* as he lovingly calls me and being with him is something I always look forward to.

In studies, he has always encouraged me to do better. By giving me guidelines as to how to score better in exams. He has also been generous in giving me books. In the month of April and October everytime I use to visit my grandparent's, house to spend my holidays. When ever I enter into my grandfather's room, really I feel something serene and proud to see those rackfull of valuable books. He bagged so many reputed awards given by prestigious institutions and Government. Even I have attended some of functions held in his honour. It gives me a very wonderful and excellent experience.

The first gift from him, was for my first year birthday, it was a book called "Melugaliya Maathugalu" which was authored by him. That time I was very young. So I didn't thank him. But now I have got an asuspicious opportunity to felicitate him through this. He has also written poems (Kannada tripadi) about me which makes me feel special. During my 10th

standard we had to study one of his pieces i.e., "Yesuvina Koneya Dinagalu" and this piece was taught by my mother in the class room. This situation was very pleasant in my memory. It was an absolute bliss to study my own grandfather's lessons. When ever I see his books written by him in our college library, I feel proud to be his grand daughter.

When I stepped on to the 10th year, I celebrated my birthday in Shravanabelagola. In the meanwhile the Swasti Charukeerthy Bhattarak Swamiji held a programme in Shravanabelagola, my grandfather was awarded "Gommateshwara Prashasti". It's a very memorable occassion. Many great personalities gathered over there. It was the day of Bhagavan Mahaveera's birthday. In the speech my grandfather addressed the gathering like this: "My granddaughter Adrija born on this auspicious day; I am proud of that." Hearing that word I was very much embarassed and was also proud to listen this. This occassion was one of the most unforgetable memory in my life.

Thank you grandfather for the legacy you have left me.

ಭಾಗ - ೨

ಒಡನಾಟದ ನೆನಪುಗಳು

ಗ್ರಂಥಾವಲೋಕನ

ದರ್ಶನ-ಸಂದರ್ಶನ

ಕನ್ನಡ ವಿದ್ವಾಂಸ

ಎಚ್.ಎಸ್.ದೊರೆಸ್ವಾಮಿ

ವಿದ್ವಾಂಸರಾದ ವೆಂಕಟಾಚಲ ಶಾಸ್ತ್ರಿಗಳ ತಾಯಿ ನಮ್ಮೂರಿನ ನಮ್ಮ ಪುರೋಹಿತರ ಮನೆಗೆ ಸೇರಿದವರು. ಹೀಗಾಗಿ ಶಾಸ್ತ್ರಿಗಳಿಗೂ ಹಾರೋಹಳ್ಳಿಗೂ ಒಂದು ಘನಿಷ್ಠ ನಂಟು. ಇಂದಿಗೂ ಅವರು ತಮ್ಮ ತಾಯಿಯ ತೌರಿಗೆ ಬಂದು ಹೋಗುವ ಪರಿಪಾಠ ಇಟ್ಟು ಕೊಂಡಿದ್ದಾರೆ.

ನಮ್ಮ ತಾತ ಶ್ಯಾನುಭೋಗ ಶಾಮಣ್ಣನವರು ಇರಸಾಲ್ ಪಾವತಿಗಾಗಿ ಆಗಿನ ಕಾನಕಾನಹಳ್ಳಿಗೆ ಆಗಾಗ ಹೋಗಿಬರುತ್ತಿದ್ದರು. ಅವರು ಅಲ್ಲಿಗೆ ಹೋದಾಗ ಶಾಸ್ತ್ರಿಗಳ ಮನೆಯಲ್ಲೇ ತಂಗುತ್ತಿದ್ದದ್ದು. ವೆಂಕಟಾಚಲ ಶಾಸ್ತ್ರಿಗಳ ತಂದೆ ಪೌರೋಹಿತ್ಯದಿಂದ ಜೀವನ ಸಾಗಿಸುತ್ತಿದ್ದರು. ಅವರಿಗೆ ಸ್ವಲ್ಪ ಭೂಮಿಕಾಣಿಯೂ ಇತ್ತು. ಹೀಗಾಗಿ ನಮ್ಮ ಅವರ ಮನೆತನಗಳ ಸಖ್ಯ ಇಂದಿನದಲ್ಲ ಬಹು ಹಿಂದಿನದು.

ಹೈಸ್ಕೂಲ್ ವಿದ್ಯಾಭ್ಯಾಸವನ್ನೂ ಕನಕಪುರದಲ್ಲಿ ಪೂರೈಸಿದ ಶಾಸ್ತ್ರಿಗಳು ಕಾಲೇಜು ವಿದ್ಯಾಭ್ಯಾಸಕ್ಕಾಗಿ ಮೈಸೂರಿಗೆ ಹೋದಾಗ ಅವರು ಪಟ್ಟ ಕಷ್ಟ ಅಪಾರ. ಎಷ್ಟೋ ದಿವಸ ಅವರು ಉಪವಾಸ ಮಲಗಿದ್ದೂ ಉಂಟು. ಆದರೆ ಶಿಕ್ಷಣದಲ್ಲಿ ಅಚಲಶ್ರದ್ಧೆ ಯುಳ್ಳ ಶಾಸ್ತ್ರಿಗಳು ಬಡತನದ ಮಧ್ಯೆಯೂ ಶ್ರದ್ಧಾಸಕ್ತಿಗಳಿಂದ ವ್ಯಾಸಂಗಮಾಡಿ ಒಂದು ಡಿಗ್ರಿಯನ್ನೂ ಪಡೆದರು. ಕನಕಪುರಕ್ಕೆ ಹಿಂತಿರುಗಿ ಕರಿಯಪ್ಪನವರ ಗ್ರಾಮಾಂತರ ಪ್ರೌಢಶಾಲೆಯಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸಿದರು. ಅದೇ ತಾನೆ ಸ್ಥಾಪಿತವಾದ ಕಾಲೇಜಿನಲ್ಲಿಯೂ ಸ್ವಲ್ಪಕಾಲ ಕಾಲಸ ಮಾಡಿದರು. ಬಳಿಕ ಹೈದರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರಾಗಿ ಸೇರಿದರು.

ಶಾಸ್ತ್ರಿಗಳು ಹಳೆಗನ್ನಡ, ನಡುಗನ್ನಡ, ಮತ್ತು ಹೊಸಗನ್ನಡ ಎಲ್ಲದರ ಮೇಲೂ ಪ್ರಭುತ್ವ ಹೊಂದಿದ್ದು, ಕನ್ನಡ ಕಾವ್ಯಗಳು, ಶಾಸನಗಳು, ವ್ಯಾಕರಣ, ಛಂದಶ್ಶಾಸ್ತ್ರ ಎಲ್ಲದರಲ್ಲೂ ಪಾರಂಗತರಿದ್ದಾರೆ. ಹತ್ತಾರು ವರ್ಷ ಅಲ್ಲಿ ಕೆಲಸ ಮಾಡಿದ ಶಾಸ್ತ್ರಿಗಳನ್ನು ದೇ.ಜವರೇಗೌಡರು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಆಹ್ವಾನಿಸಿ, ಕನ್ನಡ ವಿಭಾಗಕ್ಕೆ ಅಧ್ಯಾಪಕರಾಗಿ ಬರಮಾಡಿಕೊಂಡರು.

ವೆಂಕಟಾಚಲ ಶಾಸ್ತ್ರಿಗಳು ಮಿತಭಾಷಿಗಳು, ಮಂದಸ್ಮಿತರು, ತುಂಬಿದ ಕೊಡ. ಎಲೆಮರೆಯ ಕಾಯಂತಿದ್ದು ಕೆಲಸ ಮಾಡುವುದರಲ್ಲೇ ಅವರಿಗೆ ತೃಪ್ತಿ. ಅಧಿಕಾರವಾಣಿ ಯಿಂದ, ಯಾವುದೇ ಶಾಸನದ ಬಗೆಗಾಗಲಿ ಕವಿಯ ಬಗೆಗಾಗಲಿ ಕಾವ್ಯದ ಬಗೆಗಾಗಲಿ

ವ್ಯಾಕರಣಸೂತ್ರದ ಬಗೆಗಾಗಲಿ ಕರಾರುವಾಕ್ಕಾಗಿ ಮಾತನಾಡಬಲ್ಲ ಬೆರಳೆಣಿಕೆಯಷ್ಟು ವಿದ್ವಾಂಸರಲ್ಲಿ ಅವರೂ ಒಬ್ಬರು.

ತಮಿಳುನಾಡಿನ ಶೇಷಪ್ಪುರಂ ತಾಲೂಕಿನ ಪಾಣಾಂಪಟ್ ಎಂಬ ಗ್ರಾಮದಿಂದ ವಲಸೆಬಂದ ನಮ್ಮ ಮನೆತನದವರು ಹಾರೋಹಳ್ಳಿ, ಬೈರಮಂಗಲ, ಮರಳವಾಡಿ, ಕಂಬೀಪುರಗಳಲ್ಲಿ ಬಂದು ನೆಲೆಸಿರುವ ವಿಚಾರವನ್ನು ಶಾಸ್ತ್ರಿಗಳು ಪ್ರಚುರಪಡಿಸಿದ್ದಾರೆ. ಹಾರೋಹಳ್ಳಿಗೆ ಮೂಲಪುರುಷರಾದ ನಮ್ಮ ವಂಶಜರ ಉಗಮಸ್ಥಾನವನ್ನೂ ಗುರುತಿಸಿದ್ದಾರೆ.

ಶಾಸ್ತ್ರಿಗಳು ಆರಕ್ಕೆ ಏರದ, ಮೂರಕ್ಕೆ ಇಳಿಯದ ತುಂಬಿದ ಕೊಡ. ಅವರ ಪರಿಚಯ ಲಾಭ ಪಡೆದವರು ಶ್ರೀಯುತರ ವಿದ್ವತ್ತು, ವಿನಯಸಂಪನ್ನತೆ, ಸ್ನೇಹಪರತೆಗೆ ಮಾರು ಹೋಗದೆ ಇರುವುದಿಲ್ಲ. ಈ ವಿದ್ವಾಂಸರು ನೂರ್ಕಾಲ ಬಾಳಿ ಸರ್ಕಾರ ಮತ್ತು ಸಮಾಜದಿಂದ ಇನ್ನೂ ಹೆಚ್ಚಿನ ಘನತೆಗೌರವಗಳನ್ನು, ಸಾರಸ್ವತಲೋಕದಲ್ಲಿ ಶಾಶ್ವತಸ್ಥಾನವನ್ನು ಪಡೆಯುವಂತಾಗಲಿ ಎಂದು ಆಶಿಸುವವರಲ್ಲಿ ನಾನೂ ಒಬ್ಬ.

ಕಾನಕಾನಹಳ್ಳಿ ವರದಾಚಾರ್ಯರು, ಕೆ.ಎಸ್.ನಾರಾಯಣಾಚಾರ್ಯರು, ಮತ್ತು ಟಿ.ವಿ.ವೆಂಕಟಾಚಲ ಶಾಸ್ತ್ರಿಗಳಂತಹ ಸಾಹಿತ್ಯದ ದಿಗ್ಗಜರನ್ನು ಸಾರಸ್ವತಲೋಕಕ್ಕೆ ಅರ್ಪಣೆ ಮಾಡಿರುವುದು ಕನಕಪುರದ ವೈಶಿಷ್ಟ್ಯ.

ಸಜ್ಜನರ ಸಂಗವದು ಹೆಜ್ಜೇನು ಮೆದ್ದಂತೆ

ಜಿ.ಟಿ.ನಾರಾಯಣ ರಾವ್

ಆತ್ಮೀಯ ಸಹೋದ್ಯೋಗಿ, ಸನ್ಮಿತ್ರ, ವಿದ್ವಾಂಸ ಮತ್ತು ಸಹೃದಯ ಡಾ.ಟಿ.ವಿ. ವೆಂಕಟಾಚಲ ಶಾಸ್ತ್ರಿಯವರೊಂದಿಗಿನ ಒಡನಾಟ ಒದಗಿದಾಗ ಮತ್ತು ಅದನ್ನು ನೆನೆದಾಗಲೆಲ್ಲ ನನ್ನ ಮನದೊಳಗೆ ಮಿಡಿಯುವ ಭಾವ, ಸರ್ವಜ್ಞನ ನುಡಿಗಳಲ್ಲಿ, “ಸಜ್ಜನರ ಸಂಗವದು ಹೆಜ್ಜೇನು ಮೆದ್ದಂತೆ.” ಅದು ಆಪಾತಮಧುರ, ಇನ್ನು ಅದರ ಸ್ಮರಣೆಯೋ ಮಧುರತರ: “ಶ್ರುತಗಾನಮಭಿರಾಮಶ್ರುತಗಾನಮಭಿರಾಮತರಂ” ಎಂಬಂತೆ. (ಇದು ಡಿವಿಜಿಯವರು ಕೀಟ್ಸ್ ಕವಿಯ Heard melodies are sweet, but those unheard are sweeter ಎಂಬ ಸಾಲಿಗೆ ಕೊಟ್ಟಿರುವ ಭಾವಾನುವಾದ).

೧೯೬೯ರಲ್ಲಿ ನಾನು ‘ಕನ್ನಡ ವಿಶ್ವಕೋಶ’ದ ವಿಜ್ಞಾನಸಂಪಾದಕನಾಗಿ ಕನ್ನಡದ ಜೇನುಗೂಡು ಕುವೆಂಪು ಕನ್ನಡ ಅಧ್ಯಯನಸಂಸ್ಥೆಯನ್ನು ಸೇರಿದೆ. ದೇಜಗೌ ಇದರ ನಿರ್ದೇಶಕರು. ಇಲ್ಲಿದ್ದ ಕನ್ನಡ ಋಷಿಗಳ ಸಾಲಿನಲ್ಲಿ “ಇರಬೇಕು ಇರದಿರಬೇಕು ಸಂಸಾರದಿ ಜನಕಾದಿ ಋಷಿಗಳಂತೆ” (ಪುರಂದರದಾಸ) ಇದ್ದು, ಸಮಾನಾಸಕ್ತಿಗಳ ಕಾರಣ ವಾಗಿ ನನಗೆ ಕ್ರಮೇಣ ಆಪ್ತರಾದವರು ಇಬ್ಬರು. ನನ್ನ (೩೦-೧-೧೯೩೬) ಸಮಪ್ರಾಯದವ ರಾಗಿದ್ದ ಎನ್.ಬಸವಾರಾಧ್ಯ (೨೦-೮-೧೯೩೬) ಮತ್ತು ವಯಸ್ಸಿನಲ್ಲಿ ನನಗಿಂತ ಕಿರಿಯ ರಾಗಿದ್ದ ಟಿ.ವಿ.ವೆಂಕಟಾಚಲ ಶಾಸ್ತ್ರೀ(೨೬-೮-೧೯೩೩). ವಯೋಸಾಮ್ಯ ವ್ಯತ್ಯಾಸ ಏನೇ ಇರಲಿ ಇಬ್ಬರೂ ವಿಜ್ಞಾನಹೃದಯಿಗಳಾಗಿ ಸಾಹಿತ್ಯಕೋವಿದರಾಗಿದ್ದುದರಿಂದ ನನ್ನ ಆತ್ಮೀಯ ಮಿತ್ರರಾದರು. ಅಂದರೆ ಹಲವಾರು ಸಮಾನ ಆಸಕ್ತಿಗಳು ನಮ್ಮನ್ನು ಒಂದು ಗೂಡಿಸಿದ್ದುವು.

ಆಧುನಿಕ ವಿಜ್ಞಾನಪರಿಕಲ್ಪನೆಗಳನ್ನು ಯುಕ್ತ, ಅಸಂದಿಗ್ಧ ಮತ್ತು ಅಡಕ ಕನ್ನಡ ನುಡಿಗಳಲ್ಲಿ ಹಿಡಿದಿಡುವುದು ನನ್ನ ವೃತ್ತಿ. ಐತಿಹಾಸಿಕ ಕಾರಣಗಳಿಂದಾಗಿ ಇಂಗ್ಲಿಷಿಗೆ ವಿಜ್ಞಾನದ ಭಾಷೆಯೂ ಹೌದೆಂಬ ಅಂತಾರಾಷ್ಟ್ರೀಯ ಅಂತಸ್ತು ಬಂದಿದೆ, ಮತ್ತು ಆ ರೀತಿ ಅದು ಬೆಳೆದಿದೆ. ಕನ್ನಡಕ್ಕೆ ಈ ಹಿರಿಮೆಯನ್ನು ಒದಗಿಸುವುದು ನನ್ನ ಎದುರಿದ್ದ ಸವಾಲು. ಇಂಥ ಕನ್ನಡ ಹೇಗಿರಬೇಕು? ಅದು ಭಾಷಾಶುದ್ಧತೆಯನ್ನೂ ಮರ್ಯಾದೆ ಯನ್ನೂ ಉತ್ಕ್ರಮಿಸದಂತೆ ವಿಜ್ಞಾನದ ಸಂಕೀರ್ಣ ಪರಿಕಲ್ಪನೆಗಳಿಗೆ ಸ್ಪಷ್ಟ ಮತ್ತು ಭದ್ರ ಆಸರೆ ಒದಗಿಸುವ ಸಂವಹನಮಾಧ್ಯಮವಾಗಬೇಕು. ಅರ್ಥಾತ್ ವಿಜ್ಞಾನ ಕುರಿತ ಯಾವುದೇ ಆಧುನಿಕ ಶ್ರೇಷ್ಠ ಇಂಗ್ಲಿಷ್ ಆಕರಗ್ರಂಥದಲ್ಲಿಯ ಶೈಲಿಯಂತೆ ನಮ್ಮ

ಚೆಲುಗನ್ನಡವೂ ಶೋಭಿಸಬೇಕು. ಇದು ಸಾಧ್ಯವೇ? ಆ ದಿನಗಳಲ್ಲಿ ನಾನು ಆರಾಧ್ಯ-ಶಾಸ್ತ್ರೀ ಯಮುಳನಕ್ಷತ್ರಗಳೊಂದಿಗೆ ದಿನದಿನವೆಂಬಂತೆ ಚರ್ಚಿಸಿ ಉಪಯುಕ್ತ ಮಾರ್ಗದರ್ಶನ ಪಡೆಯುತ್ತಿದ್ದೆ. ಕನ್ನಡಕ್ಕೆ ಹೊಸ ಆಯಾಮ ಒದಗಿಸುವ ಈ ಕೈಂಕರ್ಯದಲ್ಲಿ ಇವರಿಬ್ಬರೂ ನನ್ನ ಸಮಸ್ಯೆಯನ್ನು ತಮ್ಮದಾಗಿಸಿಕೊಂಡು ಸಾಕ್ಷ್ಯಾಧಾರ ಸಹಿತ ಸೂಚಿಸುತ್ತಿದ್ದ ಪರಿಹಾರ ಅವಿಸ್ಮರಣೀಯವಾದುದು.

ಕವಿಹೃದಯದ ಮತ್ತು ಪಂಡಿತಮನದ ಶಾಸ್ತ್ರಿಯವರು ನನಗೊಬ್ಬ ಜೀವಂತ ಜಂಗಮ ಆಕರಗ್ರಂಥವಾಗಿದ್ದರು. ಸಹಜವಾಗಿ ಆತ್ಮೀಯತೆಯೂ ಇದರಿಂದ ಒದಗುವ ಸಲಿಗೆಯೂ ನಮ್ಮಿಬ್ಬರ ನಡುವೆ ಬೆಳೆದುವು. ಒಮ್ಮೆ ನನ್ನಿಂದ ಅನುದ್ದಿಷ್ಟವಾಗಿ ಈ ಸಲಿಗೆಯ ದುರುಪಯೋಗವಾಗಿಹೋಯಿತು. "ನೆತ್ತಮನಾಡಿ ಭಾನುಮತಿ ಸೋಲ್ತೊಡೆ" ಎಂಬ ಪಂಪಮಹಾಕವಿಯ ಸುಪರಿಚಿತ ಸಾಲುಗಳನ್ನು ಪಂಡಿತ ಸೇಡಿಯಾಪು ಕೃಷ್ಣಭಟ್ಟರು (೧೯೦೨-೯೬) ವಿಶ್ಲೇಷಿಸುತ್ತ ಭಾನುಮತಿ ಪಗಡೆ ಆಡಿದ್ದು ತನ್ನ ಪತಿ ದುರ್ಯೋಧನನ ಜೊತೆಗೇ ಹೊರತು ಪತಿಮಿತ್ರ ಕರ್ಣನೊಂದಿಗೆ ಅಲ್ಲ ಎಂಬ ತೀರ್ಮಾನಕ್ಕೆ ಬಂದಿದ್ದರು. ಈ ಸಂಶೋಧನಲೇಖನ 'ಪ್ರಬುದ್ಧಕರ್ಣಾಟಕ'ದಲ್ಲಿ 'ಭಾನುಮತಿಯ ನೆತ್ತ' ಎಂಬ ಶೀರ್ಷಿಕೆಯ ಅಡಿ ಪ್ರಕಟವೂ ಆಯಿತು(ಸಂಪುಟ ೫೮, ಸಂಚಿಕೆ ೩, ೧೯೭೬). ಲೇಖಕರ ಆಶಯದಂತೆ ಇದರ ಮುದ್ರಣದ ಕರಡನ್ನು ನಾನು ಓದಿದ್ದೆ ಮತ್ತು ಅವರ ಸಹಜ ತಾರ್ಕಿಕತೆಯನ್ನು ಮೆಚ್ಚಿದ್ದೆ ಕೂಡ.

ಕನ್ನಡದ ರಾಜಗುರು ಡಿ.ಎಲ್.ನರಸಿಂಹಾಚಾರ್ಯರು (೧೯೦೬-೭೧) ಆ ವ್ಯಕ್ತಿ ಕರ್ಣನೆಂಬ ತೀರ್ಮಾನವನ್ನು ಬಲು ಹಿಂದೆಯೇ ನೀಡಿದ್ದರಂತೆ. ಇವರ ಅಗ್ರಮಾನ್ಯ ಶಿಷ್ಯರೂ ಸ್ವಪ್ರತಿಭೆಯಿಂದ ಸಮರ್ಥ ಉತ್ತರಾಧಿಕಾರಿಯೂ ಆಗಿದ್ದ ಶಾಸ್ತ್ರಿಯವರ ಲಕ್ಷ್ಯವನ್ನು ಈ ಲೇಖನದತ್ತ ಸೆಳೆದು, "ಡಿಎಲ್‌ಎನ್ ಅಭಿಪ್ರಾಯ ಸರಿಯಲ್ಲವೆನ್ನುತ್ತದಲ್ಲ, ಈ ಲೇಖನ? ನೀವೇನನ್ನುತ್ತೀರಿ?" ಎಂದು ಕೆಣಕಿದೆ.

"ಬಿಡಿ ಸರ್! ಡಿಎಲ್‌ಎನ್ ಭರತವಾಕ್ಯಕ್ಕೆ ಎದುರಾಗಿ ಏನೇ ಇದ್ದರೂ ಯಾರೇ ಬರೆದರೂ ಅದು ಜಳ್ಳೇ" ಎಂಬ ಪ್ರತ್ಯಸ್ತ್ರ ಹೊಡೆದರು.

"ಹಾಗಾದರೆ ಸೇಡಿಯಾಪು ಲೇಖನದಲ್ಲಿಯ ದೋಷವನ್ನು ಕಾಣಿಸುವ ಒಂದು ಟಿಪ್ಪಣಿಯನ್ನು ನೀವು ಬರೆಯಬಹುದಲ್ಲ?"

"ವ್ಯರ್ಥ ಕಾಲಹರಣ. ನನಗೆ ಆಸಕ್ತಿ ಇಲ್ಲ" ಎಂದರು.

ತುಸು ಉದ್ರಿಕ್ತನಾಗಿ ನಾನೆಂದೆ, "ಇಂಥ ಅವೈಜ್ಞಾನಿಕ ನಿಲುವು ಖುದ್ದು ನಿಮ್ಮ ಗುರುಗಳಿಗೇ ಮರ್ಯಾದೆ ತರುವಂಥದಲ್ಲ."

ಹಲವಾರು ವರ್ಷಗಳು ಸಂದವು. ಉಡುಪಿಯಲ್ಲಿ ಸೇಡಿಯಾಪು ಶತಮಾನೋತ್ಸವ ಸಮಾರಂಭದಲ್ಲಿ (೨೦೦೨) 'ಸೇಡಿಯಾಪು ವಿದ್ವತ್ತು' ಕುರಿತ ಪ್ರಧಾನ ಭಾಷಣಕಾರರು ನಮ್ಮ ಶಾಸ್ತ್ರಿಗಳು. ಯೋಗಾಯೋಗ, ನಾನೂ ಆ ಸಭೆಯಲ್ಲಿದ್ದ ಒಬ್ಬ ಪ್ರೇಕ್ಷಕ.

ಕವಿಹೃದಯದ ಸಂಶೋಧಕ-ವಿಮರ್ಶಕ ಶಾಸ್ತ್ರಿಗಳು 'ನೆತ್ತ'ದ ವಿಷಯವನ್ನು ಎತ್ತಿಕೊಂಡು ಸೇಡಿಯಾಪು ತೀರ್ಮಾನವನ್ನು ಒಪ್ಪಿದ ಪರಿ ಅನನ್ಯವಾಗಿತ್ತು. "ಇತರ ವಿದ್ವಾಂಸರ ಕಣ್ಣುಗಳು ಹಾಯದ ನೆಲೆಗಳನ್ನೂ ತಲುಪದ ನೇರಗಳನ್ನೂ ಅವರ ಕಣ್ಣುಗಳು ಹಾಯುತ್ತವೆ, ತಲಪುತ್ತವೆ. ಆ ಕಣ್ಣುಗಳು ನಿಜವನ್ನು ಯಶಸ್ವಿಯಾಗಿ ಗುರುತಿಸುತ್ತವೆ; ಕತ್ತಲಲ್ಲಿ ಬೆಳಕಿನ ಕಿರಣಗಳನ್ನು ಹೊಮ್ಮಿಸುತ್ತವೆ" ಎಂದರಿವರು. ಡಿ.ವಿ.ಗುಂಡಪ್ಪನವರು (೧೮೮೭-೧೯೭೫) ಬರೆದಿರುವ ಸೂಕ್ತಿ ನನ್ನ ನೆನಪಿಗೆ ಬಂತು:

> ಸಂದೇಹವೀ ಕೃತಿಯೊಳಿನ್ನಿಲ್ಲವೆಂದಲ್ಲ
> ಇಂದು ನಂಬಿದುದೆ ಮುಂದೆಂದುಮೆಂದಲ್ಲ
> ಕುಂದು ತೋರ್ದಂದದನು ತಿದ್ದಿಕೊಳೆ ಮನವುಂಟು
> ಇಂದಿಗೀ ಮತವುಚಿತ - ಮಂಕುತಿಮ್ಮ

ಋಜು ವೈಜ್ಞಾನಿಕಚಿಂತಕರ ಲಕ್ಷಣವಿದು: ಇಂಥವರು 'ಕಾವ್ಯಪರಿಣತಮತಿಗಳು'; ಮಾತ್ರವಲ್ಲ ವಿಜ್ಞಾನನಿಶಿತಮತಿಗಳೂ ಹೌದು.

ಇನ್ನೊಮ್ಮೆ Niels Bohr was both *possessed* by and *obsessed* with physics (ಓರೆ ಅಕ್ಷರಗಳನ್ನು ಅವಧಾರಣೆಯ ಸಲುವಾಗಿ ನಾನು ಸೇರಿಸಿದ್ದು) ಎಂಬ 'ಋಷಿವಾಕ್ಯ'ವನ್ನು ಕನ್ನಡದಲ್ಲಿ ಅಷ್ಟೇ ಸೊಗಸಾಗಿ ಪುನಾರೂಪಿಸುವ ಸಮಸ್ಯೆ ಎದುರಾಯಿತು. ನನ್ನ ಸಾಹಿತ್ಯಭಂಡಾರವನ್ನು ಪೂರ್ತಿ ಶೋಧಿಸಿ "ನೀಲ್ಸ್ ಬೋರ್ ಭೌತವಿಜ್ಞಾನದಿಂದ ವಶೀಕೃತರೂ ಸಂಪೀಡಿತರೂ ಆಗಿದ್ದರು" ಎಂಬ ಕರಡನ್ನು ತಯಾರಿಸಿ ಶಾಸ್ತ್ರಿಗಳ ನಿಕಷಕ್ಕೆ ಒಡ್ಡಿದೆ.

ಬೋರ್ ವ್ಯಕ್ತಿತ್ವ ಕುರಿತ ಪೂರ್ತಿ ಮಾಹಿತಿ ಕೊಡುತ್ತ ಹೇಳಿದೆ, "ನನ್ನ ಅನುವಾದ ಸ್ಪಷ್ಟವಾಗಿದ್ದರೂ ಕಾವ್ಯಗಂಧಿಯಾಗಿಲ್ಲ. ಹಾದಿ ತೋರಿಸಿ."

"ನೋಡಿ ರಾಯರೇ! 'ವಶೀಕೃತ ಮತ್ತು ಸಂಪೀಡಿತ' ಎಂಬ ಸಂಸ್ಕೃತಪದಗಳ ಬದಲು 'ಹಿಡಿತ' ಮತ್ತು 'ತುಡಿತ' ಎಂಬ ಅಪ್ಪಟ ದೇಸೀಪದಗಳನ್ನು ಬಳಸಿದರೆ ಕಾವ್ಯಗಂಧ ತಂತಾನೇ ಹೊಮ್ಮುತ್ತದೆ."

ಅವರ ನಿಕಷದಲ್ಲಿ ಪುಟಗೊಂಡ ವಾಕ್ಯ: "ಭೌತವಿಜ್ಞಾನ ನೀಲ್ಸ್ ಬೋರ್‌ರನ್ನು ಪೂರ್ತಿ ಹಿಡಿದಿತ್ತು, ಅದೇ ಅವರ ತುಡಿತವೂ ಆಗಿತ್ತು."

ಭೌತಚಂದ್ರನ ಮೇಲೆ ಮೊದಲಬಾರಿಗೆ ಕಾಲಿಟ್ಟ ನೀಲ್ ಆರ್ಮ್‌ಸ್ಟ್ರಾಂಗ್ ಅಲ್ಲಿಂದ ಉದ್ಗರಿಸಿದ ನುಡಿ(೧೯೬೯): "That was a small step for a man, but a giant leap for mankind." ಹಲವು ಕಾಲ ತಿಣುಕಿ ನಾನು giant leapಗೆ ಸಂವಾದಿಯಾಗಿ 'ಹನುಮಂತಲಂಘನ' ಎಂಬುದನ್ನು ಬಳಸಿದೆ. ಅದು 'ದೈತ್ಯದಾಪು' ಆಗಬೇಕು ಎಂಬುದು ಸಹೋದ್ಯೋಗಿಗಳ ಅಭಿಪ್ರಾಯ. ವೃಥಾ ರಾಮಾಯಣದ, ಸಾಮಾನ್ಯರಿಗೆ ಅಪರಿಚಿತ

ವಾದ, ರೂಪಕವನ್ನು ವಿಜ್ಞಾನಲೇಖನದೊಳಗೆ ತುರುಕಬೇಕಾಗಿಲ್ಲ ಎಂಬುದು ಈ ಮಿತ್ರರ ಸಬೂಬು. ಯಥಾಪ್ರಕಾರ ಶಾಸ್ತ್ರಿಗಳ ನಿಕಷದಲ್ಲಿ ಈ ಹೊಸ 'ಲೋಹ' ವನ್ನೂ ಒರೆಗೆ ಹಚ್ಚಿದೆ.

ಸನ್ನಿವೇಶದ ಭಾವೋತ್ಕಟತೆಯನ್ನೂ ತತ್ಪರಿಣಾಮವಾಗಿ ಅದು ಭಾಷಾಭಿವ್ಯಕ್ತಿಯಲ್ಲಿ ಒತ್ತಬೇಕಾದ ಛಾಪನ್ನೂ ಕವಿಹೃದಯದಿಂದ ಗಮನಿಸಿದ ಅವರು 'ಹನುಮಂತ ಲಂಘನ'ದ ಪ್ರಯೋಗವನ್ನು ಮೆಚ್ಚಿ ಸಮರ್ಥಿಸಿದರು: 'ಸಾಹಿತ್ಯಗಂಧಶೂನ್ಯ ಸ್ಪಷ್ಟತೆ ಶುಷ್ಕ, ಸ್ಪಷ್ಟತೆರಿಕ್ತ ಸಾಹಿತ್ಯ ವ್ಯರ್ಥ' ಎಂಬ ನನ್ನ ಖಚಿತ ಧೋರಣೆಗೆ ಅವರಿಂದ ಅಧಿಕೃತ ಅಸ್ತು ಮುದ್ರೆ ದೊರೆಯಿತು. ಇಂಥ ಅನುಭವಗಳು ಅಪಾರ.

ಕೆಲವು ವರ್ಷಗಳ ಹಿಂದೆ (೨೦೦೩) ನಾನು ತೀವ್ರ ವ್ಯಾಧಿಗ್ರಸ್ತನಾದೆ. ವಯಸ್ಸು ೭೬ ದಾಟಿತ್ತು. ಬದುಕು-ಸಾವು ನಡುವಿನ ಹೋರಾಟ. ಮನೆಮಂದಿ ನನ್ನನ್ನು ಬಸಪ್ಪ ಮೆಮೋರಿಯಲ್ ಆಸ್ಪತ್ರೆಯ ತೀವ್ರ ನಿಗಾ ಘಟಕಕ್ಕೆ ಸೇರಿಸಿದರು. ಈ ಸುದ್ದಿ ಶಾಸ್ತ್ರಿಯ ವರಿಗೆ ತಿಳಿಯಿತು. ಮರುಮುಂಜಾನೆ ಅವರು ನನ್ನ ಕೊಠಡಿಯಲ್ಲಿ ಪ್ರತ್ಯಕ್ಷ- ಆಗ ತಾನೇ ಮನೆಯಲ್ಲಿ ಡಿಕಾಕ್ಷನ್ ಬೆರೆಸಿ ಸಿದ್ಧಗೊಳಿಸಿದ್ದ ಸುಡುಸುಡು ಕಾಫಿ ಮತ್ತು ತುಸು ತಿಂಡಿ ಸಹಿತ! ಆಸ್ಪತ್ರೆ ಹತ್ತಿರವೇ ಅವರ ಮನೆ ಇದ್ದುದರಿಂದ ಪ್ರತಿ ಮುಂಜಾನೆ ಈ ಕಾಫಿ ತಿಂಡಿ ಸೇವೆ ಅವರಿಗೆ ನೀಡಿದ ಮುದಕ್ಕಿಂತ ಹೆಚ್ಚಿನ ಸಂತೋಷ ಮತ್ತು ಉತ್ಸಾಹ ನನಗೆ ಕೊಟ್ಟಿತು. ಆ ಬೈಠಕ್ಕುಗಳಲ್ಲಿ ಅವರು ಹೇಳಿದ ವಿಶ್ವೇಶ್ವರಯ್ಯನವರ ಬಗೆಗಿನ ಘಟನೆಗಳು, ಸ್ವಂತ ಜೀವನದ ಸ್ವಾರಸ್ಯಕರ ಅಂಶಗಳು, ಕನ್ನಡವಾಙ್ಮಯ ಕುರಿತ ಇತಿಹಾಸ ಮುಂತಾದವು ನನ್ನ ಮಾನಸಿಕ ಧೃತಿಯನ್ನು ಸದಾ ಉನ್ನತಮಟ್ಟದಲ್ಲಿ ಟ್ಟಿದ್ದುವೆಂಬುದನ್ನು ಕೃತಜ್ಞತೆಯಿಂದ ನೆನೆಯುತ್ತೇನೆ.

ಕನ್ನಡ ವಿಜ್ಞಾನವಾಙ್ಮಯ ರಚನೆಯ ವೇಳೆ ನನ್ನ ಅಮೂಲ್ಯ ಸಂಗಾತಿಗಳ ಸಾಲಿನಲ್ಲಿ ಶಾಸ್ತ್ರಿಗಳು ರಚಿಸಿರುವ 'ಶ್ರೀವತ್ಸ ನಿಘಂಟು' (೧೯೭೧) ಮತ್ತು 'ಕನ್ನಡ ಚೆನ್ನುಡಿ' (೧೯೯೧) ಕೂಡ ಸೇರಿವೆ ಎಂದು ಅಭಿಮಾನಸಹಿತ ಹೇಳಬಯಸುತ್ತೇನೆ. 'ಕನ್ನಡ ಚೆನ್ನುಡಿ'ಯ 'ವಿದ್ಯಾಭ್ಯಾಸ' ಅಧ್ಯಾಯದಲ್ಲಿ ಐದನೆಯ ಉದಾಹರಣೆಯಾಗಿ ನಾಗವರ್ಮನ 'ಕಾವ್ಯಾವಲೋಕನ'ದಿಂದ ಆಯ್ದ ಒಂದು ಪದ್ಯವನ್ನು ಉಲ್ಲೇಖಿಸುತ್ತ, ಅದರ ಅರ್ಥವನ್ನೂ ಬರೆದಿದ್ದಾರೆ: "ಸುಲಭವಾಗಿ ತಿಳಿಯತ್ತಿಲ್ಲ ಎಂದು ಕೈಬಿಡುವುದು ಸೂಕ್ತವಲ್ಲ; ರೀತಿಯನ್ನು ಬಲ್ಲ ವಿದ್ವಾಂಸರಿಂದ, ದೂತರಿಂದ, ವಿಚಾರವಂತರಿಂದ, ಬೇರೆ ಇತರರಿಂದ, ಪಳಗಿದವರಿಂದ ಇನ್ನೂ ಚೆನ್ನಾಗಿ ಆಲೋಚಿಸಿ ತಿಳಿಯಿರಿ. ಕೂಡಲೇ ಹೇಗೆ ತಾನೇ ತಿಳಿಯಲಾದೀತು? ನಮಗೆ ಇಷ್ಟವಾದ್ದು ಪುಣ್ಯದಿಂದ ತಾನೆ ಕೈಗೂಡು ವುದು? (ಸಯ್ಪಿನಿಂ ಸಮನಿಕ್ಕುಮಲ್ತೆ ಸಮೀಹಿತಂ)"

ಇಂಥ 'ಸಯ್ಸಿನಿಂ' ನನಗೆ ಶಾಸ್ತ್ರಿಗಳ ಜೊತೆಗಿನ ಬೌದ್ಧಿಕಸಾಹಚರ್ಯ ಲಭಿಸಿತೆಂಬುದನ್ನು ಕೃತಜ್ಞತೆಯಿಂದ ಸ್ಮರಿಸುತ್ತ ಅವರಿಗೂ ಅವರ ಕುಟುಂಬದ ಸಕಲರಿಗೂ ಶ್ರೇಯಸ್ಸನ್ನು ಕೋರುತ್ತೇನೆ.

ಸಾಹಿತ್ಯವೈದುಷ್ಯ ಸಹೃದಯತೆ ಜೊತೆಗೂಡಿ
ದೇಹರೂಪವ ಪಡೆದು ನಿಂತಿಹರೊ, ಓದು ಸಂ
ದೇಹವನ್ನೆಚ್ಚಾಗ ಪರಿಹರಿಸೆ ಬಂದಿಹರೊ
ವೆಂಕಟಾಚಲ ಶಾಸ್ತ್ರಿ ನಾನರಿಯೆ ಅತ್ರಿಸೂನು

ಚಾವಟಿಯಿಲ್ಲದೆ ಬುಗುರಿಯೇ...?

ನ.ಸುಬ್ರಹ್ಮಣ್ಯಂ

ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿಗಳು ಮತ್ತು ನಾನು ಓದಿದ ಕಾಲೇಜು, ಗುರು ಪರಂಪರೆ, ವಾತಾವರಣ ಎಲ್ಲ ಒಂದೇ. ಆದರೆ ಅವರು ಮಹಾರಾಜ ಕಾಲೇಜಿಗೆ ಬಂದು ಸೇರಿದರು, ಅದೇ ವರ್ಷ ನಾನು ಆ ಕಾಲೇಜನ್ನು ಬಿಟ್ಟೆ. ಹಾಗಾಗಿ ನಮ್ಮಿಬ್ಬರಿಗೂ ಪರಸ್ಪರ ಭೇಟಿಯಾಗಲಿಲ್ಲ. ಅನಂತರ ಹದಿನಾಲ್ಕು ವರ್ಷ ನಾನು ವನವಾಸದಲ್ಲಿದ್ದೆ, ಅಂದರೆ ಮಡಿಕೇರಿಯ ಕಾಲೇಜಿನಲ್ಲಿ ಬೋಧಕನಾಗಿದ್ದೆ. ಆ ಅವಧಿಯಲ್ಲಿ ಆಗಾಗ್ಗೆ ಮೈಸೂರಿಗೆ ಬರುತ್ತಿದ್ದೆನಾದರೂ ಅವರನ್ನು ಭೇಟಿಯಾಗುವ ಸಂದರ್ಭ ಬೀಳಲಿಲ್ಲ. ೧೯೬೩ರಲ್ಲಿ ಉಸ್ಮಾನಿಯಾ ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕರ ಹುದ್ದೆಗೆ ಅಭ್ಯರ್ಥಿಯಾಗಿ ಸಂದರ್ಶನಕ್ಕೆಂದು ಪಯಣಿಸುತ್ತಿದ್ದಾಗ, ಅದೇ ಆಮಿಷದಿಂದ ಪ್ರಯಾಣಿಸುತ್ತಿದ್ದ ಡಾ.ಕೆ.ಎಂ.ಕೃಷ್ಣರಾವ್ ಅವರು ರೈಲಿನಲ್ಲಿ ಭೇಟಿಯಾದರು. ಊರು ಕಾಣದಿದ್ದವನಿಗೆ ಜೊತೆಯಾಯಿತೆಂದು ಇಬ್ಬರೂ ಜೊತೆಗೂಡಿದೆವು. ಅವರು ಕಾಚಿಗೂಡ ಸ್ಟೇಶನಿನಲ್ಲಿ ಇಳಿದರು, ನಾನೂ ಇಳಿದೆ. ಬನ್ನಿ ಹೋಗೋಣ ಎಂದರು, ಜೊತೆಯಲ್ಲಿ ಹೊರಟೆ. ನಾವು ಹೋದದ್ದು ಕುತ್‌ಬಿಗುಡದಲ್ಲಿದ್ದ ಡಾ. ಟಿ.ವಿ.ವೆಂಕಟಾಚಲ ಶಾಸ್ತ್ರಿಗಳ ಮನೆಗೆ. ಅವರು ಆಗ ಉಸ್ಮಾನಿಯಾ ವಿಶ್ವವಿದ್ಯಾಲಯದ ಮಹಿಳಾಕಾಲೇಜಿನಲ್ಲಿ ಬೋಧಕರಾಗಿದ್ದರು.

ಕೃಷ್ಣರಾಯರೇನೋ ನಿರೀಕ್ಷಿತ ಅತಿಥಿ. ಆದರೆ ನಾನು ಅನಿರೀಕ್ಷಿತನೆಂದು ಸಂಕೋಚ ಗೊಂಡೆ. ಆದರೆ ಆ ಸಂಕೋಚವಿದ್ದುದು ಕೆಲವು ಕ್ಷಣಗಳು ಮಾತ್ರ. ಶ್ರೀ ಶಾಸ್ತ್ರಿಗಳ ಮತ್ತು ಅವರ ಪತ್ನಿಯ ಸಜ್ಜನಿಕೆ, ಆತ್ಮೀಯತೆ, ಆದರಣೆ, ಆತಿಥ್ಯ, ರಸಭೋಜನ ನನ್ನ ಸಂಕೋಚವನ್ನೆಲ್ಲ ದೂರಮಾಡಿಬಿಟ್ಟಿತು. ಎಷ್ಟೋ ದಿನಗಳ ಮೈತ್ರಿ ಇದ್ದಂತೆನಿಸಿತು.

ಉಸ್ಮಾನಿಯಾ ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕಹುದ್ದೆಯ ಸಂದರ್ಶನದ ಮಾತು ಹಾಗಿರಲಿ(ನಾವಿಬ್ಬರೂ ಬರಿಗೈಯಲ್ಲೇ ಹಿಂತಿರುಗಿದೆವು), ಶಾಸ್ತ್ರಿಗಳ ಮಾರ್ಗ ದರ್ಶನದಲ್ಲಿ ಹೈದರಾಬಾದಿನ ಪ್ರೇಕ್ಷಣೀಯ ಸ್ಥಳಗಳನ್ನೆಲ್ಲ ನೋಡಿ, ನೆನಪಿನ ವಸ್ತು ಗಳನ್ನೆಲ್ಲ ಕೊಂಡು, ಹಿಂತಿರುಗಿದುದನ್ನು ಮಾತ್ರ ನಾನೆಂದೂ ಮರೆಯಲಾರೆ.

ಶಾಸ್ತ್ರಿಗಳು ಮೈಸೂರಿಗೆ ಬಂದಮೇಲೂ ಅವರ ಮನೆಯ ಆತಿಥ್ಯವನ್ನು ಸವಿದಿದ್ದೇನೆ. ಅವರು ಮಾನಸಗಂಗೋತ್ರಿಯ ಕನ್ನಡ ಅಧ್ಯಯನಸಂಸ್ಥೆಯ ನಿರ್ದೇಶಕರಾಗಿದ್ದಾಗ

ನಡೆಸಿದ ಮಹಾಭಾರತವನ್ನು ಕುರಿತ ಒಂದು ವಿಚಾರಸಂಕಿರಣಕ್ಕೆ ನಾನೂ ಆಹ್ವಾನಿತನಾಗಿ ಹೋಗಿದ್ದೆ.

ಶ್ರೀ ಶಾಸ್ತ್ರಿಗಳ ಬೌದ್ಧಿಕಸತ್ತ್ವ ಅಸಾಧಾರಣವಾದುದು. ಅವರ ಪ್ರತಿಭೆ ಬಹುಮುಖ ವಾದುದು. ಆಡು ಮುಟ್ಟದ ಸೊಪ್ಪಿಲ್ಲ ಎಂಬಂತೆ ಶಾಸ್ತ್ರಿಗಳು ಸ್ಪರ್ಶಿಸದ ವಸ್ತುವೇ ಇಲ್ಲ. ವ್ಯಾಕರಣ, ಭಾಷಾಶಾಸ್ತ್ರ, ಛಂದಸ್ಸು, ಅಲಂಕಾರ, ನಿಘಂಟು, ಶಾಸನಾಧ್ಯಯನ, ಗ್ರಂಥಸಂಪಾದನೆ, ಸಂಶೋಧನೆ, ಸಾಹಿತ್ಯಚರಿತ್ರೆ, ಸಾಹಿತ್ಯಸಮೀಕ್ಷೆ ಇತ್ಯಾದಿಯಾಗಿ ಅವರು ಪ್ರವೇಶಿಸದ ಕ್ಷೇತ್ರವಿಲ್ಲ.

ಸಾಹಿತ್ಯ, ಸಂಗೀತ, ಚಿತ್ರ, ಶಿಲ್ಪ, ನೃತ್ಯ ಇತ್ಯಾದಿ ಸೃಜನಾತ್ಮಕ ಕಲೆಯ ವಿಷಯ ಕ್ಕಾದರೆ ಆಯಾ ಕಲೆಗೆ ಸಂಬಂಧಿಸಿದ ಹುಟ್ಟುಪ್ರತಿಭೆಯೇ ಅಸ್ತಿಭಾರ. ಅದರ ಜೊತೆಗೆ ಜೀವನಾನುಭವ ಎಷ್ಟೆಷ್ಟು ಹೆಚ್ಚುತ್ತಾ ಹೋದರೆ ಅಷ್ಟಷ್ಟೂ ಕಲೆ ಶೋಭಿಸುತ್ತದೆ.

ಆದರೆ ಶಾಸ್ತ್ರಿಗಳು ಆಯ್ದುಕೊಂಡ ಸಂಶೋಧನತ್ಮಕ ಕ್ಷೇತ್ರಕ್ಕಾದರೋ ಆಳವಾದ ಮತ್ತು ವಿಸ್ತಾರವಾದ ಪಾಂಡಿತ್ಯ ಬೇಕು, ಗುರಿಯ ಆಯ್ಕೆ ಬೇಕು, ಗುರಿಸಾಧನೆಯಲ್ಲಿ ಅದಮ್ಯ ಉತ್ಸಾಹ ಆಸಕ್ತಿ ಶ್ರದ್ಧೆ ಜಿಜ್ಞಾಸೆ ಕುತೂಹಲ ಪಟ್ಟುಬಿಡದ ಚಲ ಸಾಹಸ ಪ್ರಾಮಾಣಿಕತೆ ವಿನಯ ನಿರಹಂಕಾರ ಇತ್ಯಾದಿ ಹಲವಾರು ಗುಣಗಳು ಪೂರ್ವಸಿದ್ಧ ವಾಗಿರಬೇಕು. ಧೀರರಿಗೆ ಮಾತ್ರವೇ ಮೀಸಲಾಗಿರುವ ಕ್ಷೇತ್ರವಿದು. ಆ ಎಲ್ಲ ಗುಣಗಳೂ ತಮ್ಮಲ್ಲಿವೆಯೆಂಬುದನ್ನು ಶ್ರೀ ಶಾಸ್ತ್ರಿಗಳು ತಮ್ಮ ಅಸಂಖ್ಯಾತಕೃತಿಗಳ ಮೂಲಕ ತೋರಿಸಿಕೊಟ್ಟಿದ್ದಾರೆ.

ಅವರು ತಮ್ಮ "ಮುಲಕನಾಡು ಬ್ರಾಹ್ಮಣರು" ಕೃತಿಯಲ್ಲಿ "ಮುಲಕನಾಡು" ಶಬ್ದದ ನಿಷ್ಪತ್ತಿಯಿಂದ ಹಿಡಿದು ಆ ಮನೆತನದ ಉಗಮ, ಅದರ ವಲಸೆ, ವ್ಯಾಪನೆ, ಶಾಸನಗಳ ಮತ್ತು ಸಾಹಿತ್ಯ ಕೃತಿಗಳ ಆಧಾರ, ಆ ಜನದ ಭಾಷೆಯ ವೈಶಿಷ್ಟ್ಯ, ಆಚಾರ ವ್ಯವಹಾರ, ವೇಷಭೂಷಣ, ಕಾಯ್ದೆ ಕಟ್ಟಳೆ, ಸಾಮಾಜಿಕ ಸ್ಥಿತಿಗತಿಗಳನ್ನು ವಿಸ್ತಾರವಾಗಿ ವಿವರಿಸಿರುವುದೇ ಅಲ್ಲದೆ, ಶ್ರೀ ತ್ಯಾಗರಾಜರು, ಮೋಕ್ಷಗುಂಡಂ ವಿಶ್ವೇಶ್ವರಯ್ಯನವರ ಆದಿಯಾಗಿ ಆ ಪಂಗಡದಲ್ಲಿನ ಅನೇಕ ಗಣ್ಯಮಹನೀಯರ ವೈಯಕ್ತಿಕ ಪರಿಚಯವನ್ನೂ ಮಾಡಿಕೊಟ್ಟಿರುವುದು ಒಂದು ಮಹತ್ಸಾಧನೆ. ಇದು ಒಬ್ಬ ವ್ಯಕ್ತಿ ಮಾಡಬಹುದಾದಂತಹ ಕಾರ್ಯವಲ್ಲ. ಒಂದು ವಿಶ್ವವಿದ್ಯಾಲಯದ ಇತಿಹಾಸವಿಭಾಗದ ಪ್ರಾಧ್ಯಾಪಕ ತನ್ನ ಸಂಶೋಧನವಿದ್ಯಾರ್ಥಿ ತಂಡದಿಂದ ಕ್ಷೇತ್ರಕಾರ್ಯವನ್ನು ನಡೆಸಿ ನಿರ್ವಹಿಸಬೇಕಾದಂತಹ ಕಾರ್ಯ. ಅಂಥದನ್ನು ಶ್ರೀ ಶಾಸ್ತ್ರಿಗಳು ಸ್ವಯಂ ಅಸಹಾಯಶೂರರಾಗಿ, ಏಕಾಂಗವೀರರಾಗಿ, ಚೌಪಟಮಲ್ಲರಾಗಿ ಮಾಡಿಬಿಟ್ಟಿದ್ದಾರೆ.

ಈಚೆಗೆ ಅವರು ಬೆಂಗಳೂರಿನ ಬಿ.ಎಂ.ಶ್ರೀ ಪ್ರತಿಷ್ಠಾನದ ಅಧ್ಯಕ್ಷಪೀಠದಲ್ಲಿದ್ದಾಗ, ನಾನೂ ಕಾರ್ಯನಿರ್ವಾಹಕಮಂಡಲಿಯ ಸದಸ್ಯನಾಗಿದ್ದುದರಿಂದ ನನಗೆ ಅವರ ನಿಕಟ ಸಾಹಚರ್ಯ ಉಂಟಾಗಿತ್ತು.

ಎರಡು ದೋಣಿಗಳಲ್ಲಿ ಕಾಲಿಟ್ಟು ನಿರಾತಂಕವಾಗಿ ಸಮುದ್ರದ ಪಾರಗಂಡವರುಂಟೇ? ಚಾವಟಿಯಿಲ್ಲದೆ ಬುಗುರಿಯನ್ನು ಗಿರ್‍ರನೆ ತಿರುಗಿಸಿದವರುಂಟೆ?... ಎಂದು ಕೇಳಿದರೆ ನಾನು ಹೇಳುವೆ "ಉಂಟು! ನಮ್ಮ ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿಗಳು ಇದ್ದಾರೆ ನೋಡಿ!" ಎಂದು.

ಅವರು ಬಿ.ಎಂ.ಶ್ರೀ ಪ್ರತಿಷ್ಠಾನದ ಕಾರ್ಯಗಳಿಗಾಗಿ ಬೆಂಗಳೂರಿಗೆ ಬರುತ್ತಿದ್ದರಾದರೂ ಅವರು ವಾಸವಿದ್ದುದು ಮೈಸೂರಿನಲ್ಲಿ. ಅಲ್ಲಿನ ಮುಲಕನಾಡು ಸಭೆಯ ಸಮಸ್ತ ಚಟುವಟಿಕೆಗಳ ಪ್ರಧಾನನಿರ್ವಾಹಕರಾಗಿದ್ದರು. ಅವರ ನೇತೃತ್ವದಲ್ಲಿ ಸಂಘದ ಸಭಾಭವನ ನಿರ್ಮಾಣವಾಗುತ್ತಿತ್ತು. ಅದು ಪರಿಪೂರ್ಣತ್ವವನ್ನು ಕಾಣಬೇಕಾಗಿತ್ತು. ಬೆಂಗಳೂರಿನಲ್ಲಿ ಅವರು ಪ್ರತಿಷ್ಠಾನದ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡಾಗ ಪ್ರತಿಷ್ಠಾನದ ವ್ಯವಹಾರ ವೆಲ್ಲ ಒಂದೇ ಕೋಣೆಯ ಸಂಸಾರದಂತಿತ್ತು. ಇಲ್ಲಿಯೂ ಎಂ.ವಿ.ಸೀತಾರಾಮಯ್ಯನವರ ಕನಸನ್ನು ನನಸಾಗಿಸುವಂತೆ ಇಲ್ಲಿನ ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸುವುದೇ ಅಲ್ಲದೆ ಒಂದು ಭವ್ಯಭವನ ನಿರ್ಮಾಣವಾಗಬೇಕಾಗಿತ್ತು. ಅವೆರಡರ ಹೊಣೆ ಹೊತ್ತ ಶಾಸ್ತ್ರಿಗಳು ಲಕ್ಷಾಧಿಪತಿಗಳೋ ಕೋಟ್ಯಧೀಶ್ವರರೋ?

ಶ್ರೀ ಶಾಸ್ತ್ರಿಗಳು ಜೀವನವೆಲ್ಲ ಹಾಸಿಗೆಯಿದ್ದಷ್ಟೇ ಕಾಲುಚಾಚಿ ತೃಪ್ತಿಯಿಂದಿದ್ದವರು. ಆದರೆ ಅವರ ಹಾಸಿಗೆಯೂ ಚಿಕ್ಕದು, ಹೊದಿಕೆಯೂ ಚಿಕ್ಕದು. ಚಳಿಗಾಲದಲ್ಲಿ ಆಚೀಚೆ ಹೊರತೋರುವ ದೇಹಭಾಗಗಳನ್ನು ಇರುಕಿಸಿಕೊಳ್ಳಲು ಶ್ರಮಪಟ್ಟವರು. ಅಷ್ಟಾದರೂ ಅನ್ಯರ ಹಂಗಿನಲ್ಲಿ ಜೀವಿಸಿದವರಲ್ಲ. ಸಂತ ಕಬೀರರ ಮಾತು ನೆನಪಿಗೆ ಬರುತ್ತದೆ:

ಮರ್‌ಜಾವೂಂ ಮಾಂಗೂಂ ನಹೀಂ ಅಪ್‌ನೇ ತನ್ ಕೇ ಕಾಜ್ ।
ಪರ್‌ಮಾರಥ್ ಕೇ ಕಾರನೇ ಮೋಹಿಂ ನ ಆವೈ ಲಾಜ್ ॥

(ನಾನು ಸತ್ತೇನೇ ಹೊರತು ನನ್ನ ದೇಹಕಾರಣಕ್ಕಾಗಿ ಮತ್ತೊಬ್ಬರನ್ನು ಬೇಡಹೋಗು ವುದಿಲ್ಲ. ಪರಮಾರ್ಥಕ್ಕಾದರೆ ಬೇಡಲು ಲಜ್ಜೆಪಡುವುದಿಲ್ಲ.)

ಇದನ್ನು ಶಾಸ್ತ್ರಿಗಳು ಓದಿದ್ದರೋ ಇಲ್ಲವೋ, ಅವರ ಧ್ಯೇಯವಂತೂ ಅದೇ ಆಗಿತ್ತು. ಅವರು ತಮ್ಮ ಸ್ವಾರ್ಥಕ್ಕಾಗಿ ಇತರರ ಮುಂದೆ ಕೈಚಾಚಿದವರಲ್ಲ. ಸಾರ್ವಜನಿಕರ ಹಿತಕ್ಕಾಗಿ ಉಳ್ಳ ಸಾರ್ವಜನಿಕರಿಂದ ಬೇಡಿದರು. ನಿಃಸ್ಪೃಹರಾದ ಇವರ ಶ್ಲಾಘನೀಯ ಉದ್ದೇಶವನ್ನು ಕಂಡ ಸಾರ್ವಜನಿಕರು ವಿಶ್ವಾಸದಿಂದ ಸಹಾಯಹಸ್ತವನ್ನು ನೀಡಿದರು. ಅದರ ಫಲವಾಗಿ ಮೈಸೂರಿನಲ್ಲಿ ಭವ್ಯಭವನ ತಲೆಯೆತ್ತಿ ನಿಂತಿತು. ಬಿ.ಎಂ.ಶ್ರೀ ಪ್ರತಿಷ್ಠಾನದಲ್ಲಿಯೂ ನೆಲಹಂತದ ಮೇಲಿನ ಮೂರು ಅಂತಸ್ತಿನ ಕಟ್ಟಡ ತಲೆಯೆತ್ತಿ ನಿಂತಿತು.

ಒಂದು ಸಂಸ್ಥೆಯನ್ನು ಕಟ್ಟಿ ಬೆಳೆಸುವುದು ಎಂದು ಇದಕ್ಕೇ ಹೇಳುವರೇನೋ!

ಪಾಂಡಿತ್ಯದ ಮಹಾಪರ್ವತ

ಜಿ.ಬ್ರಹ್ಮಪ್ಪ

ನನಗೂ ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿಗಳಿಗೂ ಪರಿಚಯವಾದುದು ೧೯೮೩ರಲ್ಲಿ. ಆಗ ನಾನು ಕನ್ನಡ ಅಧ್ಯಯನಸಂಸ್ಥೆಯಲ್ಲಿ ೫ ವರ್ಷ ಯು.ಜಿ.ಸಿ. ಪ್ರೊಫೆಸರ್ ಆಗಿ ನೇಮಕಗೊಂಡು ಜೈನ ಮಹಾಪುರಾಣ ಮತ್ತು ವೈದಿಕ ಮಹಾಪುರಾಣದ ತೌಲನಿಕ ಅಧ್ಯಯನ ಎಂಬ ವಿಸ್ತಾರವಾದ ಗ್ರಂಥರಚನೆ ಮಾಡಿದೆನು. ಏನಾದರೂ ಸಮಸ್ಯೆ ಕಾಡಿದಾಗ ನಾನು ಶಾಸ್ತ್ರಿಗಳ ಬಳಿಗೆ ಹೋಗಿ ಸಮಸ್ಯೆ ಪರಿಹಾರ ಮಾಡಿಕೊಳ್ಳುತ್ತಿದ್ದೆನು. ಪೂಜ್ಯ ಡಿ.ಎಲ್.ನರಸಿಂಹಾಚಾರ್ ಅವರ ನಂತರ ಆ ಜಾಗವನ್ನು ಶಾಸ್ತ್ರಿಗಳು ತುಂಬಿ ಕೊಟ್ಟರು. ಹಳಗನ್ನಡ ಸಾಹಿತ್ಯದ ತೊಡಕುಗಳನ್ನು ಈಗ ಶಾಸ್ತ್ರಿಗಳು ಬಿಡಿಸಿ ಕನ್ನಡದ ಭಾಗ್ಯವನ್ನು ವೃದ್ಧಿಸುತ್ತಿರುವರು!

'ಕವಿಗೆ ಕರ್ಣಮೆ ಪ್ರಮಾಣಂ, ವ್ಯಾಕರಣಮಲ್ತು' ಎಂದು ಪೂಜ್ಯ ಕುವೆಂಪು ಅವರು ಹೇಳಿದ್ದನ್ನು ನಾನು ವೇದವಾಕ್ಯವೆಂದೇ ಸದಾ ನಂಬಿರುವೆನು. ಆದರೆ ಶಾಸ್ತ್ರಿಗಳಿಗೆ ಶಾಸ್ತ್ರ ಭಾಗವೆಂದರೆ ಅಮೃತೋಪಮವಾಗಿದೆ. ಕನ್ನಡ ಕಾವ್ಯಗಳ ರಸಾಸ್ವಾದನೆಯನ್ನೂ ಕಡೆಗಣಿಸದೆ ವ್ಯಾಕರಣ-ಛಂದಸ್ಸು-ಭಾಷಾಶಾಸ್ತ್ರ-ಕಾವ್ಯಮೀಮಾಂಸೆ ಈ ಎಲ್ಲಾ ಪ್ರಕಾರಗಳಲ್ಲೂ ಸಮಾನ ಅಭಿರುಚಿಯನ್ನು ಇವರು ಬೆಳೆಸಿಕೊಂಡು ಸಾರಸ್ವತಲೋಕದ ಸಹೃದಯರಾಗಿರುವರು!

ಇವರು ಪ್ರಕಾಂಡ ಪಂಡಿತರು, ವೈಯಾಕರಣಿಗಳು, ಛಂದೋವಿಲಾಸದ ನಾದ ಬ್ರಹ್ಮರೂ ಆಗಿರುವರು. ಕಾವ್ಯಕ್ಕೆ ರಸವು ಪ್ರಾಣವಾದರೂ ಛಂದಸ್ಸು ದೇಹವಾಗಿದೆ. ಇವೆರಡನ್ನೂ ಪಾಂಡಿತ್ಯವು ಭದ್ರವಾಗಿ ಅವುಚಿಕೊಂಡಿದೆ. ಹಲಸಿನ ಹಣ್ಣನ್ನು ಬಿಚ್ಚಿ, ಸೋಲೆಯನ್ನು ಬೇರ್ಪಡಿಸಿ, ತೊಳೆ ಬಿಡಿಸಿಕೊಡುವ ತಾಳ್ಮೆಯೇ ಶ್ರೀ ಶಾಸ್ತ್ರಿಗಳ ಜೀವನವಾಗಿದೆ. ಇಂದು ಹಳಗನ್ನಡ ಉಳಿಯಬೇಕಾದರೆ ಶ್ರೀ ಶಾಸ್ತ್ರಿಗಳಂಥವರು ಹೆಚ್ಚಬೇಕು. ಕನ್ನಡದ ರೀವಿಯನ್ನು ನಾವು ಟಿ.ವಿ.ವೆಂಕಟಾಚಲ ಶಾಸ್ತ್ರಿಗಳಿಂದಲೇ ತಿಳಿದು ನಲಿಯುವೆವು. ಇವರು ನೂರು ಕಾಲ ಬಾಳಲಿ ಎಂದು ಸರಸ್ವತಿಯನ್ನು ನಾನು ಬೇಡುವೆನು.

ಬಾಲ್ಯದ ಸಂಗಾತಿ

ಪಾಣ್ಯಂ ರಾಮಶೇಷ ಶಾಸ್ತ್ರಿ

'ಬಾಲ್ಯಸ್ನೇಹ ಗಾಢವಾದದ್ದು; ಚಿರಕಾಲ ನಿಲ್ಲುವಂಥಾದ್ದು': ಇದು ಡಾ.ತೋ.ವೆಂ. ವೆಂಕಟಾಚಲ ಶಾಸ್ತ್ರೀ ಅವರ ಮತ್ತು ನನ್ನ ನಡುವೆ ಚಿಕ್ಕಂದಿನಿಂದ ಬೆಳೆದು ನಿಂತ ಗೆಳೆತನದಿಂದ ನಿರೂಪಿತವಾದ ಮೈತ್ರಿಸೂಕ್ತ. ವಿಚಿತ್ರವೇನೆಂದರೆ ವೆಂಕಟಾಚಲ ಶಾಸ್ತ್ರೀ ಅವರು ಹಿಂದಿನ ಮೈಸೂರು ಸಂಸ್ಥಾನದ ಬೆಂಗಳೂರು ಜಿಲ್ಲೆಯ ಕಾನಕಾನಹಳ್ಳಿ(ಈಗಿನ ಕನಕಪುರ) ಯವರು. ನಾನೇನೋ ಹಿಂದಿನ ಮದ್ರಾಸುರಾಜ್ಯದ ಆಂಧ್ರಪ್ರಾಂತದ ಅನಂತಪುರ ಜಿಲ್ಲೆಯ ಮುನಿಮಡುಗು ಎಂಬ ಗ್ರಾಮದಲ್ಲಿ ಹುಟ್ಟಿದವನು. ನಮ್ಮಿಬ್ಬರ ಜನ್ಮಸ್ಥಳಗಳು ಬಹುದೂರದವು. ಅಂಥಾ ನಮ್ಮಿಬ್ಬರ ನಡುವೆ ಮೈತ್ರಿಬಂಧ ಏರ್ಪಟ್ಟಿದ್ದು ವಿಚಿತ್ರವಲ್ಲವೇ? ಅಷ್ಟೇ ಅಲ್ಲ; ಅದೊಂದು ದೈವನಿರ್ಣಯ, ಹಾಗೂ ನನ್ನ ಪಾಲಿನ ಅದೃಷ್ಟ ಎಂದೇ ನನ್ನ ಭಾವನೆ!

ನಮ್ಮೂರಿನಲ್ಲಿ ವಿದ್ಯಾಭ್ಯಾಸಕ್ಕೆ ಅನುಕೂಲವಿಲ್ಲದ ಕಾರಣ, ನಮ್ಮ ತಂದೆಯವರು ೧೯೩೮ರಲ್ಲಿ ನನ್ನನ್ನು ವಿದ್ಯಾಭ್ಯಾಸಕ್ಕೆಂದು ನಮ್ಮ ಅಜ್ಜಿಯವರ ಬಳಿ ಕಳುಹಿಸಿದರು. ಬೆಂಗಳೂರು ಜಿಲ್ಲೆಯ ಕ್ಲೋಸ್‌ಪೇಟೆ(ಈಗಿನ ರಾಮನಗರ)ಯಲ್ಲಿದ್ದವರು. ಆಕೆಯ ತಂಗಿ, ಲಕ್ಷ್ಮೀದೇವಮ್ಮನವರು, ಬೆಂಗಳೂರು ಜಿಲ್ಲೆಯ ಪ್ರಾಥಮಿಕ ಶಾಲಾ ಉಪಾಧ್ಯಾಯಿನಿ. ಆಂಧ್ರನಾದ ನನ್ನ ವಿದ್ಯಾಭ್ಯಾಸ ಈ ಲಕ್ಷ್ಮೀದೇವಮ್ಮನವರ ಬಳಿ ಕನ್ನಡದಲ್ಲಿ ನಡೆಯಿತು. ೧೯೩೯ರಲ್ಲಿ ಆಕೆಗೆ ಕಾನಕಾನಹಳ್ಳಿಗೆ ವರ್ಗವಾಗಿದ್ದು ಆಕೆಯೊಡನೆ ನಾನೂ ಕಾನಕಾನಹಳ್ಳಿ ಸೇರಿದುದೂ ದೈವೇಚ್ಛೆ. ಅಂದಿನಿಂದ ನನ್ನ ವಿದ್ಯಾಭ್ಯಾಸ ಎಸ್.ಎಸ್.ಎಲ್.ಸಿ.ವರೆಗೆ ಆ ಊರಿನಲ್ಲೇ ನಡೆಯಿತು.

ಆ ಸಮಯದಲ್ಲಿ ವೆಂಕಟಾಚಲ ಶಾಸ್ತ್ರೀ ಅವರ ಮನೆಯಲ್ಲಿ ಕಾನಕಾನಹಳ್ಳಿ ತಾಲೂಕಿನ ಮುಳ್ಳಹಳ್ಳಿಯ ವೆಂಕಟರಮಣ ಮತ್ತು ನಲ್ಲಹಳ್ಳಿಯ ಬಿ.ಕೆ.ನಾಗರಾಜಶೆಟ್ಟಿ ಎಂಬಿಬ್ಬರು ಹುಡುಗರು ಇದ್ದು, ಆ ಊರಿನ ಶಾಲೆಯಲ್ಲಿ ಓದಿಕೊಳ್ಳುತ್ತಿದ್ದರು. ನನ್ನ ಶಾಲೆಯ ಆಟದ ಮೈದಾನಕ್ಕೆ ಅವರಿಬ್ಬರೂ ಸಾಯಂಕಾಲ ಆಟವಾಡಲು ಬರುತ್ತಿದ್ದು ನನಗೆ ಗೆಳೆಯರಾದರು. ಅವರ ಮೂಲಕ ವೆಂಕಟಾಚಲ ಶಾಸ್ತ್ರೀ ಅವರ ಪರಿಚಯ ಹಾಗೂ ಗೆಳೆತನದ ಭಾಗ್ಯಗಳು ನನಗೆ ಲಭಿಸಿದುವು.

ನನ್ನ ವಿದ್ಯಾಭ್ಯಾಸ ಉನ್ನತಪಾಠಶಾಲೆಯ ಹಂತಕ್ಕೇರುವ ವೇಳೆಗೆ ಮುಳ್ಳಹಳ್ಳಿ ವೆಂಕಟರಮಣ ಅವರು ಬೆಂಗಳೂರು ಸೇರಿದರು. ಬಿ.ಕೆ.ನಾಗರಾಜಶೆಟ್ಟಿ ಅವರ ತರಗತಿಯ

ಡಿ.ಕೆ.ರುದ್ರಾಚಾರ್ಯ ಮತ್ತು ಕೆ.ಎನ್.ನಂಜುಂಡಶಾಸ್ತ್ರಿ ಎಂಬಿಬ್ಬರು ನಾಗರಾಜ ಶೆಟ್ಟಿಯವರ ಮೂಲಕ ನಮಗೂ ಪರಿಚಯವಾದಾಗ ನಮ್ಮದು ಐದು ಜನ ಗೆಳೆಯರ ತಂಡವಾಗುವಂತಾಯಿತು. ನಮ್ಮ ಐವರಲ್ಲಿ ವೆಂಕಟಾಚಲ ಶಾಸ್ತ್ರೀ ಮತ್ತು ನಾನು ಒಂದೇ ಇಯತ್ತೆಯಲ್ಲಿದ್ದೆವು. ಮಿಕ್ಕ ಮೂವರೂ ನಮಗಿಂತಲೂ ಒಂದು ಇಯತ್ತೆ ಮುಂದೆ ಇದ್ದರು. ಆದರೆ ಈ ಹಿರಿಯ ಕಿರಿಯತನಗಳು ನಮ್ಮ ಸ್ನೇಹಕ್ಕೆ ಯಾವ ರೀತಿಯಲ್ಲೂ ಅಡಚಣೆ ಎನಿಸಲಿಲ್ಲ.

ಉನ್ನತ ಪಾಠಶಾಲಾ ಹಂತವೇರಿದ್ದ ನಾವು ಆಟಪಾಟಗಳ ಜತೆಗೆ, ಒಟ್ಟಿಗೆ ಕುಳಿತು ನಮ್ಮ ತರಗತಿ ಪಾಠಗಳ ಬಗ್ಗೆ ಚರ್ಚಿಸಿಕೊಳ್ಳುತ್ತಿದ್ದೆವು. ಇದಕ್ಕೆ ವೆಂಕಟಾಚಲ ಶಾಸ್ತ್ರೀ ಅವರ ಮನೆಯೇ ನಮ್ಮಲ್ಲಿ ಮಿಕ್ಕವರ ಮನೆಗಳಿಗಿಂತಲೂ ಅನುಕೂಲವಾಗಿತ್ತು. ಅದೊಂದು ತೊಟ್ಟಿಮನೆ. ಬೀದಿಯಿಂದ ಮೆಟ್ಟಲೇರಿ ಒಳಹೋಗುವಾಗ ಇಕ್ಕಡೆ ಎತ್ತರವಾದ ಮತ್ತು ವಿಶಾಲವಾದ ಎರಡು ಜಗುಲಿಗಳು. ನಾವೈವರೂ ಕುಳಿತು ಗಟ್ಟಬಾರ, ಹುಲಿಗಟ್ಟ, ಪರಮಪದ ಸೋಪಾನಪಠ ಮುಂತಾದ ಆಟಗಳನ್ನಾಡಿಕೊಳ್ಳಲು ಅಥವಾ ಒಟ್ಟಿಗೆ ಕುಳಿತು ಓದಿಕೊಳ್ಳಲು ಆ ಜಗುಲಿಗಳು ಅನುಕೂಲವಾಗಿದ್ದವು. ಪ್ರತಿದಿನ ಸಾಯಂಕಾಲ ನಾವು ಆ ಜಗುಲಿಗಳ ಮೇಲೆ ಸೇರಿ ಆಟವಾಡುತ್ತಿದ್ದಾಗ, ವೆಂಕಟಾಚಲ ಶಾಸ್ತ್ರೀ ಮತ್ತು ನನಗೆ ಒಂದು ಆಲೋಚನೆ ಬಂತು. ನಮ್ಮ ಓದು ತರಗತಿಪಾಠಗಳಿಗೆ ಮಾತ್ರ ಸೀಮಿತಗೊಳಿಸದೆ, ಸಾಧಾರಣ ವ್ಯವಹಾರಜ್ಞಾನ, ಹಾಗೂ ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ನಿರರ್ಗಳವಾಗಿ ಮಾತನಾಡುವ ಶಕ್ತಿ ಸಂಪಾದಿಸಿಕೊಳ್ಳಬೇಕೆಂಬುದೇ ಅದು. ಅದಕ್ಕಾಗಿ ನಮ್ಮೈವರ ಗೆಳೆಯರ ತಂಡಕ್ಕೆ 'ಮಿತ್ರವೃಂದ' ಎಂಬ ಹೆಸರಿಟ್ಟು, ಭಾನುವಾರ ಮತ್ತು ಇತರ ರಜಾದಿನಗಳಲ್ಲಿ ಚರ್ಚಾಕೂಟಗಳನ್ನು ನಿರ್ವಹಿಸಲಾರಂಭಿಸಿದೆವು. ಊರಿಗೆ ಪಕ್ಕದಲ್ಲೇ ಹರಿಯುತ್ತಿರುವ ಅರ್ಕಾವತಿ ನದಿಯ ಮರಳ ಹರವು ಮತ್ತು ನಮಗೆ ತಿಳಿದವರ ತೋಟಗಳು ನಮ್ಮ 'ಮಿತ್ರವೃಂದ'ದ ಕಾರ್ಯಕಲಾಪಗಳಿಗೆ ಸಮಾವೇಶಪ್ರದೇಶಗಳಾದವು.

ನಮ್ಮ ಮಿತ್ರವೃಂದ ಕೈಗೊಂಡ ಮತ್ತೊಂದು ಕಾರ್ಯಕ್ರಮ 'ರೇಷ್ಮೆ ಸಾಕಾಣಿಕೆ'. ಕನಕಪುರದಲ್ಲಿ ನಾವು ಪ್ರೈಮರಿಶಾಲೆಯಲ್ಲಿದ್ದಾಗ ಒಂದು ಸರ್ಕಾರಿ ರೇಷ್ಮೆ ಕಾರ್ಖಾನೆ ಪ್ರಾರಂಭವಾಯಿತು. ನಾವು 'ಮಿತ್ರವೃಂದ'ವಾದಾಗ ಆ ಕಾರ್ಖಾನೆ ನೋಡಲು ಹೋಗಿದ್ದೆವು. ಆಗ ನಮಗೆ ರೇಷ್ಮೆ ಕೈಗಾರಿಕೆ ಕುರಿತು ಪ್ರಾಥಮಿಕ ತಿಳುವಳಿಕೆ ಬಂತು. ವೆಂಕಟಾಚಲ ಶಾಸ್ತ್ರೀ ಅವರ ಮನೆ ಹಿತ್ತಲಿನಲ್ಲಿ ರೇಷ್ಮೆ ಬೇಸಾಯಗಾರರು ಉಪ್ಪುನೇರಳೆ ಗಿಡ ಬೆಳೆಸುತ್ತಿದ್ದರು. ನಾವು ರೇಷ್ಮೆ ಸಾಕಾಣಿಕೆ ಕೈಗೊಳ್ಳಲು ತೀರ್ಮಾನಿಸಿ ಅದಕ್ಕೆ ಬೇಕಾದ ತಟ್ಟೆಗಳನ್ನು ಬಾಡಿಗೆಗೆ ತಂದು, ಆಗಲೆ ಮೊಟ್ಟೆ ಒಡೆದು ಬಂದ ಹುಳುಗಳನ್ನು ರೇಷ್ಮೆ ರೈತರಿಂದ ಕೊಂಡುತಂದು ಸಾಕಾಣಿಕೆ ಕೆಲಸ ಪ್ರಾರಂಭಿಸಿದೆವು. ಈ ಕೆಲಸಕ್ಕಾಗಿ ನಾವು ದಿನ ಬೆಳಿಗ್ಗೆ ವೆಂಕಟಾಚಲ ಶಾಸ್ತ್ರಿಯವರ ಮನೆಗೆ ಬಂದು

ಉಪ್ಪುನೇರಳೆ ಗಿಡಗಳಿಂದ ಸೊಪ್ಪು ಸಂಗ್ರಹಿಸಿ ಅದನ್ನು ಚೂರುಗಳಾಗಿ ಕತ್ತರಿಸಿ ಕೊಟ್ಟರೆ ಅವರ ಮನೆಯವರು ಹುಳುಗಳಿಗೆ ದಿನವೆಲ್ಲಾ ಸೊಪ್ಪು ಕಾಲಕಾಲಕ್ಕೆ ಹಾಕಿ ಮೇಯಿಸು ತ್ತಿದ್ದರು. ಹುಳು ಬೆಳೆದು ಗೂಡು ಕಟ್ಟುವ ಜ್ವರ ಬಂದಾಗ ಚಂದ್ರಿಕೆಗಳನ್ನು ಬಾಡಿಗೆಗೆ ತಂದು ಹುಳುಗಳನ್ನು ಚಂದ್ರಿಕೆಗೆ ಹತ್ತಿಸಿದೆವು. ಅವು ಕಟ್ಟಿದ ಗೂಡುಗಳು ದೊಡ್ಡದಾಗಿ ಒಳ್ಳೆಯ ಬಣ್ಣದಲ್ಲಿದ್ದವು. ಸಕಾಲದಲ್ಲಿ ಆ ಗೂಡುಗಳನ್ನು ಸಂಗ್ರಹಿಸಿ ಕಾರ್ಖಾನೆಗೆ ಕೊಂಡೊಯ್ದಾಗ, ಕಾರ್ಖಾನೆ ಅಧಿಕಾರಿಗಳು ನಮ್ಮನ್ನು ಪ್ರಶಂಸಿಸಿ ಗೂಡಿಗೆ ಹೆಚ್ಚಿನ ಬೆಲೆ ಇತ್ತರು. ನಮಗೆ ಪರೀಕ್ಷೆಗಳು ಹತ್ತಿರಬಂದಾಗ ನಮ್ಮ ಈ ಪ್ರಯೋಗ ನಿಂತು ಹೋಯಿತು.

ನಾವು ಪ್ರತಿದಿನ ಸಾಯಂಕಾಲ, ವೆಂಕಟಾಚಲ ಶಾಸ್ತ್ರೀ ಅವರ ಮನೆಮುಂದಿನ ಜಗುಲಿಗಳನ್ನು ಆಶ್ರಯಿಸುತ್ತಿದ್ದೇವೆಂದು ಆಗಲೇ ಹೇಳಿದೆನಲ್ಲವೇ? ಅಲ್ಲಿ ಕುಳಿತು ತರಗತಿ ಪಾಠಗಳನ್ನು ಓದುವುದು ನಮ್ಮ ಅಭ್ಯಾಸ. ಆರ್ಟ್ಸ್ ವಿಭಾಗದ ವೆಂಕಟಾಚಲ ಶಾಸ್ತ್ರೀ ಮತ್ತು ಸೈನ್ಸ್ ವಿಭಾಗದ ನನಗೆ ಕನ್ನಡ ಮತ್ತು ಇಂಗ್ಲಿಷು ಸಾಧಾರಣ ಪಾಠ್ಯಾಂಶ ಗಳು. ಆ ಕಾರಣದಿಂದ ಆತನ ಕನ್ನಡ ಹಾಗೂ ಇಂಗ್ಲಿಷು ಪುಸ್ತಕಗಳನ್ನೇ ತೆಗೆದುಕೊಂಡು ನಾನೂ ಓದುತ್ತಿದ್ದೆ. ಹೀಗೆ ಓದುವಾಗ ಒಂದು ವಿಷಯ ನನ್ನ ಗಮನಕ್ಕೆ ಬಂತು. ಕನ್ನಡದ ಪಾಠ್ಯಪುಸ್ತಕ ಮತ್ತು ನಾನ್ ಡಿಟೈಲ್ಡ್ ಪುಸ್ತಕಗಳಲ್ಲಿ ಅನೇಕ ಕಡೆ ವೆಂಕಟಾಚಲ ಶಾಸ್ತ್ರೀ ವಾಕ್ಯಗಳ ಕೆಳಗೆ ಗೆರೆ ಎಳೆದು, ಪಕ್ಕದಲ್ಲಿ ಟೀಕೆ ಟಿಪ್ಪಣಿಗಳನ್ನು ಬರೆದಿಟ್ಟುಕೊಂಡಿ ದ್ದರು. ನಮ್ಮಿಬ್ಬರಿಗೂ ಉಪಾಧ್ಯಾಯರು ಒಬ್ಬರೇ. ನಾನೆಂದೂ ವೆಂಕಟಾಚಲ ಶಾಸ್ತ್ರಿ ಯಂತೆ ವಾಕ್ಯಗಳ ಕೆಳಗೆ ಗೆರೆ ಎಳೆದಿರಲಿಲ್ಲ. ಈ ವಿಷಯವನ್ನು ಮಿಕ್ಕ ಮೂವರಿಗೂ ತಿಳಿಸಿದೆ. ಆತ ಏತಕ್ಕೆ ಹೀಗೆ ಗೆರೆ ಎಳೆಯುತ್ತಾನೆ ಎಂಬುದು ಒಂದು ಚರ್ಚೆಯ ಅಂಶ ವಾಯಿತು. ಕೊನೆಗೆ ನಮ್ಮೆಲ್ಲರ ತೀರ್ಮಾನ ಏನಂದರೆ, 'ವೆಂಕಟಾಚಲ ಶಾಸ್ತ್ರೀ ಅವರಿಗೆ ಕನ್ನಡ ಪಾಠ್ಯಾಂಶಗಳ ಮೇಲೆ ಗಮನ ಹಾಗೂ ಆಕರ್ಷಣೆ ಹೆಚ್ಚು'. ಆತನ ಕಾಲೇಜು ಓದು ಹಿಡಿಯುವ ಮಾರ್ಗದ ಮುನ್ಸೂಚನೆಯಿದು ಎಂದು ನಮಗಾಗ ಅರ್ಥವಾಗಲಿಲ್ಲ.

೧೯೪೭ರಲ್ಲಿ ನಮ್ಮ ಮೂವರು ಹಿರಿಯ ಗೆಳೆಯರು ನಮ್ಮಿಂದ ದೂರನಡೆದರು. ರುದ್ರಾಚಾರ್ಯ ಅವರು ಮೈಸೂರಿಗೆ, ನಾಗರಾಜಶೆಟ್ಟಿ ಮತ್ತು ನಂಜುಂಡಶಾಸ್ತ್ರಿ ಬೆಂಗಳೂರಿಗೆ ಮುಂದಿನ ಓದಿಗಾಗಿ ತೆರಳಿದರು. ಈ ಕಾರಣದಿಂದ ಒಂದು ವರ್ಷಕಾಲ ವೆಂಕಟಾಚಲ ಶಾಸ್ತ್ರೀ ಮತ್ತು ನಾನು ಕನಕಪುರದಲ್ಲೇ ಉಳಿದೆವು. ನಮಗೂ ಹೈಸ್ಕೂಲ್ ಆರನೆಯ ಇಯತ್ತೆಯ ಓದಿನ ಭರ. ಹೀಗಾಗಿ ನಮ್ಮ 'ಮಿತ್ರವೃಂದ'ದ ಚಟುವಟಿಕೆಗಳು ಮರೆಯಾದವು.

೧೯೪೮ರಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆ ಪಾಸಾದ ನಾವಿಬ್ಬರೂ ಕಾಲೇಜು ಓದಿಗಾಗಿ ಬೇರೆ ಬೇರೆ ದಾರಿ ಹಿಡಿದೆವು. -ಆರ್ಟ್ಸ್ ಓದಿಗಾಗಿ ವೆಂಕಟಾಚಲ ಶಾಸ್ತ್ರೀ

ಮೈಸೂರಿಗೆ, ಸೈನ್ಸ್ ಓದಿಗಾಗಿ ನಾನು ಬೆಂಗಳೂರಿಗೆ. ಅದೇ ಸಮಯದಲ್ಲಿ ನಂಜುಂಡ ಶಾಸ್ತ್ರೀ ಅವರು ಓದನ್ನು ಅರ್ಧದಲ್ಲೇ ನಿಲ್ಲಿಸಿ ತನ್ನ ಹೊಲ ಮತ್ತು ಪೌರೋಹಿತ್ಯದ ಕಾರ್ಯಭಾರದಲ್ಲಿ ಮಗ್ನರಾದರು. ಹೀಗಾಗಿ ಮೈಸೂರಿನಲ್ಲಿ ರುದ್ರಾಚಾರ್ಯ ಮತ್ತು ವೆಂಕಟಾಚಲ ಶಾಸ್ತ್ರೀ ಅವರಿಬ್ಬರು, ಬೆಂಗಳೂರಿನಲ್ಲಿ ನಾಗರಾಜಶೆಟ್ಟಿ ಮತ್ತು ನಾನು ಉಳಿದೆವು. ವೆಂಕಟಾಚಲ ಶಾಸ್ತ್ರೀ ಅವರೊಡನೆ ನನ್ನ ಪತ್ರವ್ಯವಹಾರ ನಡೆಯುತ್ತಿದ್ದು ಆ ಪತ್ರಗಳಲ್ಲಿ ಹಳೆಯ ನೆನಪುಗಳನ್ನೂ ಮೆಲಕು ಹಾಕುತ್ತಿದ್ದೆವು. ಮತ್ತೆ ಯಾವಾಗ ನಾವೈವರೂ ಒಟ್ಟಿಗೆ ಸೇರಿ ಹಿಂದಿನಂತೆ ನಲಿದಾಡಲು ಸಾಧ್ಯವಾಗುತ್ತೋ ಎಂಬ ನಿರೀಕ್ಷೆಯ ಕನಸುಗಳೇ ಆ ಪತ್ರಗಳ ತುಂಬ ಇರುತ್ತಿತ್ತು. ದಸರಾ, ಕ್ರಿಸ್ಮಸ್ ರಜಾದಿನ ಗಳಲ್ಲಿ ನಾವು ಕನಕಪುರದಲ್ಲಿ ಸೇರುತ್ತಿದ್ದೆವು. ಆಗ ಹಳೆಯ ನೆನಪುಗಳನ್ನು ಮೆಲಕು ಹಾಕುವುದರ ಜತೆಗೆ ಮುನ್ಮುಂದೆ ಮಾಡಬೇಕಾದ ಕೆಲಸ ಕಾರ್ಯಗಳ ಕುರಿತಾಗಿ ಚರ್ಚಿಸಿ ಕೊಳ್ಳುತ್ತಿದ್ದೆವು. ಅಂಥಾ ಒಂದು ಸಂದರ್ಭದಲ್ಲೇ ನಾವು ಕಂಡ ಕನಸು ಕೈಬರಹದ ಮಾಸಪತ್ರಿಕೆಯೊಂದನ್ನು ನಿರ್ವಹಿಸಬೇಕೆಂಬುದು. ಈ ಆಲೋಚನೆ ಮೊದಲು ಬಂದಿದ್ದು ವೆಂಕಟಾಚಲ ಶಾಸ್ತ್ರೀ ಅವರಿಗೇ ಎಂದು ನನ್ನ ನೆನಪು. ನಂಜುಂಡಶಾಸ್ತ್ರಿ ಮತ್ತು ನಾನು ಈ ವಿಷಯದಲ್ಲಿ ಉತ್ಸುಕತೆ ತೋರಿದೆವು. ರುದ್ರಾಚಾರ್ಯ ಮತ್ತು ನಾಗರಾಜಶೆಟ್ಟಿ ಈ ಇಬ್ಬರೂ ಆಸಕ್ತಿ ತೋರಲಿಲ್ಲ. ಆಕ್ಷೇಪಣೆಯನ್ನೂ ಎತ್ತಲಿಲ್ಲ. ಆ ಕನಸು ನಾವು ಡಿಗ್ರಿ ಕಾಲೇಜು ಸೇರಿದಾಗ ನನಸಾಯಿತು. ಆ ಪತ್ರಿಕೆಯ ರೂಪರೇಷೆಗಳು, ವಸ್ತು ವೈವಿಧ್ಯಗಳ ಬಗ್ಗೆ ನಿರ್ಧಾರ ವೆಂಕಟಾಚಲ ಶಾಸ್ತ್ರೀ ಅವರದಾದರೆ, ಅದರ ಪ್ರತಿಗಳ ಸಂಖ್ಯೆ, ಬರಹ ಪದ್ಧತಿ, ಅವನ್ನು ಎಲ್ಲೆಲ್ಲಿಡಬೇಕೆಂಬ ವಿಷಯಗಳು ನನ್ನ ನಿರ್ಧಾರದ ಪ್ರಕಾರ ಆಯಿತು. ಆ ರೀತಿಯಾಗಿ ನಮ್ಮ ಕೈಬರಹದ ಪತ್ರಿಕೆ ಸುಮಾರು ಒಂದೂವರೆ ವರ್ಷಕಾಲ ನಡೆದಂತೆ ನೆನಪು. ಕಾರಣಾಂತರಗಳಿಂದ ಆಮೇಲೆ ಅದು ನಿಂತುಹೋಯಿತು.

ಕಾಲ ಮುನ್ನಡೆಯಿತು. ರುದ್ರಾಚಾರ್ಯ ಮತ್ತು ನಾಗರಾಜಶೆಟ್ಟಿ ಅವರುಗಳು ಓದು ಮುಗಿಸಿ ನೌಕರಿ ಹಿಡಿದರು. ವೆಂಕಟಾಚಲ ಶಾಸ್ತ್ರೀ ಅವರು ಕನ್ನಡ ಎಂ.ಎ. ಮುಗಿಸಿ ಕನಕಪುರದ (ಹಿಂದಿನ ಕಾನಕಾನಹಳ್ಳಿ) ರೂರಲ್ ಕಾಲೇಜಿನಲ್ಲಿ ಅಧ್ಯಾಪಕ ರಾದರು. ಆ ದಿನಗಳಲ್ಲೇ ದೂರದಲ್ಲಿದ್ದ ರುದ್ರಾಚಾರ್ಯ ವಿನಾ, ಮಿಕ್ಕ ನಾವು ನಾಲ್ವರು ಕನಕಪುರದಲ್ಲೊಮ್ಮೆ ಭೇಟಿಯಾದಾಗ, ವೆಂಕಟಾಚಲ ಶಾಸ್ತ್ರೀ ಅವರು ಆ ಊರಿನಲ್ಲಿ 'ವಸಂತ ಸಾಹಿತ್ಯೋತ್ಸವ'ವನ್ನು ನಿರ್ವಹಿಸಬೇಕೆಂಬ ಆಲೋಚನೆ ನಮ್ಮ ಮುಂದಿರಿ ಸಿದರು. ನಾವು ಅಂಗೀಕರಿಸಿ ಆ ಕಾರ್ಯನಿರ್ವಹಣೆಯಲ್ಲಿ ಅವರಿಗೆ ಸಹಾಯಕರಾಗಿ ನಿಂತೆವು. ಆ ಸಾಹಿತ್ಯೋತ್ಸವಕ್ಕೆ ಆಹ್ವಾನಿಸಬೇಕಾದ ವಿದ್ವಾಂಸರು, ಕೈಗೊಳ್ಳಬೇಕಾದ ಕಾರ್ಯಕ್ರಮಗಳು, ಇಂಥಾ ವಿಷಯಗಳ ಬಗ್ಗೆ ವೆಂಕಟಾಚಲ ಶಾಸ್ತ್ರೀ ಅವರು ಬಹಳ ಮುತುವರ್ಜಿ ವಹಿಸಿ ಆ ವಸಂತೋತ್ಸವವನ್ನು ಕನಕಪುರದ ಪ್ರಜೆ 'ಭೇಷ್' ಎನ್ನುವ ರೀತಿಯಲ್ಲಿ ನಿರ್ವಹಿಸಿದರು.

ನನ್ನನ್ನು ಮತ್ತೆ ಮತ್ತೆ ಬಾಧಿಸುತ್ತಿದ್ದ ಅನಾರೋಗ್ಯದ ಕಾರಣದಿಂದ ನಾನು ನನ್ನ ಓದನ್ನು ಪೂರ್ತಿಮಾಡದೆ ನಮ್ಮೂರು ಸೇರಿದೆ. ಆಗ್ಗೆ ಹದಗೆಟ್ಟಿದ್ದ ನಮ್ಮ ಮನೆಯ ಆರ್ಥಿಕಪರಿಸ್ಥಿತಿಯನ್ನು ಕಂಡ ನಾನು ಅನಂತಪುರ ಸೇರಿ ನೌಕರಿ ಸಂಪಾದಿಸಿಕೊಂಡೆ. 'ಮಿತ್ರವೃಂದ'ದ ಮಿಕ್ಕ ನಾಲ್ವರೊಡನೆ ಪತ್ರವ್ಯವಹಾರ ನಡೆಸುತ್ತಲೇ ಇದ್ದೆ. ಮದುವೆಯೊಂದರ ಸಂದರ್ಭದಲ್ಲಿ ನಾನು ಬೆಂಗಳೂರಿಗೆ ಹೋಗಬೇಕಾಯಿತು. ನನ್ನ ಪ್ರಯಾಣದ ವಿಷಯ ವೆಂಕಟಾಚಲ ಶಾಸ್ತ್ರೀ ಅವರಿಗೆ ಪತ್ರ ಬರೆದು ಮುಂಚಿತವಾಗಿ ತಿಳಿಸಿದೆ. ನಾನು ಬೆಂಗಳೂರಿಗೆ ರೈಲಿನಲ್ಲಿ ಸೇರಿದ ಕೂಡಲೆ ನನ್ನ ಗೆಳೆಯರು ನಾಲ್ವರೂ ನನ್ನನ್ನು ಭೇಟಿಯಾದರು. ಮತ್ತೊಮ್ಮೆ ಹೀಗೆ ನಾವೆಲ್ಲ ಒಟ್ಟಿಗೆ ಭೇಟಿಯಾಗುವ ಅವಕಾಶ ಸಿಗುತ್ತೋ ಇಲ್ಲವೋ ಎಂಬ ಅನುಮಾನದಿಂದ ನಮ್ಮ 'ಮಿತ್ರವೃಂದ'ದ ಫೋಟೋ ತೆಗೆದುಕೊಳ್ಳುವ ಹವಣಿಕೆಯನ್ನು ವೆಂಕಟಾಚಲ ಶಾಸ್ತ್ರೀ ಮಾಡಿದ್ದರು.

ವೆಂಕಟಾಚಲ ಶಾಸ್ತ್ರೀ ಅವರು ಕನ್ನಡ ಎಂ.ಎ. ಓದುವ ಕಾಲದಿಂದಲೂ ಒಂದು ವಿಷಯವನ್ನು ನನ್ನೊಡನೆ ಪ್ರಸ್ತಾಪಿಸುತ್ತಿದ್ದರು. ಮೈಸೂರು ವಿಶ್ವವಿದ್ಯಾನಿಲಯದ ಇತಿಹಾಸ ವಿಭಾಗದ ಆಚಾರ್ಯರಾಗಿದ್ದ ಸೊಂಡೇಕೊಪ್ಪ (ಅಕ್ಷತಲ) ಶ್ರೀಕಂಠಶಾಸ್ತ್ರಿಗಳು ಆತನ ಮನಸ್ಸಿನಲ್ಲಿ ಬಿತ್ತಿದ ಬೀಜವದು. ಸ್ಮಾರ್ತ ಬ್ರಾಹ್ಮಣರಲ್ಲಿ ತೆಲುಗು ಮಾತಾಡುವ 'ಮುಲಕನಾಡು' ಎಂಬ ಶಾಖೆಯ ಮೂಲ ಹಾಗೂ ವಲಸೆಮಾರ್ಗ ಕುರಿತು ಸಂಶೋಧನೆ ಮಾಡಿ ಪುಸ್ತಕ ರಚಿಸುವ ಆಕಾಂಕ್ಷೆಯೇ ಆ ಬೀಜ -ವಿದ್ಯಾರ್ಥಿಯಾಗಿದ್ದಾಗ ಬಿತ್ತಿದ ಬೀಜ. ಅವರು ಮೈಸೂರು ವಿಶ್ವವಿದ್ಯಾನಿಲಯದ ಆಚಾರ್ಯಹುದ್ದೆಯಿಂದ ವಿಶ್ರಾಂತರಾಗುವವರೆಗೂ ಸುಪ್ತವಾಗಿದ್ದು, ವಿಶ್ರಾಂತರಾದ ಕೂಡಲೆ ತಲೆ ಮೇಲಕ್ಕೆತ್ತಿ ಪಲ್ಲವಿಸಲು ತವಕಗೊಂಡಿತು. ಆ ಸಂಶೋಧನೆಯ ವಿಷಯವನ್ನು ಅವರ ಪತ್ರಗಳಲ್ಲಿ ಓದಿ ತಿಳಿಯುತ್ತಿದ್ದ ನಾನು, ಅವರು ಆ ಕೆಲಸದ ಮೇಲೆ ಆಂಧ್ರದ ಕಡಪ ಜಿಲ್ಲೆ ಸಂದರ್ಶಿಸುವ ಆಲೋಚನೆ ತಿಳಿಸಿದಾಗ ಕಡಪದಲ್ಲಿದ್ದ ನಮ್ಮ ನೆಂಟರ ಸಹಕಾರ ಏರ್ಪಡಿಸಿದ್ದಲ್ಲದೆ, ಕೀರ್ತಿಶೇಷರಾದ ನಮ್ಮ ಮಾವನವರು ಇದೇ ವಿಷಯ ಕುರಿತು ಶೇಖರಿಸಿಟ್ಟಿದ್ದ ವಿಷಯಸಾಮಗ್ರಿಯನ್ನು ಕೊಡಿಸುವ ಏರ್ಪಾಟು ಮಾಡಿದೆ. ಅಂತೂ ಆತನ ಛಲ, ಶ್ರದ್ಧೆ, ಹವಣಿಕೆ, ನಿರ್ವಹಣಾಶಕ್ತಿ ಈ ಎಲ್ಲವುಗಳೂ ಸೇರಿ ೨೦೦೦ದ ಆಗಸ್ಟ್ ತಿಂಗಳಿನಲ್ಲಿ ರೂಪ ತಳೆದಿದ್ದೇ 'ಮುಲಕನಾಡು ಬ್ರಾಹ್ಮಣರು- ಸಮುದಾಯ, ಸಂಸ್ಕೃತಿ' ಎಂಬ ಸಂಶೋಧನಗ್ರಂಥ.

ಶ್ರೀ ವೆಂಕಟಾಚಲ ಶಾಸ್ತ್ರೀ ಅವರನ್ನು ಕುರಿತು ಇಷ್ಟೆಲ್ಲಾ ಬರೆದ ನಂತರ ನನ್ನ ಬಗ್ಗೆ ಅವರ ಪ್ರತ್ಯೇಕ ಅಭಿಮಾನ ಮತ್ತು ಸ್ನೇಹಭಾವಗಳ ಕುರಿತು ಬರೆಯಲೇಬೇಕು. ಚಿಕ್ಕಂದಿನ ಅವರ ಸಹವಾಸ ಮತ್ತು ಒಡನಾಟದ ಫಲವೆಂದರೆ ನನ್ನಲ್ಲೂ ರಚನಾ ವ್ಯವಸಾಯದ ಕಡೆ ಆಸಕ್ತಿ ಹುಟ್ಟಿದ್ದು. ೧೯೫೬ರಿಂದ ಹಾಸ್ಯರಚನೆಗಳನ್ನು ಮಾಡುವ

ಹವ್ಯಾಸ ಹುಟ್ಟಿಸಿದ್ದು ಆತನೇ. ಅನಂತರದ ಕಾಲದಲ್ಲಿ ಕಥೆಗಳನ್ನು ಬರೆಯುವಿಕೆ, ತೆಲುಗಿನಿಂದ ಕನ್ನಡ ಭಾಷೆಗೂ, ಕನ್ನಡದಿಂದ ತೆಲುಗಿಗೂ ಕಥೆಗಳನ್ನೂ ಅನುವಾದ ಮಾಡುವಿಕೆ ಆತನ ಸಹವಾಸದ ಫಲಗಳೇ. ೧೯೮೩ರಲ್ಲಿ ಅವರನ್ನು ಬೆಂಗಳೂರಿನಲ್ಲಿ ಭೇಟಿಯಾಗಿ ತೆಲುಗು-ಕನ್ನಡ ಹಾಗೂ ಕನ್ನಡ-ತೆಲುಗು ನಿಘಂಟುಗಳಿಲ್ಲದ ಕೊರತೆ ಕುರಿತು ಚರ್ಚಿಸಿದಾಗ, ಅವರು ತೆಲುಗು-ಕನ್ನಡ ನಿಘಂಟು ರಚನೆಗೆ ನನ್ನನ್ನು ಪ್ರೋತ್ಸಾಹಿಸಿದರು. ಅವರ ಸಲಹೆ ಮಾರ್ಗದರ್ಶನಗಳ ಸಹಾಯದಿಂದ ತೆಲುಗು-ಕನ್ನಡ ನಿಘಂಟೊಂದನ್ನು ನಾನು ಸಿದ್ಧಪಡಿಸಿ, ಅದರ ಮುದ್ರಣ, ಪ್ರಕಟಣೆಗಾಗಿ ತಾಪತ್ರಯ ಪಡುತ್ತಿದ್ದ ಕಾಲದಲ್ಲಿ ಅವರು ನನ್ನನ್ನು ಅನೇಕ ಪ್ರಕಾಶಕರಿಗೆ ಪರಿಚಯಮಾಡಿ ಕೊಟ್ಟರು. ಅನಂತರ ಸಾಹಿತ್ಯ ಅಕಾಡೆಮಿಯವರು ನನ್ನ ನಿಘಂಟನ್ನು ಪರಿಶೀಲನೆಗೆ ಸ್ವೀಕರಿಸಿದಾಗ ತಮ್ಮ ಪ್ರಭಾವದಿಂದ ಆ ನಿಘಂಟುವಿನ ಪರಿಶೀಲನೆ, ಮುದ್ರಣ ಹಾಗೂ ಪ್ರಕಾಶನ ಕೆಲಸಗಳು ಬೇಗ ಬೇಗ ಆಗುವಂತೆ ಸಹಾಯಮಾಡಿದರು. ಆ ನಿಘಂಟು ಹೊರಬಂದಾಗ ನನಗೆಷ್ಟು ಸಂತಸವಾಯಿತೋ, ಅವರು ಕೂಡ ಅಷ್ಟೇ ಸಂತೋಷವನ್ನು ವ್ಯಕ್ತಪಡಿಸಿದರು.

ಈ ಬರಹ ಪರಿಪೂರ್ಣವಾಗಬೇಕಾದರೆ ಚಿಕ್ಕಂದಿನಲ್ಲಿ ಓದಿದ ಈ ಸಂಸ್ಕೃತದ ಸುಭಾಷಿತವನ್ನು ಸ್ಮರಿಸಿಕೊಳ್ಳಲೇ ಬೇಕು. ಅದು ಹೀಗಿದೆ:

ಜಾಡ್ಯಂ ಧಿಯೋ ಹರತಿ ಸಿಂಚತಿ ವಾಚಿ ಸತ್ಯಂ ।
ಮಾನೋನ್ನತಿಂ ದಿಶತಿ ಪಾಪಮಪಾಕರೋತಿ ।
ಚೇತಃ ಪ್ರಸಾದಯತಿ ದಿಕ್ಷುತನೋತಿ ಕೀರ್ತಿಂ ।
ಸತ್ಸಂಗತಿಃ ಕಥಯೆ ಕಿಂ ನ ಕರೋತಿ ಪುಂಸಾಂ ॥

ಇದರ ಅರ್ಥ: ಸತ್ಸಾಂಗತ್ಯ (ಒಳ್ಳೆಯ ಸ್ನೇಹ) ಬುದ್ಧಿಗೆ ಹಿಡಿದ ಜಡತೆಯನ್ನು ಹೋಗಲಾಡಿಸುತ್ತೆ. ಸತ್ಯವಚನವನ್ನು ಕಲಿಸುತ್ತೆ. ಮರ್ಯಾದೆ ಹೆಚ್ಚಾಗುವಂತೆ ಮಾಡುತ್ತೆ. ಪಾಪವನ್ನು ನಿವಾರಿಸುತ್ತೆ. ಚೈತನ್ಯ(ಚಟುವಟಿಕೆ)ವನ್ನು ಪ್ರಸಾದಿಸುತ್ತೆ. ನಾಲ್ಕೂ ದಿಕ್ಕುಗಳಲ್ಲಿ ಕೀರ್ತಿಯ ಪ್ರಸಾರವಾಗುವಂತೆ ಮಾಡುತ್ತೆ. ಸತ್ಸಾಂಗತ್ಯ ಮಾನವನಿಗೆ ಮಾಡದ ಒಳ್ಳೆಯದೇನಾದರೂ ಇದ್ದರೆ ತಿಳಿಸಿ, ನೋಡೋಣ?

ಮಿಂಚುಗಣ್ಣಿನ ವ್ಯಕ್ತಿತ್ವದ ಸ್ನೇಹ

ಕೆ.ಕುಶಾಲಪ್ಪಗೌಡ

ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರೀ ಅವರ ಮತ್ತು ನನ್ನ ಸಂಪರ್ಕ ಸುಮಾರು ಇಪ್ಪತ್ತೈದು ವರ್ಷಗಳಷ್ಟು ಹಳೆಯದು. ನಾನು ಮದ್ರಾಸು ವಿ.ವಿ.ದಲ್ಲಿ ಕನ್ನಡ ವಿಭಾಗದ ಮುಖ್ಯಸ್ಥನಾಗಿದ್ದಾಗ ಪರೀಕ್ಷಾಮಂಡಳಿ ಹಾಗೂ ಇತರ ಸಂದರ್ಭಗಳಲ್ಲಿ ಮೈಸೂರು ವಿ.ವಿ.ಯ ಕನ್ನಡ ವಿಭಾಗಕ್ಕೆ ಭೇಟಿ ಕೊಡುವ ಸನ್ನಿವೇಶಗಳು ಒದಗುತ್ತಿದ್ದುವು. ಆ ಸಮಯದಲ್ಲಿ ಹೆಚ್ಚು ಎತ್ತರವೂ ಅಲ್ಲದ ಹೆಚ್ಚು ಕುಳ್ಳೂ ಅಲ್ಲದ, ಸ್ಥೂಲವೂ ಅಲ್ಲದ, ಕೃಶವೂ ಅಲ್ಲದ ನಗುಮೊಗದ, ಮಿಂಚುಗಣ್ಣಿನ ವ್ಯಕ್ತಿತ್ವದ, ಸ್ನೇಹವೇ ಹೊರಸೂಸುವ ಮೃದುಮಾತಿನ ವೆಂಕಟಾಚಲ ಶಾಸ್ತ್ರಿಯವರ ಪರಿಚಯವಾಯ್ತು. ಪರಿಚಯ ಮೈತ್ರಿಯ ಮಟ್ಟಕ್ಕೇರಿತು. ಅವರ ಸುತ್ತ ಅವರ ವಿದ್ಯಾರ್ಥಿವೃಂದವಿರುತ್ತಿತ್ತು. ಅನೇಕರಿಗೆ ಅವರು ಪಿಎಚ್.ಡಿ. ಡಿಗ್ರಿಗೆ ಮಾರ್ಗದರ್ಶನ ಮಾಡುತ್ತಿದ್ದರು. ಶಾಸ್ತ್ರಿಗಳೆಂಬ ಹೆಸರಿಗೆ ಅನ್ವರ್ಥವಾಗಿ ಅವರಿಗೆ ಶಾಸ್ತ್ರವಿಷಯಗಳಾದ ಛಂದಸ್ಸು, ಅಲಂಕಾರ, ವ್ಯಾಕರಣಾದಿಗಳಲ್ಲಿ ಅಧಿಕ ಆಸಕ್ತಿಯಿರುವುದನ್ನು ಗಮನಿಸಿದೆ. ಛಂದಸ್ಸಿನ ಬಗ್ಗೆ ತಲಸ್ಪರ್ಶಿಯಾದ ಒಂದು ದೊಡ್ಡ ಗ್ರಂಥವನ್ನು ಬರೆದಿದ್ದರು. ಹಿಂದಿನ ಕವಿಗಳು ಬಳಸಿದ, ಸಮಸ್ಯಾರೀತಿಯ 'ಚಕ್ರಬಂಧ'ವೇ ಮೊದಲಾದ ಹಲವಾರು ಬಂಧಗಳನ್ನು ಕುರಿತೇ ಒಂದು ದೊಡ್ಡ ಗ್ರಂಥವನ್ನು ಪ್ರಕಟಿಸಿದ್ದರು. ಅವರ ಪರಿಶ್ರಮ ಕಂಡು ನಾನು ಬೆರಗಾದೆ. ಬಿಡುವಿಲ್ಲದ ಕೆಲಸದಲ್ಲಿ ಮುಳುಗಿರುತ್ತಿದ್ದರು. ಯಾವ ಆಂತರಿಕ ರಾಜಕೀಯಕ್ಕೆ ಒಳಗಾಗದೆ, ಈರ್ಷ್ಯೆ, ಮತ್ಸರ, ಗರ್ವವೆಂಬ ಪಂಡಿತಸಹಜ ಗುಣಗಳಿಂದ ದೂರವಾಗಿ, ಎಲ್ಲರಿಗೆ ಬೇಕಾದವರಾದ ಅವರ ನಡವಳಿಕೆಗೆ ನಾನು ಮಾರುಹೋದೆ.

ನಾವು ಪರಸ್ಪರ ಸಂಧಿಸಿದಾಗ ನಮ್ಮ ನಮ್ಮ ಕಾರ್ಯಕ್ಷೇತ್ರಗಳ ಬಗ್ಗೆ ವಿಚಾರ ವಿನಿಮಯ ಮಾಡಿಕೊಳ್ಳುತ್ತಿದ್ದೆವು. ಪರೀಕ್ಷಾಮಂಡಳಿಯ ಸದಸ್ಯರಾಗಿ ಯೂನಿವರ್ಸಿಟಿಯ ವಿವಿಧ ಸ್ನಾತಕೋತ್ತರ ಕೇಂದ್ರಗಳಿಗೆ ಪರೀಕ್ಷಾರ್ಥಿಗಳ ಬಾಯ್ದೆರೆ ಪರೀಕ್ಷೆಗಾಗಿ ನಾಲ್ಕಾರು ಜನರು ಸೇರಿ ಪ್ರಯಾಣಿಸುತ್ತಿದ್ದ ವೇಳೆ ರೋಚಕವಾದ ಮಾತುಕತೆಗಳು, ನಗು ಕೇಕೆಗಳು ನಿರರ್ಗಳವಾಗಿ ನಡೆಯುತ್ತಿದ್ದುವು. ಸುತ್ತಣ ದೃಶ್ಯಗಳನ್ನು ವೀಕ್ಷಿಸಿ, ಯಾರಾದರೂ ಹಳಗನ್ನಡದ ಕಾವ್ಯೋಕ್ತಿಗಳಲ್ಲಿ ಯಾವುದಾದರೂ ಒಂದನ್ನು ಉದ್ಧರಿಸಿದರೆ ಸಾಕು, ಶಾಸ್ತ್ರಿಗಳು ಆ ಇಡೀ ಪದ್ಯವನ್ನೇ ಆಡಿ ತೋರಿಸುತ್ತಿದ್ದರು. ಅವರ ಅದ್ಭುತ ಸ್ಮರಣಶಕ್ತಿ ನನಗೆ ಅಚ್ಚರಿಯನ್ನುಂಟುಮಾಡುತ್ತಿತ್ತು. ಯಾವ ವಿಷಯವೇ ಆದರೂ, ಅವರ ಹಿತವಾದ

ವಿಮರ್ಶೆಯಿರುತ್ತಿತ್ತು. ಇದರಿಂದ ಕೇಳುಗರಿಗೆ, ಅನೇಕ ಸಾಹಿತ್ಯಕವಿಷಯಗಳ ಲಾಭ ವಾಗುತ್ತಿತ್ತು.

ಒಂದು ಸಲ ಅವರು ಮದ್ರಾಸಿನ ಅಂತರ್‌ರಾಷ್ಟ್ರೀಯ ಭಾಷಾಸಂಸ್ಥೆಗೆ ಕಾರ್ಯ ನಿಮಿತ್ತ ಭೇಟಿಕೊಡುವ ಸಂದರ್ಭದಲ್ಲಿ ನನ್ನ ಮನೆಯಲ್ಲೆ ತಂಗಿ, ನಮ್ಮ ಅಲ್ಪಾತಿಥ್ಯ ವನ್ನು ಸ್ವೀಕರಿಸಿ, ನಮ್ಮನ್ನು ಸಂತೋಷಪಡಿಸಿದರು. ಇಡೀ ದಿನ ಸರಸ ಮಾತುಕತೆಗಳಿಂದ ಸುಂದರವಾಗಿ ಕಳೆಯಿತು.

ನಾನು ನಿವೃತ್ತನಾಗಿ ಸುಳ್ಯದಲ್ಲಿ ನೆಲಸಿದ ಮೇಲೆ ನಮಗೆ ಪರಸ್ಪರ ಸಂಧಿಸುವ ಅವಕಾಶವಾಗಲಿಲ್ಲ. ಒಮ್ಮೆಯೇನೋ ಸುಳ್ಯದಲ್ಲಿ ಬಸ್‌ಸ್ಟ್ಯಾಂಡ್‌ನಲ್ಲಿ ಆಕಸ್ಮಿಕವಾದ ಕ್ಷಣಿಕ ಭೇಟಿಯಾಗಿತ್ತು. ಮತ್ತೆ ೨೦೦೫ನೇ ಅಕ್ಟೋಬರ್ ತಿಂಗಳಲ್ಲಿ ಮೂಡುಬಿದಿರೆ ಯಲ್ಲಿ ನಡೆದ ಆಳ್ವಾಸ್ ನುಡಿಸಿರಿ ಪ್ರಶಸ್ತಿಯ ಸಂದರ್ಭದಲ್ಲಿ ಪ್ರಶಸ್ತಿಗೆ ಆಯ್ಕೆಯಾದ ಹತ್ತು ಜನರ ಪೈಕಿ ಅವರೂ ಒಬ್ಬರಾಗಿದ್ದರು. ನಾನು ಸಹ ಇದ್ದೆ. ವೈಭವೋಪೇತವಾದ ಈ ಸಭಾಕಾರ್ಯಕ್ರಮದಲ್ಲಿ ಕೊನೆಯ ಘಟ್ಟ ಈ ಪ್ರಶಸ್ತಿಪ್ರದಾನಕಾರ್ಯಕ್ರಮ. ಈ ಸೈಂಧವ ಗುಂಪಿನಲ್ಲಿ ನನ್ನ ಕಣ್ಣು ವಾಮನಮೂರ್ತಿಯಾದ ಶಾಸ್ತ್ರಿಗಳನ್ನು ಹುಡುಕುತ್ತಿತ್ತು. ಕೊನೆಗೂ ವೇದಿಕೆಯಲ್ಲಿ ಶಾಸ್ತ್ರಿಗಳು ನನ್ನ ಪಕ್ಕದ ಕುರ್ಚಿಯಲ್ಲೇ ಆಸೀನರಾದರು. ನನಗೆ ಸಂತೋಷವಾಯ್ತು. ಅವರಿಗೂ ಸಂತೋಷವಾಯ್ತು. ಪಿಸು ಮಾತಾಡಿಕೊಳ್ಳಲು ಅನುಕೂಲವಾಗಿತ್ತು. ನಿನ್ನೆಯಿಂದಲೇ ನಿಮ್ಮನ್ನು ವಿಚಾರಿಸುತ್ತಿದ್ದೆ ಎಂದರು. ನಾನು ಹಿಂದಿನ ದಿನ ಹೋಗದೆ ಅಂದಿನ ಮಧ್ಯಾಹ್ನ ಅಲ್ಲಿಗೆ ತಲುಪಿದ್ದೆ. ಅಚ್ಚುಕಟ್ಟಾದ ಕಾರ್ಯಕ್ರಮದ ಏರ್ಪಾಡುಗಳು, ವೈಭವವೆಲ್ಲವೂ ಸಂತಸ ವೀಯು ತ್ತಿದ್ದುವು. ಇದನ್ನೆಲ್ಲ ನಡೆಸುವ ಡಾ.ಮೋಹನ ಆಳ್ವರ ಔದಾರ್ಯ, ಸಾಮರ್ಥ್ಯ, ಸೌಜನ್ಯ ಎಲ್ಲರೂ ಮೆಚ್ಚಿಕೊಳ್ಳುವಂಥವೇ. ಆಗ ವೆಂಕಟಾಚಲ ಶಾಸ್ತ್ರಿಗಳು 'ಗರ್ವಮೆ ದೋಷಂ, ಅಟ್ಟೆಗಂ ದೋಷಮೇ' ಎಂದು ಪಂಪನ ಮಾತನ್ನು ಉದ್ಗರಿಸಿದರು. ಈ ಸಣ್ಣ ಮಾತಿನಲ್ಲಿ ಆ ಸಂದರ್ಭಕ್ಕೆ ಸರಿಯಾದ ವ್ಯಾಖ್ಯಾನ ಕೊಟ್ಟರೆಂದುಕೊಂಡೆ.

ಈ ಕಾರ್ಯಕ್ರಮ ಮುಗಿಸಿಕೊಂಡು ನಾನು ಅಂದೇ ಹಿಂತಿರುಗಿದೆ. ಸ್ವಲ್ಪ ಕಾಲ ಅವರ ಸಾಹಚರ್ಯವೊದಗಿದುದು ಮನಸ್ಸನ್ನಾವರಿಸಿಕೊಂಡಿತ್ತು. ಶಾಸ್ತ್ರಿಗಳ ೭೫ನೆಯ ವರ್ಷದಲ್ಲಿ ಅವರಿಗೆ ಗೌರವಗ್ರಂಥ ಸಮರ್ಪಣೆಯಾಗುವ ವಿಷಯ ನನಗೆ ಸಂತೋಷ ವುಂಟುಮಾಡಿದೆ. ಇದಕ್ಕೆ ಶಾಸ್ತ್ರಿಗಳನ್ನೋ, ಅಭಿನಂದನಸಮಿತಿಯನ್ನೋ, ಯಾರನ್ನು ಅಭಿನಂದಿಸಬೇಕೆಂಬ ಗೊಂದಲ ನನ್ನದು. ಆದುದರಿಂದ ಇಬ್ಬರಿಗೂ ನನ್ನ ಹಾರ್ದಿಕ ಅಭಿನಂದನೆಯೊಡನೆ ಈ ಬರಹವನ್ನು ಮುಗಿಸುತ್ತೇನೆ.

ಡಾ.ಟಿ.ವಿ.ವಿ. ಅವರ ಜೊತೆಗಿನ ಒಡನಾಟ

ಬಿ.ರಾಮಚಂದ್ರರಾವ್

೧೯೫೫ರಲ್ಲಿ ನಾನು ವಾಲ್ತೇರಿನ ಆಂಧ್ರ ವಿಶ್ವವಿದ್ಯಾಲಯದಲ್ಲಿ ತೆಲುಗು ಪದ ವ್ಯುತ್ಪತ್ತಿಕೋಶದ ಯೋಜನೆಯಲ್ಲಿ ಕನ್ನಡಕ್ಕೆ ಸಂಬಂಧಪಟ್ಟಂತೆ ಸಹಾಯಕ ಸಂಶೋಧಕನಾಗಿದ್ದೆ. ೧೯೫೫ರಲ್ಲಿ ಹೈದರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ಉಪನ್ಯಾಸಕ ಹುದ್ದೆಗಾಗಿ ಪ್ರಕಟವಾದ ಪ್ರಕಟನೆಯೊಂದಕ್ಕೆ ನಾನೂ ಶಾಸ್ತ್ರಿಗಳೂ ಅಭ್ಯರ್ಥಿಗಳಾಗಿದ್ದೆವು, ಉಪನ್ಯಾಸಕರಾಗಿ ಆಯ್ಕೆಯಾದೆವು. ಅದೇ ನಮ್ಮ ಮೊದಲ ಪರಿಚಯ. ಅಲ್ಲಿಂದ ಮುಂದಕ್ಕೆ ನಾವು ಸ್ನೇಹಿತರಾದೆವು. ಅಂದಿನಿಂದ 'ಕನ್ನಡ'ವನ್ನು ಬಿಟ್ಟರೆ ಬೇರೆ ಯಾವ ವಿಷಯವೂ ನಮ್ಮ ಮಾತುಕತೆಗಳಲ್ಲಿ ಇಣಿಕಿ ಹಾಕುತ್ತಿದ್ದಿಲ್ಲ. ನಾನು ಕನ್ನಡದಲ್ಲಿ ಪಿಎಚ್.ಡಿ. ಪದವಿಯನ್ನು ಗಳಿಸಬೇಕೆಂಬ ಉದ್ದೇಶ ಹೊಂದಿದ್ದೆ. ಶಾಸ್ತ್ರಿಗಳ ಒಲವು ಕ್ರಮೇಣ ಮೈಸೂರು, ಬೆಂಗಳೂರಲ್ಲಿ ಉದ್ಯೋಗ ಸಂಪಾದಿಸಬೇಕೆಂಬುದೇ ಇತ್ತು. ನನಗೆ ಭಾಷಾಶಾಸ್ತ್ರದಲ್ಲಿ ಸ್ವಲ್ಪ ಹೆಚ್ಚಿನ ಮಟ್ಟಿನ ಒಲವು ಇದ್ದುದರಿಂದ ಪಂಪಭಾರತಕ್ಕೊಂದು 'ವರ್ಣನಾತ್ಮಕವ್ಯಾಕರಣ'ವನ್ನು ಬರೆಯ ಬೇಕೆಂಬ ಇಚ್ಛೆಯೂ ಇತ್ತು. ಹಾಗಾಗಿ 'ಪಂಪಭಾರತದ ವರ್ಣನಾತ್ಮಕವ್ಯಾಕರಣ' ಎಂಬ ವಿಷಯವನ್ನು ಆರಿಸಿಕೊಂಡು ಆ ದಿಕ್ಕಿನಲ್ಲಿ ಕೆಲಸಕ್ಕೆ ತೊಡಗಿದ್ದೆ. 'ಪಂಪಭಾರತ' ನನಗೂ ಶಾಸ್ತ್ರಿಗಳಿಗೂ ಮೆಚ್ಚಿನ ವಿಷಯವಾಗಿತ್ತು. ಶಾಸ್ತ್ರಿಗಳ ಒಡನಾಟ ನನ್ನ ಉದ್ದೇಶ ಸಾಧನೆಗೆ ಅನುಕೂಲವಾಗಿ ಒದಗಿಬಂತು. 'ಬಲ್ಲವರ ಒಡನಾಟ ಬೆಲ್ಲವನು ಮೆದ್ದಂತೆ' ಎಂಬ ನುಡಿ ನನ್ನ ಮತ್ತು ಶಾಸ್ತ್ರಿಗಳ ವಿಷಯದಲ್ಲಿ ಅಕ್ಷರಶಃ ನಿಜವೆನಿಸಿತು. ಒಂದೇ ಮನಸ್ತತ್ವದವರು ಒಟ್ಟು ಸೇರುವುದು ದಣಿವಿರದ ಸಾಧನೆಗೆ ಮಾರ್ಗವೂ ಆಯಿತು.

ಶಾಸ್ತ್ರಿಗಳ ಮತ್ತು ನನ್ನ ಒಡನಾಟ ಕೇವಲ ಕಾಲಕ್ಷೇಪದ ಒಡನಾಟವಲ್ಲ. ಮಾತೆತ್ತಿದರೆ 'ಶಬ್ದಮಣಿದರ್ಪಣ', ಪಾಠಾಂತರಗಳು, ಪಂಪಭಾರತದ ಪದ್ಯಗಳಲ್ಲಿ ಬರುವ ಅರ್ಥಸಂದಿಗ್ಧತೆಯ ಪರಿಹಾರ, ಇತ್ಯಾದಿ. ಇಂತಹ ಒಡನಾಟ ನಮ್ಮಿಬ್ಬರಿಗೇ ಸಾಧ್ಯವಾಯಿತಲ್ಲದೆ ಬೇರೆಯವರೊಡನೆ ಸಾಧ್ಯವಾಗುತ್ತಿರಲಿಲ್ಲ.

ಎರಡು ವರ್ಷಗಳ ಕಾಲ ಪ್ರೊ.ಶಿವರುದ್ರಪ್ಪನವರೂ ಇಲ್ಲಿ ಕನ್ನಡ ವಿಭಾಗದ ಮುಖ್ಯಸ್ಥರಾಗಿದ್ದರು. ಅವರಿರುವಾಗಲೂ ನಮ್ಮ ಒಡನಾಟದಲ್ಲಿ ಸಾಹಿತ್ಯಿಕವಿಷಯಗಳ ಚರ್ಚೆಗೆ ತೊಡಗುತ್ತಿದ್ದೆವು. ಶಾಸ್ತ್ರಿಗಳನ್ನುಳಿದು ನಮ್ಮ ಒಡನಾಟ, ಚರ್ಚೆಗಳು ಸಾಗುತ್ತಲೇ ಇರಲಿಲ್ಲ. ಹಳಗನ್ನಡಸಾಹಿತ್ಯ, ವ್ಯಾಕರಣವಿಚಾರಗಳಲ್ಲಿ ಕೂಲಂಕಷ ವಿಚಾರಕ್ಕೆ ಶಾಸ್ತ್ರಿಗಳು ಬೇಕೇಬೇಕು. ನನ್ನ ಕಾರ್ಯನಿರ್ವಹಣೆಯ ಸಂದರ್ಭದಲ್ಲಿ ಶಾಸ್ತ್ರಿಗಳಂಥವರ ಒಡನಾಟ ದೊರಕಿದ್ದು ಒಂದು ಸುಯೋಗವೆಂದೇ ಭಾವಿಸುತ್ತೇನೆ.

ವಿದ್ವಾಂಸವರಿಷ್ಠ

ಸಿ.ಪಿ.ಕೆ.

ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರೀ ಅವರು ನನ್ನ ವಿದ್ಯಾರ್ಥಿಯೂ ಅಲ್ಲ, ಗುರುವೂ ಅಲ್ಲ. ನಾವಿಬ್ಬರೂ ಸಹೋದ್ಯೋಗಿಗಳಾಗಿದ್ದವರು; ಸಾಹಿತ್ಯಪಥದಲ್ಲಿ ಸಹಯಾತ್ರಿಗಳು. ಆದರೆ ಸೂತ್ರ ಮಾತ್ರ ತಕ್ಕಮಟ್ಟಿಗೆ ಬೇರೆ ಬೇರೆ. ವಯಸ್ಸಿನಲ್ಲಿ ಮತ್ತು ವಿದ್ವತ್ತಿನಲ್ಲಿ ಅವರು ನನಗೆ ಹಿರಿಯರು; ನನ್ನ ಮತ್ತು ಅವರ ಸಂಬಂಧ ಹಿರಿಯ ಮತ್ತು ಕಿರಿಯ ಮಿತ್ರರದು.

ಅವರು ಮಾನಸಗಂಗೋತ್ರಿಯ ಕುವೆಂಪು ಕನ್ನಡ ಅಧ್ಯಯನಸಂಸ್ಥೆಗೆ ಅಧ್ಯಾಪಕರಾಗಿ ಬರುವ ಮುನ್ನ ಎರಡು ಸಲ ಅವರ ಹೆಸರನ್ನು ಕೇಳಿದ್ದೆ ಮತ್ತು ಒಂದು ಸಲ ಅವರನ್ನು ನೋಡಿದ್ದೆ. ಒಮ್ಮೆ ನನ್ನ ಸಹಪಾಠಿ ಜೀಶಂಪ ಅವರು, ಇನ್ನೊಮ್ಮೆ ನನ್ನ ಗುರುಗಳಾದ ಜಿ.ಎಸ್.ಎಸ್. ಅವರು ಶಾಸ್ತ್ರಿಗಳನ್ನು ಹೆಸರಿಸಿದ್ದರು. "ಹೈದರಾಬಾದಿನಲ್ಲಿ ವೆಂಕಟಾಚಲ ಶಾಸ್ತ್ರೀ ಎಂಬುವವರಿದ್ದಾರೆ, ಬಹಳ ಬುದ್ಧಿವಂತರು" ಎಂದಿದ್ದರು, ಜಿ.ಎಸ್.ಎಸ್. (ಪ್ರಾಯಶಃ ಅವರು ಉಸ್ಮಾನಿಯಾ ವಿಶ್ವವಿದ್ಯಾನಿಲಯಕ್ಕೆ ರೀಡರ್ ಆಗಿ ಹೋಗುವ ಮುನ್ನ). ಆಮೇಲೆ, ಕನ್ನಡ ಅಧ್ಯಯನಸಂಸ್ಥೆ ವ್ಯವಸ್ಥೆಗೊಳಿಸಿದ್ದ ಬಸವಣ್ಣನವರನ್ನು ಕುರಿತ ವಿಚಾರಗೋಷ್ಠಿಯೊಂದರಲ್ಲಿ ಶಾಸ್ತ್ರಿಗಳನ್ನು ಮೊದಲಬಾರಿಗೆ ಕಂಡು ಮಾತನಾಡಿಸಿದ್ದೆ.

ಮುಂದೆ ಅವರು ಹೈದರಾಬಾದಿನಿಂದ ಬಂದು ನನ್ನ ಸಹೋದ್ಯೋಗಿಯಾದ ಬಳಿಕ ಅವರ ಧೀಶಕ್ತಿಯ ಎತ್ತರ ಬಿತ್ತರಗಳೂ ವ್ಯಕ್ತಿತ್ವದ ಸತ್ತ್ವವೂ ನನ್ನ ಅನುಭವಕ್ಕೆ ಬಂದುವು. ಅವರಿಗೆ ಶಾಸ್ತ್ರೀ ಎಂದು ನಾಮಕರಣ ಮಾಡಿದವರು ಪ್ರವಾದಿಗಳೆಂದೇ ಹೇಳಬೇಕು. ಶಾಸ್ತ್ರಿಗಳು ನಾನಾ ಶಾಸ್ತ್ರವಿಷಯಗಳಲ್ಲಿ ಪಾರಂಗತರು. ಶಾಸ್ತ್ರರಸಾನುಭವದಲ್ಲಿ ಸದಾ ಸುಖಿಸುವವರು. ಅವರಿಗೆ ವಿಶೇಷವಾಗಿ ಛಂದಸ್ಸಿನಲ್ಲಿ ತುಂಬೊಲವು ಮತ್ತು ಪರಿಣತಿ. ವ್ಯಾಕರಣ ಗ್ರಂಥಸಂಪಾದನೆ ಮುಂತಾದವುಗಳಲ್ಲೂ ಅವರು ಗಟ್ಟಿಕುಳ. ಅವರ ಸಂಶೋಧನಸಾಹಸ ಮತ್ತು ವಾಙ್ಮಯವ್ರತ ಅಸಾಧಾರಣವಾದದ್ದು; ಅಚಲವಾದದ್ದು. ಯಾವ ಕೆಲಸವನ್ನು ಮಾಡಿದರೂ ತಲಸ್ಪರ್ಶಿಯಾಗಿ ಮಾಡುವುದು ಅವರ ಜಾಯಮಾನ; ಅದೇ ಅವರ ಜಯದ ಗುಟ್ಟು! ಅಲ್ಪದಲ್ಲಿ ಅವರು ತೃಪ್ತರಲ್ಲ; ಮಹತ್ತಿನಲ್ಲಿ ನೆಟ್ಟ ದೃಷ್ಟಿಯುಳ್ಳವರು. ಅಂತಹ ದೃಷ್ಟಿ, ಧ್ಯೇಯ, ಧೈರ್ಯಗಳ ವಿಶಿಷ್ಟ ಫಲಗಳು 'ಶ್ರೀವತ್ಸ ನಿಘಂಟು', 'ಕನ್ನಡ ನೇಮಿನಾಥ ಪುರಾಣಗಳ ತೌಲನಿಕ ಅಧ್ಯಯನ',

'ಕನ್ನಡ ಛಂದಃಸ್ವರೂಪ', 'ಕನ್ನಡ ಚಿತ್ರಕಾವ್ಯ' ಇತ್ಯಾದಿ ಹೆಚ್ಚೊತ್ತಗೆಗಳು; ಅವರ ಕಿರುಹೊತ್ತಿಗೆಗಳೂ ಹುರುಳುಳ್ಳವೇ. ಅವುಗಳ ಮೂಲಕ ಕನ್ನಡ ಶಾಸ್ತ್ರಸಾಹಿತ್ಯವನ್ನು ಅವರು ನಿಸ್ಸಂದೇಹವಾಗಿ ಶ್ರೀಮಂತಗೊಳಿಸಿದ್ದಾರೆ; ಅದರ ದಿಗಂತಗಳನ್ನು ಹಿಗ್ಗಿಸಿದ್ದಾರೆ ("....ದೊಡ್ಡ ಬೇಟೆಗಳನ್ನೇ ಅವರು ಹೂಡುತ್ತಿದ್ದುದು" ಎಂಬ ಟಿ.ಎಸ್.ವೆಂಕಣ್ಣಯ್ಯನವರ ಬಗೆಗಿನ 'ಶ್ರೀ' ಅವರ ಪ್ರಶಂಸೆ ಶಾಸ್ತ್ರಿಗಳಿಗ ೧ ಚೆನ್ನಾಗಿ ಒಪ್ಪುತ್ತದೆ!).

ಕನ್ನಡ ವಿದ್ವತ್ಪರಂಪರೆಯನ್ನು ಶಾಸ್ತ್ರಿಗಳು ಬಹು ಸಮರ್ಥವಾಗಿ ಎತ್ತಿಹಿಡಿದಿದ್ದಾರೆ; ಮುಂದುವರಿಸಿದ್ದಾರೆ. ನಾನು ಯಾರು ಯಾರನ್ನು ದೊಡ್ಡ ದೊಡ್ಡ ವಿದ್ವಾಂಸರೆಂದು ಕರೆಯುತ್ತೇನೋ ಅವರಲ್ಲಿ ಯಾರಿಗೂ ಶಾಸ್ತ್ರಿಗಳು ಕಡಿಮೆಯಿಲ್ಲ ಎಂದರೆ, ಅದು ಉತ್ಪ್ರೇಕ್ಷೆಯ ಉಕ್ತಿಯಾಗದು(ಈಗಂತೂ ವಯಸ್ಸಿನಲ್ಲೂ ಅವರು ದೊಡ್ಡವರಾಗಿದ್ದಾರೆ!). ಇಂದಿಗೂ ಪಾಂಡಿತ್ಯ ಉಳಿದಿದೆಯೇ ಎಂಬ ಪ್ರಶ್ನೆಗೆ ಅವರಂಥ ಕೆಲವೇ ಕೆಲವರು ವಿರಳರು ಇತ್ಯಾತ್ಮಕ ಉತ್ತರಗಳು.

ಶಾಸ್ತ್ರಿಗಳ ಸಂಶೋಧನೆಯಲ್ಲಿ ಊಹೆ ಕಲ್ಪನೆಗಳಿಗೆ ಸ್ಥಾನವಿಲ್ಲ. ಎಲ್ಲ ಸಾಧಾರ, ವಸ್ತುನಿಷ್ಠ ಮತ್ತು ತತ್ಕಾರಣದಿಂದಲೆ ಸುಷ್ಠು. "ಪಾಂಡಿತ್ಯಂ ಕಿಂ? ಪರಿಚ್ಛೇದಃ" ಎಂಬ ಸೂಕ್ತಿಗೆ ಅವರು ಸಮೀಚೀನ ಉದಾಹರಣೆ. ಅಗ್ಗದ ಜನಪ್ರಿಯತೆ ಅವರಿಗೆ ಒಗ್ಗದು. ಅವರು ಎಂದೂ ಅದರ ಬೆನ್ನು ಹತ್ತಿದವರಲ್ಲ.

ಇಲ್ಲಿ ಒಂದೇ ಒಂದು ಸಣ್ಣ ನಿದರ್ಶನವನ್ನು ಕೊಡಬಯಸುತ್ತೇನೆ. ಪಂಪ ಭಾರತದಲ್ಲಿ ಬರುವ "ಬೇಡುವೊಡೆ ನೀನೆಮ್ಮಯ್ಯನಂ ಬೇಡಿರೇ" ಎಂಬ ಸತ್ಯವತಿಯ ಮಾತಿಗೆ "ಬೇಡುವುದಾದರೆ ನೀವು ನನ್ನ ತಂದೆಯನ್ನು ಬೇಡಿ!" ಎಂದೇ ಇದುವರೆಗೆ ಎಲ್ಲರೂ -ಘನ ವಿದ್ವಾಂಸರು ಕೂಡ- ಅರ್ಥಮಾಡಿದ್ದಾರೆ. ಆದರೆ ಹಳಗನ್ನಡದಲ್ಲಿ "ಬೇಡಿರೇ" ಎಂಬುದು "ಬೇಡುವುದಿಲ್ಲವೇ?" ಎಂಬ ಪ್ರಶ್ನಾರ್ಥಕವಾದ ನುಡಿ. ಇದನ್ನು ಶಾಸ್ತ್ರಿಗಳ ಬಾಯಲ್ಲಿ ಕೇಳಿ ನನಗೆ ವಿಸ್ಮಯ, ಸಂತೋಷಗಳಾದುವು("ನೀಮೆ ಪೇಸಿರೇ" ಎಂಬ ಪಂಪನ ಕರ್ಣನ ಮಾತನ್ನು ನೆನೆಯಬಹುದು). "ನನ್ನನ್ನು ಕೇಳಿದರೆ ಸಾಕೇ? ನಮ್ಮಪ್ಪನನ್ನು ಕೇಳುವುದಿಲ್ಲವೆ?" ಎಂಬ ಆಡುಮಾತಿನ ಧಾಟಿ ಎಷ್ಟು ಸಹಜವಾಗಿದೆ! ಶಾಸ್ತ್ರಿಗಳು ವ್ಯಾಕರಣಾನುಸಾರವಾಗಿಯೆ ಅರ್ಥೈಸಿದ ರೀತಿ ಅದನ್ನು ಎತ್ತಿ ತೋರುತ್ತದೆ. ವಿದ್ವತ್ತು ವಿಮರ್ಶೆಗೆ ನೆರವಾಗುವ ಪರಿ ಇಂಥ ಕಡೆಗಳಲ್ಲಿರುತ್ತದೆ.

ಶಾಸ್ತ್ರಿಗಳದು ಶುಷ್ಕ ವೈದುಷ್ಯವಲ್ಲ. ಅವರ ಪಾಂಡಿತ್ಯಪಾರುಷ್ಯದಡಿಯಲ್ಲಿ ಆರ್ದ್ರತೆಯಿದೆ. ಅವರೊಳಗೆ ಒಬ್ಬ ಕವಿ ಅಡಗಿದ್ದಾನೆಂದರೂ ತಪ್ಪಲ್ಲ. ಅವರು ಲಿಖಿಸಿರುವ ವ್ಯಕ್ತಿಚಿತ್ರಗಳ ಗದ್ಯದಲ್ಲಿ ಇದು ವಿದಿತವಾಗುತ್ತದೆ. ಅವರ ಶೈಲಿಗೆ ಅವರದೇ ಆದ ಚಹರೆಗಳಿವೆ.

'ಕಂಸ' ಎಂಬ ನಾಟಕವನ್ನು ಅವರು ಬರೆದಿದ್ದಾರೆ. ಸಾಕಷ್ಟು ಹಾಸ್ಯಪ್ರಜ್ಞೆಯೂ ಅವರಲ್ಲುಂಟು('ಸದ್ದೆಂತೆಂಬರ ಗಂಡ' ಎಂಬ ಲೇಖನಸಮುಚ್ಚಯ ಇದಕ್ಕೆ ಸಾಕ್ಷಿ).

ಲೆಕ್ಕವಿಲ್ಲದಷ್ಟು ಸಲ ನನ್ನ, ಅವರ ಮಾತುಕತೆಗಳಲ್ಲಿ -'ಸಜ್ಜನ ಸಲ್ಲಾಪ' ಎನ್ನಬಹುದೆ?- ನಗೆಬುಗ್ಗೆಗಳು ಚಿಮ್ಮಿವೆ, ನಮ್ಮ ಬಗೆಗಳನ್ನು ಹಗುರಗೊಳಿಸಿವೆ!

ಶಾಸ್ತ್ರಿಗಳ ಮತ್ತು ನನ್ನ ವ್ಯಕ್ತಿಗತ ಸಂಬಂಧ ಸುಮಾರು ನಾಲ್ಕು ದಶಕಗಳಷ್ಟು ನಿಡಿದಾಗಿದ್ದರೂ, ತೀರ ನಿಕಟವಾದುದೆಂದು ಹೇಳಲಾರೆ; ಆದರೆ ಅದರ ಸ್ವರೂಪ ಆತ್ಮೀಯವಾದದ್ದು, ಅನುಮಾನವಿಲ್ಲ. ಅವರ ಸ್ವಭಾವದಲ್ಲಿ ಅತಿರೇಕಗಳಿಲ್ಲ. ಅದು ಹಿತ, ಮಿತ ಮತ್ತು ಉಚಿತ. ನನ್ನನ್ನು ಉದ್ದಕ್ಕೂ ಅವರು ಪ್ರೀತಿ ವಿಶ್ವಾಸಗಳಿಂದ ಕಂಡಿದ್ದಾರೆ, ನಡೆಸಿಕೊಂಡಿದ್ದಾರೆ. ಅವರ ಮನೆಯಲ್ಲಿ ಎಷ್ಟೋ ಸಲ ನಾನು ತಿಂಡಿ, ತೀರ್ಥವನ್ನು ಎಂದರೆ ಕಾಫಿಯನ್ನು ಸವಿದಿದ್ದೇನೆ. ಅವರ ಶ್ರೀಮತಿಯವರು ಅವರಿಗೆ ತಕ್ಕ ಸಹಧರ್ಮಿಣಿ ಎಂಬುದನ್ನೂ ಒತ್ತಿ ಹೇಳಬೇಕು(ಅನೇಕರ ಬಗೆಗೆ ಈ ಮಾತನ್ನು ಹೇಳುವುದು ಕಷ್ಟ).

ನನಗೆದುರಾದ ಎಷ್ಟೋ ವಿದ್ವತ್‌ಸಮಸ್ಯೆಗಳನ್ನು ಬಿಡಿಸುವುದರಲ್ಲಿ ಶಾಸ್ತ್ರಿಗಳು ನೆರವಾಗಿದ್ದಾರೆ. 'ಕರ್ಣಾಟಕ ಪಂಚತಂತ್ರ', 'ಯಶೋಧರಚರಿತ', 'ಅನುಭವಮುಕುರ', 'ಅನಂತನಾಥಪುರಾಣ'ಗಳನ್ನು ನಾನು ಸಂಪಾದಿಸುವಲ್ಲಿ ಸೂಕ್ತ ಸಲಹೆ, ಸೂಚನೆಗಳನ್ನು ನೀಡಿದ್ದಾರೆ.

ಹೇಳಲೇ ಬೇಕಾದ ಒಂದು ಮುಖ್ಯ ಸಂಗತಿಯೆಂದರೆ, ತಮ್ಮ 'ಮಾರ್ಗದರ್ಶಕ ಮಹನೀಯರು' ಎಂಬ ಪುಸ್ತಕದಲ್ಲಿ ನನ್ನನ್ನು ಕುರಿತ, ಮೆಚ್ಚುಗೆ ಹೆಚ್ಚಾಗಿರುವ, ಆದರೆ ದೌರ್ಬಲ್ಯಗಳನ್ನು ಮರೆಯದ ಬರಹವೊಂದನ್ನು ಅವರು ಸೇರಿಸಿದ್ದಾರೆ. ಅದು ಗಣ್ಯಾತಿಗಣ್ಯರ ಪ್ರದೀಪ್ತಪಂಕ್ತಿ. ಅದರಲ್ಲಿ ನನಗೂ ಒಂದು ಮಣೆ ಹಾಕಿರುವುದು ನನ್ನ ಬಗೆಗೆ ಶಾಸ್ತ್ರಿಗಳಿಗಿರುವ ಗೌರವದ -ಅಲ್ಲವಾದರೆ, ಆದರದ- ದ್ಯೋತಕವೆಂದು ಭಾವಿಸಿ, ಅವರಿಗೆ ಕೃತಜ್ಞನಾಗಿದ್ದೇನೆ.

ಶಾಸ್ತ್ರಿಗಳು ತಮ್ಮ ಬಾಳಿನ ಪೂರ್ವಾರ್ಧದಲ್ಲಿ ಹಲವಾರು ಕಷ್ಟಗಳನ್ನು ಅನುಭವಿಸಿದವರು ಎಂಬುದು ಅವರು ಬರೆದಿರುವ ಆತ್ಮವೃತ್ತಾಂತದಲ್ಲಿ ವ್ಯಕ್ತವಾಗುತ್ತದೆ ("ಕ್ಲೇಶಃ ಫಲೇನ ಹಿ ಪುನರ್ನವತಾ ವಿಧತ್ತೇ" ಎಂಬ ಹೇಳಿಕೆ ಎಲ್ಲ ರೀತಿಯಲ್ಲೂ ಅವರಿಂದ ಅರ್ಥಗಳಿಸಿಕೊಂಡಿದೆ). ಈಗ ಅವರು ನೆಮ್ಮದಿಯ ತೀರದಲ್ಲಿದ್ದಾರೆ. ದೈವಾನುಗ್ರಹ, ಸ್ವಂತ ಕ್ರಿಯಾಕ್ಷಮತೆ ಎರಡೂ ಅದಕ್ಕೆ ಕಾರಣವೆಂದರೆ ಅವರು ಒಪ್ಪಿಯಾರು. ಅನೇಕ ಪ್ರಶಸ್ತಿ ಪುರಸ್ಕಾರಗಳು ಅವರನ್ನು ಅರಸಿ ಬಂದು, ಅವರ ಕೊರಳಿಗೆ ತೊಡವಾಗಿವೆ. ಮುಂದೆ ಇನ್ನೂ ಮೇಲಾದುವು ಖಂಡಿತ ಪ್ರಾಪ್ತವಾಗಲಿವೆ. ಅವರದು ಸಫಲ ಚೇತನ ಮತ್ತು ಜೀವನ. ಎಪ್ಪತ್ತೈದರ ಸನಿಹದಲ್ಲಿರುವ ಅವರಿಗೆ ನನ್ನ ಹಾರ್ದಿಕ ಶುಭಾಶಯಗಳು.

ಹಳಗನ್ನಡ ವಿದ್ವನ್ಮಣಿ, ಸ್ನೇಹದ ಗಣಿ

ಜಿ.ಅಶ್ವತ್ಥನಾರಾಯಣ

ಇಂದಿನ ಕನ್ನಡ ಸಂಶೋಧನಸರತ್ನರಲ್ಲಿ ಒಬ್ಬರಾದ ವೆಂಕಟಾಚಲ ಶಾಸ್ತ್ರಿಗಳು ಹಳಗನ್ನಡದ ವಿದ್ವಾಂಸರಲ್ಲಿ ಒಬ್ಬರು. ವಿದ್ವತ್ತಿನ ಪ್ರವಚನಪ್ರಾಧ್ಯಾಪಕರು, ಸಂಸ್ಥೆಗಳನ್ನು ಕಟ್ಟಿ ಬೆಳೆಸುವಲ್ಲಿ ಸಮರ್ಥವ್ಯಕ್ತಿಗಳು, ಎಲ್ಲಕ್ಕೂ ಮಿಗಿಲಾಗಿ ವಿದ್ವತ್ತನ್ನು ಬೆಳೆಸಲು ಸಂಶೋಧನೆಗೆ ವಿದ್ಯಾರ್ಥಿಗಳನ್ನು ಪ್ರೇರೇಪಿಸುವುದರಲ್ಲಿ, ಪ್ರೋತ್ಸಾಹಿಸುವುದರಲ್ಲಿ ಅಗ್ರಗಣ್ಯರು. ಅವರ ಮಾರ್ಗದರ್ಶನದಲ್ಲಿ ಹೊರಬಂದಿರುವ ಮಹಾಪ್ರಬಂಧಗಳೇ ಅದಕ್ಕೆ ಸಾಕ್ಷಿ.

ನಮ್ಮಲ್ಲಿ ಎರಡು ಬಗೆ ವಿದ್ವಾಂಸರಿದ್ದಾರೆ. ಒಂದು ಕಡೆ ಕುಳಿತು ಗ್ರಂಥರಾಶಿಗಳನ್ನೇ ಅಧ್ಯಯನಮಾಡುವವರು. ಮತ್ತೆ ಕೆಲವರು ಕ್ಷೇತ್ರಕಾರ್ಯಮಾಡಿ, ಊರೂರು ಅಲೆದು ಸತ್ಯಾನ್ವೇಷಣೆಮಾಡಿ ಹೊಸಸಾಮಗ್ರಿ ಹುಡುಕಿ ಅದನ್ನು ಬೆಳಕಿಗೆ ತರುವವರು. ಶಾಸ್ತ್ರಿಗಳು ಎರಡೂ ಬಗೆಯ ಕಾರ್ಯವನ್ನು ಮಾಡಿರುವ ಉಭಯಮಾರ್ಗಿಗಳು. ನನ್ನದೇ ಒಂದು ಅನುಭವವನ್ನು ಇಲ್ಲಿ ಉಲ್ಲೇಖಿಸಬಹುದು.

ಸರ್ ಎಂ.ವಿಶ್ವೇಶ್ವರಯ್ಯನವರ ಪೂರ್ವಜರ ಚರಿತ್ರೆಯನ್ನು ಬರೆಯಲು ಹೊರಟಾಗ ವಿ.ಲಕ್ಷ್ಮೀಪತಯ್ಯನವರ ಆತ್ಮಕಥೆಯಲ್ಲಿ ಕಂಡುಬಂದ "ಕಳಾಸುಪಾಳ್ಯದ ಸಹಜಾನಂದರಲ್ಲಿ ರಘುವಂಶದ ಮೊದಲನೇ ಸರ್ಗ್ಗೆಯನ್ನು ಪ್ರಾರಂಭಿಸಿದೆನು" ಎಂಬ ವಾಕ್ಯ ಓದಿದಾಗ ಡಿವಿಜಿ ಅವರ ಮಾತು ನೆನಪಾಗಿ ವೇದಾಂತ ಪಂಚದಶಿ, ವೃತ್ತಿಪ್ರಭಾಕರ ಮೀಮಾಂಸಾ ಗ್ರಂಥ ಇವನ್ನು ೨೦ನೆಯ ಶತಮಾನದ ಪ್ರಾರಂಭದಲ್ಲೇ ಸೊಗಸಾಗಿ ಅನುವಾದಿಸಿದ ಸ್ವಾಮಿಯ ಪೂರ್ವೋಕ್ತ ತಿಳಿಯುವ ಕುತೂಹಲ ಶಾಸ್ತ್ರಿಗಳಿಗೆ ಉಂಟಾಯಿತು. ಈ ಬಗ್ಗೆ ಮೈಸೂರಿನಲ್ಲಿ ಸುತ್ತಾಡಿ ತಡಕಾಡಿ ವಿಷಯಸಂಗ್ರಹ ಮಾಡಿದ ಮೇಲೆ ಹೆಚ್ಚಿನ ಮಾಹಿತಿಗೆ ಬೆಂಗಳೂರಿನಲ್ಲಿ ಮಾಹಿತಿಸಂಗ್ರಹಕ್ಕೆ ತೊಡಗಿದರು. ಆ ಸಂದರ್ಭದಲ್ಲಿ ಸಹಜಾನಂದ ಭಾರತೀಸ್ವಾಮಿಗಳ ಮಠದ ಅನ್ವೇಷಣೆಗೆ ನನ್ನನ್ನು ಸಂಪರ್ಕಿಸಿದರು. ಸಿಟಿ ಮಾರ್ಕೆಟ್ ಬಳಿ ಕಳಾಸಿಪಾಳ್ಯದ ಗಜಿಬಿಜಿ ಪ್ರದೇಶದ ನಡುವೆ ಸಾರಾಯಿ ಅಂಗಡಿ ಹತ್ತಿರದಲ್ಲಿ ಹೊರಗಡೆಗೆ ತಕ್ಷಣ ಗೊತ್ತಾಗದಂತೆ ಇರುವ ಆ ಮಠವನ್ನು ತಲಾಷ್ ಮಾಡಿ ತಿಳಿಸಿದೆನು. ತಕ್ಷಣ ಮೈಸೂರಿನಿಂದ ಬಂದರು. ಉರಿಬಿಸಿಲಲ್ಲಿ ನನ್ನೊಡನೆ ತಿರುಗಾಡಿದರು. ಮಠದಲ್ಲಿದ್ದವರು ಕೊಟ್ಟ ವಿವರದಿಂದ ಬಲಿಜ ಹಾಸ್ಟೆಲಿಗೆ, ಅಲ್ಲಿಂದ ಶಂಕರಪುರಕ್ಕೆ, ಮತ್ತೆ ಬಲಿಜ ಹಾಸ್ಟೆಲಿಗೆ ಹೀಗೆ ಹಲವಾರು ಕಡೆ ತಿರುಗಿ ಕೆಲವು

ಮಾಹಿತಿಗಳನ್ನು ಪಡೆದೆವು. ಇಡೀ ದಿನವೆಲ್ಲಾ ಸುತ್ತಾಡಿದ ಮೇಲೆ ಅನಂತರ ಹಲವಾರು ಬಾರಿ ಅದಕ್ಕೆ ಸಂಬಂಧಿಸಿ ಎಡತಾಕಿ, ಮಾಹಿತಿ ಸಂಗ್ರಹಿಸಿ, ಬೆಂಗಳೂರು ಕಳಾಸಿಪಾಳ್ಯದ ಶ್ರೀ ಸಹಜಾನಂದ ಭಾರತೀಸ್ವಾಮಿಗಳ ಜೀವನ ಸಾಧನೆಗಳ ಪರಿಚಯಗ್ರಂಥದ ಜೊತೆಗೆ, ಸ್ವಾಮಿಗಳಿಂದ ರಚಿತವಾದ ಗುರುಭಕ್ತಿಸಾರವೆಂಬ ಷಟ್ಪದಿ ಶತಕವನ್ನು ಪರಿಷ್ಕರಿಸಿ ಪ್ರಕಟಿಸಿದರು. ಇತಿಹಾಸದ ಕಾಲಗರ್ಭದಲ್ಲಿ ಚೆದುರಿ ಚೆಲ್ಲಾಡಿ ಹೋಗಿದ್ದ ಮಾಹಿತಿ ಗಳನ್ನು ಒಂದೆಡೆ ತಂದು ಕನ್ನಡಕ್ಕೆ ಧಾರ್ಮಿಕಗ್ರಂಥಗಳ ಶ್ರೇಷ್ಠಾನುವಾದ ನೀಡಿದ ಸ್ವಾಮಿ ಯೊಬ್ಬರ ಬದುಕಿನ ಕಥೆಯನ್ನು ಮತ್ತೆ ಬೆಳಕಿಗೆ ತಂದರು.

ಈ ಪ್ರಸಂಗವನ್ನು ಪ್ರಸ್ತಾಪಿಸಿದ ಉದ್ದೇಶವಿಷ್ಟೆ. ಶಾಸ್ತ್ರಿಗಳು ಕೇವಲ ಕೂತು ಸಂಶೋಧನೆ ಮಾಡುವವರಲ್ಲ; ಸಾಹಿತ್ಯಕ್ಕಾಗಿ ಅಪರವಯಸ್ಸಿನಲ್ಲೂ ಅಲೆಮಾರಿಯಾಗಿ ದುಡಿದು ಸಂಶೋಧನಕಾರ್ಯ ನಡೆಸುವ ವ್ಯಕ್ತಿಗಳಲ್ಲಿ ಒಬ್ಬರಾಗಿದ್ದರು ಮತ್ತು ಜ್ಞಾನಾನ್ವೇಷಣೆ ಮುಖ್ಯ, ಜ್ಞಾನಿಯ ಬಗ್ಗೆ ಅರಿವು ಮುಖ್ಯ, ಜಾತಿವಿಚಾರ ಗೌಣ ಸಂಶೋಧಕನಿಗೆ ಎಂಬ ಮಾತಿಗೆ 'ಸಹಜಾನಂದ ಭಾರತಿಗಳ ಜೀವನ ಸಾಧನೆ' ಗ್ರಂಥ ಒಂದು ನಿದರ್ಶನ. ವೈದಿಕಮನೆತನದ ವ್ಯಕ್ತಿಯೊಬ್ಬ ದ್ವಿಜೇತರ ವರ್ಗದ ಜ್ಞಾನಿ ಯೊಬ್ಬನನ್ನು ಕುರಿತು, ಆ ವರ್ಗದ ಜನಕ್ಕಿಂತ ಹೆಚ್ಚು ಆಸಕ್ತಿ ಶ್ರದ್ಧೆ ವಹಿಸಿದ್ದು ಇಂದಿನ ತಲೆಮಾರಿನ ಕಿರಿಯ ವಿದ್ವಾಂಸರು ಗಮನಿಸಬೇಕಾದ ಸಂಗತಿಯಾಗಿದೆ.

ಶಾಸ್ತ್ರಿಗಳು ಕನ್ನಡಕ್ಕೆ ಕೊಟ್ಟ ಕೊಡುಗೆ ಏನು ಎಂಬುದಕ್ಕೆ ಸಪ್ನ ಬುಕ್ ಹೌಸ್ ಪ್ರಕಟಿಸಿರುವ 'ಶಾಸ್ತ್ರೀಯ' ಬಿಡಿಬರಹಗಳ ೬ ಸಂಯುಕ್ತಸಂಪುಟಗಳಲ್ಲಿ ಇರುವ ವಿದ್ವದ್‌ಲೇಖನಗಳು ಸಾಕ್ಷಿಯಾಗಿವೆ. ವಿಷಯವೈವಿಧ್ಯ, ಆಳಪಾಂಡಿತ್ಯ, ವಿಮರ್ಶಾ ನೋಟ, ಐತಿಹಾಸಿಕ ಪ್ರಜ್ಞೆ, ಹೊಸ ಅಂಶಗಳ ಸಾಧಾರನಿರೂಪಣೆ, ಸಹೃದಯದೃಷ್ಟಿ, ಇತ್ಯಾದಿ ವಿದ್ವಾಂಸ-ಸಂಶೋಧಕ-ಸಜ್ಜನಗುಣಗಳ ಸಮ್ಮಿಳನವೇ ೩೫೭೦ಕ್ಕೂ ಪುಟಗಳ ಆ ಬರಹಗಳಲ್ಲಿದೆ. ಇವೆಲ್ಲಕ್ಕಿಂತ ಮಿಗಿಲಾದ ಕೃತಿ ಎಂದರೆ ಅವರ 'ಮುಲಕನಾಡು ಬ್ರಾಹ್ಮಣರು ಸಮುದಾಯ- ಸಂಸ್ಕೃತಿ' ಗ್ರಂಥ. ಡಾ.ಚಿದಾನಂದಮೂರ್ತಿಯವರು ತಮ್ಮ ಮಹಾಪ್ರಬಂಧದ ಮೂಲಕ ಸಾಂಸ್ಕೃತಿಕ ಅಧ್ಯಯನ ಪರಂಪರೆಯ ಅಧ್ಯಯನ ಪದ್ಧತಿಯನ್ನು ರೂಪಿಸುವಲ್ಲಿ ಹೇಗೆ ಆದ್ಯರಾದರೋ ಹಾಗೆ ಶಾಸ್ತ್ರಿಗಳು ಕರ್ನಾಟಕ ಸಂಸ್ಕೃತಿ-ಉಪಸಂಸ್ಕೃತಿ ಅಧ್ಯಯನ ಅನ್ವೇಷಣೆಯ ಅಂಗವಾಗಿ ಕರ್ನಾಟಕ ಮುಲಕನಾಡು ಬ್ರಾಹ್ಮಣಸಮುದಾಯದ ಅಧ್ಯಯನಗ್ರಂಥದ ಮೂಲಕ, ಒಂದು ವರ್ಣದವರ ಉಪಪಂಗಡದ ಅಧ್ಯಯನಕ್ಕೆ ಮಾದರಿಯನ್ನು ನಿರ್ಮಿಸಿದ್ದಾರೆ. ಈ ಬಗೆಯ ಹಲವಾರು ಗ್ರಂಥಗಳು ಬಂದಿದ್ದರೂ ಈ ಗ್ರಂಥದಷ್ಟು ಐತಿಹಾಸಿಕಮಹತ್ವವುಳ್ಳ, ವೈಜ್ಞಾನಿಕ ವಿಶ್ಲೇಷಣೆಯುಳ್ಳ, ದೇಶಪ್ರಜ್ಞೆಯ ಭಾಷಾಕೊಡುಗೆಯ ಹಿನ್ನೆಲೆಯಲ್ಲಿ ರಚಿತವಾದ ಗ್ರಂಥ ಇನ್ನೊಂದಿಲ್ಲ. ಇಡೀ ಗ್ರಂಥದುದ್ದಕ್ಕೂ ರಾಗದ್ವೇಷಗಳಿಲ್ಲದೆ, ಅನ್ಯಮತದೂಷಣೆ ಕಿಂಚಿತ್ತೂ ಇಲ್ಲದೆ, ಸ್ವಪ್ರಶಂಸೆಯ ಅತಿರೇಕವಿಲ್ಲದೆ ಸಂಯಮದಿಂದ ಸಾಧಾರವಾಗಿ

ಬರೆದ ಶ್ರೇಷ್ಠಗ್ರಂಥವಾಗಿದೆ. ಸಮುದಾಯವೊಂದರ ಅಧ್ಯಯನಕ್ಕೆ ಆದರ್ಶಗ್ರಂಥವಾಗಿದೆ. ಒಬ್ಬ ವಿದ್ವಾಂಸ ಸ್ವಧರ್ಮಾಸಕ್ತನಾಗಿದ್ದರೂ ಆ ಬಗ್ಗೆ ಸಾಕಷ್ಟು ಅರಿವಿರುವುದು ಅಪರೂಪ. ಇನ್ನು ಆ ಬಗ್ಗೆ ಅಧ್ಯಯನವೂ ಅಪರೂಪವೇ. ಆದರೆ ವಿಶಾಲಭಾವನೆಯ ಶಾಸ್ತ್ರಿಗಳು ಸ್ವಜಾತಿ ಸ್ವಧರ್ಮವನ್ನು ಮರೆಯದೆ ಇತರರಿಗೆ ಕಣ್ತೆರೆಸುವ ಕಾರ್ಯ ಮಾಡಿದ್ದಾರೆ. ಅದಕ್ಕೆ ಸಾಕ್ಷಿ ಈ ಗ್ರಂಥ. ಕನ್ನಡನಾಡಿಗೆ, ನುಡಿಗೆ ಮುಲಕನಾಡು ಸಮುದಾಯ ನೀಡಿದ ಸಾಹಿತ್ಯ ಸಾಂಸ್ಕೃತಿಕ ಕೊಡುಗೆಗಳನ್ನು, ವ್ಯಕ್ತಿಗಳನ್ನು ಸಮಗ್ರವಾಗಿ ನೀಡಿದ್ದಾರೆ. ಉಳಿದ ಸಮುದಾಯದವರು ಈ ಬಗ್ಗೆ ಕೆಲಸ ಮಾಡಲು ಈ ಗ್ರಂಥ ಸ್ಫೂರ್ತಿ ಆಗಿದೆ. ಇದು ಶಾಸ್ತ್ರಿಗಳ ವಿಶೇಷ ಕೊಡುಗೆ.

ಈ ಗ್ರಂಥವನ್ನು ಬಿಡುಗಡೆ ಮಾಡುವ ಸಂದರ್ಭದಲ್ಲಿ ಗ್ರಂಥಪರಿಚಯಕ್ಕೆ ನನಗೆ ಹೇಳಿದರು. ನಾನು ಈ ಕ್ಷೇತ್ರದಲ್ಲಿ ಕೆಲಸ ಮಾಡಿದವರಿಗೂ ಅಥವಾ ಈ ಸಮುದಾಯದ ಹಿರಿಯರಿಗೋ, ಗಣ್ಯರಿಗೋ, ವಿದ್ವಾಂಸರಿಗೋ ಈ ಕಾರ್ಯ ವಹಿಸಿ ಎಂದೆ. ಅದಕ್ಕೆ ಅವರು ಹೇಳಿದ ಮಾತು ಮನನೀಯವಾಗಿದೆ. "ನನಗೆ ವ್ಯಕ್ತಿಗಳು, ಅವರ ಪ್ರಶಸ್ತಿ ಸ್ಥಾನಮಾನಗಳು ಈ ವಿಷಯದಲ್ಲಿ ಮುಖ್ಯವಲ್ಲ. ಶ್ರದ್ಧೆಯಿಂದ ಓದಿ ಪ್ರಾಮಾಣಿಕವಾಗಿ ತಮ್ಮ ಅನಿಸಿಕೆಗಳನ್ನು ಹೇಳಬಲ್ಲವರು, ಸಭಿಕರಿಗೆ ಅಚ್ಚುಕಟ್ಟಾಗಿ ಸಂಗ್ರಹವಾಗಿ ಕೃತಿಪರಿಚಯ ನೀಡುವವರು ಮುಖ್ಯ" ಎಂದರು. ಅವರ ದೃಷ್ಟಿಕೋನ ಮೆಚ್ಚುವಂಥದು.

ಸಾಮಾನ್ಯವಾಗಿ ವಿದ್ವಾಂಸರು ಸಭೆಗಳಲ್ಲಿ ಭಾಗವಹಿಸಬಲ್ಲವರು ಗೋಷ್ಠಿಗಳಲ್ಲಿ ಭಾಗವಹಿಸಿ, ಕಾರ್ಯಕ್ರಮಗಳನ್ನು ನಿರ್ವಹಿಸಬಹುದು. ಆದರೆ ಸಂಘಸಂಸ್ಥೆಗಳ ಜವಾಬ್ದಾರಿ ಹೊತ್ತ ಅಧ್ಯಕ್ಷರಾಗಿ, ಸಂಘಟಕರಾಗಿ, ಕಾರ್ಯನಿರ್ವಾಹಕರಾಗಿ, ಕಾರ್ಯಸಾಧನೆಮಾಡಿ ಸಂಸ್ಥೆಗೆ ಹೆಸರು ತರುವುದು ಅನೇಕ ವಿದ್ವಾಂಸರಿಗೆ ಸಾಧ್ಯವಿಲ್ಲ. ಹಾಗೆ ಕಾರ್ಯನಿರ್ವಹಿಸುವುದನ್ನು ಸಾಕಷ್ಟು ತಿಳಿದವರೇ ಆಗಿದ್ದರೂ ಘನವಿದ್ವಾಂಸರಾಗಿರುವುದಿಲ್ಲ. ಆದರೆ ಶಾಸ್ತ್ರಿಗಳು ಇದಕ್ಕೆ ಅಪವಾದ. ಅವರು ಘನವಿದ್ವಾಂಸರೂ ಹೌದು, ಶ್ರೇಷ್ಠ ಸಂಸ್ಥಾ ನಿರ್ವಾಹಕರೂ ಹೌದು. ಅದಕ್ಕೊಂದು ನಿದರ್ಶನ ಬಿಎಂಶ್ರೀ ಸ್ಮಾರಕ ಪ್ರತಿಷ್ಠಾನದ ಅಧ್ಯಕ್ಷರಾಗಿ ಅವರು ಕಾರ್ಯನಿರ್ವಹಿಸಿದ ರೀತಿ ಮತ್ತು ಆ ಸಂಸ್ಥೆಗೆ ತಂದುಕೊಟ್ಟ ಕೀರ್ತಿ. ಆ ಸಂಸ್ಥೆಯ ರಜತಮಹೋತ್ಸವ ನಡೆಸಿದ ರೀತಿ ಒಂದು ನಿದರ್ಶನ. ಅದರ ಕಟ್ಟಡ ನಿರ್ಮಾಣಕ್ಕೆ ಅವರು ನಡೆಸಿದ ಪ್ರಯತ್ನ ಶ್ಲಾಘನೀಯ. ವಿದ್ವಾಂಸರಲ್ಲಿ ಸಂಘಟಕ ಹೇಗೆ ಅಡಗಿರುತ್ತಾನೆ ಎಂಬುದಕ್ಕೆ ಅವರೊಂದು ನಿದರ್ಶನ. ಸಭೆಗಳಲ್ಲಿ ಸ್ವಲ್ಪ ದೀರ್ಘ ಭಾಷಣಮಾಡುವುದೂ ಬರೆದೋದುವುದೂ ಅವರ ಸ್ವಭಾವವಾದರೂ ಸಾಧಾರವಾಗಿ, ಸಮಾಲೋಚಿತವಾಗಿ, ಅಧ್ಯಯನನಿಷ್ಠವಾಗಿ, ಸಂದರ್ಭಕ್ಕೆ ತಕ್ಕಂತೆ ವಿದ್ವತ್ಪೂರ್ಣವಾಗಿ ಮಾತನಾಡುವುದು ಅವರ ವೈಶಿಷ್ಟ್ಯ.

ಅವರಲ್ಲಿ ನಾ ಕಂಡ ಒಂದು ವಿಶೇಷವೆಂದರೆ ಸಂಘಸಂಸ್ಥೆಗಳಲ್ಲಿ ಎಷ್ಟೇ ದುಡಿದರೂ ಆ ಬಗ್ಗೆ ಅಧಿಕಾರವ್ಯಾಮೋಹ ಇಲ್ಲದಿರುವುದು ಅವರ ವಿಶೇಷತೆ ಆಗಿದೆ. ಬಿಎಂಶ್ರೀ ಪ್ರತಿಷ್ಠಾನದ ಅಧ್ಯಕ್ಷರಾಗಿ ದುಡಿದ ಅವರು ಕೆಲವು ವರ್ಷಗಳ ನಂತರ 'ನನ್ನ ಕೈಲಾದಷ್ಟು ಕೆಲಸಮಾಡಿದ್ದೇನೆ. ನನ್ನನ್ನು ಬಿಡಿ, ಬೇರೆಯವರನ್ನು ಅಧ್ಯಕ್ಷರನ್ನಾಗಿ ಆರಿಸಿಕೊಳ್ಳಿ' ಎಂದು ಪದೇ ಪದೇ ಹೇಳುತ್ತಿದ್ದರು. ಅಷ್ಟೇ ಅಲ್ಲ, ತಮ್ಮ ರಾಜಿನಾಮೆಪತ್ರವನ್ನು ನೀಡಲು ಹೊರಟಿದ್ದೂ ಉಂಟು. ಆಗೆಲ್ಲ ಸದಸ್ಯರು, 'ನಿಮ್ಮ ಬದಲಿ, ನಿಮ್ಮಷ್ಟೇ ಸಮರ್ಥರನ್ನು ತಂದುಕೊಡಿ, ಆಮೇಲೆ ನೀವು ಜಾಗಬಿಡಿ' ಎನ್ನುತ್ತಿದ್ದರು. ಕೊನೆಗೆ ಸೂಕ್ತ ಅರ್ಹವ್ಯಕ್ತಿಯೊಬ್ಬರನ್ನು ಅವರು ಸೂಚಿಸಿದಾಗಲೇ ಅವರಿಗೆ ಬಿಡುಗಡೆ ಸಿಕ್ಕಿದ್ದು. ಈ ಸಂಗತಿ ಉಲ್ಲೇಖಿಸಿದ ಉದ್ದೇಶವಿಷ್ಟೇ: ಅಧಿಕಾರ ಸಿಕ್ಕಮೇಲೆ ತೊರೆಯುವುದು ಸುಲಭವಲ್ಲ. ಸ್ಥಾನಮಾನ ಎಂಬುದು ವ್ಯಕ್ತಿಯನ್ನು ಭ್ರಷ್ಟಗೊಳಿಸಬಹುದು. ಸ್ಥಾನಭದ್ರನಾಗುವಂತೆ ಮಾಡಬಹುದು. ಆದರೆ ಈ ವಿಷಯದಲ್ಲಿ ಶಾಸ್ತ್ರಿಗಳು ಕಮಲಪತ್ರ ಬಿಂದುವಾಗಿದ್ದಾರೆ. ಶಾಸ್ತ್ರಿಗಳನ್ನು ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟುಕಾರ್ಯದಲ್ಲಿ ಭಾಗ ವಹಿಸುತ್ತಿರುವಂದಿನಿಂದ ಬಲ್ಲೆ. ಅಂದಿನಿಂದ ಇಂದಿನವರೆಗೂ ಅವರ ಸ್ನೇಹಪರತೆ ಒಂದೇ ಬಗೆಯದು. ಪ್ರತಿಯೊಬ್ಬನಲ್ಲೂ ಇರುವ ಜ್ಞಾನಾಸಕ್ತಿಯನ್ನು, ಗುರುತಿಸಿ ಪ್ರೋತ್ಸಾಹಿಸುವುದು ಅವರ ಗುಣ. "ನೀವು ಮಾಡಬಲ್ಲಿರಿ, ಈ ಕೆಲಸ, ಮಾಡಿ. ನನ್ನಿಂದ ಏನು ಸಹಾಯಬೇಕೋ ಅದನ್ನು ನೀಡಬಲ್ಲೆ" ಎಂಬ ಅಭಯ ನೀಡುವುದರಲ್ಲಿ, ಅಂತೆಯೇ ನೆರವು ನೀಡುವುದರಲ್ಲಿ ಸಿದ್ಧಹಸ್ತರು.

ಕಿರಿಯ ತಲೆಮಾರನ್ನು ಪ್ರೋತ್ಸಾಹಿಸುವ ವಿದ್ವನ್ಮಣಿ, ಸ್ನೇಹದಗಣಿ ಶಾಸ್ತ್ರಿಗಳು. ವೈದಿಕಸಾಹಿತ್ಯ ವೈಷ್ಣವಸಾಹಿತ್ಯ ಜೈನಸಾಹಿತ್ಯ, ಹಳಗನ್ನಡವ್ಯಾಕರಣ, ಪ್ರಾಚೀನ ಗ್ರಂಥಗಳು, ಕನ್ನಡಕ್ಕೆ ದುಡಿದ ಮಹನೀಯರ ಸೇವೆ, ಸಂಶೋಧನೆ, ಗ್ರಂಥಸಂಪಾದನೆ ಕ್ಷೇತ್ರಗಳಲ್ಲಿ ಅದ್ವಿತೀಯರಾದವರು ಅವರು. ಅವರನ್ನು ಅಭಿನಂದಿಸುವುದು ಆನಂದದಾಯಕ ಸಂಗತಿ, ನಮ್ಮ ಪುಣ್ಯವಿಶೇಷಗಳಲ್ಲಿ ಒಂದು.

ಧೀಮಂತ ಸನ್ಮಿತ್ರ

ಎಸ್.ಶ್ರೀನಿವಾಸನ್

ವಾಗ್ದೇವೀವರಪುತ್ರಪುಣ್ಯಯಶಸರೂ ಗೌರೀಶಂಕರತುಂಗಶೃಂಗನಿಲಯರೂ ವಿದ್ವತ್ಸಭಾವಲಯದ ಮುಡಿಯ ಮಾಣಿಕ್ಯರೂ ವ್ಯಾಕರಣ, ಛಂದಸ್ಸು, ಚಿತ್ರಕವಿತ್ವ, ಕಾವ್ಯಮೀಮಾಂಸೆಗಳಲ್ಲಿ ಸಕಲಶಾಸ್ತ್ರಪಾರಂಗತ, ಸಂಶೋಧನದಿಗ್ಗಜ ಮುಂತಾಗಿ ಪ್ರಶಂಸನೀಯರಾಗಿರುವ ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರೀ ಮತ್ತು ನನ್ನ ಗೆಳೆತನ, ಒಡನಾಟ ೧೯೪೪ರಿಂದಲೂ ಅನವರತ ನಡೆದುಬಂದು ಇನ್ನೂ ಗಾಢವಾಗಿ ಅಂಟಿಕೊಂಡಿದೆ.

ಮೈಸೂರಿನ ಯುವರಾಜ ಕಾಲೇಜು, ಮಹಾರಾಜ ಕಾಲೇಜುಗಳಲ್ಲಿ ವ್ಯಾಸಂಗ ಮಾಡಿದ ದಿನಗಳನ್ನು ಸ್ಮರಿಸಿಕೊಂಡರೆ "ಅಯ್ಯೋ ಹೋಯಿತೆ ಆ ನಾಕ! ಅಯ್ಯೋ ಬಂದಿತೆ ಈ ನರಕ!" ಎನಿಸುತ್ತದೆ.

ಘಟಾನುಘಟಿ ಸಹಪಾಠಿಗಳಾದ ಡಾಕ್ಟರೇಟ್ ಉಪಾಧಿಯಿಂದ ಕೂಡಿದ ಚಿದಾನಂದ ಮೂರ್ತಿ, ವೃಷಭೇಂದ್ರಸ್ವಾಮಿ, ನಾರಾಯಣಶೆಟ್ಟಿ, ವೆಂಕಟಾಚಲ ಶಾಸ್ತ್ರೀ, ವಿನೋದಾ ಬಾಯಿ ಮುಂತಾದ ಪ್ರತಿಭಾನ್ವಿತರೊಡನೆ ಸಾಮಾನ್ಯಮಟ್ಟದ ಕಿರಿಯನಾದ ನಾನೂ ಅಭ್ಯಾಸಮಾಡಿದವನು.

ಸೌಮ್ಯ, ಸರಳಸ್ವಭಾವದ, ಅಜಾತಶತ್ರು ಶಾಸ್ತ್ರೀ ವಿದ್ಯಾರ್ಥಿದೆಸೆಯಲ್ಲಿ ಈಗಿನ ಮಟ್ಟದ ಉನ್ನತಪ್ರತಿಭೆಯನ್ನೇನೂ ಪ್ರದರ್ಶಿಸಿದ್ದು ಕಾಣಲಿಲ್ಲ. ಅಧ್ಯಾಪಕರಾದ ಮೇಲೆ ಅದ್ವಿತೀಯವ್ಯಕ್ತಿತ್ವ, ಉದಾತ್ತಪಾಂಡಿತ್ಯವನ್ನು ಕರಗತಗೊಳಿಸಿಕೊಂಡು ಆಚಾರ್ಯ ಡಿ.ಎಲ್.ಎನ್., ಡಾ.ಕೇಶವ ಭಟ್ಟರ ನಂತರ ಛಂದಸ್ಸು, ಗ್ರಂಥಸಂಪಾದನೆಯ ಮೇಲೆ ಹಿಡಿತ ಸಾಧಿಸಿ, ಇದಮಿತ್ಥಂ ಎಂದು ಹೇಳುವ 'ಅಥಾರಿಟಿ'ಯಾಗಿದ್ದಾರೆ ಎಂದ ಮೇಲೆ ಕನ್ನಡಕ್ಕಳಿವಿಲ್ಲ.

'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯದ ಮಹೋಪಮೆ ಮಹಾಛಂದಸ್ಸಿನ ಬಗ್ಗೆ ನಡೆದ ಸಂವಾದದಲ್ಲಿ ''ನಿಮ್ಮಂಥವರು ನಮ್ಮ ಕಾವ್ಯ ಮತ್ತು ಬರವಣಿಗೆಗಳ ಬಗ್ಗೆ ತಿಳಿಸಿದಾಗಲೇ, ವಿಮರ್ಶಿಸಿದಾಗಲೇ ಸಹೃದಯರಿಗೆ ಮನದಟ್ಟಾಗುತ್ತದೆ. ಆ ಕೆಲಸ ನಿಮ್ಮಿಂದ ಆಗಬೇಕು" ಎಂಬುದಾಗಿ ವಿದ್ಯಾಗುರುಗಳೂ ರಾಷ್ಟ್ರಕವಿಗಳೂ ಆದ ಡಾ. ಕುವೆಂಪು ಅವರ ಪ್ರಶಂಸೆಗೆ ಶಾಸ್ತ್ರಿಗಳು ಪಾತ್ರರಾಗಿದ್ದಾರೆ.

ನನ್ನ ಮಟ್ಟಿಗೆ ಹೇಳುವುದಾದರೆ ವಾತ್ಸಲ್ಯಕ್ಕೆ ಹೆಸರಾದವರು ಶಾಸ್ತ್ರಿಗಳು. ಕಷ್ಟ ಬಡತನದಲ್ಲಿ ಇಬ್ಬರೂ ಸಹಭಾಗಿಗಳು. ಪೈಜಾಮಾ ಷರಟು, ಹುಬ್ಬಳ್ಳಿ ದಾಸಪ್ಪನ

ಟೈರ್ ಚಪ್ಪಲಿ ನಮ್ಮ ಸಮವಸ್ತ್ರ. ಮೃಷ್ಟಾನ್ನ ಇಲ್ಲದಿದ್ದರೂ (ಇಷ್ಟು ಅನ್ನ) ವಾರಾನ್ನ ಇಬ್ಬರಿಗೂ ಜೀವನಾಧಾರವಾಗಿತ್ತು.

ಶಾಸ್ತ್ರಿಗಳು ಬಹುಬೇಗ ಗೃಹಸ್ಥರೂ ಆದರು. ಸಾಂಸಾರಿಕ ಅಡಚಣೆಗಳಿಂದಾಗಿ ಯಾವುದಾದರೂ ಉದ್ಯೋಗ ಮಾಡಲೇ ಬೇಕಾದ ಪರಿಸ್ಥಿತಿ ಇಬ್ಬರಿಗೂ ಅನಿವಾರ್ಯ ವಾಗಿತ್ತು. ಅವರು ಕನಕಪುರದ ರೂರಲ್ ಪ್ರೌಢಶಾಲೆಯಲ್ಲಿ ಅಧ್ಯಾಪಕರಾದರು. ನಾನು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಪ್ರಕಟನಸಂಸ್ಥೆಯನ್ನು ಸೇರಿದೆ.

ಕನಕಪುರದಿಂದ ಶಾಸ್ತ್ರಿಗಳು ಬೆಂಗಳೂರಿನ ಸೆಯಿಂಟ್ ಜೋಸೆಫ್ಸ್ ಕಾಲೇಜು, ಉಸ್ಮಾನಿಯಾ ವಿಶ್ವವಿದ್ಯಾನಿಲಯದ ಕಾಲೇಜುಗಳಲ್ಲಿ ಚಾಕರಿ ಮಾಡಿ, ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿ, ನಿರ್ದೇಶಕ ಹುದ್ದೆಗೇರಿ ಸಾರ್ಥಕಸೇವೆ ನೀಡಿ ಬದುಕನ್ನು ಕೃತಾರ್ಥವಾಗಿಸಿಕೊಂಡಿದ್ದಾರೆ.

ಯಾವುದೇ ಖಾಸಗಿ ಸಮಾರಂಭಗಳಲ್ಲಿಯೂ ನನ್ನನ್ನು ಆಹ್ವಾನಿಸಿ ಉಪಚರಿಸಿ ಸ್ನೇಹಮಯಿ ಎಂಬುದನ್ನು ಪಸರಿಸಿದ್ದಾರೆ.

ಶಾಸ್ತ್ರಿಗಳು ಸಾರ್ವಜನಿಕ ಕ್ಷೇತ್ರಗಳಲ್ಲಿಯೂ ತಮ್ಮನ್ನು ಉತ್ತಮವಾಗಿ ತೊಡಗಿಸಿ ಕೊಂಡು 'ದುಡಿಮೆಯೇ ದೇವರು' ಎಂಬುದನ್ನು ನಿರೂಪಿಸಿದ್ದಾರೆ. ಬಿ.ಎಂ.ಶ್ರೀ ಪ್ರತಿಷ್ಠಾನದ ಅಧ್ಯಕ್ಷರಾಗಿ, ಮೈಸೂರಿನ ಮುಲಕನಾಡುಭವನ ನಿರ್ಮಾಣದ ರೂವಾರಿ ಯಾಗಿ ಪ್ರತಿಫಲಾಪೇಕ್ಷೆಯಿಲ್ಲದೆ ದುಡಿದಿದ್ದಾರೆ, ನಾಡ ಋಣ ತೀರಿಸಿದ್ದಾರೆ.

ಹಳಗನ್ನಡ ಕಾವ್ಯದ ಅಧ್ಯಯನದ ತೆವಲನ್ನು ಹಚ್ಚಿಕೊಂಡ ನಾವಿಬ್ಬರೂ ಸಮಾನ ಭಾಗಿಗಳಾಗಿ ಬಹು ಪ್ರಯೋಜನವನ್ನು ಪಡೆದವರು. ಇದು ನಮ್ಮ ಪೂರ್ವಸುಕೃತ. ಪಾಂಡಿತ್ಯಕ್ಕೆ ಹೆಸರಾದ, ನಡೆದಾಡುವ ವಿಶ್ವಕೋಶವೆನಿಸಿದ್ದ ಆಚಾರ್ಯ ಡಿ.ಎಲ್.ಎನ್. ಈ ನಿಟ್ಟಿನಲ್ಲಿ ನಮಗೆ ಮಾರ್ಗದರ್ಶಕರಾಗಿದ್ದುದು ನಮ್ಮ ಸೌಭಾಗ್ಯ.

ನನ್ನ ತಂಗಿ ಸರೋಜಳಿಗೆ 'ಸಂಪ್ರದಾಯದ ಹಾಡುಗಳ' ಬಗ್ಗೆ ಮಾರ್ಗದರ್ಶನ ಮಾಡಿದವರು ಶಾಸ್ತ್ರಿಗಳು. ಅನೇಕ ರಾಜ್ಯ, ರಾಷ್ಟ್ರ, ಅಂತಾರಾಷ್ಟ್ರೀಯ ಸಂಶೋಧಕರಿಗೆ ಉತ್ತಮಮಾರ್ಗದರ್ಶನ ನೀಡಿರುವ ಖ್ಯಾತಿವೆತ್ತ ಅವರ ಮೇಲ್ವಿಚಾರಣೆಯಲ್ಲಿ ಸಂಶೋಧನೆ ನಡೆಸಿ ಪ್ರೌಢಪ್ರಬಂಧ ರಚಿಸಿ ನಾನೂ ಒಂದು ಉಪಾಧಿ ಪಡೆಯಬಹು ದಿತ್ತು. ಒತ್ತಾಯಪೂರ್ವಕವಾಗಿ ಶಾಸ್ತ್ರಿಗಳು ಹಲವಾರು ಬಾರಿ ಹೇಳಿದರೂ ಸೋಮಾರಿ ತನದಿಂದ ಆ ಕೆಲಸ ನನ್ನಿಂದಾಗಲಿಲ್ಲ.

ಹಿರಿಯ ಗುರುಗಳ ಸಂಭಾವನಾಗ್ರಂಥಗಳ ಸಂಪಾದನಾಮಂಡಳಿಯಲ್ಲಿ ವಿಚಾರ ಸಂಕಿರಣಗಳಲ್ಲಿ, ಭಾಷಣಗಳಲ್ಲಿ ಜೊತೆಯಲ್ಲಿ ಸಹಕರಿಸಿದ್ದೇವೆ. ಶಾಸ್ತ್ರಿಗಳು ಉತ್ತಮ ಕೃತಿಗಳನ್ನು ಲೋಕಾರ್ಪಣಮಾಡಿದ್ದಾರೆ. ಆಬ್ರಹ್ಮಸ್ತಂಭಪರ್ಯಂತ ಸಾಹಿತ್ಯಕೃಷಿ ಮಾಡಿರುವ ಅವರಿಗೆ ಸಲ್ಲಬೇಕಾದ ಗೌರವ ಪುರಸ್ಕಾರಗಳು ಪರಿಪೂರ್ಣವಾಗಿ ದೊರಕ ದಿದ್ದರೂ ಅವರು ಆತ್ಮಪ್ರತ್ಯಯವನ್ನು ಕಳೆದುಕೊಂಡಿಲ್ಲ. 'ಪೆಜಿರೀವುದೇಂ! ಪೆಜಿರ

ಮಾಡುವುದೇಂ! ಪೆಱರಿಂದಮಪ್ಪುದೇಂ!" ಎಂಬ ಮಹಾಕವಿ ಪಂಪನ ಹೇಳಿಕೆಯಂತೆ ಶಾಸ್ತ್ರೀ ಶಾಸ್ತ್ರೀಯರೇ ಆಗಿದ್ದಾರೆ - ಶಸ್ತ್ರಿಕರಾಗಲಿಲ್ಲ.

ಎಲ್ಲರಂತೆ ಶಾಸ್ತ್ರಿಗಳದೂ ಹೋರಾಟದ ಬದುಕೇ. ಕನ್ನಡಾಂಬೆಯ ಸೇವೆಯನ್ನು ಅವರು ಇನ್ನು ಮುಂದೆಯೂ ಅವಿರತವಾಗಿ ನಡೆಸಿಕೊಂಡು ಬರಲಿ, ಇತ್ತೀಚೆಗೆ ಅವರು ನಡೆಸುತ್ತಿರುವ ಕನಕಪುರದ ಸಾಂಸ್ಕೃತಿಕ ಮತ್ತು ಚಾರಿತ್ರಿಕ ಇತಿಹಾಸ ಸಂಶೋಧನೆ ಬೇಗ ಬೆಳಕಿಗೆ ಬರಲಿ, ಶಾಸ್ತ್ರಿಗಳಿಗೆ ಮಂಗಳವಾಗಲಿ, ಬಹುಕಾಲ ಅವರೊಡನೆ ನಾವಿರುವಂತಾಗಲಿ ಎಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

ಶಾಸ್ತ್ರ ಮತ್ತು ಸಂಶೋಧನೆಯ ಶ್ರೇಯಭೋಗಿ

ಎಂ.ಜಿ.ನಾಗರಾಜ್

ಶಾಸ್ತ್ರ ವಿದ್ವತ್‌ವಿಕಾಸದ ಗಿಂಡಿ. ಹನಿಹನಿಯಲ್ಲೂ ಪುಷ್ಟಿಯ ಪುಳಕ. ಸಂಶೋಧನೆ ವಿಶೇಷವಾದ ಸಾಧನೆಯಲ್ಲಿ ಅರಳಿದ ದರ್ಶನ. ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿಗಳು ಈ ದಿಸೆಯಲ್ಲಿ ಪ್ರೌಢ ಸವ್ಯಸಾಚಿ. ಶಾಸ್ತ್ರ ಸಂಶೋಧನೆಗಳನ್ನು ಸಾಮರಸ್ಯದಲ್ಲಿ ಸಂವಹನಿಸುವ ಪ್ರಚಂಡಪ್ರತಿಭೆ ಅವರದು. ಅದಕ್ಕೆ ಸಾಕ್ಷಿಯಾಗಿ ಅವರ 'ಕನ್ನಡ ಛಂದಃ ಸ್ವರೂಪ' ಸಾಧನಾಪಥದಲ್ಲಿ ಶಾಸ್ತ್ರಸಾಹಿತ್ಯಶಿಲ್ಪ, ಸಂಶೋಧನಕ್ಷೇತ್ರಪ್ರತಿಮೆ. 'ನಮ್ಮ ಕರ್ನಾಟಕ' ಎಂಬ ಕೃತಿಯೂ ಕರ್ನಾಟಕದ ಸಾಹಿತ್ಯ, ಭಾಷೆ, ಭೌಗೋಳಿಕ ದರ್ಶನದ ವಿಶಿಷ್ಟ ಸಡಗರದ ಕೃತಿ.

ಕನ್ನಡ ಛಂದಸ್ಸಿನ ಸಮಗ್ರ ವಿವೇಚನೆಯನ್ನು ತಮ್ಮ ಕೃತಿಯಲ್ಲಿ ಮಾಡುವ ಗುರಿಯನ್ನಿಟ್ಟುಕೊಂಡು ಅದನ್ನು ಸಾಧಿಸಿದ ತೃಪ್ತಿ ಡಾ.ಶಾಸ್ತ್ರಿಗಳವರಿಗೆ ಇದೆ. ಜೊತೆಗೆ ಜಾನಪದಸಾಹಿತ್ಯ, ಯಕ್ಷಗಾನ ಮತ್ತು ಹರಿದಾಸಕೃತಿಗಳ ಛಂದಸ್ಸಿನ ಪ್ರತ್ಯೇಕ ವಿವೇಚನೆ ಮಾಡಲಿಲ್ಲ ಎಂಬ ಕೊರಗೂ ಅವರಿಗಿದೆ. ಆದರೆ ಒಬ್ಬ ಶಾಸ್ತ್ರಸಾಹಿತ್ಯಸಂಶೋಧಕರಾಗಿ ತಮ್ಮ ಬಳಕೆಯ ಆಕರಗಳನ್ನು ನೀಡಿ ಲೇಖಕಶಿಸ್ತು ಮೆರೆದಿದ್ದಾರೆ. ಶಾಸ್ತ್ರೀಯ ಒಳನೋಟಗಳನ್ನು ತುಂಬಿ ತುಂಬಿ ಕೊಟ್ಟಿದ್ದಾರೆ.

ಛಂದಸ್ಸು ಒಂದು ಪ್ರಾಚೀನ ಶಾಸ್ತ್ರವಷ್ಟೇ ಅಲ್ಲ, ಅಧ್ಯಯನಾರ್ಹ ಶಾಸ್ತ್ರವಷ್ಟೇ ಅಲ್ಲ, ಭಾರತೀಯ ಸಾಹಿತ್ಯಚರಿತ್ರೆಯಲ್ಲಿ ಅದೊಂದು ಸಾಂಸ್ಕೃತಿಕ ಪರಿಚ್ಛೇದ. ಇದನ್ನು ಶಾಸ್ತ್ರಿಗಳು ತಮ್ಮ ವಿಶಾಲವೈದುಷ್ಯದಲ್ಲಿ ಬಹು ಸಮುಚಿತವಾಗಿ ಗುರ್ತಿಸಿದ್ದಾರೆ. ಅಂತೇ ಛಂದಸ್ಸಿನ ಐತಿಹಾಸಿಕ ಹಾಗೂ ಶುಭೇಚ್ಛಾ ಸಾಂಸ್ಕೃತಿಕ ಘಟಕಗಳನ್ನೂ ತೆರೆದು ತೋರಿದ್ದಾರೆ. ಆರು ಅಧ್ಯಾಯಗಳಲ್ಲಿ ಛಂದಸ್ಸಿನ ಉಗಮ, ನಿಷ್ಪತ್ತಿ, ಉಪಯೋಗದಿಂದ ಹಿಡಿದು ಛಂದಸ್ಸಿನ ಪ್ರಕಾರಗಳು, ವಿಕಸನರೂಪಗಳು ಹಾಗೂ ವರ್ತಮಾನದ ಹೊಸ ಛಂದಸ್ಸುಗಳ ಅಂತರಂಗ ಬಹಿರಂಗಗಳ ತೌಲನಿಕವಿವೇಚನೆ ಮಾಡಿರುವುದು ವಿಶೇಷವೆನಿಸುತ್ತದೆ.

ಕಾವ್ಯಕ್ಕೆ ಸಹೃದಯರೊಡನೆ ಭಾವಗುಣದೊಂದಿಗೆ ಸಂವಾದಿಸಲು, ಸಂವೇದನೆಗೊಳ್ಳಲು, ಸೃಜನಶೀಲತೆಯನ್ನು ಅಚ್ಚುಕಟ್ಟುಗೊಳಿಸಲು, ಗೇಯಗತಿಗಳಿಂದ ಮುದಗೊಳಿಸಲು, ಬಿಗಿಪು ಬರಲು, ಅಭಿವ್ಯಕ್ತಿಯ ಸುಶೀಲಮೊಗವಾಗಲು, ಸ್ಮರಣ ಜಾಗೃತವಿರಲು ಛಂದಸ್ಸು ಒಂದು ಸಾಹಿತ್ಯಕ ವರ್ಚಸ್ಸು ಪಡೆದಿದೆ ಎಂಬುದು ಅವರ ಕೃತಿಯಿಂದ

ನಮಗೆ ವೇದ್ಯವಾಗುತ್ತದೆ. ಅದೊಂದು ಮುದದ ಸ್ವೀಕಾರವಾಗಿ ಸ್ಪಂದನವಾಗಿ ಒದಗುತ್ತದೆ. ನಾವೇ ಛಂದಸ್ಸಿನಲ್ಲಿ ತಲ್ಲೀನವಾಗಿಬಿಡುವಷ್ಟು ಪ್ರೇರಕವಾಗಿದೆ ಕೃತಿ. ಅದಾಗಿ ಓದುವುದು ಕಷ್ಟವಾಗದೆ, ಪುಟಮಗುಚಿದಂತೆ ತನ್ಮಯವಾಗಿ ಬಿಡುತ್ತೇವೆ. ಆ ಅಪ್ಪುಗೆ ಬೇಕು ಬೇಕು ಎನಿಸಿಬಿಡುತ್ತದೆ. ಅಂತೇ 'ಕನ್ನಡ ಛಂದಃಸ್ವರೂಪ' ಕೃತಿಜನಕರಿಗೆ ನಾವು ಋಣಿಯಾಗಿರಬೇಕು.

ಪ್ರಥಮ ವಿಶ್ವಕನ್ನಡ ಸಮ್ಮೇಳನದ ಸಂದರ್ಭದಲ್ಲಿ ನಾಡು ನುಡಿಗೆ ಅವರು ಸಲ್ಲಿಸಿದ ಒಂದು ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ನಮನ, 'ನಮ್ಮ ಕರ್ನಾಟಕ' ಎಂಬ ಅವರ ಕೃತಿ. ಅದನ್ನು ೧೯೮೫ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿದುದಾಗಿದೆ. ಅದರ ಪುನರ್ಮುದ್ರಣಗಳಾಗಿವೆ.

ಕರ್ನಾಟಕದ ವ್ಯಾಪ್ತಿ ಹಾಗೂ ವಿಕಾಸ, ಮೇಲ್ಮೈಲಕ್ಷಣ, ಸಂಪನ್ಮೂಲಗಳು, ಪ್ರಾಗೈತಿಹಾಸಿಕ, ಜಾನಾಂಗಿಕ ಹಿನ್ನೆಲೆಗಳು, ಪರಂಪರೆ, ಭಾಷೆ ಮತ್ತು ದೇಶದ ಹೆಸರುಗಳ ಬಗ್ಗೆ ಸಾಹಿತ್ಯಕ ಸಾಕ್ಷ್ಯಗಳು, ಐತಿಹಾಸಿಕ ಪುರಾವೆಗಳನ್ನೆಲ್ಲ ಕ್ರಮಬದ್ಧವಾಗಿ ಇಲ್ಲಿ ಮಂಡಿಸಿ ವಿವರಿಸಲಾಗಿದೆ. ಅನುಬಂಧವಂತೂ 'ಕರ್ನಾಟಕ' ಸಾಹಿತ್ಯಕೋಶವಾಗಿ ಅಭಿಮಾನದ ಪ್ರೇರಕವಾಗಿ ಭಾವಋಣವನ್ನು ತುಂಬಿಕೊಡುವಂತಿದೆ. ಈ ಹೊತ್ತಿಗೆ ಸಂಕ್ಷಿಪ್ತವೆನಿಸಿದರೂ ಸಮಗ್ರವೆಂಬ ಭಾವ ತರುತ್ತದೆ. ಈ ದೃಷ್ಟಿಯಿಂದ ಆದರಣೀಯ ಡಾ. ವೆಂಕಟಾಚಲ ಶಾಸ್ತ್ರೀ ಅವರು ಬೆಳೆದ ನಾಡಿಗೆ, ಆಡಿದ ನುಡಿಗೆ ಭಾವಋಣವನ್ನು ಹೃತ್ಪೂರ್ವಕವಾಗಿ ಸಲ್ಲಿಸಿದ್ದಾರೆ ಎನ್ನಬೇಕು.

ಶಾಸ್ತ್ರಪ್ರೌಢರಾಗಿಯೂ ಎಲ್ಲರೊಡನೆ ಬೆರೆಯುವಂಥ ಪ್ರೌಢಹಸನ್ಮುಖಿ. ವಿದ್ವತ್ತಿನ ಗರಿಮೆಯಲ್ಲೂ ವಿನಯಶಾಲಿ; ಸ್ನೇಹಶೀಲಸೌಜನ್ಯ ಅವರ ಬದುಕಿನೊಡನೆ ಬಂದ ಸಹವಾಸಿ; ಶ್ರೀ ಹೃದಯವಾಸಿ.

ಕನಕಪುರದಲ್ಲಿ (ಬೆಂಗಳೂರು ಜಿಲ್ಲೆ) ನಮ್ಮ ಕನ್ನಡ ಸಾಹಿತ್ಯ ಸಂಸ್ಕೃತಿ ಸಮಿತಿಯಿಂದ ೧೯೭೧ರಲ್ಲಿ ನಡೆಸಿದ ಸಾಹಿತ್ಯ ಸಮ್ಮೇಳನವಾಗಲಿ, ೧೯೮೧ರಲ್ಲಿ ಆನೇಕಲ್ಲಿನಲ್ಲಿ ನಡೆದ ಬೆಂಗಳೂರು ಗ್ರಾಮಾಂತರ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನವಾಗಲಿ, ಉಭಯ ಸನ್ನಿವೇಶದಲ್ಲಿ ಕಾರ್ಯದರ್ಶಿಯಾಗಿದ್ದ ನನ್ನ ಆಹ್ವಾನಕ್ಕೆ ಮನ್ನಣೆ ಕೊಟ್ಟು ಬಂದು ತಮ್ಮ ಸಾಹಿತ್ಯಿಕಪ್ರೀತಿಯನ್ನು, ಕಾಳಜಿಯನ್ನು, ಗೋಷ್ಠಿಯಲ್ಲಿ ಅಧ್ಯಕ್ಷತೆ ವಹಿಸುವುದರ ಮೂಲಕ ತೋರಿದ ಶೀಲವಂತಿಕೆ ಅವರದು. ಹಾಗೆ ಸಮ್ಮೇಳನಕ್ಕಾಗಲಿ, ಸಾಹಿತ್ಯ ವಿಚಾರಗೋಷ್ಠಿಗಾಗಲಿ ಬಂದವರು ಸುಮ್ಮನೆ ಕೂರುವ ಜಾಯಮಾನವಲ್ಲ ಅವರದು. ಅಲ್ಲಿ ನುಸುಳುವ, ನುಸುಳಿರುವ ದೋಷಗಳಿದ್ದರೆ ಮುಂದೆ ಅವುಗಳ ಪುನರಾವರ್ತನೆ ಆಗದಿರಲಿ ಎಂಬ ಕಾಳಜಿಯಿಂದ ವ್ಯವಸ್ಥಾಪಕರಿಗೆ ಮನವರಿಕೆ ಮಾಡಿಕೊಡುತ್ತಿದ್ದರು.

ನಾನು ಕನ್ನಡ ಸಾಹಿತ್ಯ ಪರಿಷತ್ತಿನ ಗೌರವಕಾರ್ಯದರ್ಶಿಯಾಗಿದ್ದಾಗ ಅವರು ಕಸಾಪ.ದ ಕನ್ನಡ-ಕನ್ನಡ ನಿಘಂಟುವಿನ ಮಾಸಿಕಶಬ್ದ ಚರ್ಚೆಯ ವಿವೇಚನಾಸಭೆಗೆ ಸಂಪಾದಕಮಂಡಲಿಯ ಸದಸ್ಯರಾಗಿ ತಪ್ಪದೆ ಬಂದು ಶಿಸ್ತಿನಿಂದ ಪಾಲ್ಗೊಂಡು ಗಂಭೀರ

ವಿವೇಚನೆ ಮಾಡುತ್ತಿದ್ದರು. ನಾನು ಪರಿಷತ್ತಿನ ಪರವಾಗಿ ಆ ಸಭೆಯಲ್ಲಿ ಪಾಲ್ಗೊಳ್ಳು ತ್ತಿದ್ದೆ. ಅಲ್ಲಿ ಅವರು ಮಾಡುತ್ತಿದ್ದ ವಿವೇಚನೆ ಒಂದು ಶಾಸ್ತ್ರೀಯ ರೋಚಕತೆಯನ್ನು ತಂದುಕೊಡುತ್ತಿತ್ತು; ವೈಜ್ಞಾನಿಕ ಮಿಡಿತವಾಗಿ ಕಾಣಬರುತ್ತಿತ್ತು.

ಬಸವಾರಾಧ್ಯರು ಆಗ ಪ್ರಧಾನ ಸಂಪಾದಕರಾಗಿದ್ದರು. ಸಭೆಗೆ ವಿದ್ವಾಂಸರ ಶ್ರೇಣಿಯೆ ನೆರೆದು ಶಬ್ದವಿವೇಚನೆಯ ಶಾಸ್ತ್ರೀಯ ಮಂಡನೆ ಆಗುತ್ತಿತ್ತು.

ಬಿ.ಎಂ.ಶ್ರೀ ಪ್ರತಿಷ್ಠಾನದ ವಾರ್ಷಿಕ ಸರ್ವಸದಸ್ಯರ ಸಭೆಯಾಗಲಿ, ಅಥವಾ ಅದರ ಆಶ್ರಯದಲ್ಲಿ ನಡೆಯುತ್ತಿದ್ದ ಶಾಸ್ತ್ರ ಹಾಗೂ ಸಾಹಿತ್ಯಗೋಷ್ಠಿಯಾಗಲಿ ಅವರು ಅಧ್ಯಕ್ಷ ರಾಗಿ ತೋರುತ್ತಿದ್ದ ಸಾಮೂಹಿಕನಿರ್ವಹಣೆ ಅವರಿಗೆ ಸರ್ವಸದಸ್ಯರ ಪ್ರೀತಿ ಹಾಗೂ ಸಾಹಿತ್ಯಶಾಸ್ತ್ರವಿದ್ವಜ್ಜನರ ಗೌರವ ಪ್ರೀತಿಗಳು ಸುಲಭವಾಗಿ ಹರಿದುಬರುತ್ತಿದ್ದುವು. ಆ ಸಮಯದಲ್ಲೆಲ್ಲ ಅವರ ನುಡಿಗಳು, ಪ್ರೀತಿಯ ಆತ್ಮೀಯ ಭಾವನೆಗಳಿಂದ ಕೂಡಿರು ತ್ತಿದ್ದುವು.

ಮಿಥಿಕ್ ಸೊಸೈಟಿಯಲ್ಲಿ ನಾನು ಕಾರ್ಯದರ್ಶಿಯಾದ ಮೇಲೆ ಶಾಸ್ತ್ರಿಗಳವರನ್ನು ಸಂಶೋಧನಗೋಷ್ಠಿ, 'ಸುವರ್ಣ ಕರ್ನಾಟಕ' ವಿಚಾರಗೋಷ್ಠಿಗಳ ಅಧ್ಯಕ್ಷತೆ, ಹಾಗೂ ಉಪನ್ಯಾಸಕ್ಕೆ ಕರೆಸಿದಾಗ, ಅವರು ಮಂಡಿಸುತ್ತಿದ್ದ ಪ್ರಬಂಧಗಳೆಲ್ಲ ಪಕ್ವತೆಯ ಅಧಿಕೃತ ನಿಬಂಧಗಳಂತೆ ಸಾಧಾರ ವಿಷಯವೈಪುಲ್ಯದಿಂದ, ವೈವಿಧ್ಯತೆಯಿಂದ ಕೂಡಿರುತ್ತಿದ್ದು, ನಮ್ಮ ಮನಸ್ಸಿಗೊಂದು ಗಂಭೀರಪುಳಕ ದೊರೆಯುತ್ತಿತ್ತು; ಬುದ್ಧಿಗೆ ವಿಷಯಗಳ ಆಪ್ಯಾಯಮಾನತೆ ಒದಗುತ್ತಿತ್ತು.

ನಾನು ಕನ್ನಡ ಸಾಹಿತ್ಯ ಪರಿಷತ್ತಿನ ವಿದ್ವತ್ ಸಂಶೋಧನ ಪತ್ರಿಕೆ 'ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ'ಯ ಸಂಪಾದಕನಾಗಿ ಕೆಲಸ ನಿರ್ವಹಿಸುತ್ತಿದ್ದಾಗ, ಶಾಸ್ತ್ರಿಗಳವರಿಂದ ಲೇಖನಗಳನ್ನು ಆಹ್ವಾನಿಸುತ್ತಿದ್ದೆ. ಅವರಿಗೆ ಜೈನಸಾಹಿತ್ಯದ ಮೇಲೆ ವಿಶೇಷ ಮಮತೆ, ಕಾಳಜಿ. ಅಂತಾಗಿ ಆ ಕುರಿತು ಗಂಭೀರಚಿಂತನೆಯ ಲೇಖನಗಳನ್ನು ಬರೆದುಕೊಡುತ್ತಿದ್ದರು. ಅವರ ಸಾಹಿತ್ಯಿಕ ಹಾಗೂ ಶಾಸ್ತ್ರೀಯ ಒಳನೋಟಗಳನ್ನು ಕಂಡು ನನಗೆ ತುಂಬ ಸಂತೋಷ ವಾಗುತ್ತಿತ್ತು. ಪ್ರೊ.ಎಸ್.ಶ್ರೀನಿವಾಸನ್ ಹಾಗೂ ನಾನು ಆ ಪತ್ರಿಕೆಗೆ ಸಂಪಾದಕರಾಗಿದ್ದೆವು. ಶಾಸ್ತ್ರಿಗಳವರ ಲೇಖನ ಎಂದರೆ ಮೌಲಿಕ ಹಾಗೂ ಅವರ ಲೇಖನವಿರುವ ಸಂಚಿಕೆಯನ್ನು ಕಾಯ್ದಿಟ್ಟುಕೊಳ್ಳುವ ಆಶಯ, ತವಕ. ಇದು ನಮ್ಮಿಬ್ಬರಿಗಷ್ಟೇ ಅಲ್ಲ, ಆ ಲೇಖನ ಗಳನ್ನು ಓದಿದವರೆಲ್ಲರ ನಮ್ಮ ಆತ್ಮೀಯ ಸಾಹಿತ್ಯಿಕ ಬಳಗದವರ ಭಾವನೆ. ಅಂತು ಶಾಸ್ತ್ರಿಗಳವರ ಬರೆಹ ಮತ್ತು ಭಾಷಣಗಳು, ಸಂವಹನಗೊಳ್ಳುತ್ತಿದ್ದ ಸಾಹಿತ್ಯ ಶಾಸ್ತ್ರ ಪ್ರಕಾರವಾಗಿದ್ದುವು.

ಇಂದು ಅವರ ೭೫ರ ಹುಟ್ಟುಹಬ್ಬದ ಸಡಗರವಾಗಿ, ಸಾಧನೆಯ ಸ್ಮರಣೆಗಾಗಿ ಅಭಿನಂದನ ಗ್ರಂಥವನ್ನು ತರುತ್ತಿರುವುದಕ್ಕೆ ನನ್ನ ಹಾರ್ದಿಕ ಸಂತೋಷವಿದೆ.

ವಿದ್ವತ್‌ಪ್ರಭೆ

ಸಿ.ಯು.ಮಂಜುನಾಥ್

ಡಾ.ವೆಂಕಟಾಚಲ ಶಾಸ್ತ್ರೀ ಅವರ ಹೆಸರು ಕನ್ನಡ ವಿದ್ವತ್‌ಲೋಕದಲ್ಲಿ ಚಿರಪರಿಚಿತವಾದದ್ದು. ತಮ್ಮ ವಿಸ್ತಾರವಾದ ಮತ್ತು ಆಳವಾದ ಶ್ರದ್ಧಾವಂತ ಅಧ್ಯಯನದಿಂದ, ನಿರಂತರ ಸಂಶೋಧನೆಗಳಿಂದ ಡಾ.ಡಿ.ಎಲ್.ನರಸಿಂಹಾಚಾರ್ ಮತ್ತು ಪ್ರೊ.ತೀ.ನಂ. ಶ್ರೀಕಂಠಯ್ಯನವರ ಪಾಂಡಿತ್ಯಪರಂಪರೆಯನ್ನು ಸಮರ್ಥವಾಗಿ ಮುಂದುವರಿಸಿದ ಹಿರಿಯ ವಿದ್ವಾಂಸರಲ್ಲಿ ಒಬ್ಬರು. ಪ್ರಾಚೀನಸಾಹಿತ್ಯ, ಛಂದಸ್ಸು, ಶಾಸನ, ವ್ಯಾಕರಣ, ಕಾವ್ಯಮೀಮಾಂಸೆ, ಗ್ರಂಥಸಂಪಾದನೆ ಮುಂತಾದ ವಿಷಯಗಳಲ್ಲಿ ವಿಶೇಷ ಆಸಕ್ತಿಯನ್ನು ಬೆಳೆಸಿಕೊಂಡು, ಆ ವಿಷಯಗಳಲ್ಲಿ ಕೃಷಿಮಾಡಿ ಎಷ್ಟೋ ಅಲಕ್ಷಿತಕ್ಷೇತ್ರಗಳಲ್ಲಿ ಸಂಶೋಧನೆ ನಡೆಸಿ ಕನ್ನಡದ ವಿದ್ವತ್‌ರಥವನ್ನು ಮುನ್ನಡೆಸಿದ್ದಾರೆ. ಇಂಥ ಹಿರಿಯರ ಸಂಪರ್ಕದ ಮಧುರ ನೆನಪುಗಳು ನನ್ನ ಮನಸ್ಸಿನಲ್ಲಿ ಶಾಶ್ವತವಾದ ಮತ್ತು ಬೆಚ್ಚನೆಯ ಸ್ಥಾನವನ್ನು ಪಡೆದಿವೆ. ಡಾ.ಶಾಸ್ತ್ರಿಯವರಿಗೆ ಎಪ್ಪತ್ತೈದು ವರ್ಷಗಳು ತುಂಬಿದ ಸುಸಂದರ್ಭದಲ್ಲಿ ಅವುಗಳಲ್ಲಿ ಕೆಲವನ್ನು ಹಂಚಿಕೊಳ್ಳುವ ಸುಯೋಗ ಬಂದದ್ದು ನನ್ನ ಪುಣ್ಯವೆಂದು ಭಾವಿಸುತ್ತೇನೆ.

ಡಾ.ಶಾಸ್ತ್ರಿಗಳು ನನಗೆ ನೇರ ಗುರುಗಳಲ್ಲದಿದ್ದರೂ ನನ್ನ ಪೂಜ್ಯಗುರುಗಳಾದ ಡಾ.ಚಿದಾನಂದಮೂರ್ತಿಯವರ ಸಹಪಾಠಿಗಳಾದ್ದರಿಂದ ಅವರಿಬ್ಬರೂ ಸತೀರ್ಥರು; ಒಂದೇ ಗುರುಪರಂಪರೆಯಿಂದ ಬಂದವರಾದ್ದರಿಂದ ಗುರುಸಮಾನರೇ ಆಗಿದ್ದಾರೆ. ಶಾಸ್ತ್ರೀ ಅವರಿಗೆ ಅರವತ್ತು ವರ್ಷಗಳು ತುಂಬಿದ್ದಾಗ ಸಾಹಿತ್ಯಪರಿಷತ್ತಿನ ಸಭಾಂಗಣದಲ್ಲಿ ವ್ಯವಸ್ಥೆಮಾಡಿದ್ದ ಒಂದು ವಿಚಾರಸಂಕಿರಣದಲ್ಲಿ ಅವರ ಸಂಶೋಧನಲೇಖನಗಳ ಬಗ್ಗೆ ನನಗೆ ಒಂದು ಪತ್ರಿಕೆಯನ್ನು ಮಂಡಿಸುವ ಅವಕಾಶ ಬಂದಿತ್ತು. ಆ ನೆಪದಲ್ಲಿ ಇದ್ದಂತಹ ಗೌರವ ದ್ವಿಗುಣ ತ್ರಿಗುಣವಾಗಿ ಬೆಳೆಯಿತು. ವಿಚಾರಸಂಕಿರಣದ ಕೊನೆಯಲ್ಲಿ ಶಾಸ್ತ್ರಿಗಳು ಪತ್ರಿಕೆ ಮಂಡನೆಯ ಬಗ್ಗೆ ಒಂದೆರಡು ಮೆಚ್ಚುಗೆಯ ಮಾತುಗಳನ್ನು ಆಡಿದರು. ಅದು ನನ್ನ ಸಂಶೋಧನಬದುಕಿನಲ್ಲಿ ದೊರೆತ ಸಂತೋಷದ ಕ್ಷಣಗಳಲ್ಲಿ ಒಂದು.

ಶಾಸ್ತ್ರಿಗಳು ಬಹು ದೊಡ್ಡ ವಿದ್ವಾಂಸರಾಗಿದ್ದರೂ ಕಿರಿಯ ಸಂಶೋಧಕರು ಬರೆದ ಬರೆಹಗಳನ್ನು ಅತ್ಯಂತ ಸೂಕ್ಷ್ಮವಾಗಿ ಗಮನಿಸುತ್ತಾರೆ ಎಂಬುದು ಒಮ್ಮೆ ನನ್ನ ಅನುಭವಕ್ಕೆ ಬಂದಿತು. ಬೆಂಗಳೂರು ವಿಶ್ವವಿದ್ಯಾಲಯದ ಸಮಗ್ರ ಸಾಹಿತ್ಯಚರಿತ್ರೆಯ ನಾಲ್ಕನೆಯ ಸಂಪುಟದಲ್ಲಿ ದೇಪರಾಜನನ್ನು ಕುರಿತ ಲೇಖನದಲ್ಲಿ ಸಾಂಗತ್ಯ ಮತ್ತು ಸೊಬಗಿನ ಸೋನೆಯ ಬಗ್ಗೆ ಕೆಲವು ಮಾತುಗಳನ್ನು ಬರೆದಿದ್ದೆ. ಮುಂದೆ ಎಷ್ಟೋ

ವರ್ಷಗಳ ನಂತರ ಅವರ ನೇರ ಪರಿಚಯವಾದಾಗ ನನ್ನ ಹೆಸರು ಹೇಳಿಕೊಂಡು ಪರಿಚಯಮಾಡಿಕೊಂಡಾಗ ಅವರು ಒಂದೆರಡು ಕ್ಷಣ ಆಳವಾದ ನೆನಪಿಗೆ ತೆರಳಿ ಅನಂತರ, 'ಮಂಜುನಾಥ - ದೇಪರಾಜನ ಬಗ್ಗೆ ಲೇಖನ ಅಲ್ಲವೆ?' ಎಂದು ಪ್ರಶ್ನೆಮಾಡಿ ನಿಬ್ಬೆರಗು ಮೂಡಿಸಿದ್ದರು. ಇಂಥ ದೊಡ್ಡವರು ಗಮನಿಸುತ್ತಾರೆ ಎಂದ ಮೇಲೆ ಇನ್ನೂ ಎಚ್ಚರಿಕೆ ವಹಿಸಿ ಬರೆಯಬೇಕು ಎಂದು ನಿರ್ಧರಿಸಿದೆ. ಶಾಸ್ತ್ರಿಗಳಂತಹ ವಿದ್ವಾಂಸರ ಒಂದು ಮೆಚ್ಚುಗೆಯ ಮಾತು, ಒಂದು ಮೆಚ್ಚುಗೆಯ ನೋಟ ಕಿರಿಯರಿಗೆ ಪ್ರೋತ್ಸಾಹದ ಒಡನಾಡಿಯಾಗುತ್ತದೆ.

ಡಾ.ಚಿದಾನಂದಮೂರ್ತಿಯವರೊಂದಿಗೆ ಸಂಶೋಧನೆಗೆ ಸಂಬಂಧಿಸಿದ ಕೆಲವು ಚರ್ಚೆಗಳನ್ನು ಮಾಡುವಾಗ ಕೆಲವು ಸಾರಿ 'ಡಾ.ಶಾಸ್ತ್ರಿಗಳು ಹಳಗನ್ನಡಸಾಹಿತ್ಯ ಅರ್ಥೈಸುವುದರಲ್ಲಿ ಗಟ್ಟಿಗರು' ಎಂದು ಹೇಳುತ್ತಿದ್ದರು. ಶಾಸ್ತ್ರಿಗಳ ಬರವಣಿಗೆಯನ್ನು ಅಭ್ಯಾಸಮಾಡಿದ ಮೇಲೆ, ಅವರೊಡನೆ ಸ್ವಲ್ಪ ಒಡನಾಡಿದ ಮೇಲೆ, ಅವರ ವಿದ್ವತ್ ಪ್ರಭೆ ಗೋಚರಿಸದೇ ಇರುವುದಿಲ್ಲ. ನನಗೆ ಪ್ರತ್ಯಕ್ಷವಾಗಿ ಶಾಸ್ತ್ರಿಗಳ ಒಡನಾಟ ಹೇಳಿಕೊಳ್ಳುವಷ್ಟು ಇಲ್ಲವೆನ್ನಬಹುದಾದರೂ ನನ್ನ ಶ್ರೀಮತಿಯ ಮೂಲಕ (ಡಾ.ಶಾಸ್ತ್ರಿಯವರು ಕನ್ನಡ ನಿಘಂಟಿನ ಮುಖ್ಯ ಸಂಪಾದಕರಾಗಿದ್ದವರೆಗೆ) ಅವರ ವಿದ್ವತ್‌ಪ್ರಪಂಚದ ಹರವು ನನಗೆ ನಿತ್ಯವೂ ದೊರೆಯುತ್ತಿತ್ತು. ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟುವಿಭಾಗದಲ್ಲಿ ಉಪಸಂಪಾದಕಿಯಾಗಿ ನನ್ನ ಶ್ರೀಮತಿ ಸೇವೆಸಲ್ಲಿಸುತ್ತಿದ್ದುದರಿಂದ ಕನ್ನಡನಾಡಿನ ಬಹುತೇಕ ಉನ್ನತವಿದ್ವಾಂಸರ ಸಾನ್ನಿಧ್ಯ ಅವರಿಗೆ ಲಭಿಸಿದೆ. ನಿಘಂಟುಸಂಪಾದಕ ಮಂಡಲಿಗಳ ಸಭೆಗಳಲ್ಲಿ ನಡೆಯುತ್ತಿದ್ದ ವಿದ್ವತ್ ಚರ್ಚೆಗಳು, ಜಗ್ಗಾಟಗಳು, ಕಾವು-ಕಿಡಿ, ಅವುಗಳಲ್ಲಿ ಶಾಸ್ತ್ರಿಗಳು ವಹಿಸುತ್ತಿದ್ದ ನಿರ್ಣಾಯಕಪಾತ್ರ ಅಂದಂದಿನ ಸಂಜೆ ನನಗೆ ವೀಕ್ಷಕವಿವರಣೆಯಂತೆ ದೊರೆಯುತ್ತಿತ್ತು. ಹೀಗೆ ಪರೋಕ್ಷವಾಗಿ ಶಾಸ್ತ್ರಿಗಳ ಪಾಂಡಿತ್ಯದ ಆಳ ಅಗಲಗಳ ವೈಶಾಲ್ಯ ನಿರಂತರವಾಗಿ ತಿಳುವಳಿಕೆಗೆ ಬರುತಿತ್ತು.

ಚಿದಾನಂದ ಪ್ರಶಸ್ತಿ ಪ್ರತಿವರ್ಷ ನಾಡಿನ ಉನ್ನತ ಸಂಶೋಧಕರೊಬ್ಬರಿಗೆ ದೊರೆಯುತ್ತಾ ಬಂದಿದೆ. ಈ ಪ್ರಶಸ್ತಿಪ್ರದಾನಸಮಿತಿಯ ಅಧ್ಯಕ್ಷರಾಗಿ ಡಾ.ಸಾ.ಶಿ. ಮರುಳಯ್ಯನವರು ಸೇವೆ ಸಲ್ಲಿಸುತ್ತಿದ್ದಾರೆ. ೨೦೦೧ರಲ್ಲಿ ಅವರು ಕೆಲವು ತಿಂಗಳುಗಳ ಕಾಲ ವಿದೇಶಯಾತ್ರೆಗೆ ಹೋಗಬೇಕಾಯಿತು. ಆಗ ಅವರು ಡಾ.ಎಸ್.ವಿದ್ಯಾಶಂಕರ ಅವರನ್ನು ಮತ್ತು ನನ್ನನ್ನು ಮನೆಗೆ ಕರೆಯಿಸಿಕೊಂಡು ತಮ್ಮ ಗೈರುಹಾಜರಿಯಲ್ಲಿ ಆ ವರ್ಷದ ಪ್ರಶಸ್ತಿಪ್ರದಾನದ ವ್ಯವಸ್ಥೆಯ ಜವಾಬ್ದಾರಿಯನ್ನು ನಮಗೆ ವಹಿಸಿದರು. ಅದರಂತೆ ನಾವು ಸಂಶೋಧಕರ ಸಾಧನೆ ಸಿದ್ಧಿಗಳನ್ನು ಗಮನಿಸಿ ಕೆಲವು ಹೆಸರುಗಳನ್ನು ಗುರುತುಮಾಡಿಕೊಂಡು ಚರ್ಚಿಸಿದೆವು. ನನ್ನ ವಿದ್ಯಾಗುರುಗಳೂ ಆದ ಡಾ.ವಿದ್ಯಾಶಂಕರ ಅವರು ಕಿರಿಯನಾದ ನನಗೇ ಕೊನೆಯ ನಿರ್ಧಾರ ತೆಗೆದುಕೊಳ್ಳುವ ಗುರುತರ ಜವಾಬ್ದಾರಿ ಮತ್ತು ಸ್ವಾತಂತ್ರ್ಯ ಕೊಟ್ಟರು. ನಾನು ಒಂದು ದಿನದ ಕಾಲಾವಕಾಶ ತೆಗೆದುಕೊಂಡು

ಎಲ್ಲ ರೀತಿಯಲ್ಲಿಯೂ ಯೋಚಿಸಿ ಮಾರನೆಯ ದಿನ ಡಾ.ಶಾಸ್ತ್ರಿಗಳ ಹೆಸರನ್ನು ೨೦೦೧ ನೆಯ ವರ್ಷದ ಚಿದಾನಂದಪ್ರಶಸ್ತಿಗೆ ನಿರ್ಧರಿಸಿದಾಗ ತುಂಬ ಸಂತೋಷದಿಂದ ಅದನ್ನು ಅನುಮೋದಿಸಿ, ಪತ್ರಿಕೆ ಪ್ರಕಟಣೆ ಹಾಗೂ ಮುಂದಿನ ಸಿದ್ಧತಾಕಾರ್ಯಗಳಿಗೆ ಮುಂದಾದೆವು. ಬೆಂಗಳೂರಿನ ಒಂದು ರೋಟರಿ ಸಭಾಂಗಣದಲ್ಲಿ ಪ್ರಶಸ್ತಿಪ್ರದಾನ ಸಮಾರಂಭವನ್ನು ಶ್ರೀ ಎನ್.ಎಂ.ಶಿವಕುಮಾರ್ ಅವರ ಸಹಕಾರದಿಂದ ಅಚ್ಚುಕಟ್ಟಾಗಿ ನೆರವೇರಿಸಲಾಯಿತು. ಸಾಶಿಮ ಅವರ ಗೈರುಹಾಜರಿಯಲ್ಲಿ ಒಂದು ದೊಡ್ಡ ಜವಾಬ್ದಾರಿಯನ್ನು ಸಮರ್ಥವಾಗಿ ನಿರ್ವಹಿಸಿದ ಧನ್ಯತಾಭಾವ ನಮಗೆ ಉಂಟಾಯಿತು.

ಕೆಲವು ವರ್ಷಗಳ ಹಿಂದೆ ಒಮ್ಮೆ ಶಾಸ್ತ್ರಿಗಳು ನಮ್ಮ ಮನೆಗೆ ಆಗಮಿಸಿದ್ದರು. ಅಂತಹ ಹಿರಿಯ ವಿದ್ವಾಂಸರು ನಮ್ಮ ಮನೆಗೆ ಬಂದು ಹೋಗಿದ್ದಾರೆ ಎಂಬುದೇ ನಮ್ಮ ಪುಣ್ಯವಿಶೇಷ ಎಂದು ನಂಬಿದ್ದೇನೆ. ಕಿರಿಯ ತಲೆಮಾರಿನ ಸಂಶೋಧಕರು ಅಷ್ಟಾಗಿ ಹಳಗನ್ನಡ ಸಾಹಿತ್ಯ, ವ್ಯಾಕರಣ, ಛಂದಸ್ಸು, ಗ್ರಂಥಸಂಪಾದನೆ ಮುಂತಾದ ವಿಷಯಗಳಲ್ಲಿ ಆಸಕ್ತಿ ವಹಿಸುತ್ತಿಲ್ಲ, ಶ್ರದ್ಧೆಯಿಂದ ಅಭ್ಯಾಸ ಮಾಡುತ್ತಿಲ್ಲ ಎಂಬಂತಹ ಸಕಾರಣ ಕೊರಗು ಆ ತಲೆಮಾರಿನ ವಿದ್ವಾಂಸರಿಗೆ ಇರುವಂತೆ ಶಾಸ್ತ್ರಿಯವರಿಗೂ ಇದೆ. ಈ ಕೊರಗನ್ನು ಮತ್ತು ಗುಣಮಟ್ಟದಲ್ಲಿ ಆಗುತ್ತಿರುವ ಇಳಿಮುಖವನ್ನು ನಿದರ್ಶನ ಸಹಿತವಾಗಿ ಹೇಳಿದರು. ಅವರ ಕಳಕಳಿಯನ್ನು ಅರ್ಥಮಾಡಿಕೊಳ್ಳಬಹುದು.

ಸಂಶೋಧನಕ್ಷೇತ್ರ, ಅದರಲ್ಲೂ ಪ್ರಾಚೀನಸಾಹಿತ್ಯ, ವ್ಯಾಕರಣ ಮುಂತಾದ ವಿಷಯಗಳಲ್ಲಿ ಯುವಸಂಶೋಧಕರು ಅಷ್ಟೊಂದು ತೊಡಗುತ್ತಿಲ್ಲ ಎಂಬುದಕ್ಕೆ ಹಲವಾರು ಕಾರಣಗಳು ಇರಬಹುದು. ಸಂಶೋಧನ ಕ್ಷೇತ್ರವೇ ಅಂತಹದು. ಸೃಜನಾತ್ಮಕ ಲೇಖಕರಿಗೆ, ವಿಮರ್ಶಕರಿಗೆ ದೊರೆಯುವ ಶೀಘ್ರಮನ್ನಣೆ ಸಂಶೋಧನಕ್ಷೇತ್ರದಲ್ಲಿ ಬೇಗನೆ ದೊರೆಯುವುದಿಲ್ಲ. ಇದು ಕಠೋರವಾಸ್ತವ. ಸಂಶೋಧಕರಿಗೆ ಮನ್ನಣೆ ದೊರೆಯುವುದು ಅವರ ಸಂಶೋಧನೆಯ ಹಾದಿಯಲ್ಲಿ ನಡೆದು ನಡೆದು ಕೋಲೂರಿ ನಡೆಯುವಷ್ಟು ಮುಪ್ಪಾದಾಗ ಎಂದು ಕಾಣುತ್ತದೆ. ಇರಲಿ, ಈ ಕ್ಷೇತ್ರದ ಹಾದಿ ದೀರ್ಘವಾದದ್ದು. ಭಾರತದಲ್ಲಂತೂ ತಕ್ಷಣಖ್ಯಾತಿಯ ಅಥವಾ ಆರ್ಥಿಕ ಪ್ರತಿಫಲ ನೀಡುವಂತಹದಲ್ಲ. ಹೀಗಾಗಿ ಈ ಕ್ಷೇತ್ರ ಯುವಸಂಶೋಧಕರಿಗೆ ಅನಾಕರ್ಷಕ ಎಂದೆನಿಸಿರಬಹುದು.

ಇದು ಏನೇ ಇರಲಿ ಡಾ.ಶಾಸ್ತ್ರಿಗಳಂತಹ ಉನ್ನತವಿದ್ವಾಂಸರ ಸಂಶೋಧನೆ, ಸಾಧನೆಗಳು ಬರಡು ಕ್ಷೇತ್ರವನ್ನು ಹಸಿರಾಗಿಸುತ್ತವೆ. ಹೊಸ ಹುಮ್ಮಸ್ಸು ತರುತ್ತವೆ. ಡಾ.ಶಾಸ್ತ್ರಿಗಳು ಸಂಶೋಧನಕ್ಷೇತ್ರದಲ್ಲಿ ಮಾಡಿದ ಸಾಧನೆ ಮುಂದಿನ ತಲೆಮಾರಿಗೆ ದಾರಿದೀಪ, ತೋರುಬೆರಳು ಮತ್ತು ಮಾರ್ಗದರ್ಶಕ. ಅವರ ಸೌಜನ್ಯಪೂರ್ಣ ಸುಸಂಸ್ಕೃತವ್ಯಕ್ತಿತ್ವ ನಿರಂತರ ಪ್ರಶಾಂತಬೆಳಕು.

ಸಜ್ಜನರ ಸಂಗವಿದು

ಎಂ.ಎಸ್.ಸುಜಯ

ಕನ್ನಡನಿಘಂಟುಕಾರ್ಯದಲ್ಲಿ ಅನೇಕ ವರ್ಷಗಳ ಕಾಲ ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿಗಳ ಬಳಿಯಲ್ಲಿ ಕೆಲಸ ಮಾಡುವ ಅದೃಷ್ಟ ನನಗೆ ಒದಗಿಬಂದಿತ್ತು. ಪ್ರತ್ಯಕ್ಷವಾಗಿ ಶಿಷ್ಯವರ್ಗಕ್ಕೆ ಸೇರಿದ ಭಾಗ್ಯವಿಲ್ಲದಿದ್ದರೂ ನಿಘಂಟು ಕೆಲಸದಲ್ಲಿ ನಾನು ಅವರ ಬಳಿ ಮೇಷ್ಟ್ರ ಹತ್ತಿರ ಕಲಿಯುವ ವಿದ್ಯಾರ್ಥಿಯೇ ಆಗಿದ್ದೆ. ಹೀಗಾಗಿ ಗುರುಗಳ ೭೫ನೆಯ ವರ್ಷದ ಈ ಶುಭಸಂದರ್ಭದಲ್ಲಿ, ನಿಘಂಟು ಕಛೇರಿಯಲ್ಲಿ ಅವರ ಒಡನಾಟದ ಕೆಲವು ಸಂದರ್ಭಗಳ ನೆನಪುಗಳನ್ನು ಹೇಳಿಕೊಳ್ಳುತ್ತಿದ್ದೇನೆ.

'ತಪ್ಪು ಅರ್ಥ ಹೇಳುವುದೀಗ ಪಾಪ' (ಶಾಸ್ತ್ರೀಯ, ಸಂಪುಟ ೧- ಪು.೪೯೧) - ಇದು ನಿಘಂಟುರಚನೆಯ ಸಂದರ್ಭದಲ್ಲಿ ಅವರ ನಿಲುವು. ಅದಕ್ಕಾಗಿ ಅವರು ಯಾರೊಡನೆ ಬೇಕಾದರೂ ಅಖಾಡಕ್ಕೆ ಇಳಿದ ಜಟ್ಟಿಯಂತೆ, ಕೆಲವೊಮ್ಮೆ ಏಕಾಕಿಯಾಗಿ, ಹೋರಾಟಕ್ಕೆ ಸಿದ್ಧರಾಗುತ್ತಿದ್ದರು! ಆ ರೀತಿಯ ಸಂದರ್ಭಗಳಲ್ಲಿ ಸ್ವಾರಸ್ಯಕರವಾಗಿರುತ್ತಿದ್ದುದು, ಡಾ.ಎಂ.ಚಿದಾನಂದಮೂರ್ತಿಗಳು ಮತ್ತು ಶಾಸ್ತ್ರಿಗಳು ಶಬ್ದಾರ್ಥಗಳ ಬಗೆಗೆ ನಡೆಸುತ್ತಿದ್ದ ಚರ್ಚೆ. ಎಂಥ ನಿರ್ಲಿಪ್ತ ಕನ್ನಡಿಗನ ಹೃದಯದಲ್ಲೂ ಕನ್ನಡದ ಕಿಡಿಯನ್ನು ಹೊತ್ತಿಸ ಬಲ್ಲವರು ಒಬ್ಬರು, ತನ್ನ ವಲಯದಲ್ಲಿ ಬಂದಾಗ (ಮಾತ್ರ) ಪ್ರಾಚೀನಸಾಹಿತ್ಯದ ವೈಭವದ ದರ್ಶನವನ್ನು ಮಾಡಿಸುವವರೊಬ್ಬರು. ಈ ನಿಶಿತಮತಿಗಳ ಚಿಂತನ -ಮಂಥನ ದಿಂದ ಬೆಳಕಿನ ಕಿಡಿಗಳು ಉದುರುತ್ತಿದ್ದವು. 'ಎಷ್ಟು ಸೂಕ್ಷ್ಮವಾಗಿ ಯೋಚನೆಮಾಡಿ ದ್ದೀರಿ' ಎಂದು ಚಿದಾನಂದಮೂರ್ತಿಯವರು ತುಂಬುಹೃದಯದಿಂದ ಶಾಸ್ತ್ರಿಗಳಿಗೆ ಹೇಳುತ್ತಿದ್ದರು. ಮೊದಲ ದರ್ಜೆಯ ಪ್ರತಿಭೆಗಳನ್ನು ಕಣ್ಣಾರೆ ಕಾಣುತ್ತಿದ್ದ ನಾವು ಚಿತ್ರದ ಗೊಂಬೆಗಳು.

ನಿಘಂಟುಸಂಪಾದಕಸಮಿತಿ ನಡೆಸುತ್ತಿದ್ದ ಸಭೆಗಾಗಿ ಕಚೇರಿಯಲ್ಲಿ ಸಭಾಪ್ರತಿಯ ಸಿದ್ಧತೆ ನಡೆಸುವಾಗ, ಪ್ರಾಚೀನ ಕಾವ್ಯಪ್ರಯೋಗಗಳ ಪಕ್ಕದಲ್ಲಿ ಎಷ್ಟೋ ಸಲ Check-TVVS ಎಂದು ಬರೆದು ನಿರಾಳವಾಗಿ ಬಿಡುತ್ತಿದ್ದೆವು(ಕೆಲವು ಸಲ ಸಭಾಪ್ರತಿಯಲ್ಲಿ ಟಿಪ್ಪಣಿಗಳಿಗಿಂತ ಅದೇ ಹೆಚ್ಚಾಗಿ ರಾರಾಜಿಸುತ್ತಿತ್ತು). ನಿಘಂಟುರಚನೆಯ ಕಾರ್ಯದಲ್ಲಿ ಅವರು ಬಹುಪಾಲು ಭಾರ ಹೊತ್ತಿರುವುದು ಅದರ ಒಳ ಹೊರಗು ಬಲ್ಲ ಸಂಪಾದಕ ವರ್ಗಕ್ಕೆ ಗೊತ್ತು. ಆದುದರಿಂದಲೇ, ಡಾ.ಎನ್.ಎಸ್.ತಾರಾನಾಥ ಅವರು ಹೇಳಿರುವ

ಮಾತು 'ಹಳಗನ್ನಡದ ಬಗ್ಗೆ ಏನಾದರೂ ವಿವಾದ, ಸಮಸ್ಯೆ ಉಂಟಾದಲ್ಲಿ ಡಾ.ಶಾಸ್ತ್ರಿಗಳ ಅಭಿಪ್ರಾಯ ನಿಲವಾಗುವುದಿಲ್ಲ, ತೀರ್ಪು ಆಗುತ್ತದೆ' ಎನ್ನುವುದು ಎಲ್ಲರಿಗಿಂತ ನಿಘಂಟುರಚನೆ ಮಾಡುವವರಿಗೆ ಚೆನ್ನಾಗಿ ಅರ್ಥವಾಗುತ್ತದೆ.

ಕಾಲ ಕಳೆದಂತೆ, ಸಭೆಯಲ್ಲಿ ಕೆಲವು ಸಲ 'ಈ ಶಬ್ದಕ್ಕೆ ಏನು ಅರ್ಥ ಮಾಡಿದ್ದೀರಿ?' ಎಂದು ಶಾಸ್ತ್ರಿಗಳು ನೇರವಾಗಿ ನನ್ನನ್ನೇ ಕೇಳಿದಾಗ ನಾನು ಸಿದ್ಧಮಾಡಿಟ್ಟುಕೊಂಡ ಉತ್ತರ ವನ್ನು ಹೇಳಿದ್ದಿದೆ. ಅದು ಸಮರ್ಪಕ ಆಗಿದ್ದರೆ, ದಪ್ಪ ಕನ್ನಡಕದ ಮರೆಯಿಂದ ಕಣ್ಣು ಸ್ವಲ್ಪ ಮಿಂಚುತ್ತಿತ್ತು. 'ಪರವಾಗಿಲ್ಲ, ಗೆದ್ದೆ' ಎಂದು ನಾನು ನಿಟ್ಟುಸಿರುಬಿಡುತ್ತಿದ್ದೆ. ಕೆಲವು ಸಲ ಈ ರೀತಿ ಆದ ಮೇಲೆ ಭಂಡಧೈರ್ಯದಿಂದ ಸಮರ್ಪಕವಾಗಿಲ್ಲದ ಅರ್ಥ, ಅನರ್ಥಗಳನ್ನು ಹೇಳಿ ಅವರನ್ನು ಒಪ್ಪಿಸಲು ಯತ್ನಿಸಿದಾಗ, "ಅವೆಲ್ಲಾ ಗಿಟ್ಟೊಲ್ಲ. ನನಗೆ ನಿಮ್ಮ ತಯಾರೀನೂ ಗೊತ್ತು, ನಿಮ್ಮ limitationsಊ ಗೊತ್ತು" ಎಂದು ಮಂಗಳಾರತಿ ಎತ್ತಿಸಿಕೊಂಡಿದ್ದೂ ಇದೆ.

ಕ್ಲಿಷ್ಟವಾದ ಕಾವ್ಯ, ಅಪರೂಪದ ಲೇಖನ - ಹೀಗೆ ಯಾವುದಾದರೂ ಓದಿದ್ದು, ಅವುಗಳ ಬಗ್ಗೆ ಪ್ರಾಸಂಗಿಕವಾಗಿ ಪ್ರಸ್ತಾಪಮಾಡಿದರೆ, 'ಓ ನೀವು ಅದನ್ನು ಓದಿದ್ದೀ ರೇನು?' ಎಂದು ಸಂತೋಷಪಟ್ಟಿದ್ದಾರೆ. ನನಗೆ ಆಗ ನಮ್ಮ ಚಿಕ್ಕಂದಿನಲ್ಲಿ ನಮ್ಮ ತಂದೆಯವರನ್ನು ಕಾಣಲು ಆಗಾಗ ಬರುತ್ತಿದ್ದ ಪ್ರಾತಃಸ್ಮರಣೀಯರಾದ ಜಿ.ಪಿ. ರಾಜರತ್ನಂ ಅವರು ಹೇಳುತ್ತಿದ್ದ ಮಾತು ನೆನಪಿಗೆ ಬರುತ್ತಿತ್ತು. ''ಒಬ್ಬರು ಯಾವ ಪುಸ್ತಕ ಓದುತ್ತಾರೋ ಅದರ ಮೇಲೆ ನನಗೆ ಅವರ ಬಗ್ಗೆ interest ಬರುತ್ತೆ ಅಥವಾ ಹೋಗುತ್ತೆ."

ಹೀಗೆ ನಿಧಾನವಾಗಿ ಗಾಂಭೀರ್ಯದ ತೆರೆಮರೆಯಿಂದ ಸಹೃದಯದ ಸರಳತೆ ಗೋಚರ ವಾಗತೊಡಗಿತು. ಒಂದು ವಿಶ್ವಾಸದ ಸಂಬಂಧ ಬೆಳೆಯುತ್ತ ಬಂದಿತು. ಸ್ವಲ್ಪ ಸಲುಗೆ ಸಹ ಎನ್ನಬಹುದೇನೋ! 'ಅನಂತನಾಥಪುರಾಣದ ಗದ್ಯಾನುವಾದ ಮಾಡಿ ಸರ್. ನೀವಲ್ಲದೆ ಇನ್ಯಾರು ಅದನ್ನು ಮಾಡಬೇಕು?' ಎಂದು ನಾನು ಒಮ್ಮೆ ಆ ಸಲುಗೆಯ ಬಲದಿಂದಲೋ ಏನೋ ಕೇಳಿದೆ. ''ಹೌದು, ಮಾಡಬೇಕು. ಸರಿ. ಆದರೆ ಅದನ್ನು ಓದುವವರು ಯಾರು! ಯಾರಿಗೆ ಬೇಕು?'' ಎಂದು ನಗೆಮಾತಿನಲ್ಲಿ ತೇಲಿಸಿದರೂ ಅಲ್ಲಿ ವಿಷಾದದ ಎಳೆಯಿತ್ತು. ಪ್ರಾಚೀನ ಸಾಹಿತ್ಯದ ಬಗೆಗೆ ಜನರಿಗಿರುವ ಅವಜ್ಞೆಯನ್ನು ಕುರಿತ ಕಳವಳವಿತ್ತು.

ಮುಂದೆ, ನಿಘಂಟು ಕೆಲಸ ಮುಕ್ತಾಯವಾದ ಮೇಲೆ ಒಂದೊಂದು ಸಲ ಕಚೇರಿಗೆ ಬಂದಾಗ, ತಮ್ಮ ಹಿಂದಿನ ಪರಂಪರೆಯ ವಿದ್ವಾಂಸರನ್ನು ಕುರಿತ ಅನೇಕ ವಿಷಯಗಳನ್ನು ಭಾವಾವೇಶದಿಂದ ಹೇಳುತ್ತಿದ್ದರು. ನಮಗೆ ಅದು ಭಾವಗೀತೆ. ಅವರ ಪರಿಚಯದವ ರೊಬ್ಬರು ''ನಿಮ್ಮ ಹತ್ತಿರ ಮಾತಾಡಿದರೆ, ಬಿಸಿಲಲ್ಲಿ ದಣಿದವನು ತಣ್ಣನೆ ನೀರಿನಲ್ಲಿ

ಹಾಯಾಗಿ ಕಾಲಾಡಿಸಿದಂತೆ ಆಗುತ್ತೆ" ಎಂದು ಹೇಳಿದರಂತೆ. ಅವರು ಕಛೇರಿಗೆ ಬಂದು ಮಾತಾಡಿಹೋದ ಎಷ್ಟೋ ಹೊತ್ತು ಮನಸ್ಸಿನ ಜಡತ್ವ ಹೋಗಿ, ಸಾಹಿತ್ಯಕ್ಷೇತ್ರದಲ್ಲಿ ಏನಾದರೂ ಕೆಲಸ ಮಾಡಬೇಕೆನ್ನುವ ಹುರುಪು ಬಂದುಬಿಡುತ್ತಿತ್ತು. ಆದರೆ ಆಮೇಲೆ ಎಲ್ಲ ಮಾಮೂಲು. 'ಕೆಂಡದ ಬಳಿ ಇದ್ದು ಕೂಡ ಈ ಇದ್ದಲು ಇತ್ತು ಹಾಗೆ - ಆಗ ಈಗಿನಂತೆಯೇ ಹೊತ್ತದೇ ಉರಿಯದೆ'. ಆದರೆ ಒಬ್ಬ ಸಾಮಾನ್ಯವ್ಯಕ್ತಿಗೂ ಇಂಥ ಪ್ರೇರಣೆ ನೀಡಬಲ್ಲ ಚೈತನ್ಯದ ಹಿಂದೆ ಅದೆಂಥ ಕಠಿಣಪರಿಶ್ರಮದ ತಪಸ್ಸು ಇದ್ದೀತು?

ಆ ಚೈತನ್ಯದ ಸ್ವಭಾವವೇ ಹಾಗೆ. ಗಾಂಭೀರ್ಯವೇ ಹಾಗೆ. ತಮ್ಮ ವಲಯಕ್ಕೆ ಬಂದವರಿಗೆ ಸದ್ದುಗದ್ದಲವಿಲ್ಲದೆ ಪ್ರಾಚೀನಸಾಹಿತ್ಯದ ವೈಭವವನ್ನು ತೆರೆದು ತೋರಿಸುತ್ತಾರೆ. ಆ ಕ್ಷೇತ್ರದಲ್ಲಿ ಮಾಡಬೇಕಾದ ನೂರು, ಸಾವಿರ ಕೆಲಸಗಳತ್ತ ಗಮನಸೆಳೆಯುತ್ತಾರೆ. ಅಬ್ಬರವಿಲ್ಲದೆ ಕನ್ನಡಿಗರ ಬೌದ್ಧಿಕತೆಯನ್ನು ಜಾಗೃತಗೊಳಿಸುತ್ತಾರೆ. ಇದು ಪ್ರಚಾರ, ಗದ್ದಲವಿಲ್ಲದ ಒಂದು ಕನ್ನಡಪರ ಹೋರಾಟ. ಇದನ್ನು ಗ್ರಹಿಸಿದರೆ ನನಗೆ-ನಮಗೆ- ನಿಮಗೆ- ಕನ್ನಡಿಗರಿಗೆ ಲಾಭ. ಏಕೆಂದರೆ ಪ್ರಾಚೀನಸಾಹಿತ್ಯವೈಭವಕ್ಕೆ ಶಾಸ್ತ್ರಿಗಳು ಮಹಾದ್ವಾರ, ಹೆಬ್ಬಾಗಿಲು,

ಅಂದ ಹಾಗೆ, ಈ ಹೆಬ್ಬಾಗಿಲು ತುಂಬ ಕಾಲ ಗಟ್ಟಿಯಾಗಿರಲಿ, ಭದ್ರವಾಗಿರಲಿ ಎನ್ನುವುದು ಆ ಅಗೋಚರಶಕ್ತಿಯ ಬಳಿ ನನ್ನ ವಿನಮ್ರಪ್ರಾರ್ಥನೆ.

ಪಂಡಿತವಾಹಿನಿಯ ಯೋಗ್ಯ ವಾರಸುದಾರ

ಡಾ.ಷೆಲ್ಡನ್ ಪೋಲಾಕ್

೧೯೯೫ರಲ್ಲಿ ನನಗೆ ಅಮೆರಿಕಾದ ನ್ಯಾಶನಲ್ ಎಂಡೋಮೆಂಟ್ ಫಾರ್ ಹ್ಯುಮ್ಯಾನಿಟೀಸ್ ಮತ್ತು ಅಮೆರಿಕನ್ ಇನ್‌ಸ್ಟಿಟ್ಯೂಟ್ ಫಾರ್ ಇಂಡಿಯನ್ ಸ್ಟಡೀಸ್ ಸಂಸ್ಥೆಗಳಿಂದ ದೊರೆತ ಶಿಷ್ಯವೇತನದಿಂದಾಗಿ ನಾನು ಮೈಸೂರಿಗೆ ಒಂದು ವರ್ಷ ಕಾಲ ಬರಲು ಸಾಧ್ಯವಾಯಿತು. ಸರಿಸುಮಾರು ಆ ಒಂದು ವರ್ಷವಿಡೀ, ದಿನಕ್ಕೆ ಹಲವಾರು ಗಂಟೆಗಳ ಕಾಲ, ಮೈಸೂರಿನಲ್ಲಿ ಟಿ.ವಿ.ವೆಂಕಟಾಚಲ ಶಾಸ್ತ್ರಿಯವರೊಂದಿಗೆ ಅಭ್ಯಾಸದಲ್ಲಿ ಕಳೆಯುವ ಅನುಕೂಲ ನನಗೆ ಲಭ್ಯವಾಯಿತು. ಮೈಸೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗದ ನಿವೃತ್ತ ಪ್ರಾಧ್ಯಾಪಕರೂ ಕನ್ನಡ ಅಧ್ಯಯನಸಂಸ್ಥೆಯ ಅಧ್ಯಕ್ಷರೂ ಆಗಿದ್ದ ಪ್ರೊ. ಶಾಸ್ತ್ರೀ ಅವರು, ಅಚ್ಚರಿಯಾಗುವಷ್ಟು ಆಳವಾಗಿರುವ ತಮ್ಮ ಹಳಗನ್ನಡ ಪಾಂಡಿತ್ಯವನ್ನು ನನಗೆ ಯಾವ ತಡೆಯಿಲ್ಲದೆ ಉದಾರವಾಗಿ ತೆರೆದುಕೊಟ್ಟರು. ಶ್ರೀವಿಜಯ, ಪಂಪ, ರನ್ನ, ಎರಡನೆಯ ನಾಗವರ್ಮ, ಮಲ್ಲಿಕಾರ್ಜುನ ಮೊದಲಾದ ಹಲವು ಲೇಖಕರನ್ನು ಅವರು ನನ್ನೊಂದಿಗೆ ತುಂಬ ತಾಳ್ಮೆಯಿಂದ ಕೂತು ಓದಿದರು ಮತ್ತು ಆ ಬಳಿಕ ನನ್ನಲ್ಲಿ ಎದ್ದ ಪ್ರಶ್ನೆಯ ಪ್ರವಾಹಗಳಿಗೆ ತುಂಬ ವಿಶ್ವಾಸದಿಂದ ಉತ್ತರಕೊಡುತ್ತ ಹೋದರು. ಅವರು ಮಾಡಿದ ಅಷ್ಟೇ ಮುಖ್ಯವಾದ ಇನ್ನೊಂದು ಸಹಾಯವೆಂದರೆ, ಹಳಗನ್ನಡದ ಬಗ್ಗೆ ಹೊಸಗನ್ನಡದಲ್ಲಿ ಸೃಷ್ಟಿಯಾದ ಅಸಾಧಾರಣ ಸಂಶೋಧನಸಾಧನೆಗಳನ್ನು ನನಗೆ ಪರಿಚಯಿಸಿದ್ದು. ದಕ್ಷಿಣ ಏಶಿಯಾದ ಬೇರೆ ಬೇರೆ ಭಾಷಾಸಂಪ್ರದಾಯಗಳಲ್ಲಿ ಇಂಥ ಸಂಶೋಧನೆಯ ಸಾಧನೆ ಎಷ್ಟಿದೆ ಎಂಬುದು ನನಗೆ ಚೆನ್ನಾಗಿಯೇನೂ ಗೊತ್ತಿಲ್ಲದಿದ್ದರೂ, ಕನ್ನಡದಲ್ಲಿ ಮಾತ್ರ ಇಂಥದೊಂದು ಪಂಡಿತ ವಾಹಿನಿಯೇ ಇದೆಯೆಂಬುದನ್ನು ನಾನು ಈ ಮೂಲಕ ತಿಳಿದುಕೊಂಡಿದ್ದೇನೆ. ಆರ್. ನರಸಿಂಹಾಚಾರ್, ಡಿ.ಎಲ್.ನರಸಿಂಹಾಚಾರ್, ಬಿ.ಎಂ.ಶ್ರೀಕಂಠಯ್ಯ, ಎಂ.ವಿ. ಸೀತಾರಾಮಯ್ಯ, ಮುಳಿಯ ತಿಮ್ಮಪ್ಪಯ್ಯ, ಗೋವಿಂದ ಪೈ ಇಂಥ ಈ ಎಲ್ಲ ಪಂಡಿತರು ಜಗತ್ತಿನ ಇನ್ನಾವುದೇ ಭಾಗದ ಈ ಮಾದರಿಯ ವಿದ್ವಾಂಸರಿಗೆ ಸರಿಸಮಾನರಾಗಬಲ್ಲವರು. ನಿಖರವಾದ ಭಾಷಾಶಾಸ್ತ್ರೀಯ ತಿಳುವಳಿಕೆ ಮತ್ತು ಗಹನವಾದ ಇತಿಹಾಸದ ಪರಿಜ್ಞಾನವನ್ನು ಸೂಕ್ಷ್ಮವಾದ ವಿಮರ್ಶಾಪ್ರಜ್ಞೆಯೊಂದಿಗೆ

ಮೇಳೈಸಿಕೊಂಡಿರುವಂಥ ವಿದ್ವಾಂಸರು ಇವರು. ಇಂಥ ಪಂಡಿತವಾಹಿನಿಯ ಯೋಗ್ಯ ವಾರಸುದಾರಿಕೆಯನ್ನು ಪಡೆದಿರುವ ಟಿ.ವಿ. ವೆಂಕಟಾಚಲ ಶಾಸ್ತ್ರೀ ಅವರಿಗೆ ನನ್ನ ಋಣ ಅಗಾಧವಾದದ್ದು.

('ವಿಶ್ವಾತ್ಮಕ ದೇಶ ಭಾಷೆ, ಡಿಸೆಂಬರ್ ೨೦೦೨, ಮಾರ್ಗ-ದೇಶಿ: ಕನ್ನಡ ಆವೃತ್ತಿ ಗೊಂದು ಮುನ್ನುಡಿ. ಅನು: ಕೆ.ವಿ.ಅಕ್ಷರ, ಹೆಗ್ಗೋಡು, ಸಾಗರ, ಕರ್ನಾಟಕ)

ಕನ್ನಡಮೇರು

ಎಚ್.ಎಂ. ನಾಗರಾಜರಾವ್

೧೯೭೨ನೆಯ ವರ್ಷ. ಕೆಲಸಕ್ಕೆ ಸೇರಿ ಕೆಲವು ತಿಂಗಳುಗಳು ಕಳೆದಿದ್ದವು. ಕನ್ನಡ ಅಧ್ಯಯನಸಂಸ್ಥೆಯ ದಿಗ್ಗಜರನ್ನೆಲ್ಲ ನಾನು ಆರಾಧನಾಮನೋಭಾವದಿಂದ ನೋಡುತ್ತಿದ್ದ ದಿನಗಳು. ಪ್ರೊ.ಟಿ.ವಿ.ವೆಂಕಟಾಚಲ ಶಾಸ್ತ್ರೀ ಅವರ ಬಾಹ್ಯರೂಪ ಚಿತ್ರವಿದು: ಎತ್ತರವೂ ಅಲ್ಲದ, ಕುಬ್ಜವೂ ಅಲ್ಲದ ತೋರವೂ ಅಲ್ಲದ ತೆಳು ಕೂಡ ಅಲ್ಲದ ಸಾಮಾನ್ಯ ಮೈಕಟ್ಟು, ಕನ್ನಡಕದೊಳಗಿಂದ ಹೊಳೆವ ಕಣ್ಣುಗಳು, ಮಂದಹಾಸ, ಶ್ಯಾಮಲವರ್ಣ, ಸರಳ ವೇಷಭೂಷಣ. ನಡುವಯಸ್ಸಿನ ಅವರನ್ನು ನಿತ್ಯ ನೋಡುತ್ತಿದ್ದೆನಾದರೂ ಮಲೆನಾಡಿನ ಮುಖಹೇಡಿ ಹುಡುಗನಾದ ನನಗೆ ನಮಸ್ಕರಿಸುವುದು ಬಿಟ್ಟು ಬೇರೇನೂ ತೋರುತ್ತಿರಲಿಲ್ಲ. ಅವರ ಸಂಪರ್ಕ ಉಂಟಾದದ್ದು ಕೆಲವು ತಿಂಗಳ ಮೇಲೆ, ಸಂಸ್ಥೆಯ ಎಪಿಗ್ರಾಫಿಯ ಕರ್ನಾಟಕ ವಿಭಾಗಕ್ಕೆ ಡಾ.ಬಾ.ರಾ. ಗೋಪಾಲ ಅವರು ಶಾಸನತಜ್ಞರಾಗಿ ಬಂದ ತರುವಾಯವೇ. ಬಹುಬೇಗನೆ ಅವರಿಬ್ಬರೂ ಹತ್ತಿರದ ಗೆಳೆಯರಾದರು. ಗೋಪಾಲರ ಕೋಣೆಯಲ್ಲಿ ಅವರು ಸೇರಿದಾಗ ತಮಾಷೆ, ಕೀಟಲೆ, ನಿರ್ಮಲಹಾಸ್ಯದ ಸನ್ನಿವೇಶಗಳು ಏರ್ಪಡುತ್ತಿದ್ದವು. ಆಗ ಏಳುತ್ತಿದ್ದ ನಗೆಯ ಅಲೆಗಳು ಹಲವು ಕೋಣೆಗಳ ವರೆಗೂ ಕೇಳಿಬರುತ್ತಿದ್ದವು. ಇಬ್ಬರೂ ಜೋರಾಗಿ, ಮುಕ್ತವಾಗಿ ನಗುವವರೇ.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇತಿಹಾಸಪ್ರಾಧ್ಯಾಪಕರಾಗಿ ನಿವೃತ್ತರಾಗಿದ್ದ ಹೆಸರಾಂತ ವಿದ್ವಾಂಸ ಡಾ.ಎಸ್.ಶ್ರೀಕಂಠಶಾಸ್ತ್ರೀ ಅವರನ್ನು ಸನ್ಮಾನಿಸಿ, 'ಶ್ರೀಕಂಠಿಕಾ' ಎಂಬ ಅಭಿನಂದನಗ್ರಂಥವನ್ನು ಅರ್ಪಿಸುವ ಸಮಾರಂಭ ಏರ್ಪಟ್ಟಿತು. ಡಾ.ಬಾ.ರಾ. ಗೋಪಾಲ, ಡಾ.ಕೆ.ವಿ.ರಮೇಶ್, ಪ್ರೊ.ಶಾಸ್ತ್ರೀ ಮತ್ತಿತರರ ಉಸ್ತುವಾರಿಯಲ್ಲಿ ನಡೆದ ಸಮಾರಂಭದಲ್ಲಿ ಕಾರ್ಯಕರ್ತನಾಗಿ ಓಡಾಡುವ ಅವಕಾಶ ನನಗೆ ದೊರೆಯಿತು. ಹಾಗೆಯೇ ೧೯೭೩ರಲ್ಲಿ ಪ್ರಕಟವಾದ ಡಾ.ಶ್ರೀಕಂಠಶಾಸ್ತ್ರೀ ಅವರ 'ಸಂಶೋಧನ ಲೇಖನಗಳು' ಗ್ರಂಥದ ಕರಡು ತಿದ್ದುವ ಕೆಲವರ ಪೈಕಿ ನನಗೂ ಅವಕಾಶ ಸಿಕ್ಕಿತು.

ವಾಸ್ತವವಾಗಿ ಪ್ರೊ.ಟಿ.ವಿ.ವಿ. ಅವರೊಡನೆ ನನಗೆ ಹೆಚ್ಚು ಹತ್ತಿರದ ಸಂಪರ್ಕ ಉಂಟಾದುದು ತೊಂಬತ್ತರ ದಶಕದಲ್ಲಿ. ಮುಲಕನಾಡಿನ ಮಹನೀಯರಿಗೆ ಸಂಬಂಧ ಪಟ್ಟಂತೆ ಅವರು ಕೆಲವು ಮಾಹಿತಿ ಬಯಸಿದಾಗ ನಾನು ಅವನ್ನು ಒದಗಿಸಿಕೊಡಲು ಜಯಲಕ್ಷ್ಮೀಪುರದಲ್ಲಿನ ಅವರ 'ಬ್ರಾಹ್ಮೀ'ಗೆ ಮೇಲಿಂದ ಮೇಲೆ ಹೋಗುವಂತಾಯಿತು. ಹೀಗಾಗಿ ಅವರ ಅಪೇಕ್ಷೆಯ ಮೇರೆಗೆ ಬಹಳ ಸಂತೋಷದಿಂದ ಒಪ್ಪಿ ಡಾ.ಎಸ್.

ಶ್ರೀಕಂಠಶಾಸ್ತ್ರೀ ಅವರ ಬದುಕು ಬರಹಗಳನ್ನು ಕುರಿತು ಚಿಕ್ಕಪುಸ್ತಕವೊಂದನ್ನು ಬರೆಯುವಂತಾಯಿತು.

ಪ್ರೊ.ಟಿ.ವಿ.ವಿ. ಅವರು 'ಬಿಬ್ಲಿಯೋಗ್ರಫಿ ಆಫ್ ಕರ್ನಾಟಕ ಸ್ಟಡೀಸ್-II' ಎಂಬ ಕೃತಿಯನ್ನು ಸಂಕಲಿಸುವಾಗ, ಕೆಲವು ವಿದ್ವತ್ಪತ್ರಿಕೆಗಳಿಂದ ಸಂಬಂಧಿತ ಲೇಖನಸೂಚೀ ಪತ್ರಗಳನ್ನು ನಾನು ಸಿದ್ಧಪಡಿಸಿಕೊಟ್ಟೆ. ಆ ಕೃತಿಯ ಅಂತಿಮ ಹಂತದ ಪರಿಷ್ಕರಣೆಯ ಸಮಯದಲ್ಲಿ ಕೂಡ ಅವರೊಡನೆ ಕೆಲವು ಗಂಟೆಗಳನ್ನು 'ಬ್ರಾಹ್ಮೀ'ಯಲ್ಲಿ ಕಳೆದದ್ದು ನನಗೆ ಸಂತೋಷವನ್ನು ಕೊಟ್ಟಿದೆ.

ಈಚಿನ ವರ್ಷಗಳಲ್ಲಿ, ಅವರು ಯಾವುದಾದರೂ ತೇದಿವಿವರಗಳನ್ನು ತಾಳೆ ನೋಡಬೇಕಾದಾಗ ಫೋನ್ ಮಾಡಿ ವಿಚಾರಿಸುವುದುಂಟು. ಕೆಲವೇ ನಿಮಿಷಗಳಲ್ಲಿ ಅವರು ಬಯಸಿದ ತೇದಿವಿವರಗಳನ್ನು 'ಎಫೆಮೆರಿಸ್' ನೋಡಿ ಫೋನ್‌ನಲ್ಲಿಯೇ ನಾನು ತಿಳಿಸುವುದುಂಟು. ಮೊದಲಾಗಿದ್ದರೆ ಅವರೇ ಸಂಸ್ಥೆಗೆ ಬಂದು ಕಣ್ಣಾರೆ ಕಂಡು ಗುರುತುಹಾಕಿಕೊಳ್ಳುತ್ತಿದ್ದರು. ಈಗ ಫೋನ್ ಮೂಲಕ ತಿಳಿಸುವ ನನ್ನ ಮೇಲೆ ಅಷ್ಟು ನಂಬಿಕೆ, ವಿಶ್ವಾಸ ಬೆಳೆದಿದೆ!

ಅವರು ಶಾಸನಗಳನ್ನು ಕುರಿತು ಎಂ.ಎ. ವಿದ್ಯಾರ್ಥಿಗಳಿಗೆ ಪಾಠಮಾಡುತ್ತಿದ್ದಾಗ ಶಾಸನ ನಕಲುಗಳನ್ನು ವಿದ್ಯಾರ್ಥಿಗಳಿಗೆ ತೋರಿಸಲು ಒಯ್ಯುತ್ತಿದ್ದರು. ಕೆಲವೊಮ್ಮೆ ಇಬ್ಬರೂ ಕೂಡಿಯೇ ಶಾಸನಾಕ್ಷರಗಳನ್ನು ಓದುತ್ತಿದ್ದೆವು.

ಬರವಣಿಗೆಯಲ್ಲೂ ಅವರದು ಬಹಳ ಅಚ್ಚುಕಟ್ಟು. ಗೆರೆಹಾಕಿದ ಹಾಳೆಗಳಲ್ಲಿ ಮುದ್ದಾಗಿ ಬರೆದು ಪಂಚ್ ಮಾಡಿ ಟ್ಯಾಗ್ ಹಾಕಿ ಮುದ್ರಣಕ್ಕೆ ಹಸ್ತಪ್ರತಿಯನ್ನು ಕಳುಹಿಸುವ ರೀತಿ ನಿಜಕ್ಕೂ ಮಾದರಿ.

ಒಮ್ಮೆ ಅವರ ಹಾಗೂ ಸಂಸ್ಕೃತವಿದ್ವಾಂಸರಾದ ಡಾ.ಟಿ.ವಿ.ಸತ್ಯನಾರಾಯಣ ಅವರ ಜೊತೆಗೆ ನಾನು ಹಾಸನದ ಸಮಾರಂಭವೊಂದರಲ್ಲಿ ಭಾಗವಹಿಸಿದೆ. ನಾವು ಮೂವರೂ ಮಾತನಾಡಿದೆವು. ಶಾಸ್ತ್ರೀ ಅವರು ಕನ್ನಡ ಭಾಷೆಯಲ್ಲಿ ಬಳಕೆಯಾಗುತ್ತಿರುವ ಅಶುದ್ಧ ರೂಪಗಳನ್ನು ತುಂಬ ಸ್ವಾರಸ್ಯಕರವಾಗಿ ವಿವರಿಸಿದರು(ಉದಾಹರಣೆಗೆ, ಗೋವರ್ಧನ ಎಂಬ ರೂಪವನ್ನು ನೆನಪಿಸಿಕೊಂಡು ಜನಾರ್ಧನ ಎಂದು ಹೇಳುವುದು!). ಹಾಸನಕ್ಕೆ ಕಾರಿನಲ್ಲಿ ಹೋಗಿಬರುವಾಗ ಆ ವಿದ್ವಾಂಸರಿಬ್ಬರ ಸರಸಪೂರ್ಣವಾದ ಸಂಭಾಷಣೆಯನ್ನು ಕೇಳಿ ಸಂತೋಷಪಟ್ಟೆ.

ಕೆಂಪುನಾರಾಯಣನ 'ಮುದ್ರಾಮಂಜೂಷ'ವನ್ನು ಸಂಪಾದಿಸುತ್ತಿದ್ದ ಸಂದರ್ಭ. ಆ ಕೃತಿಯಲ್ಲಿ ಬಳಕೆಯಾದ 'ಕುಕ್ಕುಟನ್ಯಾಯ' ಎಂಬ ಪಾರಿಭಾಷಿಕಪದದ ಅರ್ಥವಾಗಲಿಲ್ಲವಂತೆ, ಅವರಿಗೆ. ಹಲವರನ್ನು ಕೇಳಿದರೂ ಸೂಕ್ತ ವಿವರಣೆ ದೊರೆಯಲಿಲ್ಲ. ಪ್ರಶ್ನಾರ್ಥಕಚಿಹ್ನೆಯೊಡನೆ ಅದನ್ನು ಪಾರಿಭಾಷಿಕ ಪದಕೋಶದಲ್ಲಿ ನೀಡಿದರು. ಮುದ್ರಣದ ಅಂತಿಮ ಹಂತ. ಬಾಲ್ಯದ ಗೆಳೆಯ ಪ್ರೊ.ಕೆ.ಎಸ್.ನಾರಾಯಣಾಚಾರ್ಯರ

ಬಳಿ ಏನೋ ಮಾತನಾಡುತ್ತಿದ್ದಾಗ ಆಕಸ್ಮಿಕವಾಗಿ ಈ ಪದವನ್ನು ವಿಚಾರಿಸಿದರಂತೆ. ಅವರು ತಕ್ಷಣವೇ ಅದರ ಅರ್ಥ ತಿಳಿಸಿ, ರಾಮಾಯಣದಲ್ಲಿ ರಾವಣನಿಗೆ ಕುಂಭಕರ್ಣ 'ಕುಕ್ಕುಟನ್ಯಾಯ'ದ ಬಗ್ಗೆ ಹೇಳುವುದನ್ನು ಪ್ರಸ್ತಾಪಿಸಿದರಂತೆ. ಶಾಸ್ತ್ರೀ ಅವರು ಬಯಸಿದಂತೆಯೇ ಅದರ ಆಧಾರವನ್ನೂ ತಕ್ಷಣವೇ ಒದಗಿಸಿದರಂತೆ. ಶಾಸ್ತ್ರಿಗಳು ಈ ಪ್ರಸಂಗವನ್ನು ಹೇಳಿ, "ಅವರು ಎಷ್ಟು ದೊಡ್ಡ ವಿದ್ವಾಂಸರು, ನೋಡಿ" ಎಂದು ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ನನಗೆ ತಕ್ಷಣವೇ ಎರಡು 'ಜ್ಯೋತಿಸ್ತಂಭ'ಗಳು ಕಣ್ಣಮುಂದೆ ಬಂದಂತಾಯಿತು.

ಯಾವುದೇ ವಿಷಯದಲ್ಲಿ ಪರಿಪೂರ್ಣತೆಯ ಕಡೆಗೆ ಅವರ ಪರಿಶ್ರಮ, ಪ್ರಯತ್ನ ಗಮನಿಸಿದಾಗಲೆಲ್ಲ ಶಾಸ್ತ್ರೀ ಅವರ ಬಗ್ಗೆ ನನಗೆ ಬೆರಗುಮಿಶ್ರಿತವಾದ ಗೌರವ ಬೆಳೆಯುತ್ತ ಹೋಗುತ್ತದೆ. ಅವರಿಗೆ ಯಾವುದಾದರೂ ಗ್ರಂಥ ಅಥವಾ ಮಾಹಿತಿ ಅವಶ್ಯವಾದಾಗ ಅವರ ಕೋರಿಕೆಯ ಧ್ವನಿ, ಸಂಕೋಚ ಕಂಡಾಗ ನನ್ನನ್ನು ಇನ್ನೂ ತುಸು ದೂರದಲ್ಲಿಯೇ ಇಟ್ಟಿದ್ದಾರೇನೋ ಎಂಬ ಭಾವ ಮೂಡುತ್ತದೆ. ಅವರು 'ದಯವಿಟ್ಟು' ಎಂಬ ಶಬ್ದ ಪ್ರಯೋಗಿಸಿದಾಗ ನಾನು ಆಕ್ಷೇಪ ವ್ಯಕ್ತಪಡಿಸಿದ್ದಿದೆ. "ಸರ್, ನೀವು ಹಿರಿಯರು, ನನಗೆ ಆದೇಶ ನೀಡುವ ಅಧಿಕಾರ ನಿಮಗುಂಟು" ಎಂದು ಹೇಳಿದ್ದಿದೆ. "ಅದು ನಿಮ್ಮ ದೊಡ್ಡತನವಪ್ಪಾ" ಎಂದು ಜೋರಾಗಿ ನಕ್ಕುಬಿಡುತ್ತಾರೆ. ಅವರ ಮನೆಯಿಂದ ಹೊರಡುವಾಗ ಗೇಟಿನವರೆಗೂ ಬಂದು 'much obliged' ಎಂದು ಮತ್ತೆ ಮತ್ತೆ ಹೇಳುತ್ತಾರೆ. ನಾನು ಇದಕ್ಕೆಲ್ಲ ಅರ್ಹನೆ ಎನ್ನಿಸಿ ಖಿನ್ನನಾದದ್ದುಂಟು. 'ಉದಾರಚರಿತರ ಉದಾತ್ತ ಪ್ರಸಂಗಗಳು' ಹೀಗೇ ಇರುತ್ತವೆಂದು ಸಮಾಧಾನ ತಂದುಕೊಂಡಿದ್ದೇನೆ.

ದುಡಿದವರನ್ನು ಗುರುತಿಸುವವರು ದುರ್ಲಭವಾಗುತ್ತಿರುವ ಇಂದಿನ ದಿನಗಳಲ್ಲಿ ಸಣ್ಣಪುಟ್ಟ ನೆರವನ್ನೂ ದೊಡ್ಡದೆಂದು ಸ್ಮರಿಸುವ, ದಾಖಲಿಸುವ ಪ್ರೊ.ಶಾಸ್ತ್ರೀ ಅವರ ಗುಣವಿಶೇಷ ಮಹತ್ವದ್ದು. ಶಾಸನಗಳಲ್ಲಿ ಉಕ್ತವಾಗಿರುವ 'ಕನ್ನಡಮೇರು' ಎಂಬ ಶಬ್ದಕ್ಕೆ ಅವರು ಮೂರ್ತರೂಪವಾಗಿ ನನಗೆ ಕಾಣುತ್ತಾರೆ.

ಸಾಹಿತ್ಯರತ್ನ

ಬಿ.ನಂಜುಂಡಸ್ವಾಮಿ

ಕನ್ನಡ ಸಾಹಿತ್ಯ ಸಂಸ್ಕೃತಿ ಬಗ್ಗೆ ಬಾಲ್ಯದಿಂದಲೂ ಬಹಳ ಆಸಕ್ತಿ ಇದ್ದುದರಿಂದ ಮೈಸೂರು ನಗರದಲ್ಲಿ ನಡೆದ ಪ್ರಥಮ ವಿಶ್ವಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಿದ್ದೆ. ಆಗ, ನಾನು ಬೆಂಗಳೂರಿನ ಶ್ರೀ ಜಯಚಾಮರಾಜೇಂದ್ರ ಆಯುರ್ವೇದ ಆಸ್ಪತ್ರೆಯಲ್ಲಿ ತರಬೇತಿ ಪಡೆಯುತ್ತಾ ಇದ್ದೆ. ಆಗ ಸರ್ಕಾರ ಕೊಡುತ್ತಾ ಇದ್ದ ಅಲ್ಪ ವೈದ್ಯಕೀಯ ಭತ್ಯೆಯನ್ನು ಕೂಡಿಹಾಕಿಕೊಂಡು ಪುಸ್ತಕ ಕೊಳ್ಳಲು ವಿಶ್ವ ಕನ್ನಡಸಮ್ಮೇಳನಕ್ಕೆ ಹೊರಟೆ. ಮೂರು ದಿನದ ವೈಭವ ಮರೆಯಲಾರದಂತಹದು. ಅಪರೂಪದ ಅತ್ಯಂತ ಬೆಲೆಬಾಳುವ ಪುಸ್ತಕಗಳನ್ನು ಕೊಂಡುಕೊಂಡೆ. ಅದರಲ್ಲಿ ಕನ್ನಡ ಸಾಹಿತ್ಯ ಪರಿಷತ್ ಪ್ರಕಟಿಸಿದ ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿಗಳು ಸಂಕಲಿಸಿದ 'ನಮ್ಮ ಕರ್ನಾಟಕ' ಪುಸ್ತಕವನ್ನು ನನ್ನ ಸಂಗ್ರಹಕ್ಕೆ ತೆಗೆದುಕೊಂಡೆ. ಮೇಲಿಂದ ಮೇಲೆ ಓದಿದೆ. ಅಂದಿನಿಂದ ಶಾಸ್ತ್ರಿಗಳನ್ನು ನೋಡಬೇಕು ಅನ್ನುವ ಕುತೂಹಲ ನನ್ನಲ್ಲಿ ಉಂಟಾಯಿತು. ಬೆಂಗಳೂರು ನಗರದಲ್ಲಿ ನಡೆಯುವ ಸಾಹಿತ್ಯ ಸಂಸ್ಕೃತಿ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾ ಇದ್ದುದರಿಂದ, ಹಿರಿಯ ವಿದ್ವಾಂಸರ ಪರಿಚಯ ಅತ್ಯಂತ ನಿಕಟವಾಗಿ ಆಗುತ್ತಾ ಬಂತು. ಶಾಸ್ತ್ರಿಗಳು ನನ್ನ ನೋಡಿದ ತಕ್ಷಣ 'ಸ್ವಾಮಿ, ಚೆನ್ನಾಗಿದ್ದಿಯಾ' ಎಂದು ಮಮತೆಯಿಂದ ಮಾತ ನಾಡಿಸುತ್ತಾರೆ. ಒಂದೊಂದು ಸಾರಿ 'ಆರಾಧ್ಯ, ಬಾ ಇಲ್ಲಿ' ಎಂದು ಕರೆಯುತ್ತಾರೆ.

ಶಂಬಾ ವಿಚಾರವೇದಿಕೆ ೨೧.೮.೯೯ರಲ್ಲಿ ಬೆಂಗಳೂರಿನ ಕನ್ನಡ ಸಾಹಿತ್ಯಪರಿಷತ್ ಸಭಾಂಗಣದಲ್ಲಿ ಶಾಸ್ತ್ರಿಗಳ ಜೀವನ ಸಾಧನೆ ಕುರಿತು ವಿಶೇಷ ವಿಚಾರ ಸಂಕಿರಣ ಮತ್ತು ಸಂವಾದ ಕಾರ್ಯಕ್ರಮ ಏರ್ಪಾಟುಮಾಡಿತ್ತು. ಜೊತೆಗೆ ಸನ್ಮಾನ ಸಮಾರಂಭ. ಶಾಸ್ತ್ರಿಗಳ ಭಾಷೆ, ವ್ಯಾಕರಣ, ನಿಘಂಟು ಕುರಿತು ಡಾ.ಎಸ್.ಎಸ್. ತಾರಾನಾಥ, ಛಂದಸ್ಸು ಅಲಂಕಾರ ಶಾಸ್ತ್ರ ಕುರಿತು ಡಾ.ಕೆ.ಜಿ.ನಾರಾಯಣ ಪ್ರಸಾದ್, ಸಾಹಿತ್ಯಚರಿತ್ರೆ, ಗ್ರಂಥಸಂಪಾದನೆ ಕುರಿತು ಡಾ.ಸಿ.ಯು.ಮಂಜುನಾಥ ಮಾತನಾಡಿದರು. ಗೋಷ್ಠಿಯ ಅಧ್ಯಕ್ಷತೆಯನ್ನು ಪ್ರೊ.ಅ.ರಾ.ಮಿತ್ರ ಅವರು ವಹಿಸಿದ್ದರು.

'ಗಜಶಾಸ್ತ್ರಶಬ್ದಕೋಶ' ಬಿಡುಗಡೆಯಾಯಿತು. ಕೃತಿಯನ್ನು ಕುರಿತು ಡಾ.ಎಸ್. ಎಸ್.ತಾರಾನಾಥ ತಲಸ್ಪರ್ಶಿಯಾಗಿ ಮಾತನಾಡಿದರು. ಹಿರಿಯ ವಿದ್ವಾಂಸರ ಜೊತೆ ಸಂವಾದದಲ್ಲಿ ಡಾ.ಎಂ.ಚಿದಾನಂದ ಮೂರ್ತಿ ಅವರು ಮಾತನಾಡುತ್ತಾ ''ನನ್ನ ಮಿತ್ರ ಸದಾ ಸಾಹಿತ್ಯ ಸಂಸ್ಕೃತಿ ಬಗ್ಗೆ ಚಿಂತನೆ ಅಧ್ಯಯನ ಮಾಡುತ್ತಾ ಇರುತ್ತಾನೆ, ನಾನಾದರೋ

ಹೋರಾಟ ಚಳವಳಿ ಎಂದು ತೊಡಗಿಕೊಂಡಿದ್ದೇನೆ" ಎಂದು ಬಹಳ ಅಭಿಮಾನದಿಂದ ಮಾತನಾಡಿದರು. ಅವರು ಇಬ್ಬರೂ ಮಾತನಾಡುವುದನ್ನು ಗಮನಿಸಿದ್ದೇನೆ. ಇಬ್ಬರೇ ಮಾತನಾಡುವಾಗ ಏಕವಚನದಲ್ಲಿ ಬಹಳ ಪ್ರೀತಿಯಿಂದ ಮಾತನಾಡುತ್ತಾರೆ.

ಡಾ.ಸಾ.ಶಿ.ಮರುಳಯ್ಯನವರು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದಾಗ, ನಿಘಂಟು ಪರಿಷ್ಕರಣ ಸಮಿತಿ ಅಧ್ಯಕ್ಷರಾಗಿ ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿಗಳು ತಮ್ಮ ಪಾಲಿನ ಸೇವೆ ಸಲ್ಲಿಸಿದರು. ನಿಘಂಟುಸಭೆ ಪ್ರತಿ ತಿಂಗಳು ಸೇರುತ್ತಾ ಇತ್ತು. ಕರ್ನಾಟಕ ವಿಶ್ವವಿದ್ಯಾಲಯದಿಂದ ಡಾ.ಎಂ.ಎಂ.ಕಲಬುರ್ಗಿ ಅವರು ಬರುತ್ತಾ ಇದ್ದರು. ಮೇಲಿಂದ ಮೇಲೆ ನಾನಾ ಕಾರಣಗಳಿಗಾಗಿ ನಿಘಂಟುಸಭೆಗೆ ಹೋದಾಗ ಶಾಸ್ತ್ರಿಗಳ ವಿದ್ವತ್ತಿನ ಪರಿಚಯ ನೋಡಿ ಬೆಕ್ಕಸ ಬೆರಗಾಗಿದ್ದೇನೆ. ೧೯೯೫ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಕಟಗೊಂಡ 'ಎಂ.ಶಾಮರಾಯರು- ಜೀವನ ಮತ್ತು ಕಾರ್ಯ' ಪುಸ್ತಕ ಓದಿ ಪತ್ರ ಬರೆದಿದ್ದೆ. ನಾನು ಸಿಕ್ಕಾಗ ನನ್ನ ಹಳೆಯ ವಿಷಯಗಳನ್ನು ಕುರಿತು ಅಭಿಮಾನಪಡುವ ಯುವಕರು ಇದ್ದಾರೆ ಅಂತ ನಿನ್ನ ಪತ್ರದಿಂದ ಗೊತ್ತಾಯಿತು ಎಂದು ಸಂತೋಷಪಟ್ಟರು. ಬೆಂಗಳೂರು ಸುವಿದ್ಯಾ ಪ್ರಕಾಶನದಿಂದ ೧೯೯೧ರಲ್ಲಿ ಪ್ರಕಟವಾದ 'ಕನ್ನಡ ಚೆನ್ನುಡಿ' (ಮೂಲತಾತ್ಪರ್ಯಸಹಿತ ಕನ್ನಡ ಸುಭಾಷಿತಗಳ ಬೃಹತ್ ಸಂಪುಟ) ಈ ಪುಸ್ತಕವನ್ನು ೧೯೯೨ರಲ್ಲಿ ಕೊಂಡು ಓದಿ ಬಹಳ ಆನಂದಪಟ್ಟೆ. ಹಿರಿಯ ಹಸ್ತಪ್ರತಿ ತಜ್ಞರಾದ ಶ್ರೀ ಎಸ್.ಶಿವಣ್ಣನವರು ತುಮಕೂರಿಗೆ ಬಂದಿದ್ದರು. ರಾತ್ರಿ ಹತ್ತು ನಿಮಿಷ ಸಹ ಮಲಗಿ ಕೊಳ್ಳದೆ ಸಂಪೂರ್ಣವಾಗಿ ಓದಿ ಟಿಪ್ಪಣಿ ಮಾಡಿಕೊಂಡರು. ಬಹಳ ಮೌಲ್ಯಯುತವಾದ ಪುಸ್ತಕ ಎಂದರು.

೩೦.೮.೧೯೯೭ ಶನಿವಾರ ಬೆಂಗಳೂರಿನಲ್ಲಿ ಶಾಸ್ತ್ರಿಗಳ ಬೃಹತ್ ಅಭಿನಂದನ ಗ್ರಂಥ 'ಶ್ರೀಮುಖ' ಬಿಡುಗಡೆಯಾಯಿತು. ಪುಸ್ತಕದ ಕಡೆಯಲ್ಲಿ 'ನೆನಪಿನ ಸುರುಳಿ' ಎಂದು ತಾವು ನಡೆದುಬಂದ ದಾರಿಯ ಸಂಕ್ಷಿಪ್ತ ಜೀವನಚರಿತ್ರೆ ಬರೆದಿದ್ದಾರೆ. ಇಂದಿನ ವಿದ್ಯಾರ್ಥಿಗಳು ಓದಬೇಕು. ಸಂಭಾವನಾಗ್ರಂಥದ ಪ್ರಥಮಲೇಖನ ದಿ.ತ.ಸು. ಶಾಮರಾಯರದು. ಲೇಖನದ ಶೀರ್ಷಿಕೆ 'ವಿದ್ಯಾರ್ಥಿಶಿಖರ'. ಲೇಖನದ ಕಡೆಯಲ್ಲಿ "'ವ್ಯಾಕರಣ, ಛಂದಸ್ಸು, ನಿಘಂಟು, ಗ್ರಂಥಸಂಪಾದನೆ' ಮುಂತಾದ ಕ್ಷೇತ್ರಗಳಲ್ಲಿ ದಕ್ಷವಾಗಿ ಕೆಲಸ ಮಾಡಿದ್ದಾನೆ. ಈಗ ಆತನು 'ಶಿಷ್ಯಾದಿಚ್ಛೇತ್ ಪರಾಜಯಂ' ಎಂಬ ಸೂಕ್ತಿಯನ್ನು ಸಾರ್ಥಕಪಡಿಸುವಂತೆ ಸುಪ್ರಸಿದ್ಧನಾಗಿದ್ದಾನೆ. ಇದರಿಂದ ನನಗೆ ಅತ್ಯಂತ ಸಂತೋಷವಾಗಿದೆ" ಎಂದಿದ್ದಾರೆ. ಗುಬ್ಬಿ ಚಿದಂಬರ ಆಶ್ರಮದಲ್ಲಿ ತ.ಸು.ಶಾಮರಾಯರು ನೆಲೆಸಿದ್ದಾಗ ೧೯೮೦ರಿಂದ ೧೯೮೩ರ ಕಾಲಮಾನದಲ್ಲಿ ಮೇಲಿಂದ ಮೇಲೆ ಭೇಟಿ ಯಾಗುತ್ತಾ ಇದ್ದೆ. ತಮ್ಮ ವಿದ್ಯಾರ್ಥಿಗಳ ಬಗ್ಗೆ ಬಹಳ ಅಭಿಮಾನದಿಂದ ಮಾತನಾಡುತ್ತಾ ಇದ್ದರು. ಆಗ ನನಗೆ ಅರ್ಥವಾಗಿರಲಿಲ್ಲ. 'ಶ್ರೀಮುಖ'ದ ಲೇಖನ ಓದಿದ ಮೇಲೆ ಅಂದು ಅವರು ಹೇಳುತ್ತಾ ಇದ್ದ ಮಾತಿನ ಅರ್ಥ ತಿಳಿಯಿತು.

ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿಗಳ ಬಿಡಿಲೇಖನಗಳ ನಾಲ್ಕು ಸಂಪುಟಗಳು, ಬೆಂಗಳೂರಿನ ಸಪ್ನ ಬುಕ್ ಹೌಸ್‌ನಿಂದ 'ಶಾಸ್ತ್ರೀಯ' ಪ್ರಕಟವಾಯಿತು. ಕನ್ನಡ ವಿದ್ಯಾರ್ಥಿಗಳ 'ತವನಿಧಿ'. ಇತ್ತೀಚೆಗೆ ಇನ್ನೆರಡು ಸಂಪುಟಗಳು ಬಂದಿವೆ. ಈ ಹಿಂದೆ 'ಎಸ್.ಜಿ.ನರಸಿಂಹಾಚಾರ್ಯರ ಕವಿತೆಗಳು' ಪುಸ್ತಕ ಐ.ಬಿ.ಹೆಚ್.ಸಂಸ್ಥೆಯಿಂದ ಪ್ರಕಟವಾಗಿತ್ತು. ಕಾರಣಾಂತರದಿಂದ ಸಂಸ್ಥೆ ಕೆಲವು ವರ್ಷ ವ್ಯಾಪಾರವನ್ನು ನಿಲ್ಲಿಸಿತ್ತು. ಪ್ರಕಟಿತ ಪುಸ್ತಕಕ್ಕೆ ಬಹಳ ಹುಡುಕಾಡಿದೆ, ದೊರೆಯಲಿಲ್ಲ. ನನ್ನ ಆಸಕ್ತಿ ನೋಡಿ ತಮ್ಮ ಮನೆಯಲ್ಲಿ ಇದ್ದ ಬೈಂಡ್ ಆಗದ ಮುದ್ರಿತ ಫಾರಂಗಳನ್ನು ನನ್ನ ಕೈಗೆ ಕೊಟ್ಟು 'ಬೈಂಡ್ ಮಾಡಿಸಿಕೊಂಡು ಅಧ್ಯಯನಮಾಡಿ' ಎಂದು ನಕ್ಕರು. ಶಾಸ್ತ್ರಿಗಳನ್ನು ಬಾಲ್ಯದಿಂದ ಬಲ್ಲ ಕನಕಪುರದ ಶಿವಾನುಭಾವಿ ಪ್ರಸಾದಿಕರಾದ ಲಿಂ. ಬಿ.ನಂಜುಂಡಪ್ಪನವರನ್ನು ಕಂಡರೆ ಶಾಸ್ತ್ರಿಗಳಿಗೆ ಬಹಳ ಗೌರವ. ಬಹಳ ದಿನದ ನಂತರ ಭೇಟಿಯಾದಾಗ ನಂಜುಂಡಪ್ಪನವರು ಈ ಮಾತನ್ನು ಹೇಳುತ್ತಾ ಇದ್ದರಂತೆ, ''ನಿಮಗೋಸ್ಕರ ಅಲ್ಲದೆ ಇದ್ದರೂ ನಮಗೋಸ್ಕರವಾದರೂ ವರ್ಷಕ್ಕೆ ಒಂದು ಸಾರಿ ನಮ್ಮ ಊರಿಗೆ ಬರಬೇಕು'' ಎಂದು. ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳು, ವಿವಿಧ ಕೃತಿಗಳು ಮತ್ತು ಹಳೆಯ ವಿದ್ವಾಂಸರ ಬಗ್ಗೆ ವಿವರ ತಿಳಿಯಬೇಕು ಅನ್ನುವವರು, ಶಾಸ್ತ್ರಿಗಳು ರಚಿಸಿದ ಸಂಪಾದಿಸಿದ ಹಲವು ಪುಸ್ತಕಗಳನ್ನು ಪರಿಶೀಲನೆ ಮಾಡಲೇಬೇಕು. ಪ್ರಮುಖವಾಗಿ ರಾ.ನರಸಿಂಹಾಚಾರ್ಯರ ಲೇಖನಗಳು, ಭಾಷಣಗಳು ಸಂಗ್ರಹ ಇರುವ ಪುಸ್ತಕ ಪ್ರಾಕ್ತನ(೧೯೮೬), ಮಹಾಮಹೋಪಾಧ್ಯಾಯ ಡಾ.ಆರ್.ಶಾಮಶಾಸ್ತ್ರಿ(೧೯೮೦), ಸಾಹಿತ್ಯ ಶಿಲ್ಪಿಗಳು(೧೯೮೫), ಮುಲಕನಾಡು ಬ್ರಾಹ್ಮಣರು(೨೦೦೦), ಎಂ.ಶಾಮರಾಯರು(೧೯೯೫), ಡಾ.ಎಸ್.ಶ್ರೀಕಂಠಶಾಸ್ತ್ರಿಗಳ 'ಸಂಶೋಧನ ಲೇಖನ'ಗಳು(೧೯೭೫)(ಡಾ.ಬಾ.ರಾ.ಗೋಪಾಲರೊಡನೆ ಸಂಪಾದಿಸಿದ್ದು), ಶಬ್ದಾರ್ಥ ವಿಹಾರ(೧೯೭೯), ಹೊಸಗನ್ನಡ ಸಾಹಿತ್ಯ ಕೆಲವು ನೋಟಗಳು(೧೯೮೨), ಕನ್ನಡ ಛಂದಃಸ್ವರೂಪ(೧೯೭೮), ಶ್ರೀವತ್ಸ ನಿಘಂಟು(೧೯೭೧, ದ್ವಿ.ಮುದ್ರಣ ೨೦೦೦), ಕನ್ನಡ ರಾಮಾಯಣ ಗ್ರಂಥಸೂಚಿ(೧೯೯೮), ಕನ್ನಡ ಕವಿಗಳು ಕಂಡ ಗೊಮ್ಮಟೇಶ್ವರ (೧೯೯೦), ಮಹಾಕಾವ್ಯ ಲಕ್ಷಣ(೧೯೬೯, ೨೦೦೧), ಮುದ್ರಾಮಂಜೂಷವು(೧೯೯೯), ಇತ್ತೀಚೆಗೆ ಬೆಂಗಳೂರು ಕಲಾಸಿಪಾಳ್ಯದ ಶ್ರೀಸಹಜಾನಂದ ಭಾರತೀಸ್ವಾಮಿಗಳು(೨೦೦೬). ಹೀಗೆ ಕನ್ನಡಸಾಹಿತ್ಯ ಸೇವೆಯನ್ನು ಮನಮುಟ್ಟಿ ಮಾಡುತ್ತಾ ಇರುವ ಶಾಸ್ತ್ರಿಗಳನ್ನು ತುಮಕೂರಿನ ಕಾರ್ಯಕ್ರಮಕ್ಕೆ ಕರೆಯುತ್ತಾ ಇದ್ದೆ, ಸಮಯ ಕೂಡಿರಲಿಲ್ಲ. 'ತುಮಕೂರು ನಾಗರಿಕ ಕನ್ನಡಸಾಹಿತ್ಯ ಅಧ್ಯಯನವೇದಿಕೆ' ಮತ್ತು 'ತುಮಕೂರು ಜಿಲ್ಲಾ ಶರಣಸಾಹಿತ್ಯ ಪರಿಷತ್ತು' ದಿನಾಂಕ ೧೨.೨.೨೦೦೬ನೆಯ ಭಾನುವಾರ 'ಶತಮಾನ ಕಂಡ ನುಡಿಸೇವಕರ ಸಂಸ್ಮರಣೆ ಉತ್ಸವ'ವನ್ನು ಮಾಡಿದವು. ಡಾ.ಡಿ.ಎಲ್.ನರಸಿಂಹಾಚಾರ್, ಡಾ.ಪು.ತಿ. ನರಸಿಂಹಾಚಾರ್, ಡಾ.ಎನ್.ಅನಂತ ರಂಗಾಚಾರ್. ಗೊರೂರು ರಾಮಸ್ವಾಮಿ ಅಯ್ಯಂಗಾರ್, ಡಾ.ಎಸ್.ಸಿ.ನಂದೀಮಠ, ಡಾ.ತ.ಸು.ಶಾಮರಾಯ ಇವರ ಜೀವನ

ಸಾಧನೆ ಕುರಿತು ವಿಚಾರಸಂಕಿರಣ ಏರ್ಪಡಿಸಿದ್ದವು. ನಾನು ಫೋನ್ ಮಾಡಿದ ತಕ್ಷಣ ಸಂತೋಷದಿಂದ ಒಪ್ಪಿಕೊಂಡು, ಮೈಸೂರಿನಿಂದ ಬೆಂಗಳೂರಿಗೆ ಬಂದು, ಅಲ್ಲಿಂದ ತುಮಕೂರಿಗೆ ಬಂದು ಕಾರ್ಯಕ್ರಮದಲ್ಲಿ ಭಾಗವಹಿಸಿ ಹೋಗುವಾಗ ನನ್ನ ಬೆನ್ನು ತಟ್ಟಿದರು. ವಿದ್ವಾಂಸರ ಬಗ್ಗೆ, ವಿದ್ವತ್ತಿನ ಬಗ್ಗೆ ಶಾಸ್ತ್ರಿಗಳಿಗೆ ಬಹಳ ಅಭಿಮಾನ. ನನ್ನನ್ನು ಕಂಡು ಮಾತನಾಡಿದಾಗೆಲ್ಲ ಪುತ್ರವಾತ್ಸಲ್ಯದ ಮಾತುಗಳನ್ನು ಆ ಧ್ವನಿಯಲ್ಲಿ ಗುರುತಿಸಿದ್ದೇನೆ.

ಪಾಂಡಿತ್ಯದ ಪಣತ

ಟಿ.ಎನ್.ನಾಗರತ್ನ

ಅರ್ಧತೋಳಿನ ಶರ್ಟು, ಪ್ಯಾಂಟು ತೊಟ್ಟ ಸಾಧಾರಣ ಮೈಕಟ್ಟು. ಚುರುಕುಕಣ್ಣುಗಳು. ಕನ್ನಡಕದ ಒಳಗಿನಿಂದ ಮೇಲೇಳುವ ತೀಕ್ಷ್ಣನೋಟ. ತುಸುವೆ ಗಂಟಿಕ್ಕಿದ ಹುಬ್ಬು. ವಿದ್ವತ್ತಿನ ಭಾರದಿಂದ ನಸುವೆ ಬಾಗಿದ ಶರೀರ. ಎಡಗೈಯಲ್ಲಿ ಎದೆಗವಚಿದ ಪುಸ್ತಕಗಳು. ಹೌದು... ಬಲಗೈಯನ್ನು ಸ್ವಲ್ಪವೇ ಬೀಸುತ್ತ ಬರುತ್ತಿರುವ ಆ ಅವರೇ, ತೋಗೆರೆ ವೆಂಕಟಾಚಲ ಶಾಸ್ತ್ರಿ ಅವರು; ಅನ್ವರ್ಥನಾಮದವರು. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನಸಂಸ್ಥೆಯಲ್ಲಿ ಪುಟಪುಟನೆ ಪುಟಿಯುತ್ತ ಕಳೆದ ನಾಲ್ಕುದಶಕಗಳಿಂದ ವಿದ್ಯಾರ್ಥಿಗಳ, ಸಂಶೋಧಕರ ಗಮನವನ್ನು ತಮ್ಮತ್ತ ಸೆಳೆದುಕೊಂಡು ಪಾಂಡಿತ್ಯದ ಪಣತವಾದವರು; ಶಾಸ್ತ್ರಗ್ರಂಥಗಳ ಸಿಕ್ಕುಬಿಡಿಸುವ ಪರಿಣತರು, ಶಾಸ್ತ್ರಿಗಳು.

ಸುಮಾರು ಮೂವತ್ತೆಂಟು ವರ್ಷಗಳ ಹಿಂದಿನ ಮಾತು. ನಾನು ಕನ್ನಡ ಅಧ್ಯಯನಸಂಸ್ಥೆಯಲ್ಲಿ ಸಂಶೋಧನವಿದ್ಯಾರ್ಥಿನಿ. ಆಗ ಶಾಸ್ತ್ರಿಗಳವರೂ ಅಧ್ಯಯನ ಸಂಸ್ಥೆಗೆ ಹೊಸಬರೇ. ಒಂದುದಿನ ಅಧ್ಯಯನಸಂಸ್ಥೆಯ ಆವರಣದಲ್ಲಿ ಓಡಾಡುತ್ತಿದ್ದ ನನ್ನನ್ನು ತಡೆದು, 'ನೀವೇ ಏನ್ರೀ ನಾಗರತ್ನ ಅಂದ್ರೆ... ರಿಸರ್ಚ್ ಮಾಡ್ತಿದೀರಂತೆ... ಗುಡ್... ನೋಡಿ, ಈಗ ನೀವು ನಮ್ಮ ಅಧ್ಯಯನಸಂಸ್ಥೆ ತರ್ತಾ ಇರೋ 'ಕನ್ನಡ ಸಾಹಿತ್ಯಚರಿತ್ರೆ' ಸಂಪುಟಕ್ಕೆ ಕಂತಿಯ ಬಗ್ಗೆ ಒಂದು ಲೇಖನ ಬರೆದುಕೊಡ್ಬೇಕು... ಏನು... ಒಂದೆರಡು ಪುಟ ಬರೆದ್ರೆ ಸಾಕು... ಆದಷ್ಟು ಬೇಗ ಬರೆದುಕೊಟ್ಬಿಡಿ... ಪತ್ರ ಕಳಿಸ್ತೀನಿ' ಅಂತ 'ಹುಕುಂ' ಕೊಟ್ಟರು. ನಿಜ ಹೇಳ್ತೀನಿ... ಅವರ ಮಾತಿನ ಧಾಟಿ ನನಗೆ ಸ್ವಲ್ಪವೂ ಹಿಡಿಸಲಿಲ್ಲ. ನನಗೆ ಈ ಮೊದಲು ಅವರ ಪರಿಚಯವೂ ಇರಲಿಲ್ಲ. ಉಸ್ಮಾನಿಯಾ ವಿಶ್ವವಿದ್ಯಾನಿಲಯದಿಂದ ನಮ್ಮಲ್ಲಿಗೆ ಉಪನ್ಯಾಸಕರಾಗಿ ಬಂದಿದ್ದಾರೆಂದು ಮಾತ್ರ ತಿಳಿದಿತ್ತು. 'ಇವರೇನೂ ನನಗೆ ಮೇಷ್ಟ್ರಲ್ಲ... ಆದ್ರೂ ಅಪ್ಪಣೆ ಮಾಡೋದು ನೋಡು' ಅಂತ ಗೆಳತಿ ಶ್ಯಾಮಲೆಯೊಡನೆ ಹೇಳಿ ನನ್ನ ಅಸಮಾಧಾನವನ್ನು ಹೊರಹಾಕಿ ತೆಪ್ಪಗಾದೆ. ದಿನಗಳು ಕಳೆದುವು. ತಿಂಗಳುಗಳುರುಳಿದುವು. ನಾನು ಕಂತಿಯ ವಿಚಾರವನ್ನು ಸಂಪೂರ್ಣ ಮರೆತೇಬಿಟ್ಟೆ. ಕಾರಣ ನನ್ನ ಮಹಾಪ್ರಬಂಧದ ಬರವಣಿಗೆ ಕೊನೆಯಹಂತದಲ್ಲಿದ್ದದ್ದು. ಒಂದುದಿನ ಶಾಸ್ತ್ರಿಗಳು ಧಿಡೀರನೆ ಬಂದು 'ಕಂತಿಯ ಬಗ್ಗೆ ಲೇಖನ ಬರೆದಾಯ್ತೆ?... ಕೊಡ್ತೀರಾ?' ಅಂತ ಕೇಳಿದ್ರು. 'ಇಲ್ಲ ಸಾರ್... ಕ್ಷಮಿಸಿ...

ನನ್ನ ಥೀಸಿಸ್ ಬರವಣಿಗೆಯಲ್ಲಿದ್ದೇನೆ. ದಯವಿಟ್ಟು ನಂಗೆ ಸ್ವಲ್ಪ ಕಾಲಾವಕಾಶ ಕೊಡಿ ಸಾರ್...' ಅಂದೆ. ಶಾಸ್ತ್ರಿಗಳಿಗೆ ಸಿಕ್ಕಾಪಟ್ಟೆ ಸಿಟ್ಟು ಬಂತು. ಮುಖ ಕೆಂಪಗೆ ಮಾಡಿಕೊಂಡು, ಗಂಭೀರವಾಗಿ, ವಿರುದ್ಧ್ವನಿಯಲ್ಲಿ ''ಅದೆಲ್ಲ ಆಗೋಲ್ಲ... ನೋಡಿ ನಾನು ನಾಯಕರಿಗೆ ಹೇಳ್ತೀನಿ ಅಷ್ಟೆ..." ಅಂದ್ರು(ಆಗ ಡಾ.ಹಾ.ಮಾ.ನಾಯಕರು ಕನ್ನಡ ಅಧ್ಯಯನಸಂಸ್ಥೆಯ ನಿರ್ದೇಶಕರಾಗಿದ್ದರು). ನಂದೂ ಬಿಸಿ ರಕ್ತ. 'ಹೇಳ್ಕೋ ಹೋಗಿ ಸಾರ್...' ಅಂದ್ಬಿಟ್ಟೆ. ಶಾಸ್ತ್ರಿಗಳು ಸರಸರ ಹೊರಟು ಹೋದರು. ಆನಂತರ ಎದುರಿಗೆ ಸಿಕ್ಕಿದರೂ ನೋಡದ ಹಾಗೆ, ನಮಸ್ಕಾರ ಅಂದರೂ ಕೇಳದ ಹಾಗೆ ದುಮುಗುಡುತ್ತಲೇ ಹೋಗುತ್ತಿದ್ದರು. ಹೀಗೆ 'ಠೂ' ಬಿಟ್ಟು ಹೆಚ್ಚು ಕಡಿಮೆ ವರ್ಷವೇ ಕಳೆದಿತ್ತು. ನನ್ನ ಮಹಾಪ್ರಬಂಧದ ಬರವಣಿಗೆಯೆಲ್ಲ ಮುಗಿದ ನಂತರ ಕಂತಿಯ ಬಗ್ಗೆ ಲೇಖನ ಬರೆದುಕೊಂಡು ಶಾಸ್ತ್ರಿಗಳ ಕೊಠಡಿಗೆ ಹೋದೆ. 'ಬನ್ನಿ... ಕೂತ್ಕೊಳ್ಳಿ' ಅಂದ್ರು. ಅವರ ಕೈಗೆ ಲೇಖನ ಕೊಟ್ಟು, ''ದಯವಿಟ್ಟು ಕ್ಷಮಿಸಿ ಸಾರ್... ಅವತ್ತು ನೀವು ಲೇಖನ ಕೇಳಿದಾಗ ನಾನು ಹಾಗೆ ಮಾತಾಡಬಾರದಿತ್ತು. ಏನೋ ಬರವಣಿಗೆಯ ಒತ್ತಡದಲ್ಲಿದ್ದೆ..." ಅಂತ ತೊದಲಿದೆ. ಲೇಖನ ಕೈಗೆ ಬಂದ ಗಳಿಗೆಯಲ್ಲೇ ಅವರು ನನ್ನನ್ನು ಕ್ಷಮಿಸಿ ನನ್ನ 'ಜತೆ ಕಟ್ಟಿ'ದ್ದರು. ಅಂದಿನ ನನ್ನ ವರ್ತನೆ ಇಂದಿಗೂ ನನಗೆ ನೋವುಂಟುಮಾಡುತ್ತಿದೆ. ಬಹುಶಃ ನಾನು ಲೇಖನ ಸಿದ್ಧಪಡಿಸಿಕೊಡದಿದ್ದರೆ ಅವರು ನನ್ನನ್ನು ಕ್ಷಮಿಸುತ್ತಲೇ ಇರಲಿಲ್ಲವೆನ್ನಿಸುತ್ತಿದೆ.

ಸಾಮಾನ್ಯವಾಗಿ ಮಧ್ಯಾಹ್ನ ಊಟದವೇಳೆಯಲ್ಲಿ ಶಾಸ್ತ್ರಿಗಳು, ನನ್ನ ಗುರುಗಳೂ ಮಾರ್ಗದರ್ಶಕರೂ ಆಗಿದ್ದ ಡಾ.ಜಿ.ವರದರಾಜರಾಯರು, ಪ್ರೊ.ಎಸ್.ವಿ.ಪರಮೇಶ್ವರ ಭಟ್ಟರು ಮೊದಲಾದವರು ಒಟ್ಟಿಗೆ ಸೇರುತ್ತಿದ್ದರು. ಕೆಲವೊಮ್ಮೆ ಡಾ.ವರದರಾಜ ರಾಯರೊಂದಿಗೆ ಅವರ ಕೊಠಡಿಯಲ್ಲಿ ಕೆಲಸಮಾಡುತ್ತ ಕುಳಿತಿರುತ್ತಿದ್ದ ನನಗೂ ಆ ಗೋಷ್ಠಿಗೆ ಆಹ್ವಾನವಿರುತ್ತಿತ್ತು. ಎಲ್ಲರೂ ಲೋಕಾಭಿರಾಮವಾಗಿ ಮಾತನಾಡುತ್ತಾ ತಮ್ಮ ತಮ್ಮ ತಿಂಡಿಡಬ್ಬಿಗಳನ್ನು ಬಿಚ್ಚಿ ಪರಸ್ಪರ ಹಂಚಿ ತಿನ್ನುತ್ತಿದ್ದರು. ಶಾಸ್ತ್ರಿಗಳ ಡಬ್ಬಿಯ ಪುಟ್ಟಪುಟ್ಟ ರವೆಉಂಡೆಗಳು, ಕೋಡುಬಳೆಗಳು ಬಹಳ ರುಚಿಕಟ್ಟಾಗಿರು ತ್ತಿದ್ದುವು. ಕಿರಿಯವಳಾದ ನನಗೆ ಎಲ್ಲರಿಂದಲೂ ಸಿಂಹಪಾಲು ಸಿಗುತ್ತಿತ್ತು! ಜೊತೆಗೆ ಅವರುಗಳ ಮುಕ್ತ ಸರಸಸಂಭಾಷಣೆಗಳನ್ನು ಸವಿಯುವ ಪುಣ್ಯವೂ ನನಗೊದಗುತ್ತಿತ್ತು. ಒಮ್ಮೆ ಡಾ.ವರದರಾಜರಾಯರು, ಶ್ರೀ ವಿ.ಜಿ.ಕೆ.ಯವರು, ಪ್ರೊ.ಎಚ್.ಎಂ.ಶಂಕರ ನಾರಾಯಣರಾಯರು ಒಂದು ಮದುವೆಗೆ ಹೋಗಿಬಂದುದರ ಕುರಿತು ಮಾತುಬಂತು. ಮದುವಣಗಿತ್ತಿಯನ್ನು ಕುರಿತು ''ಹುಡುಗಿ ಸ್ವಲ್ಪ ಬಲಿತಿತ್ತು... ಅಲ್ವೇ ರಾಯ್ರೆ?" ಅಂದ್ರು ಶಂಕರನಾರಾಯಣರಾಯರು. ವರದರಾಜರಾಯರು 'ಹ್ಞೂಂ... ಹೌದು ಹೌದು...' ಅಂದ್ರು. ಅಲ್ಲಿಯೇ ತಿಂಡಿ ತಿನ್ನುತ್ತ ಕುಳಿತಿದ್ದ ನನಗೆ ತಡೆಯಲಾಗಲಿಲ್ಲ. ''ಹುಡುಗೀನೇ ಬಲಿತಿದ್ರೆ ಹುಡುಗ ನಾರುಬಂದು ಹೋಗಿರಬೇಕು... ಅಲ್ವೇ ಸಾರ್" ಅಂದೆ. ಎಲ್ರೂ ಗೊಳ್ಳಂತ ನಕ್ಕಿದ್ದೇ ನಕ್ಕಿದ್ದು....

ಒಂದು ದಿನ ನನ್ನಲ್ಲಿದ್ದ ಸುಮಾರು ಒಂದು ಪಾವಿನ ಅಳತೆಯ ಬಿಳಿಯ ಪಾರದರ್ಶಕವಾದ ಗಾಜಿನ ಲೋಟವನ್ನು ಚೆನ್ನಾಗಿ ತೊಳೆದು, ಕುಡಿಯಲೆಂದು ಅದರ ಭರ್ತಿ ನೀರು ಹಿಡಿದುಕೊಂಡು ನನ್ನ ಕೊಠಡಿಯತ್ತ ಹೊರಟಿದ್ದೆ. ಮಟಮಟ ಮಧ್ಯಾಹ್ನ ಎರಡು ಗಂಟೆಯ ಸಮಯ. ಶಾಸ್ತ್ರಿಗಳು ಆ ಬಿರುಬಿಸಿಲಿನಲ್ಲಿ ನಡೆಯುತ್ತಾ ಮನೆಯಿಂದ ಸಂಸ್ಥೆಗೆ ಬಂದಿದ್ದರು. ನಾನು ಆ ಗಾಜಿನ ಲೋಟದಲ್ಲಿದ್ದ ನೀರನ್ನು ಕೊಟ್ಟು 'ಕುಡೀರಿ ಸಾರ್' ಅಂದೆ. ನೀರು ಕುಡಿದು ಸಂತೃಪ್ತಿಯಿಂದ ಲೋಟವನ್ನು ನನ್ನ ಕೈಗೆ ಕೊಟ್ಟರು. ಬಳಿಕ ಒಂದು ಕ್ಷಣ ವಿಸ್ಮಯದಿಂದ ನನ್ನತ್ತ ನೋಡಿ 'ನೀವ್ಯಾಕೆ ನಂಗೆ ನೀರು ಕೊಟ್ರಿ?' ಅಂದ್ರು. 'ಏನಿಲ್ಲ ಸಾರ್... ಬಿಸಿಲಿನಲ್ಲಿ ಬಂದ್ರಿ. ನೀರು ಹಿಡಿದಿದ್ದೆ. ನಿಮ್ಮನ್ನು ನೋಡಿ ಕೊಡೋಣ ಅನ್ನಿಸ್ತು, ಕೊಟ್ಟೆ. ಹಿಡಿದಿದ್ದು ಸಾರ್ಥಕವಾಯ್ತು. ಅಷ್ಟೆ' ಅಂದೆ. ಅವರಿಗೆ ಬಹಳ ಸಂತೋಷವಾಯಿತು. ಅಂದು ನನ್ನಲ್ಲಿ ಸಾರ್ಥಕ್ಯದ ಭಾವ ಮೂಡಿದ್ದೂ ದಿಟ.

ಶಾಸ್ತ್ರಿಗಳು 'ಡಾಕ್ಟರ್' ಆದಾಗಲೂ ಒಂದೇ ಥರ. 'ಪ್ರೊಫೆಸರ್' ಆದಾಗಲೂ ಒಂದೇ ಥರ. ಇವತ್ತಿಗೂ ಹಾಗೆಯೇ ಇದ್ದಾರೆ. ಉಡುಗೆ-ತೊಡುಗೆಯಲ್ಲಿ ಬಹಳ ಸರಳಜೀವಿ. ವಿದ್ವತ್ತು ವಿನಯ ಸೌಜನ್ಯಗಳ ಮೂರ್ತಿ. ಸ್ವತಃ ಸಂಶೋಧಕರಾದ ಅವರಿಗೆ ಸಂಶೋಧಕರ ಕಾರ್ಯಭಾರ, ಜವಾಬ್ದಾರಿಗಳ ಬಗ್ಗೆ ಬಹಳ ಪ್ರೀತಿ, ಗೌರವ. ಹಾಗಾಗಿ ಅವರು ಕನ್ನಡ ಅಧ್ಯಯನಸಂಸ್ಥೆ(ಈಗ ಅದು 'ಕುವೆಂಪು ಕನ್ನಡ ಅಧ್ಯಯನಸಂಸ್ಥೆ')ಯ ನಿರ್ದೇಶಕರಾಗಿದ್ದಾಗ ನಮ್ಮಂಥ ಸಂಶೋಧಕರ ಸಮಸ್ಯೆಗಳನ್ನು ವಿವರಿಸುವ ಸಲುವಾಗಿ ಕುಲಪತಿಗಳನ್ನು ಕಾಣಲು ನಮ್ಮೊಂದಿಗೆ ಅವರೂ ಬಂದರು. ಕುಲಪತಿಗಳ ಆಪ್ತ ಸಹಾಯಕರು ನಮ್ಮನ್ನೆಲ್ಲ ಭೇಟಿಮಾಡಲು ಬಂದ ಇತರರೊಡನೆ ನಿರೀಕ್ಷಣಾಕೊಠಡಿಯಲ್ಲಿ ಕೂಡಿಸಿದರು. ನಾನು ಸುಮ್ಮನೆ ಒಂದು ಸುತ್ತು ಕಣ್ಣು ಹಾಯಿಸಿದೆ. ಕುಲಪತಿಗಳನ್ನು ಭೇಟಿಮಾಡಲು ಬಂದಿದ್ದವರ ಗರಿಗರಿ ಸೂಟುಗಳೇನು, ಫಳಫಳ ಹೊಳೆಯುವ ಬೂಟುಗಳೇನು, ಬಣ್ಣಬಣ್ಣದ 'ಕಂಠಲಂಗೋಟಿ'ಗಳೇನು, ಅತ್ತಿತ್ತ ಓಡಾಡುತ್ತಿದ್ದ ಠೀವಿಯೇನು! ಅವರೆಲ್ಲರ ಮಧ್ಯೆ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನಸಂಸ್ಥೆಯ ನಿರ್ದೇಶಕರಾಗಿದ್ದ ಡಾ.ವೆಂಕಟಾಚಲ ಶಾಸ್ತ್ರಿಯವರು ತಮ್ಮ ಸಾಧಾರಣ ಶರ್ಟು, ಪ್ಯಾಂಟು, ಮಾಮೂಲಿ ಚಪ್ಪಲಿಗಳೊಂದಿಗೆ ಒಂದು ಮೂಲೆಯಲ್ಲಿ ಕುಳಿತು ತಮ್ಮ ಸರದಿಗಾಗಿ ಕಾಯುತ್ತಿದ್ದರು.

ಶಾಸ್ತ್ರಿಗಳೊಂದಿಗೆ ಕೆಲಸಮಾಡುವುದೇ ಒಂದು ಖುಷಿ. ಅವರು ಮುಂದಿಟ್ಟ ಸಮಸ್ಯೆಯನ್ನು ನಾವು ಸರಿಯಾಗಿ ಬಿಡಿಸಿ ಕೊಟ್ಟರೆ ಅವರಿಗಾಗುವ ಸಂತೋಷದ ರೀತಿ ಅನನ್ಯ. 'ಹ್ಞಾಂ... ಕರೆಕ್ಟ್... ಸರಿಯಾಗಿ ಹೇಳಿದ್ರಿ' ಎಂದು ನೆಟ್ಟಗೆ ಕುಳಿತು ಹೇಳುವಾಗ ಅವರ ತೋರ್ಬೆರಳು ಕಣ್ಣು ಮುಖ ಮೈ ಎಲ್ಲವೂ ಮೆಚ್ಚುಗೆ ವ್ಯಕ್ತಪಡಿಸುತ್ತಿರುತ್ತವೆ. ಸಾಮಾನ್ಯವಾಗಿ ಜನ ತಮ್ಮ ಸಂಬಳ ಬಡ್ತಿ ಭತ್ಯೆಗಳ ಬಗ್ಗೆಯೇ ಯೋಚಿಸುತ್ತಾ ಮಾತನಾಡುತ್ತಾ ಇದ್ದರೆ, ಸದಾಕಾಲ ಪದಗಳ ನಿಷ್ಪತ್ತಿ, ಪದಪ್ರಯೋಗಗಳ ಜಾತಕವನ್ನೇ

ಜಾಲಾಡುತ್ತಿರುವ ಶಾಸ್ತ್ರಿಗಳ ಜೊತೆ ಸ್ವಲ್ಪಕಾಲ ಕಳೆದರೂ ಸಾಕು, ಅಷ್ಟರಮಟ್ಟಿಗೆ ನಮ್ಮ ಬುದ್ಧಿಮತ್ತೆ ಚಿಗುರುತ್ತದೆ: ವಿದ್ವತ್ತು ಪಾಂಡಿತ್ಯ ವೃದ್ಧಿಸುತ್ತದೆ.

ಇತ್ತೀಚಿನ ದಿನಗಳಲ್ಲಿ ಶಾಸ್ತ್ರಿಗಳ ಮುಖ ಮುಗುಳ್ನಗೆಯಿಂದ ಬೆಳಗುತ್ತಿರುವುದು ಒಂದು ವಿಶೇಷ. ಲೌಕಿಕವಾಗಿ ಪಡೆಯಬಹುದಾದ ಸ್ಥಾನಮಾನಗಳು; ವಿದ್ವದ್ವಲಯದಲ್ಲಿ ಶ್ರಮಪಟ್ಟು, ಗಳಿಸಿರುವ ಮಣೆ, ಮನ್ನಣೆ: ಪತಿಯಾಗಿ ಹಾಗೂ ತಂದೆಯಾಗಿ ನಿರ್ವಹಿಸಿದ ಕರ್ತವ್ಯಗಳು ಎಲ್ಲವೂ ಅವರ ಮನಸ್ಸಿಗೆ ಸಂತೋಷ ಸಮಾಧಾನಗಳನ್ನು ಕೊಟ್ಟಿವೆ. ಈ ವಯಸ್ಸಿನಲ್ಲೂ ಅವರು ಹಮ್ಮಿಕೊಂಡಿರುವ ಶೈಕ್ಷಣಿಕ ಹಾಗೂ ಸಂಶೋಧನ ಚಟುವಟಿಕೆಗಳು ತರುಣರನ್ನು ನಾಚಿಸುವಂತಿವೆ. ಇಂತಹ ನಮ್ಮ ಪ್ರೀತಿಯ 'ಶಾಸ್ತ್ರೀ'ಗಳು ನೂರಕ್ಕೂ ಹೆಚ್ಚಿನ ವಸಂತಗಳನ್ನು ಕಾಣಲಿ; ತಮ್ಮ ವಿದ್ವತ್ತಿನ ಪರಿಮಳವನ್ನು ನಾಡಿನಾದ್ಯಂತ ಬೀರಲಿ ಎಂಬುದೇ ನಮ್ಮೆಲ್ಲರ ಅಪೇಕ್ಷೆ.

ವಿದ್ವನ್ಮಾನಸರಾಜಹಂಸ

ಎಸ್.ಸೂರ್ಯಪ್ರಕಾಶ್ ಪಂಡಿತ್

ವಿದ್ವತ್ತೆ ಎಂಬುದು ಒಂದು ಮಹಾಸಿದ್ಧಿ. ಇದನ್ನು ದಕ್ಕಿಸಿಕೊಳ್ಳಲು ನಡೆಸಬೇಕಾದ ತಪಸ್ಸು ಕೂಡ ಶ್ರಮದಾಯಕ, ಮಾತ್ರವಲ್ಲ ಅದೊಂದು ನಿರಂತರ ಸಾಧನೆ. ಹಿಂದೆ ಈ ಸಾಧನೆಗಾಗಿ ಹಂಬಲಿಸುವವರೂ, ಈ ಸಿದ್ಧಿಯಲ್ಲಿ ವಿಹರಿಸುವವರೂ ಹೆಚ್ಚಿನ ಸಂಖ್ಯೆಯಲ್ಲಿ ಇರುತ್ತಿದ್ದರು. ಈಗ ಇಂಥ ವಾತಾವರಣ ಇದೆಯೆಂದು ಹೇಳುವ ಪರಿಸ್ಥಿತಿಯಿಲ್ಲ. ಪ್ರಸ್ತುತ ಕನ್ನಡ ವಿದ್ವತ್‌ಲೋಕವನ್ನು ಅವಲೋಕಿಸಿದಾಗ ವಿದ್ವತ್ ಪರಂಪರೆಯ ಕೊಂಡಿಗಳಾಗಿ ನಮ್ಮೆದುರಿಗೆ ಮೂರ್‍ನಾಲ್ಕು ಮಂದಿ ಶ್ರೇಷ್ಠ ವಿದ್ವಾಂಸರು ಎದುರಾದರು. ಇವರಲ್ಲಿ ಒಬ್ಬರು ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿಗಳು.

ಕನ್ನಡದ ಭಾಷೆ, ವ್ಯಾಕರಣ, ಛಂದಸ್ಸು, ಗ್ರಂಥಸಂಪಾದನೆ, ಸಂಶೋಧನೆ, ನಿಘಂಟು ರಚನೆ, ಸಾಹಿತ್ಯ ಚರಿತ್ರೆ, ಕವಿ-ಕಾವ್ಯವಿಚಾರ ಮುಂತಾದ ಹತ್ತು ಹಲವು ಜ್ಞಾನಶಾಖೆಗಳಲ್ಲಿ ಕೃಷಿ ಮಾಡಿರುವ ಶಾಸ್ತ್ರಿಗಳು ನಮ್ಮ ನಾಡಿನ ಶಾಸ್ತ್ರಪರಂಪರೆಯಲ್ಲಿ ದೊಡ್ಡ ಹೆಸರು. ಕನ್ನಡ ವಿದ್ವತ್‌ಪರಂಪರೆಯನ್ನು ಸಮರ್ಥವಾಗಿ ಮುಂದುವರಿಸುತ್ತ ಬಂದಿರುವ ಶಾಸ್ತ್ರಿಗಳಿಗೆ ಇದೀಗ ಎಪ್ಪತ್ತೈದು ವರ್ಷಗಳು.

ಶಾಸ್ತ್ರಿಗಳು ಹುಟ್ಟಿದ್ದು ೧೯೩೩ರ ಆಗಸ್ಟ್ ೨೬ರಂದು ಕಾನಕಾನಹಳ್ಳಿಯಲ್ಲಿ (ಬೆಂಗಳೂರು ಜಿಲ್ಲೆ). ಈಗ ಇದು ಕನಕಪುರ ಎಂದಾಗಿದೆ. ತಂದೆ ತೋಗೆರೆ ವೆಂಕಟ ಸುಬ್ಬಾಶಾಸ್ತ್ರೀ; ತಾಯಿ ಸುಬ್ಬಮ್ಮ. ಮನೆಯಲ್ಲಿ ಬಡತನವಿದ್ದರೂ ಸಾಹಿತ್ಯ ಪ್ರಭಾವಕ್ಕೇನೂ ಕೊರತೆಯಾಗಿರಲಿಲ್ಲ. ಶಾಸ್ತ್ರಿಗಳ ತಂದೆಯವರು ರಾಮಕೃಷ್ಣ ವಿವೇಕಾನಂದರ ಜೀವನ ಸಾಹಿತ್ಯಗಳಿಂದ ಪ್ರಭಾವಿತರಾಗಿದ್ದವರು. ಗಳಗನಾಥ, ವೆಂಕಟಾಚಾರ್ಯರ ಕಾದಂಬರಿಗಳನ್ನೆಲ್ಲ ಓದಿದ್ದವರು. ಶಾಸ್ತ್ರಿಗಳಿಗೂ ಎಳವೆಯಲ್ಲೇ ಸಾಹಿತ್ಯಸಂಸ್ಕಾರ ಒದಗಿತು. ಶ್ರೀರಾಮಕೃಷ್ಣವಚನಾಮೃತ, ದೇವಶಿಖಾಮಣಿ ಅಳಸಿಂಗರಾಚಾರ್ಯರ ರಾಮಾಯಣ ಭಾರತದ ಗದ್ಯಾನುವಾದಗಳನ್ನು ಓದಿ ಕನ್ನಡದ ಕಡೆಗೆ ಆಕರ್ಷಿತರಾದರು. ಮನೆಯಲ್ಲಿದ್ದ ತಾಳೆಯೋಲೆಯ ಗ್ರಂಥಗಳು ಸಂಶೋಧನೆ -ಶಾಸ್ತ್ರವ್ಯಾಸಂಗದ ಕುತೂಹಲ ಒಲುಮೆಗಳನ್ನು ಬಿತ್ತಿದುವು.

ಶಾಸ್ತ್ರಿಗಳಿಗೆ ದೊರೆತ ಗುರುಪರಂಪರೆಯೂ ಎತ್ತರವಾದುದು. ಕಾಲೇಜಿನಲ್ಲಿ ಕುವೆಂಪು, ಡಿಎಲ್‌ಎನ್, ಕವೆಂರಾ, ತ.ಸು.ಶಾಮರಾವ್, ಎಸ್.ವಿ.ಪರಮೇಶ್ವರಭಟ್ಟ, ಎಸ್.ಶ್ರೀಕಂಠಶಾಸ್ತ್ರೀ, ಎಸ್.ವಿ.ರಂಗಣ್ಣ, ದೇಜಗೌರಂಥ ದಿಗ್ಗಜಗಳನ್ನು ಗುರುವರ್ಗ

ವಾಗಿ ಪಡೆದ ಧನ್ಯತೆ ಶಾಸ್ತ್ರಿಗಳದ್ದು. ಶಾಸ್ತ್ರಿಗಳು ಮೈಸೂರಿನಲ್ಲಿ ವ್ಯಾಸಂಗಮಾಡುತ್ತಿದ್ದಾಗ ಅವರ ಜ್ಞಾನದ ಹಸಿವಿಗೆ ಪುಷ್ಟಿಯಾದ ಆಹಾರವನ್ನು ಒದಗಿಸಿದ್ದು ಓರಿಯಂಟಲ್ ಲೈಬ್ರರಿ. ತಮ್ಮ ಬಿಡುವಿನ ವೇಳೆಯಲ್ಲಿ ಶಾಸ್ತ್ರಿಗಳು ವಿಶ್ರಾಂತಿಯನ್ನು ಪಡೆಯುತ್ತಿದುದು ಇಲ್ಲಿಯ ಪ್ರೌಢ'ಗ್ರಂಥ'ಗಳ ವ್ಯಾಸಂಗದಲ್ಲಿ! ಆರ್.ನರಸಿಂಹಾಚಾರ್, ಎ.ವೆಂಕಟಸುಬ್ಬಯ್ಯ, ತೀನಂಶ್ರೀ, ಡಿಎಲ್ಎನ್, ಪಿ.ಬಿ.ದೇಸಾಯಿ, ಶ್ರೀಕಂಠಶಾಸ್ತ್ರೀ, ಗೋವಿಂದಪೈ, ನಾ.ಶ್ರೀ.ರಾಜಪುರೋಹಿತ, ಆ.ನೇ.ಉಪಾಧ್ಯೆ. ಆರ್.ಜಿ.ಭಂಡಾರ್ಕರ್, ಪಿ.ವಿ.ಕಾಣೆ, ಎ.ಬಿ.ಕೀಥ್, ವೀಬರ್, ಮೇಕ್ಡನಲ್, ಎಸ್.ಕೆ.ಡೇ, ವಿ.ರಾಘವನ್, ವೇಲಣಕರ್ ಮುಂತಾದ ಸ್ವನಾಮಧನ್ಯ ಪ್ರಥಮಶ್ರೇಣಿಯ ವಿದ್ವಾಂಸರ ಕೃತಿಗಳನ್ನು ಓದುವುದೆಂದರೂ, ಓದಿ ಟಿಪ್ಪಣಿಗಳನ್ನು ಮಾಡಿಕೊಳ್ಳುವುದೆಂದರೂ ಕಾಲೇಜು ವಿದ್ಯಾರ್ಥಿಯಾಗಿದ್ದ ಶಾಸ್ತ್ರಿಗಳಿಗೆ ಉತ್ಸಾಹ. ಬಿ.ಎ. ಆನರ್ಸ್ (ಕನ್ನಡ) ತರುವಾಯ ಕನ್ನಡ ಎಂ.ಎ. ಪದವಿಯನ್ನು ಪಡೆದ ಶಾಸ್ತ್ರಿಗಳು ತಮ್ಮ ಅಧ್ಯಾಪನವನ್ನು ಪ್ರಾರಂಭಿಸಿದ್ದು ಕನಕಪುರದ ರೂರಲ್ ಕಾಲೇಜಿನಲ್ಲಿ. ಮುಂದೆ ೧೯೭೨ರಲ್ಲಿ 'ಕನ್ನಡ ನೇಮಿನಾಥ ಪುರಾಣಗಳ ತೌಲನಿಕ ಅಧ್ಯಯನ'ದ ವಿಷಯದಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಪಿಎಚ್.ಡಿ.ಯನ್ನು ಗಳಿಸಿದರು.

ಪಾಠ ಹೇಳುವುದನ್ನು ಒಂದು ಯಾಗವನ್ನಾಗಿಯೇ ಸ್ವೀಕರಿಸಿದ್ದವರು ಶಾಸ್ತ್ರಿಗಳು. ಬೆಂಗಳೂರಿನ ಸೆಯಿಂಟ್ ಜೋಸೆಫ್ಸ್ ಕಾಲೇಜು, ಹೈದರಾಬಾದಿನ ಉಸ್ಮಾನಿಯ ವಿಶ್ವವಿದ್ಯಾನಿಲಯದ ಮಹಿಳಾ ಕಾಲೇಜು ಮತ್ತು ಆರ್ಟ್ಸ್ ಕಾಲೇಜುಗಳಲ್ಲಿ ಅಧ್ಯಾಪನ ವೃತ್ತಿಯನ್ನು ಮಾಡಿ, ಅನಂತರ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಉಪನ್ಯಾಸಕರಾದರು. ಅಲ್ಲಿ ರೀಡರ್, ಪ್ರೊಫೆಸರ್, ಡೈರೆಕ್ಟರ್, ಡೀನ್ (ಕಲಾವಿಭಾಗ) ಆಗಿ ೧೯೯೪ರಲ್ಲಿ ನಿವೃತ್ತರಾದರು. ಅನಂತರ ಸ್ವಲ್ಪ ಕಾಲ ಹಂಪಿಯ ಕನ್ನಡ ವಿಶ್ವವಿದ್ಯಾನಿಲಯದ ಸಂದರ್ಶಕ ಪ್ರಾಧ್ಯಾಪಕರೂ ಆಗಿದ್ದರು. ತಮ್ಮ ಬೋಧನಾನುಭವದ ಸುಮಾರು ४೦ ವರ್ಷಗಳಲ್ಲಿ ಸುಮಾರು ೩೦ ವರ್ಷಗಳು ಸ್ನಾತಕೋತ್ತರ ವಿಭಾಗದಲ್ಲಿ ಬೋಧನೆ-ಸಂಶೋಧನೆಗಳನ್ನು ನಡೆಸಿದವರು ಶಾಸ್ತ್ರಿಗಳು. ಇವರು ಇದುವರೆಗೂ ಒಂಬತ್ತು ಮಂದಿಗೆ ಪಿಎಚ್.ಡಿ. ಮಾರ್ಗದರ್ಶನವನ್ನೂ ಮಾಡಿದ್ದಾರೆ.

ಶಾಸ್ತ್ರಿಗಳ ಯೋಗದಾನವನ್ನು ಪಡೆದಿರುವ ಸಂಸ್ಥೆಗಳೂ ಹತ್ತು ಹಲವು. ಸಾರಸ್ವತ ಜಗತ್ತಿನಲ್ಲಿ ವಿಶಿಷ್ಟವಾದ ಸ್ಥಾನವನ್ನು ಪಡೆದಿರುವ ಪ್ರಬುದ್ಧ ಕರ್ಣಾಟಕದ ಸಂಪಾದಕರಾಗಿದ್ದವರು ಶಾಸ್ತ್ರಿಗಳು. ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟುವಿನ ಪ್ರಧಾನ ಸಂಪಾದಕರಾಗಿಯೂ ಶಾಸ್ತ್ರಿಗಳು ತಮ್ಮ ಪಾಂಡಿತ್ಯವನ್ನು ವಿನಿಯೋಗಿಸಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಹಳಗನ್ನಡ ಕೃತಿಗಳ ಪ್ರಕಟನಸಮಿತಿಯ ಸದಸ್ಯರಾಗಿ ಹಲವು ಹಳಗನ್ನಡ ಗ್ರಂಥಗಳ ಮರುಪ್ರಕಟನೆಗಳಿಗೆ ಕಾರಣರಾಗಿದ್ದಾರೆ. ಏಷ್ಯನ್ ಅಧ್ಯಯನಸಂಸ್ಥೆಯ (ಮದರಾಸು) ಬಹುಭಾಷಿಕನಿಘಂಟುಯೋಜನೆಯ ಸದಸ್ಯರೂ

ಆಗಿದ್ದರು. ಇನ್ನೂ ಹಲವಾರು ಸಂಘ-ಸಂಸ್ಥೆಗಳಲ್ಲಿ ಸದಸ್ಯರಾಗಿ ಸಕ್ರಿಯವಾಗಿ ಕಾರ್ಯ ನಿರ್ವಹಿಸಿದ್ದಾರೆ. ಪ್ರಸ್ತುತ ಮೈಸೂರು ಮುಲಕನಾಡು ಸಭಾ ಮತ್ತು ಬೆಂಗಳೂರಿನ ಬಿಎಂಶ್ರೀ ಸ್ಮಾರಕ ಪ್ರತಿಷ್ಠಾನದ ಅಧ್ಯಕ್ಷರಾಗಿ ತಮ್ಮ ವಿಶಾಲವಾದ ಅನುಭವ ಮತ್ತು ವಿದ್ವತ್ತೆಯನ್ನು ಸಮಾಜದೊಂದಿಗೆ ಹಂಚಿಕೊಳ್ಳುತ್ತಿದ್ದಾರೆ.

ಶಾಸ್ತ್ರಿಗಳ ಲೇಖನಿಯಿಂದ ಜೀವನಚರಿತ್ರೆ, ಗ್ರಂಥಸಂಪಾದನೆ, ವ್ಯಾಕರಣ, ಛಂದಸ್ಸು, ಭಾಷಾಶಾಸ್ತ್ರ, ನಿಘಂಟುರಚನೆ, ಸಂಶೋಧನೆ ಮುಂತಾದ ಹಲವು ಪ್ರಕಾರಗಳ ಬಗ್ಗೆ ಸುಮಾರು ೭೦ ಪ್ರೌಢಕೃತಿಗಳು ಹೊರಬಂದಿವೆ. ಕನ್ನಡ ನೇಮಿನಾಥ ಪುರಾಣಗಳ ತೌಲನಿಕ ಅಧ್ಯಯನ, ಕನ್ನಡ ಚೆನ್ನುಡಿ, ಕನ್ನಡ ಛಂದಃಸ್ವರೂಪ, ಮಹಾಕಾವ್ಯಲಕ್ಷಣ, ನಮ್ಮ ಕರ್ನಾಟಕ, ಕನ್ನಡ ಛಂದೋಮೀಮಾಂಸೆ, ಮೆಲುಗಾಳಿಯ ಮಾತುಗಳು, ಮಾರ್ಗದರ್ಶಕ ಮಹನೀಯರು, ಹೊಸಗನ್ನಡದ ವ್ಯಾಕರಣ ಇವು ಕೆಲವು ಮುಖ್ಯವಾದ ಕೃತಿಗಳು. ಇವರು ಸಂಪಾದಿಸಿರುವ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನಸಂಸ್ಥೆಯಿಂದ ಪ್ರಕಟವಾಗಿರುವ ಕನ್ನಡ ಸಾಹಿತ್ಯಚರಿತ್ರೆಯ ಸಂಪುಟಗಳು ಕನ್ನಡ ಸಾರಸ್ವತಲೋಕದಲ್ಲಿ ಎಂದೆಂದಿಗೂ ಬೆಳಗುತ್ತಿರುವಂಥವು. ಮುದ್ರಾಮಂಜೂಷ, ಶಬ್ದಮಣಿದರ್ಪಣ, ಆದಿಪುರಾಣ, ಎಸ್.ಜಿ.ನರಸಿಂಹಾಚಾರ್ಯರ ಕವಿತೆಗಳು, ಸಿರಿಭೂವಲಯ- ಇವು ಹೆಸರಿಸಲೇಬೇಕಾದ ಇತರ ಕೆಲವು ಸಂಪಾದಿತಕೃತಿಗಳು. ಎಂ.ಶಾಮರಾಯರು, ಆರ್.ಶಾಮಶಾಸ್ತ್ರೀ ಮುಂತಾದವರನ್ನು ಕುರಿತ ಜೀವನಚರಿತ್ರೆಗಳು ಇಲ್ಲಿ ಉಲ್ಲೇಖನೀಯವಾದಂಥವು. ಶಾಸ್ತ್ರಿಗಳು ಆಕಾಶವಾಣಿಯಲ್ಲಿ ಬಿತ್ತರಿಸಿದ ಚಿಂತನೆಗಳ ಸಂಗ್ರಹವೇ ಮೆಲುಗಾಳಿಯ ಮಾತುಗಳು. ಗಜಶಾಸ್ತ್ರಶಬ್ದಕೋಶ, ಶ್ರೀವತ್ಸ ನಿಘಂಟು ಇವು ಶಾಸ್ತ್ರಿಗಳು ಸಂಪಾದಿಸಿರುವ ಕೆಲವು ಅನನ್ಯ ಕೃತಿಗಳು. ಚಿತ್ರಕಾವ್ಯ ಪ್ರಕಾರವನ್ನು ಕುರಿತ 'ಕನ್ನಡ ಚಿತ್ರಕಾವ್ಯ' ಶಾಸ್ತ್ರಿಗಳ ಮೇರುಕೃತಿಗಳಲ್ಲಿ ಒಂದು ಎಂದಾಗಿದೆ. ಶಾಸ್ತ್ರಿಗಳು ಸುಮಾರು ೪೦೦ ಲೇಖನಗಳನ್ನು ಬೇರೆ ಬೇರೆ ವಿಷಯಗಳನ್ನು ಕುರಿತಾಗಿ ಪ್ರಕಟಿಸಿದ್ದಾರೆ. ಸದ್ಯದಲ್ಲಿಯೇ ಶಾಸ್ತ್ರಿಗಳ 'ಕನ್ನಡ ಛಂದೋಮೀಮಾಂಸೆ' ಪ್ರಕಟವಾಗಲಿದೆ. ನಾಗವರ್ಮನ ಛಂದೋಂಬುಧಿಯ ಪರಿಷ್ಕೃತ ಆವೃತ್ತಿ, ಕನ್ನಡ ವಿದ್ವತ್ತೆಯ ಇತಿಹಾಸ- ಇವು ಶಾಸ್ತ್ರಿಗಳ ಮುಂದಿನ ಮಹತ್ವದ ಯೋಜನೆಗಳು.

ನಾಲ್ಕು ಸಂಪುಟಗಳಲ್ಲಿ ಪ್ರಕಟವಾಗಿರುವ 'ಶಾಸ್ತ್ರೀಯ' ಸಂಪುಟಗಳು ನಿಜಕ್ಕೂ ಶಾಸ್ತ್ರೀಯವಾದ ಬರವಣಿಗೆಗೆ ಮಾದರಿಯಾಗಬಲ್ಲಂಥವು. ಇವು ಕನ್ನಡ ವಿದ್ವತ್ ಪ್ರಪಂಚದಲ್ಲಿ ಒಂದು ದಾಖಲೆಯೇ ಹೌದು. ಶಬ್ದಾರ್ಥವಿಚಾರ, ಗ್ರಂಥಸಂಪಾದನೆ, ಭಾಷೆ, ವ್ಯಾಕರಣ, ನಿಘಂಟು, ಸಾಹಿತ್ಯಚರಿತ್ರೆ, ವಿಮರ್ಶೆ ಮುಂತಾದ ವಿಷಯಗಳ ಬಗ್ಗೆ ಸುಮಾರು ೨೦೦ ಪ್ರೌಢಲೇಖನಗಳು ಇಲ್ಲಿವೆ. ಶಾಸ್ತ್ರಿಗಳ ಸಂಶೋಧನಪ್ರಜ್ಞೆ ಇಲ್ಲಿ ಧಾರಾಳವಾಗಿ ಕಾಣಸಿಗುತ್ತದೆ. ವಿದ್ಯಾರ್ಥಿಗಳಿಗೂ ವಿದ್ವಾಂಸರಿಗೂ ಪ್ರಿಯವಾಗ ಬಲ್ಲಂಥವು ಇಲ್ಲಿಯ ಬರಹಗಳು. ಇಲ್ಲಿ ಶಾಸ್ತ್ರಿಗಳು ಎತ್ತುವ ಸಮಸ್ಯೆಗಳು, ಅವುಗಳಿಗೆ

ಕಾಣಿಸುವ ಸಮಾಧಾನಗಳು, ವಿಷಯಪ್ರತಿಪಾದನೆಯಲ್ಲಿ ನಿರುದ್ವೇಗ, ಬರಹಗಳ ಉದ್ದಕ್ಕೂ ಕಾಣುವ ತಾಳ್ಮೆ ಇಂಥ ಪ್ರಶಸ್ತಿಗುಣಗಳು ಈ ಸಂಪುಟಗಳನ್ನು ಎತ್ತರದ ಸ್ಥಾನದಲ್ಲಿರಿಸಿವೆ. ತಮ್ಮ ಈ ವಿದ್ವತ್‌ಕಾರ್ಯವನ್ನು ಕುರಿತು ಶಾಸ್ತ್ರಿಗಳು ನಿವೇದಿಸಿ ಕೊಂಡಿರುವ ಮಾತುಗಳು ಉಲ್ಲೇಖನೀಯವಾದಂಥವು. "ಕನ್ನಡ ಭಾಷಾಸಾಹಿತ್ಯಗಳ ಅಧ್ಯಯನಕ್ಷೇತ್ರದಲ್ಲಿ ಐವತ್ತರ ದಶಕದಿಂದ ಮೊದಲುಗೊಂಡು ಈವರೆಗೆ ನನ್ನ ಅಲ್ಪಶಕ್ತಿಗೆ ಅನುಗುಣವಾಗಿ ಕೃಷಿಮಾಡುತ್ತ ಬಂದಿದ್ದೇನೆ. ನನ್ನ ಪಾಲಿಗೆ ಇದು ಒಂದು ನಿತ್ಯವಿಧಿ; ಸಾಧನೆ, ಸಾಹಸ; ಭಾಷೆಯ, ಸಮಾಜದ ಋಣವನ್ನು ಸಲ್ಲಿಸಲು ನಿರಂತರ ವಾಗಿ ನಾನು ಅನುಭವಿಸುತ್ತಿರುವ ತಳಮಳ, ವಹಿಸುತ್ತಿರುವ ಶ್ರಮ. ನನ್ನ ಈ ಭಾಷಾ ಸಾಹಿತ್ಯಗಳ ಸಂಬಂಧವಾದ ಸಾಧನೆ ಸಾಹಸಗಳು, ತಳಮಳ ಶ್ರಮಗಳು ನನ್ನ ಬದುಕನ್ನು ಒಂದು ಹದಕ್ಕೆ ತಂದಿವೆ. ನಾನು ಒಬ್ಬ ಮನುಷ್ಯ ಎಂದು ನನ್ನ ಮಟ್ಟಿಗೆ ಹೇಳಿಕೊಳ್ಳುವಂತೆ ಮಾಡಿವೆ." ಶಾಸ್ತ್ರಿಗಳ ಅಂತರಂಗ ಇಲ್ಲಿ ಪ್ರತಿಧ್ವನಿತವಾಗಿದೆ, ಅವರ ಬದುಕಿಗೂ ಸರಸ್ವತೀತತ್ತ್ವಕ್ಕೂ ಇರುವ ಅವಿನಾಭಾವಸಂಬಂಧ ಎದ್ದು ಕಾಣುತ್ತದೆ.

ಶಾಸ್ತ್ರಿಗಳ ವಿದ್ವತ್‌ಕೈಂಕರ್ಯಕ್ಕೆ ಸಂದಿರುವ ಪ್ರಶಸ್ತಿಗಳು ಹಲವಾರು. ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ, ಶಂಬಾ ಜೋಶಿ ಪ್ರಶಸ್ತಿ, ಶ್ರವಣಬೆಳಗೊಳದ ಶ್ರೀ ಗೊಮ್ಮಟೇಶ್ವರ ವಿದ್ಯಾಪೀಠ ಪುರಸ್ಕಾರ, ಸೇಡಿಯಾಪು ಕೃಷ್ಣಭಟ್ಟ ಪ್ರಶಸ್ತಿ, ಚಿದಾನಂದ ಪ್ರಶಸ್ತಿ, ಐಬಿಎಚ್. ಬಹುಮಾನ, ಗ್ರಂಥಲೋಕದ ವರ್ಷದ ಲೇಖಕ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿಯ ಭಾಷಾ ಸಮ್ಮಾನ್ - ಹೀಗೆ ಹಲವು ಪ್ರಶಸ್ತಿಗಳು ಶಾಸ್ತ್ರಿಗಳ ಮುಡಿಯನ್ನೇರಿವೆ. ಇವರ ಕನ್ನಡ ಛಂದಸ್ಸು, ಕನ್ನಡ ಚಿತ್ರಕಾವ್ಯ, ಕನ್ನಡ ಛಂದೋವಿಹಾರ -ಈ ಕೃತಿಗಳಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಸಂದಿದೆ. ಶಾಸ್ತ್ರಿಗಳ ವಿದ್ಯಾರ್ಥಿಗಳು ಅಭಿಮಾನಿಗಳು 'ಶ್ರೀಮುಖ' ಎಂಬ ಅಭಿನಂದನಗ್ರಂಥವನ್ನು ಅರ್ಪಿಸಿದ್ದಾರೆ.

ಶಾಸ್ತ್ರಿಗಳು ದಿಟವಾಗಿಯೂ ನಮ್ಮ ನಡುವೆ ಇರುವ ಮೊದಲ ದರ್ಜೆಯ ವಿದ್ವಾಂಸರು. ಚಿಕಾಗೋ ವಿಶ್ವವಿದ್ಯಾನಿಲಯದ ದಕ್ಷಿಣ ಏಷಿಯಾ ಭಾಷೆಗಳು ಮತ್ತು ಸಂಸ್ಕೃತಿ ವಿಭಾಗದ ಅಧ್ಯಕ್ಷರಾಗಿರುವ ಷೆಲ್‌ಡನ್ ಪೋಲಕ್ "ಶತಮಾನದ ಎರಡನೆಯ ಭಾಗದ ಕನ್ನಡ ಮಹಾವಿದ್ವಾಂಸರು ಶಾಸ್ತ್ರಿಗಳು. ಇವರು ತಮ್ಮ ಸಂಸ್ಕೃತಿಗೆ ಗೌರವವನ್ನೂ ಕಳೆಯನ್ನೂ ತಂದುಕೊಟ್ಟಿದ್ದಾರೆ" ಎಂದಿದ್ದಾರೆ. ಡಾ.ಕೆ.ಕೃಷ್ಣಮೂರ್ತಿಗಳು ಶಾಸ್ತ್ರಿಗಳನ್ನು "ವಿದ್ವಾಂಸರಲ್ಲಿ ರತ್ನ" ಎಂದು ಉದ್ಗರಿಸಿದ್ದರು. "ಶಾಸ್ತ್ರಿಯವರು ನಮ್ಮ ನಡುವಿನ ಕನ್ನಡ ವಿದ್ವಾಂಸರಲ್ಲಿ ಎತ್ತರದವರು. ಖಚಿತತೆ ಅವರ ಪಾಂಡಿತ್ಯದ ಲಕ್ಷಣ" ಎಂದು ಹಾ.ಮಾ.ನಾಯಕ ಕೊಂಡಾಡಿದ್ದಾರೆ. "ಹಳಗನ್ನಡದ ಬಗ್ಗೆ ಏನಾದರೂ ವಿವಾದ, ಸಮಸ್ಯೆಗಳು ಉಂಟಾದಲ್ಲಿ ಡಾ.ಶಾಸ್ತ್ರಿಗಳ ಅಭಿಪ್ರಾಯ ನಿಲವಾಗುವುದಿಲ್ಲ, ತೀರ್ಪು

ಆಗುತ್ತದೆ" ಎಂದು ಡಾ.ಎನ್.ಎಸ್.ತಾರಾನಾಥ್ ಪ್ರಶಂಸಿಸಿದ್ದಾರೆ. ಡಾ.ಎಂ. ಚಿದಾನಂದ ಮೂರ್ತಿಯವರು "ಡಾ.ಶಾಸ್ತ್ರಿಗಳ ಕಲಿಕೆ ಅದ್ಭುತವಾದುದು. ಜ್ಞಾಪಕಶಕ್ತಿ ಅಷ್ಟೇ ಅದ್ಭುತವಾದುದು. ಅವರ ಬರಹಗಳಲ್ಲಿ ವ್ಯರ್ಥ ಊಹೆಗಳು ಕಾಣುವುದಿಲ್ಲ. ಅವರ ನಿರ್ಧಾರಗಳನ್ನು ತಳ್ಳಿಹಾಕಬೇಕಾದರೆ ಸ್ವಲ್ಪ ಯೋಚನೆ ಮಾಡಬೇಕಾಗುತ್ತದೆ. ಇವು ನಿಶ್ಚಿತವಾಗಿಯೂ ಶ್ರೇಷ್ಠಸಂಶೋಧಕನ ಮನೋಧರ್ಮದ ಕುರುಹುಗಳು" ಎಂದು ಹೊಗಳಿದ್ದಾರೆ. ಇಷ್ಟೆಲ್ಲ ಪ್ರಶಂಸೆಗಳ ಮಹಾಪೂರದ ನಡುವೆಯೂ ಶಾಸ್ತ್ರಿಗಳು ತಮ್ಮ ಸರಳ ಸಜ್ಜನಿಕೆಗಳಿಗೆ ದೂರವಾದವರಲ್ಲ. ಹೀಗೆಂದು ತಮ್ಮ ಅಭಿಪ್ರಾಯಗಳನ್ನು ನೇರ ವಾಗಿ, ಖಚಿತವಾಗಿ ವ್ಯಕ್ತಪಡಿಸಲು ಹಿಂಜರಿಯುವವರಲ್ಲ. ಆದರೆ ಎಲ್ಲಿಯೂ ಆಗ್ರಹದ ಸೊಲ್ಲು ಇರದು.

"ಕನ್ನಡ ವಿದ್ವತ್‌ಪರಂಪರೆ ತಲೆಮಾರಿನಿಂದ ತಲೆಮಾರಿಗೆ ಉತ್ಕ್ರಾಂತಿ ಪಡೆಯುತ್ತ ಬಂದುದಕ್ಕೆ ಸಾಕ್ಷಿಯಾಗಿ ಶಾಸ್ತ್ರಿಗಳಂಥವರು ಸದಾ ವಿದ್ವನ್ಮಾನಸರಾಜಹಂಸಗಳಾಗಿ ಕ್ಷೀರನೀರಗಳನ್ನು ಬೇರ್ಪಡಿಸುತ್ತ ಮಾನಸ್ತಂಭಗಳಾಗಿ ವಿರಾಜಿಸುತ್ತಾರೆ" ಎಂದ ಶ್ರೇಷ್ಠ ವಿದ್ವಾಂಸ ಡಾ.ಕೆ.ಕೃಷ್ಣಮೂರ್ತಿಗಳ ಮಾತು ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿಗಳಿಗೆ ಎಂದಿಗೂ ಸಲ್ಲತಕ್ಕುದೇ ಹೌದು.

ಕನ್ನಡ ಛಂದಃಪ್ರಭೆ

ಎಸ್.ಎಂ.ಗಿರಿಜಾಪತಿ

ಸಾಹಿತ್ಯ ಆಯಾ ಕಾಲಘಟ್ಟಗಳಲ್ಲಿನ ಸಮಾಜ, ಸಂಸ್ಕೃತಿ, ಧರ್ಮ, ರಾಜಕೀಯ ಇತ್ಯಾದಿ ಸಂದರ್ಭಗಳಿಗೆ ಅನುಗುಣವಾಗಿ ಪಲ್ಲಟಗಳನ್ನು ಕಂಡಂತೆ ಶಾಸ್ತ್ರವೂ ಅನೇಕ ಬಗೆಯ ಸ್ಥಿತ್ಯಂತರಗಳಲ್ಲಿ ತನ್ನ ಆರ್ಷೇಯ ನಿಲುವುಗಳಲ್ಲಿ ಪರಿಷ್ಕರಣಕ್ರಿಯೆಗೆ ಒಳಗಾಗಿದೆ. ಇನ್ನೂ ಒಳಗಾಗುತ್ತಲೇ ಇದೆ. ಹೀಗೆ ಕ್ರಿಯಾತ್ಮಕವಾಗಿರುವ ಕಾವ್ಯನಿರ್ಮಿತಿ ವಿನ್ಯಾಸದ ಪಾತಳಿಯ ಶಾಸ್ತ್ರದಲ್ಲಿ ಛಂದಸ್ಸು ಬಹುಮುಖ್ಯವಾದದ್ದು. ಛಂದಶ್ಶಾಸ್ತ್ರ ಬಹುಮೂಲ್ಯವಾದದ್ದು, ಕಾವ್ಯಗಳ ಅಂತಸ್ಥ ಧ್ವನಿ ಹಾಗೂ ಬಾಹ್ಯಸ್ಥ ಆವರಣವೂ ಆಗಿರುವಂತಹುದು.

ಬಹುತೇಕ ಭಾರತೀಯ ಭಾಷೆಗಳಿಗೆ ಈ ಶಾಸ್ತ್ರ ಸಂವಿಧಾನದ ಛಂದಸ್ಸಿಗೆ ಪ್ರೇರಣೆ ದೊರೆತದ್ದು ಸಂಸ್ಕೃತದಿಂದ. ಕನ್ನಡವೂ ಇದಕ್ಕೆ ಹೊರತಾಗಿಲ್ಲ. ದ್ರಾವಿಡ ಪರಿವಾರದ ದೇಶೀಯತೆಗೆ ಲಿಪಿಸಂಸ್ಕಾರ ದೊರೆಯುವುದಕ್ಕಿಂತ ಆರಂಭಕಾಲದ ಕನ್ನಡ ಕಾವ್ಯಕ್ಕೆ ಸಂಸ್ಕೃತದ 'ಮಾರ್ಗ'ದ ಲಕ್ಷಣಗಳಿಂದ ದೊರೆತದ್ದು ಬಹಳ. ತದನಂತರ ದೇಶೀಯ ಧ್ವನಿಯ ಛಂದಸ್ಸು ಸಹ ಅದರ ಲಯದ ನಡಿಗೆಗಳನ್ನು ದಾಖಲಿಸಿದ್ದು, ಕನ್ನಡದ್ದೇ ಆದ ಛಂದಃಶ್ರೀಯನ್ನು ಬೆಳೆಸಿತು.

ಪಾಶ್ಚಾತ್ಯ ಶಿಕ್ಷಣದಿಂದ ಮೈದೋರಿದ ಹೊಸಗನ್ನಡ ಛಂದಸ್ಸು ನವ ಮನ್ವಂತರವನ್ನು ಕಾವ್ಯಲೋಕಕ್ಕೆ ತೆರೆದಿಟ್ಟಿತು. ಹಾಗಾಗಿ ಛಂದಸ್ಸು ಭಾರತೀಯಕಾವ್ಯಪರಂಪರೆಯ ಜೀವದ್ರವ್ಯ. ಕನ್ನಡದ ಆದಿಕವಿ ಪಂಪಮಹಾಕವಿಯ ಮಾರ್ಗ ದೇಸಿ ಸಮನ್ವಯದ ಛಂದಸ್ಸತ್ವದಿಂದ ಕವಿಋಷಿ ಕುವೆಂಪುರವರ ಮಹಾಕಾವ್ಯ ಶ್ರೀರಾಮಾಯಣ ದರ್ಶನಂ ಮಹಾಛಂದಸ್ಸಿನವರೆಗೂ ವಿಸ್ತೃತ ಬಾಹುಳ್ಯವನ್ನು ಪಡೆದಿರುವಂತಹುದು.

ಇಷ್ಟೊಂದು ವಿಸ್ತೃತ ಬಾಹುಳ್ಯದ ಛಂದೋನಿಧಿಯನ್ನು ಶೋಧಿಸುವ, ಪರಿಶೋಧಿಸುವ ಶಾಸ್ತ್ರಜ್ಞರು ನಮ್ಮಲ್ಲಿ ಬೆರಳೆಣಿಕೆಯಷ್ಟು ಮಾತ್ರ ಕಾಣಸಿಗುತ್ತಾರೆ. ಅದರಲ್ಲಿಯೂ ಈಗಿನ ಆಧುನಿಕ ವಿದ್ಯಮಾನಗಳಲ್ಲಿ ಇನ್ನೂ ಕಡಿಮೆ. ಶಾಸ್ತ್ರ ಪರಂಪರೆ ಇಂದು ಪೂರ್ಣ ಅವಜ್ಞೆಗೆ ಗುರಿಯಾಗಿದೆ. ಇಂತಹ ಸಂದರ್ಭದಲ್ಲಿ ಈ ಛಂದಃಶಾಸ್ತ್ರದಲ್ಲಿ ಗುರುತರವಾದ ಕಾರ್ಯನಿರ್ವಹಿಸಿದ ಛಾಂದಸಮಹೋದಯರೆಂದರೆ ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿಯವರು. ಈ 'ಟಿ.ವಿ.ವಿ'ಯವರ ರೀತಿಯ ಚಿಕಿತ್ಸಾತ್ಮಕ ಅಧ್ಯಯನ ದಲ್ಲಿ ಛಂದಃಶಾಸ್ತ್ರದ

ಎಲ್ಲ ಆಯಾಮಗಳು, ಒಳಕೋನಗಳು ಕಾವ್ಯಗಳ ಸೋದಾಹರಣೆಗಳ ಮೂಲಕ ಕೃತಿಗಳಲ್ಲಿ ಇಡಿಕಿರಿದಿವೆ ಎಂಬುದು ಒಪ್ಪಬೇಕಾದ ಸತ್ಯ.

ಕನ್ನಡ ಓದುವ ವಿದ್ಯಾರ್ಥಿಗಳಿಗೆ, ಓದಿಸುವ ಅಧ್ಯಾಪಕರಿಗೆ ಡಾ.ಟಿ.ವಿ.ವಿ. ಚಿರಪರಿಚಿತಶಾಸ್ತ್ರಜ್ಞರು. ಹಾಗಾಗಿ 'ಛಂದಸ್ಸೆಂದರೆ ಟಿ.ವಿ.ವಿ.ಕಣೋ' ಎನ್ನದಿರುವ ಸಂದರ್ಭಗಳು ಇರಲಿಕ್ಕಿಲ್ಲ. ಛಂದಸ್ಸು ಕುರಿತು ಸಂಶೋಧನಪ್ರಬಂಧ ಮಂಡಿಸಿದ ಮತ್ತೊಬ್ಬ ಶಾಸ್ತ್ರಾನ್ವೇಷಿ ಡಾ.ಡಿ.ಎಸ್.ಕರ್ಕಿಯವರ ಕನ್ನಡ ಛಂದೋವಿಕಾಸ ಒಂದು ಬಗೆಯ ಚೌಕಟ್ಟಿನದಾದರೆ, ಡಾ.ಟಿ.ವಿ.ವಿ.ಯವರ ಸ್ವಶೋಧನೆಯಲ್ಲಿ ಮೂಡಿಬಂದ ಛಂದೋಮಿಮಾಂಸೆಗಳು ಹತ್ತಾರು ಆಯಾಮಗಳನ್ನು ಒಳಗೊಂಡಿರುವಂತಹವು.

ಉತ್ಕೃಷ್ಟ ಕಾವ್ಯಪರಂಪರೆಯ ಸಂಸ್ಕೃತದ ಛಂದಸ್ಸಿನ ಪಡಿನೆಳಲನ್ನು ಕನ್ನಡದ ಕಾವ್ಯವಲಯಗಳಲ್ಲಿ ವಿಶೇಷವಾಗಿ ಹಳೆಗನ್ನಡ ವಾಙ್ಮಯದಲ್ಲಿ, ಎಳೆ-ಎಳೆಯಾಗಿ ಗುರುತಿಸಿಕೊಂಡು ಶಾಸ್ತ್ರಿಯವರು ಗ್ರಹಿಸಿದಷ್ಟು ಸೂಕ್ಷ್ಮ ಹಾಗೂ ಸ್ಥೂಲವಾಗಿ ಗ್ರಹಿಸಿದವರು ವಿರಳ ಸಂಸ್ಕೃತ ಘನವಿದ್ವಾಂಸರ ಸಾಲಿನವರು, ವಿದ್ವಾನ್ ಸೇಡಿಯಾಪು ಕೃಷ್ಣಭಟ್ಟರು ಈ ಕಾರ್ಯ ಮಾಡಿದ್ದಾರೆಂದರೂ ಅವರ ಬರಹಗಳ ಪ್ರೌಢತೆ ಜೀರ್ಣಿಸಿಕೊಳ್ಳುವುದು ಕಠಿಣವಾಗುವಂತಹದು. ಇದಕ್ಕೆ ಉತ್ತಮ ಉದಾಹರಣೆಯೆಂದರೆ ಡಾ.ಟಿ.ವಿ.ವಿ.ಯವರ ಕೃತಿ "ಕನ್ನಡ ಛಂದೋಮೀಮಾಂಸೆ".

ಸಂಸ್ಕೃತಭೂಯಿಷ್ಠತೆಯ ಛಂದಸ್ರೋತಸರನ್ನು ಶಾಸ್ತ್ರಿಗಳು ಅದರ ಅನುಕರ್ತರಂತೆ ಇಲ್ಲಿನ ಕನ್ನಡದೊಂದಿಗೆ ವ್ಯವಹರಿಸಿಲ್ಲ. ಕನ್ನಡ ಸಮದರ್ಶಿತ್ವಕ್ಕೆ ಒಗ್ಗಿಸಿಕೊಂಡು ಪರಾಮರ್ಶಿಸಿ ವ್ಯವಹರಿಸಿದ್ದಾರೆ. ಹಾಗಾಗಿ ಟಿ.ವಿ.ವಿ.ಯವರ ಛಂದೋವಿಹಾರಗಳಲ್ಲಿ ಸಂಸ್ಕೃತ, ಪ್ರಾಕೃತ, ಅಪಭ್ರಂಶ, ದ್ರಾವಿಡ, ಕನ್ನಡ ಇತ್ಯಾದಿ ಎಲ್ಲಾ ಪ್ರಭೇದಗಳ ಛಂದಃಪ್ರಜ್ಞೆ ಕಾಣಿಸಿಗುತ್ತದೆ. ಜೊತೆ ಜೊತೆಗೆ ಕಾವ್ಯಗಳ ಅವಲೋಕನಾವಿಧಾನದಲ್ಲಿ ಕಾವ್ಯ ಮೀಮಾಂಸೆಯ ರಸಪರಿಕಲ್ಪನೆಗಳು, ಅಲಂಕಾರ, ಅಲಂಕಾರಪ್ರಭೇದಗಳು, ಕವಿಸಮಯದಂತಹ ಲಕ್ಷಣ್ಯಗಳು ಮುಂತಾದ ವಿಸ್ತೃತ ಚರ್ಚೆಗಳ ಮುಖಾಮುಖಿ ಕಂಡುಬರುತ್ತದೆ. ದೇಸೀಯತೆಗೆ ಮಿಡಿದ ಪಂಪ, ಕಾಳಿದಾಸ ಭಾರವಿಯವರಿಗೆ ಒಲಿದಿದ್ದ ರನ್ನ, ಸಂಸ್ಕೃತ ಕವಿಗಳಿಗಿಂತಲೂ ಹೆಚ್ಚಾಗಿ ಕನ್ನಡದಲ್ಲಿ ಸಂಸ್ಕೃತದ ಚಂಪೂಪರಂಪರೆಯನ್ನು ಬಳಸಿಕೊಂಡ ಕವಿಶ್ರೇಷ್ಠರು ಇವರೆಲ್ಲಾ ಶಾಸ್ತ್ರಿಯವರ ಶಾಸ್ತ್ರ ಸರ್ವೇಕ್ಷಣಾವಿಧಾನದಿಂದ ಛಂದಸ್ಸಿನ ಅಧ್ಯಯನಕ್ಕೆ ಉತ್ತಮ ಭೂಮಿಕೆಯನ್ನು ನಿರ್ವಹಿಸಿದ್ದಾರೆ. ಇವರ ಛಂದೋ ದುರ್ಬೀನಿನಲ್ಲಿ ಛಂದೋಬಾಂದಳದ ತಾರಾಶೈಲಿಗಳನ್ನು ಎಣಿಕೆಮಾಡಿವೆ. ಹಾಗಾಗಿ ಶ್ರೀಯುತರ ಛಂದಸ್ಸಿನ ಕೃತಿಗಳು ಛಂದಸ್ಸಿನ ಓದಿಗೆ ಮಾತ್ರ ಆಕರಗಳೆನಿಸದೆ ಕಾವ್ಯ ಪ್ರಪಂಚದ ರಾಚನಿಕ ಹೊಳಹುಗಳನ್ನು ದರ್ಶಿಸುವ ಆಕರಗಳೆನಿಸಿವೆ.

ಕೊನೆಯದಾಗಿ ಈ ಲೇಖನಕ್ಕೆ ವಿರಾಮವಿಡುವ ಮುನ್ನ ಡಾ.ಟಿ.ವಿ.ವಿ.ಯವರ ಬರಹದ ಶೈಲಿ, ಭಾಷೆಯ ದುಡಿಮೆಯ ಬಗ್ಗೆ ತುಂಬು ಅಭಿಮಾನ ಹಾಗೂ ವಿನಯದಿಂದ

ಹೇಳಬೇಕಾಗುತ್ತದೆ. ಶಾಸ್ತ್ರದ ನೀರಸತನಕ್ಕೆ ಕಾವ್ಯಪರಿಶೋಧನೆಯಿಂದ, ಅದರ ಕಾವ್ಯ ಪರಿಕರಗಳನ್ನು ವಿವೇಚಿಸಿದ ಶಾಸ್ತ್ರಿಯವರು ಸರಳವಾದ, ನೇರ ಹಾಗೂ ಸ್ಪಷ್ಟ ಶೈಲಿಯನ್ನು ಬಳಸಿರುವಂತಹುದು. ಹದವಾದ ಹೃದ್ಯಸಂವಾದಗಳೊಂದಿಗೆ ಮೃದುತ್ವದ ಸ್ಪರ್ಶ ನೀಡಿ ಓದಾಳಿತನಕ್ಕೆ ಉತ್ಸಾಹದಾಯಕವಾಗಿ ಕೃತಿಗಳನ್ನು ಬೆಳೆಸಿರುವುದು.

ಛಂದಃಶಾಸ್ತ್ರದ ಬಗ್ಗೆ ನನ್ನಲ್ಲಿದ್ದ ಒಲವಿನ ಮೂಲಕ ಇಂತಹ ವಿದ್ವನ್ಮಣಿಗಳಿಗೆ ಕೃತಜ್ಞತೆಯನ್ನರ್ಪಿಸಲು ಈ ಮೂಲಕ ಅವಕಾಶದೊರೆತದ್ದು ನನಗೊದಗಿದ ಭಾಗ್ಯ. ಡಾ.ಟಿ.ವಿ.ವಿ.ಯವರಿಗೆ ಗೌರವಪೂರ್ವಕ ವಂದನೆಗಳು.

ಸಾರ್ಥಕಜೀವಿ

ತಲಕಾಡು ವಿಶ್ವಸಮಾಜ ವೆಂಕಟೇಶ್
(ಡಾ.ಆರ್.ವೆಂಕಟೇಶ್)

ಕನ್ನಡ ಸಾಹಿತ್ಯಗಂಗೋತ್ರಿಯಲ್ಲಿ ಅನರ್ಘ್ಯರತ್ನಗಳ ಸಾಲುಸಾಲೇ ಇದೆ! ಈ ಮುತ್ತುರತ್ನಗಳ ಪ್ರಭೆಯಿಂದ ಕಣ್ಣೇ ಕೋರೈಸುತ್ತದೆ. ಒಂದೇ, ಎರಡೇ, ನೂರಾರು ಅಥವಾ ಸಾವಿರಾರು ಪ್ರತಿಭೆಗಳ ನಿತ್ಯೋತ್ಸವ ಈ ಕರ್ನಾಟಕದ ಕರ್ಮಭೂಮಿಯಲ್ಲಿ ಸಾಗುತ್ತಾ ತನ್ನ ಕಂಪನ್ನು ದಶದಿಕ್ಕುಗಳಲ್ಲೂ ಹರಡುತ್ತಿದೆ, ನಿಸಾರರ 'ನಿತ್ಯೋತ್ಸವ' ಎಂಬ ಗೀತೆಯ ಅಕ್ಷರಶಃ ಸತ್ಯವನ್ನು ಮನವರಿಕೆಮಾಡಿಕೊಡುತ್ತಿದೆ. ಅಂದಿನ ಉತ್ತಂಗಿ ಚೆನ್ನಪ್ಪ, ಕಿಟ್ಟೆಲ್, ಪಂಜೆ ಮಂಗೇಶರಾಯರು, ಆಲೂರು ವೆಂಕಟರಾಯರು, ಫ.ಗು.ಹಳಕಟ್ಟಿ, ಎಸ್.ಎಸ್.ಬಸವನಾಳರಿಂದ ಇಂದಿನ ಕಲಬುರ್ಗಿ, ಚಿದಾನಂದ ಮೂರ್ತಿ, ಎಲ್.ಬಸವರಾಜು ಮುಂತಾದ ಪ್ರಾತಃಸ್ಮರಣೀಯ ನಿತ್ಯ ಸೇವಾಧುರಂಧರ ರಲ್ಲಿ ಟಿ.ವಿ.ವೆಂಕಟಾಚಲ ಶಾಸ್ತ್ರಿಗಳ ಸಾಧನೆ ಸುವರ್ಣಮಾಧ್ಯಮದ್ದಾಗಿದೆ! ಅವರು ಕನ್ನಡದ ಪಾಣಿನಿ ಡಿ.ಎಲ್.ಎನ್. ಅವರ ಮೇರು ಸದೃಶ್ಯವ್ಯಕ್ತಿತ್ವಕ್ಕೆ ಸರಿಸಾಟಿಯಾಗಿ ದ್ದಾರೆ.

ಮೈಸೂರು ಮಹಾನಗರ ಸಾಂಸ್ಕೃತಿಕವೈಭವದ ಕೇಂದ್ರಸ್ಥಾನವೆನಿಸಿದೆ. ಅಲ್ಲಿ ಜಯಲಕ್ಷ್ಮೀಪುರಂ ದಿವ್ಯತೆಯ ಸೊಬಗಿನ ಸೋನೆಯಂತಹ ಪು.ತಿ.ನ. ನೆಲೆಸಿದ್ದರಿಂದ ಪಾವಿತ್ರ್ಯ ಗಳಿಸಿದೆ. ಅದೇ ಸ್ಥಳದಲ್ಲಿ ಕನ್ನಡದ ಕಡುಗಲಿ ಹಾಮಾನಾ, ದಿಗ್ಗಜ ಎಲ್. ಬಸವರಾಜು ಅವರುಗಳ ಮನೆಗೆ ತೀರ ಸಮೀಪದಲ್ಲಿ ಟಿ.ವಿ.ವೆಂಕಟಾಚಲ ಶಾಸ್ತ್ರಿ ಗಳವರು ನೆಲೆಸಿದ್ದಾರೆ. ಷಟ್ಪದಿಯ ಸೊಗಸು, ಏಳೆಯ ಏಳ್ಗೆ, ತ್ರಿಪದಿಯ ಲಯ ಇತ್ಯಾದಿಗಳನ್ನು ಟಿ.ವಿ.ವಿ. ಅವರ ಬಾಯಿಯಿಂದ ಕೇಳಿದರೆ ಅದರ ಸೊಬಗೇ ಬೇರೆ! ಅವರ ಇನಿದನಿಯ ಬೆಡಗಿನಿಂದ ಆ ಎಲ್ಲ ವಿಧದ ಕಾವ್ಯದ ಸಮಸ್ತವೂ ನಮಗೆಲ್ಲ ಪ್ರತ್ಯಕ್ಷವಾದಂತೆಯೇ! ಅಷ್ಟೇ ಅಲ್ಲ, ಒಂದೊಂದು ಛಂದಸ್ಸಿನ ವೈಖರಿ ವೈಶಿಷ್ಟ್ಯಗಳೂ ಮನದಟ್ಟಾಗುತ್ತದೆ! ನಿಘಂಟುಶಾಸ್ತ್ರದ ಇಟ್ಟಿಗೆಗಳನ್ನು ತಮ್ಮ ಸಂಶೋಧನೆಯ ಸಿಮೆಂಟಿನಿಂದ ಗಟ್ಟಿಗೊಳಿಸಿದ ಶ್ರೇಯಸ್ಸೂ ಕೂಡಾ ಈ ಟಿ.ವಿ.ವಿ. ಅವರದೇ! ಶಬ್ದಗಳ ವ್ಯುತ್ಪತ್ತಿ ಅಥವಾ ಉಗಮವನ್ನು ಈಗ ಒಬ್ಬ ಜಿ.ವಿ. ಇನ್ನೊಬ್ಬ ಟಿ.ವಿ.ವಿ ಇಬ್ಬರೇ ಹೇಳಬಲ್ಲರೆಂಬಲ್ಲಿ ಯಾವ ಸಂಶಯವೂ ಇಲ್ಲ. "ವ್ಯಾಕರಣವೇ ಬೇಕಿಲ್ಲ. ಶಬ್ದಮಣಿ

ದರ್ಪಣದ ಅಗತ್ಯವಿಲ್ಲ" ಎಂದೆಲ್ಲ ವಾದಿಸುವ ಕನ್ನಡದ ಪ್ರೊಫೆಸರುಗಳ, ಆಧುನಿಕ ವಿದ್ವಾಂಸರುಗಳ ತಳಬುಡವಿಲ್ಲದ ವಾದಪಿವಾದಗಳಿಗೆ ವೆಂಕಟಾಚಲ ಶಾಸ್ತ್ರಿಗಳ ಬಳಿ ಉತ್ತರವಿದೆ. ಭಾಷೆಯ ಕಟ್ಟಡದಲ್ಲಿ ವ್ಯಾಕರಣದ ತಳಹದಿಯ ಮಹತ್ವವನ್ನು ಅವರು ಮನಗಾಣಿಸಿದ್ದಾರೆ. ವಿವಿಧ ಭಾಷೆಗಳ ಪದಪುಂಜಗಳ ನಾನಾ ಹಿನ್ನೆಲೆಯಲ್ಲಿ ಕನ್ನಡದ ಸೊಂಪು, ಕಂಪು, ಇಂಪುಗಳನ್ನು ಅವರು ಮನಗಾಣಿಸಿದ್ದಾರೆ. ಈ ದಿಶೆಯಲ್ಲಿ ಸೇಡಿಯಾಪು ಕೃಷ್ಣಭಟ್ಟ, ಮುಳಿಯ ತಿಮ್ಮಪ್ಪಯ್ಯ ಮುಂತಾದವರ ಪರಂಪರೆಗೆ ಶಾಸ್ತ್ರಿಗಳು ಸೇರಿದ್ದಾರೆ.

ಜಾನಪದ, ಶಾಸನ, ಕಾವ್ಯ ಈ ಮೂರರ ಅವಿನಾಭಾವ ಸಂಬಂಧದ ಎಳೆಗಳನ್ನು ಬಿಡಿಸಿದ ಅವುಗಳ ಸೂಕ್ಷ್ಮತೆಯನ್ನು ತೀ.ನಂ.ಶ್ರೀ. ಅವರ 'ಭಾರತೀಯಕಾವ್ಯ ಮೀಮಾಂಸೆ' ಎಂಬ ಆಚಾರ್ಯಕೃತಿಯಲ್ಲಿ ಕಾಣಬಹುದು. ಇದೇ ದಾರಿಯಲ್ಲಿ ಮುನ್ನಡೆದು ಟಿ.ವಿ.ವಿ. ಅವರು ಕನ್ನಡ ಸಾಹಿತ್ಯದ ಮೂಲೆಮೊಡಕುಗಳನ್ನೆಲ್ಲ ಬೆಳಕು ಹಿಡಿದು ತೋರಿದ್ದಾರೆ. ಪಂಪ, ರಾಘವಾಂಕ, ಜನ್ನ, ಶರಣರು, ಹೊಸಗನ್ನಡದ ಖ್ಯಾತ ಸಾಹಿತಿಗಳು ಇವರೆಲ್ಲರ ಆಳ-ಅಗಲಗಳನ್ನು ವಿಮರ್ಶೆಯ ನರುಗಂಪಿನ ಮೂಲಕ ಹೊರಹಾಕಿದ್ದಾರೆ. ಶ್ರೀ ಕುವೆಂಪು ಅವರ ರಸವಿಮರ್ಶೆಯ ಶೈಲಿಯಲ್ಲಿ ಸಾಗಿದ ಶಾಸ್ತ್ರಿಗಳ ವಿಮರ್ಶಾಕೌಶಲವು ಕಾವ್ಯಮೀಮಾಂಸೆಯ ಸಹೃದಯತತ್ವಕ್ಕೆ ಕುಂದಣವಿಟ್ಟಂತೆ ಕಂಗೊಳಿಸುತ್ತದೆ. ಕುಂದಣಗಾರ, ಆ.ನೇ.ಉಪಾಧ್ಯೆ, ಶಂಬಾ ಜೋಶಿ ಮುಂತಾದ ಸಂಶೋಧಕರ ಜಾಡಿನಲ್ಲಿ ವೆಂಕಟಾಚಲ ಶಾಸ್ತ್ರಿಗಳು ಇಟ್ಟ ಒಂದೊಂದು ಹೆಜ್ಜೆ ಎಂಬ ಅವರ ಛಂದಸ್ಸಿನ ಗ್ರಂಥವಿರಲಿ, ವ್ಯಾಕರಣದ ಕೃತಿಯಿರಲಿ, ನಿಘಂಟು ಶಾಸ್ತ್ರಸೌರಭವಿರಲಿ, ವಿಮರ್ಶೆಯ ಬಗೆಗಿನ ಕುಂದಣಗಳಿರಲಿ ಎಲ್ಲವೂ ಸೂಕ್ಷ್ಮ ಕುಸುರಿ ಕೆಲಸದ ಅಪೂರ್ವಶಿಲ್ಪಗಳೇ ಆಗಿವೆ. ನಡೆನುಡಿಗಳಂತೂ ಮೋಹಕವಾಗಿವೆ. ಒಬ್ಬ ಸಂಶೋಧಕ ತನ್ನ ದಂತಗೋಪುರದಲ್ಲಿ ಮುಳುಗಿ, ಪಾಂಡಿತ್ಯದ ಪ್ರಭೆಯಲ್ಲಿ ಕರಗಿಹೋಗಿ ಜನಸಾಮಾನ್ಯರಿಂದ ಬಹುದೂರ ಸಾಗುತ್ತಾ "ತನಗೆ ತಾನೇ ಮೇರು ಶಿಖರದಂತೆ ಮೆರೆಯುವುದು" ಎಂದಿಗೂ ಶೋಭಾವಹ ವರ್ತನೆಯಲ್ಲ. ಅಂತಹ ವರ್ತನೆಗೆ ವಿರೋಧವಾಗಿ ಕನ್ನಡದ ಪುಣ್ಯಪುರುಷರಾದ ಡಿ.ವಿ.ಜಿ., ಮಾಸ್ತಿ, ಗೋಕಾಕ್, ಪು.ತಿ.ನ, ಅಡಿಗ, ಗೊರೂರು ಮುಂತಾದವರು ವರ್ತನೆಯ ವಿನ್ಯಾಸದಲ್ಲಿ, ಶ್ರೇಷ್ಠ ಧ್ಯೇಯ ಧೋರಣೆಯಲ್ಲಿ ಸದಾಕಾಲಕ್ಕೂ ಗೌರವಕ್ಕೆ ಪಾತ್ರರಾಗಿದ್ದಾರೆ. ಅಂತೆಯೇ ಶಾಸ್ತ್ರಿಗಳವರು ಈ ಎಲ್ಲ ಮಹನೀಯರ ಅನನ್ಯ ಅಚ್ಚಿನ ಪಡಿಯೆರಕದಂತಹ ಕನ್ನಡ ವಾಙ್ಮಯದ ನಡೆನುಡಿಮಿಲನದ ಪಂಪನಿಂದ ಕುವೆಂಪುವರೆಗಿನ ಅದ್ಭುತಪರಂಪರೆಯ ಭವ್ಯ ನಿಲುಗಂಬದಂತಿದ್ದಾರೆ. ಅವರೊಡನೆ ಮಾತಾಡುವುದು ಒಂದು ಒಳ್ಳೆಯ ಅನುಭವ! "ಸಜ್ಜನರ ಸಂಗವದು ಹೆಜ್ಜೇನ ಸವಿದಂತೆ" ಎಂಬ ಸರ್ವಜ್ಞನ ಸೂಕ್ತಿಗೆ ಇಂತಹವರೇ ಪ್ರತ್ಯಕ್ಷ ಪ್ರಮಾಣ. ಈ ತೋಗೆರೆ ವೆಂಕಟಸುಬ್ಬಶಾಸ್ತ್ರೀ ವೆಂಕಟಾಚಲ ಶಾಸ್ತ್ರೀ ಅರ್ಥಾತ್ ನೆಚ್ಚಿನ ಟಿ.ವಿ.ವಿ. ಅವರಿಗೆ ನಮ್ಮೆಲ್ಲರ ಹೃತ್ಪೂರ್ವಕ ನಮನಗಳು.

ಆದರ್ಶ ಅಧ್ಯಾಪಕ

ಬಿ.ಎಸ್. ಸಣ್ಣಯ್ಯ

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನಸಂಸ್ಥೆಯಲ್ಲಿ ಟಿ.ವಿ. ವೆಂಕಟಾಚಲ ಶಾಸ್ತ್ರಿಯವರು ಅಧ್ಯಾಪಕ ಪ್ರಾಧ್ಯಾಪಕರಾಗಿದ್ದಾಗ್ಗೆ ನಾವಿಬ್ಬರೂ ಆಗಾಗ್ಗೆ ಸೇರುತ್ತಿದ್ದುದುಂಟು. ಹೀಗೆ ಸೇರುವುದೆಂದರೆ ಬರಿಯ ಕಾಲಹರಣಕ್ಕಲ್ಲ; ಓಲೆಗ್ರಂಥಗಳ ಪರಿಶೀಲನೆಗಾಗಿ. ತಮ್ಮ ಅಧ್ಯಾಪಕವೃತ್ತಿಯಲ್ಲಿ ಪಾಠಮಾಡುವಾಗ ಕಂಡುಬಂದ ಪಾಠಕ್ಲೇಶಗಳ ಪರಿಹಾರಕ್ಕಾಗಿ ಓಲೆಗ್ರಂಥಗಳ ಮೊರೆಹೋಗುವಾಗ ನಮ್ಮಲ್ಲಿಗೆ ಬಂದು ಹಸ್ತಪ್ರತಿಗಳ ಪರಿಶೀಲನೆ ಮಾಡುವಲ್ಲಿ ನಾನು ನೆರವಾಗಿರುವುದುಂಟು. ಇಂತಹ ಕಾರ್ಯಗಳಲ್ಲಿಯೇ ಅವರು ತಮ್ಮ ಬಹುಕಾಲವನ್ನು ವ್ಯಯಿಸಿರುವುದುಂಟು. ಆ ರೀತಿಯ ಸಂಶೋಧನದೃಷ್ಟಿಯಿದ್ದುದರಿಂದಲೇ ಇಂದು ಅವರ ಬಹುಪಾಲು ಬರವಣಿಗೆಗಳೆಲ್ಲವೂ ವಿದ್ವತ್ಪೂರ್ಣವಾಗಿವೆ; ಇತರ ವಿದ್ವಾಂಸರಿಗೆ ಮಾರ್ಗದರ್ಶಕ ವಾಗಿವೆ. ಇವರ ಇಂತಹ ಚಿಂತನೆಯ ಫಲವಾಗಿಯೇ ಅನೇಕ ವಿಚಾರಪೂರಿತ ಲೇಖನಗಳು ವಿವಿಧೆಡೆಗಳಲ್ಲಿ ಪ್ರಕಾಶಿತವಾಗಿವೆ. ಇದರ ಫಲವಾಗಿ ಇವರ ನೂರಾರು ಲೇಖನಗಳು 'ಶಾಸ್ತ್ರೀಯ' ಎಂಬ ಹೆಸರಿನಲ್ಲಿ ಆರು ಬೃಹತ್ ಸಂಪುಟಗಳಲ್ಲಿ ವಿಸ್ತರಗೊಂಡಿರುವುದು. ಶಾಸ್ತ್ರಿಗಳ ವಿದ್ವತ್ ಪರಿಪೂರ್ಣತೆಗೆ ಅವು ಸಾಕ್ಷಿಯಾಗಿವೆ; ಮುಂದಣ ಸಂಶೋಧಕರಿಗೆ ಮಾರ್ಗದರ್ಶಿಯಾಗಿವೆ.

ಕನ್ನಡ ಅಧ್ಯಯನಸಂಸ್ಥೆಯಿಂದ ಪ್ರಕಟವಾಗಿರುವ ಕನ್ನಡ ಸಾಹಿತ್ಯಚರಿತ್ರೆಯ ಪರಿಪೂರ್ಣತೆಗಾಗಿ ಅಗಾಧ ಶ್ರಮವಹಿಸಿ ಕೆಲಸಮಾಡಿರುವುದುಂಟು. ಈ ಯೋಜನೆಯಲ್ಲಿ ಹೊರಬಂದಿರುವ ಐದು ಸಂಪುಟಗಳಲ್ಲಿ ಅನೇಕ ಹಿರಿಯ ಕಿರಿಯ ಲೇಖಕರ ಬರವಣಿಗೆಗಳಿವೆ. ಅವುಗಳ ಪರಿಪೂರ್ಣತೆಗೆ ವಿವಿಧ ರೀತಿಯಲ್ಲಿ ಕಾರಣ ವಾಗಿರುವುದು ಶಾಸ್ತ್ರಿಗಳ ಉತ್ಸಾಹಪೂರಿತ ಮಾರ್ಗದರ್ಶನ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಈ ಸಂಪುಟಗಳು ಕನ್ನಡ ಸಾಹಿತ್ಯಕ್ಷೇತ್ರದಲ್ಲಿ ಶಾಶ್ವತ ಸ್ಥಾನವನ್ನು ಪಡೆದಿವೆ; ವಿದ್ವದ್ವಲಯದ ಮೆಚ್ಚುಗೆಗೆ ಪಾತ್ರವಾಗಿವೆ. ಅಂತೆಯೇ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಹೊರಬಂದಿರುವ 'ಕನ್ನಡ ನಿಘಂಟು'ವಿನ ಎಂಟು ಸಂಪುಟಗಳ ಪರಿಪೂರ್ಣತೆಯಲ್ಲಿ ಶಾಸ್ತ್ರಿಗಳ ಪಾತ್ರ ಗಣನೀಯವಾಗಿದೆ ಎಂಬುದು ಕೆಲವರಿಗಾದರೂ ತಿಳಿದ ವಿಷಯವೇ ಆಗಿದೆ.

ಶಾಸ್ತ್ರೀ ಎಂಬ ಹೆಸರಿಗೆ ಅನ್ವರ್ಥವಾಗಿ ಶಾಸ್ತ್ರಿಯ ವಿಷಯಗಳಲ್ಲಿ ವಿಶೇಷ ಪರಿಣತಿಯನ್ನು ಪಡೆದಿದ್ದು, ವ್ಯಾಕರಣ ಛಂದಸ್ಸು ಗ್ರಂಥಪರಿಷ್ಕರಣೆಗೆ ತಮ್ಮ ಅಮೂಲ್ಯ ಸಮಯವನ್ನು ವ್ಯಯಿಸಿದ್ದಾರೆ. ಆದುದರಿಂದಲೇ ಈ ಕೃತಿಗಳಲ್ಲಿ ಆದಷ್ಟೂ ಪರಿಪಕ್ವತೆಯನ್ನು ಕಾಣಬಹುದು. ಆದಿಪುರಾಣದಂತಹ ಹಿರಿಯ ಕಾವ್ಯದಲ್ಲಿ ಕಂಡು ಬರುವ ಕೆಲವು ಅಶುದ್ಧಪಾಠಗಳನ್ನು ಸರಿಪಡಿಸುವುದರಲ್ಲಿ ಅಗಾಧಪಾಂಡಿತ್ಯ ಪ್ರತಿಭೆ ಗಳನ್ನು ಗುರುತಿಸಬಹುದು.

ಇವರು ಸಿದ್ಧಪಡಿಸಿರುವ 'ಕನ್ನಡ ಚಿತ್ರಕಾವ್ಯ' ಇವರ ವಿದ್ವತ್ತನ್ನು ಸಾದರಪಡಿಸುವ ವಿಶೇಷ ಗ್ರಂಥವಾಗಿದೆ. ಚಿತ್ರಕಾವ್ಯವನ್ನು ರಚಿಸಿರುವ ಅನೇಕ ಸಂಸ್ಕೃತ ಕನ್ನಡ ಕವಿಗಳಿಂದ ಆರಿಸಿ ಸೇರಿಸಿ ವಿಮರ್ಶಿಸಿರುವ ರೀತಿ ದೊಡ್ಡ ಸಾಹಸದ ಕೆಲಸವಾಗಿದೆ. ಅನೇಕ ಕವಿಗಳು ಲಾಕ್ಷಣಿಕರು ರಚಿಸಿರುವ ಚಿತ್ರ ವಿಚಿತ್ರ ರೀತಿಯ ಬರವಣಿಗೆಯನ್ನು ವೈದುಷ್ಯತೆಯಿಂದ ವಿಮರ್ಶಿಸಿದ್ದಾರೆ; ಅವುಗಳಲ್ಲಿ ಕಂಡುಬರುವ ವಿಶೇಷತೆಯನ್ನು ಗುರುತಿಸಿದ್ದಾರೆ.

ಶಾಸ್ತ್ರಿಗಳು ತಾವು ಗಳಿಸಿದ ಜ್ಞಾನವನ್ನು ತಮ್ಮ ವಿದ್ಯಾರ್ಥಿಗಳಿಗೆ ಉತ್ತಮ ರೀತಿಯಲ್ಲಿ ಧಾರೆಯೆರೆದು ತಮ್ಮ ಬದುಕನ್ನು ಸಾರ್ಥಕಪಡಿಸಿಕೊಂಡಿದ್ದಾರೆ. ಯಾವುದೇ ಪಠ್ಯವಾಗಲಿ ವಿಶೇಷ ಅಭ್ಯಾಸದಿಂದ ವಿದ್ಯಾರ್ಥಿಗಳಿಗೆ ಹೇಳುವ ರೀತಿ, ವಿಮರ್ಶಿಸುವ ಮಾರ್ಗಗಳಿಂದ ಆದರ್ಶ ಅಧ್ಯಾಪಕರಾಗಿ ಕಂಡುಬರುವವರು, ಶಾಸ್ತ್ರಿಗಳು. ಯಾವುದೇ ರೀತಿಯಲ್ಲಾದರೂ ಸರಿಯೇ, ವಿದ್ಯಾರ್ಥಿಗಳು ಪರಿಪೂರ್ಣಪಾಠದಿಂದ ವಂಚಿತರಾಗ ಬಾರದೆಂಬುದೇ ಶಾಸ್ತ್ರಿಗಳ ಅಭಿಲಾಷೆಯಾಗಿದ್ದಿತು. ಆದುದರಿಂದಲೇ ಗ್ರಂಥಸಂಪಾದನೆ ವಿಷಯದಲ್ಲಿ ಕೆಲವು ಸಾರಿ ನನ್ನನ್ನು ಕರೆದು ವಿದ್ಯಾರ್ಥಿಗಳಿಗೆ ವಿಷಯವಿವೇಚನೆಯನ್ನು ಮಾಡಿಸಿರುವುದುಂಟು. ಒಟ್ಟಿನಲ್ಲಿ ಶಾಸ್ತ್ರಿಗಳು ವಿದ್ಯಾರ್ಥಿಗಳ ಪಾಲಿಗೆ ಅಚ್ಚುಮೆಚ್ಚಿನ ಆದರ್ಶತೆಯ ಅಧ್ಯಾಪಕರಾಗಿದ್ದುದು ಅವರ ವಿಶೇಷ ಗುಣಗಳಿಂದ.

ವೆಂಕಟಾಚಲ ಶಾಸ್ತ್ರಿಗಳ ವಿಶೇಷಗುಣವೆಂದರೆ ಯಾರನ್ನೂ ಎಂದೂ ದೂಷಿಸದಿರುವುದು; ವಿದ್ವಾಂಸರಾರೇ ಬಂದರೂ ಅವರ ಸಮಸ್ಯೆಗಳನ್ನು ಸಾವಧಾನದಿಂದ ಪರಿಶೀಲಿಸಿ ಸಾಧ್ಯವಾದಷ್ಟು ಬಗೆಹರಿಸುವುದು. ಇವರು ಸದಾ ಒಂದಲ್ಲ ಒಂದು ಗ್ರಂಥದ ಅಧ್ಯಯನ ಸಂಶೋಧನದಲ್ಲಿಯೇ ನಿರತರಾಗಿರುತ್ತಾರೆ. ಅವರು ಈ ಕಾರ್ಯ ತತ್ಪರತೆಯ ಬಾಹುಳ್ಯದಿಂದ ಕೂಡಿರುವುದನ್ನು ತಿಳಿದಂತಹವರು ತಮ್ಮ ಸಾಹಿತ್ಯ ಸಮಸ್ಯೆಗಳನ್ನು ಅವರಲ್ಲಿ ಹೋಗಿ ಹೇಳಿಕೊಳ್ಳಲು ಹಿಂಜರಿಯುವುದುಂಟು. ಇದರಿಂದ ಅವರಿಗೆ ಬೇಸರವಾಗುವುದೆಂಬ ಅಂಜಿಕೆಯಲ್ಲ; ಬದಲಾಗಿ ಅವರ ಅಮೂಲ್ಯವೇಳೆ ಯನ್ನು ನಮ್ಮ ಕೆಲಸಕ್ಕೆ ಉಪಯೋಗಿಸಿಕೊಳ್ಳಬೇಕಾಗಿದೆಯಲ್ಲ ಎಂಬ ಸದ್ಭಾವನೆಯಿಂದ. ಆದರೆ ಬೇರೆ ದಾರಿಗಾಣದಾದಾಗ ನಮ್ಮಂತಹವರು ಅವರಲ್ಲಿ ಹೋಗಿ ಸಹಾಯ ಪಡೆದಿರುವುದುಂಟು.

ಶಾಸ್ತ್ರಿಗಳು ಇಂದಿನ ತಲೆಮಾರಿನ ಒಬ್ಬ ಸಜ್ಜನ ಸಾಹಿತ್ಯಸಂಶೋಧಕರು. ಡಿ.ಎಲ್.

ನರಸಿಂಹಾಚಾರ್, ಎ.ವೆಂಕಟಸುಬ್ಬಯ್ಯ ಅಂತಹ ಹಿರಿಯ ವಿದ್ವಾಂಸರ ಪರಂಪರೆಯಲ್ಲಿ ಬೆಳೆದುಬಂದಿರುವ ಅವರ ವಿದ್ವತ್‌ಪರಿಪೂರ್ಣತೆ ಅನೇಕ ವಿದ್ವಾಂಸರ ಮನ್ನಣೆಗೆ ಪಾತ್ರವಾಗಿದ. ಅವರ ಮೃದುಸ್ವಭಾವ ಹಿರಿಯರ ಮೆಚ್ಚುಗೆಯಿಂದ ಸಮೃದ್ಧವಾಗಿದೆ. ಅವರ ಆದರ್ಶವ್ಯಕ್ತಿತ್ವ ಅನೇಕ ಹಿರಿಯ ಕಿರಿಯ ವಿದ್ಯಾರ್ಥಿಸಮೂಹಕ್ಕೆ ಮಾರ್ಗ ದರ್ಶಕವಾಗಿದೆ.

ವಿದ್ವತ್ತಿನ ಪರ್ವತ

ವೈ.ಸಿ.ಭಾನುಮತಿ

ನನ್ನ ವಿದ್ಯಾಗುರುಗಳಲ್ಲಿ ಕೆಲವರು ಡಿ.ಎಲ್.ನರಸಿಂಹಾಚಾರ್ಯರ ಶಿಷ್ಯರಾಗಿದ್ದರು. ಹಾಗಾಗಿ ಬೋಧನೆಯ ನಡುವೆ ಅವರನ್ನು ಉಲ್ಲೇಖಿಸುತ್ತಿದ್ದರು. ಅವರು 'ನಡೆದಾಡುವ ವಿಶ್ವಕೋಶ' ಎಂಬ ವಿಶೇಷಣಕ್ಕೆ ಪಾತ್ರರಾಗಿದ್ದುದನ್ನು ಮೇಲಿಂದ ಮೇಲೆ ಪ್ರಸ್ತಾಪಿಸುತ್ತಿದ್ದರು. ಆದರೆ ಅಂಥ ವ್ಯಕ್ತಿಗಳನ್ನು ನೋಡುವ ಭಾಗ್ಯ ನನ್ನದಾಗಿರಲಿಲ್ಲ. ಆದರೆ ೧೯೭೫ರಲ್ಲಿ ಕನ್ನಡ ಅಧ್ಯಯನಸಂಸ್ಥೆಗೆ ಉದ್ಯೋಗಿಯಾಗಿ ಬಂದು ವಿದ್ವಾಂಸರಾದ ಟಿ.ವಿ.ವೆಂಕಟಾಚಲ ಶಾಸ್ತ್ರಿಗಳನ್ನು ಪ್ರಥಮವಾಗಿ ಪ್ರತ್ಯಕ್ಷವಾಗಿ ಕಂಡಾಗ ನೆನಪಾದದ್ದೇ ಕಾಣದ ಆ ಡಿ.ಎಲ್.ಎನ್. ಅವರು. ಆ ವೇಳೆಗಾಗಲೇ ಅವರು ವಿದ್ವತ್ತನ್ನು ಆರ್ಜಿಸಿಕೊಂಡು ವಿದ್ವಾಂಸರ ಪಟ್ಟಿಯಲ್ಲಿ ಸೇರಿಹೋಗಿದ್ದರು. ಛಂದಸ್ಸು, ವ್ಯಾಕರಣ, ಹಳಗನ್ನಡ ಸಾಹಿತ್ಯಗಳನ್ನು ಕರಗತಮಾಡಿಕೊಂಡು ಕನ್ನಡ ವಿದ್ವತ್‌ಕ್ಷೇತ್ರದಲ್ಲಿ ಹೆಸರುಮಾಡಿದ್ದರು. ಹಾಗಾಗಿ ಕಿರಿಯಳಾಗಿ ಹೋಗಿದ್ದ ನನಗೆ ಅವರನ್ನು ಮಾತನಾಡಿಸುವಷ್ಟು ಯೋಗ್ಯತೆ ಇಲ್ಲವೆಂದುಕೊಂಡು ಹಿಂಜರಿಕೆಯಿಂದ ಬಹಳ ಅಂತರದಲ್ಲಿರುತ್ತಿದ್ದೆ, ದೂರದಿಂದಲೆ ಗಮನಿಸುತ್ತಿದ್ದೆ. ಶಾಸ್ತ್ರಿಗಳದು ವೇಗದ ನಡಿಗೆ. ಬೆಳಿಗ್ಗೆ ಸಂಸ್ಥೆಗೆ ಬರುವಾಗ ಎಷ್ಟು ಚುರುಕಾಗಿ ನಡೆದುಕೊಂಡು ಬರುತ್ತಿದ್ದರೋ, ಅದೇ ನಡಿಗೆಯ ಗತಿ ಹಿಂದಿರುಗುವಾಗಲೂ ಎಂಬುದು ವಿಶೇಷ. ತುಂಬ ತ್ವರಿತವಾಗಿ ಅವರು ಹೋಗುವುದನ್ನು ನೋಡಿದಾಗ ಅವರು ಯಾವ ಗ್ರಂಥವನ್ನು ಪರಿಶೀಲಿಸಲು ಹೊರಟಿದ್ದಾರೋ ಎಂಬ ಭಾವನೆ ನನ್ನಲ್ಲಿ ಮೂಡುತ್ತಿತ್ತು.

ಕನ್ನಡ ಅಧ್ಯಯನಸಂಸ್ಥೆಗೆ ಕಳೆದ ಶತಮಾನದ ೧೯೭೦-೮೦ರ ದಶಕವೆಂದರೆ ಸುವರ್ಣ ಕಾಲ. ಹಲವಾರು ಗ್ರಂಥಗಳು, ಅನೇಕ ಯೋಜನೆಗಳು ಸಾಕಾರಗೊಂಡ ಕಾಲ. ಶಾಸ್ತ್ರಿಗಳು ಕುವೆಂಪು ಕನ್ನಡ ಅಧ್ಯಯನಸಂಸ್ಥೆಯ ಸಾಹಿತ್ಯಚರಿತ್ರೆಯ ಐದು ಸಂಪುಟಗಳನ್ನು ತಮ್ಮ ಶಿಷ್ಯ ಡಾ.ಎನ್.ಎಸ್.ತಾರಾನಾಥರೊಂದಿಗೆ ರೂಪಿಸಿಕೊಟ್ಟಿದ್ದು ಇದೇ ಅವಧಿಯಲ್ಲಿ. ಅವರು ಈ ಸಂಪುಟಗಳಿಗಾಗಿ ಅರ್ಪಣಾಮನೋಭಾವದಿಂದ ಕೆಲಸಮಾಡಿದರು. ಅವು ಇಂದಿಗೂ ಅನುಪಮ ಪ್ರಮಾಣಗ್ರಂಥಗಳಾಗಿ ವಿಶಿಷ್ಟ ಸ್ಥಾನ ಗಳಿಸಿಕೊಂಡಿರುವುದರ ಹಿಂದೆ ಶಾಸ್ತ್ರಿಗಳ ಸಂಶೋಧನದೃಷ್ಟಿ, ಪ್ರತಿಭೆ, ಪಾಂಡಿತ್ಯ, ಪರಿಶ್ರಮಗಳಿವೆ. ಈ ಸಂಪುಟಗಳಿಗಾಗಿ ಲೇಖನಗಳನ್ನು ಬರೆಸುತ್ತಿದ್ದುದು, ಅವುಗಳನ್ನು ತಿದ್ದಿ ಪರಿಷ್ಕರಿಸಿ ಕರಡುಗಳ ವರೆಗೆ ವಿವಿಧ ಹಂತಗಳಲ್ಲಿ ದುಡಿಯುತ್ತಿದ್ದ ರೀತಿ ಕಣ್ಣಿಗೆ ಕಟ್ಟಿದಂತಿದೆ.

ನಮ್ಮ ಸಂಪಾದನವಿಭಾಗದ ಅಂದಿನ ಉಪನಿರ್ದೇಶಕರಾಗಿದ್ದ ಎಸ್.ಬಸವಾರಾಧ್ಯ ಅವರು ಯಾವುದಾದರೂ ಶಬ್ದದ ಬಗ್ಗೆ ಸಂಶಯ ತಲೆದೋರಿದರೆ ಶಾಸ್ತ್ರಿಗಳೊಡನೆ ಚರ್ಚಿಸುತ್ತಿದ್ದರು. ಛಂದಸ್ಸು, ವ್ಯಾಕರಣ, ಸಂಶೋಧನೆಗೆ ಸಂಬಂಧಿಸಿದಂತೆ ಅಧಿಕೃತವಾಗಿ ನಿಖರವಾಗಿ ತಿಳಿಸಬಲ್ಲವರಾಗಿದ್ದುದರಿಂದ ಪ್ರಾಧ್ಯಾಪಕರ ಪಂಕ್ತಿಯಲ್ಲಿ ಗೌರವಕ್ಕೆ ಪಾತ್ರರಾಗಿದ್ದರು. ಇವರು ನಿವೃತ್ತರಾದ ದಿನ ಇವರನ್ನು ಕುರಿತು ಮಾತನಾಡಿದ ಪ್ರಾಧ್ಯಾಪಕರೊಬ್ಬರು 'ನಮಗೆ ಇನ್ನು ಯಾರಿದ್ದಾರೆ' ಎಂಬ ಭಾವನೆ ಉಂಟಾಗುತ್ತಿದೆ ಎಂದಿದ್ದ ಮಾತು ಉತ್ಪ್ರೇಕ್ಷೆಯಲ್ಲ. ಈ ಸಂದರ್ಭದಲ್ಲಿ ವೈಯಕ್ತಿಕ ಸಂಗತಿಯೊಂದು ನೆನಪಿಗೆ ಬರುತ್ತಿದೆ: ಪ್ರಾಚೀನ ಕನ್ನಡ ಸಾಹಿತ್ಯದಲ್ಲಿರುವ ಬತ್ತೀಸ ಪುತ್ತಳಿ ಕೃತಿಗಳನ್ನು ನಾನು ೧೯೬೮ರಲ್ಲಿ ಸಂಪಾದಿಸಿ ಕನ್ನಡ ಅಧ್ಯಯನಸಂಸ್ಥೆಯ ಮೂಲಕ 'ಬತ್ತೀಸ ಪುತ್ತಳಿ ಕಥೆ' ಎಂದು ಒಂದು ಸಂಪುಟವಾಗಿ ಪ್ರಕಟಿಸಿದೆ. ಅದರ ಮೊದಲ ಪ್ರತಿ ಬಂದಾಗ ಶಾಸ್ತ್ರಿಗಳಿಗೆ ತೋರಿಸಿದೆ. ಆಗ ಅವರು 'ಪುತ್ತಳಿ' ಹೇಗೆ ಬರೆದಿದ್ದೀರ ನೋಡೋಣ ಎಂದು ಮೊದಲು ಶೀರ್ಷಿಕೆಯ ಕಡೆಗೆ ಕಣ್ಣು ಹಾಯಿಸಿದರು. ಸಾಮಾನ್ಯವಾಗಿ ಅಲ್ಪ ಪ್ರಾಣ 'ತ' ಅಕ್ಷರಕ್ಕೆ ಮಹಾಪ್ರಾಣ 'ಥ'ದ ಒತ್ತು ಕೊಡುತ್ತಾರೆ. ನೀವು ಸರಿಯಾಗಿ ಬರೆದಿದ್ದೀರಿ ಎಂದು ಮೆಚ್ಚುಗೆ ಸೂಚಿಸಿದರು. ಇಂದಿಗೂ ಅನೇಕರು ತಮ್ಮ ಅರೆ ತಿಳಿವಳಿಕೆಯಿಂದ 'ಪುತ್ತಳಿ' ಎಂದು ನಿಮ್ಮ ಪುಸ್ತಕದಲ್ಲಿ ತಪ್ಪಾಗಿದೆ ಎನ್ನುವುದುಂಟು. ಆಗೆಲ್ಲ ನಾನು ಶಾಸ್ತ್ರಿಗಳನ್ನು ಉಲ್ಲೇಖಿಸಿ ಸಮರ್ಥಿಸಿಕೊಳ್ಳುತ್ತೇನೆ.

ಶಾಸ್ತ್ರಿಗಳ ಪ್ರಥಮ ಒಲವು ಹಳಗನ್ನಡ ಸಾಹಿತ್ಯ. ಹಾಗಾಗಿ ಅವರು ಅಧ್ಯಯನಸಂಸ್ಥೆ ನಿರ್ದೇಶಕರಾಗಿದ್ದಾಗ ಕುಮಾರವ್ಯಾಸಭಾರತದ ಸವಿಮರ್ಶಪರಿಷ್ಕರಣ ಕುರಿತು ಯು.ಜಿ.ಸಿ ವತಿಯಿಂದ ವಿಚಾರಸಂಕಿರಣ ಏರ್ಪಡಿಸಿದ್ದರು. ಹಾಗೆಯೇ ಎಂ.ಆರ್.ಶ್ರೀ ಅವರ ಶತಮಾನೋತ್ಸವದ ಅಂಗವಾಗಿಯೂ ಅವರ ಕೃತಿಗಳನ್ನು ಕುರಿತು ವಿಚಾರ ಸಂಕಿರಣ ಆಯೋಜಿಸಿದ್ದರು. ಇವೆರಡೂ ಬಹಳ ಮೌಲ್ಯಯುತವಾಗಿದ್ದವು.

ಶಾಸ್ತ್ರಿಗಳು ಇಂದಿಗೂ ಸಾಧನೆಯನ್ನು ಮುಂದುವರಿಸಿಕೊಂಡು ಬರುತ್ತಿದ್ದಾರೆ. ಈ ವಯಸ್ಸಿನಲ್ಲಿಯೂ ಅವರು ದುಡಿಯುವ ರೀತಿ ಬೆರಗುಂಟುಮಾಡುತ್ತದೆ. ರೈಲಿನಲ್ಲಿ ಕರಡು ತಿದ್ದುತ್ತಲೇ ಪ್ರಯಾಣಿಸುತ್ತಾರೆ. ಹಿಂದಿನಂತೆಯೇ ಬರವಣಿಗೆಗೆ ಮುನ್ನ ತಲಸ್ಪರ್ಶಿಯಾದ ಅಧ್ಯಯನ ನಡಸುತ್ತಾರೆ. ಪರಿಪೂರ್ಣತೆ ಅವರ ಗುರಿ. ಈಚೆಗೆ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಪಂಪನ ಕೃತಿಗಳನ್ನು ಸಂಪಾದಿಸಿಕೊಟ್ಟರು. ಅದು ಪರಿಷ್ಕರಣಗಳನ್ನು ಆಧರಿಸಿಯೇ ಮರುಪರಿಷ್ಕರಣ ತರುವಂಥ ಕೆಲಸವಾಗಿತ್ತು. ಆದರೆ ಶಾಸ್ತ್ರಿಗಳು ಹಾಗೆ ಮಾಡದೆ ಪಾಠಸಮಸ್ಯೆಗಳನ್ನೆಲ್ಲ ಪಟ್ಟಿ ಮಾಡಿಕೊಂಡುಬಂದು ನಮ್ಮ ಹಸ್ತಪ್ರತಿ ಭಂಡಾರದಲ್ಲಿರುವ ಪ್ರತಿಗಳನ್ನು ಪರಿಶೀಲಿಸಿದ ಬಳಿಕವೇ ಮುದ್ರಣಪ್ರತಿ ಕಳಿಸಿಕೊಟ್ಟರು. ಅಧ್ಯಯನಸಂಸ್ಥೆಯ ಗ್ರಂಥಭಂಡಾರದ ಕೆಲವು ಕಪಾಟುಗಳಲ್ಲಿದ್ದ ಪುಸ್ತಕಗಳನ್ನು ಇವರಲ್ಲದೆ ಬೇರೆಯವರು ಬಳಸಿದ್ದನ್ನು ನಾನು ನೋಡಲಿಲ್ಲ.

ಕೆಲವು ತಿಂಗಳುಗಳ ಹಿಂದೆ ಬೆಳಗಾವಿಯ ನಾಗನೂರು ಮಠದ ವತಿಯಿಂದ ಜಿಲ್ಲಾ ಪರಂಪರೆ ಕುರಿತು ಎರಡು ದಿನದ ವಿಚಾರಸಂಕಿರಣ ಜರುಗಿತು. ಇದರ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ಶಾಸ್ತ್ರಿಗಳದು. ನಾನು ಒಂದು ಗೋಷ್ಠಿಯಲ್ಲಿ ಪ್ರಬಂಧ ಮಂಡಿಸ ಬೇಕಾಗಿದ್ದುದರಿಂದ ಅವರ ಸಹಪ್ರಯಾಣಿಕಳಾಗಿದ್ದೆ. ವಿದ್ವಾಂಸರೊಡನೆ ಪಯಣಿಸುವ ಅನುಭವವೇ ಬೇರೆ. ಶಾಸ್ತ್ರಿಗಳು ಅಂದು ಜನಾಂಗಗಳ ಉಗಮದ ಬಗ್ಗೆ ಹಲವು ವಿಚಾರಗಳನ್ನು ತಿಳಿಸುತ್ತ ಹೋದರು. ಅವರು ಮುಲಕನಾಡು ಬ್ರಾಹ್ಮಣರನ್ನು ಕುರಿತು ಅನನ್ಯವಾದ ಗ್ರಂಥವನ್ನು ರಚಿಸಿರುವುದು ತಿಳಿದ ವಿಚಾರ. ಇದು ಸಾಗರದಾಚೆಗೂ ಪ್ರಸಿದ್ಧವಾಗಿದೆ. ಈ ಹಿನ್ನೆಲೆಯಲ್ಲಿಯೇ ಅನೇಕ ಅಂಶಗಳನ್ನು ಚರ್ಚಿಸಿದರು.

ಕನ್ನಡ ವಿದ್ವತ್‌ಲೋಕ ಶಾಸ್ತ್ರಿಗಳ ಹಾಗೂ ಅವರ ಹಿರಿಯ ತಲೆಮಾರಿನ ವಿದ್ವಾಂಸರ ಕೊಡುಗೆಗಳಿಂದ ಸಂಪದ್ಭರಿತವಾಗಿದೆ. ಆದರೆ ಈಗ ಸಾಹಿತ್ಯಲೋಕದ ಅಭಿರುಚಿಗಳು ಭಿನ್ನವಾಗಿರುವುದರಿಂದ ಹೆಚ್ಚು ಶ್ರಮೆಯನ್ನು ಬೇಡುವ ವಿದ್ವತ್‌ಗಿರಿಯನ್ನು ಏರುವ ಸಾಹಸಕ್ಕೆ ಕೈಹಾಕುವವರು ವಿರಳ. ಡಿ.ಎಲ್.ಎನ್. ಅವರು 'ವಿದ್ವತ್ತು ನೀರಾಗುತ್ತಿದೆ' ಎಂದು ಶಾಸ್ತ್ರಿಗಳಿಗೆ ಹೇಳಿದ್ದನ್ನು ಅವರು ಆಗಾಗ ಸ್ಮರಿಸಿಕೊಳ್ಳುವುದುಂಟು. ವಿದ್ವತ್ ಕ್ಷೀಣಿಸು ತ್ತಿರುವ ನಮ್ಮ ಕಾಲದಲ್ಲಿ ಅವರ ಕಿರಿಯ ಸಮಕಾಲೀನಳಾಗಿ ಕೆಲಸ ಮಾಡಿದೆನೆಂಬುದೇ ಹೆಮ್ಮೆಯ ಸಂಗತಿಯಾಗಿದೆ.

ವಿನಯಸಂಪನ್ನರು

ಕೆ.ಎಸ್.ಎನ್.ಉಡುಪ

೧೯೮೮-೮೯ರ ಶೈಕ್ಷಣಿಕ ವರ್ಷ. ನಾನು ಮುಂಬಯಿ ವಿವಿ ಕನ್ನಡ ವಿಭಾಗದಲ್ಲಿ ಎಂಫಿಲ್ ವಿದ್ಯಾರ್ಥಿ. ವಿಭಾಗಮುಖ್ಯಸ್ಥ ಡಾ.ಶ್ರೀನಿವಾಸ ಹಾವನೂರರು ಮಾರ್ಗ ದರ್ಶಕರು. ನಾವಿನ್ನೂ ನಾವು ಸಲ್ಲಿಸಬೇಕಾದ ಕಿರುಪ್ರಬಂಧದ ಬಗ್ಗೆ ನಿರ್ಣಯಕ್ಕೆ ಬಂದಿರಲಿಲ್ಲ. ಒಮ್ಮೆ ಅವರು ಸಾಂದರ್ಭಿಕವಾಗಿ ಹೊಸಗನ್ನಡ ಅರುಣೋದಯ ಕಾಲದಲ್ಲಿ ರಚಿತವಾದ 'ಮುದ್ರಾಮಂಜೂಷ' ಕೃತಿಯ ಬಗ್ಗೆ ಇನ್ನಷ್ಟು ಹೊಸ ವಿಷಯ ಗಳನ್ನು ಹೇಳಲು ಅವಕಾಶವಿದೆಯೆಂದರು. ಸಹಪಾಠಿಗಳು, ಮಾರ್ಗದರ್ಶಕರು ಎಲ್ಲಾ ಚರ್ಚಿಸಿ ಆ ವಿಷಯವನ್ನು ನಾನು ಆಯ್ಕೆ ಮಾಡಿಕೊಳ್ಳುವುದೆಂದು ತೀರ್ಮಾನಿಸಿದೆವು. ಡಾ.ಹಾವನೂರರು ಆ ವಿಷಯದಲ್ಲಿ ಈಗಾಗಲೇ ಅಧ್ಯಯನ ಮಾಡಿದ ವಿದ್ವಾಂಸರು ಗಳನ್ನು ಕಂಡು ಚರ್ಚಿಸಬೇಕೆಂದೂ, ಅಂತಹವರಲ್ಲಿ ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿಗಳು ಒಬ್ಬರೆಂದೂ ಹೇಳಿದರು. ಅವರ ಆದೇಶದಂತೆ ನಾನು ಮೈಸೂರಿನ ಮಾನಸಗಂಗೋತ್ರಿಗೆ ಹೋಗಿ, ಶಾಸ್ತ್ರಿಯವರ ನಾಮಫಲಕವಿದ್ದ ಕೊಠಡಿಯ ಒಳಹೊಕ್ಕೆ. ಗಂಭೀರವದನರಾದ ನಡುವಯಸ್ಕರೊಬ್ಬರು ತಮ್ಮದೇ ಕಾರ್ಯಭಾರದಲ್ಲಿ ಮುಳುಗಿದ್ದರು. ನಮಸ್ಕರಿಸಿದೆ. ಅವರೇ ಶಾಸ್ತ್ರಿಗಳೆಂದು ಗೊತ್ತಾಯಿತು. ನಾನು ಮುದ್ರಾಮಂಜೂಷದ ಮುದ್ರಿತಪ್ರತಿ ಯಲ್ಲಿಯ ಶ್ಲೋಕಗಳ ಮೂಲ ಆಕರಗಳನ್ನು ಗುರುತಿಸಿದ್ದಾಗಿ ಹೇಳಿದಾಗ, ವಿಶೇಷ ಕುತೂಹಲಿಗರಾಗಿ ಕೇಳತೊಡಗಿದರು. ಅಲ್ಲಿಂದ ಮತ್ತೆ ನಮ್ಮದು ಅನ್ಯೋನ್ಯಸಂಬಂಧ. ಗುರುಶಿಷ್ಯಬಾಂಧವ್ಯ.

ಅವರೂ ನವದೆಹಲಿಯ ಸಾಹಿತ್ಯ ಅಕಾಡೆಮಿಗಾಗಿ 'ಮುದ್ರಾಮಂಜೂಷ'ವನ್ನು ಸಂಪಾದಿಸಿಕೊಡುವ ಹೊಣೆಹೊತ್ತಿದ್ದರು. ಸೋಸಲೆ ಗರಳಪುರಿ ಶಾಸ್ತ್ರಿಗಳ ಚರಿತ್ರೆಯಲ್ಲಿ ಸಾಂದರ್ಭಿಕವಾಗಿ ಬಂದ ಈ ಕವಿಯ ಉಲ್ಲೇಖವನ್ನು ಗಮನಿಸಿದ್ದರು ಮತ್ತು ಕವಿಯ ವಂಶಸ್ಥರು ಮೈಸೂರು ಹಾಗೂ ಬೆಂಗಳೂರಿನಲ್ಲಿ ಇರುವುದನ್ನು ಪತ್ತೆ ಹಚ್ಚಿದ್ದರು. ಇದೆಲ್ಲಕ್ಕೂ ಮಿಗಿಲಾಗಿ ಆ ಕವಿಯ ವಂಶಸ್ಥರಿಂದ ಇದುವರೆಗೆ ಬೆಳಕಿಗೆ ಬಾರದ ಈ ಕೃತಿಯ ಒಂದು ಅಪೂರ್ವ ಹಸ್ತಪ್ರತಿಯನ್ನು ಸಂಗ್ರಹಿಸಿಟ್ಟುಕೊಂಡಿದ್ದರು. ಅದೇನು ಯೋಗಾಯೋಗವೋ, ಕಾಕತಾಳೀಯವೋ ನಾನೂ ಇದೇ ವಿಷಯದ ಅಧ್ಯಯನದಲ್ಲಿ ತೊಡಗಿರುವುದನ್ನು ಕೇಳಿದಾಗ, ಅವರಿಗೆ ನನ್ನ ಪ್ರಯತ್ನಗಳು ಕುತೂಹಲದಾಯಕವಾಗಿ ಕಂಡಿರಬೇಕು.

ಕಿರಿಯರಲ್ಲಿ ಪ್ರೀತಿ, ವಿಶ್ವಾಸ, ವಾತ್ಸಲ್ಯ, ಸಾಹಿತ್ಯಿಕ ವಿಷಯಗಳಲ್ಲಿ ಅಪಾರ ಕಾಳಜಿ, ನಿಷ್ಠೆ, ಗೌರವ ತೋರುವ ಶಾಸ್ತ್ರಿಗಳು ನನಗೆ ಮೊದಲ ಪತ್ರ ಬರೆದದ್ದು ತಾ. ೬.೭.೧೯೮೯ ರಲ್ಲಿ. ಅದೂ 'ಕೆಂಪು ನಾರಾಯಣ' ಕವಿಯ ವಿಚಾರವಾಗಿಯೇ. ಅದರಲ್ಲಿ ಅವರು ಈ ಕುರಿತಾಗಿ ತಾವೊಂದು ಪ್ರಬಂಧ ಸಿದ್ಧಪಡಿಸಿದ್ದಾಗಿಯೂ ಅದು ಪ್ರಕಟವಾದ ಕೂಡಲೇ ನನ್ನ ಗಮನಕ್ಕೆ ತರುವುದಾಗಿಯೂ ಬರೆದಿದ್ದರು. ಮತ್ತೆ ಅದು ಗುಲಬರ್ಗಾದಿಂದ ಪ್ರಕಟವಾಗುವ 'ಸಂಶೋಧನ ವ್ಯಾಸಂಗ' ಪತ್ರಿಕೆಯಲ್ಲಿ ೧೯೯೦ರಲ್ಲಿ ಪ್ರಕಟವಾಯಿತು. ಈ ಲೇಖನ ಈ ಕವಿಯ ಬಗೆಗಿನ ಅನೇಕ ಹೊಸ ಸಂಗತಿಗಳನ್ನು ದಾಖಲಿಸುವಲ್ಲಿ ಸಫಲವಾಗಿದೆ.

ಕನ್ನಡ ಅಧ್ಯಯನಸಂಸ್ಥೆಯಲ್ಲಿ ನನಗೆ ಬೇಕಾದ ಪರಾಮರ್ಶನಗ್ರಂಥಗಳನ್ನು ನೋಡಲು, ಶಾಸ್ತ್ರಿಗಳವರಲ್ಲಿ ಇದೇ ವಿಷಯವಾಗಿ ಚರ್ಚಿಸಲು ನಾನು ಆಗಾಗ್ಗೆ ಮೈಸೂರಿಗೆ ಹೋಗುತ್ತಿದ್ದೆ. ಅಂತಹ ಸಂದರ್ಭಗಳಲ್ಲಿ ಶಾಸ್ತ್ರಿಗಳು ನನ್ನನ್ನು ತಮ್ಮ ಮನೆಗೆ ಕರೆಯುತ್ತಿದ್ದರು. ಆದರೋಪಚಾರಸಹಿತ ಊಟ ತಿಂಡಿ ನೀಡುತ್ತಿದ್ದರು. ತಾವು ಈ ಮೊದಲೇ ಬರೆದಿದ್ದ ಪುಸ್ತಕಗಳನ್ನು ಸ್ವಹಸ್ತಾಕ್ಷರದೊಂದಿಗೆ ಪ್ರೀತಿಯಿಂದ ಕೊಡುತ್ತಿದ್ದರು. ಅವರ ಶ್ರೀಮತಿಯವರು ಕೂಡಾ ನನ್ನನ್ನು ತುಂಬ ಆತ್ಮೀಯವಾಗಿ ನೋಡಿಕೊಳ್ಳುತ್ತಿದ್ದರು.

ನಮ್ಮ ಈ ಕುಕ್ಕೆ ಸುಬ್ರಹ್ಮಣ್ಯದಲ್ಲಿ ಶ್ರೀದೇವಳದ ಆಡಳಿತಮಂಡಳಿಯವರು ಕಿರುಷಷ್ಠಿ ಉತ್ಸವದ ಸಂದರ್ಭದಲ್ಲಿ ಧರ್ಮಸಮ್ಮೇಳನ ನಡೆಸುವ ಕ್ರಮ ಇಟ್ಟುಕೊಂಡಿದ್ದಾರೆ. ವಿವಿಧ ಕ್ಷೇತ್ರಗಳಲ್ಲಿ ಖ್ಯಾತನಾಮರಾದ ವಿದ್ವಾಂಸರುಗಳನ್ನು ಕರೆಯಿಸುವುದು ಇಲ್ಲಿನ ವಾಡಿಕೆ. ೧೯೮೯ರಲ್ಲಿ ಅದಕ್ಕೆ ಸಂಬಂಧಿಸಿದಂತೆ ಪೂರ್ವಭಾವಿ ಸಭೆ ನಡೆದಾಗ ಅಧ್ಯಕ್ಷಸ್ಥಾನಕ್ಕೆ ಶಾಸ್ತ್ರಿಗಳವರ ಹೆಸರನ್ನು ನಾನು ಸೂಚಿಸಿದೆ. ಅದಕ್ಕೊಪ್ಪಿದ ಆಡಳಿತ ಮಂಡಳಿಯವರು ಶಾಸ್ತ್ರಿಗಳ ಸಮಯಾನುಕೂಲ ಕೇಳಿ ಪತ್ರ ಬರೆಯುವಂತೆ ನನಗೇ ತಿಳಿಸಿದರು. ಹಾಗೆ ಪತ್ರ ಬರೆದು ಕೆಲಸಮಯ ಕಳೆದರೂ ಶಾಸ್ತ್ರಿಗಳವರಿಂದ ಉತ್ತರ ಬಂದಿರಲಿಲ್ಲ(ಆ ಕಾಲದಲ್ಲಿ ಈಗಿನಂತೆ ಎಸ್.ಟಿ.ಡಿ., ಮೊಬೈಲ್ ಫೋನ್ ಮೊದಲಾದ ಸೌಲಭ್ಯಗಳಿರಲಿಲ್ಲ). ಅದೇ ನಿರೀಕ್ಷೆಯಲ್ಲಿದ್ದಾಗಲೇ ಡಿಸೆಂಬರ್ ೧೪ರಂದು ಪತ್ರ ಬಂದಿತು. ತಾವು ಊರಲ್ಲಿಲ್ಲದ ಕಾರಣವನ್ನು ತಿಳಿಸಿ, ಕಾರ್ಯಕ್ರಮಕ್ಕೆ ಬರಲು ಸಾಧ್ಯವಾಗುವುದಿಲ್ಲವೆಂಬ ವಿಚಾರವನ್ನು ಅವರು ಈ ಪತ್ರದಲ್ಲಿ ಬರೆದಿದ್ದರು. ಆದರೆ ಮುಂದಿನ ವರ್ಷ, ಇಲ್ಲಿ ನಡೆದ ಧರ್ಮಸಮ್ಮೇಳನದಲ್ಲಿ ಶಾಸ್ತ್ರಿಗಳವರ ಅಧ್ಯಕ್ಷೀಯ ಭಾಷಣವನ್ನು ಕೇಳುವ ಅವಕಾಶ ಇಲ್ಲಿನ ಧರ್ಮಾಭಿಮಾನಿಗಳಿಗೆ ಒದಗಿಬಂದಿತ್ತು.

ಈ ಮಧ್ಯೆ ನನ್ನ ಎಂಫಿಲ್ ಅಧ್ಯಯನ ಪೂರ್ಣಗೊಂಡು, ಅದೇ ವಿಷಯದಲ್ಲಿ ಇನ್ನಷ್ಟು ವಿವರವಾಗಿ ಅಭ್ಯಾಸ ಮಾಡಲು ಪಿಎಚ್.ಡಿಗೆ ನೋಂದಣಿ ಮಾಡಿಸಿದ್ದೆ. ಮೂಲ ಆಕರಗ್ರಂಥವಾಗಿ ಶಾಸ್ತ್ರಿಗಳವರ ವಶದಲ್ಲಿದ್ದ ಹಸ್ತಪ್ರತಿಯನ್ನು ನೀಡಬೇಕೆಂದು

ಅವರನ್ನು ವಿನಂತಿಸಿದೆ. ಸಂತೋಷದಿಂದ ಒಪ್ಪಿಗೆ ನೀಡಿದ ಶಾಸ್ತ್ರಿಗಳು ಪ್ರತಿ ಮಾಡಲು ಅನುಸರಿಸಬೇಕಾದ ನಿಯಮಗಳನ್ನು ಹೇಳಿಕೊಟ್ಟರು. ನಕಲು ಮಾಡುವ ಕೆಲಸ ಆರಂಭಿಸಿದ್ದಾಗಿ ನಾನು ತಿಳಿಸಿದಾಗ, ಅವರು ಸಂತಸ ವ್ಯಕ್ತಪಡಿಸಿ ಪತ್ರ ಬರೆದು ಮಾದರಿಪುಟವನ್ನು ಕಳುಹಿಸಿಕೊಡುವಂತೆ ಹೇಳಿದರು. '... ಪದಚ್ಛೇದ, ಪದರೂಪಗಳ ವಿಷಯದಲ್ಲಿ ಒಂದು ಖಚಿತವ್ಯವಸ್ಥೆ ಬಹುಮುಖ್ಯ... ಇದೊಂದು ದೀರ್ಘ ತಪಸ್ಸು...' ಇತ್ಯಾದಿ ಬರೆದು ಈ ಕಿರಿಯನನ್ನು ಹುರಿದುಂಬಿಸಿದರು.

ಸ್ವಲ್ಪವೇ ಮಾಹಿತಿ ನೀಡಬೇಕಾದಲ್ಲಿ ಅಂಚೆಕಾರ್ಡು, ಹೆಚ್ಚಿನ ವಿಷಯ ತಿಳಿಸಬೇಕಾದಲ್ಲಿ ಅಂತರ್ದೇಶೀಯ ಪತ್ರ -ಇದು ಪತ್ರ ಬರೆಯುವಾಗ ಶಾಸ್ತ್ರಿಗಳು ಅನುಸರಿಸುತ್ತಿದ್ದ ರೀತಿ. ಅಂತಹ ಒಂದು ಅಂತರ್ದೇಶೀಯ ಪತ್ರದಲ್ಲಿ ತಮ್ಮ ಕಾಲು ಮೂಳೆ ಮುರಿತದಿಂದಾಗಿ ಗೃಹಬಂಧನದ ಸ್ಥಿತಿಯನ್ನು ತಿಳಿಸಿದ್ದರು. ನಕಲುಪ್ರತಿ ಮಾಡಿದ ನನ್ನ ಬರೆಹದ ಬಗ್ಗೆ ಬರೆಯುತ್ತಾ ನಾನು ನಮೂದಿಸಿದ ಅಂಕಿ, ಸಂಕೇತ, ಪುಟಸಂಖ್ಯೆ, ಪ್ಯಾರಾಗ್ರಾಫ್ ವಿಂಗಡಿಸಿದ ರೀತಿಯೆಲ್ಲ ಸರಿಯಾಗಿದೆ ಎಂದು ಹೇಳಿ ಇದೇ ಕ್ರಮದಲ್ಲಿ ಮುಂದುವರಿಯಲು ತಿಳಿಸಿದರು. ಮತ್ತೊಂದು ಸಂದರ್ಭದಲ್ಲಿ ನಾನು ಬರೆದು ತೋರಿಸಿದ ಟಿಪ್ಪಣಿಯನ್ನು ತಪ್ಪದೆ ತಮ್ಮ ಪರಿಷ್ಕರಣದ ಆರಂಭದಲ್ಲಿ ಸೇರಿಸುವುದಾಗಿ ಪತ್ರ ಬರೆದರು. ಸಾಹಿತ್ಯವಿಮರ್ಶೆ ಸಂಶೋಧನಕ್ಷೇತ್ರಗಳಲ್ಲಿ ಅಂಬೆಗಾಲಿಡುತ್ತಿರುವ ನನ್ನಂತಹವನಿಗೆ ಈ ಹಿರಿಯರ ಪ್ರೋತ್ಸಾಹಕ ಪತ್ರಗಳು ಸಂಜೀವಿನೀಶಕ್ತಿಯನ್ನು ನೀಡುತ್ತಿದ್ದವೆಂದೇ ನಾನು ಭಾವಿಸಿದ್ದೇನೆ.

ಉದಾಸೀನತೆ ಮನುಷ್ಯನ ಸಹಜಸ್ವಭಾವವಲ್ಲವೇ? ನಕಲುಪ್ರತಿ ತಯ್ಯಾರು ಮಾಡುವ ನನ್ನ ಕೆಲಸ ನಿಧಾನವಾದಾಗ, ಆ ಬಗ್ಗೆ ಸಕಾಲದಲ್ಲಿ ಎಚ್ಚರಿಸುವ ಕೆಲಸವನ್ನೂ ಶಾಸ್ತ್ರಿಗಳು ಮಾಡಿದ್ದಾರೆ(ತಾ ೧೮.೦೩.೯೯೧ರ ಪತ್ರ). ನನ್ನ ಅಧ್ಯಯನಕ್ಕೆ ಬೇಕಾದ ಆವಶ್ಯಕ ಪುಸ್ತಕಗಳನ್ನು ತೆಗೆದಿಡುವುದಾಗಿ ಪತ್ರ ಬರೆದು ಅಂತೆಯೇ ತೆಗೆದಿಟ್ಟು ಉಪಕರಿಸುವ ಕೆಲಸವನ್ನು ಮಾಡಿದ್ದಾರೆ. ಕಿರಿಯರಿಗಾಗಿ ಶ್ರಮಪಡುವ ಈ ಅಪೂರ್ವ ಗುಣವನ್ನು ಕೆಲವರಲ್ಲಷ್ಟೇ ನಾವಿಂದು ಕಾಣಬಹುದಾಗಿದೆ.

ಕೇಂದ್ರ ಸಾಹಿತ್ಯ ಅಕಾಡೆಮಿಗಾಗಿ ಅವರು ಮಾಡುತ್ತಿದ್ದ 'ಮುದ್ರಾಮಂಜೂಷ'ದ ಸಂಪಾದನಕಾರ್ಯದ ಪ್ರಗತಿಯ ಬಗ್ಗೆ ಕೇಳಿ ಪತ್ರ ಬರೆದಿದ್ದೆ. 'ಹೇಗೋ ಒಂದು ರೀತಿಯ ಪ್ರಸ್ತಾವನೆ ಮುಗಿಸಿಕೊಟ್ಟಿರುತ್ತೇನೆ. ಅಷ್ಟು ಮುನ್ನಡೆದಿದೆ' ಎಂದು ಉತ್ತರ ಬರೆದರು. ಬಹುಶಃ ಅವರ ಮನಸ್ಸಿನಲ್ಲಿ ಈ ಪೀಠಿಕಾಭಾಗ ಇನ್ನಷ್ಟು ಚೆನ್ನಾಗಿ ಮೂಡಿಬರಬೇಕಾಗಿತ್ತೆಂಬ ಭಾವನೆ ಇದ್ದಂತೆ ಕಾಣುತ್ತದೆ. ಕವಿಯ ಹೆಸರಿನ ಕೊನೆಯಲ್ಲಿ ಕುಲನಾಮ ಸೇರಿಸುವ ವಿಚಾರದಲ್ಲಿಯೂ (ನಾರಾಯಣಶಾಸ್ತ್ರೀ ಅಥವಾ ನಾರಾಯಣಶರ್ಮ) ಅವರು ಬಹಳಷ್ಟು ಯೋಚಿಸಿ ನಿರ್ಣಯಕ್ಕೆ ಬಂದಂತೆ ಕಾಣುತ್ತದೆ.

ಉಡುಪಿಯ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಕೇಂದ್ರದವರು ಎಂ.ಜಿ.ಎಂ. ಕಾಲೇಜಿನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಶಾಸ್ತ್ರಿಗಳವರು ಪ್ರತಿಷ್ಠಿತ 'ಸೇಡಿಯಾಪು ಪ್ರಶಸ್ತಿ' ಸ್ವೀಕರಿಸುವವರಿದ್ದರು. ಅದೇ ಸಂದರ್ಭದಲ್ಲಿ ಸಮಯವನ್ನು ಹೊಂದಿಸಿಕೊಂಡು ತಾವು ಕುಕ್ಕೆ ಸುಬ್ರಹ್ಮಣ್ಯಕ್ಕೆ ಸಕುಟುಂಬ ಬರುವುದಾಗಿ ತಿಳಿಸಿ ಮುಂಚಿತವಾಗಿ ಪತ್ರ ಬರೆದರು. ಅಂತೆಯೇ ಬಂದರು. ಈ ಲೇಖಕನ ಮನೆಗೂ ಬಂದು ಮತ್ತೆ ಶ್ರೀದೇವಳದಲ್ಲಿ ಪ್ರಸಾದ ಸ್ವೀಕರಿಸಿ ಉಡುಪಿಯ ಕಡೆ ಸಾಗಿದರು.

ಶಾಸ್ತ್ರಿಗಳವರು 'ಮುದ್ರಾಮಂಜೂಷ'ದ ಸಂಪಾದನಕಾರ್ಯ ಮುಗಿಸುತ್ತಿದ್ದಂತೆ ನನ್ನ ಪಿಎಚ್.ಡಿ ನಿಬಂಧದ ಪ್ರತಿಯನ್ನು ಕೇಳಿ, ಅದನ್ನು ಸ್ವಲ್ಪಕಾಲ ತನ್ನಲ್ಲಿಯೇ ಇರಿಸಿಕೊಳ್ಳುವುದಾಗಿ ತಿಳಿಸಿದರು. ಸಂತೋಷದಿಂದ ಒಪ್ಪಿ ಅದರ ಪ್ರತಿ ಕಳುಹಿಸಿದೆ. ೧೯೯೯ರಲ್ಲಿ ಅವರು ಸಂಪಾದಿಸಿದ 'ಮುದ್ರಾಮಂಜೂಷ'ವು ಪ್ರಕಟವಾದಾಗ, ಅವರು ನನ್ನನ್ನು ಕರೆದು ಸ್ವಹಸ್ತಾಕ್ಷರಸಹಿತ ಅದರ ಪ್ರತಿ ನೀಡಿದರು. ಅದರ ಅರಿಕೆಯಲ್ಲಿ ಕವಿಕೃತಿವಿಚಾರದ ಸಮಸ್ಯೆಗಳನ್ನು ಚರ್ಚಿಸುವಲ್ಲಿಯೂ ಸಹಾಯಕಸಾಮಗ್ರಿಗಳನ್ನು ಒದಗಿಸುವಲ್ಲಿಯೂ ಸಹಾಯವಾದವರ ಪಟ್ಟಿಯಲ್ಲಿ ಮೊದಲು ನನ್ನ ಹೆಸರು ನಮೂದಿಸಿದರು. ಅವರ ವಿದ್ವತ್ಪೂರ್ಣ ಮುನ್ನುಡಿರೂಪದ ಪೀಠಿಕೆಯಲ್ಲಿ ಇದಕ್ಕೆ ಸಂಬಂಧಿಸಿದ ನನ್ನ ಹೇಳಿಕೆಗಳನ್ನು ಉದ್ಧರಿಸಿದರು. ಕೊನೆಯಲ್ಲಿ ಕೊಟ್ಟ ಆಕರ ಸೂಚಿಯಲ್ಲಿ ನನ್ನ ಅಪ್ರಕಟಿತ ಮಹಾಪ್ರಬಂಧದ ಹೆಸರನ್ನೂ ಸೇರಿಸಿದರು. ವಿದ್ವಾಂಸರೊಬ್ಬರು ಕಿರಿಯನೊಬ್ಬನ ಮೇಲೆ ತೋರಿಸಿದ ಈ ರೀತಿಯ ಪ್ರೀತಿ ವಿಶ್ವಾಸಕ್ಕೆ ನಾನು ಮನಸ್ಸಿನಲ್ಲಿಯೇ ಮಣಿಯಬಹುದಲ್ಲದೆ ಮತ್ತಾವ ರೀತಿಯಲ್ಲೂ ಪ್ರತಿ ಕ್ರಿಯಿಸಲು ಸಾಧ್ಯವಿಲ್ಲವೆಂದುಕೊಂಡಿದ್ದೇನೆ.

ನನ್ನ ಪಿಎಚ್.ಡಿ ಅಧ್ಯಯನ ಮುಗಿದ ಅನಂತರ ನನ್ನ ಹುಟ್ಟೂರು ಕೋಟೇಶ್ವರದ ಬಗ್ಗೆ ಒಂದು ಸಾಂಸ್ಕೃತಿಕ ಅಧ್ಯಯನ ನಡೆಸಿ ಪುಸ್ತಕರೂಪದಲ್ಲಿ ಪ್ರಕಟಿಸಿದ್ದೆ. ಅದಕ್ಕೆ ಬಿ.ಎಂ.ಶ್ರೀ. ಪ್ರತಿಷ್ಠಾನದ ೨೦೦೩ನೇ ಸಾಲಿನ 'ಅನಂತರಂಗ ಸಂಶೋಧನ ಸಾಹಿತ್ಯ' ಪ್ರಶಸ್ತಿ ಲಭಿಸಿತು. ಅಧ್ಯಕ್ಷರು ಶಾಸ್ತ್ರಿಗಳವರೇ ಆಗಿದ್ದರು. ಸಮಾರಂಭದ ಅಧ್ಯಕ್ಷ ಭಾಷಣದಲ್ಲೂ ಅವರು ನನ್ನ ಬಗ್ಗೆ, ಕೃತಿಯ ಬಗ್ಗೆ ಅಭಿಮಾನದ ಮಾತುಗಳನ್ನೇ ಆಡಿದರು.

ಹೀಗೆ ವಿವಿಧ ಸಂದರ್ಭಗಳಲ್ಲಿ ಕನ್ನಡದ ಶ್ರೇಷ್ಠ ವಿದ್ವಾಂಸರೊಬ್ಬರ ಸಂಶೋಧಕರೊಬ್ಬರ ಆಶೀರ್ವಾದ, ಸಲಹೆ, ಮಾರ್ಗದರ್ಶನ ಪಡೆಯುತ್ತಿರುವ ಧನ್ಯತಾಭಾವ ನನ್ನದು.

ವಿದ್ವನ್ಮಣಿ ಗುರುವರ್ಯ

ಕೆ.ಅನಂತರಾಮು

ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿಗಳು ನನಗೆ ವಿದ್ಯಾಗುರುಗಳು. ಮೂವತ್ತೈದು ವರ್ಷಗಳ ಹಿಂದೆ ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯ, ಈಗ ಕುವೆಂಪು ಕನ್ನಡ ಅಧ್ಯಯನಸಂಸ್ಥೆ ಎಂದು ಕರೆಯಲಾಗುತ್ತಿರುವ 'ಕನ್ನಡ ಅಧ್ಯಯನ ಸಂಸ್ಥೆ'ಯಲ್ಲಿ ನಾನು ಎಂ.ಎ. ವಿದ್ಯಾರ್ಥಿಯಾಗಿದ್ದೆ. ಛಂದಸ್ಸು, ಸಾಹಿತ್ಯಚರಿತ್ರೆ, ಪ್ರಾಚೀನ ಕಾವ್ಯಗಳು ಮುಂತಾದ ವಿಷಯಗಳನ್ನು ಅವರು ಬೋಧಿಸುತ್ತಿದ್ದರು. ತರಗತಿಗಳ ಒಂದೊಂದು ಗಂಟೆಯನ್ನೂ ಅದೊಂದು ಜ್ಞಾನಯಜ್ಞವೆಂಬಂತೆ ನಡೆಸಿಕೊಡುತ್ತಿದ್ದರು. ಆ ಗಂಟೆಯಲ್ಲಿ ಬೋಧಿಸಬೇಕಾದ ವಿಷಯಕ್ಕೆ ಸಂಬಂಧಿಸಿದಂತೆ ಸಮಗ್ರ ಮಾಹಿತಿಯನ್ನು ತಮ್ಮ ಕಣ್ಣಮುಂದಿರಿಸಿಕೊಂಡು ಪಾಠಹೇಳುತ್ತಿದ್ದರು. ಪ್ರಸ್ತುತವಿಷಯಕ್ಕೆ ಸಂಬಂಧಿಸಿದ ವಿಶಾಲವಾದ ಜಗತ್ತು ಆ ಮುಹೂರ್ತದಲ್ಲಿ ನಮ್ಮ ಮುಂದೆ ಪ್ರತ್ಯಕ್ಷವಾಗುತ್ತಿತ್ತು.

ನಾನು ಮೈಸೂರು ವಿಶ್ವವಿದ್ಯಾನಿಲಯದ ಸಂಜೆಕಾಲೇಜಿನಲ್ಲಿ ಅಧ್ಯಾಪಕನಾದ ಹಲವು ವರ್ಷಗಳ ಮೇಲೆ 'ಕವಿ ಬ್ರಹ್ಮಶಿವ: ಒಂದು ಅಧ್ಯಯನ' ಎಂಬ ವಿಷಯವನ್ನು ಸಂಶೋಧನೆಗೆಂದು ಕೈಗೆತ್ತಿಕೊಂಡಾಗ ವೆಂಕಟಾಚಲ ಶಾಸ್ತ್ರಿಗಳು ನನಗೆ ಮಾರ್ಗದರ್ಶಕ ರಾದರು. ತನ್ನ ಸಮಕಾಲದಲ್ಲಿ ಜೈನಧರ್ಮಕ್ಕಾಗುತ್ತಿದ್ದ ಹಿನ್ನಡೆಯನ್ನು ಕಂಡು ನೋವಿ ಗೊಳಗಾಗಿದ್ದ ಆ ಕವಿಯು ಕೋಪದಿಂದಲೂ ಅಸಹಾಯಕತೆಯಿಂದಲೂ ಬೇಸರ ದಿಂದಲೂ ತನ್ನ ಮನಸ್ಸನ್ನೂ ಮಾತುಗಳನ್ನೂ ಗೋಜಲು ಗೋಜಲಾಗಿಸಿಕೊಂಡು ಬಿಟ್ಟಿದ್ದನು. ಬ್ರಹ್ಮಶಿವನ ವಿಚಾರಸರಣಿಯನ್ನು ಹೇಗೆ ಪರಿಭಾವಿಸಬೇಕು, ಹೇಗೆ ವಿಶ್ಲೇಷಿಸಬೇಕು, ಅವನ ಸ್ಥಾನವನ್ನು ಹೇಗೆ ನಿಶ್ಚಯಿಸಬೇಕು ಎಂಬಿತ್ಯಾದಿ ವಿಚಾರಗಳಲ್ಲಿ ಶಾಸ್ತ್ರಿಯವರ ಸಮರ್ಥವಾದ ಮಾರ್ಗದರ್ಶನ ಲಭ್ಯವಾಗದಿದ್ದಲ್ಲಿ ನನ್ನ ಅಧ್ಯಯನವು ಪಾರಗಾಣುತ್ತಲೇ ಇರಲಿಲ್ಲ. ಜೈನಶಾಸ್ತ್ರ ಮತ್ತು ಜೈನಸಾಹಿತ್ಯಗಳನ್ನು ಕುರಿತಂತೆ ಅವರ ವಿಸ್ತಾರವೂ ತಲಸ್ಪರ್ಶಿಯೂ ಆದ ವಿದ್ವತ್ತು ನಾನು ಕೈಗೆತ್ತಿಕೊಂಡ ಕಾರ್ಯವನ್ನು ಪೂರ್ಣಗೊಳಿಸಿಕೊಟ್ಟಿತು.

೧೯೭೦ರಿಂದ ಸುಮಾರು ಎರಡು ದಶಕಗಳಷ್ಟು ಕಾಲಾವಧಿಯನ್ನು ಕನ್ನಡ ಅಧ್ಯಯನ ಸಂಸ್ಥೆಯ ಬಹುಮುಖವಾದ ಕಾರ್ಯಯೋಜನೆಗಳ ದೃಷ್ಟಿಯಿಂದ ಕನ್ನಡದ ಸುವರ್ಣ ಕಾಲವೆಂದೇ ಹೇಳಬೇಕು. ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿದ್ದ

ನಾಡೋಜ ದೇಜಗೌ ಅವರ ಪ್ರೋತ್ಸಾಹದಿಂದಲೂ ಡಾ.ಹಾ.ಮಾ.ನಾಯಕರು ಅಧ್ಯಯನಸಂಸ್ಥೆಯ ಸಮರ್ಥನಿರ್ದೇಶಕರಾಗಿದ್ದು ಅವರ ಕರ್ತೃತ್ವಶಕ್ತಿಯಿಂದಲೂ ಕನ್ನಡದ ಹಲವು ಹತ್ತು ಯೋಜನೆಗಳು ಆಗ ಯಶಸ್ವಿಯಾಗಿ ನೆರವೇರಿದುವು. ಕಠಿಣ ಪರಿಶ್ರಮಕ್ಕೊಗ್ಗುವ ಪ್ರತಿಭೆಗಳನ್ನೇ ಆ ಕಾಲಕ್ಕೆ ದೇಜಗೌ ಅವರು ಅಧ್ಯಯನಸಂಸ್ಥೆ ಯಲ್ಲಿ ಗುಡ್ಡೆ ಹಾಕಿದ್ದರು. ಯಾರಾದರೂ ಸರಿಯೆ, ಅಧ್ಯಯನಸಂಸ್ಥೆಗೆ ಕಾಲಿಟ್ಟ ಬಳಿಕ ಅಹರ್ನಿಶಿ ದುಡಿಯಲೇಬೇಕಾಗಿತ್ತು. ಕನ್ನಡ ಶಾಸನಗಳ ಪರಿಷ್ಕರಣ, ದಾಸಸಾಹಿತ್ಯದ ಸಂಪಾದನೆ, ವಿಶ್ವಕೋಶನಿರ್ಮಾಣ, ಜನಪದಸಾಹಿತ್ಯಸಂಗ್ರಹಣೆ ಮತ್ತು ಪ್ರಕಟಣೆ, ಪ್ರಸಾರಾಂಗದ ವೈವಿಧ್ಯಮಯ ಕಾರ್ಯಚಟುವಟಿಕೆಗಳು, ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆಯ ಕನ್ನಡ ವಿಭಾಗದ ಕಾರ್ಯನಿರ್ವಹಣೆ ಮುಂತಾದ ಅನೇಕ ಕಾರ್ಯಗಳು ಗಂಗಾಪ್ರವಾಹದಂತೆ ನುಗ್ಗಿ ನೆರವೇರುತ್ತಿದ್ದುವು. ಅಂತಹ ಪರ್ವಕಾಲದಲ್ಲಿ ಹೈದರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾನಿಲಯದಿಂದ ಅಧ್ಯಯನಸಂಸ್ಥೆಗೆ ಆಗಮಿಸಿದ್ದ ಶಾಸ್ತ್ರಿಗಳು ಕಠಿಣ ಪರಿಶ್ರಮಕ್ಕೆ ಜಗ್ಗದೆ, ಮೇಲೆ ಹೇಳಿದ ಕನ್ನಡ ಚಟುವಟಿಕೆಗಳಲ್ಲಿ ಕೆಲವಲ್ಲಿ ಪ್ರತ್ಯಕ್ಷವಾಗಿ, ಕೆಲವಲ್ಲಿ ಪರೋಕ್ಷವಾಗಿ ಭಾಗವಹಿಸಿ ತಮ್ಮ ವಿದ್ವತ್ತನ್ನು ಧಾರೆಯೆರೆ ದರು. ಅಂದಿನ ಕನ್ನಡದ ಕೆಲಸಗಳ ಒತ್ತಡವೆಷ್ಟಿತ್ತೆಂಬುದನ್ನು ಕಣ್ಣಾರೆ ನೋಡಿದವರು ಮಾತ್ರವೇ ಅರ್ಥಮಾಡಿಕೊಳ್ಳುವುದು ಸಾಧ್ಯವೆಂಬಂತಿತ್ತು.

ಪಾಠಪ್ರವಚನಗಳ ಜೊತೆಗೆ, ಸಂಶೋಧನವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡು ವುದರ ಜೊತೆಗೆ ಅಧ್ಯಯನಸಂಸ್ಥೆಯ ವಿವಿಧ ಯೋಜನೆಗಳಲ್ಲಿ ಸಲಹೆಸೂಚನೆಗಳನ್ನು ಕೊಟ್ಟು ಪಾಲ್ಗೊಳ್ಳುವುದರ ಜೊತೆಗೆ ವೆಂಕಟಾಚಲ ಶಾಸ್ತ್ರಿಗಳು 'ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಸಾಹಿತ್ಯಚರಿತ್ರೆ' ಎಂಬೊಂದು ಯೋಜನೆಯ ಸಂಪೂರ್ಣ ಜವಾಬ್ದಾರಿ ಯನ್ನು ಹೊತ್ತರು. ಸಾಹಿತ್ಯಚರಿತ್ರೆಯ ಹಲವಾರು ಸಂಪುಟಗಳು ಪರಮಾದ್ಭುತವಾಗಿ ಪ್ರಕಟವಾದುವು. ಆ ಸಂಪುಟಗಳ ಲೇಖನಗಳ ಪರಿಷ್ಕರಣಕಾರ್ಯ, ಆ ಸಂಪುಟಗಳಿಗೆ ತಾವೂ ಲೇಖನಗಳನ್ನು ಬರೆಯುವುದು, ಆ ಸಂಪುಟಗಳು ಅಚ್ಚಿನ ಮನೆಗೆ ಹೋದಾಗ ಅವುಗಳ ಆರೈಕೆಮಾಡುವುದು ಮುಂತಾದ ಎಲ್ಲ ಕಾರ್ಯಗಳನ್ನೂ ಸಮರ್ಥವಾಗಿ ಅವರು ನಿರ್ವಹಿಸಿದರು. ಡಾ.ಎನ್.ಎಸ್.ತಾರಾನಾಥ ಎಂಬ ಯುವ ವಿದ್ವನ್ಮಣಿಯೊಬ್ಬರು ಅವರಿಗೆ ಸಹಾಯಕರಾಗಿ ಸದಾ ಅವರ ನೆರಳಾಗಿರುತ್ತಿದ್ದುದನ್ನು ನಾನು ನೋಡುತ್ತಿದ್ದೆ. ಶಾಸ್ತ್ರಿಗಳ ಪಾಂಡಿತ್ಯ, ಪ್ರತಿಭೆ, ವಿದ್ವತ್ತು ಮುಂತಾದವುಗಳ ಪ್ರಕಾಶನಕ್ಕೆ ಅಂದಿನ ಅಧ್ಯಯನಸಂಸ್ಥೆಯ ಕಾರ್ಯಚಟುವಟಿಕೆಗಳೆಲ್ಲವೂ ಒರೆಗಲ್ಲಾದುವು.

ನಾನು ಕಂಡಂತೆ ಶಾಸ್ತ್ರಿಗಳವರದು ಅತ್ಯಂತ ನೇರವೂ ಸರಳವೂ ನಿರಾಡಂಬರ ಪೂರ್ಣವೂ ಆದ ಜೀವನಮಾರ್ಗ. ಯಾವ ವಾಹನಗಳ ಹಂಗೂ ಇಲ್ಲದೆ ಓಡಾಡಿ ಕೊಂಡೇ ಕನ್ನಡ ಅಧ್ಯಯನಸಂಸ್ಥೆಯ ನಿರ್ದೇಶಕಪದವಿಗೇರಿ ಯಶಸ್ವಿಯಾದ ವ್ಯಕ್ತಿತ್ವ

ಅವರದು. ಸತ್ಯಭಾಷಿತೆ, ಪ್ರಿಯಭಾಷಿತೆ, ಹಿತಭಾಷಿತೆ, ಮಿತಭಾಷಿತೆ ಮುಂತಾದ ಎಲ್ಲ ಸದ್ಗುಣಗಳೂ ಅವರಲ್ಲಿ ಮನೆಮಾಡಿಕೊಂಡಿವೆ. ಸ್ನೇಹಮಯತೆ ಅವರ ಜನ್ಮಜಾತಗುಣ. ಅವರ ನೆನಪಿನ ಶಕ್ತಿ ಅಪಾರ. ನಿವೃತ್ತಿಯ ಬಳಿಕವೂ ಶಾಸ್ತ್ರಿಗಳದು ಅತ್ಯಂತ ಕ್ರಿಯಾಶೀಲವಾದ ಬದುಕು. ಅವರ ವಿದ್ವತ್ಪೂರ್ಣ ಲೇಖನಕೃಷಿಗಾಗಲಿ, ಬೇರೆ ಬೇರೆ ಸಂಘಸಂಸ್ಥೆಗಳ ಕನ್ನಡ ಕಾರ್ಯಚಟುವಟಿಕೆಗಳಿಗೆ ಚಾಲನೆನೀಡುವುದಕ್ಕಾಗಲಿ ವಿಶ್ರಾಂತಿಯೆಂಬುದೇ ಇಲ್ಲ. ಅದನ್ನವರು ಬಯಸುವವರೂ ಅಲ್ಲ.

ಮೈಸೂರಿನಲ್ಲಿ ಮುಲಕನಾಡು ಬ್ರಾಹ್ಮಣಸಭಾ ಎಂಬ ಸಂಸ್ಥೆಯೊಂದಿದೆ. ಅದಕ್ಕೊಂದು ಸ್ವತಂತ್ರವಾದ ಕಟ್ಟಡವನ್ನು ಕಟ್ಟಿ ನಿಲ್ಲಿಸಬೇಕು ಎಂಬ ಕಾರ್ಯಯೋಜನೆ ರೂಪುಗೊಂಡಾಗ ತಾವು ಹುಟ್ಟಿಬೆಳೆದ ಸಮಾಜದ ಋಣವನ್ನು ಕೈಲಾದಮಟ್ಟಿಗೆ ತೀರಿಸಬೇಕೆಂಬ ಹಂಬಲ ಶಾಸ್ತ್ರಿಗಳಲ್ಲಿ ಚಿಗುರೊಡೆಯಿತು. ಅದಕ್ಕೆ ಸಂಬಂಧಿಸಿದ ಕಾರ್ಯಕರ್ತರನ್ನು ಕೂಡಿಕೊಂಡು ಧನಸಂಗ್ರಹದಲ್ಲಿ ತೊಡಗಿದರು. ಆ ಸಂಸ್ಥೆಗಾಗಿ ಲಕ್ಷ್ಮಿಯನ್ನು ಚೆನ್ನಾಗಿ ಒಲಿಸಿಕೊಟ್ಟರು. ಇಂದು ಮೈಸೂರುನಗರದ ಹುಣಸೂರು ರಸ್ತೆ ಎಂದು ಕರೆಯುವ ಹೆದ್ದಾರಿಯ ಮಗ್ಗುಲಲ್ಲೇ ಮುಲಕನಾಡು ಸಮುದಾಯ ಭವನವೊಂದು ಸರ್ವಲಕ್ಷಣಸಂಪನ್ನವಾಗಿ ತಲೆಯೆತ್ತಿನಿಂತಿದೆ. ಅಲ್ಲೊಂದು ಗ್ರಂಥಭಂಡಾರವನ್ನೂ ಅಭಿವೃದ್ಧಿಪಡಿಸಿದ್ದು, ಶಾಸ್ತ್ರಿಗಳು ತಮ್ಮ ಸ್ವಂತದ ಭಂಡಾರದಿಂದಲೂ ಸಾಕಷ್ಟು ಗ್ರಂಥಗಳನ್ನು ಕೊಡುಗೆಯಾಗಿ ನೀಡಿದ್ದಾರೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ, ಹಿಂದೆ ಕಾನಕಾನಹಳ್ಳಿ ಎಂದು ಕರೆಯುತ್ತಿದ್ದ, ಕನಕಪುರವು ಶಾಸ್ತ್ರಿಗಳ ಬಾಲ್ಯದ ಆಡುಂಬೊಲ. ಅವರ ಅಧ್ಯಾಪಕಜೀವನ ಪ್ರಾರಂಭವಾದುದು ಅಲ್ಲಿನ ರೂರಲ್ ಕಾಲೇಜಿನಿಂದ. ಬ್ರಾಹ್ಮಣರ ಬೀದಿಯಲ್ಲಿದ್ದ ತಮ್ಮ ಮನೆಯನ್ನು ಪಟ್ಟಣದ ಸಾರ್ವಜನಿಕ ಉಪಯೋಗಕ್ಕಾಗಿ ಸಮರ್ಪಿಸಿರುವುದು ಅವರ ದಾನಗುಣಕ್ಕೆ ಸಾಕ್ಷಿಯಾಗಿದೆ. ಈಗ ಅವರು ಕನಕಪುರ ತಾಲ್ಲೂಕನ್ನು ಕುರಿತಂತೆ ಅದರ ಪುರಾಣೇತಿಹಾಸ ಸಂಸ್ಕೃತಿಗಳೆಲ್ಲವೂ ಸಮಸ್ತವಾಗಿ ಕೂಡಿಕೊಳ್ಳುವಂತಹ ಸರ್ವಜನೋಪಯೋಗಿಯಾಗುವ ಗ್ರಂಥವೊಂದರ ರಚನೆಯಲ್ಲಿ ತಲ್ಲೀನರಾಗಿದ್ದಾರೆ. 'ಆರು ಮುನಿದು ನಮ್ಮನೇನ ಮಾಡುವರು, ಊರು ಮುನಿದು ನಮ್ಮನೆಂತು ಮಾಡುವುದು' ಎಂಬ ಬಸವಣ್ಣನವರ ವಾಣಿಯಲ್ಲಿ ಬರುವ ಆದರ್ಶವನ್ನು ಅವರು ಮೈದುಂಬಿಸಿಕೊಂಡಿದ್ದಾರೆ. ತನ್ಮೂಲಕ ಅವರ ವ್ಯಕ್ತಿತ್ವಕ್ಕೊಂದು ಮೆರುಗು ಬಂದಿದೆ.

ಕನ್ನಡ ಭಾಷೆ ಮತ್ತು ಸಾಹಿತ್ಯಸಂಶೋಧನೆಗಳಿಗಾಗಿ ಕಾಯೇನ ವಾಚಾ ಮನಸಾ ದುಡಿಯುತ್ತಿರುವ, ಸಮಾಜಸೇವೆಗಾಗಿ ತಮ್ಮನ್ನು ಸಮರ್ಪಿಸಿಕೊಂಡಿರುವ, ಹುಟ್ಟೂರಿನ ಅಭಿವೃದ್ಧಿಯಲ್ಲಿ ತಮ್ಮನ್ನು ಗುರುತಿಸಿಕೊಂಡಿರುವ, ತನ್ಮೂಲಕ ಎಲ್ಲ 'ಋಣ'ಗಳನ್ನೂ ತೀರಿಸಿ ಕೃತಾರ್ಥರಾಗಿರುವ ವಿರಳಮಹನೀಯರ ಪರಂಪರೆಗೆ ಡಾ. ವೆಂಕಟಾಚಲ ಶಾಸ್ತ್ರಿಗಳು

ಸೇರುತ್ತಾರೆಂಬುದನ್ನು ಈ ಸಂದರ್ಭದಲ್ಲಿ ಮೇಲಿಂದ ಮೇಲೆ ಹೇಳಬೇಕು. ಆ ಸದ್ಗುರುವು ತಮ್ಮ ಶಿಷ್ಯಕೋಟಿಗೆಲ್ಲ ಆದರ್ಶಪ್ರಾಯರಾಗಿದ್ದಾರೆ; ಅವರ ಸಾಧನೆ ಸಿದ್ಧಿಗಳಿಂದ, ಜೀವನಾದರ್ಶಗಳಿಂದ ನನ್ನಂತಹ ಅದೆಷ್ಟೋ ಮಂದಿ ಪ್ರಭಾವಿತರಾಗಿದ್ದೇವೆ. ಶಾಸ್ತ್ರಿಗಳು ನೂರ್ಕಾಲ ಬದುಕುತ್ತ ನಮ್ಮಗಳ ಬಾಳಿಗೆ ಬೆಳಕು ತೋರಿಸುತ್ತಿರಲೆಂದು ಅಖಿಲಾಂಡ ಕೋಟಿಬ್ರಹ್ಮಾಂಡನಾಯಕನನ್ನು ಭಕ್ತಿಯಿಂದ ಬೇಡುತ್ತೇನೆ.

ಹಾಸ್ಯಪ್ರಜ್ಞೆಯ ಘನವಿದ್ವಾಂಸ

ಡಿ.ಕೆ.ರಾಜೇಂದ್ರ

ಡಾ.ವೆಂಕಟಾಚಲ ಶಾಸ್ತ್ರೀ ಅವರು ನನ್ನ ವಿದ್ಯಾಗುರುಗಳು. ನಾನು ಮಾನಸ ಗಂಗೋತ್ರಿಯ ಕನ್ನಡ ಅಧ್ಯಯನಸಂಸ್ಥೆಯಲ್ಲಿ ಎಂ.ಎ. ವಿದ್ಯಾರ್ಥಿಯಾಗಿದ್ದಾಗ ಡಾ.ಶಾಸ್ತ್ರಿಗಳವರು ಅಲ್ಲಿಗೆ ಹೊಸದಾಗಿ ಬಂದರು. ಅಂದಿನ ವಿದ್ವಾಂಸರುಗಳನ್ನು ಪ್ರತಿನಿಧಿಸುವಂತೆ ಎಡಗೈಯಲ್ಲಿ ಎದೆಯ ಭಾಗಕ್ಕೆ ಔಚಿ ಹಿಡಿದ ಗ್ರಂಥಗಳು, ತುಂಬು ಕಾಲರಿನ ಕೋಟು, ಕಣ್ಣಿಗೆ ಕನ್ನಡಕ ಇವುಗಳನ್ನು ಧರಿಸಿ ಅವರು ಕೊಠಡಿ ಪ್ರವೇಶಿಸಿದರೆ ಯಾವುದೋ ರಾಜಗಾಂಭೀರ್ಯ ಇಡೀ ಕೊಠಡಿಯನ್ನು ಆವರಿಸುತ್ತಿತ್ತು. ಶಾಸ್ತ್ರ ವಿಷಯಗಳಲ್ಲಿ ಪಾರಂಗತರಾದ ಶಾಸ್ತ್ರಿಗಳು ತರಗತಿಯ ಒಳಗೆ ಅಷ್ಟೇ ಗಾಂಭೀರ್ಯ ವನ್ನು ಮೆರೆಯುತ್ತಿದ್ದರು. ಅವರು ತೆಗೆದುಕೊಳ್ಳುತ್ತಿದ್ದ ವಿಷಯಗಳು ಅಂತಹವೇ ಆಗಿರುತ್ತಿದ್ದುವಾದ್ದರಿಂದ ವಿದ್ಯಾರ್ಥಿಗಳೂ ಅನಿವಾರ್ಯವಾಗಿ ಅದಕ್ಕೆ ಹೊಂದಿಕೊಂಡೇ ಹೆಜ್ಜೆ ಹಾಕಬೇಕಾಗಿತ್ತು. ತರಗತಿಯ ಒಳಗೆ ಅವರ ಪಾಂಡಿತ್ಯದ ಮುಖವಷ್ಟೇ ಪ್ರದರ್ಶಿತ ವಾಗುತ್ತಿತ್ತೆಂಬುದು ಸಹಜ ಹಾಗೂ ಮುಖ್ಯವಿಷಯ.

ಆದರೆ ಶಾಸ್ತ್ರಿಗಳವರ ಮತ್ತೊಂದು ಮುಖ ಅನಾವರಣಗೊಳ್ಳುತ್ತಿದ್ದುದು ತರಗತಿಯ ಹೊರಗೆ. ಅವರಿಗಿಂತ ಹಿರಿಯರೊಂದಿಗೆ ಹಾಗೂ ತಮ್ಮ ವಿದ್ಯಾರ್ಥಿಗಳೊಂದಿಗೆ ಅವರು ನಡೆದುಕೊಳ್ಳುತ್ತಿದ್ದ ರೀತಿ ಸ್ವಲ್ಪ ಭಿನ್ನವೆನಿಸುತ್ತಿತ್ತಾದರೂ ಹೆಚ್ಚು ಸಂದರ್ಭೋಚಿತ ವಾಗಿರುತ್ತಿತ್ತು. ಸಹಜವಾದ ಹಾಸ್ಯಪ್ರಜ್ಞೆ ಅಲ್ಲೆಲ್ಲಾ ನುಸುಳಿಬರುತ್ತಿತ್ತು. ತಾವೂ ನಕ್ಕು ಮಿಕ್ಕವರನ್ನೂ ನಗೆಗಡಲಿನಲ್ಲಿ ಮುಳುಗಿಸುತ್ತಿದ್ದ ಅವರ ಮಾತಿನ ಬಗೆ ನಗೆಗೆ ನಗೆ ಕುಂಟಣಿಯಾಗುವಂತೆ ಮಾಡುತ್ತಿತ್ತು. ತರಗತಿಯ ಒಳಗಿನ ಶಾಸ್ತ್ರಿಗಳಿಗೂ, ತರಗತಿಯ ಹೊರಗಿನ ಶಾಸ್ತ್ರಿಗಳಿಗೂ ಸಂಬಂಧವನ್ನು ಕಲ್ಪಿಸಿಕೊಳ್ಳುವುದೇ ಎಷ್ಟೋ ವೇಳೆ ಕಷ್ಟ ವಾಗುತ್ತಿತ್ತು. ಅವರು ವಿದ್ವಾಂಸರಾಗಿ ಎಂದೂ ಉಳಿದವರಿಂದ ದೂರ ಉಳಿದವರಲ್ಲ, ದೂರ ಉಳಿಯಲು ಪ್ರಯತ್ನಿಸಿದವರಲ್ಲ.

ತರಗತಿಯ ಹೊರಗೆ ಶಾಸ್ತ್ರಿಗಳು ವಿದ್ಯಾರ್ಥಿಗಳೊಂದಿಗೆ ನಡೆದುಕೊಳ್ಳುತ್ತಿದ್ದ ರೀತಿಯೇ ಬೇರೆಯಾಗಿತ್ತು. ಆತ್ಮೀಯವಾಗಿ ವಿಶ್ವಾಸದಿಂದ ನಿಂತು ಮಾತನಾಡಿಸು ತ್ತಿದ್ದರು. ತರಗತಿಯ ಒಳಗೆ ಕಾಣದ ನಗುಮುಖ ತರಗತಿಯ ಹೊರಗೆ ಮಿಂಚಿ ಮಾಯವಾಗುತ್ತಿತ್ತು. ಅದು ಅಸಹಜವಾದುದು ಎಂದು ನನಗೆ ಎಂದೂ ಅನ್ನಿಸಿರಲಿಲ್ಲ.

ಅದು ನಿಜವಾದ ಅಧ್ಯಾಪಕನ ಗುಣ ಎಂದು ನನಗೆ ಅಂದೂ ಅನ್ನಿಸಿತ್ತು, ಈಗಲೂ ಅದೇ ಭಾವನೆ ನನ್ನದು. "ಮಾತು ಮಾತಿಗೆ ನಗುವ ಗಂಡಸನ್ನೂ ಮಾತು ಮಾತಿಗೆ ಅಳುವ ಹೆಂಗಸನ್ನೂ ನಂಬಬೇಡ" ಎಂಬ ಗಾದೆಯೊಂದಿದೆ. ಆದರೆ ನಾನು ಇಲ್ಲಿ ಗಂಡಸರ ಬಗ್ಗೆ ಮಾತನಾಡುತ್ತಿಲ್ಲ. 'ಗುರು'ವಿನ ಬಗೆಗೆ ಹೇಳುತ್ತಿದ್ದೇನೆ. ಗುರುವಿನ ಸ್ಥಾನಮಾನವೇ ಬೇರೆ. ಅವರು ಎಂದೂ ತರಗತಿಯ ಒಳ-ಹೊರಗನ್ನು ಒಂದೇ ಮಾಡಿದವರಲ್ಲ. ಶಾಸ್ತ್ರ ವಿಷಯಗಳನ್ನು ಬೋಧಿಸುವಾಗ ಅವರು ನಿಜವಾದ ಶಾಸ್ತ್ರಿಗಳೇ ಆಗಿಬಿಟ್ಟಿರುತ್ತಿದ್ದರು. ವಿದ್ಯಾರ್ಥಿಗಳಲ್ಲಿಯೂ ಕೂಡ ಆ ಗಾಂಭೀರ್ಯವನ್ನೇ ನಿರೀಕ್ಷಿಸುತ್ತಿದ್ದರು.

ಎಂ.ಎ. ಮುಗಿಸಿದ ನಂತರ ನಾನು ಅಲ್ಲಿಯೇ ಸಂಶೋಧನಸಹಾಯಕನಾಗಿ ಸೇರಿದೆ. ನಂತರ ಅವರ ಸಹೋದ್ಯೋಗಿಯಾಗುವ ಸೌಭಾಗ್ಯವೂ ನನಗೊದಗಿಬಂತು. ಇದಾದ ಮೇಲೆ ಅವರು ಸಂಸ್ಥೆಯ ನಿರ್ದೇಶಕರಾದರು. ಈ ಎರಡೂ ಸಂದರ್ಭಗಳಲ್ಲಿನ ಅವರೊಂದಿಗಿನ ಒಡನಾಟ ಎಲ್ಲಿಯೂ ಕಹಿಯೆನಿಸಲಿಲ್ಲ. ಅದೇ ಪ್ರೀತಿ ವಿಶ್ವಾಸ ಸ್ನೇಹ ಮಯ ವಾತಾವರಣಕ್ಕೆ ಕೊರತೆ ಕಾಣಲಿಲ್ಲ.

ಸಂಸ್ಥೆಯ ನಿರ್ದೇಶಕರಾಗಿ ಆ ಸ್ಥಾನವನ್ನು ಎಷ್ಟರಮಟ್ಟಿಗೆ ಅನುಭವಿಸಿ ಆನಂದಿಸಿ ದರೋ ನನಗೆ ತಿಳಿಯದು. ಏಕೆಂದರೆ ಅಧಿಕಾರಕ್ಕೂ ಅವರಿಗೂ ಅಷ್ಟಕ್ಕಷ್ಟೇ ಎಂಬುದು ನನ್ನ ಭಾವನೆ. ಆದರೆ ಬಂದ ಹೊಣೆಗಾರಿಕೆಯಿಂದ ಜಾರಿಕೊಳ್ಳುವ ಸ್ವಭಾವ ಅವರದಲ್ಲ. ಸದ್ದುಗದ್ದಲವಿಲ್ಲದಂತೆ ಎಲ್ಲರ ಪ್ರೀತಿ ವಿಶ್ವಾಸಗಳಿಸಿ ತಮ್ಮ ಅವಧಿಯನ್ನು ಮುಗಿಸಿದ್ದು ಅವರ ವಿಶೇಷ. ಅಧಿಕಾರವನ್ನು ಅನುಭವಿಸುವುದು ಬೇರೆ, ಅಧಿಕಾರ ವನ್ನು ನಡೆಸುವುದು ಬೇರೆ. ಎರಡಕ್ಕೂ ಸಾಕಷ್ಟು ಅಂತರವಿದೆ. ಶಾಸ್ತ್ರಿಗಳು ಮಾಡಿದ್ದು ಎರಡನೆಯದನ್ನು ಎಂದು ನಾನು ತಿಳಿದಿದ್ದೇನೆ. ಏಕೆಂದರೆ ಅಧಿಕಾರವನ್ನು ಅನುಭವಿಸುವವರಿಗೆ 'ದರ್ಪ'ದ ಮನೋಭಾವ ಇರುತ್ತದೆ. ಆದರೆ ಅವರಲ್ಲಿ ಎಂದೂ ನಾನು ಅದನ್ನು ಕಾಣಲಿಲ್ಲ.

ಶಾಸ್ತ್ರಿಗಳವರ ಸಂದರ್ಭೋಚಿತವಾದ ಸೂಕ್ಷ್ಮ ಹಾಸ್ಯಪ್ರಜ್ಞೆಗೆ ಸಂಬಂಧಿಸಿದ ಘಟನೆ ಯೊಂದನ್ನು ಇಲ್ಲಿ ಹೇಳಬೇಕು. ನಾನು ಎಂ.ಎ.ಮುಗಿಸಿ ಕನ್ನಡ ಅಧ್ಯಯನಸಂಸ್ಥೆ ಯಲ್ಲಿಯೇ (ಈಗಿನ ಕುವೆಂಪು ಕನ್ನಡ ಅಧ್ಯಯನಸಂಸ್ಥೆ) ಸಂಶೋಧನ ಸಹಾಯಕನಾಗಿ ಕೆಲಸಕ್ಕೆ ಸೇರಿಕೊಂಡೆ. ಅದೇ ವೇಳೆಗೆ ನನ್ನ ಮದುವೆಯೂ ನಿಶ್ಚಯವಾಗಿ ಅದರ ಆಹ್ವಾನಪತ್ರಿಕೆಗಳು ನನ್ನ ಕೈಯಲ್ಲಿದ್ದುವು. ಸಂಜೆ ಮನೆಗೆ ಹೊರಡುವ ಸಮಯವಾದ್ದ ರಿಂದ ಹಿರಿಕಿರಿಯ ಮಿತ್ರರೊಂದಿಗೆ ಎಲ್ಲರೂ ಸಂಸ್ಥೆಯ ಮುಂಬಾಗಿಲಲ್ಲಿ ಸೇರಿದ್ದೆವು. ಅದಕ್ಕೆ ಮುಖ್ಯಕಾರಣ ಶಾಸ್ತ್ರಿಗಳು ಅಲ್ಲಿ ಏನನ್ನೋ ಬಣ್ಣಿಸುತ್ತಿದ್ದುದು. ಅದೇ ವೇಳೆಗೆ ಅವರ ಕಣ್ಣು ನನ್ನ ಕೈಲಿದ್ದ ಆಹ್ವಾನಪತ್ರಿಕೆಯ ಮೇಲೆ ಬಿತ್ತು. ಏನೆಂದು ಕೇಳಿದರು. ಹೇಳಿದೆ. ಎಲ್ಲಿ ಪ್ರಿಂಟ್ ಮಾಡಿಸಿದಿರಿ ಎಂದು ಮರುಪ್ರಶ್ನೆ. ಅದು ಅವರ ದೃಷ್ಟಿಯಲ್ಲಿ ಅನಾವಶ್ಯಕವಾದ ಪ್ರಶ್ನೆಯಾಗಿರಲಿಲ್ಲ. "ಶಕ್ತಿ ಪ್ರೆಸ್" ಎಂದು ನಾನು ಸಹಜವಾಗಿ

ಉತ್ತರಿಸಿದಾಗ, ಅವರ ದೃಷ್ಟಿಯಲ್ಲಿ ಅವರು ಹಾಕಿದ ಪ್ರಶ್ನೆಯ ಉದ್ದೇಶ ಮತ್ತು ಆ ಪದಕ್ಕೆ ಕೊಟ್ಟ ಅರ್ಥ ಬೇರೆಯೇ ಇತ್ತು(ನೋಡಿ ಸ್ವಾಮಿ, ಆಹ್ವಾನಪತ್ರಿಕೆಯನ್ನೇ 'ಶಕ್ತಿ ಪ್ರೆಸ್'ನಲ್ಲಿ ಮಾಡಿಸಿದ್ದಾರೆ ಎಂದು ಅವರ ಸಹಜವಾದ ನಗೆಯ ಅಲೆಯನ್ನು ತೇಲಿಬಿಟ್ಟರು. ಅಲ್ಲಿ ಅವರ ಒತ್ತು ಇದ್ದದ್ದು 'ಶಕ್ತಿ' ಎಂಬುದರ ಬಗ್ಗೆ). ಸುತ್ತಲಿನವರಿಗೆ ಅದು ಬೇಗ ತಟ್ಟಿತು. ಅವರನ್ನೂ ಒಳಗೊಂಡಂತೆ ಅಲ್ಲಿದ್ದವರೆಲ್ಲರೂ ನಗೆಯಲ್ಲಿ ತೇಲಾಡಿದರು, ನಾನು ಮಾತ್ರ ಸಂಕೋಚದಲ್ಲಿ ಮುಳುಗಿಹೋದೆ.

ಗುರುಸನ್ನಿಧಿಯಲ್ಲಿ

ಕೆ.ಜಿ.ನಾರಾಯಣಪ್ರಸಾದ್

'ಕನ್ನಡ ಛಂದಸ್ಸು' ಕೃತಿಯ ಮೂಲಕ ನನಗೆ ಪ್ರೊ.ಟಿ.ವಿ.ವೆಂಕಟಾಚಲ ಶಾಸ್ತ್ರಿಗಳ ಸಾನ್ನಿಧ್ಯ ಲಭ್ಯವಾಯಿತು. ಎಂ.ಎ. ಓದುವಾಗ ಅವರ ನೇರಶಿಷ್ಯ ನಾನಾಗಿರಲಿಲ್ಲ. ಮಂಗಳೂರಿನ ನಮಗೆ ಶಾಸ್ತ್ರಿಗಳು ದೂರದ ಹಿಮಾಲಯವಾಗಿದ್ದರು. ಅವರ ಛಂದಸ್ಸಿನ ಪಾಠ ಕೇಳುವ ಯೋಗ ನಮಗೆ ಲಭಿಸಲಿಲ್ಲವಲ್ಲ ಎಂಬ ಕೊರಗು ಆಗಾಗ್ಗೆ ಮನದಲ್ಲಿ ಸುಳಿಯುತ್ತಿತ್ತು; ಅದರಿಂದಾಗಿ ಮೈಸೂರು ಕೇಂದ್ರದ ನಮ್ಮ ಓರಗೆಯವರ ಬಗ್ಗೆ ಅಸೂಯೆಯೂ ಉಂಟಾಗುತ್ತಿತ್ತು. ಈ ಬಯಕೆ ಕೈಗೂಡಿದುದು, ಇದಕ್ಕಿಂತ ಮಿಗಿಲಾದ ಭಾಗ್ಯ ನನಗೆ ಲಭಿಸಿದುದು, ನಾನು ಸಂಶೋಧನಾಭ್ಯಾಸಕ್ಕೆ ಕಾಲಿಟ್ಟಾಗ.

ಅಲ್ಲಿ ಕೂಡ ಈ ಗುರುಸಾನ್ನಿಧ್ಯ ಸುಲಭವಾಗಿ ಲಭಿಸಲಿಲ್ಲ; ಸಾಕಷ್ಟು ಪರದಾಡ ಬೇಕಾಯಿತು. ಶಾಸ್ತ್ರಿಗಳು ಛಂದಸ್ಸಿನ ಕ್ಷೇತ್ರದಲ್ಲಿ ವಿಶೇಷ ಪರಿಣತರು. ಅವರ ಮಾರ್ಗ ದರ್ಶನದಲ್ಲಿ ಸಂಶೋಧನೆ ನಡೆಸಬೇಕಾದರೆ ಛಂದಸ್ಸನ್ನು ಆಯ್ದುಕೊಳ್ಳಬೇಕಾಗಿತ್ತು. ಛಂದಸ್ಸಿನಲ್ಲಿ ಈಗಾಗಲೇ ಅವರನ್ನೂ ಒಳಗೊಂಡಂತೆ ಹಲವರು ವಿದ್ವನ್ಮಣಿಗಳು ಸಾಕಷ್ಟು ಕೆಲಸಮಾಡಿ ಮುಗಿಸಿದ್ದಾರೆ. ಇನ್ನು ನನ್ನಂತಹ ಎಳೆಯನಿಗೆ ಅದನ್ನು ಪ್ರವೇಶಿಸುವ ಧೈರ್ಯ ಎಲ್ಲಿಂದ ಬರಬೇಕು? ಅದಕ್ಕಾಗಿ ಶಾಸ್ತ್ರಿಗಳ ಸಮೀಪಕ್ಕೂ ಸುಳಿಯದೆ, ಅಂದಿನ ಕನ್ನಡ ಅಧ್ಯಯನಸಂಸ್ಥೆಯ ನಿರ್ದೇಶಕರಾಗಿದ್ದ ಪ್ರೊ.ಹಾ.ಮಾ.ನಾಯಕರ ವಿದ್ಯಾರ್ಥಿ ಯಾಗಲು ಅವರ ಬಳಿಗೆ ಹೋದೆ. ಇದರಲ್ಲಿ ಇನ್ನೊಂದು ರಹಸ್ಯ ಕೂಡ ಅಡಗಿತ್ತು. ನಾವು ಎಷ್ಟೇ ಹೇಳಿದರೂ, ನಮ್ಮ ವಿದ್ಯಾಭ್ಯಾಸದ ಪ್ರಾಥಮಿಕ ಗುರಿ ಉದ್ಯೋಗ ಗಳಿಸುವುದೇ ಹೊರತು ಜ್ಞಾನಾರ್ಜನೆಯಲ್ಲ: ಜ್ಞಾನಾರ್ಜನೆ ಏನಿದ್ದರೂ ಸೆಕೆಂಡರಿ. ಆದ್ದರಿಂದ, ನಾಯಕರ ಶಿಷ್ಯನಾದಲ್ಲಿ ಬೇಗ ಕೆಲಸ ಸಿಕ್ಕುತ್ತದೆ ಎಂಬ ಆಸೆ! ಅದಕ್ಕನುಗುಣವಾಗಿ ಅವರ ಬಳಿಗೆ ಹೋದೆ. ಅವರು ಸಾರಾಸಗಟಾಗಿ ತಿರಸ್ಕರಿಸಿ, ಶಾಸ್ತ್ರಿಗಳ ಬಳಿಗೆ ಹೋಗಲು ತಿಳಿಸಿದರು. ವಿಧಿಯಿಲ್ಲದೆ ಶಾಸ್ತ್ರಿಗಳ ರೂಮಿಗೆ ಅಂಜುತ್ತಾ ಅಂಜುತ್ತಾ ಹೋದೆ. ಬರವಣಿಗೆಯಲ್ಲಿ ಮುಳುಗಿಹೋಗಿದ್ದ ಅವರು ಅಲ್ಲಿಂದಲೇ ಕಣ್ಣೆತ್ತಿ, ಅವರದೇ ಆದ ರೀತಿಯಲ್ಲಿ ಕನ್ನಡಕದ ಮೇಲಿನಿಂದಲೇ ಪ್ರಶ್ನಾರ್ಥಕದೃಷ್ಟಿ ಹಾಯಿಸಿದರು. ನನ್ನ ಪ್ರವರವನ್ನೆಲ್ಲ ಹೇಳಿಕೊಂಡೆ. ಊಹ್ಞೂ! ಒಪ್ಪಲಿಲ್ಲ; ಮತ್ತೆ ನಾಯಕರ ಬಳಿಗೇ ಹೋಗಲು ತಿಳಿಸಿದರು. ಅರ್ಧ ಸಂತೋಷ, ಅರ್ಧ ನಿರಾಸೆಯಿಂದ ನಾಯಕರ ಬಳಿಗೆ ಹಿಂತಿರುಗಿದೆ, ಈಗ ಅವರು ಒಪ್ಪಿಕೊಂಡೇ ಒಪ್ಪಿಕೊಳ್ಳುತ್ತಾರೆ ಎಂಬ

ಧೈರ್ಯದೊಂದಿಗೆ. ಆದರೆ ಮತ್ತೆ ಅದೇ ನಿರಾಕರಣೆ. ಹೀಗೆ ಅಲ್ಲಿಂದ ಇಲ್ಲಿಗೆ, ಇಲ್ಲಿಂದ ಅಲ್ಲಿಗೆ ತಿರುಗಿತಿರುಗಿ ಸಾಕಾಗಿಹೋಯಿತು. ಬೆಳಿಗ್ಗೆ ಪ್ರಾರಂಭವಾದ ಈ ಅಲೆದಾಟ ಸಂಜೆ ನಾಲ್ಕು ಗಂಟೆಯಾದರೂ ಮುಗಿಯಲಿಲ್ಲ. ಕೊನೆಗೆ, ಈ ಸಂಶೋಧನೆಯೂ ಬೇಡ, ಈ ಯಾಚನೆಯೂ ಬೇಡ; ಇದೇ ಕೊನೆಯ ಪ್ರಯತ್ನ; ಈಗ ಒಪ್ಪಿದರೆ ಒಪ್ಪಲಿ, ಬಿಟ್ಟರೆ ಬಿಡಲಿ; ಒಂದು ವೇಳೆ ನಿರಾಕರಿಸಿದರೆ ಅಲ್ಲಿಗೇ ಕೈಬಿಟ್ಟು ಮನೆಗೆ ಹೊರಟು ಹೋಗುವುದು ಎಂದು ನಿರ್ಧರಿಸಿ, ಕೊನೆಯ ಬಾರಿಗೆ ಶಾಸ್ತ್ರಿಗಳ ಬಳಿಗೆ ಹೋದೆ. ಆ ಹೊತ್ತಿಗೆ ನನ್ನ ಅಲೆದಾಟ ನೋಡಿ ಅವರಿಗೂ ಕನಿಕರ ಬಂದಿತ್ತು ಎಂದು ಕಾಣುತ್ತದೆ; ಒಪ್ಪಿಕೊಂಡರು; ಗೆದ್ದೆ ಎಂದುಕೊಂಡೆ. ಆದರೇನು, ಮರುಕ್ಷಣದಲ್ಲೇ ಕಾದಿತ್ತು ಇನ್ನೊಂದು ದೊಡ್ಡ ಸಮಸ್ಯೆ, ಸಂಶೋಧನೆಗೆ ವಸ್ತುವನ್ನು ಆಯ್ದುಕೊಳ್ಳುವುದು. ಅವರಿಗೆ ಪ್ರಿಯವಾದ ಮೂರು ವಿಷಯಗಳನ್ನು ಮುಂದಿಟ್ಟರು; ಹಳಗನ್ನಡ ಕಾವ್ಯಗಳ ಛಂದಸ್ಸು, ಶಾಸನಗಳ ಛಂದಸ್ಸು ಮತ್ತು ಹೊಸಗನ್ನಡ ಕವಿತೆಯ ಛಂದಸ್ಸು ಎಂಬುದಾಗಿ. ವಿಧಿಯಿಲ್ಲದೆ ಅವುಗಳಲ್ಲಿ ಒಂದನ್ನು ಆಯ್ದುಕೊಳ್ಳಲೇಬೇಕಾಗಿತ್ತು; ಆದರೆ ಯಾವುದನ್ನು ಆಯ್ದುಕೊಳ್ಳುವುದಕ್ಕೂ ಧೈರ್ಯ ಮಾತ್ರ ಇರಲಿಲ್ಲ! ಇದ್ದುದರಲ್ಲಿ ಸುಲಭವಾದುದು ಎಂದುಕೊಂಡು ಹೊಸಗನ್ನಡ ಕವಿತೆಯ ಛಂದಸ್ಸನ್ನು ಆಯ್ದುಕೊಂಡೆ. ಗುರುವನ್ನು ನಂಬಿದೆ. ಅದನ್ನು ಕುರಿತು ಸಂಶೋಧನೆ ಮಾಡಬಹುದೇ ಇಲ್ಲವೇ ಎಂಬ ಯಾವ ಅರಿವೂ ಇಲ್ಲ. ಅವರು ಹೇಳಿದರು, ನಾನು ಒಪ್ಪಿದೆ. ಅನಂತರದಲ್ಲಿ ಹಲವರು ವಿದ್ವಾಂಸರನ್ನು ಭೇಟಿ ಮಾಡಿದೆ. ಅವರೆಲ್ಲರಿಂದ ನನಗೆ ಲಭಿಸಿದ ಉತ್ತರ ಒಂದೇ, "ಈಗಾಗಲೇ ಕರ್ಕಿಯವರು ಎಲ್ಲವನ್ನೂ ಮಾಡಿದ್ದಾಗಿದೆ; ಇನ್ನು ನೀವು ಮಾಡುವುದೇನಿದೆ!" ಎಂಬುದು. ಇದರಿಂದ ಧೈರ್ಯಗೆಡುವ ಅವಕಾಶ ಅಧಿಕವಾಗಿತ್ತು. ಆದರೆ ಒಮ್ಮೆ ಧುಮುಕಿದ ಮೇಲೆ ಈಜಲೇ ಬೇಕು ಎಂಬ ಛಲ, ಗುರುಗಳ ಮಾತಿನ ಬಗೆಗಿದ್ದ ನಂಬಿಕೆ ಇವುಗಳಿಂದಾಗಿ ಅದು ಹಾಗಾಗಲಿಲ್ಲ, ಮುಂದುವರಿದೆ. ಅಲ್ಲಿಂದಾಚೆಗೆ ಪ್ರಾರಂಭವಾಯಿತು ಶಾಸ್ತ್ರಿಯವರ ವ್ಯಕ್ತಿತ್ವದ ದರ್ಶನ. ಅಂಶಅಂಶವಾಗಿ ಅದನ್ನು ಪಡೆದುಕೊಳ್ಳುತ್ತಾ ಅದರ ಬೆಳಕಿನಲ್ಲಿ ನನ್ನನ್ನು ರೂಪಿಸಿಕೊಳ್ಳುತ್ತಾ ಸಾಗಿದೆ.

ನಾನು ಹಳ್ಳಿಯ ಹುಡುಗ; ಅವರೋ ಪಟ್ಟಣದವರು. ಈ ಕಾಲದಲ್ಲೇನೋ ಇಂತಹ ವ್ಯತ್ಯಾಸಗಳೇ ಅನುಭವಕ್ಕೆ ಬರುವುದಿಲ್ಲ. ಆದರೆ ಆಗ, ವೇಷಭೂಷಣಗಳು ಮಾತುಗಾರಿಕೆ ವ್ಯವಹಾರವಿಧಾನ ಮುಂತಾದ ಪ್ರತಿಯೊಂದು ಅಂಶದಲ್ಲೂ ಈ ವ್ಯತ್ಯಾಸ ಎದ್ದುಕಾಣುತ್ತಿತ್ತು. ಹೀಗಾಗಿ ಮೊದಲ ನೋಟದ ಅನುಭವದಲ್ಲಿ, ಅವರು ಪಟ್ಟಣದವರು, ತುಂಬಾ ಗಂಭೀರಸ್ವಭಾವದವರು, ಮಾತಾಡಿದರೆ ಎಲ್ಲಿ ಬೈದುಬಿಡುತ್ತಾರೋ ಎಂಬ ಅಳುಕು ನನ್ನಲ್ಲಿ ತುಂಬಿತುಳುಕುತ್ತಿತ್ತು. ದೊಡ್ಡವರ ಸಾನ್ನಿಧ್ಯದಲ್ಲಿ ಇಂತಹ ಅಳುಕು ಸಹಜವೇ. ಆದರೆ ಬರುಬರುತ್ತಾ ಇದು ಸಡಿಲವಾಗುತ್ತಾ ಬಂತು. ಅವರು ಎಷ್ಟು ವಾತ್ಸಲ್ಯಮಯಿ ಎಂಬುದು ಅರಿವಾಗುತ್ತಾ ಬಂತು. ತಮ್ಮ ಆತ್ಮೀಯವಾದ

ಮಾತುಕತೆ, ತೆರೆದ ಮನಸ್ಸಿನ ವ್ಯವಹಾರ ಇವುಗಳಿಂದ ಅವರು ಬಹುಬೇಗ ನನ್ನ ಭಯವನ್ನು ಹೋಗಲಾಡಿಸಿದರು. ಒಬ್ಬ ಆದರ್ಶ ಮಾರ್ಗದರ್ಶಕರು ಹಾಗೂ ಸಂಶೋಧನ ವಿದ್ಯಾರ್ಥಿಯ ನಡುವೆ ಇಂತಹ ಆರೋಗ್ಯಕರ ಸಂಬಂಧವು ಪ್ರಾಥಮಿಕ ಅಗತ್ಯವಾಗಿರುತ್ತದೆ. ಅದನ್ನು ಪಡೆಯುವ ಭಾಗ್ಯ ನನ್ನದಾಗಿತ್ತು. ಅವರ ಆ ದೊಡ್ಡಗುಣ ದಿಂದಾಗಿ ತೆರೆದ ಮನಸ್ಸಿನ ಚರ್ಚೆಗೆ ಅನುಕೂಲಕರ ವಾತಾವರಣ ಒದಗಿಬಂತು. ಅದು ಅಂದಿನಿಂದ ಇಂದಿನವರೆಗೆ ಅವ್ಯಾಹತವಾಗಿ ಸಾಗಿಬಂದಿದೆ. ಏನಾದರೂ ಸಮಸ್ಯೆ ಬಂದರೆ ಅವರಲ್ಲಿ ಚರ್ಚಿಸಿ ಬಗೆಹರಿಸಿಕೊಳ್ಳಬಹುದೆಂಬ ಧೈರ್ಯ ನನ್ನ ಪ್ರಗತಿಗೆ ಬೆನ್ನೆಲುಬಾಗಿ ನಿಂತಿದೆ.

ಮಾರ್ಗದರ್ಶಕರು ಮತ್ತು ಸಂಶೋಧನವಿದ್ಯಾರ್ಥಿಗಳ ನಡುವಿನ ಬಾಂಧವ್ಯದ ಬೆಸುಗೆಯು ಸಾಮಾನ್ಯವಾಗಿ ಸಂಶೋಧನೆ ಮಾಡಿ ಪಿಎಚ್.ಡಿ ಪಡೆಯುವವರೆಗಷ್ಟೇ ಉಳಿದಿರುತ್ತದೆ. ಅನಂತರದಲ್ಲಿ ಶಿಷ್ಯರೂ ಗುರುಗಳನ್ನು ಮರೆತುಬಿಡುತ್ತಾರೆ, ಗುರುಗಳೂ ಶಿಷ್ಯರನ್ನು ಮರೆತುಬಿಡುತ್ತಾರೆ. ಆದರೆ ಶಾಸ್ತ್ರಿಗಳ ಮತ್ತು ನನ್ನ ನಡುವಿನ ಸಂಬಂಧ ಮಾತ್ರ ಹೀಗಾಗಿಲ್ಲ. ಕಾಲುಶತಮಾನ ಕಳೆದರೂ ಆ ಬಾಂಧವ್ಯ ಇಂದಿಗೂ ಹಾಗೆಯೇ ಉಳಿದಿರುವುದು ನನ್ನ ಭಾಗ್ಯ.

ನನ್ನ ಸಂಶೋಧನಮಹಾಪ್ರಬಂಧವು ಗಾತ್ರದಲ್ಲಿ ತುಂಬ ದೊಡ್ಡದು. ಅದರ ಪ್ರಕಟಣೆಗೆ ಆ ಗಾತ್ರವೇ ಅಡ್ಡಿಯಾಗಿ ಕೂತಿತ್ತು. ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗವು ಅದನ್ನು ಪ್ರಕಟಣೆಗೆ ಸ್ವೀಕರಿಸಿತ್ತು. ಅದರ ಪ್ರಕಟಣೆಗೆ ಅನು ಮೊದನೆಯೂ ದೊರೆತಿತ್ತೆಂದು ತಿಳಿದುಬಂದಿತ್ತು. ಆದರೂ ಅದೇನು ಕಾರಣವೋ ಏನೋ, ಅದರ ಪ್ರಕಟಣೆಯ ಭಾಗ್ಯವಂತೂ ಕೂಡಿಬರಲಿಲ್ಲ. ಹದಿನೈದು ವರ್ಷಗಳಿಂದ ಅದು ಹಾಗೆಯೇ ಅಲ್ಲಿಯೇ ಉಳಿದುಬಿಟ್ಟಿತು. ಅದರ ಪ್ರಕಟಣೆಯು ಕನಸಿನ ಮಾತೆಂದು ಮರೆತು ಕೈಬಿಟ್ಟು ಕುಳಿತಿದ್ದೆ. ಶಾಸ್ತ್ರಿಗಳು ನಿಘಂಟುಯೋಜನೆ ಹೊಣೆಹೊತ್ತು ಕನ್ನಡ ಸಾಹಿತ್ಯ ಪರಿಷತ್ತಿನ ಕಚೇರಿಗೆ ಸೇರಿದ ಅನತಿ ಕಾಲದಲ್ಲೇ ಹೈದರಾಬಾದಿನ ನನಗೆ ಸುದ್ದಿ ಕಳಿಸಿ, ನನ್ನ ಮಹಾಪ್ರಬಂಧದ ಒಂದು ಪ್ರತಿಯನ್ನು ಪರಿಷತ್ತಿಗೆ ಕಳುಹಿಸಲು ತಿಳಿಸಿದರು. ನಿರುತ್ಸಾಹದಿಂದಲೇ ಕಳುಹಿಸಿದೆ. ಆದರೆ ಗುರುಗಳ ಮಾತಿನ ಮೇಲೆ ನನಗಿದ್ದ ನಂಬಿಕೆ ಮಾತ್ರ ಆ ನಿರುತ್ಸಾಹವನ್ನು ದೂರ ತಳ್ಳುತ್ತಿತ್ತು. ಪರಿಷತ್ತಿನ ಅಂದಿನ ಅಧ್ಯಕ್ಷರೊಂದಿಗೆ ಮಾತಾಡಿ ಅದರ ಪ್ರಕಟಣೆಗೆ ವ್ಯವಸ್ಥೆ ಮಾಡಿದರು. ಆದರೆ ಮತ್ತೆ ಅಷ್ಟೊಂದು ಹಣ ಹೂಡುವ ಅವಕಾಶವಿಲ್ಲದ ಕಾರಣದಿಂದಾಗಿ ಅದರ ಪ್ರಕಟಣೆಯು ಮತ್ತೆ ಮುಂದೂಡ ಲ್ಪಟ್ಟಿತು. ನಾನಂತೂ ಕೈಬಿಟ್ಟೆ. ಆದರೆ, ಗುರುಗಳು ಮಾತ್ರ ಅದನ್ನು ಅಷ್ಟಕ್ಕೇ ಕೈ ಬಿಡ ಲಿಲ್ಲ. ಅನಂತರದ ಅಧ್ಯಕ್ಷರ ಜೊತೆಯಲ್ಲಿ ಮತ್ತೆ ವ್ಯವಹರಿಸಿ ಅದರ ಪ್ರಕಟಣೆಗೆ ದಾರಿಯನ್ನು ಸುಗಮವಾಗಿಸಿಯೆಬಿಟ್ಟರು. ಇದು ಅವರಲ್ಲಿರುವ ಶಿಷ್ಯವಾತ್ಸಲ್ಯಕ್ಕೆ ಅತಿ

ದೊಡ್ಡ ನಿದರ್ಶನ. ಇದಕ್ಕೆ ನಾನೆಷ್ಟು ಕೃತಜ್ಞನಾಗಿದ್ದರೂ ಸಾಲದು. ಅಂತಹ ಗುರುಗಳನ್ನು ಪಡೆದಿರುವುದು ನನ್ನ ಪೂರ್ವಜನ್ಮದ ಸುಕೃತ.

ಇತ್ತೀಚೆಗೆ ಒಂದು ವಿಚಾರಸಂಕಿರಣಕ್ಕಾಗಿ ಅವರು ಹೈದರಾಬಾದಿಗೆ ಬಂದಿದ್ದರು. ಬರುವಾಗ ತಮ್ಮ ಕೃತಿಗಳ ಒಂದು ದೊಡ್ಡ ಕಟ್ಟನ್ನೇ ಹೊತ್ತುತಂದಿದ್ದರು, ನನಗೆ ಕೊಡುವುದಕ್ಕೆ. ನನಗೆ ತುಂಬಾ ಸಂಕೋಚವೂ ಆಯಿತು, ಮನಸ್ಸೂ ತುಂಬಿಬಂತು. "ಸಾರ್ ಇದನ್ನೆಲ್ಲ ತಾವು ಏಕೆ ತರುವುದಕ್ಕೆ ಹೋದಿರಿ, ನಾನು ಮೈಸೂರಿಗೆ ಬಂದಾಗ ಕೊಡಬಹುದಾಗಿತ್ತಲ್ಲ" ಎಂದೆ. ಅದಕ್ಕೆ ಅವರು, "ನಿಮಗಲ್ಲದೆ ಇನ್ಯಾರಿಗೆ ಕೊಡಲಪ್ಪ" ಎಂದರು. ನನ್ನ ಮೇಲೆ ಅವರಿಗಿರುವ ಪ್ರೀತಿವಿಶ್ವಾಸಗಳು ಈ ಮಾತಿನಲ್ಲಿ ತುಂಬಿ ತುಳುಕುತ್ತಿದ್ದವು. ಇದು ಅವ್ಯಾಜವಾದ ವಾತ್ಸಲ್ಯ. ಇದನ್ನು ಅವರಲ್ಲಿ ಅಂದು ಚೆನ್ನಾಗಿ ಕಂಡೆ.

ಅವರ ಸನ್ನಿಧಿಯಲ್ಲಿದ್ದು ಅವರಲ್ಲಿ ಕಂಡುಕೊಂಡ ಹಿರಿಮೆಗಳು ಹಲವು. ಸಾಮಾನ್ಯವಾಗಿ ಇಬ್ಬರು ಮಿತ್ರರೋ ಸಹೋದ್ಯೋಗಿಗಳೋ ಸೇರಿದಾಗ, ಸಂಭಾಷಣೆಯೆಲ್ಲಾ ಬರಬೇಕಾದ ಬಡ್ತಿ, ಸಂಬಳದ ಹೆಚ್ಚಳ, ಬಾಕಿ ಇತ್ಯಾದಿಯಾದ ಲೌಕಿಕವಿಷಯಗಳಿಗೇ ಸಂಬಂಧಿಸಿರುವುದು ಸಹಜ. ಆದರೆ ಶಾಸ್ತ್ರಿಗಳಲ್ಲಿ ಈ ಗುಣ ನನಗೆ ಅಷ್ಟಾಗಿ ಕಂಡು ಬರಲಿಲ್ಲ. ಅವರು ಸದಾ ಕಾವ್ಯಶಾಸ್ತ್ರವಿನೋದಿ. ಅವರಾಡುವ ಮಾತುಗಳೆಲ್ಲವೂ ಒಂದಲ್ಲ ಒಂದು ರೀತಿಯಲ್ಲಿ, ಸಾಹಿತ್ಯವಲಯದ ಸುತ್ತಲೇ ಸುತ್ತುಹೊಡೆಯುತ್ತಿರುತ್ತವೆ. ಸಂಶೋಧನವಿದ್ಯಾರ್ಥಿಯಾಗಿದ್ದಾಗ ಅವರ ಬಳಿ ನಡೆಯುತ್ತಿದ್ದ ಮಾತುಕತೆಗಳೆಂದರೆ ನನ್ನ ಸಂಶೋಧನೆಗೆ ಸಂಬಂಧಿಸಿದವು, ಇಲ್ಲವೇ ಅವರು ಆಗ ಕೆಲಸ ಮಾಡುತ್ತಿದ್ದ ಯಾವುದಾದರೂ ಸಾಹಿತ್ಯವಿಷಯಕ್ಕೆ ಸಂಬಂಧಿಸಿದವು ಮಾತ್ರ.

ಆಗ 'ಕನ್ನಡ ಅಧ್ಯಯನಸಂಸ್ಥೆಯ ಸಾಹಿತ್ಯಚರಿತ್ರೆ'ಯ ಸಂಪುಟಗಳ ರಚನೆಯ ಕಾರ್ಯವು ಭರದಿಂದ ಸಾಗುತ್ತಿತ್ತು. ಅದಕ್ಕೆ ಅವರೇ ಸಂಪಾದಕರಾಗಿದ್ದರು. ವಿವಿಧ ವಿದ್ವಾಂಸರಿಂದ ಅದಕ್ಕೆ ಲೇಖನಗಳನ್ನು ಬರೆಸಲಾಗುತ್ತಿತ್ತು. ಅದರಲ್ಲಿಯ ಲೇಖನಗಳ ಜವಾಬ್ದಾರಿಯೆಲ್ಲ ಆಯಾ ಲೇಖಕರದ್ದೇ. ಹೀಗಿದ್ದರೂ 'ಸಂಪಾದಕ' ಶಾಸ್ತ್ರಿಗಳು ಆ ಕೆಲಸವನ್ನು ಹಗುರವಾಗಿ ತೆಗೆದುಕೊಳ್ಳುತ್ತಿರಲಿಲ್ಲ. ಎಲ್ಲವನ್ನೂ ತಾವೇ ಬರೆದಿದ್ದರೆ ಯಾವ ರೀತಿಯ ಜವಾಬ್ದಾರಿಯಿಂದ ಕೆಲಸ ಮಾಡುತ್ತಿದ್ದರೋ ಅಷ್ಟೇಮಟ್ಟದ, ಕೆಲವೊಮ್ಮೆ ಅದಕ್ಕೂ ಮೀರಿದ ಮಟ್ಟದ ಜವಾಬ್ದಾರಿಯಿಂದ ಅವರು ಅದಕ್ಕಾಗಿ ದುಡಿಯುತ್ತಿದ್ದರು. ಪ್ರತಿಯೊಂದು ಲೇಖನವನ್ನೂ ಕೂಲಂಕಷವಾಗಿ ಪರಿಶೀಲಿಸಿ, ಅಗತ್ಯವಿದ್ದಲ್ಲಿ ಅಷ್ಟೇ ಸೂಕ್ಷ್ಮವಾಗಿ ಪರಿಷ್ಕರಿಸಿ, ಕೃತಿಯ ಒಟ್ಟಂದಕ್ಕೆ ಗೌರವಕ್ಕೆ ಕುಂದು ಬಾರದಂತೆ ನೋಡಿಕೊಳ್ಳುವ ಕಾಳಜಿ ಅವರಲ್ಲಿ ತುಂಬಿತುಳುಕುತ್ತಿತ್ತು. ಆ ಕಾರ್ಯದಲ್ಲಿ ಅವರು ವಾಸ್ತವವಾಗಿ ಮುಳುಗಿಯೇಹೋಗಿರುತ್ತಿದ್ದರು. ಅದರ ನಡುವೆ ಅವರು ತಲೆ ಎತ್ತುತ್ತಿದ್ದುದು, ಕನ್ನಡಕ ತೆಗೆದು, ಅಲಸಿಹೋದ ಕಣ್ಣನ್ನು ಒರೆಸಿಕೊಂಡು ಮತ್ತೆ ಸಿದ್ಧವಾಗುವುದಕ್ಕಷ್ಟೇ.

ಈ ಸಂದರ್ಭದಲ್ಲಿ ಅವರು ನನ್ನಂತಹ ತಮ್ಮ ಶಿಷ್ಯಪರಿವಾರಕ್ಕೆಲ್ಲ ಏನಾದರೊಂದು ಕೆಲಸವನ್ನು ಅಂಟುಹಾಕುತ್ತಿದ್ದರು. ಇದು ನನ್ನಂತವರಿಗೆ ತುಂಬ ಉಪಯೋಗಕ್ಕೆ ಬರುತ್ತಿತ್ತು. ಅದರಲ್ಲೂ ನಾನಂತೂ ಇದರಿಂದ ಬಹಳ ಪ್ರಯೋಜನ ಪಡೆದೆ. ಕರಡು ತಿದ್ದುವುದು, ಸಂಶೋಧನಲೇಖನಗಳನ್ನು ಬರೆಯುವುದು, ತಿದ್ದುವುದು ಇವನ್ನೆಲ್ಲ ನಾನು ಕಲಿತದ್ದು ಆಗಲೇ. ಇಂದಿನ ನನ್ನ ಸ್ವರೂಪಕ್ಕೆ ಅವರು ಅಂದು ನೀಡಿದ ಈ ಅವಕಾಶವೇ ಪ್ರಧಾನ ಕಾರಣ. ಅದು ಅಂದು ನನ್ನ ಸಂಶೋಧನಕಾರ್ಯಕ್ಕೆ ಉತ್ತಮ ತರಬೇತಿಯನ್ನು ಒದಗಿಸಿಕೊಟ್ಟಿತು. ಆ ಸಂದರ್ಭದಲ್ಲಿ, ಅವರ ಜೊತೆಯಲ್ಲಿ ನಡೆಸು ತ್ತಿದ್ದ ಒಂದೊಂದು ಚರ್ಚೆಯೂ ನನಗೆ ತುಂಬ ಪ್ರಯೋಜನಕಾರಿಯಾಗಿರುತ್ತಿತ್ತು. ಯಾವ ಒಂದು ವಿಷಯವನ್ನೆ ಆಗಲಿ ತೆರೆದ ಮನಸ್ಸಿನಿಂದ ಚರ್ಚಿಸಿ ತೀರ್ಮಾನ ನೀಡುವುದು ಅವರ ಸ್ವಭಾವ. ನನ್ನ ಸಂಶೋಧನೆಗೆ ಸಂಬಂಧಿಸಿದಂತೆ ಕೂಡ ಇಂತಹದೇ ಅಮೂಲ್ಯ ನೆರವು ಅವರಿಂದ ಲಭಿಸುತ್ತಿತ್ತು. ಒಟ್ಟಾರೆ ಅವರೊಬ್ಬ ಆದರ್ಶ ಮಾರ್ಗ ದರ್ಶಕರು. ಅಯಾಚಿತವಾಗಿ ಅವರ ಸಾನ್ನಿಧ್ಯ ನನಗೆ ಲಭಿಸಿದ್ದು ನನ್ನ ಪುಣ್ಯ.

ಅವರಲ್ಲಿ ಕಂಡ ಇನ್ನೊಂದು ದೊಡ್ಡ ಗುಣವೆಂದರೆ ಅವರ ವೃದ್ಧಸೇವಾನುರಾಗ; ಪಂಡಿತರೆಂದರೆ ಅವರಿಗೆ ತುಂಬ ಪ್ರೀತಿ ಗೌರವ. ಅಂತಹವರ ಜೊತೆಯಲ್ಲಿ ವಿದ್ಯಾ ವಿನೋದದಲ್ಲಿ ಕಾಲಕಳೆಯುವುದೆಂದರೆ ಅವರಿಗೆ ಎಲ್ಲಿಲ್ಲದ ಆನಂದ. ನಾನು ಕಂಡಂತೆ, ಪ್ರೊ.ಎಸ್.ವಿ.ಪರಮೇಶ್ವರಭಟ್ಟರ ಜೊತೆಗಾಗಲಿ, ಪ್ರೊ.ಹೆಚ್.ಎಂ.ಶಂಕರನಾರಾಯಣ ರಾಯರ ಜೊತೆಗಾಗಲಿ ಅವರು ಇಟ್ಟುಕೊಂಡಿದ್ದ ಒಡನಾಟದಲ್ಲಿ ಇದು ಎದ್ದು ಕಾಣು ತ್ತಿತ್ತು. ಅಂತಹವರ ಒಡನಾಟದಲ್ಲಿ ಲಭಿಸುತ್ತಿದ್ದ ಅನುಭವಾಮೃತವನ್ನು ಮೊಗೆ ಮೊಗೆದು ತುಂಬಿಕೊಳ್ಳುತ್ತಿದ್ದರು. ಅದೇ ಸಂದರ್ಭದಲ್ಲಿ, ತಮಗೆ ತಿಳಿದಿದ್ದ ವಿಚಾರ ಗಳನ್ನು ಕೂಡ ಅಷ್ಟೇ ತೆರೆದ ಮನಸ್ಸಿನಿಂದ ಹೇಳುತ್ತಿದ್ದರು. ಅರಿವನ್ನು ಮುಚ್ಚಿಟ್ಟುಕೊಳ್ಳು ವುದು ಅವರಿಗೆ ಒಗ್ಗದು. ಅದನ್ನು ಇತರರೊಂದಿಗೆ ಹಂಚಿಕೊಳ್ಳುವುದರಲ್ಲಿ ಎಲ್ಲಿಲ್ಲದ ಉತ್ಸಾಹ. ಅನವರತಾಧ್ಯಯನಶೀಲಿಯೂ ಪ್ರಕಾಂಡಪಂಡಿತರೂ ಆಗಿರುವ ಅವರು, ಹಳೆಯ ತಲೆಮಾರಿನ ಸಂಸ್ಕೃತಿಯ ಕೊನೆಯ ಕೊಂಡಿಗಳಲ್ಲಿ ಒಬ್ಬರಾಗಿದ್ದಾರೆ. ಹಿಂದಿನವರ ಉದಾತ್ತ ವ್ಯಕ್ತಿತ್ವವನ್ನು ಇಂದು ನಾವು ಕಾಣಲು ಸಾಧ್ಯವಿರುವುದು ಇಂತಹ ವರಲ್ಲಿಯೇ.

ಹೊರನೋಟಕ್ಕೆ ಸಾಧಾರಣಗಾತ್ರದ, ಸಾಧಾರಣ ಎತ್ತರದ ಶರೀರ ಅವರದು. ಆದರೆ ಅವರ ವ್ಯಕ್ತಿತ್ವ ಘನತೆಗಳು ಮಾತ್ರ ಅಸಾಧಾರಣವಾದವು. ಅವರ ಮುಖದಲ್ಲಿ ಹೊಮ್ಮುವ ತೇಜಸ್ಸು, ನೋಡಿದ ಕೂಡಲೇ ಅವರ ಅರಿವಿನ ಆಳವನ್ನು ಅನುಭವಕ್ಕೆ ತರುವಂತಹದಾಗಿದೆ. ಅವರ ಕೃಪೆ ಸದಾ ನಮ್ಮ ಮೇಲಿದ್ದು ಅವರ ಅರಿವಿನ ಧಾರೆ ನಮಗೆ ನಿರಂತರವಾಗಿ ಹರಿದು ಬರುತ್ತಿರಲಿ ಎಂದು ಭಗವಂತನನ್ನು ಪ್ರಾರ್ಥಿಸುತ್ತೇನೆ.

ವಿದ್ವತ್‌ಲೋಕದ ಜಲಚಿಹ್ನೆ

ಕ್ಯಾತನಹಳ್ಳಿ ರಾಮಣ್ಣ

ಬದುಕಿನಲ್ಲಿ ಅನಿರೀಕ್ಷಿತವಾಗಿ ಸಂತೋಷದಾಯಕ ಸಂದರ್ಭಗಳು ಪ್ರಾಪ್ತವಾದಾಗ ಸಾಮಾನ್ಯವಾಗಿ ನಮಗನ್ನಿಸುವುದು ಇದು ಯಾವ ಜನ್ಮದ ಪುಣ್ಯದ ಫಲವೋ ಕಾಣೆ! ನನ್ನ ವಿದ್ಯಾರ್ಥಿಜೀವನದಲ್ಲಿ ಹೀಗೆ ನನಗೆ ಅನೇಕ ಸಲ ಅನ್ನಿಸಿದ್ದುಂಟು. ಅಂಥ ಸಂದರ್ಭಗಳು ಹೆಚ್ಚಾದಹಾಗೆಲ್ಲ ಮರೆಯಲ್ಪಡುತ್ತ ಹೋಗುವುದು ಕೂಡ ಅವುಗಳ ಹಣೆಬರಹ. ಆದರೆ ಕೆಲವು ಸಂದರ್ಭಗಳು ಮಾತ್ರ ಉದ್ದೇಶಪೂರ್ವಕವಾಗಿ ಮರೆಯಲು ಪ್ರಯತ್ನಿಸಿದರೂ ಮತ್ತೆ ಮತ್ತೆ ಮನಸ್ಸಿಗೆ ದಾಳಿಯಿಡುತ್ತಲೇ ಇರುತ್ತವೆ. ಅಂಥ ನೆನಪುಗಳಲ್ಲಿ ಎರಡು ಬಗೆ. ಹಿತಕಾರಿಯಾದಂಥವು ಒಂದು ಬಗೆಯಾದರೆ, ಅಹಿತಕಾರಿಯೂ ಹಿಂಸಾತ್ಮಕವೂ ಆಗಿರುವಂಥವು ಇನ್ನೊಂದು ಬಗೆಯವು. ಕೊನೆಗೆ ಗೆಲ್ಲುವುದು ಮಾತ್ರ ಹಿತಕಾರಿಯೂ ಮಧುರವೂ ಆಗಿರುವಂಥ ನೆನಪುಗಳು ಮಾತ್ರ. ಅಂಥ ಮಧುರ ನೆನಪುಗಳಲ್ಲಿ ಖಂಡಿತವಾಗಿಯೂ ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರೀ ಅವರು ಗುರುಗಳಾಗಿ ಸಿಕ್ಕಿದ ಸಂದರ್ಭ ಕೂಡ ಒಂದು. ಪ್ರಾಮಾಣಿಕವಾಗಿ ಬದುಕುವುದೊಂದನ್ನು ಬಿಟ್ಟು ಪಾಪಪುಣ್ಯಗಳೊಂದೂ ಗೊತ್ತಿಲ್ಲದ ಆ ಹೊತ್ತಿನಲ್ಲಿಯೂ ನನಗನ್ನಿಸಿದ್ದು, 'ಇದು ಯಾವ ಜನ್ಮದ ಪುಣ್ಯದ ಫಲವೋ ಕಾಣೆ' ಎಂಬುದೇ. ಈ ಭಾವನೆಯು ನನ್ನ ಮಟ್ಟಿಗೆ ಪೂಜ್ಯ ಶಾಸ್ತ್ರಿಗಳ ಸಮಗ್ರವ್ಯಕ್ತಿತ್ವವನ್ನು ಒಳಗೊಳ್ಳುತ್ತದೆ.

ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯ ಕನ್ನಡ ಅಧ್ಯಯನಸಂಸ್ಥೆಗೆ ಅಧ್ಯಾಪಕರಾಗಿ ಶಾಸ್ತ್ರಿಗಳು ಬರುವ ಹೊತ್ತಿಗೆ ಸರಿಯಾಗಿ ಎಂ.ಎ. ತರಗತಿಗೆ ನಾನು ದಾಖಲಾಗಿದ್ದೆ. ಅಲ್ಲಿದ್ದ ಎಲ್ಲ ಬೋಧಕರೂ ಅಪ್ರತಿಮ ವಿದ್ವತ್ತುಳ್ಳವರೇ ಆಗಿದ್ದುದು ಆಗಿನ ಎಲ್ಲ ವಿದ್ಯಾರ್ಥಿಗಳ ಪುಣ್ಯವಿಶೇಷ. ಅವರೆಲ್ಲ ನೆನಪಿನಲ್ಲಿ ಉಳಿದಿದ್ದರೂ ಶಾಸ್ತ್ರಿಗಳೇಕೆ ವಿಶಿಷ್ಟಸ್ಥಾನದಲ್ಲಿ ಕಾಣಿಸಿಕೊಳ್ಳುತ್ತಾರೆಂದರೆ, ಅವರು ಬೋಧಿಸುತ್ತಿದ್ದ ವಿಷಯದಿಂದ. ಅರ್ಥವಾಗದ ಅಥವಾ ಆಸಕ್ತಿಯಿಲ್ಲದ ವಿಚಾರಗಳು ಎದುರಾದಾಗ ಮನಸ್ಸು ವಿಮುಖವಾಗುವುದೊಂದು ಸಹಜಮನೋವ್ಯಾಪಾರ. ಆದರೆ, ಅಂಥ ವಿಷಯಗಳ ಮೂಲಕ ವಿದ್ಯಾರ್ಥಿಗಳನ್ನು ಆಕರ್ಷಿಸುವುದಿದೆಯಲ್ಲ, ಅದು ಸಾಮಾನ್ಯ ಬೋಧಕರಿಂದ ಸಾಧ್ಯವಾಗುವ ಕೆಲಸವಲ್ಲ. ವ್ಯಾಕರಣ ಛಂದಸ್ಸು ಕಾವ್ಯಮೀಮಾಂಸೆಗಳಂಥ ನಿದ್ರೆಗುಳಿಗೆಗಳ ಮೂಲಕವೇ ನಮ್ಮನ್ನು ಎಚ್ಚರವಾಗಿಡುತ್ತಿದ್ದ ಶಾಸ್ತ್ರಿಗಳ ಬೌದ್ಧಿಕ ಚಮತ್ಕಾರವು ಎಂದಿಗೂ ಮರೆಯುವಂಥದ್ದಲ್ಲ.

ಸಾಂಗತ್ಯಗಳನ್ನು ಓದುವ ವಿಧಾನ, ವಾರ್ಧಕಷಟ್ಪದಿಗಳನ್ನು ಓದುವ ವಿಧಾನ ಹೀಗೆ ಯಾವುಯಾವುದನ್ನು ಹೇಗೆ ಹೇಗೆ ಓದಿಕೊಂಡರೆ ಅದು ಸುಲಭಗ್ರಾಹ್ಯವಾಗುತ್ತದೆ ಎಂಬುದನ್ನು ಓದಿ (ಹಾಡಿ?) ತೋರಿಸುತ್ತಿದ್ದರು. 'ಅರಸುಗಳಿಗಿದು ವೀರ, ದ್ವಿಜರಿಗೆ ಪರಮವೇದದ ಸಾರ' ಮುಂತಾದ ಅವರ ಲಯಬದ್ಧ ಓದುಗಳು ಮೂವತ್ತೈದು ವರ್ಷ ಗಳ ಅನಂತರವೂ ಕಿವಿಯಲ್ಲಿ ಗುಂಯ್‌ಗುಡುತ್ತಿವೆ. ತರಗತಿಗಳಲ್ಲಿ ವಿದ್ವತ್ತು ಹೇಗೆ ಪ್ರಕಾಶಿಸುತ್ತಿತ್ತೋ ತರಗತಿಗಳ ಹೊರಗೆ ಪ್ರೀತಿ ವಾತ್ಸಲ್ಯಗಳು ಹಾಗೇ ಪ್ರಕಾಶಿಸು ತ್ತಿದ್ದುವು.

ಡಾ.ವೆಂಕಟಾಚಲ ಶಾಸ್ತ್ರಿಗಳು ನನಗೆ ಹೆಚ್ಚು ಪ್ರಿಯವಾಗುವುದು ಇಲ್ಲಿ. ನನ್ನ ವಯಸ್ಸಿನವರು ಕಂಡಾಗ ನನ್ನ ವಯಸ್ಸಿನವರೇ ಆಗಿಬಿಡುತ್ತಾರೆ; ಕಲೆಯುತ್ತಾರೆ, ಬೆರೆ ಯುತ್ತಾರೆ, ಸರಸಸಂಭಾಷಣೆಯಲ್ಲಿ ತೊಡಗುತ್ತಾರೆ. ಅವರ ಮುಕ್ತಮನಸ್ಸಿನ ನಗೆ ನನಗೆ ತುಂಬ ಇಷ್ಟ. ತುಂಬಿದ ಸಭೆಯಲ್ಲಿ ಶಾಸ್ತ್ರಿಗಳಿದ್ದಾರೆ ಎಂಬುದನ್ನು ಅವರ ನಗೆ ಯಿಂದಲೇ ದೂರದಿಂದಲೂ ತಿಳಿಯಬಹುದು. ಅವರ ಮನಸ್ಸಿನಷ್ಟೇ ಮುಕ್ತ ಅವರ ನಗೆ. ಎಲ್ಲವೂ ಸರಳ, ಶುದ್ಧ, ಎಲ್ಲಿಯೂ ಕೃತಕತೆ ಎಂಬುದಿಲ್ಲ.

ಮೈಸೂರು ಹುಣಸೂರು ಹೆದ್ದಾರಿಯಲ್ಲಿ ವಿಜಯನಗರದಲ್ಲಿರುವ ಮುಲಕನಾಡು ಸಭಾದ ಕಟ್ಟಡದ ನಿರ್ಮಾಣಕಾರ್ಯ ನಡೆಯುತ್ತಿದ್ದಾಗೊಮ್ಮೆ ಗೆಳೆಯ ಎನ್.ಎಸ್. ಶಾರದಾಪ್ರಸಾದರೊಡನೆ ಆಕಸ್ಮಿಕವಾಗಿ ಅಲ್ಲಿಗೆ ಹೋಗಿದ್ದೆ. ಕಟ್ಟಡದ ಮೊದಲ ತಾರಸಿ ಮುಗಿದು ಕ್ಯೂರಿಂಗ್ ಆಗುತ್ತಿತ್ತು. ಸ್ಕೂಟರಿನಿಂದ ಇಳಿದು ಶಾರದಾಪ್ರಸಾದರು ಏಣಿ ಹತ್ತತೊಡಗಿದರು. ಹತ್ತಲು ನನಗೂ ಹೇಳಿದರು. ಅವರ ಹಿಂದೆ ನಾನೂ ಹತ್ತಿಹೋದೆ. ನೋಡಿದರೆ ಅಲ್ಲಿ ಶಾಸ್ತ್ರಿಗಳು ಮೂರ್‍ನಾಲ್ಕು ಗೆಳೆಯರೊಡನೆ ಮಾತಾಡುತ್ತ ನಿಂತಿದ್ದರು. ನಮ್ಮನ್ನು ನೋಡಿ ಎಂದಿನಂತೆ ಪ್ರೀತಿಯಿಂದ ಮಾತಾಡಿದರು. ಶಾರದಾಪ್ರಸಾದರನ್ನು ಅವರು ನಿರೀಕ್ಷಿಸಿದ್ದಿರಬಹುದು. ನನ್ನ ಆಗಮನ ಶಾಸ್ತ್ರಿಗಳಲ್ಲಿ ಆಶ್ಚರ್ಯವನ್ನುಂಟು ಮಾಡಿತ್ತು. ಅಲ್ಲಿಂದ ಎಲ್ಲರೂ ಕೆಳಗಿಳಿದು ಬಂದರು. ಮೊದಲೇ ವ್ಯವಸ್ಥೆಯಾಗಿತ್ತೆಂದು ತೋರುತ್ತದೆ, ಛಾಯಾಗ್ರಾಹಕನೊಬ್ಬ ಆ ಹಂತದ ಕಟ್ಟಡದ ಫೋಟೋ ತೆಗೆಯಲು ಸಜ್ಜಾಗಿ ನಿಂತಿದ್ದ. ಸರಿ, ನನ್ನ ಪಾಡಿಗೆ ನಾನು ದೂರ ಹೋಗಿ ನನ್ನ ಸ್ಕೂಟರಿನ ಬಳಿ ನಿಂತುಕೊಂಡೆ. ಅಲ್ಲಿದ್ದವರೆಲ್ಲ ಮುಲಕನಾಡು ಸಭಾದ ಸದಸ್ಯರೇ. ಫೋಟೋಗೆ ಅವರೆಲ್ಲ ನಿಂತಾಗ, ಶಾಸ್ತ್ರಿಗಳು ನನ್ನನ್ನು ಕೂಗಿ ಕರೆದು ಪಕ್ಕದಲ್ಲಿ ನಿಲ್ಲಿಸಿಕೊಂಡರು. ಶಾಸ್ತ್ರಿಗಳ ವಾತ್ಸಲ್ಯಕ್ಕಾಗಿ ನಾನಲ್ಲಿ ನಿಲ್ಲಬೇಕಾಯಿತೇ ಹೊರತು, ಫೋಟೊದಲ್ಲಿ ಕಾಣಿಸಿಕೊಳ್ಳುವ ಯಾವ ಅರ್ಹತೆಯೂ ನನಗಿರಲಿಲ್ಲ! ಶಾಸ್ತ್ರಿಗಳ ಪ್ರೀತಿಗೆ, ವಾತ್ಸಲ್ಯಕ್ಕೆ, ನಾನು ಯಾವತ್ತೂ ಸೋಲುವವನೇ.

ಪೂಜ್ಯ ಡಾ.ವೆಂಕಟಾಚಲ ಶಾಸ್ತ್ರೀ ಅವರು ಕನ್ನಡ ಅಧ್ಯಯನಸಂಸ್ಥೆಯ ನಿರ್ದೇಶಕ ರಾಗಿದ್ದ ಅವಧಿಯಲ್ಲಿನ ಒಂದು ಸಂದರ್ಭ ನೆನಪಾಗುತ್ತಿದೆ:

ಸಂಸ್ಥೆಗೆ ವರ್ಗವಾಗಿ ಬಂದ ಕಛೇರಿಯ ಮುಖ್ಯಸ್ಥರೊಬ್ಬರು (ಅವರು ಈಗ ಇಲ್ಲ) ತಾನು ನಿಷ್ಠಾವಂತ ಅಧಿಕಾರಿಯೆಂದು ತೋರಿಸಿಕೊಳ್ಳಲೋ ಏನೋ ಸಂಸ್ಥೆಯಲ್ಲಿ ಎಂದಿನಿಂದಲೂ ಜಾರಿಯಲ್ಲಿದ್ದ ವಿಶ್ವವಿದ್ಯಾನಿಲಯದ ಕೊಳೆತು ನಾರುತ್ತಿದ್ದ ನಿಯಮ ವೊಂದನ್ನು ಎಲ್ಲರೂ ಪಾಲಿಸಬೇಕೆಂದು ಒಂದು ಆದೇಶ ಹೊರಡಿಸಿದರು. ನೂರಾರು ಸಹಿಗಳ ನಡುವೆ ಆ ಆದೇಶಕ್ಕೂ ನಿರ್ದೇಶಕರಾದ ಶಾಸ್ತ್ರಿಗಳ ಸಹಿ ಬಿದ್ದುಬಿಟ್ಟಿತ್ತು. ಆ ಆದೇಶದಿಂದ ಸಂಸ್ಥೆಯ ಉದ್ಯೋಗಿಗಳಿಗೆಲ್ಲ ಉಸಿರು ಕಟ್ಟಿದಂತಾಗಿತ್ತು. ಆ ನಿಯಮ ಇಲ್ಲದೆಯೂ ಸಂಸ್ಥೆಯ ಎಲ್ಲ ಚಟುವಟಿಕೆಗಳೂ ಸುಗಮವಾಗಿ ನಡೆದುಕೊಂಡು ಬರು ತ್ತಿರುವಾಗ ಇದೇನು ಕುಚೋದ್ಯ ಎಂದು ಎಲ್ಲರಿಗೂ ಅನ್ನಿಸತೊಡಗಿತು. ಒಂದು ದಿನ ಬೆಳಿಗ್ಗೆ ಎಲ್ಲ ಉದ್ಯೋಗಿಗಳೂ ನಿರ್ದೇಶಕರ ಕೊಠಡಿಯ ಮುಂದೆ ಧರಣಿ ಹೂಡಿದೆವು. ಹೊರಗೆ ಹೋಗಿದ್ದ ಶಾಸ್ತ್ರಿಗಳು ಬಂದಾಗ ಈ ದೃಶ್ಯ ಕಂಡು ಮೂಕವಿಸ್ಮಿತರಾದರು. ಕಾರಣ ಕೇಳಿದರು. ಆಮೇಲೆ ಹೇಳಿದರು. 'ಏನ್ರಪ್ಪಾ ಮಾಡೋದು. ನಿಮ್ಮ ಪ್ರತಿಭಟನೆ ಸರಿಯಾಗಿಯೇ ಇದೆ. ಈ ಸ್ಥಾನದಲ್ಲಿ ಇಲ್ಲದೇ ಹೋಗಿದ್ದರೆ ನಾನೂ ನಿಮ್ಮೊಡನೆ ನೆಲದ ಮೇಲೆ ಕುಳಿತುಬಿಡುತ್ತಿದ್ದೆ.' ಹೀಗೆ ನಗುನಗುತ್ತಲೇ ಹೇಳಿ ಕೋಣೆಯ ಒಳಕ್ಕೆ ಹೋದರು. ಅವರು ಒಳಕ್ಕೆ ಹೋಗಿ ಬಹಳ ಹೊತ್ತೇನೂ ಆಗಿರಲಿಲ್ಲ. ಆದೇಶ ರದ್ದಾದ ಸುದ್ದಿ ನಮಗೆಲ್ಲ ತಲುಪಿತು. ಧರಣಿ ನಿಂತಿತು. ಹೀಗೆ ಶಾಸ್ತ್ರಿಗಳು ಒಳ್ಳೆಯ ಬೋಧಕ ರಷ್ಟೇ ಅಲ್ಲ, ಒಳ್ಳೆಯ ವಿದ್ವಾಂಸರಷ್ಟೇ ಅಲ್ಲ, ಒಳ್ಳೆಯ ಆಡಳಿತಗಾರರೂ ಹೌದು ಎಂಬುದು ನಮಗೆಲ್ಲ ತಿಳಿಯಿತು. ಈ ಸಂದರ್ಭದಲ್ಲಿ ಶಾಸ್ತ್ರಿಗಳು ನಿಜಕ್ಕೂ ಪೇಚಿಗೆ ಒಳಗಾಗಿದ್ದರು. ಆದರೆ ಸಮಯಪ್ರಜ್ಞೆಯನ್ನು ಬಳಸಿ ಸಹೋದ್ಯೋಗಿಗಳೆಲ್ಲರ ಪ್ರೀತಿ ಗೌರವಗಳನ್ನು ಉಳಿಸಿಕೊಂಡರು, ಹೆಚ್ಚಿಸಿಕೊಂಡರು.

ಕೊನೆಯಲ್ಲೊಂದು ಗೆರೆ: ತೋಗೆರೆ ಎಂಬ ಸ್ಥಳನಾಮಕ್ಕೆ ಸಂಬಂಧಿಸಿದ ಐತಿಹ್ಯ ಏನಿದೆಯೋ ತಿಳಿಯದು. ಆದರೆ, ನನ್ನ ಮನಸ್ಸಿನಲ್ಲಿರುವುದು ಇಷ್ಟು: ತೋಗೆರೆ ಎಂದರೆ ತೋರುಗೆರೆ. ತೋರುಗೆರೆಯೆಂದರೆ ಅದೊಂದು ಗರಿಷ್ಠಮಟ್ಟದ ಗುರುತು, ವಾಟರ್ ಮಾರ್ಕ್ ಎನ್ನುತ್ತಾರಲ್ಲ ಹಾಗೆ. ಅದು ಶಾಸ್ತ್ರಿಗಳ ವಿದ್ವತ್ತಿಗೆ, ಸಾತ್ವಿಕತೆಗೆ, ಸಂಬಂಧ ಪಟ್ಟದ್ದು. ಸಾತ್ವಿಕರಾದ ಡಾ.ವೆಂಕಟಾಚಲ ಶಾಸ್ತ್ರೀ ಅವರ ವಿದ್ವತ್ತು ಎಂಬುದು, ವಿದ್ವತ್ ಲೋಕದ ಒಂದು ಜಲಚಿಹ್ನೆ.

ಘನವಂತರು

ನಾಗತಿಹಳ್ಳಿ ಚಂದ್ರಶೇಖರ

ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರೀ ಘನವಿದ್ವಾಂಸರು. ನಾನು ಹಳಗನ್ನಡದ ಉಕ್ಕಿನ ಕಡಲೆಯನ್ನು ಜೀರ್ಣಿಸಿಕೊಂಡಿದ್ದೇ ಅವರಿಂದ. "ಲೀಲಾವತೀ ಪ್ರಬಂಧಂ" ಎಂಬ ನೀರಸ ಕೃತಿಯನ್ನೂ ಅವರು ಅರ್ಥವತ್ತಾಗಿ ಹೇಳುತ್ತಿದ್ದರು. ಟಿ.ವಿ.ವಿ. ಎಂದೇ ಖ್ಯಾತರಾಗಿದ್ದ ವೆಂಕಟಾಚಲ ಶಾಸ್ತ್ರಿಗಳು ನಗೆಮೊಗದ, ಮೆದುಮಾತಿನ, ಗಾಢತಿಳುವಳಿಕೆಯ ಅಧ್ಯಾಪಕರು. ನಾರದ ಮಹರ್ಷಿಗಳು ವೇಶ್ಯಾಗೃಹಕ್ಕೆ ಭೇಟಿ ನೀಡಿದ ಪ್ರಸಂಗ ಬಂದಾಗ ಪೇಚಿಗಿಟ್ಟುಕೊಂಡವರಂತೆ ಕಾವ್ಯದ ಸಾಲುಗಳನ್ನು ಹಾರಿಸಿ ಮುಂದೆ ಹೋಗುತ್ತಿದ್ದರು. ನವರಸ ವರ್ಣನೆಗಳಿಗೆ ಕಟ್ಟುಬಿದ್ದ ಹಳಗನ್ನಡದ ಕವಿಗಳಿಗೆ ತಮ್ಮ ಕಾವ್ಯ ಮುಂದೊಂದು ದಿನ ಕನ್ನಡ ಎಂ.ಎ.ಗೆ ಪಠ್ಯವಾಗುತ್ತದೆ ಮತ್ತು ಅದನ್ನು ಟಿ.ವಿ.ವಿ.ಯಂಥ ಸಭ್ಯರು ಪಾಠ ಮಾಡಬೇಕೆಂದು ಗೊತ್ತಿದ್ದಿದ್ದರೆ ಅವರು ನಾರದರನ್ನು ವೇಶ್ಯಾಗೃಹಕ್ಕೆ ಕಳುಹಿಸುವ ಪ್ರಸಂಗವನ್ನು ರಚಿಸುತ್ತಿರಲಿಲ್ಲವೇನೋ!

ಟಿ.ವಿ.ವಿ. ಘನವಂತರಾಗಿದ್ದರು. ಪಾಠ ಹೇಳುವುದರಲ್ಲಿ, ಮೌಲ್ಯಮಾಪನ ಮಾಡುವುದರಲ್ಲಿ ನಿರ್ವಂಚನೆ ನಿಷ್ಪಕ್ಷಪಾತಗಳಿದ್ದವು. ಬೆಂಗಳೂರು ಆಕಾಶವಾಣಿಯಲ್ಲಿ ಕೆಲಸ ಮಾಡುತ್ತಿದ್ದ ಟಿವಿವಿಯವರ ಮಗ ವಿದ್ಯಾ ಎದುರು ಬಂದಾಗಲೆಲ್ಲ ನಾನು ಪ್ರತಿ ಬಾರಿ ಹೊಸದಾಗಿ ಎಂಬಂತೆ "ನಿಮ್ಮ ತಂದೆ ಎಷ್ಟು ಚೆನ್ನಾಗಿ ಹಳಗನ್ನಡದ ಪಾಠ ಮಾಡ್ತಿದ್ರು ಗೊತ್ತಾ?" ಎಂದು ಅದನ್ನೇ ಹೇಳುತ್ತಿದ್ದೆ. "ಅದ್ಸರಿ ಮುಂದೆ?" ಎಂಬಂತೆ ವಿದ್ಯಾ ನನ್ನ ಕಡೆ ನೋಡಿದಾಗ ನಾನು ತೇಲುಗಣ್ಣು ಮೇಲುಗಣ್ಣು ಮಾಡಿ ಅದನ್ನೇ ಪುನರಾವರ್ತಿಸುತ್ತಿದ್ದೆ. ಮನಸ್ಸು ಹಾಗೇ. ಮೆಚ್ಚಿನ ಮಾಸ್ತರುಗಳನ್ನು ಮೆಲುಕುಹಾಕುವುದರಲ್ಲಿ ಖುಷಿಪಡುತ್ತದೆ.*

---

* ಹಾಯ್ ಬೆಂಗಳೂರು, ೨೬.೭.೨೦೦೨

ಮೇರುಗುರು

ಸರಸ್ವತಿ ವಿಜಯಕುಮಾರ್

ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿಯವರು ಅಂದು ನಮ್ಮ ವಿದ್ಯಾರ್ಥಿಬಳಗಕ್ಕೆ ಟಿ.ವಿ.ವಿ. ಎಂದೇ ಪ್ರಸಿದ್ಧರು. ಅಂದಿನ ದಿನಗಳ ಹಿನ್ನೆಲೆಯಲ್ಲಿ (೧೯೬೮-೭೦) ಅವರನ್ನು ನೆನಪುಮಾಡಿಕೊಳ್ಳುತ್ತಿದ್ದಂತೆ, ಮಾನಸಗಂಗೋತ್ರಿಯ ಕನ್ನಡ ಅಧ್ಯಯನಸಂಸ್ಥೆಯ ಆವರಣದಲ್ಲಿ ಮೊದಲ ದಿನ ಕಂಡ ಅವರ ಚಿತ್ರ ಕಣ್ಣಿಗೆ ಕಟ್ಟುತ್ತದೆ. ಕತ್ತನ್ನು ಮುಚ್ಚುವ ಕೋಟು, ಕೈಯಲ್ಲಿ ಛತ್ರಿ, ಪುಸ್ತಕಗಳು, ಗಂಭೀರ ನಡೆ-ನಿಲುವು, ಶಿಸ್ತಿನ ವೇಷ, ಶಿಸ್ತಿನ ಪಾಠ, ಶಿಸ್ತಿನ ಮಾತು ಇವು ಶಾಸ್ತ್ರಿಯವರು ಶಿಷ್ಯವೃಂದದಲ್ಲಿ ಮುದ್ರಿಸಿದ ಛಾಪು.

ಛಂದಸ್ಸು, ವ್ಯಾಕರಣ ಮೊದಲಾದ ಶಾಸ್ತ್ರೀಯ ವಿಷಯಗಳ ಪಾಠ ಹೇಳಲು ಶಾಸ್ತ್ರಿಯವರು ಎಂ.ಎ. ತರಗತಿಗಳಿಗೆ ಬರುತ್ತಿದ್ದರು. ಅವು ಅವರಿಗೆ ವಿಶೇಷವಾಗಿ ಕರಗತವಾದ ವಿಷಯಗಳೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಆದರೆ ಅಂತಹ ವಿಷಯಗಳು ನಮ್ಮ ತಲೆಗೆ ಹೋಗುವುದಾದರೂ ಹೇಗೆ? ಕ್ರಮೇಣ ನಮ್ಮ ಹಲವರ ಆತಂಕವನ್ನು ಅವರು ತೊಡೆದುಹಾಕಿದರು. ಅವರ ಪಾಠವೆಂದರೆ ಒಂದು ಸಮಗ್ರ ಅಧ್ಯಯನದ ಶೈಲಿಯದು. ತಾವು ಮಾಡಬೇಕಾದ ಅಂದಿನ ಪಾಠವಿಷಯಕ್ಕೆ ಸಂಬಂಧಪಟ್ಟ ಅನೇಕ ಗ್ರಂಥಗಳನ್ನು ಅವರು ತಮ್ಮೊಂದಿಗೆ ತರುತ್ತಿದ್ದರು. ಸಂಬಂಧಪಟ್ಟ ಉದ್ಧರಣೆಗಳನ್ನು, ವಿವರಗಳನ್ನು ಮೂಲದಿಂದಲೇ ಉಲ್ಲೇಖಿಸುತ್ತಿದ್ದರು. ಅಲ್ಲದೆ ಆ ವಿಷಯಗಳ ಬಗೆಗೆ ತಮ್ಮ ಖಚಿತವಾದ ಅಭಿಪ್ರಾಯಗಳನ್ನು ಹೇಳುತ್ತಿದ್ದರು. ಅವರ ಪಾಠವನ್ನು ಕೇಳುತ್ತ ಅದನ್ನು ಟಿಪ್ಪಣಿಯಾಗಿ ಬರೆದುಕೊಂಡರೆ ಸಾಕಿತ್ತು; ಮತ್ತೆ ಗ್ರಂಥಾಲಯದ ತಡಕಾಟ ಇರುತ್ತಿರಲಿಲ್ಲ. ಅವರ ಕ್ರಮಬದ್ಧ ಪಾಠಕ್ರಮ, ಪ್ರೌಢಶೈಲಿ ಇಂದಿಗೂ ಮನದಾಳದಲ್ಲಿ ಅಚ್ಚೊತ್ತಿವೆ. ಅವರು ತಮ್ಮ ಗುರುಗಳಾದ ಡಿ.ಎಲ್.ಎನ್. ಅವರನ್ನು ತರಗತಿಯಲ್ಲಿ ನೆನೆಯದ ದಿನವಿರಲಿಲ್ಲವೆಂದೇ ಹೇಳಬೇಕು. ಯಾವ ವಿದ್ಯಾರ್ಥಿಗಳೊಂದಿಗೂ ಅವರು ಕಟುವಾಗಿ ಮಾತನಾಡಿದವರಲ್ಲ. ಸಮತೋಲನದಿಂದ ಇರುತ್ತಿದ್ದರು. ಒಂದು ರೀತಿಯಲ್ಲಿ ಯೋಗಿಯ ವರ್ಚಸ್ಸು ಅವರದು.

ವಿದ್ಯಾರ್ಥಿಗಳು ಅವರೊಂದಿಗೆ ಸಲಿಗೆಯಿಂದ ಮಾತನಾಡುತ್ತಿರಲಿಲ್ಲ. ಭಯ, ಭಕ್ತಿ, ಗೌರವಗಳಿಂದ ಅವರೊಂದಿಗೆ ನಡೆದುಕೊಳ್ಳುತ್ತಿದ್ದೆವು. ಅವರಾದರೂ ಸದಾ ಅಧ್ಯಯನ ಶೀಲರು; ಗಂಭೀರವ್ಯಕ್ತಿತ್ವದವರು.

ಮತ್ತೆ ಅವರ ಶಿಷ್ಯವೃತ್ತಿ ನನಗೆ ಸುಮಾರು ೧೯೯೦ರ ವೇಳೆಗೆ ದೊರೆತದ್ದು ನನ್ನ ಸೌಭಾಗ್ಯವೆಂದೇ ನಾನು ಭಾವಿಸುತ್ತೇನೆ. ನಾನು ಪಿಎಚ್.ಡಿ ಮಾಡುವ ಹಿನ್ನೆಲೆಯಲ್ಲಿ ಪೂಜ್ಯ ಶಾಸ್ತ್ರಿಯವರೇ ನನ್ನ ಮಾರ್ಗದರ್ಶಕರಾಗಬೇಕೆಂಬ ಹೆಬ್ಬಯಕೆ ನನ್ನನ್ನು ಆವರಿಸಿತು. ಜೈನಪುರಾಣಗಳಿಗೆ ಸಂಬಂಧಿಸಿದಂತೆ ವಿಷಯದ ಆಯ್ಕೆಯನ್ನು ಮಾಡಿ ಕೊಳ್ಳಬೇಕೆಂದೂ ನಿಶ್ಚಯಿಸಿದ್ದೆ. ಅವರ ಒಪ್ಪಿಗೆಯನ್ನು ಅಂದೇ ಪಡೆಯಬೇಕೆಂಬ ಉತ್ಕಟ ಅಪೇಕ್ಷೆಯಲ್ಲಿ, ಪೂರ್ವಭಾವಿಯಾಗಿ ಅವರಿಗೆ ತಿಳಿಸದೆ ಆತುರಾತುರವಾಗಿ ಅವರ ಮನೆಗೆ ಹೋದೆ. ಅವರ ಸಮಯ ಸಂದರ್ಭಗಳೇನು ಎಂದು ವಿಚಾರಿಸಲೂ ಇಲ್ಲ(ನನ್ನ ಪತಿ ಶ್ರೀ.ವೈ.ಪಿ.ವಿಜಯಕುಮಾರ್ ಅವರೂ ನನ್ನೊಂದಿಗಿದ್ದರು. ಅವರೂ ಕೂಡ ಶಾಸ್ತ್ರಿಗಳ ಶಿಷ್ಯರು; ಅಭಿಮಾನಿಗಳು. ಸಾಹಿತ್ಯಕ್ಷೇತ್ರದ ನನ್ನ ಅಧ್ಯಯನದಲ್ಲಿ ಅವರ ಸಹಕಾರ ಸಹಯೋಗಗಳು ಎಂದಿನಿಂದಲೂ ಇವೆ).

ನಾವು ನಾಲ್ಕು ಗಂಟೆಯ ಸುಮಾರಿಗೆ ಅವರ ಮನೆಗೆ ಹೋದೆವು. ಮನೆಯಲ್ಲಿ ಕೆಲವು ನೆಂಟರಿಷ್ಟರು ಇದ್ದರು. ನಾವು ಹೋದಕೂಡಲೇ ಅವರು ನಮ್ಮನ್ನು ಪ್ರೀತಿ ಯಿಂದ ಬರಮಾಡಿಕೊಂಡರು. ಮಾತಿನ ಮಧ್ಯೆ ಅಂದು ಅವರ ತಾಯಿಯವರ ಪುಣ್ಯತಿಥಿ ಎಂಬುದನ್ನು ತಿಳಿಸಿದರು. ಬಂದ ವಿಷಯವೇನೆಂದು ಕೇಳಿದಾಗ ನಾನು ವಿಷಯವನ್ನು ಪ್ರಸ್ತಾಪಿಸಲು ಹಿಂಜರಿದೆ. ಆದರೆ ಶಾಸ್ತ್ರಿಯವರು ನಿಸ್ಸಂಕೋಚವಾಗಿ ವಿಷಯವನ್ನು ಪ್ರಸ್ತಾಪಿಸಿ ಎಂದರು. ನೇರವಾಗಿ ವಿಷಯಕ್ಕೆ ಬಂದೆ, ಏನು ಹೇಳುತ್ತಾರೊ ಎಂಬ ಆತಂಕ ಆವರಿಸಿತ್ತು. ಆಶ್ಚರ್ಯ, ವಿಷಯವನ್ನು ಪ್ರಸ್ತಾಪಿಸಿದ ಬೆನ್ನಲ್ಲೇ ಅವರು ನನಗೆ ಮಾರ್ಗದರ್ಶಕರಾಗಲು ಒಪ್ಪಿದರು. ತಮ್ಮ ತಾಯಿಯವರ ಪುಣ್ಯತಿಥಿಯ ಆ ದಿನದಲ್ಲಿ, ಬೇಡಿ ಬಂದ ನನ್ನನ್ನು ಶಾಸ್ತ್ರಿಯವರು ಬರಿಗೈಯಲ್ಲಿ ಕಳುಹಿಸಲಿಲ್ಲ. ತಮ್ಮ ಒಪ್ಪಿಗೆಯ ಆಶೀರ್ವಾದದಿಂದ ನನ್ನ ಮಡಿಲನ್ನು ತುಂಬಿ ಕಳುಹಿಸಿದರು. ಮುಂದಿನ ವಾರದಲ್ಲಿ ಅಧ್ಯಯನಸಂಸ್ಥೆಯಲ್ಲಿ ಬಂದು ಭೇಟಿಯಾಗಲು ಹೇಳಿದರು. ಅಲ್ಲಿಂದ ಮುಂದೆ 'ಕನ್ನಡದಲ್ಲಿ ಆದಿತೀರ್ಥಂಕರ ಚರಿತೆಗಳು- ತೌಲನಿಕ ಅಧ್ಯಯನ' ನಿಬಂಧವನ್ನು ಬರೆಯುವಾಗ್ಗೆ ಸುಮಾರು ಮೂರು ವರ್ಷಗಳ ಕಾಲ ಅವರ ನೇರಶಿಷ್ಯತ್ವದ ಭಾಗ್ಯ ನನ್ನದಾಯಿತು.

ಅಧ್ಯಯನಶೀಲತೆಯ ಆಳ-ಹರವುಗಳೆಂದರೆ ಏನು ಎಂಬುದನ್ನು ನಿಜವಾದ ಅರ್ಥದಲ್ಲಿ ನಾನು ಮನಗಂಡುದು ಆ ಮೇರುಗುರುಗಳ ಮಾರ್ಗದರ್ಶನದಲ್ಲಿ. ಅವರು ತೋರುತ್ತಿದ್ದ ಮಾರ್ಗದಲ್ಲಿ ದೃಢವಾದ ಹೆಜ್ಜೆಯಿಟ್ಟು ಮುನ್ನಡೆಯುವ ವರೆಗೆ ಅವರು ಬಿಡುತ್ತಿರಲಿಲ್ಲ. ಅಲ್ಲದೆ ಅವರು ತೋರುತ್ತಿದ್ದ ಶಿಷ್ಯವಾತ್ಸಲ್ಯವೂ ಅಪೂರ್ವವಾದುದು. ಅವರೊಂದಿಗೆ ಅವರ ಮನೆಯವರೂ ಕೂಡ ನಮಗೆ ಹತ್ತಿರದವರಾದರು. ಅವರೆಲ್ಲರ ಸರಳ ಸಜ್ಜನಿಕೆಯ ಸ್ವಭಾವ ಮನಸ್ಸಿಗೆ ಹಿತವನ್ನು ತರುವಂತಹದು. ಅವರ ಪತ್ನಿಯವರ ಸೌಮ್ಯ ಸರಳ ಸ್ವಭಾವವನ್ನು ಹಾಗೂ ಅವರು ನಮಗೆ ತೋರುತ್ತಿದ್ದ ಆದರಭಾವವನ್ನು ನಾನು ಸ್ಮರಿಸದೇ ಇರಲಾರೆ.

‘ಕನ್ನಡ ಕವಿಗಳು ಕಂಡ ಗೊಮ್ಮಟೇಶ್ವರ’ ೧೯೯೩ರಲ್ಲಿ ಮಹಾಮಸ್ತಕಾಭಿಷೇಕದ ಸಮಯದಲ್ಲಿ ಬೆಳಕನ್ನು ಕಂಡ ಸಮ್ಯಕ್ ಕೃತಿ. ಆ ಗ್ರಂಥ ಅಚ್ಚಾಗುವ ಪೂರ್ವಭಾವಿಯಾಗಿ ನಾವು ಶ್ರೀಕ್ಷೇತ್ರ ಶ್ರವಣಬೆಳಗೊಳದ ಪೂಜ್ಯ ಶ್ರೀ ಚಾರುಕೀರ್ತಿಭಟ್ಟಾರಕ ಸ್ವಾಮೀಜಿಯವರನ್ನು ಹಲವಾರು ಬಾರಿ ಭೇಟಿಯಾಗಿ, ಆ ಗ್ರಂಥದ ಪ್ರಕಟಣೆಯ ಬಗೆಗೆ ಗುರುಸಂದೇಶವನ್ನು ಹೊತ್ತುಹೋಗಿದ್ದೆವು. ಆ ಪಾವನ ಕೆಲಸಕ್ಕೆ ನಮ್ಮ ಅಳಿಲು ಸೇವೆ ಒದಗಿತೆಂಬ ಸಂತೋಷ ನಮಗೆ.

ಈಗ್ಗೆ ೪-೫ ವರ್ಷಗಳ ಹಿಂದೆ ಹಾಸನದ ಸ್ನಾತಕವಿಭಾಗದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಜೈನಾಲಜಿ ವಿಭಾಗದ ವತಿಯಿಂದ ದತ್ತಿ ಉಪನ್ಯಾಸವನ್ನು ಏರ್ಪಡಿಸಿದ್ದರು. ಆಗ್ಗೆ ಗುರುವರ್ಯರುಗಳಾದ ಟಿ.ವಿ.ವಿ., ಸಿ.ಪಿ.ಕೆ., ಎಂ.ಡಿ.ವಸಂತರಾಜಯ್ಯ ಇವರುಗಳೊಂದಿಗೆ ವಾಹನದಲ್ಲಿ ನಾನೂ ಪ್ರಯಾಣಬೆಳೆಸಿದೆ. ದಾರಿಯುದ್ದಕ್ಕೂ ವಾಗ್ಧಾರೆಯ ರಸದೌತಣ. ವಿಶೇಷವಾಗಿ ಟಿ.ವಿ.ವಿ. ಹಾಗೂ ಸಿ.ಪಿ.ಕೆ. ಯವರು ತಮ್ಮ ಹಿಂದಿನ ಕೆಲವು ರಸಕ್ಷಣಗಳನ್ನು ಮೆಲುಕುಹಾಕುತ್ತ ಸಾಗಿದ್ದರು. ಶಾಸ್ತ್ರಿಯವರು ಪಂಡಿತ ದಿಗ್ಗಜರಷ್ಟೇ ಅಲ್ಲ, ಸರಸ-ಸಲ್ಲಾಪ ಪ್ರಿಯರೆಂಬುದೂ ನನಗೆ ಮನವರಿಕೆ ಆಯಿತು. ವಿಶೇಷವೆಂದರೆ ಅವರ ಸರಸ-ಸಲ್ಲಾಪಕ್ಕೂ ಪಾಂಡಿತ್ಯದ ಗಂಧ! ಆ ವಿಚಾರಗೋಷ್ಠಿಯಲ್ಲಿ ನಾನು ‘ಆದಿಪುರಾಣ: ಧಾರ್ಮಿಕ ನೆಲೆಯಿಂದ’ ಎಂಬ ಪ್ರಬಂಧವನ್ನು ಮಂಡಿಸಿದೆ. ನನ್ನ ವಿಚಾರಸರಣಿಗಳನ್ನು ಅವರು ಮೆಚ್ಚಿದರು; ಹೊಗಳಿದರು. ಮುಂದಿನ ದಿನಗಳಲ್ಲಿ ಬೆಂಗಳೂರಿನ ಬಿ.ಎಂ.ಶ್ರೀ ಪ್ರತಿಷ್ಠಾನದ ವಾರ್ಷಿಕೋತ್ಸವದಂದು ಅದೇ ವಿಷಯವಾಗಿ ಉಪನ್ಯಾಸವನ್ನು ನೀಡಲು ನನಗೆ ಸೂಚನೆಯನ್ನಿತ್ತರು. ಆ ಮೇರುಗುರುವಿನಿಂದ ಸೈ ಎನಿಸಿಕೊಳ್ಳುವ ಕಾಲಲಬ್ಧಿ ಒದಗಿದುದು ನನ್ನ ಪುಣ್ಯವಿಶೇಷವೆಂದೇ ಭಾವಿಸುತ್ತೇನೆ. ಇತ್ತೀಚೆಗೆ ‘ಜೈನಪಾರಿಭಾಷಿಕಪದವಿವರಕೋಶ’ದ ಬಿಡುಗಡೆ ಸಮಾರಂಭವನ್ನು ಇತರ ಗ್ರಂಥಗಳೊಂದಿಗೆ ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗವು ಹಮ್ಮಿಕೊಂಡಿತ್ತು. ಆಗ್ಗೆ ಆ ಪುಸ್ತಕದ ಕರ್ತೃಗಳಾದ ನನ್ನನ್ನು ಹಾಗೂ ಶ್ರೀ ಬಾ.ವೇ.ಶ್ರೀಧರ ಅವರನ್ನು ಆ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಶಾಸ್ತ್ರಿಯವರು ವಿಶೇಷವಾಗಿ ಅಭಿನಂದಿಸಿದರು. ಇಂತಹ ಕೃತಿ ಕನ್ನಡಕ್ಕೆ ಬೇಕಾಗಿತ್ತು; ನೀವು ಒಳ್ಳೆಯ ಕೆಲಸ ಮಾಡಿದ್ದೀರಿ ಎಂದು ತುಂಬುಹೃದಯದಿಂದ ನುಡಿದರು. ಧನ್ಯತಾಭಾವ ಮನಸ್ಸಿನಲ್ಲಿ ತುಂಬಿಬಂತು.

ಪೂಜ್ಯ ಶಾಸ್ತ್ರಿಯವರ ಶಿಷ್ಯತ್ವದ ಆಶ್ರಯದಲ್ಲಿ, ಕನ್ನಡದ ನೆಲೆಯಲ್ಲಿ ಹೆಚ್ಚಿನ ಕೆಲಸವನ್ನು ಮಾಡುವ ಹುಮ್ಮಸ್ಸು ಶಿಷ್ಯವರ್ಗಕ್ಕೆ ಮೂಡುವುದರಲ್ಲಿ ಆಶ್ಚರ್ಯವಿಲ್ಲ. ಆ ಮೇರುಶಿಖರಪ್ರಾಯರಾದ ಗುರುವಿನ ಕೃಪಾದೃಷ್ಟಿ ಸದಾ ನಮ್ಮ ಮೇಲಿರಲಿ ಎಂದು ಆಶಿಸುತ್ತೇನೆ.

ಗುರುವರ್ಯ

ತುಳಸೀ ರಾಮಚಂದ್ರ

ವೀಣೆಯ ಬೆಡಗಿದು ಮೈಸೂರು
ಘಮಘಮಿಸುವ ಮಲ್ಲಿಗೆಯ ತಾಣವೀ ಮೈಸೂರು
ಜ್ಞಾನದಾಗರ ನಮ್ಮ ಗುರುಗಳ ನೆಲೆಯೇ ಮೈಸೂರು

ನೃತ್ಯ ನನ್ನ ಬಾಲ್ಯದ ಸಖಿ, ಉಸಿರು. ಕನ್ನಡ ಎಂ.ಎ. ವ್ಯಾಸಂಗ ಮಾಡುತ್ತಿರುವಾಗ ನಮ್ಮ ಪ್ರಾಚೀನ ಕವಿಗಳು ವರ್ಣಿಸಿರುವ ನೃತ್ಯಪ್ರಸಂಗಗಳ ಆಳವಾದ ಅಧ್ಯಯನದ ತೀವ್ರ ಬಯಕೆ ನನ್ನಲ್ಲಿ ಉಂಟಾಯಿತು. ಈ ಪ್ರಸಂಗಗಳಲ್ಲಿನ ಕಲಾತ್ಮಕತೆ, ತಾಂತ್ರಿಕತೆ, ಸೊಬಗು, ಪರಿಕರ ಇತ್ಯಾದಿಗಳನ್ನು ವಿಶ್ಲೇಷಿಸಲು ಆ ಮಾರ್ಗದಲ್ಲಿ ಸಂಶೋಧನೆ ಕೈಗೊಳ್ಳುವುದೇ ಸರಿ ಎಂದು ನಿರ್ಧರಿಸಿದೆ. ಈ ಒಂದು ಅಧ್ಯಯನ ನೃತ್ಯದ ಪ್ರಾಯೋಗಿಕ ಕ್ಷೇತ್ರಕ್ಕೂ ಸಹಕಾರಿಯಾಗಬಲ್ಲದು ಎಂಬ ಉದ್ದೇಶವೂ ನನ್ನದಾಗಿತ್ತು. ಈ ಉದ್ದೇಶ ಕ್ಕಾಗಿ ಸೂಕ್ತ ಮಾರ್ಗದರ್ಶಕರ ಅಗತ್ಯತೆ ಇತ್ತು. ಪ್ರೊ.ಎ.ವಿ.ನರಸಿಂಹಮೂರ್ತಿಯವರು ಡಾ.ಟಿ.ವಿ.ವಿ. ಅವರೇ ಈ ವಿಷಯಕ್ಕೆ ಸಮರ್ಥರಾದವರು ಎಂದು ಸೂಚಿಸಿದರು. ಡಾ.ಟಿ.ವಿ.ವಿ. ಅವರ ಪ್ರಕಾಂಡಪಾಂಡಿತ್ಯ ಪ್ರತಿಭೆಗಳ ಅರಿವಿದ್ದ ನನಗೆ ಅವರನ್ನು ಸಂಪರ್ಕಿಸುವ ಧೈರ್ಯ ಸಾಲದಾಯಿತು. ವಿಜ್ಞಾನದ ಪದವೀಧರೆಯಾದ ನನಗೆ ಕನ್ನಡದ ಬುನಾದಿ ಇರಲಿಲ್ಲ. ಎಂ.ಎ. ತರಗತಿಗೆ ಪ್ರವೇಶವನ್ನು ಮೊದಲು ವಿಶ್ವವಿದ್ಯಾಲಯ ನಿರಾಕರಿಸಿದಾಗ ಕನ್ನಡ ಡಿಪ್ಲೊಮ ಮಾಡಿದ್ದು ಮತ್ತು ಗಮಕಕಲೆಯ ಬಲದಿಂದ ಕಿಂಚಿತ್ತು ಕನ್ನಡ ಕಾವ್ಯ, ವ್ಯಾಕರಣ, ಹಾಗೂ ಛಂದಸ್ಸಿನ ಪರಿಚಯವಿದ್ದು ಹೆದರುತ್ತಲೇ ಗುರು ಗಳನ್ನು ನನಗೆ ಮಾರ್ಗದರ್ಶಕರಾಗಬೇಕೆಂದು ಕೋರಿದೆ. ನನ್ನ ಬೇಡಿಕೆಗೆ ಆಶ್ಚರ್ಯ ವನ್ನು ಸೂಚಿಸುತ್ತ, “ಇದೇನು ಕಾಕತಾಳ ನ್ಯಾಯ! ನೋಡಿ, ಈ ಕೆಲಸಗಳು ಕನ್ನಡಲೋಕಕ್ಕೆ ಆಗಬೇಕಾಗಿವೆ” ಎಂದು ಈ ಕ್ಷೇತ್ರದಲ್ಲಿ ನಡೆಯಬೇಕೆಂದು ತಾವು ಮಾಡಿದ ಸಂಶೋಧನೆಗಳ ಪಟ್ಟಿಯನ್ನು ತೋರಿಸಿದರು. ಅದರಲ್ಲಿ ಪ್ರಥಮವಾಗಿ ‘ಕನ್ನಡ ಕಾವ್ಯಗಳಲ್ಲಿ ನೃತ್ಯಕಲೆಯ ಉಗಮ ಮತ್ತು ವಿಕಾಸಗಳ ಅಧ್ಯಯನ’ ಎಂಬ ವಿಷಯ ವಿತ್ತು. ಇದು ದೈವ ತಂದ ವರವೇ ಸರಿ! ನನ್ನ ಅಭೀಷ್ಟಕ್ಕೆ ನಮ್ಮ ಗುರುಗಳು ಸ್ಪಂದಿಸುತ್ತಾ ರೆಂಬ ನಿರೀಕ್ಷೆ ನನಗಿರಲಿಲ್ಲ.

"ನಿಮಗೆ ಬರೆಯುವ ಅಭ್ಯಾಸ ಇದೆಯೇ? ಏನು ಬರೆದಿದ್ದೀರಿ? ಸಾಹಿತ್ಯಕೃಷಿ ಎಷ್ಟು ಮಾಡಿದ್ದೀರಿ?" ಎಂದೆಲ್ಲ ಹಲವಾರು ಪ್ರಶ್ನೆಗಳನ್ನು ಕೇಳಿದರು. "ಮೊದಲು ಸಿನಾಪ್ಸಿಸ್ ಬರೆಯಿರಿ, ನಿಮ್ಮ ಉದ್ದೇಶ ಶೈಲಿ ಭಾಷೆ ಬರವಣಿಗೆಗಳನ್ನು ನೋಡಿ ಹೇಳ್ತೀನಿ. ಬರೆದು ತೋರಿಸಿ" ಎಂದರು. ಅಬ್ಬಾ! ಅಷ್ಟಾದರೂ ಗುರುಕರುಣೆ ದೊರಕಿತಲ್ಲ ಅಂತ ಸಂಭ್ರಮ, ಸಂತಸಗಳಿಂದ ಶುಭದಿನದಂದು ಕಾರ್ಯವನ್ನಾರಂಭಿಸಿದೆ. ಸುಮಾರು ೩ ತಿಂಗಳ ಸತತ ಶ್ರಮದಿಂದ ಸಿನಾಪ್ಸಿಸ್ ಬರೆದು ತೋರಿಸಿದೆ. ನನ್ನ ಬಾಲಭಾಷೆಯನ್ನು ತಿದ್ದಿ ಅದಕ್ಕೆ ಹೊಸರೂಪ ಕೊಡಲು ಗುರುಗಳು ಸೂಚಿಸಿದರು. ಸಿನಾಪ್ಸಿಸ್ ಸಿದ್ಧಪಡಿಸಿ ನೋಂದಣಿಗಾಗಿ ಅರ್ಜಿ ಸಲ್ಲಿಸಿದರೆ ಅಲ್ಲಿ ಒಂದು ಆಘಾತವೇ ನನಗೆ ಕಾದಿತ್ತು. ನಮ್ಮ ಗುರುಗಳಿಗೆ ಆಗಲೇ ೫ ಜನ ಸಂಶೋಧನವಿದ್ಯಾರ್ಥಿಗಳು ಇದ್ದರು. ಆರನೆಯವರಾಗಿ ಪರಿಶಿಷ್ಟಪಂಗಡಕ್ಕೆ ಕಾದಿರಿಸಲಾಗಿತ್ತು. ಅತೀವ ನಿರಾಸೆಗೊಂಡ ನನಗೆ ಡಾ.ಟಿ.ವಿ.ವಿ. ಯವರು "ನೋಡಮ್ಮ, ನನಗೆ ನೃತ್ಯದ ಪ್ರಾಯೋಗಿಕತೆಯ ಬಗ್ಗೆ ಏನೂ ಗೊತ್ತಿಲ್ಲ! ಬೇರೆ ಯಾರನ್ನಾದರೂ ಗೈಡ್ ಮಾಡಿಕೊಳ್ಳಿ, ನಿಮಗೆ ಬೇಗ ಪಿಎಚ್.ಡಿ ಪದವಿ ದೊರೆಯುತ್ತದೆ" ಎಂದರು. ಆದರೆ ಅವರ ವಿನಾ ಬೇರೆ ಗೈಡ್‌ನ ಊಹೆ ಕೂಡ ನನಗೆ ಇರಲಿಲ್ಲ! ಅದಕ್ಕಾಗಿ ನನ್ನ ಗುರುಗಳನ್ನು ಒತ್ತಾಯ ಮಾಡಿದೆ. ಡಾ.ಟಿ.ವಿ.ವಿ.ಯವರು "ನಾನೇ ನಿಮಗೆ ಮಾರ್ಗದರ್ಶಕನಾಗಬೇಕಾದರೆ ಯು ವಿಲ್ ಹ್ಯಾವ್ ಟು ಎಕ್ಸರ್ಸೈಜ್ ಸಮ್ ಪೇಷನ್ಸ್. ಇದು ಸುಮಾರು ೨ರಿಂದ ೩ ವರ್ಷದವರೆಗೂ ಎಳೆಯಬಹುದು" ಎಂದರು. ಅದಕ್ಕೆ ನಾನು "ಸರ್, ನನಗೆ ಡಿಗ್ರಿಗಿಂತ ಅಧ್ಯಯನ ಮುಖ್ಯ. ಈ ಕ್ಷಣದಿಂದಲೇ ತಾವು ಒಪ್ಪುವ ಕೃಪೆ ಮಾಡಬೇಕು" ಎಂದು ಕೇಳಿಕೊಂಡೆ. ಗುರುಕರುಣೆ, ಕೃಪಾಕಟಾಕ್ಷದ ಅದೃಷ್ಟ ನನಗಿತ್ತು. ನನ್ನ ಜನ್ಮಾಂತರಪುಣ್ಯವಿಶೇಷದಿಂದ ಡಾ.ಟಿ.ವಿ.ವಿ. ಯವರು ನನಗೆ ಗುರುಗಳಾಗಿ ದೊರೆತರು.

೧೯೯೩ರಲ್ಲಿ ಅವರ ಬಳಿ ಅಭ್ಯರ್ಥಿಗಳು ತೆರವಾದ ಕೂಡಲೆ ನಾನು ಪಿಎಚ್.ಡಿಗೆ ನೊಂದಾಯಿಸಿದೆ. ಆಗ ಅವರು ಕುವೆಂಪು ಕನ್ನಡ ಅಧ್ಯಯನಸಂಸ್ಥೆಯ ನಿರ್ದೇಶಕರಾಗಿ ಕಾರ್ಯ ನಿರ್ವಹಿಸುತ್ತಿದ್ದರು.

ಅತ್ಯಂತ ಶಿಸ್ತು ಸಮಯಪರಿಪಾಲಕರಾಗಿ ಸದಾ ಕಾರ್ಯತತ್ಪರರಾಗಿರುತ್ತಿದ್ದ ಗುರುಗಳು ಮೂರು ತಿಂಗಳಿಗೊಮ್ಮೆ, ತಿಂಗಳಿಗೊಮ್ಮೆ, ನಂತರ ೧೫ ದಿನಗಳಿಗೊಮ್ಮೆ ವಿಷಯದ ಚರ್ಚೆಗೆ ಕರೆಯುತ್ತಿದ್ದರು. ಅವರ ಗುರುಗಳಾದ ಪ್ರೊ.ಡಿ.ಎಲ್.ಎನ್. ಅವರೂ ಇದೇ ಸಮಯಕ್ಕೆ ತಮ್ಮನ್ನು ಚರ್ಚೆಗಾಗಿ ಕರೆಯುತ್ತಿದ್ದರೆಂದು ಆ ದಿನಗಳನ್ನು ನೆನಪಿಸಿಕೊಳ್ಳುತ್ತಿದ್ದರು. ಅವರ ಮಾರ್ಗದರ್ಶನದ ವೈಖರಿ ನನ್ನನ್ನು ಸಾಹಿತ್ಯ ಹಾಗೂ ನೃತ್ಯ ಈ ಎರಡೂ ಕ್ಷೇತ್ರಗಳಲ್ಲಿ ಸದಾ ತೊಡಗಿಸಿಕೊಳ್ಳುವಂತೆ ಮಾಡುತ್ತಿತ್ತು, ನಾನು ಬರೆದುಕೊಂಡು ಹೋಗಿದ್ದ ಭಾಗವನ್ನು ನನ್ನಿಂದಲೇ ಓದಿಸುತ್ತಿದ್ದರು. ಕವಿಗಳ ನೃತ್ಯ ಪ್ರಸಂಗದ ವರ್ಣನೆಯನ್ನು ಕೇಳಿ ಪರವಶರಾಗುತ್ತಿದ್ದರು. ಅಲ್ಲಲ್ಲೇ ನೃತ್ಯದ ಪರಿಭಾಷೆ

ಪ್ರಸಂಗಗಳ ವಿಶ್ಲೇಷಣೆಯನ್ನು ಕುರಿತು ಟಿಪ್ಪಣಿಯನ್ನೂ ಬರೆಸುತ್ತಿದ್ದರು. ಅವರಿಗಿದ್ದ ಸಾಹಿತ್ಯದ ಮೇಲಿನ ಪ್ರೀತಿ, ಭಾಷೆಯ ಹಿಡಿತ, ಕ್ಷೇತ್ರದಲ್ಲಿನ ಅಗಾಧವಾದ ಜ್ಞಾನವನ್ನು ಕಂಡು ವಿಸ್ಮಿತಳಾಗುತ್ತಿದ್ದೆ. ಹತ್ತು ಹದಿನೈದು ನಿಮಿಷಗಳ ಚರ್ಚೆಯಲ್ಲಿ ವರ್ಷಗಳ ಅಧ್ಯಯನಕ್ಕಾಗುವಷ್ಟು ಮಾಹಿತಿಗಳನ್ನು ನೀಡುತ್ತಿದ್ದರು. ಹತ್ತು ಹಲವು ಶಾಸ್ತ್ರಗ್ರಂಥ, ಪರಾಮರ್ಶನಗ್ರಂಥ ಹಾಗೂ ಸಂಶೋಧನಗ್ರಂಥಗಳನ್ನು ಅಧ್ಯಯನಕ್ಕೆ ಸಲಹೆಯನ್ನು ಕೊಡುತ್ತಿದ್ದರು. ವಿಷಯ ಬಿಟ್ಟು ಒಂದಿನಿತೂ ಆ ಕಡೆ ಈ ಕಡೆ ಹೋಗದ ಮಾತು, ಚರ್ಚೆ ಮುಗಿದ ನಂತರ ಗೇಟಿನ ತನಕ ಬಂದು, "ದ್ವಿಚಕ್ರವಾಹನದಲ್ಲಿ ಬಂದಿದ್ದೀರಿ, ಹುಷಾರಾಗಿ ಹೋಗಿಬನ್ನಿ" ಎಂದು ಅಕ್ಕರಾಸ್ಥೆಯಿಂದ ಕಳುಹಿಸಿಕೊಡುವ ಶಿಷ್ಯವಾತ್ಸಲ್ಯ. ಗುರುಪತ್ನಿ ಶ್ರೀಮತಿ ವೆಂಕಟಲಕ್ಷ್ಮಿಯವರೂ ಅರಿಶಿನ ಕುಂಕುಮ ತಾಂಬೂಲದ ಜೊತೆಗೆ ತೌರಿಗೆ ಬಂದ ಮಗಳನ್ನು ಬೀಳ್ಕೊಡುವಂತೆ ಭಾಸವಾಗುತ್ತಿತ್ತು. ಕನ್ನಡ ಕವಿಗಳು ಬಳಸುವ ನೃತ್ಯಪರಿಭಾಷೆ, ತಾಂತ್ರಿಕ ಸೂಕ್ಷ್ಮವಿವರಗಳು ದಶಕಗಳಿಂದ ಸಮರ್ಪಕವಾದ ಅರ್ಥ ವಿವರಣೆಗಳನ್ನು ಪಡೆಯದೇ ಇದ್ದವು. ಅವುಗಳಿಗೆ ಸೂಕ್ತವಾದ ಅರ್ಥ, ವಿವರಣೆಗಳನ್ನು ಸಮರ್ಪಕವಾದ ವಿಶ್ಲೇಷಣೆಯೊಂದಿಗೆ ವಿಶದೀಕರಿಸಲು ಗುರುಗಳು ನನ್ನನ್ನು ಪ್ರೇರೇಪಿಸಿದರು.

ಪಂಪ ಬಳಸುವ 'ಚಲ್ಲಿ' ಎಂಬ ಪದ, ೨ನೆಯ ನಾಗವರ್ಮ ಬಳಸುವ 'ಕಟಿಚಲ್ಲಿ', 'ಉರಚಲ್ಲಿ' ಪದಗಳು, ಅಗ್ಗಳದೇವ, ಜನ್ನಕವಿಗಳು ಉಲ್ಲೇಖಿಸುವ ದೇಶೀ ಲಾಸ್ಯಾಂಗಗಳು, ಬಂಧುವರ್ಮ, ಚಾಮರಸ, ದೇವರಸರು ಬಳಸುವ ದೇಶೀ ಕರಣಗಳು, ಬಾಹುಬಲಿಪಂಡಿತ, ಜನ್ನ, ರತ್ನಾಕರವರ್ಣಿ ಮುಂತಾದವರು ಸೂಚಿಸುವ ವಿಶೇಷ ಪ್ರಾಂತೀಯ ನೃತ್ಯಗಳು(ಗೌಂಡಲಿ, ಪೇರಣಿ, ಕಟ್ಟರೆ, ಕೈವಾಡ, ಪ್ರೇಂಖಣ, ಜಕ್ಕರಿ, ಕೊರವಂಜಿ), ಕವಿ ಚಂದ್ರಶೇಖರ ವರ್ಣಿಸುವ ಕರ್ನಾಟಕನೃತ್ಯಸಂಪ್ರದಾಯ ಮುಂತಾದುವು ಅಧ್ಯಯನ ಹಾಗೂ ಸಂಶೋಧನೆಯ ಮೂಲಕ ತಮ್ಮ ಸ್ವರೂಪ, ಅರ್ಥವತ್ತತೆಯ ಸ್ಪಷ್ಟತೆಯನ್ನು ಪಡೆದಾಗ ನಮ್ಮ ಗುರುಗಳಿಗಾದ ಆನಂದ ಅಷ್ಟಿಷ್ಟಲ್ಲ! ಅವರ ಕನ್ನಡ ಸಾಹಿತ್ಯ ಹಾಗೂ ಶಾಸ್ತ್ರಪ್ರೇಮ ಆ ಮಟ್ಟಿನದು! ಖಚಿತತೆ, ಪರಿಪೂರ್ಣತೆ, ಅಚ್ಚುಕಟ್ಟುತನ ಅವರ ಶೀಲ. ಅಧ್ಯಯನದ ಯಾವುದೇ ಭಾಗವನ್ನು ಹತ್ತು ಸಲ ಮನೆಯಲ್ಲಿ ಬರೆದು ಓದಿ ನಂತರ ತಮಗೆ ತೋರಿಸಬೇಕೆಂದು ಹೇಳುತ್ತಿದ್ದರು. ಕಾವ್ಯಗಳಲ್ಲಿನ ನೃತ್ಯಪ್ರಸಂಗಗಳಲ್ಲಿನ ಸಾಧ್ಯಾಸಾಧ್ಯತೆಯನ್ನು ವಿವರವಾಗಿ ಕೇಳಿ ಅದನ್ನು ಬರಹರೂಪದಲ್ಲಿ ಹೇಗೆ ತರಬೇಕೆಂದು ಮಾರ್ಗದರ್ಶನವನ್ನು ಮಾಡುತ್ತಿದ್ದರು. ತಮ್ಮ ನಿರೀಕ್ಷೆಯ ಮಟ್ಟಕ್ಕೆ ಬರವಣಿಗೆ ವಿವರಣೆಗಳು ಇರದಿದ್ದಾಗ ನಿರ್ದಾಕ್ಷಿಣ್ಯವಾಗಿ ತಿರಸ್ಕರಿಸಿದ್ದಾರೆ. ಅನೇಕ ವೇಳೆ ಬರೆಹ ಅವರ ನಿರೀಕ್ಷೆಯ ಮಟ್ಟಕ್ಕೆ ಹತ್ತಿರ ಬಂದರೆ ಮುಕ್ತವಾಗಿ ಶ್ಲಾಘನೆಯನ್ನು ಮಾಡಿ ಹುರಿದುಂಬಿಸಿದ್ದಾರೆ.

ಶಾಸ್ತ್ರವೇತ್ತರೂ ಅಸಾಧಾರಣಪಂಡಿತರೂ ಆದ ಗುರುವಿಗೆ ನನ್ನ ಅಭಿಮಾನ, ಕೃತಜ್ಞತೆ, ಪ್ರೀತಿಗಳನ್ನು ನರ್ತನದ ಮೂಲಕ ಅಭಿವ್ಯಕ್ತಿಗೊಳಿಸಬೇಕೆಂಬ ಆಸೆ ನನ್ನದಾಗಿತ್ತು. ಅದಕ್ಕಾಗಿ "ಗುರುನಮನ" ಕಾರ್ಯಕ್ರಮವನ್ನು ರೂಪಿಸಿ, ನನ್ನ ಪುಸ್ತಕ 'ಪದಗತಿ ಪಾದಗತಿ'ಯನ್ನು ಅವರಿಂದ ಬಿಡುಗಡೆ ಮಾಡಿಸಲಾಯಿತು. ಅಂದು ಪು.ತಿ.ನ ಅವರ ರಾಧಾದರ್ಶನವನ್ನು ನೃತ್ಯರೂಪಕವನ್ನಾಗಿ ಸಂಯೋಜಿಸಿ ಪ್ರದರ್ಶಿಸಿದೆ. ನಗರದ ವೀಣೆ ಶೇಷಣ್ಣ ಭವನ ಕಿಕ್ಕಿರಿದು ತುಂಬಿತ್ತು. ನಾಡಿನ ಸಮರ್ಥವಿದ್ವಾಂಸರಿಗೆ ಸಲ್ಲಬೇಕಾದ ಗೌರವ ಸಂದಾಯವಾದ ಬಗ್ಗೆ ಸಮಸ್ತ ಜನಸ್ತೋಮ ಹರ್ಷವನ್ನು ವ್ಯಕ್ತಪಡಿಸಿತು.

ಗುರುಗಳ ಆಶೀರ್ವಾದದಿಂದ ಇಂದು 'ಪದಗತಿ ಪಾದಗತಿ' ಕನ್ನಡ ಸಾಹಿತ್ಯ ಹಾಗೂ ನೃತ್ಯ ಈ ಎರಡೂ ಕ್ಷೇತ್ರಗಳಲ್ಲೂ ಅತ್ಯಂತ ಉಪಯುಕ್ತ ಗ್ರಂಥವೆಂದು ಗಣ್ಯವಾಗಿದೆ. ಇದು ಶಾಸ್ತ್ರಿಗಳ ದೂರದೃಷ್ಟಿ ಹಾಗೂ ನಿಖರತೆಯ ಫಲಿತಾಂಶ. ಸಾರಸ್ವತಲೋಕದಲ್ಲಿ ಪ್ರಖರವಾಗಿ ಮಿಂಚುತ್ತಿರುವ ನಮ್ಮ ಗುರುಗಳ ಮಾರ್ಗದರ್ಶನ, ಸಾಮೀಪ್ಯ ದೊರಕು ವುದು ಪೂರ್ವಜನ್ಮದ ಸುಕೃತವೇ ಸರಿ. ಇಂದು ನಾನು ಅವರ ಶಿಷ್ಯೆ ಎಂದು ಗುರುತಿಸಿ ಕೊಳ್ಳಲು ಹೆಮ್ಮೆಪಡುತ್ತೇನೆ.

ಪ್ರೊ. ದೇಶಿ ಮತ್ತು ಪ್ರೊ. ಶಿಷ್ಟ

ಮೊಗಳ್ಳಿ ಗಣೇಶ್

ಪ್ರೊ.ಟಿ.ವಿ.ವೆಂಕಟಾಚಲ ಶಾಸ್ತ್ರಿಗಳು ಬಹಳ ಮುಖ್ಯವಾಗಿ ಮಾರ್ಗ ಪರಂಪರೆಯನ್ನು ಅನುಸರಿಸಿದವರಾಗಿದ್ದು, ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಕೆಲಸ ಮಾಡಿದ್ದಾರೆ. ಪ್ರಾಚೀನ ಸಾಹಿತ್ಯ ಮತ್ತು ಛಂದಸ್ಸಿನ ವಿಚಾರದಲ್ಲಿ ಭಾಗಶಃ ಇಡೀ ಕರ್ನಾಟಕದಲ್ಲೇ ಅವರಷ್ಟು ಪರಿಣತರು ಯಾರೂ ಇಲ್ಲವೆಂದು ಕೇಳಿದ್ದೇನೆ. ವಿಶೇಷವಾಗಿ ಚಿತ್ರಕಾವ್ಯದ ಬಗ್ಗೆಯೂ ಅವರು ಶಿಸ್ತಿನಿಂದ ಕೆಲಸ ಮಾಡಿದ್ದಾರೆ. ಪ್ರಾಚೀನಕಾಲದ ಕವಿಗಳ ಒಟ್ಟು ಪ್ರಜ್ಞೆಯನ್ನು ನಮ್ಮಂತಹವರ ತಲೆಮಾರಿಗೆ ಮುಟ್ಟಿಸುವುದರಲ್ಲಿ ಶಾಸ್ತ್ರಿಗಳಂತವರು ನಿಜಕ್ಕೂ ಸಾಂಸ್ಕೃತಿಕ ಸಂವಹನಕಾರರಾಗುತ್ತಾರೆ. ಡಿಎಲ್‌ಎನ್ ಮತ್ತು ಶ್ರೀಕಂಠಶಾಸ್ತ್ರಿಗಳ ಪರಂಪರೆಯನ್ನು ಮುಂದುವರಿಸಿಕೊಂಡು ಬಂದಿದ್ದ ಶಾಸ್ತ್ರಿಗಳ ವಿನಯ, ವಿದ್ವತ್ತು, ಪ್ರೀತಿಗಳು ನನ್ನೊಳಗೆ ನೆನಪಾಗುತ್ತವೆ. ನಾನು ಶಾಸ್ತ್ರಿಗಳಿಗೆ ಎಂದೂ ವಿದ್ಯಾರ್ಥಿ ಆಗಲು ಸಾಧ್ಯವಾಗದ್ದರ ಬಗ್ಗೆ ನನಗೆ ವಿಷಾದವಿಲ್ಲ. ಸಹಜವಾಗಿಯೇ ಅವರು ನನಗೆ ಪರಿಣತ ಪ್ರಾಧ್ಯಾಪಕರಂತೆಯೇ ಕಂಡಿದ್ದಾರೆ. ಮಾರ್ಗಪರಂಪರೆಯನ್ನು ಅವರಂತೆ ಗಾಢವಾಗಿ ತಲಸ್ಪರ್ಶಿಯಾಗಿ ತಾಳ್ಮೆಯಿಂದ ವಿವೇಕದಿಂದ ಹೇಳಿಕೊಡುವ ಪ್ರಾಧ್ಯಾಪಕರು ನಮಗೆ ಸಿಕ್ಕುವುದು ಅತ್ಯಂತ ವಿರಳ ಎಂದೇ ಹೇಳಬೇಕಾಗಿದೆ.

ಈ ಇಬ್ಬರೂ ಪ್ರಾಧ್ಯಾಪಕರು ನಮಗೆಲ್ಲ ಬೆರಗಾಗುವಂತೆ ಮತ್ತೆ ಹೊಸದನ್ನು ಸೃಷ್ಟಿಸುವಂತಾಗಲಿ.*

---

* ಲಂಕೇಶ್ ಪತ್ರಿಕೆ, ಮೇ, ೧೯೯೪

ಒಂದು ಸ್ಮರಣೆ

ಕೂ.ಗಿ.ಗಿರಿಯಪ್ಪ

"ಉದಯಿಸಿತೊಂದು ಕನ್ನಡದಲ್ಲೊಂದು ನಕ್ಷತ್ರ
ಇದು ಆ ವ್ಯಕ್ತಿಗೆ ಸಂದಿತ್ತೊಂದು ಕ್ಷೇತ್ರ"

ಡಾ.ತೋಗೆರೆ ವೆಂಕಟಸುಬ್ಬಾಶಾಸ್ತ್ರೀ ವೆಂಕಟಾಚಲ ಶಾಸ್ತ್ರಿಗಳವರ ಒಡನಾಟ ಕೇವಲ ಕೆಲವೇ ದಿನಗಳದ್ದಾದರೂ ನನ್ನ ಬಾಳಲ್ಲಿ ಹೊಸ ಬೆಳಕನ್ನು, ಚೇತನವನ್ನು, ಹುರುಪನ್ನು ತಂದಿತೆಂದರೆ ತಪ್ಪಾಗಲಾರದು. ಅದು ಅತಿಶಯೋಕ್ತಿಯೂ ಅಲ್ಲ. ನಾನು ಕೆಲವೇ ದಿನಗಳು ಅವರ ಜೊತೆಯಲ್ಲಿದ್ದೆ. ಆ ಸಂದರ್ಭದಲ್ಲಿ ನಾನು ಕಲಿತ ನೀತಿ, ನಡೆನುಡಿ ನನ್ನ ಬದುಕಲ್ಲಿ ಹೊಸ ಅಲೆಯನ್ನೇ ಎಬ್ಬಿಸಿತು. ನಾನು ಸಾಹಿತ್ಯಕ್ಷೇತ್ರದಲ್ಲಿ ಬೆಳೆಯಲು ಬುನಾದಿಯಾಯಿತು. ೧೯೮೮-೮೯ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಎಂ.ಎ. ವಿದ್ಯಾರ್ಥಿಯಾಗಿದ್ದಾಗ ಅವರು ನನಗೆ ವ್ಯಾಕರಣ, ಛಂದಸ್ಸನ್ನು ಬೋಧಿಸುತ್ತಿದ್ದರು. ಹಾಗೂ ಎಂ.ಎ.ನಲ್ಲಿ ಮೌಖಿಕಪರೀಕ್ಷೆಯಲ್ಲಿ ಪರೀಕ್ಷಕರಾಗಿ ಕೂಡ ಬಂದಿದ್ದರು. ಆಗ ನನಗೆ ಅವರು ಕನಕಪುರ ತಾಲೂಕಿನವರೆಂದು ಪರಿಚಯವಿರಲಿಲ್ಲ.

ಆನಂತರ ಅವರನ್ನು ಕನ್ನಡ ಸಾಹಿತ್ಯ ಪರಿಷತ್ತು ಕನಕಪುರ ತಾಲ್ಲೂಕು ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ (೧೯೯೧) ಅಧ್ಯಕ್ಷರನ್ನಾಗಿ ಮಾಡಿದಾಗ ಅವರ ಪೂರ್ಣ ಪರಿಚಯ ನನಗಾಯಿತು. ಅವರನ್ನು ಗೌರವಿಸಿದಾಗ ನನ್ನ ಅವರ ಸ್ನೇಹ ಆತ್ಮೀಯತೆ ಗಾಢವಾಯಿತು. ಅದು ಇಂದಿಗೂ ಇದೆ. ಮುಂದೆಯೂ ಇರುತ್ತದೆ.

ನನ್ನ ಕೃತಿ "ಸಿರಿಗನ್ನಡ ವ್ಯಾಕರಣಶಾಸ್ತ್ರ"ಕ್ಕೆ ಮುನ್ನುಡಿಯನ್ನು ಬರೆದು ಹೃದಯ ತುಂಬಿ ಹರಸಿದ್ದಾರೆ. ಹಾರೈಸಿದ್ದಾರೆ. ಕನ್ನಡ ಸಾರಸ್ವತಲೋಕದಲ್ಲಿ ಕನ್ನಡ ಛಂದಸ್ಸೆಂದರೆ ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿಗಳ ಹೆಸರು ಥಟ್ಟನೆ ನೆನಪಾಗುತ್ತದೆ. ಕನ್ನಡ ವ್ಯಾಕರಣ, ಛಂದಸ್ಸಿನ ಬಗ್ಗೆ ಅಧಿಕೃತವಾಗಿ ಧ್ವನಿ ಎತ್ತುವವರೆಂದರೆ ಶಾಸ್ತ್ರಿಗಳು. ಇವರೊಬ್ಬ ಮಹಾನ್ ಅಗಾಧ ಪಂಡಿತರು. ಉದ್ದಾಮ ಲೇಖಕರು. ಹಲವು ಬಗೆಯ ವ್ಯಾಕರಣಕ್ಕೆ ಸಂಬಂಧಿಸಿದಂತೆ ಕೃತಿಗಳನ್ನು ನೀಡಿದ್ದಾರೆ. ತಮ್ಮ ಪಾಂಡಿತ್ಯದ ಪ್ರೌಢಿಮೆಯನ್ನು ಮೆರೆದಿದ್ದಾರೆ.

ಶ್ರೀಯುತರಿಗೆ ೭೫ ಸಂವತ್ಸರಗಳು ತುಂಬುತ್ತಿರುವ ಈ ಸಂದರ್ಭದಲ್ಲಿ ಅವರಿಗೆ ಸಲ್ಲಿಸುತ್ತಿರುವ ಅಭಿನಂದನಗ್ರಂಥ, ಅಭಿವಂದನೆ ತುಂಬಾ ಔಚಿತ್ಯ ಪರಿಪೂರ್ಣವೂ ಹೌದು. ಇವರೊಬ್ಬರು ಕನ್ನಡಾಂಬೆಯ ಸುಪುತ್ರರು. ಈ ನಾಡು, ಈ ನುಡಿ ಕಂಡ

ಅಪರೂಪದ ವಿದ್ವಾಂಸರು. ಕನ್ನಡ ಸಾರಸ್ವತಲೋಕದಲ್ಲಿ ಇವರೊಂದು ಬೆಳ್ಳಿ ಚುಕ್ಕಿ. ಇವರು ಬದುಕಿರುವವರೆಗೆ ಇವರ ಸಾಹಿತ್ಯಸೇವೆ ಕನ್ನಡಾಂಬೆಗೆ ದೊರಕಲಿ. ನನ್ನಂಥ ನೂರಾರು ಲೇಖಕರಿಗೆ ಮಾರ್ಗದರ್ಶನವಾಗಲಿ. ಇನ್ನೂ ನೂರಾರು ವರ್ಷ ಬದುಕಲೆಂದು ಅವರಿಗೆ ಆಯುಸ್ಸು, ಆರೋಗ್ಯವನ್ನು ಭಗವಂತ ದಯಪಾಲಿಸಲಿ. ಈ ಅಭಿನಂದನಗ್ರಂಥ ಹೊರತರುತ್ತಿರುವ ಎಲ್ಲ ಹೃದಯವಂತ ಮಹನೀಯರಿಗೆ ಯಶಸ್ಸು ದೊರಕಲೆಂದು ಹಾರೈಸುವೆ.

ಗ್ರಂಥಾವಲೋಕನ

'ಶಾಸ್ತ್ರೀಯ' ಸಂಪುಟಗಳು

ಹಾ.ಮಾ.ನಾಯಕ

ಇಂದಿನ ಕನ್ನಡ ವಿದ್ವಾಂಸರಲ್ಲಿ ಮೊದಲು ಹೆಸರಿಸಬೇಕಾದವರೆಂದರೆ ಡಾ.ಟಿ.ವಿ. (ತೋಗೆರೆ ವೆಂಕಟಸುಬ್ಬಶಾಸ್ತ್ರೀ) ವೆಂಕಟಾಚಲ ಶಾಸ್ತ್ರೀ(ಜ. ಆಗಸ್ಟ್ ೨೬, ೧೯೩೩). ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಾಲಾ ಶಿಕ್ಷಣವನ್ನು ಕನಕಪುರದಲ್ಲಿ ಮುಗಿಸಿ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಬಿ.ಎ.ಆನರ್ಸ್, ಎಂ.ಎ. ಮತ್ತು ಪಿಎಚ್.ಡಿ ಅಧ್ಯಯನ ಮಾಡಿ, ಕನಕಪುರದ ರೂರಲ್ ಕಾಲೇಜು, ಬೆಂಗಳೂರಿನ ಸೇಂಟ್ ಜೋಸೆಫ್ ರವರ ಕಾಲೇಜು ಮತ್ತು ಹೈದರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾನಿಲಯಗಳಲ್ಲಿ ಸುಮಾರು ಒಂದೂವರೆ ದಶಕ ಕಾಲ ಅಧ್ಯಾಪಕರಾಗಿ ಕೆಲಸ ಮಾಡಿ, ಆಮೇಲೆ (೧೯೬೮) ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನಸಂಸ್ಥೆಯಲ್ಲಿ ಅಧ್ಯಾಪಕರಾಗಿ, ರೀಡರ್ ಆಗಿ, ಪ್ರಾಧ್ಯಾಪಕರಾಗಿ, ಕೊನೆಗೆ ಆ ಸಂಸ್ಥೆಯ ನಿರ್ದೇಶಕರಾಗಿ ನಿವೃತ್ತರಾದರು (೧೯೯೩). ಪ್ರಾಚೀನ ಕನ್ನಡ ಕಾವ್ಯಗಳ ಅಧ್ಯಯನಕ್ಕೆ ಅಗತ್ಯವಾದ ವ್ಯಾಕರಣ, ಛಂದಸ್ಸು, ಅಲಂಕಾರ ಈ ಮೂರೂ ಕ್ಷೇತ್ರಗಳಲ್ಲಿ ಅವರು ಅದ್ವಿತೀಯರು. ಹಳಗನ್ನಡಕ್ಕೆ ಸಂಬಂಧಿಸಿದ ಯಾವುದಾದರೂ ಸಮಸ್ಯೆ ಅವರಿಂದ ಪರಿಹಾರವಾಗಲಿಲ್ಲವೆಂದರೆ, ಆ ಪ್ರಶ್ನಾರ್ಥಕಚಿಹ್ನೆ ಸದ್ಯಕ್ಕಂತೂ ಉಳಿದಿದೆ ಎಂದೇ ಅರ್ಥ!

ಕನ್ನಡದ ಹಲವು ಶಾಸನಗಳ ಕ್ಲಿಷ್ಟ ಸಮಸ್ಯೆಗಳನ್ನು ಬಿಡಿಸಿ ಅರ್ಥವನ್ನು ವಿವರಿಸಿರುವ ಅವರ ಪಾಂಡಿತ್ಯ ಅಸಾಧಾರಣವಾದದ್ದು. 'ಶಬ್ದಮಣಿದರ್ಪಣ'ದ ಅವರ ಆವೃತ್ತಿ, ಅದರ ಪ್ರಸ್ತಾವನೆಯೊಂದಿಗೆ ಅವರ ಕನ್ನಡ ವ್ಯಾಕರಣದ ತಿಳಿವಳಿಕೆಗೆ ಒಂದು ಸಾಕ್ಷಿ ಯಾಗಿದೆ. ಅವರ ಪ್ರತಿಯೊಂದು ಪುಸ್ತಕವೂ ಅವರ ಖಚಿತ ವಿದ್ವತ್ತಿನ ಹರವನ್ನು ಸೂಚಿಸುತ್ತದೆ. 'ಕನ್ನಡ ಛಂದಃಸ್ವರೂಪ' ಎಂಬುದು ಛಂದಸ್ಸಿನ ಒಂದು ಆಕರ ಗ್ರಂಥ ವಾಗಿದೆ. 'ನಿಘಂಟುಶಾಸ್ತ್ರ'ದಲ್ಲಿಯೂ ಶಾಸ್ತ್ರಿಗಳು ಪ್ರವೀಣರು. ಸಂಖ್ಯಾವಿಶಿಷ್ಟ ಪದಗಳಿಗೆ ವಿವರಣೆ ಕೊಡುವ ಅವರ 'ಶ್ರೀವತ್ಸ ನಿಘಂಟು', 'ಗಜಶಾಸ್ತ್ರ' ಸಂಬಂಧವಾದ 'ಗಜಶಾಸ್ತ್ರಶಬ್ದಕೋಶ' ನಮ್ಮ ನಿಘಂಟುಗಳಿಗೆ ತುಂಬ ಅಪರೂಪದ ಸೇರ್ಪಡೆಯಾಗಿವೆ. ಅವರ 'ಕನ್ನಡ ಚಿತ್ರಕಾವ್ಯ'ವಂತೂ ಅನನ್ಯವಾದ ಕೃತಿಯೆನ್ನಿಸಿದೆ. ಇಂದಿನ ದಿನಗಳಲ್ಲಿ ವಿರಳವಾಗಿರುವ ಇಂಥ ವಿದ್ವತ್ತು ನಾಡಿನ ಪುಣ್ಯವೆಂದೇ ಹೇಳಬೇಕು.

ಚಿಕಾಗೊ ವಿಶ್ವವಿದ್ಯಾನಿಲಯದಲ್ಲಿ ದಕ್ಷಿಣ ಏಷಿಯಾ ಭಾಷೆಗಳು ಮತ್ತು ಸಂಸ್ಕೃತಿ ವಿಭಾಗದ ಅಧ್ಯಕ್ಷರಾಗಿರುವ ಷೆಲ್‌ಡನ್ ಪೋಲಕ್ ಹೇಳುತ್ತಾರೆ: "ಶತಮಾನದ ಎರಡನೆಯ ಭಾಗದ ಮಹಾ ಕನ್ನಡವಿದ್ವಾಂಸರೆನ್ನಿಸಿದ್ದಾರೆ, ಶಾಸ್ತ್ರಿಗಳು. ತಮ್ಮ ಸಂಸ್ಕೃತಿಗೆ ಗೌರವವನ್ನೂ ಬಣ್ಣವನ್ನೂ ತಂದಿದ್ದಾರೆ." ಈ ಹೇಳಿಕೆಯಲ್ಲಿ ಒಂದು ಪುಟ್ಟ ಬದಲಾವಣೆಯಾಗಬೇಕಾಗಿದೆ. ಇಲ್ಲಿ 'ಎರಡನೆಯ ಭಾಗದ' ಎಂಬುದನ್ನು ತೆಗೆದು ಹಾಕಿದರೆ ಸಮಂಜಸವಾಗಿರುತ್ತದೆ. ಶಾಸ್ತ್ರಿಗಳಿಗೆ ಸಲ್ಲಬೇಕಾದ ನ್ಯಾಯವೂ ದೊರೆ ತಂತಾಗುತ್ತದೆ. ನಿಸ್ಸಂದೇಹವಾಗಿ, ಶಾಸ್ತ್ರಿಗಳು ಈ ಶತಮಾನದ ಬಹು ದೊಡ್ಡ ವಿದ್ವಾಂಸರು. ವ್ಯಾಕರಣ, ಛಂದಸ್ಸು, ಅಲಂಕಾರಶಾಸ್ತ್ರಗಳಲ್ಲದೆ, ಅವರು ಸಾಹಿತ್ಯಚರಿತ್ರೆ, ಗ್ರಂಥಸಂಪಾದನೆ, ನಿಘಂಟುಶಾಸ್ತ್ರ, ಹಸ್ತಪ್ರತಿಶಾಸ್ತ್ರ ಈ ಮೊದಲಾದ ಕ್ಷೇತ್ರಗಳಲ್ಲಿಯೂ ಅಪಾರವಾದ ಕೆಲಸ ಮಾಡಿದ್ದಾರೆ. ಅವರ ವಿದ್ವತ್ತು ತೇಲಿಕೆಯದಲ್ಲ; ಆಳವಾದದ್ದು, ವ್ಯಾಪಕವಾದದ್ದು. ಶಾಸ್ತ್ರಿಗಳು ಹಲವಾರು ಬಹುಮಾನ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ, ಐಬಿಎಚ್ ಬಹುಮಾನ, ಮೈಸೂರು ವಿಶ್ವವಿದ್ಯಾನಿಲಯದ ಚಿನ್ನದ ಹಬ್ಬದ ಬಹುಮಾನ, ಗ್ರಂಥಲೋಕದ ವರ್ಷದ ಲೇಖಕ ಪ್ರಶಸ್ತಿ ಇವೇ ಮೊದಲಾದ ಹತ್ತಾರು ಗೌರವದ ಗರಿಗಳು ಅವರ ಟೊಪ್ಪಿಗೆಯಲ್ಲಿ ಸೇರಿವೆ!

ಈಚೆಗೆ ಚಿಕ್ಕಮಗಳೂರಿನಲ್ಲಿ ಅವರ ಸಂಶೋಧನಪ್ರಬಂಧಗಳ ಸಂಕಲನಗಳು ನಾಲ್ಕು ಸಂಪುಟಗಳಲ್ಲಿ ಬಿಡುಗಡೆಗೊಂಡವು. ಕನ್ನಡ ವಿದ್ವತ್ತಿನಲ್ಲಿ ಅದೊಂದು ಚಾರಿತ್ರಿಕ ಘಟನೆ! ಶಾಸ್ತ್ರಿಗಳಿಗೆ ಸಮನಾಗಿ ನಿಲ್ಲಬಲ್ಲ ಇತರ ಇಬ್ಬರು ವಿದ್ವಾಂಸರು ಡಾ.ಚಿದಾನಂದಮೂರ್ತಿ ಮತ್ತು ಡಾ.ಎಂ.ಎಂ.ಕಲಬುರ್ಗಿ ಅವರೂ ಈ ಸಮಾರಂಭದಲ್ಲಿ ಹಾಜರಿದ್ದರು. ಚಿಕ್ಕಮಗಳೂರು ನಾಡಿನ ಸಾಹಿತಿದಿಗ್ಗಜರನ್ನು ಕರೆಸಿ ಸನ್ಮಾನಿಸುವ ಗೌರವಿಸುವ ಕೆಲಸ ದಲ್ಲಿ ಯಾವಾಗಲೂ ಮುಂದಾಗಿದೆ. ಈ ಕೆಲಸದಲ್ಲಿ ಅದು ನಾಡಿಗೇ ಮಾರ್ಗದರ್ಶಕ ವಾಗಿದೆ. ಬಿಡುಗಡೆಯಾದ ನಾಲ್ಕು ಸಂಪುಟಗಳು- 'ಶಾಸ್ತ್ರೀಯ' ತುಂಬ ಸುಂದರವಾಗಿ ಪ್ರಕಟವಾಗಿವೆ. ಬೆಂಗಳೂರಿನ ಸಪ್ನ ಬುಕ್ ಹೌಸ್ ಅವರು ಈ ಸಂಪುಟಗಳ ಪ್ರಕಾಶಕರು. ಅವನ್ನು ನೋಡುತ್ತಲೇ ಜಿ.ಪಿ.ರಾಜರತ್ನಂ ಅವರು ಆಗಾಗ ಹೇಳುತ್ತಿದ್ದ ಒಂದು ಮಾತು ನೆನಪಿಗೆ ಬರುತ್ತದೆ: "ಕೆಲವು ಪುಸ್ತಕಗಳನ್ನು ಕೈತೊಳೆದು ಮುಟ್ಟಬೇಕು; ಇನ್ನು ಕೆಲವನ್ನು ಮುಟ್ಟಿದ ಮೇಲೆ ಕೈತೊಳೆಯಬೇಕು!" ಪ್ರಸ್ತುತ ಈ 'ಶಾಸ್ತ್ರೀಯ' ಸಂಪುಟಗಳು ಇದರಲ್ಲಿ ಮೊದಲನೆಯ ವರ್ಗಕ್ಕೆ ಸೇರಿದವು!

ಮುಖ್ಯ ವಿಷಯಗಳಿಗೆ ಅನುಸಾರವಾಗಿ ವಿಭಜಿಸಿರುವ 'ಶಾಸ್ತ್ರೀಯ'ದ ನಾಲ್ಕು ಸಂಪುಟಗಳ ಪ್ರಕಟಣಾವಿವರ ಹೀಗಿದೆ:

ಸಂಪುಟ ೧: (ಶಬ್ದಾರ್ಥವಿಚಾರ- ಗ್ರಂಥಸಂಪಾದನೆ, ಭಾಷೆ-ವ್ಯಾಕರಣ, ನಿಘಂಟು ಸಾಹಿತ್ಯ-ನಿಘಂಟುರಚನೆ) ಪುಟಗಳು: ಡೆಮ್ಮೈ ಆಕಾರದ ೧೪+೫೫೨ ಬೆಲೆ ೧೯೫ ರೂಪಾಯಿ.

ಸಂಪುಟ ೨: (ಛಂದಸ್ಸು, ಸಾಹಿತ್ಯರೂಪಗಳು) ಪುಟಗಳು: ಡೆಮ್ಮೈ ಆಕಾರದ ೧೪+ ೫೪೮ ಬೆಲೆ ೧೯೫ ರೂಪಾಯಿ.

ಸಂಪುಟ ೩: (ಸಾಹಿತ್ಯಚರಿತ್ರೆ, ವಿಮರ್ಶೆ, ಸಮೀಕ್ಷೆ: ಪ್ರಾಚೀನಕಾಲ) ಪುಟಗಳು: ಡೆಮ್ಮೈ ಆಕಾರದ ೧೪+೬೨೭ ಬೆಲೆ ೨೨೫ ರೂಪಾಯಿ.

ಸಂಪುಟ ೪: (ಸಾಹಿತ್ಯಚರಿತ್ರೆ, ವಿಮರ್ಶೆ, ಸಮೀಕ್ಷೆ: ಮಧ್ಯಕಾಲೀನ, ಆಧುನಿಕ) ಪುಟಗಳು: ಡೆಮ್ಮೈ ಆಕಾರದ ೧೪+೬೩೫ ಬೆಲೆ ೨೨೫ ರೂಪಾಯಿ.

ಮೊದಲನೆಯ ಸಂಪುಟದಲ್ಲಿ ೫೪ ಲೇಖನಗಳಿದ್ದು, ಬಿ.ಎಂ.ಶ್ರೀಕಂಠಯ್ಯನವರಿಗೆ ಅರ್ಪಣೆಗೊಂಡಿದೆ. ಎರಡನೆಯ ಸಂಪುಟದಲ್ಲಿ ೩೭ ಲೇಖನಗಳಿದ್ದು, ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಅವರಿಗೆ ಅರ್ಪಿತವಾಗಿದೆ. ಮೂರನೆಯ ಸಂಪುಟದಲ್ಲಿ ೫೨ ಲೇಖನಗಳಿದ್ದು ಎಂ.ಎಂ.ಕಲಬುರ್ಗಿಯವರಿಗೆ ಅರ್ಪಿಸಲ್ಪಟ್ಟಿದೆ. ನಾಲ್ಕನೆಯ ಸಂಪುಟ ದಲ್ಲಿ ೪೮ ಲೇಖನಗಳಿದ್ದು ಪ್ರೊ. ಕೆ.ಎಸ್.ನಾರಾಯಣಾಚಾರ್ಯರಿಗೆ ಅಂಕಿತಗೊಂಡಿದೆ.

ತಮ್ಮ 'ಅರಿಕೆ'ಯಲ್ಲಿ ವೆಂಕಟಾಚಲ ಶಾಸ್ತ್ರಿಗಳು ಹೀಗೆ ಹೇಳುತ್ತಾರೆ:

"ಕನ್ನಡ ಭಾಷಾಸಾಹಿತ್ಯಗಳ ಅಧ್ಯಯನಕ್ಷೇತ್ರದಲ್ಲಿ ಐವತ್ತರ ದಶಕದಿಂದ ಮೊದಲುಗೊಂಡು ಈವರೆಗೆ ನನ್ನ ಅಲ್ಪಶಕ್ತಿಗೆ ಅನುಗುಣವಾಗಿ ಕೃಷಿಮಾಡುತ್ತ ಬಂದಿದ್ದೇನೆ. ನನ್ನ ಪಾಲಿಗೆ ಇದು ಒಂದು ನಿತ್ಯವಿಧಿ, ಸಾಧನೆ, ಸಾಹಸ; ಭಾಷೆಯ, ಸಮಾಜದ ಋಣವನ್ನು ಸಲ್ಲಿಸಲು ನಿರಂತರವಾಗಿ ನಾನು ಅನುಭವಿಸುತ್ತಿರುವ ತಳಮಳ, ವಹಿಸುತ್ತಿರುವ ಶ್ರಮ. ನನ್ನ ಈ ಭಾಷಾಸಾಹಿತ್ಯಗಳ ಸಂಬಂಧವಾದ ಸಾಧನೆ ಸಾಹಸಗಳು, ತಳಮಳ ಶ್ರಮಗಳು ನನ್ನ ಬದುಕನ್ನು ಒಂದು ಹದಕ್ಕೆ ತಂದಿವೆ. ನಾನು ಒಬ್ಬ ಮನುಷ್ಯ ಎಂದು ನನ್ನ ಮಟ್ಟಿಗೆ ಹೇಳಿಕೊಳ್ಳುವಂತೆ ಮಾಡಿವೆ. ಇದರಿಂದ ಲೆಕ್ಕಕ್ಕೆ ಅಲ್ಲವಾದರೂ ಆಟಕ್ಕೆ ಉಂಟು ಎಂದು ಸಾಹಿತ್ಯಲೋಕ ನನ್ನನ್ನು ಒಪ್ಪಿಕೊಳ್ಳುವುದು ಸಾಧ್ಯವಾಗಿದೆ. ಈ ಪ್ರಾಪ್ತಿಯನ್ನೇ ಪ್ರಸಿದ್ಧಿಯೆಂದು ಸ್ವೀಕರಿಸಿ, ನಾನು ಸಂತೋಷಪಟ್ಟಿದ್ದೇನೆ. ಇದು ಏನೇ ಇದ್ದರೂ, ಈಚೆಯ ದಿನಗಳಲ್ಲಿ ಕನ್ನಡದಲ್ಲಿ ವಿದ್ವತ್ತೆಗೆ, ಸಂಶೋಧನೆಗೆ ಒಳ್ಳೆಯ ನೆಲೆ ಸಿಕ್ಕುತ್ತಿದೆಯೆಂದು ನಾನು ನಂಬಿದ್ದೇನೆ." ಈ ಮಾತುಗಳಲ್ಲಿ ಶಾಸ್ತ್ರಿಗಳ ನಮ್ರತೆ ವಿಶೇಷವಾಗಿ ತೋರಿಸಿಕೊಳ್ಳುತ್ತದೆ.

ಸಂಶೋಧನೆಯಲ್ಲಿ ಡಾ.ವೆಂಕಟಾಚಲ ಶಾಸ್ತ್ರಿಗಳ ಶಕ್ತಿ ಸಾಮರ್ಥ್ಯಗಳು ಮೊದಲನೆಯ ದರ್ಜೆಯವು. ನಮ್ಮ ಸಂಶೋಧನೆಯ ಸ್ಥಿತಿಗತಿಗಳನ್ನು ಕುರಿತು ೧೯೭೦ರಷ್ಟು ಹಿಂದೆಯೇ ಪ್ರೊ.ಡಿ.ಎಲ್.ನರಸಿಂಹಾಚಾರ್ಯರು ಹೀಗೆ ಬರೆದದ್ದು ಉಂಟು: "ಈಚೆಗೆ ಕೆಲವರು ವಿದ್ಯಾರ್ಥಿಮಿತ್ರರು ಛಂದಸ್ಸಿನ ವಿಷಯವಾಗಿ ಲೇಖನಗಳನ್ನು ಬರೆದು ಪ್ರಕಟಿಸಲು ಆರಂಭಿಸಿದರು. ಇವು ಎಷ್ಟೋ ಸಲ ತರಗತಿಗಳಲ್ಲಿ ಹೇಳಿದ ಪಾಠಗಳ ಪ್ರತಿಕೃತಿಗಳಾಗಿವೆ. ಉಪಾಧ್ಯಾಯರು ಸ್ವಂತ ಪರಿಶ್ರಮದಿಂದ ಕಂಡುಕೊಂಡ

ನೂತನವಿಷಯಗಳು ಈ ಲೇಖನಗಳಲ್ಲಿ ಮೈದೋರಿವೆ. ಅವು ಲೇಖಕರ ಸ್ವಂತ ಪರಿಶ್ರಮದಿಂದ ಲಭ್ಯವಾದವು ಎಂದು ತೋರುವ ಹಾಗೆ ಅವರ ಬರೆವಣಿಗೆ ಇದೆ. ಇವು ಅವರಿಗೆ ತಿಳಿಯದೆ ಬಂದಿದ್ದರೆ ಪರವಾ ಇಲ್ಲ, ಕ್ಷಮ್ಯವೆಂದು ಹೇಳಬಹುದು. ಆದರೆ ಎಲ್ಲ ಸಂದರ್ಭಗಳಲ್ಲೂ ವಸ್ತುಸ್ಥಿತಿ ಹೀಗಿಲ್ಲ. ಇಲ್ಲಿ ಲೇಖಕರ ಪ್ರಾಮಾಣಿಕತೆಯ ಅಭಾವ ಕಾಣುತ್ತದೆ. ಇದು ವಿಷಾದಕರ. ವಿದ್ವತ್ತಿನ ಬೆಳವಣಿಗೆಗೆ ಇದು ಹಾನಿಕರ. ಒಬ್ಬ ವಿದ್ಯಾರ್ಥಿಮಿತ್ರರು 'ಷಟ್ಪದಿ'ಯನ್ನು ಕುರಿತು ಸುದೀರ್ಘವಾದ ಲೇಖನ ಬರೆದು ಅದನ್ನು ಕಳಿಸಿಕೊಟ್ಟು ಪ್ರಕಟಣೆಗೆ ಯೋಗ್ಯವೇ ಎಂಬುದನ್ನು ತಿಳಿಸಿರಿ ಎಂದು ಕೇಳಿದರು. ಅದನ್ನು ಓದಿ ಆ ಮಿತ್ರರಿಗೆ, "ನಿಮ್ಮ ಲೇಖನ ಚೆನ್ನಾಗಿದೆ, ಅದರಲ್ಲಿ ಕಾಣುವ ಹೊಸ ವಿಚಾರಗಳು ನಿಮ್ಮ ಉಪಾಧ್ಯಾಯರಿಗೆ ಸೇರಿದ್ದು. ನೀವು ನಿಮ್ಮ ಹೆಸರಿನಲ್ಲಿ ಅವುಗಳನ್ನು ಪ್ರಕಟಿಸಿಕೊಂಡರೆ ಅದರ ಗತಿ ಏನು ಎಂದು ಆಲೋಚನೆ ಮಾಡಿದ್ದೀರಾ?" ಎಂದು ಅವರಿಗೆ ಬರೆಯಬೇಕಾಯಿತು. ಈ ಅಭಿಪ್ರಾಯವನ್ನು ಅವರು ಗ್ರಹಿಸಿದವರಾಗಿ ಆ ಲೇಖನವನ್ನು ಬಹಳ ಕಾಲ ಪ್ರಕಟಮಾಡಲೇ ಇಲ್ಲ. ಇದು ಒಂದು ರೀತಿಯಲ್ಲಿ ಕಾಲುಹಾದಿಯ ನಡಿಗೆ! ವಿದ್ವತ್ತಿನ ಕ್ಷೇತ್ರದಲ್ಲಿ ಕಾಲುಹಾದಿ ಎಂಬುದಿಲ್ಲ. ಅಲ್ಲಿ ಇರುವುದು ರಾಜಮಾರ್ಗ ಒಂದೇ! ಅದರಲ್ಲಿ ನಡೆಯಬಲ್ಲವರು ಮಾತ್ರ ನಮ್ಮ ವಿದ್ವತ್ತಿನ ಕ್ಷೇತ್ರವನ್ನು ವಿಸ್ತರಿಸಬಲ್ಲವರು! ಇಂಥ ವಿರಳ ವಿದ್ವಾಂಸರಲ್ಲಿ ಶಾಸ್ತ್ರಿಗಳು ಒಬ್ಬರು. ಅವರು ಐವತ್ತರಷ್ಟು ಗ್ರಂಥಗಳನ್ನೂ ನೂರಾರು ಲೇಖನಗಳನ್ನೂ ಪ್ರಕಟಿಸಿದ್ದಾರೆ. ಹಳಗನ್ನಡದಲ್ಲೇ ಕಾವ್ಯ ರಚಿಸಬಲ್ಲ ನಿಸ್ಸೀಮರವರು!"

'ಕುವಲಾಯಾಮಲ ಖಡ್ಗನೀಲಃ' ಭಾಸಕವಿಯ 'ಮಧ್ಯಮವ್ಯಾಯೋಗ'ವೆಂಬ ನಾಟಕದ ನಾಂದೀಪದ್ಯದ ಒಂದು ಸಮಸ್ತಪದಕ್ಕೆ ಸಂಬಂಧಿಸಿದ ವಿಚಾರ. ಸಂಸ್ಕೃತದ ಅನೇಕ ಘನವಿದ್ವಾಂಸರಿದ್ದರೂ ಕನ್ನಡ ವಿದ್ವಾಂಸರೊಬ್ಬರು ಈ ವಿಷಯದಲ್ಲಿ ಕೈ ಹಾಕಿದ್ದಾರೆ! 'ಮಧ್ಯಮ ವ್ಯಾಯೋಗ'ದ ಸಂಪಾದಕರಾದ ಎಸ್.ಎಂ.ಪರಾಂಜಪೆ ಅವರು ಬರೆದ ಟಿಪ್ಪಣಿ ಸಮಂಜಸವಲ್ಲವೆಂದು ಶಾಸ್ತ್ರಿಗಳು ಹೇಳಿ, ಕನ್ನಡ ಕವಿಗಳ ಪ್ರಯೋಗಗಳನ್ನು ಆಧರಿಸಿ ಮೂಲಪಾಠ ಹೇಗಿರಬಹುದೆಂಬುದನ್ನು ನಿರ್ಧರಿಸಿದ್ದಾರೆ! ಯಾವುದೇ ಭಾಷೆಯ ಒಂದು ಪದವನ್ನು ಅರ್ಥೈಸುವುದರಲ್ಲಿ, ಇತರ ಭಾಷೆಗಳು ಹೇಗೆ ಉಪಯೋಗಕ್ಕೆ ಬರುತ್ತವೆ ಎಂಬುದನ್ನು ಶಾಸ್ತ್ರಿಗಳು ಇಲ್ಲಿ ತೋರಿಸುತ್ತಾರೆ. ಹಾಗೆಯೇ ಒಬ್ಬ ಕವಿಯ ಕಾಲನಿರ್ಧಾರದಲ್ಲಿ ಮತ್ತೊಂದು ಭಾಷೆ ಹೇಗೆ ನೆರವಿಗೆ ಬರುತ್ತದೆ ಎಂಬುದನ್ನು ಗಮನಿಸಬೇಕು! ಹೆಚ್ಚು ಕಡಿಮೆ ಎರಡೂವರೆ ಸಾವಿರ ಪುಟಗಳ ಈ ಸಂಪುಟಗಳಲ್ಲಿ ಶಾಸ್ತ್ರಿಗಳು ಒಂದು ನೂರ ತೊಂಬತ್ತೊಂದು ವಿಷಯಗಳನ್ನು ಚರ್ಚಿಸಿದ್ದಾರೆ. ಈ ಸಂಶೋಧನೆಯ ಮಹಾಸಮುದ್ರದಲ್ಲಿ ನೂರಾರು ಸಂಗತಿಗಳನ್ನು ವಿವರಿಸಿದ್ದಾರೆ, ವಿಶ್ಲೇಷಿಸಿದ್ದಾರೆ. ಶಾಸ್ತ್ರಿಗಳ ಚರ್ಚೆಯಲ್ಲಿ ಬಂದುಹೋಗುವ ವಿಚಾರಗಳಲ್ಲಿ

ಭಾಸಕವಿಯ ನಾಂದೀಪದ್ಯದ ಉದಾಹರಣೆ ಮೊದಲನೆಯದು, ಸುಲಭವಾದದ್ದು! ಇಂಥವೇ ನೂರಾರು ಸಂಗತಿಗಳು ಇಲ್ಲಿ ಬರುತ್ತವೆ!

'ಕುಂದಕುಂದ' ಪದದ ನಿಷ್ಪತ್ತಿಯಾಗಿರಬಹುದು; 'ಬಾಳ್ಗಟ್ಟು' ಪದವನ್ನು ಕುರಿತ ಟಿಪ್ಪಣಿಯಾಗಿರಬಹುದು; 'ಬಳಮದ್ರ್ಗು' ಪದದ ವಿಚಾರವಾಗಿರಬಹುದು; 'ಹಲ್ಮಿಡಿ ಶಾಸನ'ದ ಅರ್ಥವಿಶ್ಲೇಷಣೆಯಾಗಿರಬಹುದು; 'ಶಬ್ದಮಣಿದರ್ಪಣ'ದ ಮಂಗಲ ಶ್ಲೋಕದ ವ್ಯಾಕರಣವಾಗಿರಬಹುದು; 'ತೆ' ಎಂಬ ಅವ್ಯಯವಾಗಿರಬಹುದು; 'ತವು' ಧಾತುವಾಗಿರಬಹುದು; ಕನ್ನಡ ಶಾಸನಗಳ ಛಂದಸ್ಸಾಗಿರಬಹುದು; ಕುವೆಂಪು ಅವರ 'ರಾಮಾಯಣ ದರ್ಶನಂ'ನ ಛಂದಸ್ಸಾಗಿರಬಹುದು; ಪರಮೇಶ್ವರ ಭಟ್ಟರ ಕವಿತೆಗಳ ಛಂದಃಪ್ರಯೋಗಗಳಾಗಿರಬಹುದು; ಹಳಗನ್ನಡ ಸಾಹಿತ್ಯದಲ್ಲಿ ಜೀವನಮೌಲ್ಯಗಳಾಗಿರಬಹುದು; ಹಳಗನ್ನಡ ಕಾವ್ಯಗಳಲ್ಲಿ ಶೃಂಗಾರರಸವಾಗಿರಬಹುದು; ಹಳೆಯ ಸಾಹಿತ್ಯ ಕೃತಿಗಳ ಪರಿಚಯವಾಗಿರಬಹುದು; ಕನ್ನಡ ಕಬ್ಬಿಗಿತಿಯರಿರಬಹುದು; ಡಿವಿಜಿ ಅವರ 'ಶ್ರೀ ವಿದ್ಯಾರಣ್ಯವಿಜಯ'ವಾಗಿರಬಹುದು; ಕೈಲಾಸಂ ಅವರ 'ವೈದ್ಯನ ವ್ಯಾಧಿ'ಯಾಗಿರಬಹುದು -ಹೀಗೆ ಲೇಖನಶೀರ್ಷಿಕೆಗಳೇ ಈ ಸಂಪುಟಗಳ ವ್ಯಾಪ್ತಿಯನ್ನು ಸೂಚಿಸುತ್ತವೆ!

ಶೀರ್ಷಿಕೆಗಳಲ್ಲಿಯೇ ವಿಷಯದ ವೈವಿಧ್ಯ ಎದ್ದುತೋರುತ್ತದೆ. ಓದುಗರು ವಿದ್ಯಾರ್ಥಿಗಳಾಗಿರಲಿ, ವಿದ್ವಾಂಸರಾಗಿರಲಿ, ಅವರೆಲ್ಲರ ಆಸಕ್ತಿಗೆ ಇಲ್ಲಿ ಅನ್ನವಿದೆ; ಶಾಸ್ತ್ರಿಗಳು ಎತ್ತುವ ಸಮಸ್ಯೆಗಳು, ಅವುಗಳಿಗೆ ಕೊಡುವ ಸಮಾಧಾನಗಳು ಇಲ್ಲಿ ತುಂಬಿಕೊಂಡಿವೆ. ಯಾವುದೇ ವಿಚಾರವನ್ನು ಚರ್ಚಿಸುವಾಗ ಶಾಸ್ತ್ರಿಗಳು ತಾಳ್ಮೆ ಕಳೆದುಕೊಳ್ಳುವುದಿಲ್ಲ. ಎದುರುಪಕ್ಷವನ್ನು ಕೀಳೆಂದು ಜರಿಯುವುದಿಲ್ಲ; ಹೀನೈಸಿ ಬರೆಯುವುದಿಲ್ಲ. ತಾವು ಒಪ್ಪದ ವಿಚಾರಗಳನ್ನೂ ಗೌರವದಿಂದಲೇ ಉಲ್ಲೇಖಿಸುತ್ತಾರೆ! ಅವರು ಯಾವುದೇ ಸಂದರ್ಭದಲ್ಲಿಯೂ ಸ್ವಂತ ವಿಚಾರಗಳನ್ನು ಬಿಟ್ಟುಕೊಡುವುದಿಲ್ಲ. ಇನ್ನೊಂದು ವಿಚಾರದ ಎಲ್ಲ ಮಗ್ಗುಲುಗಳನ್ನೂ ಪ್ರಸ್ತಾಪಿಸಿ ತಮ್ಮ ವಿಚಾರಧಾರೆಯನ್ನು ಸ್ಪಷ್ಟಪಡಿಸುತ್ತಾರೆ. ಅತ್ಯುತ್ತಮಸಂಶೋಧನೆ ಹೇಗಿರಬೇಕು ಎಂಬುದಕ್ಕೆ ಈ ಸಂಪುಟಗಳು ಸಾಕ್ಷಿಯಾಗಿವೆ.

ಈ ಪ್ರಕಟಣೆಯ ಒಂದು ಕೊರತೆಯನ್ನು ಇಲ್ಲಿ ಎತ್ತಿಹೇಳಬೇಕು. ಸಂಪುಟಗಳ ಕೊನೆಯಲ್ಲಿ ಯಾವುದೇ ವಿಧವಾದ ವಿಷಯಾನುಕ್ರಮಣಿಕೆ ಕೊಟ್ಟಿಲ್ಲ. ಬೇಕಾದ ವಿಷಯವನ್ನು ಹುಡುಕುವುದೇ ಕಷ್ಟ! ಕನ್ನಡ ಸರಸ್ವತಿಯ ಕೃಪೆಯಿಂದ ಈ ಸಂಪುಟಗಳು ಮತ್ತೆ ಮುದ್ರಣಗೊಳ್ಳುವ ಅವಕಾಶ ಬಂದಾಗ (ಬರುತ್ತದೆ!) ಅಗತ್ಯವಾದ ಬಗೆಬಗೆಯ ಸೂಚಿಗಳನ್ನು ಸೇರಿಸಬೇಕು. ಇಂಥ ಸಂಪುಟಗಳನ್ನು ಓದುವಾಗ ವಿಷಯಗಳನ್ನು ಹುಡುಕುವುದಕ್ಕೇ ಸಮಯ ವ್ಯರ್ಥವಾಗಬಾರದು. ಇದು ಶಾಸ್ತ್ರಿಗಳಿಗೆ ಗೊತ್ತಿಲ್ಲ ಎಂದಲ್ಲ! ಗ್ರಂಥದ ಕೊನೆಯಲ್ಲಿ ಬರುವ ಇಂಥ ಸೂಚಿಗಳು ಆ ಗ್ರಂಥದ ಮುಕ್ತಾಯ

ವನ್ನು ಸಾರುತ್ತವೆ. 'ಶಾಸ್ತ್ರೀಯ' ಸಂಪುಟಗಳು ಹಾಗೆಯೇ ಮುಗಿದಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು!

ಈ ಸಂಪುಟಗಳನ್ನು ಪ್ರಕಟಿಸಿದ ಸಪ್ನ ಬುಕ್‌ಹೌಸ್ ಅವರಿಗೆ ಕನ್ನಡಿಗರೆಲ್ಲ ಕೃತಜ್ಞರಾಗಿರಬೇಕು. ಶಾಸ್ತ್ರಿಗಳು ಬರೆದಿರುವ ವ್ಯಕ್ತಿಚಿತ್ರಗಳು, ಪೀಠಿಕೆಗಳು ಇನ್ನೂ ಮೂರು ಸಂಪುಟಗಳಷ್ಟಿವೆ! 'ಸಪ್ನ'ದವರು ದೊಡ್ಡಮನಸ್ಸು ಮಾಡಿ ಆ ಮೂರೂ ಸಂಪುಟಗಳನ್ನು ಪ್ರಕಟಿಸುವುದಾದರೆ, ಕನ್ನಡ ಪ್ರಕಟಣಪ್ರಪಂಚದಲ್ಲೇ ಒಂದು ವಿಕ್ರಮವನ್ನು ಸ್ಥಾಪಿಸಿದಂತಾಗುತ್ತದೆ!*

* ಸುಧಾ, ೨೩.೯.೧೯೯೯

ಶಾಸ್ತ್ರಶ್ರೀರೋಹಣ ಗಿರಿಧಾರಿ

ಎಚ್ಚೆಸ್ಕೆ

'ಅರಿಷಡ್ವರ್ಗ' ಎನ್ನುತ್ತಾರಲ್ಲ, ಮನುಷ್ಯನ ಆರು ಶತ್ರುಗಳು, ಯಾರು? ಅಥವಾ ಯಾವುದು? ಅಷ್ಟಾಂಗಯೋಗಗಳಲ್ಲಿ ಒಂದಾದರೂ ಯೋಗ ನಮಗೆ ಲಭಿಸಬಾರದೆ? ವೇದಗಳೆಷ್ಟು? ಮೂರೋ, ನಾಲ್ಕೋ, ಒಂಬತ್ತೋ, ಹತ್ತೋ? ಅರವತ್ನಾಲ್ಕು ವಿದ್ಯೆಗಳು ಎನ್ನುತ್ತಾರಲ್ಲ? ಅವುಗಳಲ್ಲಿ ದುರ್ವಿದ್ಯೆಗಳೂ ಸೇರಿವೆಯೆ?

ಇಂಥ ನೂರಾರು ಪ್ರಶ್ನೆಗಳು ನಮಗೆ ನಿತ್ಯವೂ ಎದುರಾಗುತ್ತಿರುತ್ತವೆ. ಅಯ್ಯೋ ಇವೆಲ್ಲಾ ಯಾರಿಗೆ ಬೇಕು ಸ್ವಾಮಿ? ಗೊತ್ತೇ ಇದೆಯಲ್ಲ, ನಮ್ಮ ಹಣೆಬರಹ? ದುಡಿಯುವುದೊಂದೇ ನಮಗೆ ಗೊತ್ತಿರುವುದು. ಉಳಿದವನ್ನು ತಲೆಗೆ ಹಚ್ಚಿಕೊಂಡು ತೊಳಲಾಡುವುದಕ್ಕೆ ಪುರುಸತ್ತೆಲ್ಲಿ? ಇದಕ್ಕೆಲ್ಲ ಉತ್ತರ ಹೇಳುವವರು ಯಾರು?

ನಮ್ಮಲ್ಲಿ ಅನೇಕರ ಅನುಭವ ಇಂಥದೇ. ಆದರೆ ಈ ಬಗ್ಗೆ ಒಮ್ಮೊಮ್ಮೆಯಾದರೂ ನಾವು ತಲೆ ಕೆಡಿಸಿಕೊಳ್ಳಬೇಕಾಗಿ ಬಂದೇಬರುತ್ತದೆ. ಇವಕ್ಕೆ ಉತ್ತರ ಪಡೆಯಲು ಯಾರ ಬಳಿ ಹೋಗಬೇಕು?

ನಮ್ಮ ನಡುವೆಯೇ ಇರುವ ಜ್ಞಾನವೃದ್ಧ ವಯೋವೃದ್ಧರಾದ, ತಾರುಣ್ಯದ ಉತ್ಸಾಹ ಉಳ್ಳವರ ಶ್ರೀಮುಖವನ್ನು ಸಂಪರ್ಕಿಸಿದರೆ ಸಾಕು, ಮೇಲೆ ಹೇಳಿದಂಥ ಅನೇಕ ಪ್ರಶ್ನೆಗಳಿಗೆ ಉತ್ತರಗಳು ಪುಂಖಾನುಪುಂಖ, ಅವರೊಬ್ಬ ಪ್ರಕಾಂಡಪಂಡಿತ.

ಆದರೆ ಸಂದೇಹ ಉಂಟಾದಾಗಲೆಲ್ಲ ಅವರಲ್ಲಿಗೆ ಓಡಿಹೋಗುವುದು ಹೇಗೆ? ನಮ್ಮ ಸಂದೇಹಗಳಿಗೆ ಪರಿಹಾರ ನೀಡುವುದೊಂದೇ ಅವರ ಕೆಲಸವೆ? 'ಕೂಡಲ ಸಂಗಮದೇವ ಒಲಿದಾನೋ ಒಲಿಯನೋ ಎಂಬ ಚಿಂತೆ. ಹಾಸಲುಂಟು, ಹೊದೆಯಲುಂಟು. ಪರರ ಚಿಂತೆ ನಮಗೇಕಯ್ಯ!' ಎಂದಾರು ಅವರು, ಅದೂ ಸಹಜವೇ(ಹಾಗೆಂದು ಅವರು ಹೇಳುವವರಲ್ಲ), "ಸರ್ವಜ್ಞನೆಂಬುವನು ಗರ್ವದಿಂದಾದವನೆ? ಸರ್ವರೊಳೊಂದೊಂದು ನುಡಿಗಲಿತು ವಿದ್ಯೆಯ ಪರ್ವತವೆ ಆದ ಸರ್ವಜ್ಞ" ಎಂಬ ಮಾತು ಅವರಿಗೆ ಅನ್ವಯ. ಸದಾ ಯಾವುದಾದರೊಂದು ಸಂದೇಶ ಎತ್ತಿಕೊಂಡು ಇಲ್ಲದ ಪ್ರಕ್ರಿಯೆ. ವಿದ್ವಾಂಸರ ರೀತಿಯೇ ಹೀಗೆ.

ಹಾಗೂ ಹೀಗೂ ಮನಸ್ಸು ಮಾಡಿ, ಅವರನ್ನು ಭೇಟಿ ಮಾಡಿ ಅವರ ಮುಂದೆ ನಿಮ್ಮ ಪ್ರಶ್ನೆಯನ್ನಿಟ್ಟರೆನ್ನಿ, ನಿಮ್ಮ ಪ್ರಶ್ನೆಗೆ ಅವರ ಸರಿಯುತ್ತರ ಒಡನೆಯೇ ಸಿದ್ಧ. ಚಿತ್ರಬಂಧದ ಖಾಲಿ ಮನೆಗಳನ್ನೂ ತುಂಬಿದ ಹಾಗೆ ಸಲೀಸು. ಆದರೆ ಯಾವಾಗಲೂ

ಅವರ ಬಳಿಗೆ ಓಡಿಹೋಗಲಾಗುವುದಿಲ್ಲ. ಅವರ ರಾಯಭಾರಿ ನಿಮ್ಮೊಂದಿಗೆ ಸದಾ ಇರಲು ಸಿದ್ಧ. ಆ ರಾಯಭಾರಿ ಯಾರು ಗೊತ್ತೆ? ಅವರ ಕೃತಿ. 'ಶ್ರೀವತ್ಸ ನಿಘಂಟು' ನಿಮ್ಮ ಇಂಥ ಎಲ್ಲ ಸಂದೇಹಗಳಿಗೆ ನಿರ್ಣಾಯಕವಾಗಿ ಉತ್ತರನೀಡುವ ಸಖ ಆ ಕೃತಿ. ಆ ಪುಸ್ತಕವೊಂದಿದ್ದರೆ ಸಾಕು, 'ಅವರು ಯಾಕೆ, ಅವರ ಹಂಗು ಯಾಕೆ?' ದಾಸರು ಹೇಳುವ ಹಾಗೆ!

ಈ ಮಾತಿಗೆ ಅವರು ನಕ್ಕಾರು. ಅಗಾಧ ವಿದ್ವತ್ತು ಅವರ ತಲೆಯಲ್ಲಿ ತುಂಬಿದ್ದರೂ ಅವರು ಬಲು ಹಗುರವಾಗಿಯೇ ಇರುವವರು. ವಿದ್ವತ್ತಿನ ಭಾರದಿಂದ ಅವರು ಸ್ಥೂಲ ಕಾಯರಾಗಿಲ್ಲ, ಅವರ ತಲೆ ಉಬ್ಬಿಲ್ಲ. ವಿದ್ಯೆಯಿಂದ ವಿನಯ ಬರಬೇಕು. ಅವರು ನಿಜಕ್ಕೂ ವಿದ್ಯಾವಿನಯಸಂಪನ್ನರು.

ಅವರು ಯಾರು ಎಂಬುದನ್ನೇ ನೀವು ಇನ್ನೂ ಹೇಳಲಿಲ್ಲವಲ್ಲ ಎಂದು ನೀವು ಕೇಳಬಹುದು. ನೀವು ಈ ಲೇಖನದ ಶೀರ್ಷಿಕೆಯನ್ನು ಓದಿಯೇ ಇರುತ್ತೀರಿ ಎಂದೇ ಈವರೆಗೂ ಅವರ ಹೆಸರನ್ನು ಉಲ್ಲೇಖಿಸುವ ಗೋಜಿಗೆ ಹೋಗಲಿಲ್ಲ. ಅಧಿಕೃತವಾಗಿ ಅವರನ್ನು ಓದುಗರಿಗೆ (ಅಥವಾ ಸಭಾಸದರಿಗೆ) ಪರಿಚಯ ಮಾಡಿಕೊಡುವುದು ಶಿಷ್ಟಾಚಾರವಲ್ಲವೆ? ಅವರೂ ಶಿಷ್ಟಚಾರಸಂಪನ್ನರೇ. ಅವರ ಹೆಸರು ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರೀ.

ಅವರ ವಿದ್ವತ್ತಿನ ನಾನಾ ಪ್ರಕಾರಗಳನ್ನು, ಸಾಧನೆಯ ಹಾದಿಯ ನಾನಾ ಕವಲುಗಳನ್ನು ತಿಳಿಯುವ ಮುನ್ನ ಅವರ ಬದುಕಿನ ಹಾದಿಯ ಮೈಲಿಗಲ್ಲುಗಳನ್ನು (ಅವರ ಮಾನಸ ಯಾತ್ರೆಯ ಹಾದಿಯನ್ನಳೆಯಲು ಕಿಲೋಮೀಟರ್ ಕಲ್ಲು ಉಚಿತವೆನಿಸದು) ಗುರುತಿಸೋಣ.

ತೋಗೆರೆ (ಟಿ) ವೆಂಕಟಸುಬ್ಬ ಶಾಸ್ತ್ರೀ (ವಿ) ವೆಂಕಟಾಚಲ ಶಾಸ್ತ್ರೀ ಅವರ ಊರು ಕನಕಪುರ. ಅವರು ಹುಟ್ಟಿದ್ದು ತಾಯಿಯ ತವರೂರಾದ ಹಾರೋಹಳ್ಳಿಯಲ್ಲಿ. ಅವರು ಹುಟ್ಟಿದ ವರ್ಷ ಕ್ರಿಸ್ತಶಕೆಯ ೧೯೩೩(ಆಗಸ್ಟ್ ೨೬). ನಮ್ಮ ಹಿಂದೂ ಎಣಿಕೆಯ ಪ್ರಕಾರ ಅದು ಶ್ರೀಮುಖ ಸಂವತ್ಸರ. ಅಂತೆಯೇ ಅವರ ಅಭಿಮಾನಿಗಳು ಅವರಿಗೆ ಈಚೆಗೆ ಸನ್ಮಾನಮಾಡಿ ಅರ್ಪಿಸಿದ ಸಂಭಾವನಾಗ್ರಂಥದ ಹೆಸರು 'ಶ್ರೀಮುಖ'.

ಅವರ ಹಿರಿಯರ ಊರು ತೋಗೆರೆ, ಅದು ಒಂದು ಕಾಲಕ್ಕೆ ಹಳೆಯ ಮೈಸೂರಿಗೆ ಸೇರಿದ ಭಾಗವಾಗಿತ್ತಂತೆ. ಆಮೇಲೆ ಕಂಪನಿ ಆಡಳಿತದ ಕಾಲದಲ್ಲಿ ತಮಿಳುನಾಡಿಗೆ ಸೇರಿಹೋಯಿತಂತೆ. ಈಗ ಅದು ತಮಿಳುನಾಡಿನ ಧರ್ಮಪುರಿ ಜಿಲ್ಲೆಯ ಡೆಂಕಣಿಕೋಟೆ ತಾಲ್ಲೂಕಿಗೆ ಸೇರಿದೆ. ಕನ್ನಡನಾಡಿನಲ್ಲೇ ಇದ್ದು ಆಮೇಲೆ ತಮಿಳುಸೀಮೆಗೆ ಸೇರಿದರೂ ಜನವೇನೂ ಬದಲಾಗಲಿಲ್ಲ. ವೆಂಕಟಾಚಲ ಶಾಸ್ತ್ರಿಗಳೂ ಅವರ ಹಿರಿಯರೂ ಅಪ್ಪಟ ಕನ್ನಡಿಗರು. ಜೊತೆಗೆ ಸಂಸ್ಕೃತವಿದ್ವಾಂಸರು, ಅಧ್ಯಯನಸಂಪನ್ನರು. ಬಡತನವಿದ್ದರೂ ಮನಸ್ಸಿನ ಸಿರಿತನವನ್ನು ಕಾಯ್ದುಕೊಂಡವರು. ಇವೆಲ್ಲ ವಂಶವಾಹಿ ಗುಣಗಳು. ಡಾ.

ವೆಂಕಟಾಚಲ ಶಾಸ್ತ್ರಿಗಳು ಇವನ್ನೆಲ್ಲ ಬದುಕಿನಲ್ಲಿ ಬೊಗಸೆ ಬೊಗಸೆಯಾಗಿ ಮೈಗೂಡಿಸಿಕೊಂಡವರು. ವೆಂಕಟಾಚಲ ಶಾಸ್ತ್ರಿಗಳ ಹೃದಯಸಂಪನ್ನತೆ ವಿದಗ್ಧತೆಗಳು ಅವರನ್ನು ಎಲ್ಲರೂ ಪ್ರೀತಿಸಿ ಗೌರವಿಸುವ ಹಾಗೆ ಮಾಡಿರುವ ಸದ್ಗುಣಗಳು.

ಅತ್ಯಂತ ಸುಸಂಸ್ಕೃತ ವಾತಾವರಣದಲ್ಲಿ ಬೆಳೆದ ವೆಂಕಟಾಚಲ ಶಾಸ್ತ್ರಿಗಳು ಸಹಜವಾಗಿಯೇ ಸಲೀಸಾಗಿ ವಿದ್ಯೆಯನ್ನು ಸಂಪಾದಿಸಿದರು. ಹಲವಾರು ಶಾಲೆಗಳನ್ನು ದಾಟಿ ಕಾಲೇಜು ಮೆಟ್ಟಿಲೇರಿದರು. ಮಹಾರಾಜ ಕಾಲೇಜು ಆಗ ಇನ್ನೂ ತನ್ನ ವೈಭವದ ದಿನಗಳನ್ನು ಕಳೆದುಕೊಂಡಿರಲಿಲ್ಲ. ಪ್ರಾಚೀನ ಅಥೆನ್ಸ್‌ನ ವಿದ್ವತ್ತಿನ ವಾತಾವರಣ ಮರೆಯಾಗಿರಲಿಲ್ಲ. ಅದು ಜ್ಞಾನಾರಾಧಕರಾದ ವಿದ್ವಾಂಸ ಬೋಧಕರು ತುಂಬಿದ್ದ ಮಹಾಮನೆಯಾಗಿತ್ತು. ಆಗ ಅಲ್ಲಿ ಅವರು ಬಿ.ಎ. (ಆನರ್ಸ್) ಮತ್ತು ಎಂ.ಎ. ಮಾಡಿದರು (೧೯೫೪). ಮುಂದೆ, ಹದಿನೆಂಟು ವರ್ಷಗಳ ಅನಂತರ, ಅವರ ವಿದ್ವತ್ತಿನ ಕಿರೀಟಕ್ಕೆ ವಿಶ್ವವಿದ್ಯಾನಿಲಯ ಪಿಎಚ್.ಡಿ. ತುರಾಯಿ ಸಿಕ್ಕಿಸಿತು. ಈ ಮನ್ನಣೆ ಪ್ರಾಪ್ತವಾಗುವುದಕ್ಕೆ ನಿಮಿತ್ತವಾಗಿ ಅವರು ಮಾಡಿದ ಸಂಶೋಧನೆಯೆಂದರೆ 'ಕನ್ನಡ ನೇಮಿನಾಥ ಪುರಾಣಗಳ ತೌಲನಿಕ ಅಧ್ಯಯನ.'

ಈ ನಡುವಣ ವರ್ಷಗಳಲ್ಲಿ ಶಾಸ್ತ್ರಿಗಳು ಹಲವು ಸಂಸ್ಥೆಗಳಲ್ಲಿ ಬೋಧಕರಾಗಿ ಕೆಲಸ ಮಾಡಿದರು. ಜೊತೆಗೆ ಅಧ್ಯಯನಸಂಶೋಧನೆಗಳಂತೂ ನಡೆದೇ ಇದ್ದುವು. ಕನಕಪುರದ ಗ್ರಾಮೀಣ ಕಾಲೇಜು, ಬೆಂಗಳೂರಿನ ಸೇಂಟ್ ಜೋಸೆಫ್ ಕಾಲೇಜು, ಹೈದರಾಬಾದಿನ ಉಸ್ಮಾನಿಯ ವಿಶ್ವವಿದ್ಯಾನಿಲಯದ ಕಾಲೇಜು, ಅಂತಿಮವಾಗಿ ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯ ಕನ್ನಡ ಅಧ್ಯಯನಸಂಸ್ಥೆಯಲ್ಲಿ ಅಧ್ಯಾಪಕ, ಪ್ರವಾಚಕ, ಪ್ರಾಧ್ಯಾಪಕ, ನಿರ್ದೇಶಕ, ಕಲಾವಿಭಾಗದ ಡೀನ್. ನಿವೃತ್ತಿಹೊಂದಿದ ಮೇಲೆ ಹಂಪಿಯ ಕನ್ನಡ ವಿಶ್ವವಿದ್ಯಾಲಯದಲ್ಲಿ ಸಂದರ್ಶಕ ಪ್ರಾಧ್ಯಾಪಕ.

ಶಾಸ್ತ್ರಿಗಳು ಇತರ ಹಲವರಂತೆ 'ಸೃಜನ ಪ್ರಧಾನ' ಎಂದು ಹೇಳುವ ಸಾಹಿತ್ಯವನ್ನೆ ರಚಿಸಲು ಗಮನ ಹರಿಸಿದ್ದರೆ ಅಂಥ ಅನೇಕ ಕೃತಿಗಳನ್ನು ಬಹುಶಃ ನೀಡುತ್ತಿದ್ದರು. ಅವರು ಮೊದಮೊದಲು ಪತ್ತೇದಾರಿ ಕಾದಂಬರಿಗಳನ್ನು ಬರೆಯುತ್ತಿದ್ದರಂತೆ. ಅವು ಯಾವುವೂ ಪ್ರಕಟವಾಗಿರುವಂತೆ ಕಾಣುವುದಿಲ್ಲ, ಪತ್ತೇದಾರಿ ಕಾದಂಬರಿಗಳೇ ನಾಪತ್ತೆಯಾಗಿ ಹೋಗಿರಬೇಕು. ಅವರೇ ಪತ್ತೆಮಾಡಿ ಅವನ್ನು ಪ್ರಕಟಿಸುವುದಾದರೆ ಯಾರು ತಾನೇ ಬೇಡವೆಂದಾರು? ಅವರು ಈ ಹವ್ಯಾಸವನ್ನು ಬಿಟ್ಟು, ಸಾಹಿತ್ಯಲೋಕದಲ್ಲಿ ಪತ್ತೆದಾರಿಯ ಕೆಲಸ ಕೈಗೊಂಡರೂ ಅವರು ಪತ್ತೆ ಮಾಡತೊಡಗಿದ್ದು ಕೊಲೆಯನ್ನಲ್ಲ, ಕೊಲೆಗಾರರನ್ನಲ್ಲ, ಕಲೆಯನ್ನು, ಕಲೆಯನ್ನು ಕುರಿತ ಲಕ್ಷಣಗ್ರಂಥಗಳನ್ನು. ಅವರು ರಚಿಸಿದ್ದು ವ್ಯಾಕರಣ, ಛಂದಸ್ಸು, ಕಾವ್ಯಮೀಮಾಂಸೆ, ನಿಘಂಟು, ಸಾಹಿತ್ಯ ವಿಮರ್ಶೆ, ಸಂಶೋಧನೆ ಮುಂತಾದ ಕ್ಷೇತ್ರಗಳಿಗೆ ಸಂಬಂಧಿಸಿದ ಕೃತಿಗಳನ್ನು. ಕೇಶಿರಾಜ ಎಂಬುವನು

ಹದಿಮೂರನೆಯ ಶತಮಾನದಲ್ಲಿದ್ದ ಒಬ್ಬ ವೈಯಾಕರಣಿ. ಅವನು ಬರೆದ 'ಶಬ್ದಮಣಿ ದರ್ಪಣ' ಎಂಬುದು ಹಳಗನ್ನಡ ವ್ಯಾಕರಣಗ್ರಂಥ. ಕನ್ನಡಕ್ಕೆ ವ್ಯಾಕರಣವೇ ಬೇಡ ಎಂದು ಇಂದು ಕೆಲವರು ಹೇಳುತ್ತಾರೆ. ಭಾಷೆಗೆ ವ್ಯಾಕರಣವೇ ಅಗತ್ಯವಿಲ್ಲ ಎನ್ನುವುದಾದರೆ, ಹರಿಯುವ ಹೊಳೆಗೆ ದಡಗಳೇ ಬೇಡವೆಂದ ಹಾಗೆ. ಪರಿಸ್ಥಿತಿಯನ್ನು ಊಹಿಸಿಕೊಳ್ಳಿ. ಅಂತೂ ಅದು ಅವರ ಅಭಿಪ್ರಾಯ. ಬೇಡ ಎನ್ನುವವರಂತೆಯೇ ಬೇಕು ಎನ್ನುವವರಿಗೂ ಹಾಗೆನ್ನಲು ಸ್ವಾತಂತ್ರ್ಯ ಉಂಟಲ್ಲವೆ? ವೆಂಕಟಾಚಲ ಶಾಸ್ತ್ರಿಗಳು ಈ ಗುಂಪಿಗೆ ಸೇರಿದವರು.

ಕಾವ್ಯಮರ್ಯಾದೆಯನ್ನು ಕುರಿತು ಕೂಡ ಡಾ.ಶಾಸ್ತ್ರೀ ಅವರು ಅಪಾರವಾದ ಕೆಲಸ ಮಾಡಿದ್ದಾರೆ. ಕನ್ನಡ ಛಂದಸ್ಸು, ಕನ್ನಡ ಛಂದಃಸ್ವರೂಪ, ಕನ್ನಡ ಛಂದೋವಿಹಾರ ಇವು ಮೂರು ವಿದ್ವತ್‌ಪೂರ್ಣ ಗ್ರಂಥಗಳು. ಕಾವ್ಯಮೀಮಾಂಸೆ ಕುರಿತ ಗ್ರಂಥಗಳೂ ಕಾವ್ಯಾಭ್ಯಾಸಿಗಳಿಗೆ ಅತ್ಯವಶ್ಯ. ಕಾವ್ಯಲೋಕದ ಎಲ್ಲ ನೀಲನಕ್ಷೆಯ ಸ್ಪಷ್ಟ, ಖಚಿತ ಚಿತ್ರ ಪಡೆಯಲು ಇವು ಉಪಯುಕ್ತ. ಕನ್ನಡ ಚಿತ್ರಕಾವ್ಯ ಒಂದು ಅಪರೂಪದ ಕೃತಿ. ಇದೊಂದು ಆಚಾರ್ಯಕೃತಿ ಎಂದು ಹಾಮಾನಾ ಬಣ್ಣಿಸಿದ್ದಾರೆ. ಶಾಸ್ತ್ರಿಗಳು ಬರೆದ ಒಂದೊಂದೂ ಆಚಾರ್ಯಕೃತಿಯೇ. 'ಹತ್ತು ಕಟ್ಟುವ ಬದಲು ಒಂದು ಮುತ್ತು ಕಟ್ಟು' ಎನ್ನುವುದೊಂದು ಗಾದೆ. ವೆಂಕಟಾಚಲ ಶಾಸ್ತ್ರಿಗಳು ಹತ್ತನ್ನೇ ಕಟ್ಟುತ್ತಾರೆ. ಹತ್ತೂ ಮುತ್ತುಗಳಾಗುವ ಹಾಗೆ ನೋಡಿಕೊಳ್ಳುತ್ತಾರೆ. ಹತ್ತರ ಬದಲು ಒಂದನ್ನು ಮುತ್ತಾಗಿ ಮಾಡುವ, ಒಂದಕ್ಕೆ ತೃಪ್ತಿ ಹೊಂದುವ ಸ್ವಭಾವ ಅವರದಲ್ಲ. ಕಟ್ಟಿದ್ದೆಲ್ಲ ಕಸವರವಾಗಲಿ, ಒಂದೂ ಕಸವಾಗುವುದು ಬೇಡ ಎಂಬುದು ಅವರ ಮನೋಧರ್ಮ. ಸಂಸ್ಕೃತದಲ್ಲಿ ಸಮೃದ್ಧವಾದ ಚಿತ್ರಕಾವ್ಯದ ಪರಂಪರೆಯನ್ನು ಕನ್ನಡಕ್ಕೆ ತರಲು ಯತ್ನಿಸಿ ಅದಕ್ಕೆ ಅವರು ತಮ್ಮದೆ ಆದ ಕಾಣಿಕೆ ಸಲ್ಲಿಸಿದ್ದಾರೆ. ಚಿತ್ರಕಾವ್ಯದ ವಿಚಿತ್ರ ಚಮತ್ಕಾರವನ್ನು ಸ್ವಾರಸ್ಯವಾಗಿ ಚಿತ್ರಿಸಿರುವ ಈ ಕೃತಿ ಕನ್ನಡಕ್ಕೊಂದು ಉತ್ತಮ ಕಾಣಿಕೆ. 'ದೇವತೆಗಳು ಹೆಜ್ಜೆ ಇಡಲು ಹೆದರುವಲ್ಲಿ ಮೂರ್ಖರು ದಾಪುಗಾಲು ಹಾಕುತ್ತಾರೆ' ಎಂಬುದೊಂದು ಮಾತುಂಟು. ವೆಂಕಟಾಚಲ ಶಾಸ್ತ್ರಿಗಳು ಅಂಥ ನೆಲದಲ್ಲಿ ಧೈರ್ಯವಾಗಿ ಹೆಜ್ಜೆ ಇಟ್ಟು ನಡೆದು ನೆಲದ ಗಟ್ಟಿತನದ ಭರವಸೆ ನೀಡಿ, 'ಬನ್ನಿ, ಈ ಹಾದಿಯಲ್ಲಿ ನಡೆಯೋಣ' ಎಂದು ಇತರ ವಿದ್ವಾಂಸರನ್ನೂ ಕರೆಯುತ್ತಿದ್ದಾರೆ. ಇತರ ವಿದ್ವಾಂಸರು ಕರೆಯ ಮೇಲೇ ನಿಂತಿದ್ದಾರೆ, ಮೂಗಿನ ಮೇಲೆ ಬೆರಳಿಟ್ಟು ವಿಸ್ಮಯಗೊಂಡಿದ್ದಾರೆ.

ಇನ್ನು ನಿಘಂಟಿನ ವಿಚಾರ. 'ನಿಘಂಟು' ಎನ್ನುವುದಕ್ಕೆ ಖಚಿತ ಎಂಬ ಅರ್ಥವೂ ನಮ್ಮಲ್ಲಿ ವಾಡಿಕೆಯಲ್ಲಿದೆ. 'ನಾನು ನಿಘಂಟಾಗಿ ನುಡಿಯುತ್ತೇನೆ' ಎಂದರೆ ಖಂಡಿತವಾಗಿ, ಯಾವುದೇ ಸಂದೇಹವಿಲ್ಲದೆ ಹೇಳುತ್ತೇನೆ ಎಂದು ಅರ್ಥ. ನಮ್ಮ ಭಾಷೆಯಲ್ಲಿ ಬಳಕೆಯಲ್ಲಿರುವ ಪದಗಳ ಅರ್ಥಗಳನ್ನು ಸಂದೇಹಕ್ಕೆ ಆಸ್ಪದವಿಲ್ಲದಂತೆ ನಿರ್ಣಾಯಕವಾಗಿ ನುಡಿಯುವುದು ಸುಲಭವೇನೂ ಅಲ್ಲ. 'ನಿಜದ ನೆಲೆ ನಿಜಕ್ಕಿಲ್ಲ' ಎಂದು ಬೇಂದ್ರೆ

ಯವರು ಹೇಳುವ ಹಾಗೆ 'ಶಬ್ದದ ನೆಲೆ ಶಬ್ದಕ್ಕಿಲ್ಲ' ಎನ್ನಬಹುದೇನೋ. ಅದರ ಆಳವನ್ನರಿಯುವುದು ಬಹುತೇಕ ಅಸಾಧ್ಯ. ಆದರೂ ಅದರ ಎಲ್ಲಾ ಛಾಯೆಗಳನ್ನೂ ಅರಿತು ವಿವರಿಸುವ ಕೆಲಸ ಬಹಳ ಕ್ಲೇಶದಾಯಕವಾದದ್ದು. ಆದರೂ ಬರಹದ ಕಾಯಕದಲ್ಲಿ ನಿರತರಾದವರಿಗೆ ಇದು ಅಗತ್ಯ. ಶಬ್ದಕೋಶ ರಚನೆಯಲ್ಲಿ ಇವರ ಕೆಲಸ ಅಪಾರ. 'ಕನ್ನಡ ರತ್ನಕೋಶ' ಒಂದು ಸಂಕ್ಷೇಪರೂಪ, ಕಿಸೆಹೊತ್ತಗೆ- ಪಾಕೆಟ್ ಡಿಕ್ಷನರಿ, ಗಜಶಾಸ್ತ್ರ ಶಬ್ದಕೋಶ ಇನ್ನೊಂದು. ಶ್ರೀವತ್ಸ ನಿಘಂಟಿನ ಪರಿಚಯ ನಿಮಗೆ ಈಗಾಗಲೇ ಆಗಿಯೇ ಇದೆಯಾದ್ದರಿಂದ ಹೆಚ್ಚಿಗೆ ಹೇಳುವಹಾಗಿಲ್ಲ.

ಇನ್ನು ಗ್ರಂಥಸಂಪಾದನೆ, ಸಾಹಿತ್ಯವಿಮರ್ಶೆ, ಸಂಶೋಧನೆ, ಶಬ್ದಾರ್ಥವಿಹಾರ, ಪುರಾಣಗಳು, ಸಾಹಿತ್ಯಕೃತಿಗಳು, ಸನಾತನಗ್ರಂಥಗಳು- ಈ ಕ್ಷೇತ್ರದಲ್ಲಿ ಅವರ ದುಡಿಮೆ ಕಡಿಮೆಯೇನಲ್ಲ. ಅವರೊಂದಿಗೆ ಕಾಡುಮೇಡು ಅಲೆಯುವ ಸಾಹಸಕ್ಕೆ ತೊಡಗದೆ ಅಂಚಿನಲ್ಲೇ ನಿಂತು ದರ್ಶನಮಾಡಿದರೆ ಸಾಕು. ಅವಧಾನ ಇದ್ದಾಗ ಅವುಗಳ ಅವಲೋಕನ. ನಾಟಕ, ಜೀವನಚರಿತ್ರೆಗಳನ್ನೂ ಬರೆದಿರುವ ಶಾಸ್ತ್ರಿಗಳು ಚಿಂತನಪ್ರಬಂಧಗಳನ್ನೂ, ಲಲಿತಪ್ರಬಂಧಗಳನ್ನೂ ರಚಿಸಿದ್ದಾರೆ. ಉದಾರಚಿಂತಕರನ್ನು ಕುರಿತು, ಉದಾತ್ತ ಪ್ರಸಂಗಗಳನ್ನು ಕುರಿತು ಅವರು ನೀಡಿರುವ ಒಕ್ಕಣೆ ತುಂಬಾ ಸ್ವಾರಸ್ಯವುಳ್ಳದ್ದು. ಶಾಸ್ತ್ರಿಗಳು ತಮ್ಮ ಸುತ್ತಣ ಬದುಕಿನಲ್ಲಿ ಕಂಡ ಉದಾತ್ತತೆಯನ್ನು ಎತ್ತಿ ತೋರಿಸುವ ರೀತಿ ಅನುಪಮ. ಈಚೆಗೆ ಅವರ ಬರಹಗಳ ಸಂಕಲನ ಶಾಸ್ತ್ರೀಯ ಪ್ರಕಟವಾಗಿದೆ. ಮನೋಲೋಕಕ್ಕೆ ಇದೊಂದು ಕಿಂಡಿ.

ಡಾ.ವೆಂಕಟಾಚಲ ಶಾಸ್ತ್ರಿಗಳಿಗೆ ಇದುವರೆಗೆ ಅನೇಕ ಪ್ರಶಸ್ತಿಗಳು ಪ್ರಾಪ್ತವಾಗಿವೆ. ಅವನ್ನೆಲ್ಲ ಇಲ್ಲಿ ಒಕ್ಕಣಿಸುವ ಅಗತ್ಯವಿಲ್ಲ. ಅವರ ಸಾಧನೆಯ ಎತ್ತರಕ್ಕೆ ನಿಂತು ಅವರ ಕೊರಳಿಗೆ ಹಾರ ಹಾಕುವಂಥ ಉನ್ನತಪ್ರಶಸ್ತಿ ಅವರಿಗೆ ಇನ್ನೂ ದೊರಕಬೇಕಾಗಿದೆ. ನಮ್ಮಲ್ಲಿ ಪ್ರಶಸ್ತಿಗಳು ಯಾರ ಕೊರಳಿಗೆ ಹಾರ ಹಾಕುತ್ತವೆ ಎಂಬುದನ್ನು ಹೇಳಬೇಕಾದ್ದಿಲ್ಲ. 'ಕರಿಯ ಕುಸುಮಮಾಲೆ' ಯಾರಿಗೆ ಬೀಳುವುದೆಂಬುದು ಗೊತ್ತಲ್ಲವೇ?*

---

* ಮೈಸೂರು ಮಿತ್ರ, ೧೩.೦೨.೨೦೦೩

ಮುದ್ರಾಮಂಜೂಷವು

ಟಿ.ಕೇಶವ ಭಟ್ಟ

ಕನ್ನಡ ಸಾಹಿತ್ಯದಲ್ಲಿ 'ಮುದ್ರಾಮಂಜೂಷವು' ಎಂಬುದು ಚಾರಿತ್ರಿಕ ಕಥಾವಸ್ತುವನ್ನೊಳಗೊಂಡ ಪ್ರಥಮ ಕಾದಂಬರಿ. ನಿರೂಪಣೆಯ ವಿಧಾನದಲ್ಲಿ, ಅಂತಃಸತ್ವದಲ್ಲಿ ವಿಶಿಷ್ಟವಾಗಿ ಗೌರವಾರ್ಹವಾದುದು. ಇದರ ಕರ್ತೃ ಮೈಸೂರಿನ ಮುಮ್ಮಡಿ ಕೃಷ್ಣರಾಜ ಒಡೆಯರ ಆಸ್ಥಾನಪಂಡಿತರಲ್ಲೊಬ್ಬರಾದ ಹಾಗೂ ಕನ್ನಡದಲ್ಲಿ ಆದ್ಯ ಗದ್ಯಲೇಖಕರೆನಿಸಿದ ನಾರಾಯಣಶರ್ಮ ಎಂಬವರು. ಕೆಂಪುನಾರಾಯಣ ಕವಿ ಎಂದು ಇವರ ಪ್ರಸಿದ್ಧಿ. ಹೊಯ್ಸಳ ಬ್ರಾಹ್ಮಣ ಕುಲದವರು. ಈ ಕಾದಂಬರಿ ರಚಿತವಾದುದು ಕ್ರಿಸ್ತಶಕ ೧೮೨೩ರಲ್ಲಿ. ಎಲ್ಲರಿಗೂ ಅನುಪಲಬ್ಧವಾಗಿರುವ ಈ ಕಾದಂಬರಿಯನ್ನು ವಿಶೇಷ ಪರಿಶ್ರಮದಿಂದ ಮೂಲಪ್ರತಿಗಳನ್ನು ನೋಡಿ ಪಾಠನಿರ್ಣಯ ಮಾಡಿ ಸಮರ್ಪಕವಾಗಿ ಪರಿಷ್ಕರಿಸಿ, ಸಂಪಾದಿಸಿದವರು ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ಕನ್ನಡ ಪ್ರಾಧ್ಯಾಪಕರಾದ ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿಯವರು. ಇವರು ಕನ್ನಡ ಭಾಷೆ, ವ್ಯಾಕರಣ, ಛಂದಸ್ಸು, ನಿಘಂಟುರಚನೆ, ಗ್ರಂಥಸಂಪಾದನೆ, ಸಂಶೋಧನೆ, ವಿಮರ್ಶೆ, ಸಾಹಿತ್ಯಚರಿತ್ರೆ ಮುಂತಾದ ರೂಪಗಳಲ್ಲಿ ಪಾಂಡಿತ್ಯಪೂರ್ಣವಾಗಿ ಕೃತಿರಚನೆಮಾಡಿ ಪಳಗಿದ ಶ್ರೇಷ್ಠವಿದ್ವಾಂಸರು. ಆದುದರಿಂದಲೇ ಈ ಗ್ರಂಥದ ಸಂಪಾದನಕಾರ್ಯವೆಂಬುದು ಮಾದರಿಯದೇ ಆಗಿದೆ.

ಈ ಕೃತಿ ಇದೇ ವರ್ಷ ಎಂದರೆ, ೧೯೯೯ರಲ್ಲಿ ಪ್ರಥಮಮುದ್ರಣವಾಗಿ ಕೇಂದ್ರ ಸಾಹಿತ್ಯ ಅಕಾಡೆಮಿ ಮೂಲಕ ಪ್ರಕಾಶಿತವಾಗಿ ಓದುಗರ ಕೈಗೆ ಬರುವಂತಾಗಿದೆ.

ಪುಸ್ತಕವಿದು ಡೆಮ್ಮೈ ಅಷ್ಟದಳಾಕೃತಿಯ ೪೫೩ ಪುಟಗಳಿಂದ ಕೂಡಿದೆ. ಪುಸ್ತಕದ ಬೆಲೆ ರೂ. ೨೦೦/- ಗ್ರಂಥಾರಂಭದಲ್ಲಿ ಸಂಪಾದಕರ ಅರಿಕೆ, ಅನುಕ್ರಮಣಿಕೆ, ಪೀಠಿಕಾಭಾಗ ಇವು ೧೦೨ ಪುಟಗಳಷ್ಟಿವೆ. ಕಾದಂಬರಿಯ ಸಾಹಿತ್ಯಭಾಗವು ಮಹಾಭಾರತದ ಅಷ್ಟಾದಶ ಪರ್ವಗಳಿಗೆ ಹೋಲಿಕೆಯೋ ಎಂಬಂತೆ, ಹದಿನೆಂಟು ಆಶಯಗಳಿಂದ ಅಂದರೆ ಪ್ರಕರಣಗಳಿಂದ ಕೂಡಿ ೩೫೧ ಪುಟಗಳ ಪರಿಮಿತಿಯದಾಗಿದೆ. ಕೊನೆಗೆ ಆಕರಸೂಚಿಯನ್ನು ಕೊಡಲಾಗಿದೆ.

ಇದರ ಸಂಪಾದನೆಗೆ ಪಾಠಸಾಮಗ್ರಿಯಾಗಿ ಎರಡು ಓಲೆಗರಿಯ ಗ್ರಂಥಗಳನ್ನು ಕ, ಖ ಎಂಬ ಅಂಕಿತದಿಂದಲೂ ಕಾಗದದ ಒಂದು ಪ್ರತಿಯನ್ನು 'ಗ' ಎಂಬ ಸಂಜ್ಞೆ

ಯಿಂದಲೂ ಬಳಸಿಕೊಂಡಿದ್ದಾರೆ. ಮುದ್ರಿತ ಪರಿಷ್ಕರಣದ ಹಳೆಯ ಒಂದು ಪ್ರತಿಯನ್ನು 'ಫ' ಪ್ರತಿಯಾಗಿ ಉಪಯೋಗಿಸಿದ್ದಾರೆ. ಮುದ್ರಿತ ಪ್ರತಿಗಳಲ್ಲಿ ೧೯೧೭ನೆಯ ಇಸವಿಯಲ್ಲಿ ಬಂದ ನಾಲ್ಕನೆಯ ಮುದ್ರಣದಿಂದ ಈಚೆಗೆ ಇದನ್ನು ಚಂಪೂಕಾವ್ಯವೆಂದು ಕರೆದಿರುವು ದಾಗಿ ತಿಳಿಸಿದ್ದಾರೆ. ಇದರ ಮೊದಲನೆಯ ಆಶಯದ ಕೊನೆಗೆ 'ಶ್ರೀಮದ್ರಾಜಾಧಿರಾಜ ಬಿರುದೆಂತೆಂಬರ ಗಂಡ ಶ್ರೀ ಮಹೀಶೂರನರಪತಿ ಶ್ರೀ ಕೃಷ್ಣರಾಜೇಂದ್ರರಾಶ್ರಿತ ಹೊಯಿಸಣಿಗಕುಲಸಂಜಾತ ನಾರಾಯಣಶರ್ಮವಿರಚಿತಮಪ್ಪ ಮುದ್ರಾಮಂಜೂಷವೆಂಬ ಗ್ರಂಥದಲ್ಲಿ (ನಂದೋತ್ಪತ್ತಿ ಕಥನವೆಂಬ ಪ್ರಥಮಾಶಯ) ಸಮಾಪ್ತ' ಎಂಬ ಮುಕ್ತಾಯವಿದೆ. ಇತರ ಆಶಯಗಳ ಕಥಾವಸ್ತು ಮತ್ತು ಆಶಯ ಸಂಖ್ಯೆ ಆ ಪ್ರಕರಣಕ್ಕೆ ಅನುಸಾರವಿರುತ್ತದೆ. ಟಿಪ್ಪಣಿಯಂತೂ ಆಶಯಾನುಗುಣವಾಗಿ ಸಂದರ್ಭದ ಪುಟಸಂಖ್ಯೆಯೊಂದಿಗೆ ಕಠಿನಶಬ್ದಾರ್ಥವನ್ನು ಕೊಡುವುದು ಮಾತ್ರವಲ್ಲದೆ, ಕೆಲವು ಮುಖ್ಯ ವಿಷಯಗಳ ವ್ಯಾಖ್ಯಾನರೂಪವಾಗಿಯೂ ಇರುತ್ತದೆ.

ಈ ಕಾದಂಬರಿಯ ಕಥಾವಸ್ತು ಮುಖ್ಯವಾಗಿ ಕ್ರಿ.ಪೂ. ನಾಲ್ಕನೆಯ ಶತಮಾನದ ಚಂದ್ರಗುಪ್ತ ಚಾಣಕ್ಯರ ವೃತ್ತಾಂತ, ಮೌರ್ಯಸಾಮ್ರಾಜ್ಯಸ್ಥಾಪನೆ. ಪ್ರಾಚೀನ ಭಾರತದ ಮಹಾರಾಜರಲ್ಲಿ ಖ್ಯಾತನಾದವನು ಮೌರ್ಯ ಚಂದ್ರಗುಪ್ತನು. ಅವನ ಆಳ್ವಿಕೆಯ ಕಾಲ ಕ್ರಿಸ್ತಶಕ ೩೨೪-೩೦೦. ನಂದರ ದೌರ್ಜನ್ಯದ ಆಳ್ವಿಕೆಯನ್ನು ಕಿತ್ತೊಗೆದು, ವಿದೇಶಿಯರ ಪೀಡೆಯಿಂದ ಭಾರತವನ್ನು ಮುಕ್ತಗೊಳಿಸಿ ಭಾರತದ ಬಹುಭಾಗವನ್ನು ಒಂದೇ ಆಡಳಿತಕ್ಕೆ ಒಳಪಡಿಸಿದವನೆಂದು ಅವನನ್ನು ಇತಿಹಾಸದಲ್ಲಿ ಗುರುತಿಸಲಾಗಿದೆ. ಅಂದಿನ ಐತಿಹಾಸಿಕ ಕಾಲವೊಂದರಲ್ಲಿ ಘಟಿಸಿದ ಮಹತ್ತರವಾದ ಸಂಗತಿಯ ಸಂದರ್ಶನ ಈ ಕಾದಂಬರಿಯಲ್ಲಿ ಕಂಡುಬರುತ್ತದೆ. ಮಾನ್ಯ ಸಂಪಾದಕರು ಈ ಕೃತಿಯ ಪೀಠಿಕೆಯಲ್ಲಿ ಚಂದ್ರಗುಪ್ತ ಚಾಣಕ್ಯರ ವೃತ್ತಾಂತವನ್ನು ತಿಳಿಸುವ ಪೂರ್ವಸಾಹಿತ್ಯಾಂಶಗಳೆಲ್ಲವನ್ನೂ ಸರಿಯಾಗಿ ಪರಿಶೀಲಿಸಿಕೊಂಡಿದ್ದಾರೆ. ಬೌದ್ಧಸಂಪ್ರದಾಯಕ್ಕೆ ಸೇರಿದ ಮಹಾವಂಶದಲ್ಲಿ, ಜೈನಸಂಪ್ರದಾಯದ ಕೃತಿಗಳಲ್ಲಿ, ವೈದಿಕಪುರಾಣಗಳಾದ ವಿಷ್ಣುಪುರಾಣ, ವಾಯುಪುರಾಣ, ಭಾಗವತಪುರಾಣಗಳಲ್ಲಿ, ಕ್ಷೇಮೇಂದ್ರನ ಬೃಹತ್ಕಥಾಮಂಜರಿಯಲ್ಲಿ, ಸೋಮದೇವನ ಕಥಾಸರಿತ್ಸಾಗರದಲ್ಲಿ, ವಿಶಾಖದತ್ತನ ಮುದ್ರಾರಾಕ್ಷಸ ನಾಟಕದಲ್ಲಿ ಬಂದ ಕಥಾಂಶಗಳನ್ನು ಸರಿಯಾಗಿ ಪರಿಶೀಲಿಸಿಕೊಂಡಿದ್ದಾರೆ. ಕೇರಳದ ರವಿನರ್ತಕನ ರಚನೆಯನ್ನೂ ಅನುಲಕ್ಷಿಸಲಾಗಿದೆ. ಇದರಿಂದ ಈ ಕಾದಂಬರಿಯ ಪೀಠಿಕೆಗೆ ಸಂಶೋಧನಮೌಲ್ಯವೂ ಬರುವಂತಾಗಿದೆ. ಆ ಪೂರ್ವಸಾಹಿತ್ಯಗಳ ಅಂಶಗಳು ಇದರಲ್ಲಿದ್ದರೂ ಈ ಕಾದಂಬರಿಗೆ ಕೆಂಪು ನಾರಾಯಣನ ಪಾಂಡಿತ್ಯದಿಂದ, ಸ್ವೋಪಜ್ಞತೆಯಿಂದ ಹೆಚ್ಚಿನ ಸಹಜತೆ ಪ್ರೌಢತೆ ಮಾರ್ಮಿಕತೆಗಳು ಬಂದಿರುವುದನ್ನು ಆಯಾ ಆಶಯಗಳ (ಪ್ರಕರಣಗಳ) ಅನುಸಾರವಾಗಿ ನಿರೂಪಿಸಲಾಗಿದೆ. ಕಾದಂಬರಿಯ ಚಾರಿತ್ರಿಕ ಕಥಾಂಶಗಳಿವು.

ಉತ್ತರ ಹಿಂದುಸ್ಥಾನದಲ್ಲಿ ಗೌಡದೇಶದ ರಾಜಧಾನಿ ಪಾಟಲಿಪುರ; ಈಗಿನ ಪಾಟ್ನ. ಅಲ್ಲಿಯ ರಾಜ ಸರ್ವಾರ್ಥಸಿದ್ಧಿ. ಅವನ ಪ್ರಧಾನಿ ರಾಕ್ಷಸ ಎಂಬ ಹೆಸರಿನ ಬ್ರಾಹ್ಮಣ. ರಾಜನ ಓರ್ವ ಪತ್ನಿ ರಾಜಪುತ್ರಿಯಾದ ಸುನಂದೆ. ಇನ್ನೊರ್ವಳು ಪ್ರಿಯಪತ್ನಿ ಶೂದ್ರ ಪುತ್ರಿಯಾದ ಮುರಾದೇವಿ. ಈಕೆ ಗುಣಸಂಪನ್ನೆ, ಪತಿವ್ರತೆ, ಆಚಾರನಿಷ್ಠೆಗಳಲ್ಲಿ ಮಿಗಿಲಾದವಳು. ಮಕ್ಕಳಿಲ್ಲದ ಸರ್ವಾರ್ಥಸಿದ್ಧಿಗೆ ವೀತಿಹವ್ಯನೆಂಬ ಮುನಿಯ ಅನುಗ್ರಹ ವಾಯಿತು. ಆ ಮುನಿಯ ಪಾದೋದಕದ ಒಂಬತ್ತು ಹನಿಗಳು ಸುನಂದೆಯ ತಲೆಯ ಮೇಲೆ ಎರಚಿದಾಗ ಅವು ತಲೆಯಿಂದ ಜಾರಿಹೋದವು. ಮುರೆಯ ತಲೆಯ ಮೇಲೆ ಸಿಂಪಡಿಸಿದ ಒಂದೇ ಒಂದು ಹನಿ ಅಲ್ಲಿ ಸ್ಥಿರವಾಗಿ ನಿಂತಿತು. ಹೀಗಾದುದು ಮುಂದೆ ನವನಂದರ ಹಾನಿಸೂಚಕವೂ ಚಂದ್ರಗುಪ್ತನ ಅಭ್ಯುದಯದರ್ಶಕವೂ ಆದುದನ್ನು ಸಂಕೇತಿಸಿದುದಾಗಿ ತಿಳಿಯಲಾಗಿದೆ. ಸುನಂದೆಯಲ್ಲಿ ಒಂಬತ್ತು ಮಂದಿ ಮಕ್ಕಳು (ನವನಂದರು) ಜನಿಸಿದರು. ಮುರೆಯಲ್ಲಿ ಜನಿಸಿದ ಮೌರ್ಯನಿಗೆ ಬಹುಪತ್ನಿಯರು. ಅವರಲ್ಲಿ ಚಂದ್ರಗುಪ್ತನೇ ಮೊದಲಾದ ನೂರು ಮಂದಿ ಮಕ್ಕಳಾದರು. ನವನಂದರಲ್ಲಿ ಮೊದಲಿಗನು ನಂದನಾದರೆ, ಉಳಿದವರು ಸುನಂದ, ಉಪನಂದ, ಪ್ರನಂದ, ಲೋಕನಂದ, ಕುರುನಂದ, ಪ್ರಿಯನಂದ, ಮಿತ್ರನಂದ, ವಿನಂದ ಎಂಬುವರು. ನಂದನಿಗೆ ಯುವ ರಾಜ್ಯಾಭಿಷೇಕ. ಅಮಾತ್ಯರಾಕ್ಷಸನು ಅವರಿಗೆ ಮಾರ್ಗದರ್ಶಿ. ನಂದರಿಗೆ ಮೌರ್ಯರ ಮೇಲೆ ಹೊಟ್ಟೆಕಿಚ್ಚು. ಅವರನ್ನು ಹೇಗೆ ನಾಶಪಡಿಸುವುದೆಂಬುದೇ ಯೋಚನೆ. ನಂದರು ಬೇಟೆಯ ನೆವದಿಂದ ಕುಟಿಲಯೋಜನೆ ಹೂಡಿ, ಮೌರ್ಯರೆಲ್ಲರನ್ನೂ ಬಂಧನದಲ್ಲಿಟ್ಟು ಉಪವಾಸ ಬೀಳಿಸಿ ಸಾಯಿಸುತ್ತಾರೆ. ಆದರೆ ಚಂದ್ರಗುಪ್ತನೊಬ್ಬನು ಮಾತ್ರ ಉಳಿದಿರು ತ್ತಾನೆ. ಈ ಕಡೆ ರಾಕ್ಷಸನು ತನಗೆ ಮೌರ್ಯವಧೆಯ ಅಪಕೀರ್ತಿ ಬಾರದಂತೆ ಮಾಡುವು ದಕ್ಕಾಗಿ ಸರ್ವಾರ್ಥಸಿದ್ಧಿರಾಜನೊಂದಿಗೆ ಪುಣ್ಯಕ್ಷೇತ್ರಯಾತ್ರೆಗೆ ಹೋಗಿರುತ್ತಾನೆ. ಅದೇ ಯಾತ್ರೆಗೆ ತೆರಳಿದ್ದ ಮುರಾದೇವಿ ಗಂಗೆಯಲ್ಲಿ ಐಕ್ಯಳಾಗುತ್ತಾಳೆ.

ಪರ್ವತರಾಜನು ಮಗಧಸಾಮ್ರಾಜ್ಯ ಚಂದ್ರಗುಪ್ತನಿಗೆ ಬಂದಾಗ, ಅರ್ಧರಾಜ್ಯವನ್ನು ತನಗೆ ಮಾಡಿಕೊಳ್ಳುವ ಪೂರ್ವಯೋಜನಾಬದ್ಧನಾಗಿ ಕಪಟಶಿಲ್ಪದ ಸಿಂಹಪಂಜರವನ್ನು ಸೃಷ್ಟಿಸಿ ಪಾಟಲಿಪುತ್ರಕ್ಕೆ ಕಳುಹಿಸುತ್ತಾನೆ. ಬಂಧನದಲ್ಲಿದ್ದ ಚಂದ್ರಗುಪ್ತನಿಂದ ಆ ಕಪಟ ಬಯಲಾಗುವುದು. ಇದರಿಂದ ಸಂತುಷ್ಟನಾದ ನಂದನು ಚಂದ್ರಗುಪ್ತನನ್ನು ಬಂಧಮುಕ್ತ ಗೊಳಿಸುವನು. ಅವನನ್ನು ಅನ್ನಸತ್ರದ ಮುಖ್ಯಾಧಿಕಾರಿಯನ್ನಾಗಿ ಮಾಡುವನು. ಅಲ್ಲಿ ಚಂದ್ರಗುಪ್ತನು ಒಳ್ಳೆಯ ಆತಿಥೇಯನಾಗಿ ತೋರಿಸಿದ ಸೌಜನ್ಯದಿಂದ ಅವನಿಗೆ ಬ್ರಾಹ್ಮಣ ವಿದ್ವಾಂಸನಾದ ಚಾಣಕ್ಯನೊಂದಿಗೆ ಸಹವಾಸಭಾಗ್ಯವುಂಟಾಯಿತು. ಅದೇ ಸತ್ರದಲ್ಲಿ ಚಾಣಕ್ಯನಿಗೆ ನಂದರಿಂದ (ನಂದರ ಸೊಕ್ಕಿನಿಂದ) ಅವಮಾನವುಂಟಾಗಲು, ಅದಕ್ಕೆ ಪ್ರತೀಕಾರವಾಗಿ ಚಾಣಕ್ಯನು ನಂದವಂಶವನ್ನು ನಿರ್ಮೂಲನಮಾಡಲು ಪ್ರತಿಜ್ಞಾಬದ್ಧ

ನಾದನು. ನಂದರ ನಿರ್ಮೂಲನದ ಕಾರ್ಯತಂತ್ರ ಈಡೇರಿದುದು ತುಂಬ ಆಶ್ಚರ್ಯಕರವಾಗಿಯೇ ಇದೆ.

ಮುಂದೆ ಪರ್ವತರಾಜನು ಅರ್ಧರಾಜ್ಯಕ್ಕೆ ತಾನೇ ಒಡೆಯನಾಗುವ ಯೋಜನೆಯಲ್ಲಿರುತ್ತಾನೆ. ಮುಂದೆ ಶಕ, ಹೂಣ, ಚೀಣ ಸೇನೆಗಳು ಪರ್ವತರಾಜನ ಬೆಂಬಲವನ್ನೂ ಪಡೆದು ಯುದ್ಧ ಹೂಡುತ್ತಾರೆ. ನಂದರ ಪರವಾಗಿಯೇ ಏರ್ಪಡಿಸಲಾದ ಶತ್ರುಪಲಾಯನಜಪಶಾಲೆಯಲ್ಲಿ ಕಾಳಗವಾಗಿ ನಂದರ ಸಂಹಾರವಾಗುತ್ತದೆ. ನಂದಪಕ್ಷಪಾತಿಯಾಗಿದ್ದ ಅಮಾತ್ಯರಾಕ್ಷಸನು ಮುಂದೆ ಚಂದ್ರಗುಪ್ತನನ್ನು ಹೇಗಾದರೂ ವಧಿಸಲೆಂದು ವಿಷಕನ್ಯೆಯನ್ನು ಬಳಸಿಕೊಳ್ಳುತ್ತಾನೆ. ಅವಳನ್ನು ಕ್ಷಪಣಕನ ಮೂಲಕ ಕಳುಹಿದುದು ಫಲಕಾರಿಯಾಗದಿದ್ದರೆ ಚಂದ್ರಗುಪ್ತನು ಪಟ್ಟಾಭಿಷಿಕ್ತನಾಗಿ ರಾಜದ್ವಾರದಲ್ಲಿ ಮೆರವಣಿಗೆಯಲ್ಲಿ ಬರುವಾಗ ಪಟ್ಟದಾನೆಯ ಮಾವುತನಿಂದ ಹತನನ್ನಾಗಿಸಲು ಯೋಚಿಸುತ್ತಾನೆ. ಇದೊಂದೂ ಫಲಕಾರಿಯಾಗಲಿಲ್ಲ. ಕ್ಷಪಣಕನು ಚಂದ್ರಗುಪ್ತನ ಬಳಿಗೆ ವಿಷಕನ್ಯೆಯನ್ನು ಕರೆತಂದಾಗ, ಅಲ್ಲಿದ್ದ ಚಾಣಕ್ಯನು ಅವನ ಮಾತಿನಿಂದಲೇ ಆಕೆ ವಿಷಕನ್ಯೆಯೆಂದು ತಿಳಿದುಕೊಳ್ಳುತ್ತಾನೆ. ಆದರೆ, ಪರ್ವತರಾಜನು ನಿಜವನ್ನರಿಯದೆ, ವಿಷಕನ್ಯೆಯ ಲಾವಣ್ಯಕ್ಕೆ ಮಾರುಹೋಗಿ ಆಕೆಯ ಒಡನಾಟದಿಂದ ಸಾಯುತ್ತಾನೆ.

ಹೀಗೆ ಈ ಕಾದಂಬರಿಯ ಕಥೆಯ ಸಮಗ್ರ ರಾಜನೈತಿಕ ಸಂಗತಿಗಳಲ್ಲಿ ಪ್ರಮುಖ ಕಾರಣಪುರುಷನಾಗಿರುವವನು ಚಾಣಕ್ಯನು. ಪರಿಣಾಮದ ಸದುದ್ದೇಶದಿಂದ ಕುಟಿಲ ರಾಜನೀತಿಯಲ್ಲಿ ಅಪ್ರತಿಹತ ಸಾಮರ್ಥ್ಯದ ಚಾಣಕ್ಯನು ನಂದನಿರ್ಮೂಲನದ ತನ್ನ ಪ್ರತಿಜ್ಞೆ ಈಡೇರಿದ ಮೇಲೆ ಚಂದ್ರಗುಪ್ತನನ್ನು ಸಾಮ್ರಾಟನನ್ನಾಗಿ ಮಾಡಿ ಅಮಾತ್ಯ ರಾಕ್ಷಸನನ್ನೇ ಅವನ ಪ್ರಧಾನಿಯನ್ನಾಗಿ ನಿಯೋಜಿಸಿ ತಪಸ್ಸಿಗೆ ತೆರಳುತ್ತಾನೆ. ಚಾಣಕ್ಯನಿಗೆ ವಿಷ್ಣುಗುಪ್ತನೆಂಬುದು ನಾಮಕರಣದ ಹೆಸರು. ಅರ್ಥಶಾಸ್ತ್ರದ ಕರ್ತಾರನಾಗಿ ಕೌಟಿಲ್ಯನೆಂದು ಕರೆಯಿಸಿಕೊಂಡಿದ್ದರೂ ಅದು ಗೋತ್ರಪ್ರವರ್ತಕ ಋಷಿಯಾದ ಕುಟಿಲನ ವಂಶೋಕ್ತವಾಗಿ ಬಂದುದು. ಚಣಕದೇಶದಲ್ಲಿ ಜನಿಸಿದವನಾಗಿ ಅವನು ಚಾಣಕ್ಯನು. ಇಂತಹ ವಿಶೇಷ ಸಂಶೋಧನೆಗಳನ್ನು ಓದುಗರಿಗೆ ಸಂಪಾದಕರು ಇದರಲ್ಲಿ ಒದಗಿಸಿದ್ದಾರೆ.

ಈ ಕಾದಂಬರಿಯ ಕಥಾವಸ್ತು, ಪಾತ್ರ, ಸನ್ನಿವೇಶ ಚಿತ್ರಣಗಳಲ್ಲಿ ಆಕರ್ಷಣೆಗಳಿರುವಂತೆ ದೌರ್ಬಲ್ಯಗಳೂ ಇರುವುದನ್ನು ಉದಾಹರಣೆಗಳಿಂದ ತೋರಿಸಲು ಶಾಸ್ತ್ರಿಗಳು ಹಿಂಜರಿದಿಲ್ಲ. ಕಾದಂಬರಿಯ ಭಾಷೆ ಹಳಗನ್ನಡ ಹೊಸಗನ್ನಡದ ಬೆರಕೆಯಾಗಿರುವುದಲ್ಲದೆ, ಸಂಸ್ಕೃತ ಶಬ್ದಾಡಂಬರಗಳ ದೀರ್ಘಸಮಾಸಪದಗಳಿಗೂ ಪ್ರಾಶಸ್ತ್ಯ ಉಳ್ಳುದಾಗಿದೆ. ಶ್ಲೇಷ, ಉಪಮಾ, ದೃಷ್ಟಾಂತಾದಿ ಅರ್ಥಾಲಂಕಾರಗಳಿಂದ ಕೂಡಿದ ವರ್ಣನೆಗಳು ಅಲ್ಲಲ್ಲಿ ವಿಜೃಂಭಿಸಿವೆ. ಉಪಕಥೆಗಳು, ನೀತಿಧರ್ಮೋಪದೇಶಗಳು ಮನೋಜ್ಞವಾಗಿವೆ. ಕನ್ನಡದ ಸಾಹಿತ್ಯಗೌರವವನ್ನು ಎತ್ತಿ ಹಿಡಿಯುವಂತಿವೆ. ಉದಾಹರಣೆಗಾಗಿ ಪಾಟಲೀಪುರ ರಾಜಧಾನಿಯನ್ನು ಎರಡು ಪುಟಗಳಲ್ಲಿ ವರ್ಣನೆ ಮಾಡುತ್ತಾ

ಅದಕ್ಕೆ ಗಂಗಾನದಿಯೇ ಅಗಳಾಗಿರುವುದನ್ನು ಪ್ರೌಢಗದ್ಯದಲ್ಲಿ ನಿರೂಪಿಸಲಾಗಿದೆ. ಈ ಪ್ರೌಢಗದ್ಯಶೈಲಿ ಬಾಣನ ಕಾದಂಬರಿಯ ಸಂಸ್ಕೃತಶೈಲಿಯನ್ನು ಬಲುಮಟ್ಟಿಗೆ ಹೋಲುತ್ತಿದೆ. ಕೃತಿಕರ್ತನಿಗೆ ಇಷ್ಟೊಂದು ಭಾಷಾಪ್ರೌಢಿಮೆ ಇದ್ದರೂ ಅಲ್ಲಲ್ಲಿಯ ಸಂವಾದಗಳಲ್ಲಿ ಸರಳ ನಿರೂಪಣೆಯೂ ಕಂಡುಬರುತ್ತದೆ.

ಅಂತಃಪುರಸ್ಥನಾದ ಸರ್ವಾರ್ಥಸಿದ್ಧಿರಾಜನ ಬಳಿಗೆ ದ್ವಾರಪಾಲಕನಾದ ಕಂಚುಕಿಯು ಬಂದು ಬಿನ್ನಯಿಸುವಲ್ಲಿ ಸರಳತೆ ಪ್ರೌಢತೆಗಳ ಬೆರಕೆಯಿದೆ. ವೀತಹವ್ಯಮುನಿ ಇಬ್ಬರು ಶಿಷ್ಯರೊಡನೆ ಬಂದಿರುವ ವಿಚಾರ, ಅವರನ್ನು ಒಳಗೆ ಬರಮಾಡಿಸಿದ ಅನಂತರ, ಅಲ್ಲಿಗೆ ಮಹಾರಾಣಿ ಸುನಂದೆ ಬರುವ ವರ್ಣನೆಯಂತೂ ಶೃಂಗಾರರಸದ ಹೊನಲನ್ನೇ ಹರಿಯಿಸುವಂತಿದೆ. ಪ್ರೌಢಗದ್ಯವಾಗಿ ಕೆಂಪುನಾರಾಯಣ ಕವಿಯ ಪಾಂಡಿತ್ಯದ್ಯೋತಕ ವಾಗಿದೆ.

ಕನ್ನಡದ ಈ ಪ್ರಥಮಕಾದಂಬರಿ ಅರ್ಹತೆಯಲ್ಲಿಯೂ ಪ್ರಥಮವಾಗಿದೆ ಎನ್ನ ಬಹುದು. ಓದಲು ಮಾತ್ರವಲ್ಲದೆ, ಕಲಿತುಕೊಳ್ಳಲು, ಜೀವನಾನುಭವಗಳನ್ನು ಹೆಚ್ಚಿಸಿ ಕೊಳ್ಳಲು ಅವಶ್ಯವಾಗುವ ಸಂಗತಿಗಳು ರಾಜನೀತಿದಿಗ್ದರ್ಶನಗಳು ಸಮೃದ್ಧವಾಗಿದ್ದು ಈ ಕೃತಿ ಕನ್ನಡದ ಸಾಹಿತ್ಯಸಂಪದವೇ ಆಗಿದೆ ಎನ್ನಬಹುದು.*

---

* ಬಾನುಲಿಯಲ್ಲಿ ಪ್ರಸಾರವಾದ ಪುಸ್ತಕ ವಿಮರ್ಶೆ, ೧೯೯೯

ಭಾಷೆ-ಕಲ್ಪನೆಗಳ ಮನೋಹರ ಅಭಿವ್ಯಕ್ತಿ: 'ಸದ್ದೆಂತೆಂಬರ ಗಂಡ'

ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟ

ಅದು ೧೯೫೭ನೆಯ ಇಸವಿ. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಆನರ್ಸ್ ತರಗತಿಯಲ್ಲಿ ನಾವು ಇಪ್ಪತ್ತೊಂದು ಜನ ವಿದ್ಯಾರ್ಥಿಗಳಿದ್ದೆವು. ಆ ಕಾಲಕ್ಕೆ ಅದು ಬಹಳ ಹೆಚ್ಚು ಮಂದಿ ವಿದ್ಯಾರ್ಥಿಗಳಿದ್ದ ಬ್ಯಾಚ್ ಎನ್ನಬಹುದು. ಐದು ವರ್ಷಗಳ ಹಿಂದೆ ಎರವಲು ಸೇವೆಯ ಮೇಲೆ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಹೋಗಿದ್ದ ಪ್ರೊ.ತೀ.ನಂ.ಶ್ರೀಕಂಠಯ್ಯನವರು ಆಗಷ್ಟೇ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಹಿಂದಿರುಗಿದ್ದರು. ಅಂಥ ಹಿರಿಯ ವಿದ್ವಾಂಸರ ಆಗಮನದಿಂದ ವಿದ್ಯಾರ್ಥಿವೃಂದದ ಹುರುಪು, ಸಂಭ್ರಮ ಹೆಚ್ಚಿತ್ತು. ಕಾವ್ಯಮೀಮಾಂಸೆ, ಭಾಷಾಶಾಸ್ತ್ರದ ಪಾಠಗಳನ್ನು ಆ ವಿಷಯಗಳಲ್ಲಿ ಅಗ್ರಗಣ್ಯರೆನಿಸಿದ್ದ ತೀ.ನಂ.ಶ್ರೀಯವರೇ ನಮಗೆ ಬೋಧಿಸುವುದಾಗಿತ್ತು. ಒಮ್ಮೆ ತರಗತಿಯಲ್ಲಿ ಪಾಠದ ನಡುವೆ ತೀನಂ.ಶ್ರೀ ಹೇಳಿದರು. "ಈಚೆಗೆ ಕನ್ನಡದ ಪ್ರೌಢವಿದ್ಯಾರ್ಥಿಗಳಿಗೂ ಸಹ ಸಾಹಿತ್ಯ ಎಂದರೆ ಕೇವಲ ಸೃಜನಶೀಲಸಾಹಿತ್ಯ, ಅದರ ಬೆಳವಣಿಗೆಯೇ ಕನ್ನಡದ ಬೆಳವಣಿಗೆ ಎಂಬ ಭಾವನೆ ಬಂದುಬಿಟ್ಟಿದೆ. ಕಾವ್ಯ, ನಾಟಕ, ಕಾದಂಬರಿ, ಕಥೆ ಮೊದಲಾದವುಗಳ ಕಡೆಗೇ ಎಲ್ಲರ ಗಮನ. ಬರೆಯ ಹೊರಡುವವರೆಲ್ಲ ಆ ಪ್ರಕಾರಗಳಿಗೇ ಕೈಹಾಕುತ್ತಾರೆ. ಆದರೆ ಭಾಷೆ ಸಾಹಿತ್ಯಗಳ ಏಳಿಗೆಗೆ ಇವು ಮಾತ್ರವಲ್ಲದೆ ಶಾಸ್ತ್ರಸಾಹಿತ್ಯವೂ ಅಷ್ಟೇ ಮುಖ್ಯ. ಭಾಷಾಶಾಸ್ತ್ರ, ಕಾವ್ಯಮೀಮಾಂಸೆ, ವ್ಯಾಕರಣ, ಗ್ರಂಥ ಸಂಪಾದನೆ, ಸಾಹಿತ್ಯ ಚರಿತ್ರೆ ಇಂಥ ಶಾಸ್ತ್ರಗಳ ಅಧ್ಯಯನ ಬರೆಹಗಳೂ ಸೃಜನಸಾಹಿತ್ಯ ದಷ್ಟೇ ಅಗತ್ಯವಾದವು. ಸೃಜನಾತ್ಮಕ ಬರೆಹ ಸಾಹಿತ್ಯಶರೀರಕ್ಕೆ ರಕ್ತಮಾಂಸಗಳಂತಿದ್ದರೆ ಶಾಸ್ತ್ರಸಾಹಿತ್ಯ ಅದಕ್ಕೆ ಮೂಳೆಗಳಂತೆ. ಅದರ ಕೊರತೆ ಭಾಷಾಸಾಹಿತ್ಯಗಳ ಸ್ವರೂಪವನ್ನೇ ದುರ್ಬಲಗೊಳಿಸುತ್ತದೆ. ನೀವೆಲ್ಲ ಕನ್ನಡದ ಪ್ರೌಢವಿದ್ಯಾರ್ಥಿಗಳು. ಮುಂದೆ ಈ ಕಡೆ ನಿಮ್ಮ ಗಮನ ಹರಿಯಬೇಕು. ಈ ಕೆಲಸದಲ್ಲಿ ಪ್ರಸಿದ್ಧಿ, ಜನಪ್ರಿಯತೆ, ಹಣ ಮೊದಲಾದ ಲೌಕಿಕ ಲಾಭಗಳು ಅಷ್ಟಾಗಿ ಇರದಿರಬಹುದು. ಆದರೆ ಅಂಥ ಕೆಲಸದಿಂದ ಭಾಷೆ ಸಾಹಿತ್ಯಗಳಿಗೆ ಲಭಿಸುವ ಘನತೆ, ದೃಢತೆ, ತೇಜಸ್ಸುಗಳು ಸಾಮಾನ್ಯವಾದದ್ದಲ್ಲ. ನಿಮ್ಮಲ್ಲಿ ಕೆಲವರಾದರೂ ಈ ಕ್ಷೇತ್ರಗಳಿಗೆ ಬರಬೇಕು. ಇದು ಗಮನದಲ್ಲಿರಲಿ." ಮುಂದೆಯೂ ಹಲವು ಸಲ ಈ ಮಾತನ್ನು ನೆನಪಿಸಿದ್ದುಂಟು.

ಈ ಮಾತಿಗೆ ಸಂದ ಮನ್ನಣೆಯೆಂಬಂತೆ ಡಿಎಲ್‌ಎನ್, ತೀನಂಶ್ರೀ, ರಾಘವಾಚಾರ್ಯ ರಂಥ ಹಿರಿಯ ವಿದ್ವಾಂಸರ ಶಿಷ್ಯರಾಗಿ ಬೆಳೆದು, ಶಾಸ್ತ್ರಾಧ್ಯಯದ ಕ್ಷೇತ್ರದಲ್ಲಿ ಸಮರ್ಥ ವಾಗಿ ದುಡಿದು ಕನ್ನಡಕ್ಕೆ ಹೆಚ್ಚಿನ ತೂಕ ತಂದುಕೊಟ್ಟ ಪ್ರತಿಭಾವಂತರು ಸೃಷ್ಟಿಯಾದರು. ಡಾ.ಬಿಳಿಗಿರಿ, ಡಾ.ಚಿದಾನಂದಮೂರ್ತಿ, ಡಾ.ವೆಂಕಟಾಚಲ ಶಾಸ್ತ್ರೀ ಮೊದಲಾದವರು ಇವರಲ್ಲಿ ಕೆಲವರು.

* * * *

ಡಾ.ವೆಂಕಟಾಚಲ ಶಾಸ್ತ್ರಿಗಳು ಆಧುನಿಕ ಕನ್ನಡಶಾಸ್ತ್ರಜ್ಞರಲ್ಲಿ ಪ್ರಮುಖರಾದವರು. ಛಂದಸ್ಸು, ಗ್ರಂಥಸಂಪಾದನೆ, ನಿಘಂಟು, ವ್ಯಾಕರಣ ಮತ್ತು ಸಾಹಿತ್ಯಚರಿತ್ರೆಗಳ ಸಂಬಂಧದಲ್ಲಿ ಅವರು ಮಾಡಿರುವ ಕೆಲಸ ಬಹಳ ದೊಡ್ಡ ಪ್ರಮಾಣ; ಅಷ್ಟೇ ಗಟ್ಟಿಯಾದದ್ದು ಕೂಡ. ಆಧಾರಭೂತವೂ ತರ್ಕಬದ್ಧವೂ ಮತ್ತು ವಸ್ತುನಿಷ್ಠವೂ ಆದ ಖಚಿತ ಬರೆಹಕ್ಕೆ ಅವರು ಹೆಸರಾದವರು. ಅವರು ದೊಡ್ಡ ವಿದ್ವಾಂಸರು ನಿಜ; ಆದರೆ ವಿದ್ವಾಂಸರು ಮಾತ್ರವೇ ಅಲ್ಲ, ಸೃಜನಸಾಹಿತ್ಯದಲ್ಲಿಯೂ ಕೆಲಸ ಮಾಡಿದವರು. 'ಆಪ್ತರು ಆಚಾರ್ಯರು' 'ಮಾರ್ಗದರ್ಶಕ ಮಹನೀಯರು' ಮೊದಲಾದ ಗ್ರಂಥಗಳಲ್ಲಿ ಅವರು ಉಪಯುಕ್ತ ವಿವರಗಳಿಂದ ತುಂಬಿದ ಹಿರಿಯರನೇಕರ ವ್ಯಕ್ತಿಚಿತ್ರಗಳನ್ನು ನೀಡಿದ್ದಾರೆ. ಕೇಂದ್ರಸಾಹಿತ್ಯ ಅಕಾಡೆಮಿಯ ಸಲುವಾಗಿ ಎ.ಆರ್.ಕೃಷ್ಣಶಾಸ್ತ್ರಿಗಳ ಬಗ್ಗೆ ವಿಮರ್ಶಾತ್ಮಕವಾದ ಪುಸ್ತಕವೊಂದನ್ನು ಬರೆದದ್ದೇ ಅಲ್ಲದೆ ವೇದಂ ವೆಂಕಟರಾಯ ಶಾಸ್ತ್ರಿಗಳಂಥ ಸಾಹಿತಿಯ ಜೀವನಚರಿತ್ರೆಯನ್ನು ಕನ್ನಡಕ್ಕೆ ನಿರ್ದುಷ್ಟವಾಗಿ ಅನುವಾದಿ ಸಿದ್ದಾರೆ. 'ಬದ್ಧ ಪ್ರಮೀತ್ಯೂಸ್', 'ಟ್ರಾಕಿಯ ಪೆಣ್ಗಳ್' ಎಂಬ ಎರಡು ಪ್ರಾಚೀನ ಗ್ರೀಕ್ ನಾಟಕಗಳನ್ನು ಬಿಗಿಯಾದ ಮತ್ತು ಆಕರ್ಷಕವಾದ ಹಳಗನ್ನಡದಲ್ಲಿ ಕಾವ್ಯನಾಟಕ ಗಳಾಗಿ ಹೊರತಂದಿದ್ದಾರೆ. 'ಕಂಸ' ಎಂಬ ಸ್ವತಂತ್ರನಾಟಕವನ್ನು ರಚಿಸಿರುವುದಲ್ಲದೆ 'ಮಿತ್ರವಿಂದಾ ಗೋವಿಂದ' ಎಂಬ ನಡುಗನ್ನಡದ ಕನ್ನಡ ನಾಟಕವನ್ನು ಹೊಸಗನ್ನಡಕ್ಕೆ ವಾಚನೀಯಶೈಲಿಯಲ್ಲಿ ಪರಿವರ್ತಿಸಿದ್ದಾರೆ. 'ಮೆಲುಗಾಳಿಯ ಮಾತುಗಳು' ಎಂಬ ಅವರ ತೊಂಬತ್ತು ಚಿಂತನೆಗಳ ಸಂಗ್ರಹ ಕೂಡ ಮೌಲಿಕವಾದ ಬರೆಹವಾಗಿದೆ. ಇವೆಲ್ಲ ಅವರ ಶಾಸ್ತ್ರೇತರ ಬರೆಹಗಳು. ಇವುಗಳೆಲ್ಲಕ್ಕಿಂತ ಭಾಷೆಯ ಸೊಗಸನ್ನು ಮತ್ತು ತಮ್ಮ ಕಲ್ಪನೆಯ ಆಕರ್ಷಕಸಂಚಾರಗಳನ್ನು ಮನೋಜ್ಞವಾಗಿ ಸಹೃದಯರ ಮನಸ್ಸಿಗೆ ದಾಟಿಸುವ 'ಸದ್ದೆಂತೆಂಬರ ಗಂಡ' ಎಂಬ ಸೊಗಸಾದ ಪ್ರಬಂಧಮಾಲೆಯನ್ನು ಸುಮಾರು ಐವತ್ತು ವರ್ಷಗಳ ಹಿಂದೆಯೇ ಪ್ರಕಟಿಸಿದ್ದಾರೆ. ಜನ ನೀರಸವೆಂದೂ ಕ್ಲಿಷ್ಟವೆಂದೂ ಭಾವಿಸುವ ಶಾಸ್ತ್ರಸಂಶೋಧನೆಗಳಿಗೇ ತಮ್ಮ ಬಾಳನ್ನು ಮೀಸಲು ಮಾಡಿದ ಶಾಸ್ತ್ರಿಗಳು ಎಷ್ಟು ರಸಾತ್ಮಕವಾದ ಬರೆಹವನ್ನೂ ಸೃಷ್ಟಿಸಬಲ್ಲರೆಂಬುದನ್ನು ಕಂಡು ನಾನು ಚಕಿತ ನಾಗಿದ್ದೇನೆ. ಆ ಪ್ರಬಂಧಗಳ ಮಾಲೆಯನ್ನು ಓದಿ ಸವಿದು ಬಹಳ ಸಂತೋಷಪಟ್ಟಿದ್ದೇನೆ.

ಅವರ ಕಲ್ಪನಾವಿಹಾರ ತೆರೆಯುವ ಅನಿರೀಕ್ಷಿತ ತಿರುವುಗಳನ್ನೂ ತಮ್ಮ ಆಲೋಚನೆಗಳನ್ನು ಭಾಷೆಯಲ್ಲಿ ಹಿಡಿಯುವಾಗ ತಂದಿರುವ ಭಾಷೆಯ ಸೃಜನಾತ್ಮಕಲಾಸ್ಯವನ್ನೂ ಕಂಡಾಗ ಈ ಲೇಖಕರು ಶಾಸ್ತ್ರ ವ್ಯವಸಾಯಕ್ಕೆ ತೊಡಗದೆ ಸೃಜನಶೀಲಸಾಹಿತ್ಯಕ್ಕೆ ಹೊರಳಿದ್ದಿದ್ದರೂ ಅಲ್ಲಿಯೂ ತುಂಬ ಸತ್ವಯುತ ಕೃತಿಗಳನ್ನು ಖಂಡಿತವಾಗಿ ಸೃಷ್ಟಿಸುತ್ತಿದ್ದರು ಎಂದು ನನಗನಿಸಿದೆ. ಆ ಪ್ರಬಂಧಸಂಕಲನ ಕುರಿತು ನಾಲ್ಕು ಮಾತು ಬರೆಯುವುದೇ ಪ್ರಸ್ತುತ ಲೇಖನದ ಉದ್ದೇಶ.

* * * *

'ಸದ್ದೆಂತೆಂಬರ ಗಂಡ' ಎಂಬ ಈ ಚಿಕ್ಕ ಹೊತ್ತಿಗೆಯಲ್ಲಿ ಒಟ್ಟು ಹದಿನಾರು ಲಘು ಪ್ರಬಂಧಗಳಿವೆ. ಇವುಗಳನ್ನು ಸೊಗಸಾದ ಹರಟೆಗಳೆಂದು ಕರೆಯಲೂ ಅಡ್ಡಿಯಿಲ್ಲ. ಬಹುಮಟ್ಟಿಗೆ ಈ ಎಲ್ಲ ಬರೆಹಗಳೂ ೧೯೫೭-೫೮ರಲ್ಲಿ ಎಂದರೆ ಇಂದಿಗೆ ಐವತ್ತು ವರ್ಷಗಳಷ್ಟು ಹಿಂದೆ ರಚಿತವಾದವು. ಮೊದಲು ವಿನೋದ, ನಗುವನಂದ, ಜನಪ್ರಗತಿ, ಕನ್ನಡನುಡಿ ಪತ್ರಿಕೆಗಳಲ್ಲಿ ಬಿಡಿಬಿಡಿಯಾಗಿ ಪ್ರಕಟವಾದ ಈ ಲಘುಪ್ರಬಂಧಗಳು ೧೯೬೨ರಲ್ಲಿ ಒಂದು ಪುಸ್ತಕದ ರೂಪದಲ್ಲಿ ಮಿತ್ರಪ್ರಕಾಶನದಿಂದ ಹೊರಬಂದವು. ಈ ಪ್ರಬಂಧಗಳನ್ನು ಬರೆಯಲು ಪ್ರೇರಣೆ ನೀಡಿದ್ದಲ್ಲದೆ ಹೆಚ್ಚಿನವುಗಳನ್ನು ತಮ್ಮ 'ವಿನೋದ' ಪತ್ರಿಕೆಯಲ್ಲೇ ಪ್ರಕಟಿಸಿದವರು ಆ ಪತ್ರಿಕೆಯ ಸಂಪಾದಕರಾದ ಶ್ರೀ ಜಿ. ನಾರಾಯಣ ಅವರು. ಲೇಖಕರು ಈ ಪುಸ್ತಕವನ್ನು ಅವರಿಗೇ ಅರ್ಪಿಸಿರುವುದು ಉಚಿತವೇ ಆಗಿದೆ.

ಪ್ರಬಂಧಗಳ ಶೀರ್ಷಿಕೆಗಳೇ ಸ್ವಾರಸ್ಯಕರವಾಗಿವೆ, ಮಾತ್ರವಲ್ಲ ಹರಟೆ ಹೊಡೆಯಲು ಹೇಳಿ ಮಾಡಿಸಿದ ವಸ್ತುಗಳನ್ನೇ ಕುರಿತಿವೆ. ಉದ್ದಿನವಡೆ, ನೆರೆಹೊರೆ, ಚೌರಶ್ರೀ, ದಟ್ಟಿ ಪಂಚೆ, ರಿಪೇರಿ, ಅಪರಕರ್ಮ, ಮೂಗು, ದೋಸೆಯನ್ನು ಕುರಿತು -ಇವು ಕೆಲವು ಪ್ರಬಂಧಗಳ ಹೆಸರುಗಳು. ಮುಂದೆ ಗಂಭೀರ ಸಂಶೋಧಕರಾಗಿ ಬೆಳೆದ ಶಾಸ್ತ್ರಿಗಳಂಥವರು ಈ ಬಗೆಯ ವಿನೋದಕರವಾದ ಹೆಸರುಗಳನ್ನು ಪ್ರಬಂಧಗಳಿಗೆ ಆಯ್ದಿರುವುದೇ ಅವರು ಎಷ್ಟು ಸರಸಮನೋಧರ್ಮದವರು ಎನ್ನುವುದನ್ನು ಸೂಚಿಸುತ್ತದೆ. ಅದರಲ್ಲೂ ಶ್ರಾದ್ಧದ ದಿನ ಅಗತ್ಯವಾಗಿ ತಯಾರಿಸಲೇಬೇಕಾದ ಅಪರಭಕ್ಷ್ಯವಾದ 'ಉದ್ದಿನವಡೆ' ಪ್ರಬಂಧವನ್ನು ಈ ಹೊತ್ತಿಗೆಯಲ್ಲಿ ಶುಭಕಾರ್ಯಗಳ ಆರಂಭದಲ್ಲಿ ಬಳಸಬೇಕಾದ ಓಂಕಾರದಂತೆ ಆರಂಭದಲ್ಲೇ ಹಾಕಿಕೊಂಡಿರುವುದೂ ಶಾಸ್ತ್ರಿಗಳ ಶುದ್ಧ ಹಾಸ್ಯಮನೋಧರ್ಮಕ್ಕೆ ಸಾಕ್ಷಿ.

ಲೇಖಕರು ತಮ್ಮ ಪ್ರಬಂಧಗಳಲ್ಲಿ ನಿರೂಪಣೆಗಾಗಿ ಎತ್ತಿಕೊಂಡ ವಸ್ತುಗಳನ್ನು ಕುರಿತು ಈ ಕಾಲದ ಮಾತನ್ನು ತರುವುದು ಮಾತ್ರವಲ್ಲದೆ ಪ್ರಾಚೀನಕಾಲದ ಕಾವ್ಯಗಳಲ್ಲಿ ಆ ಬಗ್ಗೆ ಬಂದಿರುವ ಮಾತುಗಳನ್ನು ಕೆಲವು ಕಡೆ ಜೋಡಿಸಿಕೊಡುವುದುಂಟು.

'ಲಂಚಶ್ರೀ' ಎಂಬ ಪ್ರಬಂಧ ಇದಕ್ಕೊಂದು ಸೊಗಸಾದ ನಿದರ್ಶನ. ಲಂಚವನ್ನು ಕೊಡುವುದು, ಪಡೆಯುವುದು ಆ ಮೂಲಕ ತಮ್ಮ ಕೆಲಸ ಕಾರ್ಯಗಳನ್ನು ಸಲೀಸಾಗಿ ಪೂರೈಸಿಕೊಳ್ಳುವುದು ಪ್ರಪಂಚಾದ್ಯಂತ ಹಬ್ಬಿರುವ ಪದ್ಧತಿಯಷ್ಟೇ. ಇದು ಈ ಕಾಲದ ಪದ್ಧತಿ ಮಾತ್ರವಲ್ಲ, ಪ್ರಾಚೀನ ಕಾಲದಲ್ಲೂ ಇತ್ತು; ಮನುಷ್ಯಮಾತ್ರರಲ್ಲೇ ಅಲ್ಲ, ದೇವತೆಗಳಲ್ಲೂ ಇತ್ತು ಎಂದು ಪ್ರತಿಪಾದಿಸುತ್ತಾರೆ ಲೇಖಕರು. ಅದಕ್ಕೆ ಸಾಕ್ಷಿಯಾಗಿ ರಾಘವಾಂಕನ 'ಸಿದ್ಧರಾಮಚರಿತ'ದಲ್ಲಿ ಸಿಗುವ ಒಂದು ಘಟನೆಯನ್ನೇ ಪ್ರಸ್ತಾಪಿಸುತ್ತಾರೆ. ಪಾಪಿಯಾದ ಬಿಲ್ಲೇಶ ಬೊಮ್ಮಯ್ಯ ನರಕವಾಸಿಯಾಗಿದ್ದ. ಅವನ ಜೊತೆ ಇನ್ನೂ ಹಲವರು ಇದ್ದರು. ಅನುಕಂಪೆಯ ಅವತಾರವೆನಿಸಿದ್ದ ಸಿದ್ಧರಾಮನಲ್ಲಿ ಅವರನ್ನು ನರಕದಿಂದ ಪಾರುಮಾಡಬೇಕೆಂಬ ಕರುಣೆ ಹುಟ್ಟಿತು. ಅವನು ನರಕವಾಸಿಗಳ ಪರ ವಕಾಲತ್ತು ವಹಿಸಿ ಕೈಲಾಸಕ್ಕೆ ತೆರಳಿ ಶಿವನಲ್ಲಿ ವಾಗ್ವಾದ ನಡೆಸಿದ. ಶಿವನಿಗೂ ಅವನ ವಾದ ಒಪ್ಪಿಗೆಯಾಯಿತು. ಮೇಲಾಗಿ ತನ್ನ ಪರಮಭಕ್ತನಾದ ಸಿದ್ಧರಾಮನಿಂದ ಗಡದ್ದಾದ ಒಂದು ಪೂಜೆ ಮಾಡಿಸಿಕೊಳ್ಳುವ ಬಯಕೆಯೂ ಆಯಿತು. ಆತ ಭಕ್ತನ ಮಾತಿಗೇನೋ ಒಪ್ಪಿದ. ಆದರೆ ಒಪ್ಪುವ ಮುನ್ನ ಅವನಿಗೆ ಎರಡು ಷರತ್ತು ವಿಧಿಸಿದ. "ಇಂದು ನರಕಿಗಳೆಲ್ಲರಂ ನೀನು ತೆಗೆವಡೆ ಎಮಗೊಂದು ಲಂಚವನೀಯಬೇಕು" ಎಂದ. ಆ ಲಂಚ ಏನೆಂದು ಸಿದ್ಧರಾಮ ಕೇಳಿದಾಗ, 'ಹನ್ನೆರಡು ಸಾವಿರ ಸೊಲಿಗೆ ತುಪ್ಪದ ಅಭಿಷೇಕವನ್ನು ತನಗೆ ಮಾಡಿಸಬೇಕು. ಭೂಲೋಕದಲ್ಲಿ ಒಂದು ಸಾವಿರ ಮದುವೆಗಳನ್ನು ಮಾಡಿಸಬೇಕು' ಎಂದು ಪರಶಿವ ಹೇಳಿದ. ಸಿದ್ಧರಾಮ ಈ 'ಲಂಚ' ಕೊಡಲು ಒಪ್ಪಿ ನರಕದಲ್ಲಿದ್ದವರನ್ನೆಲ್ಲ ಅಲ್ಲಿಂದ ಬಿಡುಗಡೆ ಮಾಡಿಸಿದ.

ಸಾಕ್ಷಾತ್ ಪರಮೇಶ್ವರನೇ ಇಷ್ಟು ಪಬ್ಲಿಕ್ಕಾಗಿ ಲಂಚ ಬೇಡಿ ಭಕ್ತನ ಕೆಲಸ ಮಾಡಿಕೊಟ್ಟ ನಿದರ್ಶನವಿರುವಾಗ ಕಲಿಯುಗದ ಪಾಮರರು ಲಂಚದ ಬಗೆಗೆ ಸಲ್ಲದ ಬಿಂಕ ಬಿಗುಮಾನಗಳನ್ನು ಯಾಕಾದರೂ ತೋರಬೇಕು ಎಂದು ಲೇಖಕರು ಕೇಳುತ್ತಾರೆ. ಇಷ್ಟೇ ಅಲ್ಲ, ಲಂಚದ ವ್ಯವಹಾರ ಹಿಂದೆಯೇ ಸರ್ವತ್ರ ಇತ್ತು ಎನ್ನಲು ಸೋಮೇಶ್ವರ ಶತಕದ ಕವಿಯ ಮಾತಿಗಿಂತ ಬೇರೇನು ಬೇಕು. "ಕೈಯಾಸೆಯಂ ಮಾಡದವನೇ ನಿಜ ಮಂತ್ರೀಶ್ವರಂ" "ಲಂಚಕ್ಕೆ ಕೊಟ್ಟಾಡದಾ ವ್ರತವುಳ್ಳವನೇ ವರಮಂತ್ರಿ" ಎಂದಾತ ಹೇಳಿದ್ದಾನೆ. ಲಂಚದ ಹಾವಳಿ ಆ ಕಾಲದಲ್ಲೇ ಮಂತ್ರಿಶ್ರೇಷ್ಠರವರೆಗೂ ವ್ಯಾಪಿಸಿರದಿದ್ದರೆ ಆ ಕವಿ ಯಾಕಾದರೂ ಹೀಗೆ ಹೇಳುತ್ತಿದ್ದ? ಲಂಚವೆಂಬ ಪರನಾರಿಗೆ ಬಾಯಿಬಿಡದೆ ಸಂಬಳವೆಂಬ ಧರ್ಮಪತ್ನಿಯಲ್ಲಿ ನಿಷ್ಠನಾಗಿರುವವನೇ ನಿಜವಾದ ಮಂತ್ರಿ ಎಂದು ಆತನ ಅಭಿಪ್ರಾಯವಷ್ಟೇ ಎಂದು ಕೇಳುತ್ತಾರೆ ಲೇಖಕರು. ಬರಿಯ ಇಂಥ ಕಾವ್ಯ ಪ್ರಸಂಗಗಳೇ ಅಲ್ಲ, ಗೀತೆ ಉಪನಿಷತ್ತುಗಳಂಥ ಪ್ರಖ್ಯಾತ ಧಾರ್ಮಿಕ ಕೃತಿಗಳೂ ಆ ಪ್ರಬಂಧಗಳಲ್ಲಿ ಸಂದರ್ಭೋಚಿತವಾಗಿ ಹಾಜರಾಗಿ ಲೇಖಕರ ಅಭಿಪ್ರಾಯಕ್ಕೆ ಸಾಕ್ಷ್ಯ ನುಡಿದು ಬರೆಹದ ಪತ್ತಲಕ್ಕೆ ಹಾಸ್ಯದ ಜರಿಯಂಚು ಕಟ್ಟುವುದೂ ಉಂಟು.

ಡಾ.ಹಾ.ಮಾ.ನಾಯಕರು ಶಾಸ್ತ್ರಿಗಳ ಚಿಂತನಸಂಗ್ರಹವೊಂದರ ಬಗ್ಗೆ ಬರೆಯುತ್ತ "ಸಮಕಾಲೀನ ವಿಚಾರಧಾರೆಗೆ ಆಧಾರವೆನ್ನಿಸುವ ಹಲವು ಪ್ರಾಚೀನಪ್ರಸಂಗಗಳನ್ನು ನಡುವೆ ತಂದು ಹಳತು ಹೊಸತನ್ನು ಶಾಸ್ತ್ರಿಗಳು ನಾಜೂಕಾಗಿ ನೆಯ್ಯುತ್ತಾರೆ" ಎಂದು ಪ್ರಶಂಸಿಸಿದ್ದಾರೆ. ತಮ್ಮ ಲಘುಪ್ರಬಂಧಗಳಲ್ಲೂ ಅವರು ಹೀಗೆ ಮಾಡಿರುವುದನ್ನು ಮೇಲಿನ ಭಾಗದಲ್ಲಿ ನಾವು ಕಾಣಬಹುದು.

ಇಲ್ಲಿನ ಕೆಲವೊಂದು ಪ್ರಬಂಧಗಳಲ್ಲಿ ಕಾಣುವ ಇನ್ನೊಂದು ಗುಣ ಗಮನಾರ್ಹ ವಾದುದು. ಲಘುವಾದ ವಿಷಯವೊಂದನ್ನು ಕುರಿತು ಹಾಸ್ಯದ ನೆಲೆಯಲ್ಲಿ ಸರಸವಾಗಿ ಚಲಿಸುತ್ತಿರುವ ನಿರೂಪಣೆ ಇದ್ದಕ್ಕಿದ್ದಂತೆ ಬಹಳ ಗಂಭೀರವಾದ, ಚಕಿತಗೊಳಿಸುವ ಚಿಂತನೆಯ ನೆಲೆಗೆ ಏರಿಬಿಡುವುದೂ ಉಂಟು. 'ರಿಪೇರಿ' ಪ್ರಬಂಧ ಇದಕ್ಕೊಂದು ನಿದರ್ಶನ.

ಮಧ್ಯಾಹ್ನ ಊಟ ಮುಗಿಸಿ, ಹಾಸಿಗೆಯ ಮೇಲೆ ಕಾಲು ಚಾಚಿ ನಿದ್ದೆಯ ಜೊಂಪಿ ನಲ್ಲಿ ತೇಲುತ್ತಿದ್ದ ಲೇಖಕರಿಗೆ ರಿಪೇರಿ ಕೆಲಸದ ಮುದುಕನೊಬ್ಬನ ಕೂಗಿನಿಂದ ದಿಢೀರನೆ ಎಚ್ಚರವಾಗುತ್ತದೆ. ಮನೆಯಲ್ಲಿದ್ದ ಹಳೆಯ ಛತ್ರಿ, ಬೀಗಗಳನ್ನು ಆತನಿಗೆ ಕೊಟ್ಟು ರಿಪೇರಿ ಮಾಡಿಸಿದ ನಂತರ ಲೇಖಕರ ಮನಸ್ಸು ಆ ರಿಪೇರಿ ಮುದುಕನ ವಿಲಕ್ಷಣ ಜೀವನ, ವೇಷಭೂಷಣ ಬಗ್ಗೆ ಚಿಂತಿಸುತ್ತ ಹೋಗುತ್ತದೆ. ಹಳೆಯ ಕನ್ನಡಕ, ಹರಿದ ಜೋಡು, ಮುರಿದ ಸೈಕಲ್ಲು, ಕೆಡೆದ ರೇಡಿಯೋಗಳ ವಸ್ತುಲೋಕದ ರಿಪೇರಿಯಿಂದ ಆರಂಭವಾದ ಆಲೋಚನೆ ಕಡೆಗೆ ಇಡೀ ಜೀವಲೋಕದ ರಿಪೇರಿಯ ತನಕ ಹಾಯುತ್ತದೆ. "ಜೀವವಾಗಲಿ ಜಡವಾಗಲಿ ಹುಟ್ಟಿದ ಮೇಲೆ ಸಾಯಲೇಬೇಕು ಇದು ನಿಯತಿ. ಜೀವಿಗೆ ಸಾವು ಇಷ್ಟವಿಲ್ಲ. ಬದುಕಬೇಕು, ಬದುಕಿಸಬೇಕು ಎಂಬ ಹಂಬಲದಿಂದ ಹೆಜ್ಜೆ ಹೆಜ್ಜೆಗೂ ರಿಪೇರಿ. ವಸ್ತುವಾದರೆ ರಿಪೇರಿ; ಮತ್ತೆ ಹೊಸಕಳೆ, ಒಪ್ಪ, ಮತ್ತೆ ರಿಪೇರಿ, ಮತ್ತೂ ರಿಪೇರಿ. ಕಡೆಗೆ ವರ್ಜ್ಯ. ಮತ್ತೆ ಅದಕ್ಕೆ ಹುಟ್ಟಿಲ್ಲ, ಆದರೆ ಜೀವಕ್ಕೆ ಹಾಗಲ್ಲ. ಸ್ವಲ್ಪ ಕಾಲ ರಂಗುರಂಗಿನ ಮೆರೆತ. ಹಳೆಯದಾದ ಮೇಲೆ ಹರೆಯ ಮರಳಿತೆಂಬಂತೆ ರಿಪೇರಿ. ಮತ್ತೆ ಹೊಸ ಸೊಬಗು, ಹೊಸ ರಂಗು, ಮತ್ತೆ ರಿಪೇರಿ, ಮತ್ತೂ ರಿಪೇರಿ, ಕಡೆಗೆ ವರ್ಜ್ಯವೇ? ಇಲ್ಲ, ರಿಪೇರಿಯ ಆಸೆಯೇ. ಆಸೆಯಿಂದಲೇ ಸತ್ತು, ಆಸೆಗಾಗಿಯೇ ಆಸೆಯಿಂದ ಮರಳಿ ಹುಟ್ಟಬೇಕು. ಮತ್ತೆ ಆ ಕಾರದಿಂದ ಳ ಕಾರದವರೆಗೆ ಜೀವನದಿ ಹರಿಯುತ್ತದೆ. ಆದುದರಿಂದ ಒಂದೇ ಜನ್ಮಕ್ಕೆ, ವರ್ಜ್ಯವಾದ ಹಳೆಯ ಜೋಡಿನಂತೆ, ಕರಗಿಹೋದ ಕರ್ಪೂರದಂತೆ, ಜೀವವ್ಯಾಮೋಹಗಳು ಇಲ್ಲವಾದರೆ ರಿಪೇರಿ ಬೇಕಿಲ್ಲ ವಷ್ಟೇ!"

ಹೀಗೆ ಪ್ರಬಂಧಕಾರರ ವಿದ್ವತ್ತು, ಚಿಂತನಶೀಲತೆ, ಸರಸದೃಷ್ಟಿ ಎಲ್ಲವೂ ಹುರಿಗೂಡಿ ಪ್ರಬಂಧಗಳು ಬೆಳೆಯುತ್ತವೆ. ಮಾತ್ರವಲ್ಲ, ಕೆಲವು ಭಾಗಗಳಲ್ಲಿ ಅವರೊಳಗಿನ ಕವಿ ಮನೋಧರ್ಮವನ್ನು ಪ್ರಕಟಿಸುವಂತೆ (ವಿನೋದಾತ್ಮಕವಾದ) ಉಪಮೆಗಳೂ

ಸಾಲುಗಟ್ಟಿ ಬರುತ್ತವೆ. ಈ ಭಾಗ ನೋಡಿ "ಹಣ ಪ್ರಪಂಚದೊಳಗೆ ಲಂಚ ಪ್ರಪಂಚ..... ಸುಳಿಯೊಳಗಿನ ಸುಳಿಯಂತೆ ಹಣದ ಮೋಸದಲ್ಲಿ ಲಂಚದ ಮೋಸ, ಕಳ್ಳಕೊರಮನನ್ನು ಹಿಂಬಾಲಿಸುವ ಆತನ ಕಳ್ಳನೆರಳಿನಂತೆ ಧನಲಕ್ಷ್ಮಿಯ ಸೆರಗಿಗೆ ಮಳ್ಳಗಾಳಿಯಾಗಿ ಲಂಚಲಕ್ಷ್ಮಿ ಹಿಂಬಾಲಿಸುತ್ತಾಳೆ. ಸಂಬಳ, ಸಂಪಾದನೆ ಖರ್ಚಿಗಾಗಿ ಬೇಕು; ಗಿಂಬಳ ಗಿಂಪಾದನೆ ಗಿರ್ಚಿಗಾಗಿ ಬೇಕು. ಕೆಲವು ವರ್ಗದ ಅಧಿಕಾರಿಗಳಿಗೆ ಮಜ್ಜಿಗೆಯೊಳಗಿನ ಬೆಣ್ಣೆಯಂತೆ, ಬಜ್ಜಿಯೊಳಗಿನ ಬದನೆಕಾಯಂತೆ, ಸಂಬಳಕ್ಕಿಂತ ಗಿಂಬಳವೇ ತಿರುಳು. ಪಕೋಡದೊಳಗಿನ ಗೋಡಂಬಿಯಂತೆ, ಪಾಯಸದೊಳಗಿನ ದ್ರಾಕ್ಷಿಯಂತೆ ಅವರಿಗೆ ಅದೇ ರುಚಿ. ಸಂಬಳ ದೇವತಾವಿಗ್ರಹ, ಗಿಂಬಳ ಅದರ ಹಿನ್ನೆಲೆಯ ಪ್ರಭಾವಳಿ. ಪ್ರಭಾವಳಿಯಿಲ್ಲದೆ ವಿಗ್ರಹ ಬೋಳುಬೋಳು, ಗಿಂಬಳವಿಲ್ಲದ ಬರಿಯ ಸಂಬಳಕ್ಕೆ ಬಲವಿಲ್ಲ, ಬೆಲೆಯಿಲ್ಲ."

ಇಲ್ಲಿಯ ಪ್ರಬಂಧಗಳ ನಡುನಡುವೆ ಅನೇಕ ಅರ್ಥಗರ್ಭಿತ ರಸೋಕ್ತಿಗಳು ದಿಢೀರನೆ ಹುಟ್ಟಿ ಬರುತ್ತವೆ. 'ಪ್ರಾಣದೇವರಿಗೆ ಮೂಗೇ ದೇವಸ್ಥಾನ', 'ತೂತಿಲ್ಲದ ಉದ್ದಿನೊಡೆ ಮಾತಿಲ್ಲದ ಮುಖದಂತೆ' ಎಂಬ ಗಾದೆರೂಪದ ಮಾತುಗಳು ಪ್ರತ್ಯಕ್ಷವಾಗುತ್ತವೆ. 'ದೋಸೆಯ ನಾರಾಯಣರೂಪವಾದ ಮಸಾಲೆದೋಸೆ' ಎಂಬ ಮಾತು ಎಷ್ಟು ಸೊಗಸಾಗಿದೆ! ಹಾಗೆಯೇ "ಮನೆದೋಸೆ ಗರತಿಯಂತೆ ಗಂಭೀರವಾದದ್ದು, ಹಿತವಾದದ್ದು, ಆರೋಗ್ಯಕರವಾದದ್ದು; ಹೋಟಲುದೋಸೆ ಹಾದಿಬೀದಿಯ ರತಿಯಂತೆ ಲಘು ವಾದದ್ದು, ಅಹಿತವಾದದ್ದು, ರೋಗಜನಕವಾದದ್ದು" ಎಂಬ ಉಕ್ತಿ. ಯಾವ ಯಾವ ಕೆಲಸಕ್ಕೆ ಯಾವುದು ಅಪರಕರ್ಮದಂತೆ ಎಂದು ಅಪರಕರ್ಮದ ಅನೇಕ ರೂಪಗಳನ್ನು ಬಣ್ಣಿಸುತ್ತ ಬರುವ ಒಂದು ಪ್ರಬಂಧ ಹೇಳುತ್ತದೆ. "ಈ ಅಪರಕರ್ಮಗಳು ಪ್ರಮುಖ ಕಲಾಪಗಳಿಗೆ ಆಂಜನೇಯ ದೇವರ ತುದಿಬಾಲದ ಘಂಟೆ, ಕತ್ತೇಬಾಲಕ್ಕೆ ಕಟ್ಟಿದ ತುದಿ ಬಾಲದ ಡಬ್ಬ." ಇಂಥ ಮಾತುಗಳ ಜೊತೆಗೆ 'ಭೌತಿಕವಾದದ ಟೆಕ್ನಿಕಲರ್ ಬಾವುಟ' 'ಪುರಾಣಕವಿ, ಇರಾಣ ಕವಿ', 'ಉಪನ್ಯಾಸ-ಅಪನ್ಯಾಸ', 'ನಲ್ಲಿನೀರಿನ ನಾರೀಕಾಳಗ' 'ಆಯುಸ್ಸಿಗೆ ಹತ್ತಿಬಂದ ಕರ್ಮವೇ ಆಯುಷ್ಕರ್ಮ' -ಇಂಥ ನುಡಿರಚನೆಗಳನ್ನು ಗಮನಿಸಿದಾಗ ಅವುಗಳ ಹಿಂದಿನ ಹಾಸ್ಯ ಓದುಗರ ಮುಖವನ್ನು ಅರಳಿಸುತ್ತದೆ.

ಪ್ರಬಂಧಕಾರರು ಬಹಳ ಜನಕ್ಕೆ ತಿಳಿಯದ, ಕೆಲವು ಆಶ್ಚರ್ಯಕರವಾದ, ಅಪರೂಪದ ಸಂಗತಿಗಳನ್ನು ಹೊರಹಾಕಿ ನಮ್ಮನ್ನು ಚಕಿತಗೊಳಿಸುವುದೂ ಉಂಟು. "ಬಹಳ ಜನ ನಶ್ಯವನ್ನು ಮೂಗಿಗೆ ಜಡಿದರೆ ಕೆಲವರು ಅದನ್ನು ಚಿಟಿಕೆ ಚಿಟಿಕೆ ಬಾಯಿಗೆ ಹಾಕಿ ರುಚಿನೋಡುತ್ತಾರೆ!" "ಸತ್ತ ಇರುವೆಗಳು ಹೇರಳವಾಗಿ ಸಾರಿನಲ್ಲಿ ತೇಲಾಡುತ್ತಿದ್ದು ಅಂಥ ಸಾರನ್ನು ಊಟಮಾಡಿದರೆ ಕಣ್ಣು ನೋವು ಬರುವುದಿಲ್ಲ." "ಉಪಾಧ್ಯಾಯರು ತಮ್ಮ ಮಕ್ಕಳನ್ನು ಬೇರೆ ಉಪಾಧ್ಯಾಯರಲ್ಲಿಗೆ ಪಾಠಕ್ಕೆ ಕಳಿಸುತ್ತಾರೆ!"

ವಿದ್ವಾಂಸರು ಸಾಮಾನ್ಯವಾಗಿ ಸೃಜನಾತ್ಮಕ ಬರೆಹಗಳಿಗೆ ಬೆನ್ನುಹಾಕಿದವರು. ಸಂಶೋಧನೆಯಂಥ ಒಣಅಧ್ಯಯನದಲ್ಲಿ ಮುಳುಗಿದ ಅವರ ಮನಸ್ಸು ನೀರಸ, ಜಡ ಎಂಬ ಭಾವನೆ ಸಾಮಾನ್ಯ. ಆದರೆ ಇದಕ್ಕೆ ಅಪವಾದವೆನಿಸುವ ಕೆಲವರು ಅಪರೂಪದ ವಿದ್ವಾಂಸರೂ ಇದ್ದಾರೆ. ತೀನಂಶ್ರೀಯವರು 'ಒಲುಮೆ' ಎಂಬ ಕನ್ನಡದ ಪ್ರಪ್ರಥಮ ಕವನಸಂಕಲನವನ್ನೂ 'ನಂಟರು' ಎಂಬ ಉತ್ತಮ ಪ್ರಬಂಧಸಂಗ್ರಹವನ್ನೂ ಬರೆದರು. ಚಿದಾನಂದಮೂರ್ತಿಯವರು ಬನಾಶಂಕರಿ ಪೆಟ್ಟಿಗೆ ಮತ್ತು ಒಂದು ಕ್ಯಾಲೆಂಡರ್ ಕುರಿತು ಸೊಗಸಾದ ಪ್ರಬಂಧಗಳನ್ನು ರಚಿಸಿದರು. ವೆಂಕಟಾಚಲ ಶಾಸ್ತ್ರಿಗಳೂ ಈ ಅಪರೂಪದ ಗುಂಪಿಗೆ ಸೇರಿದವರು. ವಿದ್ವಾಂಸರಾಗಿ ಹೆಸರುಮಾಡುವ ಮೊದಲೇ ಅವರು ಬರೆದ ಈ ಸೊಗಸಾದ ಲಘುಪ್ರಬಂಧಸಂಕಲನ ಅವರ ಬರೆಹದ ಬೇರೊಂದು ಅಪೇಕ್ಷಿತ ಆಯಾಮವನ್ನು ಪ್ರತಿನಿಧಿಸುತ್ತದೆ.

ಕನ್ನಡ ನೇಮಿನಾಥ ಪುರಾಣಗಳ ತೌಲನಿಕ ಅಧ್ಯಯನ

ಬಿ.ಎಸ್.ಕುಲಕರ್ಣಿ

ಶ್ರೀ ಟಿ.ವಿ.ವೆಂಕಟಾಚಲ ಶಾಸ್ತ್ರೀ ಅವರ 'ಕನ್ನಡ ನೇಮಿನಾಥ ಪುರಾಣಗಳ ತೌಲನಿಕ ಅಧ್ಯಯನ' ಎಂಬ ಮಹಾಪ್ರಬಂಧದಲ್ಲಿ ಒಟ್ಟು ಒಂಬತ್ತು ಅಧ್ಯಾಯಗಳಿವೆ.

ಭಾರತದಲ್ಲಿ ಬಹು ಪ್ರಾಚೀನಕಾಲದಿಂದಲೂ ಅಸ್ತಿತ್ವದಲ್ಲಿದ್ದುದ್ದಲ್ಲದೆ, ಭಾರತೀಯ ಸಂಸ್ಕೃತಿಗೆ ಮರೆಯಲಾರದಂಥ ಕೊಡುಗೆಯನ್ನು ನೀಡಿದ, ಹಲವಾರು ಧರ್ಮಗಳಲ್ಲಿ ಜೈನಧರ್ಮವೂ ಒಂದಾಗಿದೆ. ಯಾವುದೇ ಕ್ಷೇತ್ರದಲ್ಲಿ ಇಣಕಿ ನೋಡಿದರೂ ಜೈನಮತೀಯರ ಕಾಣಿಕೆ ಇದ್ದೇ ಇದೆ. ಜೈನಧರ್ಮದ ತತ್ವಗಳು 'ನಿಶ್ಚಯ' ದಲ್ಲಿ ಒಂದಾಗಿದ್ದರೂ, 'ವ್ಯವಹಾರ'ದಲ್ಲಿ ಸ್ವಲ್ಪ ವ್ಯತ್ಯಾಸಗಳು ಕಾಣಿಸಿಕೊಂಡಿವೆ. ಹೀಗಾಗಿ, ಜೈನರಲ್ಲಿ ದಿಗಂಬರ, ಶ್ವೇತಾಂಬರ ಎಂಬ ಎರಡು ಪ್ರಮುಖ ಪ್ರಕಾರಗಳು ಅಸ್ತಿತ್ವದಲ್ಲಿ ಬರುವಂತಾಗಿ, ಇಂದಿಗೂ ಅವು ರೂಢಿಯಲ್ಲಿವೆ. ಈ ಸಂಪ್ರದಾಯಗಳ ಹಿನ್ನಲೆಯಲ್ಲಿ ಜೈನಧರ್ಮಕ್ಕೆ ಸಂಬಂಧಿಸಿದ ಪುರಾಣ, ಕಥೆಗಳಲ್ಲಿ ಸ್ವಲ್ಪ ವ್ಯತ್ಯಾಸ ಕಂಡುಬರುವಂತಾಗಿದೆ. ಈ ಮಾತು ತೀರ್ಥಂಕರರ ಚರಿತ್ರೆಗಳಿಗೂ ಅನ್ವಯಿಸುತ್ತದೆ. ಪ್ರಸ್ತುತ ಪ್ರಬಂಧದ ಕಥಾನಾಯಕ ನೇಮಿನಾಥನು ಜೈನಧರ್ಮದ ವರ್ತಮಾನಕಾಲದ ಇಪ್ಪತ್ತೆರಡನೆಯ ತೀರ್ಥಂಕರನು. ವಾಸ್ತವಿಕವಾಗಿ ಇವನ ಚರಿತ್ರೆ ಯಲ್ಲಿ ವ್ಯತ್ಯಾಸಗಳು ಕಾಣಿಸಿಕೊಳ್ಳಬಾರದು. ಆದರೂ ವ್ಯಾವಹಾರಿಕವಾಗಿ, ಬಹುಶಃ ದೇಶ, ಕಾಲ, ನಾಡು, ಸಾಮಾಜಿಕ ಸ್ಥಿತಿಗತಿಗಳ ಹಿನ್ನೆಲೆಯಲ್ಲಿ, ದಿಗಂಬರ ಶ್ವೇತಾಂಬರ ಸಂಪ್ರದಾಯಗಳ ನಿರೂಪಣೆಯಲ್ಲಿ ಭಿನ್ನತೆ ಕಂಡುಬರುವಂತಾಗಿದೆ. ಈ ದೃಷ್ಟಿಯಿಂದ ದಿಗಂಬರ ಹಾಗೂ ಶ್ವೇತಾಂಬರ ಸಂಪ್ರದಾಯಗಳಲ್ಲಿ ಬರುವ ನೇಮಿನಾಥನ ಕಥೆಯನ್ನು, ಮೊದಲನೆಯ ಅಧ್ಯಾಯದಲ್ಲಿ ವಿವರಿಸಿದ್ದು ಹಾಗೂ ದಿಗಂಬರಸಂಪ್ರದಾಯಕ್ಕೆ ಜಿನಸೇನಾಚಾರ್ಯರ 'ಹರಿವಂಶಪುರಾಣ'ವನ್ನೂ, ಶ್ವೇತಾಂಬರಸಂಪ್ರದಾಯಕ್ಕೆ ಹೇಮಚಂದ್ರನ 'ತ್ರಿಷಷ್ಟಿ ಶಲಾಕಾಪುರುಷಚರಿತ್ರೆ'ಯನ್ನೂ ಆಧರಿಸಿರುವುದು ಆ ಗ್ರಂಥಗಳ ಪ್ರಾಚೀನತೆ, ಸಮಗ್ರತೆ ಮೊದಲಾದವುಗಳ ದೃಷ್ಟಿಯಿಂದ ಸಮಂಜಸವಾಗಿದೆ. ಇದೇ ಸಂದರ್ಭದಲ್ಲಿ, ಹರಿವಂಶ ಕುರುವಂಶದವರ ಕಥೆ ನೇಮಿನಾಥನ ಕಥೆಯಲ್ಲಿ ಅಡಕವಾಗಿರುವ ಅಂಶ ಹಾಗೂ ನೇಮಿನಾಥನ ವೈರಾಗ್ಯಕ್ಕೆ ಕಾರಣವಾದ 'ಸಕಲ ಪ್ರಾಣಿಗಳಿಗೆ ಲೇಸನೇ ಬಯಸುವ' ಅಹಿಂಸಾತತ್ವ ಮೊದಲಾದವುಗಳ ಹಿನ್ನೆಲೆಯಲ್ಲಿ ನೇಮಿನಾಥನ ಕಥೆಯ ಮಹತ್ವವನ್ನು ಎತ್ತಿ ತೋರಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ೧. ನೇಮಿನಾಥ ಚರಿತ್ರೆ ಅಥವಾ ಪುರಾಣಗಳು, ೨. ಹರಿವಂಶ ಪುರಾಣಗಳು, ೩. ಮಹಾಪುರಾಣಗಳು ಮತ್ತು ೪. ಕೃಷ್ಣ ಚರಿತ್ರೆ, ಪಾಂಡವ ಪುರಾಣ ಹೀಗೆ ಭಾಗಮಾಡಿಕೊಂಡು, ಲೇಖಕರು ಸಂಸ್ಕೃತ, ಪ್ರಾಕೃತ ಹಾಗೂ ಕನ್ನಡ ಕವಿಗಳಿಂದ ರಚಿತವಾದ ನೇಮಿನಾಥಪುರಾಣಗಳ ಯಾದಿಯನ್ನು ಕೊಟ್ಟಿದ್ದಾರೆ. ಶಕ್ಯ ವಿದ್ದಲ್ಲಿ ಕಾಲ ಕರ್ತೃಗಳನ್ನು ಹೇಳಲು ಪ್ರಯತ್ನಿಸಿ, ಸಾಧ್ಯವಾದಷ್ಟು ಪರಿಚಯ ಕೊಡಲೂ ಪ್ರಯತ್ನಿಸಿದ್ದಾರೆ. ಈ ಸಂದರ್ಭದಲ್ಲಿ, ಜಿನಸೇನಾಚಾರ್ಯರು (ಕ್ರಿ.ಶ.೭೮೩) ಹಾಗೂ ಅವರ ಗ್ರಂಥ ಹರಿವಂಶಪುರಾಣದ ಬಗೆಗೂ, ಗುಣಭದ್ರಾಚಾರ್ಯರು (ಕ್ರಿ.ಶ. ೮೩೪-೮೯೮) ಹಾಗೂ ಅವರ ಗ್ರಂಥ ಉತ್ತರಪುರಾಣದ ಬಗೆಗೂ, ವಿಮರ್ಶಾತ್ಮಕ ಉತ್ತಮವಿವರಣೆ ನೀಡಿದ್ದಲ್ಲದೆ ಕನ್ನಡದ ಕವಿಗಳಾದ ಗುಣವರ್ಮ ೧, ಚಾವುಂಡರಾಯ, ಕರ್ಣಪಾರ್ಯ, ನೇಮಿಚಂದ್ರ, ಬಂಧುವರ್ಮ, ಮಹಾಬಲ, ಮಂಗರಸ, ಸಾಳ್ವ, ಬ್ರಹ್ಮಣಾಂಕ- ಮೊದಲಾದ ಕವಿಗಳ ಕಾಲ ದೇಶ ಗ್ರಂಥಗಳನ್ನು ಕುರಿತು ವಿಮರ್ಶೆ ಮಾಡಿದ್ದಾರೆ. ಈ ಸಂದರ್ಭದಲ್ಲಿ, ಬಂಧುವರ್ಮ ಮಂಗರಸ ಸಾಳ್ವ ಮೊದಲಾದ ಕವಿಗಳು ಬರೆದ, ಇನ್ನಿತರ ಗ್ರಂಥಗಳ ವಿವರಣೆ ಕೊಟ್ಟು, ಅವುಗಳ ವಿಮರ್ಶೆಯನ್ನೂ ಮಾಡಿದ್ದಾರೆ. ಕರ್ಣಪಾರ್ಯನ ಕಾಲವನ್ನು ಕುರಿತು ಮಾಡಿದ ಸುದೀರ್ಘಚರ್ಚೆಯು ಲೇಖಕರು ಆ ದಿಶೆಯಲ್ಲಿ ಶ್ರದ್ಧಾಪೂರ್ವಕ ಮಾಡಿದ ಸಂಶೋಧನೆಗೆ ಸಾಕ್ಷಿಯಾಗಿದೆ. ಇದು ಏನಿದ್ದರೂ, ನೇಮಿನಾಥನ ಕಥೆಗಳ ಬಗೆಗೆ ಇರುವ ಕೃತಿಗಳನ್ನು ಕುರಿತು ಲೇಖಕರು ಮಾಡಿದ ಅಭ್ಯಾಸಕ್ಕೆ ಈ ಎರಡನೆಯ ಅಧ್ಯಾಯ ಒಳ್ಳೆಯ ನಿದರ್ಶನವಾಗಿದೆ.

ಮೂರನೆಯ ಅಧ್ಯಾಯದಲ್ಲಿ, ದಿಗಂಬರಸಂಪ್ರದಾಯಕ್ಕೆ ಸಂಬಂಧಿಸಿದ ಎರಡು ಪ್ರಮುಖ ಗ್ರಂಥಗಳಾದ, ಜಿನಸೇನಾಚಾರ್ಯರ ಹರಿವಂಶಪುರಾಣ ಹಾಗೂ ಗುಣ ಭದ್ರಾಚಾರ್ಯರ ಉತ್ತರಪುರಾಣದಲ್ಲಿ ಬರುವ ನೇಮಿನಾಥಚರಿತ್ರೆಯನ್ನು ಎತ್ತಿ ಕೊಂಡು, ಅವುಗಳಲ್ಲಿ ಬಂದಿರುವ, ನೇಮಿನಾಥನ ಚರಿತ್ರೆಯನ್ನಷ್ಟೇ ಎತ್ತಿಕೊಂಡು, ವಿವರವಿವರವಾಗಿ ಸಾಗಿ. ಕಥಾದೃಷ್ಟಿಯಿಂದ, ಅವೆರಡರಲ್ಲಿಯೂ ಕಾಣುವ ಸಾಮ್ಯ ಹಾಗೂ ವೈಷಮ್ಯಗಳನ್ನು ಎತ್ತಿ ತೋರಿಸಿದ್ದಾರೆ.

ನೇಮಿನಾಥನ ಚರಿತ್ರೆಗಳನ್ನು ಬರೆಯುವಲ್ಲಿ ಒಂದು ಮಾರ್ಗ 'ಹರಿವಂಶ ಪುರಾಣ'ವನ್ನು ಅವಲಂಬಿಸಿದ್ದಾಗಿದ್ದರೆ, ಇನ್ನೊಂದು 'ಮಹಾಪುರಾಣ'ವನ್ನು ಅನುಸರಿಸಿ ಕೊಂಡು ಬಂದುದಾಗಿದೆಯೆಂಬ ಮಾತನ್ನು ಹೇಳಿದ ಲೇಖಕರು, ನಾಲ್ಕನೆಯ ಅಧ್ಯಾಯ ದಲ್ಲಿ ಮಹಾಪುರಾಣದ ಮಾರ್ಗದಲ್ಲಿ ಬರೆದ ಚಾವುಂಡರಾಯಪುರಾಣದಲ್ಲಿ ಬರುವ ನೇಮಿನಾಥಪುರಾಣ ಮತ್ತು ಉತ್ತರಪುರಾಣದಲ್ಲಿ ಬರುವ ನೇಮಿನಾಥ ಚರಿತ್ರೆಗಳನ್ನು ಹೋಲಿಸಿ ನೋಡಿ, ಹೋಲಿಕೆ ವ್ಯತ್ಯಾಸಗಳನ್ನು ವಿವರಿಸಿ, ಅದೇ ವಿಷಯವು ಹರಿವಂಶ, ಉತ್ತರಪುರಾಣ, ಚಾವುಂಡರಾಯ ಪುರಾಣ, ಕರ್ಣಪಾರ್ಯನ ನೇಮಿನಾಥ ಪುರಾಣ

ಹಾಗೂ ನೇಮಿಚಂದ್ರನ ನೇಮಿನಾಥ ಪುರಾಣದಲ್ಲಿ ಹೇಗೆ ಮೂಡಿ ಬಂದಿದೆಯೆಂಬುದನ್ನು ಹೋಲಿಕೆ ವ್ಯತ್ಯಾಸಗಳನ್ನು ತೋರಿಸುತ್ತ ವಿವರಿಸಿದ್ದಾರೆ.

ನೇಮಿನಾಥನ ಚರಿತ್ರೆಯನ್ನಷ್ಟೇ ಗಮನದಲ್ಲಿಟ್ಟುಕೊಂಡು ಹೋಲಿಕೆ ವ್ಯತ್ಯಾಸಗಳನ್ನು, ಮೇಲೆ ವಿವರಿಸಿದ ಗ್ರಂಥಗಳ ಹಿನ್ನೆಲೆಯಲ್ಲಿ ನಾಲ್ಕನೆಯ ಅಧ್ಯಾಯದಲ್ಲಿ ತೋರಿಸಿದಂತೆ, ಅವೇ ಗ್ರಂಥಗಳಲ್ಲಿ ಮೂಡಿಬಂದಿರುವ 'ಹರಿವಂಶ' ಹಾಗೂ 'ಕುರುವಂಶ'ಗಳ ಕಥೆಗಳ ವಿವರಗಳನ್ನು ಕೊಟ್ಟು, ಹೋಲಿಕೆ ವ್ಯತ್ಯಾಸಗಳನ್ನು ತೋರಿಸಿದ್ದಾರೆ. ಐದು ಹಾಗೂ ಆರನೆಯ ಅಧ್ಯಾಯಗಳಲ್ಲಿ ಈ ಮೂರು ಅಧ್ಯಾಯಗಳಲ್ಲಿ ನಿರೂಪಿತವಾದ ವಿಷಯವಿವರಣೆ ಲೇಖಕರು ಮೇಲಿನ ಗ್ರಂಥಗಳನ್ನು ಹಿಂಜಿ ಹಿಂಜಿ ನೋಡಿದ್ದರ ಪ್ರತ್ಯಕ್ಷ ಕುರುಹಾಗಿದೆ. ನೇಮಿನಾಥನ ಚರಿತ್ರೆ, ಹರಿವಂಶ, ಕುರುವಂಶಗಳ ಬಗೆಗಿರುವ ಚಿಕ್ಕಪುಟ್ಟ ಹೋಲಿಕೆ ವ್ಯತ್ಯಾಸಗಳನ್ನೂ ಸಹ ಎತ್ತಿ ತೋರಿಸಿಕೊಡುವ ಪ್ರಯತ್ನ ಲೇಖಕರ ತಾಳ್ಮೆಗೆ ಕನ್ನಡಿ ಹಿಡಿದಂತೆ ಇದೆ. ಈ ಮೂರೂ ಅಧ್ಯಾಯಗಳನ್ನು ಓದುತ್ತಿರುವಾಗ, ಅನೇಕ ಸಲ, ಓದಿದ ವಿಷಯವನ್ನೇ ಓದಿದಂತೆ ಭಾಸವಾಗಿ, ನೀರಸತೆ ಉಂಟಾಗುವಂತಾಗುತ್ತದಲ್ಲದೆ, ಓದುಗರು ತಾಳ್ಮೆ ಕಳೆದುಕೊಳ್ಳುವಂತೆಯೂ ಆಗುತ್ತದೆ. ಆದರೆ ತಾಳ್ಮೆಯಿಂದ ಓದಿ ವಿಷಯ ಗ್ರಹಿಸಿದಾಗ ಲೇಖಕರ ಸೂಕ್ಷ್ಮದೃಷ್ಟಿಯ ಪರಿಚಯವಾಗುತ್ತದೆ.

ಹಿಂದಿನ ಅಧ್ಯಾಯಗಳಲ್ಲಿ ಸೂಚಿಸಿಕೊಂಡು ಬಂದ ಹೋಲಿಕೆ ವ್ಯತ್ಯಾಸಗಳ ಒಟ್ಟು ನೋಟವನ್ನು ಏಳನೆಯ ಅಧ್ಯಾಯದಲ್ಲಿ ನಿರೂಪಿಸಲಾಗಿದೆ. ಇಲ್ಲಿ, ಕಥಾವಸ್ತು, ಪಾತ್ರರಚನೆ, ರಸಪೋಷಣೆ ಮೊದಲಾದ ದೃಷ್ಟಿಗಳಿಂದ, ಜಿನಸೇನಾಚಾರ್ಯರು, ಗುಣಭದ್ರಾಚಾರ್ಯರು, ಚಾವುಂಡರಾಯ, ಕರ್ಣಪಾರ್ಯ, ನೇಮಿಚಂದ್ರರ ವೈಯಕ್ತಿಕತೆ ಹೇಗೆ ಒಡಮೂಡಿದೆ, ಯಾವ ಯಾವ ಅಂಶಗಳು ಅವರವರ ಪ್ರತಿಭೆ ಪಾಂಡಿತ್ಯಗಳ ದ್ಯೋತಕವಾಗಿ ಎದ್ದುಕಾಣುತ್ತವೆ ಹಾಗೂ ಅಲ್ಲಲ್ಲಿ ಕಂಡುಬರುವ ವ್ಯತ್ಯಾಸಗಳಿಗೆ, ಈ ಕವಿಗಳಿಗೆ ಆಕರವಾದ ಗ್ರಂಥಗಳು ಯಾವದಿರಬಹುದು ಎಂಬುದನ್ನು ಹೇಳಿರುವುದೇ ಈ ಅಧ್ಯಾಯದ ವಿಶೇಷತೆಯಾಗಿದೆ. ಆದರೆ ಈ ಮಾತುಗಳನ್ನು ಹಿಂದಿನ ಅಧ್ಯಾಯಗಳಲ್ಲಿಯೇ ಸರಿಯಾದ ಸಂದರ್ಭಗಳನ್ನು ಉಪಯೋಗಿಸಿಕೊಂಡು ಲೇಖಕರು ಹೇಳಿಬಿಟ್ಟಿದ್ದರೆ ಚೆನ್ನಾಗಿ ಆಗುತ್ತಿತ್ತು ಎಂದೆನ್ನಿಸುತ್ತದೆ.

ಜೈನಸಾಹಿತ್ಯದಲ್ಲಿ ಬಂದಿರುವ ನೇಮಿನಾಥಚರಿತ್ರೆಗಳನ್ನು ಗುಂಪುಗಳನ್ನಾಗಿ ಮಾಡಿಕೊಂಡು ಸಂಸ್ಕೃತ ಪ್ರಾಕೃತದಲ್ಲಿ ರಚಿತವಾದವುಗಳನ್ನು ವಿಹಂಗಮದೃಷ್ಟಿಯಿಂದ ಪರಿಚಯಮಾಡಿಕೊಟ್ಟು, ಕನ್ನಡದಲ್ಲಿ ರಚಿತವಾದ ನೇಮಿನಾಥಚರಿತ್ರೆಗಳ ಸ್ಥಾನಮಾನಗಳನ್ನು ಕುರಿತು ಚರ್ಚಿಸಲಾಗಿದೆ. ಎಂಟನೆಯ ಅಧ್ಯಾಯದಲ್ಲಿ ಭಾರತ, ಭಾಗವತಗಳ ಕಥೆಯು ಸೇರಿಕೊಂಡಿರುವುದರಿಂದ ಹಾಗೂ ಸಾಮಾಜಿಕ ಹಿನ್ನೆಲೆಯಲ್ಲಿ ನೇಮಿನಾಥ ಪುರಾಣಕ್ಕೆ ಬಂದಿರುವ ಮಹತ್ವವನ್ನು ವಿವರಿಸಿ, ಪ್ರಾಕೃತ ಸಂಸ್ಕೃತ ಭಾಷೆಗಳಲ್ಲಿ

ರಚಿತವಾದ ಹಲವಾರು 'ಹರಿವಂಶ', 'ಮಹಾಪುರಾಣ' ಮತ್ತು 'ನೇಮಿನಾಥ ಚರಿತ್ರೆ'ಗಳ ಪರಿಚಯ ಮಾಡಿಕೊಟ್ಟ ಲೇಖಕರು, ಕನ್ನಡದಲ್ಲಿ ಬಂದಿರುವ ಹರಿವಂಶ(ಗುಣವರ್ಮ ೧), ತ್ರಿಷಷ್ಟಿ ಲಕ್ಷಣ ಮಹಾಪುರಾಣ(ಚಾವುಂಡರಾಯ), ನೇಮಿನಾಥಪುರಾಣ (ಕರ್ಣಪಾರ್ಯ) ಹಾಗೂ (ಅರ್ಧ)ನೇಮಿನಾಥಪುರಾಣ(ನೇಮಿಚಂದ್ರ)ಗಳ ಪರಿಚಯ ವನ್ನೂ ಮಾಡಿಕೊಟ್ಟಿದ್ದಾರೆ. ಉಪಲಬ್ಧವಿರದಿರುವ ಗುಣವರ್ಮ 1 ನ ಹರಿವಂಶ ಪುರಾಣಕ್ಕೆ ಜಿನಸೇನಾಚಾರ್ಯರ ಹರಿವಂಶ ಆಕರವಾಗಿರಬಹುದೆಂದು ಹೇಳಿದ ಲೇಖಕರು ಚಾವುಂಡರಾಯನು ಹರಿವಂಶ ಹಾಗೂ ಉತ್ತರ ಪುರಾಣಗಳಿಗೆ ಋಣಿಯಾಗಿದ್ದಾನೆಂದೂ ಮಹಾಪುರಾಣವನ್ನು ಸಂಗ್ರಹ ಮಾಡುವುದೇ ಆತನ ಕಾರ್ಯವಾಗಿತ್ತಾದ್ದರಿಂದ ವಿವರಗಳನ್ನು ಕೊಡುವಲ್ಲಿ ಹೆಚ್ಚು ಕಡಿಮೆ ಮಾಡಿಕೊಳ್ಳಬೇಕಾಯಿತೆಂದೂ ಸೂಚಿಸಿ ದ್ದಾರೆ. ಕರ್ಣಪಾರ್ಯನು ತನ್ನ ಹಿಂದೆ ರಚಿತವಾದ ನೇಮಿನಾಥಪುರಾಣಗಳನ್ನು ನೋಡಿರಬೇಕು. ಆದರೂ ಅವನು ಹರಿವಂಶ ಉತ್ತರಪುರಾಣಗಳನ್ನು ಹೆಚ್ಚು ನೋಡಿರುವ ಸಂಭವವಿದೆ. ಅದರಂತೆ ವೈದಿಕಸಂಪ್ರದಾಯಗಳ ಗ್ರಂಥಗಳ ಹಾಗೂ ಪಂಪ, ರನ್ನರಂತಹ ಕನ್ನಡ ಕವಿಗಳ ಗ್ರಂಥಗಳ ಪರಿಚಯವೂ ಕವಿಗೆ ಇದ್ದಿತು. ಕಾರಣ ಆತನ ಗ್ರಂಥದಲ್ಲಿ ಸಮ್ಮಿಶ್ರನಿರೂಪಣೆ ಬರುವಂತಾಗಿದೆ. ಕವಿ ತನ್ನತನವನ್ನು ಕಾಯ್ದುಕೊಳ್ಳುವಲ್ಲಿ ಹಾಗೂ ಹಿಂದಿನ ಸಂಪ್ರದಾಯವನ್ನು ಸಾಧಿಸಿಕೊಂಡುಬರುವಲ್ಲಿ, ಸಾಧ್ಯತೆ ಪಡೆದುದು ಶ್ಲಾಘ ನೀಯವಾಗಿದೆ. ಅದರಂತೆ ಕವಿ ನೇಮಿಚಂದ್ರನು ತನ್ನ ನೇಮಿನಾಥಪುರಾಣವನ್ನು ಉತ್ತರ ಪುರಾಣದ ಹಿನ್ನೆಲೆಯಲ್ಲಿ ಬರೆದಿರುವುದೇನೋ ಎಂದು ಅನ್ನಿಸುತ್ತಿದ್ದರೂ, ಆತನೂ ಕರ್ಣಪಾರ್ಯನಂತೆ ಉಳಿದ ಗ್ರಂಥಗಳನ್ನು ನೋಡಿಲ್ಲವೆಂದಲ್ಲ. ಈ ಕವಿಯ ಗ್ರಂಥ ಅರ್ಧಕ್ಕೆ ನಿಂತುಹೋಗಿದ್ದರೂ, ಅದು ಕನ್ನಡದಲ್ಲಿ ರಚಿತವಾಗಿರುವ ನೇಮಿನಾಥಪುರಾಣ ಗಳಲ್ಲಿ ಸರ್ವರೀತಿಯಿಂದಲೂ ಶ್ರೇಷ್ಠತೆ ಪಡೆಯಬಲ್ಲುದಾಗಿದೆ ಎಂದು ಹೇಳಿರುವ ಲೇಖಕರ ವಿಚಾರಗಳು ಗಮನಾರ್ಹವಾಗಿವೆ. ಆದರೆ ರುದ್ರಭಟ್ಟನ ಪ್ರಭಾವ ನೇಮಿಚಂದ್ರನ ಮೇಲೆ ಬಹಳ ಆದಂತೆ ಇದೆ ಎಂದು ಲೇಖಕರು ಸೂಚಿಸಿರುವ ವಿಚಾರವು ಸರ್ವಗ್ರಾಹ್ಯವಾಗುವುದು ದುಸ್ತರ.

ಕೊನೆಯದಾದ ಒಂಭತ್ತನೆಯ ಅಧ್ಯಾಯದಲ್ಲಿ, ಕೇವಲ ಕನ್ನಡದ ಗ್ರಂಥಗಳಾದ ಚಾವುಂಡರಾಯಪುರಾಣ, ಕರ್ಣಪಾರ್ಯನ ನೇಮಿನಾಥಪುರಾಣ ಹಾಗೂ ನೇಮಿಚಂದ್ರನ ನೇಮಿನಾಥಪುರಾಣಗಳನ್ನಷ್ಟೇ ಎತ್ತಿಕೊಂಡು ಲೇಖಕರು, ಆಗಲೇ ಹಿಂದಿನ ಅಧ್ಯಾಯ ಗಳಲ್ಲಿ ಹೇಳಿದ ಮಾತುಗಳನ್ನೇ ಪ್ರತ್ಯೇಕವಾಗಿ, ಅನುಕ್ರಮ ನಂಬರುಗಳನ್ನು ಹಾಕಿ ಹೇಳಿದ್ದಾರೆ. ಆಕರ ಅನುಸರಣೆ ವ್ಯತ್ಯಾಸ ಪಾತ್ರರಸಪೋಷಣೆ ಮೊದಲಾದವುಗಳ ಹಿನ್ನಲೆಯಲ್ಲಿ ಕೊಟ್ಟಿರುವ ಈ ಅಂಶಗಳೇ ಈ ಮೂರು ಕನ್ನಡ ಗ್ರಂಥಗಳ ತೌಲನಿಕ ಅಧ್ಯಯನದ ತಿರುಳಾಗಿವೆ.

ಈ ಸಂದರ್ಭದಲ್ಲಿ, ಪುಟ್ಟವಾದರೂ ಗಮನಿಸಿ ತಿದ್ದಿಕೊಳ್ಳಬಹುದಾದ ಒಂದೆರಡು ಅಂಶಗಳನ್ನು ತೋರಿಸಬಹುದಾಗಿದೆ.

೧. ಹರಿವಂಶ ಪುರಾಣವನ್ನು ಬರೆದ ಜಿನಸೇನಾಚಾರ್ಯರನ್ನು "ಜಿನಸೇನಾಚಾರ್ಯ 11" ಎಂದು ಬರೆದು ತೋರಿಸಲು ಪ್ರಯತ್ನಿಸಲಾಗಿದೆ. ಆದರೆ ಕಾಲಮಾನದ ಹಿನ್ನೆಲೆಯಲ್ಲಿ 'ಪೂರ್ವಪುರಾಣ' ಬರೆದ ಜಿನಸೇನಾಚಾರ್ಯರಿಗಿಂತ ಮೊದಲಿಗರಾದ ಈ ಜಿನಸೇನಾಚಾರ್ಯರನ್ನು 'ಜಿನಸೇನಾಚಾರ್ಯ 1' ಎಂದು ಬರೆಯುವುದೇ ಸೂಕ್ತವಾಗಿದೆ.

೨. ಮೊದಲನೆಯ ಅಧ್ಯಾಯದ ೪ನೆಯ ಪುಟದ ಕೊನೆಯ ಸಾಲಿನಲ್ಲಿ "ಐರಾವತ ಗಜದ ೩೨ ಮುಖಗಳು" ಎಂಬಲ್ಲಿ "೩೨ ಸೊಂಡಿಲುಗಳು" ಎಂದು ಇರಬೇಕು ಎನ್ನಿಸುತ್ತದೆ.

೩. ಮೊದಲನೆಯ ಅಧ್ಯಾಯದ ೧೦ನೆಯ ಪುಟದ ೧೧ನೆಯ ಸಾಲಿನಲ್ಲಿ ಬರುವ "ಅಘಾತಿ" ಕರ್ಮದ ಬದಲು "ಘಾತಿ" ಕರ್ಮಗಳು ಎಂದಿರಬೇಕು.

೪. ಎಂಟನೆಯ ಅಧ್ಯಾಯದಲ್ಲಿ ಪುಟ ೩, ೪, ೫ರಲ್ಲಿ ಅಡಿಟಿಪ್ಪಣಿಗಳಿಗೆ ವಿವರಣೆ ಇಲ್ಲ. ಅದರಂತೆ ಪುಟ ೧೮ರಲ್ಲಿ ೨೧ನೆಯ ಅಡಿಟಿಪ್ಪಣಿಗೂ ಉದಾಹರಣೆ ಕೊಟ್ಟಿಲ್ಲ.

೫. "ಆಕರಗ್ರಂಥ ಲೇಖನಸೂಚಿ"ಯಲ್ಲಿ ಪುಟ ೪ರಲ್ಲಿ "ಸಮಯಪರೀಕ್ಷೆ - ಬ್ರಹ್ಮಶಿವ" ಎಂದು ಇಷ್ಟೇ ಇದೆ. ಉಳಿದ ವಿವರ ಇಲ್ಲ.

೬. ಕವಿ ನೇಮಿಚಂದ್ರನ ಬಗೆಗೆ ಈಗಾಗಲೇ ಕರ್ನಾಟಕ ವಿಶ್ವವಿದ್ಯಾನಿಲಯದಿಂದ ಪ್ರಕಟವಾದ ಗ್ರಂಥಗಳ ಹಾಗೂ ನೇಮಿನಾಥಪುರಾಣಕ್ಕೆ ಸಂಬಂಧಿಸಿದಂತೆ, 'ಪ್ರಬುದ್ಧ ಕರ್ಣಾಟಕ', 'ಜೀವನ' ಮೊದಲಾದ ಪತ್ರಿಕೆಗಳಲ್ಲಿ ಪ್ರಕಟವಾದ ಲೇಖನಗಳನ್ನು ಗಮನಿಸದೆ ಇದ್ದುದು ಕುತೂಹಲಕರವಾಗಿದೆ.

೭. ಎರಡೂ ಹೊತ್ತಿಗೆಗಳಿಗೆ ಪುಟಗಳನ್ನು ಕ್ರಮವಾಗಿ ಬರೆದು ಸಾದರಪಡಿಸಿದ್ದರೆ ಚೆನ್ನಾಗಿರುತ್ತಿತ್ತು.

ಅದು ಏನೇ ಇದ್ದರೂ, ಒಟ್ಟಿನಲ್ಲಿ 'ಕನ್ನಡ ನೇಮಿನಾಥಪುರಾಣಗಳ ತೌಲನಿಕ ಅಧ್ಯಯನ'ವೆಂದು ಕರೆಯಲಾದ ಈ ಮಹಾಪ್ರಬಂಧದಲ್ಲಿ, ಕೇವಲ ಕನ್ನಡಗ್ರಂಥಗಳನ್ನಷ್ಟೇ ಅಲ್ಲ, ನೇಮಿನಾಥ ತೀರ್ಥಂಕರನಿಗೆ ಸಂಬಂಧಿಸಿ ಬರುವ, ಸಂಸ್ಕೃತ, ಪ್ರಾಕೃತ, ಕನ್ನಡ ಭಾಷೆಗಳಲ್ಲಿ ರಚಿತವಾದ ಹರಿವಂಶ, ಮಹಾಪುರಾಣ, ನೇಮಿನಾಥಚರಿತ್ರೆ ಹಾಗೂ ಪಾಂಡವಪುರಾಣ ಮೊದಲಾದ ಗ್ರಂಥಗಳನ್ನೂ ಅವಗಾಹನೆಗೆ ತೆಗೆದುಕೊಂಡು, ಅವುಗಳ ಹಿನ್ನೆಲೆಯಲ್ಲಿ ನೇಮಿನಾಥಚರಿತ್ರೆಯ ಮಹತ್ವವನ್ನು, ಅದು ಕಾಲಕಾಲಕ್ಕೆ ಹೊಂದಿರುವ ಬದಲಾವಣೆಗಳನ್ನು, ಭಾರತೀಯ ಸಾಹಿತ್ಯದ ಹಾಗೂ ಜೈನಧರ್ಮದ ದಿಗಂಬರ ಮತ್ತು ಶ್ವೇತಾಂಬರ ಸಂಪ್ರದಾಯಗಳ ಹಿನ್ನೆಲೆಯಲ್ಲಿ ಎತ್ತಿ ತೋರಿಸಲಾಗಿದೆ. ಅದರಂತೆ ಸಂಸ್ಕೃತ,

ಪ್ರಾಕೃತ ಗ್ರಂಥಗಳನ್ನೇ ಆಕರಗಳನ್ನಾಗಿಟ್ಟುಕೊಂಡು ಬಂದ ಕನ್ನಡ ಕವಿಗಳು, ಅದರಲ್ಲೂ ಕರ್ಣಪಾರ್ಯ, ನೇಮಿಚಂದ್ರ ಕವಿಗಳು ವೈದಿಕಗ್ರಂಥಗಳ ಪ್ರಭಾವಕ್ಕೂ ಒಳಗಾಗಿ, ತಮ್ಮತನವನ್ನು ಉಳಿಸಿಕೊಂಡು, ತಮ್ಮ ಪ್ರತಿಭೆ ಪಾಂಡಿತ್ಯಗಳನ್ನು ಹೇಗೆ ಪ್ರದರ್ಶಿಸಿದ್ದಾರೆಂಬುದನ್ನೂ ಸೂಚಿಸಲಾಗಿದೆ. ಕನ್ನಡಕ್ಕೆ ಮೀಸಲಾಗಿರದೆ, ತೌಲನಿಕ ಎಂಬುದಕ್ಕೇ ಬಹಳ ಮಹತ್ವ ಕೊಡದೆ, ಪ್ರಬಂಧವು ಒಳಗೊಂಡಿರುವ ವಿಷಯಸಾಮಗ್ರಿ ಹಾಗೂ ಲೇಖಕರು ಶ್ರದ್ಧೆಯಿಂದ, ತಾಳ್ಮೆಯಿಂದ ಮಾಡಿರುವ ಅಧ್ಯಯನ ಹಾಗೂ ಅವರ ಸೂಕ್ಷ್ಮನಿರೀಕ್ಷಣೆ ಇವೆಲ್ಲವೂ ಲೇಖಕರ ಆಳವಾದ ಅಭ್ಯಾಸದ, ಸಂಶೋಧನದೃಷ್ಟಿಯ ಪ್ರತ್ಯೇಕ ಕುರುಹುಗಳಾಗಿವೆ.

ವಿದ್ವತ್‌ವಿಸ್ತಾರದ ಸಂಗ್ರಾಹ್ಯ ಕೃತಿಶ್ರೇಣಿ : ಶಾಸ್ತ್ರೀಯ (೪ ಸಂಪುಟಗಳು)

ಶ್ರೀರಾಮ ಭಟ್ಟ

ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರೀ ಕನ್ನಡ ವಿದ್ವತ್‌ವಲಯದಲ್ಲಿ ಸುಪರಿಚಿತ ಹೆಸರು. ಶಾಸ್ತ್ರಿಗಳು ಐದು ದಶಕಗಳ ನಿಡುಗಾಲದಲ್ಲಿ ನಿರಂತರವಾಗಿ ಕನ್ನಡ ಭಾಷೆ ಸಾಹಿತ್ಯಗಳನ್ನು ಆರಾಧಿಸುತ್ತ, ಅನ್ವೇಷಿಸುತ್ತ ಈ ಕ್ಷೇತ್ರದಲ್ಲಿ ಅಧ್ಯಯನ, ಅಧ್ಯಾಪನ, ಚರ್ಚೆ, ವಿಮರ್ಶೆ, ಸಂಶೋಧನೆ, ಬರವಣಿಗೆಗಳನ್ನು ನಡೆಸುತ್ತ ಬಂದವರು. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿ ತಾವೂ ಬೆಳೆದು, ಸಂಸ್ಥೆಯ ಪ್ರತಿಷ್ಠೆಯನ್ನೂ ಬೆಳೆಸಿದವರು. ಸಂಸ್ಕೃತ ಪ್ರಾಕೃತ ತೆಲುಗು ಭಾಷೆಗಳಲ್ಲೂ ಪರಿಣತರಾದ ಶಾಸ್ತ್ರಿಗಳು ಬಹುಶ್ರುತರು.

ವೆಂಕಟಾಚಲ ಶಾಸ್ತ್ರಿಗಳ ಅಧ್ಯಯನವಲಯಗಳ ವಿಸ್ತಾರವೇ ಇದಕ್ಕೆ ಸಾಕ್ಷಿ. ಶಬ್ದಾರ್ಥ ವಿಚಾರ, ಗ್ರಂಥಸಂಪಾದನೆ, ವ್ಯಾಕರಣ, ನಿಘಂಟು, ಛಂದಸ್ಸು, ಸಾಹಿತ್ಯಚರಿತ್ರೆ, ಹಳಗನ್ನಡ ಹೊಸಗನ್ನಡ ಸಾಹಿತ್ಯಸಮೀಕ್ಷೆ, ವಿಮರ್ಶೆ, ವಿಶ್ಲೇಷಣೆ, ಅನುವಾದ... ಹೀಗೆ ಹತ್ತಾರು ಪ್ರಕಾರಗಳಲ್ಲಿ ಶಾಸ್ತ್ರಿಗಳು ಪ್ರಕಟಿಸಿದ ಲೇಖನಗಳನ್ನು ಒಂದೆಡೆ ಸಂಕಲಿಸಿ ಸಪ್ನಾ ಬುಕ್ ಹೌಸ್ ೪ ಸಂಪುಟಗಳಲ್ಲಿ ಹೊರತಂದಿದೆ. ೧೯೧ ಲೇಖನಗಳ ೨,೩೬೨ ಪುಟಗಳ ಈ ಬೃಹತ್ ಸಂಪುಟಗಳಿಗೆ 'ಶಾಸ್ತ್ರೀಯ' ಎನ್ನುವ ಶೀರ್ಷಿಕೆ ಅನ್ವರ್ಥಕ. ಶಾಸ್ತ್ರಕ್ಕೆ, ಪಾಂಡಿತ್ಯವಿಚಾರಕ್ಕೆ ಸಂಬಂಧಿಸಿದ ಲೇಖನಗಳು ಎನ್ನುವ ಅರ್ಥದ ತದ್ಧಿತರೂಪ 'ಶಾಸ್ತ್ರೀಯ'. ಇವು ಶಾಸ್ತ್ರಿಯವರ ಲೇಖನಗಳೆಂಬ ಅರ್ಥದಲ್ಲೂ 'ಶಾಸ್ತ್ರೀಯ'ವೇ.

ಇಂದು ಸಾಹಿತ್ಯಾಧ್ಯಯನ ಬಹುಮಟ್ಟಿಗೆ ಪದವಿ ಸ್ನಾತಕೋತ್ತರ ಪದವಿ ತರಗತಿಗಳ ಶೈಕ್ಷಣಿಕವಲಯಕ್ಕೆ ಸೀಮಿತವಾಗುತ್ತಿದೆ. ಅಲ್ಲಿ ಕೂಡ ಭಾಷಾಕಲಿಕೆ ಮತ್ತು ಸಾಹಿತ್ಯದ ಗ್ರಹಿಕೆ ಮೇಲುಗೈ ಪಡೆದಿವೆ. ಅರ್ಥಾತ್ ಇತರ ಸಾಹಿತ್ಯಪರಿಕರಗಳ ಅಧ್ಯಯನ ಮೂಲೆಗುಂಪಾಗಿದೆ. ಒಂದು ಬಗೆಯ ಸಮಾಜೋಸಾಹಿತ್ಯವೆನ್ನಬಹುದಾದ ಸಾಹಿತ್ಯ ಮತ್ತು ವಿಮರ್ಶೆ ಇಂದು ಹೆಚ್ಚಾಗಿ ಕಂಡುಬರುತ್ತಿದೆ. ಇಂದಿನ ಆಶಯ ಎಂಥದೆನ್ನುವುದನ್ನು ಅರ್ಥ ಮಾಡಿಕೊಳ್ಳಬಹುದು. ಸಾಹಿತ್ಯಾಧ್ಯಯನಕ್ಕೆ ಬೇಕಾದ ಪೂರಕ ಪರಿಕರಗಳ ತಿಳವಳಿಕೆ ಸಾಕಷ್ಟು ಇಲ್ಲದಿರುವುದು ಈ ವಿಸಂಗತಿಗೆ ಕಾರಣವಿರಬೇಕು.

'ಸಾಹಿತ್ಯಾಧ್ಯಯನಕ್ಕೆ ಬೇಕಾದ ಪರಿಕರಗಳನ್ನು, ಪೂರಕ ಅಂಶಗಳನ್ನು ಸಿದ್ಧಪಡಿಸುವ ಚಟುವಟಿಕೆ ಇತ್ತೀಚೆಗೆ ಕಡಿಮೆಯಾಗಿರುವುದರ ಅರ್ಥ ಅಂತಹ ಪರಿಕರಗಳ ಆವಶ್ಯಕತೆ ಇಲ್ಲ ಎಂದಾಗಲಿ ಅಥವಾ ಈಗ ಸಾಕಷ್ಟು ಪರಿಕರಗಳು ಲಭ್ಯವಿವೆ ಎಂದಾಗಲಿ ಅಲ್ಲ. ಅಂತಹ ಪರಿಕರಗಳ ಸಿದ್ಧತೆಗೆ ಅವಶ್ಯವಾದ ವಿಧಿವಿಧಾನಗಳ ಬಗ್ಗೆ ನಮ್ಮ ಸಂಶೋಧನ ವಲಯ ತನ್ನ ಅವಧಾರಣೆಯನ್ನು ಕಡಿಮೆಮಾಡಿದೆ. ಉದಾಹರಣೆಗೆ, ಸಾಹಿತ್ಯಾಭ್ಯಾಸಿಗಳಿಗೆ ಅನುವಾಗುವ ಪರಿಕರಗಳೆಲ್ಲವನ್ನೂ (ಹಳಗನ್ನಡ ವ್ಯಾಕರಣ, ಛಂದಸ್ಸು, ಅಲಂಕಾರಶಾಸ್ತ್ರ, ಭಾಷಾಚರಿತ್ರೆ) ಒತ್ತಟ್ಟಿಗೆ ಒದಗಿಸುವ 'ಕನ್ನಡಕೈಪಿಡಿ'ಯನ್ನು ಮೈಸೂರು ವಿಶ್ವವಿದ್ಯಾನಿಲಯ ಈ ಶತಮಾನದ ಮೂರನೇ ದಶಕದಲ್ಲಿ ಸಿದ್ಧಪಡಿಸಿತು. ಮುಂದಿನ ಮುದ್ರಣದಲ್ಲಿ ಅಲ್ಪಪರಿಷ್ಕರಣೆಗೆ ಒಳಗಾದ್ದನ್ನು ಬಿಟ್ಟರೆ, ಈ ಶತಮಾನದ ಕೊನೆದಶಕದಲ್ಲೂ ಸಾಹಿತ್ಯದ ವಿದ್ಯಾರ್ಥಿಗಳು ಅದನ್ನು ಅದು ಇದ್ದಂತೆಯೇ ಬಳಸುತ್ತಿದ್ದಾರೆ. ಅದರ ಚೌಕಟ್ಟಿನಲ್ಲಿ ಬಂದಿರುವ ಹೊಸಚಿಂತನೆಗಳನ್ನು ಅಳವಡಿಸಿ, ಬೇರೊಂದು ಕೈಪಿಡಿಯನ್ನು ರೂಪಿಸುವ ಆಸಕ್ತಿ ಕಂಡುಬರುತ್ತಿಲ್ಲ'(ನರಹಳ್ಳಿ ಬಾಲಸುಬ್ರಹ್ಮಣ್ಯ - ಸಾಹಿತ್ಯ ಸಂಸ್ಕೃತಿ). ನಿಜ.

ಈ ಅರಕೆಯನ್ನು ತಕ್ಕಮಟ್ಟಿಗೆ ತುಂಬಿಕೊಡುವ ದಿಶೆಯಲ್ಲಿ 'ಶಾಸ್ತ್ರೀಯ' ಪ್ರವೃತ್ತವಾಗಿದೆ. ಬೇರೆ ಬೇರೆ ಸಂದರ್ಭಗಳಲ್ಲಿ ಅಗತ್ಯಕ್ಕನುಗುಣವಾಗಿ ಸಿದ್ಧವಾದ ಲೇಖನಗಳನ್ನು ಹೀಗೆ ೪ ಸಂಪುಟಗಳಲ್ಲಿ ಸಂಯೋಜಿಸಿದ್ದರಿಂದಾಗಿ ಸಾಕಲ್ಯ ಪ್ರಾಪ್ತವಾಗಿದೆ. ವಿಭಿನ್ನ ಕಾಲ ಸಂದರ್ಭಗಳಲ್ಲಿ ಹುಟ್ಟಿದ ಲೇಖನಗಳನ್ನು ವಿಷಯಾನುಕ್ರಮದಲ್ಲಿ ಜೋಡಿಸಿರುವುದರಿಂದ 'ಶಾಸ್ತ್ರೀಯ'ಕ್ಕೆ ಕೈಪಿಡಿಯ ಸಮಗ್ರತೆಯೂ ಒದಗಿದೆ.

'ಶಾಸ್ತ್ರೀಯ' ಸಂಪುಟಗಳ ವಿಷಯದ ಹರಹು ಬಲುದೊಡ್ಡದು. ಮೊದಲ ಸಂಪುಟದಲ್ಲಿ ಶಬ್ದಾರ್ಥವಿಚಾರ-ಗ್ರಂಥಸಂಪಾದನೆ, ಭಾಷೆ-ವ್ಯಾಕರಣ, ನಿಘಂಟುಸಾಹಿತ್ಯ ಮತ್ತು ನಿಘಂಟುರಚನೆ ಕುರಿತ ಲೇಖನಗಳಿವೆ. ಹಳಗನ್ನಡ ಕಾವ್ಯಗಳಲ್ಲಿ ಪಾಠದೋಷಗಳನ್ನು ಸರಿಪಡಿಸುವ ನಿಟ್ಟಿನಲ್ಲಿ ಹಲವು ಲೇಖನಗಳು ಪ್ರಯತ್ನಿಸಿವೆ. ಪಾಠನಿರ್ಣಯದಲ್ಲಿ ನಡೆದ ಅಪೂರ್ಣಚರ್ಚೆಗಳನ್ನು ಕೈಗೆತ್ತಿಕೊಂಡು ಶಾಸ್ತ್ರಿಗಳು ಅವನ್ನು ಪೂರ್ಣಗೊಳಿಸಿದ್ದಾರೆ. ಇದಕ್ಕಾಗಿ ಶಾಸ್ತ್ರಿಗಳು ಒದಗಿಸಿಕೊಡುವ ಸಾಕ್ಷ್ಯಗಳನ್ನೂ ಆಧಾರಗಳನ್ನು ಪರಿಶೀಲಿಸಿದಾಗ ಅವರ ಅಧ್ಯಯನದ ವಿಸ್ತಾರ ಸೂಕ್ಷ್ಮತೆಗಳು ಅಚ್ಚರಿಹುಟ್ಟಿಸುತ್ತವೆ. ಕುಂದಕುಂದ/ಕೊಂಡಕುಂದ, ಲಾವುಗೆಯುಂಕೆ ಕೊರಸುಂ, ತನಿಗಂಪಿನ ವೀಣೆ/ಯೀಳೆ ಸಾದು ಮುಂತಾದವು ಇದಕ್ಕೆ ನಿದರ್ಶನ.

ಅಲ್ಲದೆ, 'ಆದಿಪುರಾಣ'ದ ತ್ರಿಪದಿಯೊಂದರ ಪಾಠವಿಚಾರ, ಒಂದು ಕಂದಪದ್ಯ, ಅಜಿತಪುರಾಣ, ಗದಾಯುದ್ಧ ಕಾವ್ಯಗಳ ಕೆಲವು ಪದ್ಯಪಾಠಗಳ ವಿಚಾರ, 'ಕರ್ಣಾಟಕ ಪಂಚತಂತ್ರ'ದ ಖಲ್ವಾಯಿತ ವಿಚಾರ, 'ಅರ್ಧನೇಮಿ ಪುರಾಣ'ದ ತ್ರಿಪದಿಯ ಪಾಠ ಮತ್ತು ಅರ್ಥ, ನೇಮಿನಾಥ ಪುರಾಣದ ಅಂಕಿತನಾಮಪಾಠಗಳ ವಿಶ್ಲೇಷಣೆ ಉತ್ತಮ ಸಂಶೋಧನಲೇಖನಗಳಿಗೆ ಮಾದರಿಯಾಗಿವೆ.

'ತೆ' ಎಂಬ ಅವ್ಯಯದ ವಿಚಾರ ಶಾಸ್ತ್ರಿಗಳ ಸೂಕ್ಷ್ಮದೃಷ್ಟಿಗೂ, ಸಂಶೋಧಕನಿಗಿರಬೇಕಾದ ವ್ಯವಧಾನಕ್ಕೂ ನಿದರ್ಶನ. ಸಂಶೋಧಕ ಸತ್ಯಶೋಧನೆಗೆ, ವಾಸ್ತವಬೋಧನೆಗೆ ಆಕರ ಸಂಗ್ರಹ ಮತ್ತು ಬಳಕೆಯನ್ನು ಎಷ್ಟು ಪರಿಣಾಮಕಾರಿಯಾಗಿ ಬಳಸಿಕೊಳ್ಳಬಹುದೆನ್ನುವುದನ್ನು ಬಾಳ್ಗಟ್ಟು(ಳ್ಚು), ಬಳಮದ್ರ್ಯ, ಭಗವತಿಯೇಱು ಮುಂತಾದವುಗಳ ವಿಶ್ಲೇಷಣೆ ತೋರಿಸಿಕೊಡುತ್ತದೆ.

'ಕುಮಾರವ್ಯಾಸ ಭಾರತ'ದ ಪರಿಷ್ಕರಣ, ಶಬ್ದಮಣಿದರ್ಪಣ ಹಾಗೂ ವ್ಯಾಕರಣಕ್ಕೆ ಸಂಬಂಧಿಸಿದ ಲೇಖನಗಳೂ ಇಲ್ಲಿ ಸಾಕಷ್ಟಿವೆ. ಕನ್ನಡ ಭಾಷಾಶುದ್ಧಿಯ ಕಾಳಜಿಯ ಹಿನ್ನೆಲೆಯಿಂದಾಗಿ 'ಶಿಕ್ಷಣರಂಗದಲ್ಲಿ ಕನ್ನಡ' ಲೇಖನವೂ ಈ ಸಂಪುಟಕ್ಕೆ ಸೇರಿರಬಹುದು! 'ಕನ್ನಡ ವ್ಯಾಕರಣಸಾಹಿತ್ಯ' ಎಂಬ ದೀರ್ಘಲೇಖನ ಕನ್ನಡದಲ್ಲಿ ಪ್ರಾಚೀನ ಕಾಲದಿಂದ ಈವರೆಗೆ ಬಂದ ವ್ಯಾಕರಣಗ್ರಂಥಗಳನ್ನು ಅನುವಾದವೂ ಸೇರಿದಂತೆ ಪರಿಚಯಿಸಿಕೊಡುತ್ತದೆ. ಈ ಲೇಖನ ಕನ್ನಡ ವ್ಯಾಕರಣಪರಂಪರೆಯ ವಿಸ್ತಾರವನ್ನೂ ಪರ್ಯಾಯವಾಗಿ ಮಿತಿಯನ್ನೂ ಸೂಚಿಸುತ್ತದೆ. ಸಂಧಿ-ಸಮಾಸ, ಶಬ್ದರೂಪಗಳಿಗೆ ಇರುವ ಒತ್ತು ಕಾರಕವಿಶ್ಲೇಷಣೆಗೆ ಇಲ್ಲ. ಸಂಸ್ಕೃತದಂತೆ ಇಲ್ಲಿ ವ್ಯಾಕರಣಪ್ರಸ್ಥಾನ ನಿರ್ಮಾಣವಾಗಿಲ್ಲ. ಆಧುನಿಕಭಾಷಾವಿಜ್ಞಾನದ ಇತ್ತೀಚಿನ ಸಂಶೋಧನೆಗಳು ಈ ನಿಟ್ಟಿನಲ್ಲಿ ಕೆಲಸಮಾಡಲು ತೊಡಗಿವೆ ಎನ್ನುವುದನ್ನು ಇಲ್ಲಿ ಗಮನಿಸಬಹುದಾಗಿದೆ.

ಕೊನೆಯಲ್ಲಿ ನಿಘಂಟು ಕುರಿತಂತೆ ೭ ಲೇಖನಗಳಲ್ಲಿ ಉಪಯುಕ್ತ ಮಾಹಿತಿಗಳಿವೆ. ಸಂಸ್ಕೃತ ಹಾಗೂ ಕನ್ನಡ ನಿಘಂಟುಗಳ ವಿಸ್ತಾರ ಸರ್ವೇಕ್ಷಣೆ ಸಂಶೋಧನಾಸಕ್ತರಿಗೆ ತುಂಬ ಉಪಯುಕ್ತವಾಗುವಂತಿವೆ. ಸಂಸ್ಕೃತದಲ್ಲಿ ನಿಘಂಟು ಮತ್ತು ಕೋಶಗಳಿಗೆ ಸ್ವರೂಪಭೇದವಿದೆ. ಕನ್ನಡದಲ್ಲಿ ಅವು ಪರ್ಯಾಯವಾಚಕಗಳಾಗಿ ರೂಢಿಯಲ್ಲಿವೆ. ನಿಘಂಟು ನಿರುಕ್ತದ ಅಂಶಗಳನ್ನು ಒಳಗೊಂಡು ಬೆಳೆದಾಗ ಅವು ಕೋಶವೆನಿಸಿದವು. ಶಬ್ದಶಕ್ತಿಯನ್ನು ಅರಿಯುವಲ್ಲಿ ಈ ಬೆಳವಣಿಗೆ ಸೋದ್ದಿಷ್ಟವಾಗಿದೆ. ಅವಕ್ಕೆ ಇಂಗ್ಲಿಷ್ ಶಬ್ದಕೋಶದ ಪದ್ಧತಿಯೂ ಲಭ್ಯವಾದಾಗ ಬೇರೊಂದು ಆಯಾಮ ದೊರೆಯಿತು. ನಿಘಂಟು ಇತಿಹಾಸವನ್ನು ಕುರಿತ ವೈಜ್ಞಾನಿಕ ಸಂಶೋಧನಗ್ರಂಥ ರಚಿತವಾಗಬೇಕಾದ ಅಗತ್ಯವಿದೆ. ಈ ನಿಟ್ಟಿನಲ್ಲಿ ಶಾಸ್ತ್ರಿಗಳ ಈ ಲೇಖನಗಳು ಪ್ರೇರಣೆ ನೀಡುವಷ್ಟು ಶಕ್ತವಾಗಿವೆ. ಕೊನೆಯಲ್ಲಿರುವ 'ಕಿಟೆಲ್ ಸ್ಮರಣೆ' ಲೇಖನ ಇದಕ್ಕೆ ಪೂರಕವಾಗಿದೆ. ಶಾಸ್ತ್ರಿಯವರು ಅನೇಕ ಕಡೆಗಳಲ್ಲಿ (ಉದಾ. 'ತೆ' ಎಂಬ ಅವ್ಯಯ) ನಿಘಂಟನ್ನು ಪರಾಮರ್ಶಿಸುವ ರೀತಿಯನ್ನೂ ನಿಘಂಟು ಸಂಶೋಧಕರು ಗಮನಿಸಬೇಕಾಗಿದೆ.

೨ನೆಯ ಸಂಪುಟ ಛಂದಶ್ಶಾಸ್ತ್ರದ ವಿಚಾರಗಳಿಗೆ ಮೀಸಲು. ಸಂಸ್ಕೃತ ಛಂದಸ್ಸುಗಳು, ಅವುಗಳ ವಿಕಾಸ ಮತ್ತು ವಿಭಜನೆಯ ತತ್ತ್ವಗಳಿಂದ ಆರಂಭವಾಗಿ ಕನ್ನಡ ನವೋದಯ ಕವಿಗಳವರೆಗಿನ ಛಂದಸ್ ಬಳಕೆಯ ವೈಶಿಷ್ಟ್ಯ ವಿಚಾರಗಳನ್ನು ಈ ಲೇಖನಗಳು

ಮಂಡಿಸಿವೆ. ವರ್ಣಗಣ ಮಾತ್ರಾಗಣ ಅಂಶಗಣಗಳನ್ನು ಕುರಿತು ಹೊಸ ಅಂಶಗಳನ್ನು ಚರ್ಚಿಸುವುದರೊಂದಿಗೆ, ಕನ್ನಡ ಕಾವ್ಯಪರಂಪರೆ ಛಂದಸ್ಸಿನ ಪ್ರಯೋಗಗಳಲ್ಲಿ ಪಡೆದ ಅನನ್ಯಸಿದ್ಧಿಯನ್ನು ಹೊಸ ಒಳನೋಟಗಳೊಂದಿಗೆ ಪರ್ಯಾಲೋಚಿಸಿರುವುದು ಈ ಸಂಪುಟದ ವೈಶಿಷ್ಟ್ಯ. ಸಂಗೀತದ ಗೇಯತೆಯನ್ನು ಅಂತಃಸ್ರೋತವಾಗಿ ಇಟ್ಟುಕೊಂಡು ಲಯಸ್ಪಂದಿಯಾಗಿ ಮುನ್ನಡೆದ ಛಂದಸ್ಸಿನ ಬಹುರೂಪೀ ಆಕೃತಿಯನ್ನು ಕನ್ನಡ ಕಾವ್ಯಪರಂಪರೆ ಅನ್ಯಾದೃಶವಾಗಿ ಬಳಸಿಕೊಂಡಿದೆ. ಅದರಿಂದ ಕಾವ್ಯಕರ್ಮಕ್ಕೆ ಒದಗುವ ಶಕ್ತಿ ಸೌಷ್ಠವವನ್ನು ಕನ್ನಡ ಕವಿಗಳು ಸಾರ್ಥಕವಾಗಿ ಬಳಸಿಕೊಂಡಿದ್ದಾರೆ. ಈ ದೃಷ್ಟಿಯಿಂದ ಕಾವ್ಯಾಭ್ಯಾಸಿಗಳಿಗೆ ಈ ಸಂಪುಟ ಆಕರದಂತಿದೆ.

ವಿಶೇಷವಾಗಿ ಪುತಿನ ಅವರ ಛಂದಸ್ ಪ್ರಯೋಗಗಳನ್ನು ಕುರಿತ ಲೇಖನ ಅವರ ಕಾವ್ಯಾಭ್ಯಾಸಕ್ಕೆ ಅಗತ್ಯ ದಾರಿಯನ್ನು ಸೂಚಿಸುವಷ್ಟು ಸಾರ್ಥಕವಾಗಿದೆ. ಪುತಿನ ಅವರ ಪೆಡಸು ಶಬ್ದಸರಣಿಗಳ ಕಾವ್ಯಭಾಗಗಳನ್ನು ಓದುವುದಕ್ಕೆ ಅವರ ಛಂದೋಗತಿಯನ್ನು ಅನುಸರಿಸುವುದು ಅತ್ಯಗತ್ಯ. ಅದು ಸುಲಭಸಂವಹನಕ್ಕೆ ಅನುವು ಮಾಡಿಕೊಡುತ್ತದೆ. ಕೊನೆಯ ಲೇಖನ 'ಛಂದಶ್ಶಾಸ್ತ್ರಕ್ಷೇತ್ರದ ಸಾಧನೆ'ಯಲ್ಲಿ ಕನ್ನಡದಲ್ಲಿ ಪ್ರಕಟವಾದ ಪ್ರಮುಖ ಛಂದೋಗ್ರಂಥಗಳನ್ನೂ ಲೇಖನಗಳನ್ನೂ ಸಮೀಕ್ಷಿಸಿ ವಿಮರ್ಶಿಸಲಾಗಿದೆ. ಛಂದಸ್‌ಕ್ಷೇತ್ರದಲ್ಲಿ ಮುಂದೆ ನಡೆಯಬೇಕಾದ ಅಧ್ಯಯನದ ವಿಸ್ತಾರ ಅಗತ್ಯಗಳನ್ನೂ ಶಾಸ್ತ್ರಿಗಳು ಸೂಚಿಸಿದ್ದಾರೆ.

೩ ಮತ್ತು ೪ನೆಯ ಸಂಪುಟಗಳಲ್ಲಿ ಸಾಹಿತ್ಯಚರಿತ್ರೆ, ವಿಮರ್ಶೆ, ಸಮೀಕ್ಷೆಗಳಿಗೆ ಸಂಬಂಧಿಸಿದ ಲೇಖನಗಳಿವೆ. ಸಂಪುಟ ೩ರಲ್ಲಿ ಪ್ರಾಚೀನ ಸಾಹಿತ್ಯಕ್ಕೆ, ೪ನೆಯ ಸಂಪುಟದಲ್ಲಿ ಮಧ್ಯಕಾಲೀನ ಮತ್ತು ಆಧುನಿಕ (ನವೋದಯಕಾಲೀನ) ಸಾಹಿತ್ಯಕ್ಕೆ ಸಂಬಂಧಿಸಿದ ಕೆಲವು ಕೃತಿಗಳ ಬಗ್ಗೆ ವಸ್ತು ವಿಚಾರಗಳ ಹಾಗೂ ವ್ಯಕ್ತಿಗಳ ವಿವರಗಳ ಬಗ್ಗೆ ಚರ್ಚಿಸಲಾಗಿದೆ. ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಮೌಲ್ಯಗಳ ಬಗ್ಗೆ ಚಿಂತನೆಗಳಿವೆ.

ಶಾಸ್ತ್ರಿಯವರ ಸತ್ಸಂಪ್ರದಾಯದ ಮನೋಧರ್ಮ ಅವರ ಬರವಣಿಗೆಯಲ್ಲಿ ವ್ಯಕ್ತವಾಗುತ್ತದೆ. ಆವೇಶ ಅಬ್ಬರಗಳಿಲ್ಲದ ಸೂಕ್ಷ್ಮದರ್ಶಿತೆಯ ವಿವೇಕದಲ್ಲಿ, ಸಾಧಾರವಾಗಿ ಮಜಲುಗಳನ್ನು ನೀಡುತ್ತ ನಿರ್ಣಯನೀಡುವುದು ಅವರ ಬರವಣಿಗೆಯ ಲಕ್ಷಣ. ಕೃತಿಯಿಂದ ದೂರ ಉಳಿದು ಅಮೂರ್ತವಾದದ ಸರಣಿಯನ್ನು ಬೆಳಸದೆ, ಮೂಲವನ್ನು ಆಧರಿಸಿಕೊಂಡೇ ವಿಚಾರ ಮಂಡಿಸುವುದು ಅವರ ಕ್ರಮ. ಇದು ಒಂದು ರೀತಿಯಿಂದ ಪ್ರಾಚೀನ ವ್ಯಾಖ್ಯಾನ ವಿಮರ್ಶಾಪದ್ಧತಿಯ ಮುಂದುವರಿಕೆ ಎನ್ನಬಹುದು. ವ್ಯಾಖ್ಯಾನಕ್ರಮ ಅಡಕವಾಗಿ ಸಂಕ್ಷಿಪ್ತತೆಯನ್ನು ಒಳಗೊಳ್ಳುವುದಾದರೆ ಶಾಸ್ತ್ರಿಯವರ ಕ್ರಮ ವಿವರವಿಸ್ತಾರವನ್ನು ಮಂಡಿಸುತ್ತದೆ. ಅದನ್ನು ವಿಶ್ಲೇಷಣಾತ್ಮಕವಿಮರ್ಶೆ ಎನ್ನಬಹುದು.

‘ಕುವೆಂಪು : ಶ್ರೀ ರಾಮಾಯಣ ದರ್ಶನಂ’ ಉತ್ತಮ ತೌಲನಿಕಲೇಖನ. ವಾಲ್ಮೀಕಿ ಮತ್ತು ಕುವೆಂಪು ಕೃತಿಗಳ ಸ್ವರೂಪದ ವಿಶ್ಲೇಷಣೆಯಲ್ಲಿ ಶಾಸ್ತ್ರಿಗಳು ತಾಳುವ ನಿಲುವುಗಳು ಆರೋಗ್ಯಕರವಾದವು. ಯುಗಧರ್ಮದ ಹಿನ್ನೆಲೆಯಲ್ಲಿ ಕುವೆಂಪು ರಾಮಾಯಣ ಮೂಡಿಬಂದ ರೀತಿಯನ್ನು ಶಾಸ್ತ್ರಿಯವರು ವಿಮರ್ಶಿಸುವ ರೀತಿ ವಿವೇಕಪೂರ್ಣವಾದುದು. ಇಲ್ಲಿಯ ಎಲ್ಲ ಲೇಖನಗಳಲ್ಲೂ ಈ ಗುಣವಿದೆ.

ಅನುವಾದದಲ್ಲಿ ಶಾಸ್ತ್ರಿಯವರು ಕನ್ನಡ ಭಾಷೆಯ ಜಾಯಮಾನವನ್ನು ಪರಿಣಾಮಕಾರಿಯಾಗಿ ಸ್ಫುಟಗೊಳಿಸದಿರುವುದು ಆಶ್ಚರ್ಯಕರ. ೨ನೆಯ ಸಂಪುಟದ ಮೊದಲನೆಯ ಲೇಖನ ಎಚ್.ಡಿ.ವೇಲಣಕರ್ ಅವರ ಇಂಗ್ಲಿಷ್ ಲೇಖನದ ಅನುವಾದ. ವೇಲಣಕರ್‌ರ ಅಭಿಪ್ರಾಯ ಕೊನೆಯ ಮಾತಲ್ಲದಿದ್ದರೂ, ಅನೇಕ ಒಳನೋಟಗಳುಳ್ಳ ಪ್ರಭಾವಶಾಲೀ ಸಂಶೋಧನಲೇಖನವದು. ಸಂಶೋಧನಾತ್ಮಕ ಚರ್ಚೆಗೆ, ಮುಂದಿನ ಸಂಶೋಧನೆಗೆ ಆಗ್ರಹ ಒಡ್ಡುವಷ್ಟು ಪರಿಣಾಮಕಾರಿ. ಆದರೆ ಶಾಸ್ತ್ರಿಯವರ ಅನುವಾದ ಇಂಗ್ಲಿಷ್ ವಾಕ್ಯಸರಣಿಯನ್ನು ಯಥಾವತ್ತಾಗಿ ಅನುಸರಿಸಿ ಪೆಡಸಾಗಿದೆ. ಈ ಪೆಡಸುಶೈಲಿ ಕ್ವಚಿತ್ತಾಗಿ ಬೇರೆಡೆಯೂ ತೋರಿದೆ. ಆದರೂ ‘ಶಾಸ್ತ್ರೀಯ’ದ ವಿದ್ವತ್‌ವಿಸ್ತಾರದ ಪರಿಧಿಯಲ್ಲಿ ಅದು ಗೌಣ.

ನಾಲ್ಕೂ ಸಂಪುಟಗಳು ವರ್ಣರಂಜಿತ ರಕ್ಷಾಕವಚದೊಂದಿಗೆ ಸರ್ವಾಂಗಸುಂದರವಾಗಿ ಮುದ್ರಿತವಾಗಿವೆ. ಸಾಹಿತ್ಯಾಸಕ್ತರು ಸಂಗ್ರಹಿಸಿ ಇಟ್ಟುಕೊಳ್ಳಬೇಕಾದ ಸಂಪುಟಗಳಿವು.*

---

* ಕನ್ನಡ ಪ್ರಭ, ೨೧.೧೧.೧೯೯೯

ಶ್ರೀಮುಖ
ಸಂಶೋಧನೆ ವಿದ್ವತ್ತುಗಳ ಪ್ರಾತಿನಿಧಿಕ ಗ್ರಂಥ

ನರಹಳ್ಳಿ ಬಾಲಸುಬ್ರಹ್ಮಣ್ಯ

ಯಾವುದೇ ಕ್ಷೇತ್ರದಲ್ಲಿ ಮಹತ್ವದ ಸಾಧನೆ ಮಾಡಿದ ವ್ಯಕ್ತಿಗಳಿಗೆ ಸಮಾಜ ತೋರಿಸುವ ಮನ್ನಣೆಯನ್ನು ದಾಖಲಿಸುವ ಉದ್ದೇಶದಿಂದ 'ಅಭಿನಂದನ ಗ್ರಂಥ'ಗಳು ಪ್ರಕಟವಾಗುವುದು ಸಹಜ. ಆದರೆ ಕನ್ನಡದಲ್ಲಿ ಅಭಿನಂದನಗ್ರಂಥಗಳಿಗೆ ಒಂದು ಪರಂಪರೆಯೇ ಇದೆ. ವ್ಯಕ್ತಿಯ ಬದುಕು-ಬರಹಗಳನ್ನು ಪರಿಚಯಿಸುವ ದಾಖಲೆಯ ವರದಿಯಾಗದೆ, ಆಯಾಯಾ ಕ್ಷೇತ್ರದ ಸಾಧನೆಯನ್ನು ಸಮೀಕ್ಷಿಸುವ, ಬೆಲೆಗಟ್ಟುವ ಪ್ರಯತ್ನಗಳಾಗಿ ಅಭಿನಂದನಗ್ರಂಥಗಳು ರೂಪುಗೊಂಡಿವೆ.

ಕನ್ನಡ ವಿಮರ್ಶೆ ಎದುರಿಸುತ್ತಿರುವ ಬಹುಮುಖ್ಯ ಸಮಸ್ಯೆಗಳಲ್ಲೊಂದು ಪೂರಕ ಸಾಹಿತ್ಯದ ಕೊರತೆ. ಒಬ್ಬ ಲೇಖಕ ಅಥವಾ ಕೃತಿಯ ಬಗ್ಗೆ ಬರೆಯುವಾಗ ಸಂಬಂಧಿಸಿದ ಎಲ್ಲ ಮಾಹಿತಿಗಳೂ ಸಿಗುವುದು ಕಷ್ಟ. 'ಅಭಿನಂದನ ಗ್ರಂಥ'ಗಳು ಇಂಥ ಕೊರತೆಯನ್ನು ಬಹುಮಟ್ಟಿಗೆ ನೀಗಿಸುತ್ತವೆ. ಸಂಬಂಧಿಸಿದವರ ಬಗೆಗಂತೂ ಎಲ್ಲ ಮಾಹಿತಿಗಳೂ ಸಿಗುತ್ತವೆ. ಅವರ ಸಾಹಿತ್ಯಸಮೀಕ್ಷೆಯೂ ನಡೆದಿರುತ್ತದೆ. ಜೊತೆಗೆ ಕೆಲವು ಅಭಿನಂದನ ಗ್ರಂಥಗಳು ಅನೇಕ ಉಪಯುಕ್ತ ಸಾಹಿತ್ಯಿಕ, ಸಾಂಸ್ಕೃತಿಕ ಲೇಖನಗಳ ಸಂಕಲನಗಳಾಗಿದ್ದು ಹೆಚ್ಚು ಮೌಲಿಕವಾಗಿ ಇರುತ್ತವೆ. ಅಪರೂಪದ ಚಿಂತನೆ, ಚರ್ಚೆ ಇಂಥಲ್ಲಿ ನಡೆದಿರುತ್ತದೆ. ಏನಿಲ್ಲವೆಂದರೂ ಚರ್ಚೆ ಬೆಳೆಸಲು ಅಗತ್ಯವಾದ ಮಾಹಿತಿಗಳಂತೂ ದೊರಕುತ್ತವೆ.

'ಶ್ರೀಮುಖ' ಈ ಪರಂಪರೆಯ ಮುಂದುವರಿಕೆಯೆಂಬಂತೆ ಪ್ರಕಟವಾಗಿದೆ. ಕನ್ನಡ ಭಾಷೆ, ವ್ಯಾಕರಣ, ಛಂದಸ್ಸು, ಗ್ರಂಥಸಂಪಾದನೆ, ನಿಘಂಟುರಚನೆ, ಸಾಹಿತ್ಯಚರಿತ್ರೆ ಇವೇ ಮೊದಲಾದ ಕ್ಷೇತ್ರಗಳಲ್ಲಿ ವಿಶಿಷ್ಟಸಾಧನೆ ಮಾಡಿ ವಿದ್ವದ್‌ವಲಯದಲ್ಲಿ ಪ್ರಸಿದ್ಧರಾಗಿರುವ ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿಗಳಿಗೆ ಅವರ ಗೆಳೆಯರು, ಅಭಿಮಾನಿಗಳು ಗೌರವಿಸಿ, ಅರ್ಪಿಸಿರುವ ಅಭಿನಂದನಗ್ರಂಥ 'ಶ್ರೀಮುಖ'. ಪ್ರಧಾನ್ ಗುರುದತ್ತ, ಎನ್.ಎಸ್.ತಾರಾನಾಥ ಹಾಗೂ ಪದ್ಮಾಶೇಖರ್ ಈ ಬೃಹತ್‌ಗ್ರಂಥವನ್ನು ಅಚ್ಚುಕಟ್ಟಾಗಿ ಸಂಪಾದಿಸಿದ್ದಾರೆ. ಶಾಸ್ತ್ರಿಗಳ ವ್ಯಕ್ತಿತ್ವಕ್ಕೆ ಒಪ್ಪುವಂತಹ ರೀತಿಯಲ್ಲಿ ಈ ಅಭಿನಂದನಗ್ರಂಥ ರೂಪುಗೊಂಡಿದೆ.

'ಶ್ರೀಮುಖ' ಸುಮಾರು ೯೦೦ ಪುಟಗಳಿಗೂ ಮೀರಿದ ಬೃಹತ್‌ಗ್ರಂಥ. ಸಂಪಾದಕರು ಗಾತ್ರದ ದೃಷ್ಟಿಯಿಂದಲ್ಲದೆ, ಮೌಲಿಕತೆಯ ದೃಷ್ಟಿಯಿಂದಲೂ ಈ ಕೃತಿ ಉಪಯುಕ್ತ

ವಾಗುವಂತೆ ರೂಪಿಸಿದ್ದಾರೆ. ಪ್ರತಿಪುಟವೂ ಸಾರ್ಥಕ ಆಗಬೇಕೆಂಬ ಹಂಬಲದಿಂದ ಕೃತಿ ಸಿದ್ಧವಾಗಿದೆ. ಹೀಗಾಗಿ ಈ ಪುಸ್ತಕ ಕೇವಲ ಅಭಿಮಾನದಿಂದ, ಆ ಹೊತ್ತಿಗೆ ಸಿದ್ಧ ವಾದ ಗ್ರಂಥವಾಗದೆ, ಯೋಜಿತರೀತಿಯಲ್ಲಿ ಕನ್ನಡ ಸಂಸ್ಕೃತಿಗೆ ಉಪಯುಕ್ತ ಮಾಹಿತಿ ಗಳನ್ನು ನೀಡುವಲ್ಲಿ ಸಫಲವಾಗಿದೆ.

'ಶ್ರೀಮುಖ'ದಲ್ಲಿ ಐದು ಭಾಗಗಳಿವೆ. ಶುಭಾಶಂಸನ, ಶಾಸ್ತ್ರಿಗಳ ಸಂಶೋಧನ ಬರಹಗಳು, ಸಂಶೋಧನಶಾಸ್ತ್ರ, ಗ್ರಂಥಾಂತರಂಗ ಹಾಗೂ ನೆನಪಿನ ಸುರುಳಿ ಎಂಬ ಈ ಭಾಗಗಳನ್ನು ರೂಪಿಸುವಲ್ಲಿಯೇ ಸಂಪಾದಕರ ವಿಚಕ್ಷಣೆ ವ್ಯಕ್ತವಾಗಿದೆ.

ಮೊದಲ ಭಾಗ 'ಶುಭಾಶಂಸನ' ಶಾಸ್ತ್ರಿಗಳನ್ನು ಇತರರು ತಾವು ಕಂಡಂತೆ ವಿವರಿಸಲು ಮೀಸಲಾದಂಥದು. ಇದರಲ್ಲಿ ಯಾರೆಲ್ಲ, ಏನೆಲ್ಲ ಹೇಳಬಹುದಿತ್ತು! ಹಾಗೆ ನೋಡಿದರೆ ಶಾಸ್ತ್ರಿಗಳ ನಾಲ್ಕು ದಶಕಗಳ ಅಧ್ಯಾಪಕವೃತ್ತಿಯಲ್ಲಿ ಅವರು ಪಡೆದ ಅಭಿಮಾನಿ ಶಿಷ್ಯ ಸಮೂಹವೇ ಅಪಾರ. ಆದರೆ ಅತ್ಯಂತ ಸಂಯಮದಿಂದ, ಔಚಿತ್ಯಪೂರ್ಣವಾಗಿ ಕೇವಲ ಏಳು ಜನರ ಅನ್ನಿಸಿಕೆಗಳು ಮಾತ್ರ ಇಲ್ಲಿ ದಾಖಲಾಗಿರುವುದು ಅರ್ಥಪೂರ್ಣ. ಶಾಸ್ತ್ರಿಗಳ ಅಧ್ಯಾಪಕರಾದ ತ.ಸು.ಶಾಮರಾಯರು, ಗೆಳೆಯರಾದ ಕೆ.ಕೃಷ್ಣಮೂರ್ತಿಯವರು ಹಾಗೂ ಅವರ ಸಹಪಾಠಿಗಳಾಗಿದ್ದ ಎಂ.ಚಿದಾನಂದಮೂರ್ತಿ, ಎಸ್.ಎಂ.ವೃಷಭೇಂದ್ರಸ್ವಾಮಿ, ಎಂ.ಎಂ.ಕಲಬುರ್ಗಿ ಮತ್ತು ಸುಜನಾ ಅವರ ಕಿರುಲೇಖನಗಳಿವೆ. ಇವುಗಳ ಜೊತೆಗೆ ಹಾ.ಮಾ.ನಾಯಕರು ಈ ಮೊದಲೇ 'ಸಲ್ಲಾಪ'ದಲ್ಲಿ ಬರೆದಿದ್ದ ಶಾಸ್ತ್ರಿಗಳ ಕುರಿತ ಲೇಖನ ಇಲ್ಲಿ ಸೇರಿದೆ.

೧೯೫೦-೫೩ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಶಾಸ್ತ್ರಿಗಳು ತಮ್ಮ ಆನರ್ಸ್ ಮಾಡಿದ ಅವಧಿ. ಅವರ ತರಗತಿಯಲ್ಲಿದ್ದವರು ಹದಿನಾಲ್ಕು ಜನ. ಅವರಲ್ಲಿ ನಾಲ್ಕು ಜನ ತಮ್ಮ ಅನ್ನಿಸಿಕೆಗಳನ್ನು ಇಲ್ಲಿ ದಾಖಲಿಸಿದ್ದಾರೆ. ಇಲ್ಲಿನ ಅವರ ನೆನಪುಗಳು ಶಾಸ್ತ್ರಿಗಳ ವ್ಯಕ್ತಿತ್ವವನ್ನು ವಿವರಿಸುವುದು ಮಾತ್ರವಲ್ಲದೆ, ಆ ಕಾಲದ ಪರಿಸರದ ಚಿತ್ರವನ್ನೂ ನೀಡುತ್ತವೆ. ಶಾಸ್ತ್ರಿಗಳು ಶಾಸ್ತ್ರಕ್ಕೆ ಒಲಿದವರು. ಅವರ ಸಹಾಧ್ಯಾಯಿ ಗಳಾದವರೂ ಶಾಸ್ತ್ರಸಂಗತಿಗಳಿಗೇ ಒಲಿದಿದ್ದರೆಂಬುದು ಕುತೂಹಲ ಮೂಡಿಸುತ್ತದೆ. ಒಂದೇ ತರಗತಿಯಲ್ಲಿ ಓದಿದವರು ಮುಂದೆ ಎಷ್ಟು ಜನ ಮಹತ್‌ಸಾಧನೆ ಮಾಡ ದವರ ಸಾಲಿಗೆ ಸೇರುತ್ತಾರೆ? ಶಾಸ್ತ್ರಿಗಳ ವಿದ್ಯಾರ್ಥಿದೆಸೆಯ ತಂಡ ಇಂದು ನಾಡಿನ ವಿದ್ವಜ್ಜನರ ತಂಡವೂ ಹೌದು ಎಂಬುದು ಸಂತೋಷದ ಸಂಗತಿ.

ಕಡೆಯ ಭಾಗ 'ನೆನಪಿನ ಸುರುಳಿ'ಯಲ್ಲಿ ಶಾಸ್ತ್ರಿಗಳು ತಮ್ಮ ಬದುಕಿನ ಬಗ್ಗೆ 'ಹಿನ್ನೋಟ' ಹರಿಸಿದ್ದಾರೆ. ಅವರೇ ಹೇಳುವಂತೆ "ನನ್ನ ಈ ೬೪ನೆಯ ವಯಸ್ಸಿನಲ್ಲಿ, ಕಳೆದುಹೋದ ವರ್ಷಗಳ ಕೆಲವು ಘಟನೆಗಳನ್ನೂ ವ್ಯಕ್ತಿಗಳನ್ನೂ ನಾನು, ನೆನಪಿನ ಸುರುಳಿಗಳನ್ನು ಬಿಡಿಸುತ್ತ, ಹೊಸದಾಗಿ ಎಂಬಂತೆ ಕಾಣುವ, ಕಾಣಿಸುವ ಪ್ರಯತ್ನ ಮಾಡಿದ್ದೇನೆ. ನಡೆದ ಎಲ್ಲ ಘಟನೆಗಳನ್ನೂ ನನ್ನ ಅನುಭವವಲಯ ಪ್ರವೇಶಿಸಿದ

ಎಲ್ಲ ವ್ಯಕ್ತಿಗಳನ್ನೂ ಈ ಬರಹದಲ್ಲಿ ನಾನು ತಂದಿಲ್ಲ. ತರುವುದು ಸಾಧ್ಯವಿತ್ತಾದರೂ, ಆ ಧೈರ್ಯ ನನಗಿಲ್ಲ. ಬರಹದಲ್ಲಿ ತಂದಿರುವಷ್ಟು ಭಾಗವಾದರೂ ಯಾರಿಗೆ ಏನು ಮುಜುಗರವುಂಟುಮಾಡುವುದೋ ಎಂಬ ಅಳುಕಿನಿಂದಲೇ ತೇಲಿಸಿ ಬರೆದುದಾಗಿದೆ." ಶಾಸ್ತ್ರಿಗಳ ಈ ಮಾತುಗಳು ಅವರ ಸೌಜನ್ಯ ವಿನಯಗಳನ್ನು ತೋರಿಸುವುದಷ್ಟೇ ಮಾತ್ರವಲ್ಲ, ಆತ್ಮಚರಿತ್ರೆಯನ್ನು ಬರೆಯುವ ಕಷ್ಟವನ್ನೂ ಸೂಚಿಸುತ್ತದೆ. ದಾಖಲೆ ರೂಪದ ಈ ಬರಹದಲ್ಲಿ ನಮ್ಮ ಗಮನ ಸೆಳೆಯುವುದು 'ಬಡತನ ಸಾಧನೆಗೆ ಅಡ್ಡಿಯಾಗಬೇಕಿಲ್ಲ' ಎಂಬ ಸಂಗತಿ. ಬಡತನ ವ್ಯಕ್ತಿತ್ವವನ್ನು ಕುಗ್ಗಿಸಿಬಿಡುವುದೇ ಹೆಚ್ಚು. ಆದರೆ ಒಳಗಿನ ಸಾಧನೆಯ ಹಂಬಲ ದೃಢವಾಗಿದ್ದರೆ ಮಹತ್ವದ್ದನ್ನು ಸಾಧಿಸಬಹುದೆಂಬುದನ್ನು ಇಂಥ ಅನೇಕ 'ಕಥನ'ಗಳು ನಮಗೆ ಮತ್ತೆ ಮತ್ತೆ ನೆನಪುಮಾಡಿಕೊಡುತ್ತವೆ. ಜೊತೆಗೆ ಎಲ್ಲ ಮಿತಿಗಳ ನಡುವೆಯೂ ವಿದ್ಯೆ ಕಲಿಯಲು ಅಗತ್ಯವಾದ ಒಂದು ವಾತಾವರಣ, ಪ್ರೋತ್ಸಾಹದ ವಾತಾವರಣ ಶಿಕ್ಷಣಕ್ಷೇತ್ರದಲ್ಲಿತ್ತು ಎಂದು ತೋರುತ್ತದೆ. ಆಧುನಿಕಶಿಕ್ಷಣ ಎಲ್ಲರಿಗೂ ದೊರಕುವುದು ಸುಲಭವಲ್ಲದಿದ್ದರೂ, ಕಲಿಯಲು ಬಂದವರಿಗೆ ಅಗತ್ಯ ಅನುಕೂಲಗಳನ್ನು ಸಮಾಜ ಒದಗಿಸುತ್ತಿತ್ತು. 'ವಾರಾನ್ನ ಪದ್ಧತಿ' ಇಂಥದೊಂದು ಮನೋಭಾವದ ಸಂಕೇತವಾಗಿ ತೋರುತ್ತದೆ. ಶಾಸ್ತ್ರಿಗಳಂತೆ ಆ ಕಾಲದ ಅನೇಕರು, ಇಂದು ಪ್ರಸಿದ್ಧರಾಗಿ ಇರುವವರು, ಆ ಪದ್ಧತಿಯ ಅನುಕೂಲ ಪಡೆದಿರುವುದನ್ನು ನಾವು ಕಾಣಬಹುದಾಗಿದೆ. ಸಾಮಾಜಿಕ ಅಧ್ಯಯನ ಮಾಡುವವರಿಗೆ ಇವೆಲ್ಲವೂ ಮಾಹಿತಿಗಳಾಗಬಲ್ಲವು. ಮತ್ತೊಂದು ಹೇಳಲೇಬೇಕಾದ ಮಾತೆಂದರೆ, ಆಗಿನ ಗುರುಪರಂಪರೆಯ ಬಗ್ಗೆ ನಾವು ಕಾಣುವ ಚಿತ್ರ. ಯಾರೇ ಮಾತನಾಡಿದರೂ ಗುರುಪರಂಪರೆಯನ್ನು ತುಂಬುಗೌರವದಿಂದ ಸ್ಮರಿಸುತ್ತಾರೆ. ಅವರ ವ್ಯಕ್ತಿತ್ವದಲ್ಲಿನ ಭಿನ್ನತೆ ಏನೇ ಇರಲಿ, ಅವರೆಲ್ಲರಿಗೂ ತಮ್ಮದೇ ಆದ ವ್ಯಕ್ತಿತ್ವವಿತ್ತು, ಪಾಂಡಿತ್ಯವಿತ್ತು ಎಂಬ ಅಂಶ ಮನದಟ್ಟು ಆಗುತ್ತದೆ. ಇಂಥದೊಂದು ಪರಂಪರೆಯನ್ನು ನಾವೀಗ ಕಾಣಬಲ್ಲೆವೇ? ಈ ಬಗ್ಗೆ ಚರ್ಚೆ ಅನಗತ್ಯ. ಆದರೆ ಪಾಂಡಿತ್ಯ, ವಿದ್ವತ್ತಿಗೆ ಮನ್ನಣೆ ಕಡಿಮೆಯಾಗುತ್ತಿರುವುದಂತೂ ಸತ್ಯ. ಶಿಕ್ಷಣಕ್ಷೇತ್ರದ ಬಗ್ಗೆ ಆಸಕ್ತಿಯಿರುವವರು ಈ ಸಂಗತಿಯತ್ತ ಗಂಭೀರವಾಗಿ ಆಲೋಚಿಸುವ ಅಗತ್ಯವಿದೆ. ನಮ್ಮ ವಿಶ್ವವಿದ್ಯಾಲಯಗಳನ್ನೂ ಶೈಕ್ಷಣಿಕ ವಾತಾವರಣ ಹೇಗೆ ಹದಗೆಡಿಸುತ್ತಿದೆ, ಅಧ್ಯಯನಶೀಲರು ಹೇಗೆ ಭ್ರಮನಿರಸನಗೊಳ್ಳುತ್ತಿದ್ದಾರೆ ಎಂಬ ಸಂಗತಿಗಳ ಬಗ್ಗೆ ಸಾಮಾಜಿಕ ಎಚ್ಚರ ಮೂಡಬೇಕಾಗಿದೆ.

ಇಲ್ಲಿಯೇ ಇನ್ನೂ ಒಂದು ಅಂಶವನ್ನು ಪ್ರಸ್ತಾಪಿಸಬೇಕು. ಶಾಸ್ತ್ರಿಗಳೇ ಇದನ್ನು ಹೇಳುತ್ತಾರೆ. "ನಾನು ಸೃಜನಶೀಲ ಲೇಖಕನಲ್ಲವೆಂಬುದರಿಂದ ಅವರ, ಬೇರೆಬೇರೆ ಓದುಗರ ಪ್ರತಿಕ್ರಿಯೆ, ಮೆಚ್ಚುಗೆ ನಾನು ನಿರೀಕ್ಷಿಸಲಾರೆ. ಶಾಸ್ತ್ರವಿಚಾರದ ಅಧ್ಯಯನಗಳಿಗೆ ಜನಪ್ರಿಯತೆಯ ಆಕರ್ಷಣೆಯಿಲ್ಲ. ಈ ಶತಮಾನದ ಆರಂಭದ ದಶಕಗಳಲ್ಲಿ ಸಾಹಿತ್ಯಾಸಕ್ತರಿಗೆ ಆ ಅಧ್ಯಯನಗಳಲ್ಲಿ ಇರುತ್ತಿದ್ದ ತೀವ್ರವಾದ ಆಸಕ್ತಿ ಈಗ ಉಳಿದಿಲ್ಲ.

ಆದರೆ ಅದು ನಾನು ಒಲಿದ ಕ್ಷೇತ್ರ, ನನ್ನ ಜೀವನದ ಜೀವಾಳವಾದ ಕನ್ನಡನುಡಿಯ ವೃದ್ಧಿ ವರ್ಚಸ್ಸುಗಳಿಗೆ ಅಗತ್ಯವೆಂದು ತಿಳಿದ ಪುಣ್ಯಕ್ಷೇತ್ರ. ಅಲ್ಲಿ ಸಂಚರಿಸಿ, ನಾನು ವಿಸ್ಮಯಕರವಾದ ಹಲವು ಚೆಲುವಿನ ತಾಣಗಳನ್ನು ಕಂಡಿದ್ದೇನೆ; ಅಲ್ಲಿಯೇ ನನ್ನವೆಂದು ಕೆಲವು ಹೂವಿನ ಗಿಡಗಳನ್ನು ನೆಟ್ಟಿದ್ದೇನೆ."

ಎರಡು ಅಂಶಗಳನ್ನಿಲ್ಲಿ ನಾವು ಗಮನಿಸಬೇಕು. ಮೊದಲನೆಯದು ಶಾಸ್ತ್ರವಿಚಾರಗಳ ಅಧ್ಯಯನಗಳಿಗೆ ಜನಪ್ರಿಯತೆಯ ಆಕರ್ಷಣೆಯಿಲ್ಲವೆಂಬುದು. ಈ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ಈ ವಾಸ್ತವಸತ್ಯದ ಅರಿವಿರಬೇಕಾಗುತ್ತದೆ. ಜನಪ್ರಿಯತೆಯ ಮೋಹದ ಜಾಲದಲ್ಲಿ ಸಿಲುಕಿರುವ ಆಧುನಿಕ ಜಗತ್ತು ಇಂಥ ಅಧ್ಯಯನಗಳನ್ನು ಉಳಿಸಿಕೊಳ್ಳುವ ಬಗೆ ಹೇಗೆ? ಶ್ರದ್ಧೆ, ಆಸಕ್ತಿ ಹಾಗೂ ನಿಜವಾದ ಪ್ರೀತಿ ಇಲ್ಲದಿದ್ದರೆ ಕೆಲವು ಅಧ್ಯಯನ ವಿಭಾಗಗಳೇ ಇಲ್ಲವಾಗಿಬಿಡುತ್ತವೆ. ಎಲ್ಲವನ್ನೂ ವ್ಯಾವಹಾರಿಕಲಾಭದ ದೃಷ್ಟಿಯಿಂದ ನೋಡುವ ಆಧುನಿಕಮನೋಭಾವದ ಸಂದರ್ಭದಲ್ಲಿ 'ಅಧ್ಯಯನನಿಷ್ಠೆ'ಯನ್ನು ಕಾಪಾಡಿಕೊಳ್ಳುವುದು ಯುವಮನಸ್ಸುಗಳು ಎದುರಿಸಬೇಕಾದ ಒಂದು ಸವಾಲೇ ಸರಿ.

ನಾನು ಮೇಲೆ ಹೇಳಿದ ಕಾರಣ ಸರಳವಾದದ್ದು, ಸರ್ವಸಮ್ಮತವಾದುದು. ಆದರೆ ನಮ್ಮ ಶಾಸ್ತ್ರವಿಚಾರ ಅಧ್ಯಯನಗಳು ಎದುರಿಸುತ್ತಿರುವ ಸಮಸ್ಯೆಗೆ ಮತ್ತೊಂದು ನೆಲೆಯಿದೆ. ನಮ್ಮ ವಿದ್ವಾಂಸರು ಆ ಬಗ್ಗೆ ಚಿಂತಿಸಬೇಕಾಗಿದೆ. ಯಾವುದೇ ಅಧ್ಯಯನವಾಗಲೀ 'ಸಮಕಾಲೀನ ಸಮಾಜ'ದೊಡನೆ ಅರ್ಥಪೂರ್ಣಸಂಬಂಧ ಸೃಷ್ಟಿಸಿಕೊಳ್ಳದಿದ್ದರೆ ಅಂತಹ ಅಧ್ಯಯನ ಮಹತ್ವದ್ದೆನ್ನಿಸುವುದಿಲ್ಲ. ವಿದ್ವತ್ತಿಗೆ, ಸಂಶೋಧನೆಗೆ ಮಹತ್ವ ಕಡಿಮೆಯಾಗುತ್ತಿದೆ ಎಂದು ಹೇಳುವಾಗ ನಮ್ಮ ವಿದ್ವತ್ತು, ಪಾಂಡಿತ್ಯ 'ಸಮಕಾಲೀನ ಸಮಾಜ'ಕ್ಕೆ ಹೇಗೆ ಪ್ರಸ್ತುತವಾಗುತ್ತದೆ ಎಂಬ ಬಗ್ಗೆ ನಾವು ಯೋಚಿಸಬೇಕಾಗುತ್ತದೆ.

'ಸಂಶೋಧನಶಾಸ್ತ್ರ' ಎಂಬ ವಿಭಾಗ ಈ ಹಿನ್ನೆಲೆಯಲ್ಲಿ ಈ ಕೃತಿಯ ಬಹು ಮುಖ್ಯ ಭಾಗ. ಕಾವ್ಯಮೀಮಾಂಸೆ, ಜಾನಪದ, ವ್ಯಾಕರಣ, ಛಂದಸ್ಸು, ಸಾಹಿತ್ಯಚರಿತ್ರೆ, ಶಾಸನ, ಗ್ರಂಥಸಂಪಾದನೆ, ಅಂತರ್ವಿಭಾಗೀಯ ಸಂಶೋಧನೆ ಹೀಗೆ ಅನೇಕಕ್ಷೇತ್ರಗಳಲ್ಲಿ ಕನ್ನಡದಲ್ಲಿ ನಡೆದಿರುವ ಸಂಶೋಧನೆಯ ಸ್ವರೂಪವನ್ನು ಇಲ್ಲಿನ ಲೇಖನಗಳು ನಮಗೆ ತಿಳಿಸಿಕೊಡುತ್ತವೆ. ಸಂಶೋಧನೆಯ ಆತಂಕಗಳು, ಸಂಶೋಧನೆಯ ವಿವಿಧ ಹಂತಗಳು, ಕ್ಷೇತ್ರಕಾರ್ಯವಿಧಾನಗಳು ಈ ಬಗ್ಗೆಯೂ ನಮಗೆ ಮಾಹಿತಿಗಳು ಸಿಗುತ್ತವೆ. ಇಲ್ಲಿನ ಲೇಖನಗಳಲ್ಲಿನ ಸಾಮಾನ್ಯಸ್ವರೂಪವೆಂದರೆ ಸಮೀಕ್ಷೆಯ ಧಾಟಿ.

ಇಂದು ಸಂಶೋಧನೆ ಎದುರಿಸುತ್ತಿರುವ ಸವಾಲಿನ ಸ್ವರೂಪ ಎಂಥದು? ಸಂಶೋಧಕರ ಎದುರಿಗಿರುವ ಸಮಸ್ಯೆಗಳಾವುವು? ಸಂಶೋಧನೆ ಹಿಡಿಯಬೇಕಾದ ಹಾದಿ ಯಾವುದು? ಇಂತಹ ಮೂಲಭೂತ ಪ್ರಶ್ನೆಗಳನ್ನು ನಾವಿಂದು ಕೇಳಿಕೊಳ್ಳಬೇಕಾಗಿದೆ. ಈ ಪ್ರಶ್ನೆಗಳಿಗೆ ಇಲ್ಲಿನ ಲೇಖನಗಳು ಮುಖಾಮುಖಿಯಾದಂತಿಲ್ಲ.

'ಸಂಶೋಧನೆ' ಸೃಜನಶೀಲವಾಗಲು ಆ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವವರು ಏನು ಮಾಡಬೇಕೆಂಬುದರ ಬಗ್ಗೆ ಅಂಥ ಗ್ರಂಥಗಳಲ್ಲಾದರೂ ಚರ್ಚೆಯಾಗಬೇಕಿತ್ತು ಎಂದು ನಿರೀಕ್ಷಿಸುವುದು ಸಹಜ. ಏಕೆಂದರೆ ಇಡೀ ಗ್ರಂಥವೇ ಒಂದು ರೀತಿಯಲ್ಲಿ ಸಂಶೋಧನಕ್ಷೇತ್ರವನ್ನು, ವಿದ್ವತ್‌ಕ್ಷೇತ್ರವನ್ನು ಪ್ರತಿನಿಧಿಸುವಂತೆ ಇದರ ವಿನ್ಯಾಸವನ್ನು ರೂಪಿಸಲಾಗಿದೆ.

ಕಾವ್ಯಮೀಮಾಂಸೆ, ಭಾಷಾವಿಜ್ಞಾನ ಮೊದಲಾದ ಕ್ಷೇತ್ರಗಳಲ್ಲಂತೂ 'ಸಂಶೋಧನೆ'ಗೆ ವಿಪುಲ ಅವಕಾಶವಿದೆ. 'ಸಂಶೋಧನೆ' ಎಂದರೆ ಶೋಧಿಸುವುದು, ಕಾಲನಿರ್ಣಯ ಸ್ಥಳನಿರ್ಣಯ ಮಾಡುವುದು ಎಂಬಂತಹ ಪರಿಕಲ್ಪನೆಯಿಂದ ನಾವು ಹೊರಬರಬೇಕಿದೆ. 'ಸಂಶೋಧನೆ' ಇಂದು 'ಅನುಸಂಧಾನ'ದ ಮಾರ್ಗ ಹಿಡಿಯಬೇಕಾಗಿದೆ. 'Interpret ation' ಇಂದು ಸಂಶೋಧನೆ ಹಿಡಿಯಬೇಕಾದ ಹಾದಿ ಅನ್ನಿಸುತ್ತದೆ. ಕುರ್ತಕೋಟಿ ಯವರು ಇತ್ತೀಚೆಗೆ ಮಾತುಕತೆಯ ನಡುವೆ ಹೇಳುತ್ತಿದ್ದರು- ನಮ್ಮ ಹಳಗನ್ನಡಕಾವ್ಯ ಗಳನ್ನು ಇಡಿಯಾಗಿ ಓದಿದವರು ಸಿಗುವುದೇ ಕಷ್ಟ. ಎಲ್ಲರೂ ಸಂಗ್ರಹ ಓದಿದವರೇ. ಒಳ್ಳೆಯ ಕೆಲಸ ಎಂಬ ಹೆಸರಿನಲ್ಲಿ ಸಂಗ್ರಹ ಪ್ರಕಟಿಸಿ, ನಮ್ಮ ಅಧ್ಯಯನವನ್ನು ಸಂಗ್ರಹಕ್ಕೇ ಸೀಮಿತಗೊಳಿಸಿಬಿಟ್ಟದ್ದು ದುರ್ದೈವವೇ ಸರಿ. ಕೆಲವೊಮ್ಮೆಯಂತೂ ನಮ್ಮ ಅಧ್ಯಯನ ಕೆಲವು ಪದ್ಯಗಳಿಗೆ, ಕೆಲವು ಪ್ರಸಂಗಗಳಿಗೆ ಸೀಮಿತವಾಗಿಬಿಟ್ಟಿರುತ್ತದೆ. ಹರಿಶ್ಚಂದ್ರಕಾವ್ಯ, ಪಂಪರಾಮಾಯಣ ಯಾವುದೇ ಆಗಲಿ ಮೂಲಕ್ಕೆ ಹೋಗಿ, ಇಡೀ ಕಾವ್ಯ ಓದಿ ಹೊಸಬಗೆಯಲ್ಲಿ ಅರ್ಥೈಸುವುದು ಇಂದಿನ ಸಂಶೋಧನೆಯ ಅಗತ್ಯಗಳ ಲ್ಲೊಂದು. ಸಂಶೋಧನೆ ಹಿಡಿಯಬೇಕಾದ ಒಂದು ಸಾಧ್ಯತೆ ಇದು. ಕನ್ನಡ ಭಾಷೆಯನ್ನು ವಚನಕಾರರು ಹೇಗೆ ಸೃಜನಾತ್ಮಕವಾಗಿ ಬಳಸಿಕೊಂಡರು, ಸಂಸ್ಕೃತದೊಡನೆ ಅವರು ಹೂಡಿದ ಜಗಳದ ಸ್ವರೂಪವೇನು, ಇದರಿಂದ ಕನ್ನಡಭಾಷೆ ಪಡೆದುಕೊಂಡದ್ದೇನು? ಇತ್ಯಾದಿ ಸಂಗತಿಗಳೂ ವಿಸ್ತೃತಚರ್ಚೆಗೆ ಒಳಗಾಗಬೇಕಿದೆ. ಸಾಹಿತ್ಯ ವಿಮರ್ಶೆ ಸಂಶೋಧನೆ ಇವುಗಳ ಅರ್ಥಪೂರ್ಣಸಂಬಂಧದ ಬಗ್ಗೆಯೂ ನಾವು ಆಲೋಚಿಸಬೇಕಿದೆ.

ಶಾಸ್ತ್ರಿಗಳ ಎಲ್ಲ ಸಂಶೋಧನಲೇಖನಗಳೂ ಶಾಸ್ತ್ರಿಗಳ ಸಂಶೋಧನಬರಹಗಳು ಎಂಬ ವಿಭಾಗದಲ್ಲಿ ಸೇರಿಲ್ಲವೆಂದು ಸಂಪಾದಕರೇ ಸ್ಪಷ್ಟಪಡಿಸಿದ್ದಾರೆ. ಇಲ್ಲಿ ಶಾಸ್ತ್ರಿಗಳ ಅಸಂಕಲಿತವಾದ ಮಹತ್ವದ ೪೭ ಸಂಶೋಧನಲೇಖನಗಳು ಸೇರಿವೆ. ಅಭಿನಂದನ ಗ್ರಂಥದ ಸ್ವರೂಪದಲ್ಲಿ ಈ ಭಾಗ ಸೇರಿಸಿರುವುದೂ ಸಹ ತುಂಬ ಉಚಿತವಾಗಿದೆ. ಶಾಸ್ತ್ರಿಗಳ ಅಸಂಕಲಿತವಾದ, ಮುಖ್ಯವಾದ ಸಂಶೋಧನಬರಹಗಳು ಇಲ್ಲಿ ನಮಗೆ ಒಂದೆಡೆ ಸಿಕ್ಕಂತಾಗುತ್ತದೆ. ಇಲ್ಲಿನ ಸಂಶೋಧನಲೇಖನಗಳನ್ನು ನೋಡಿದಾಗ ಶಾಸ್ತ್ರಿಗಳಿಗೆ ಪ್ರಾಚೀನ ಸಾಹಿತ್ಯದ ಬಗ್ಗೆಯೇ ಆಸಕ್ತಿ ಎಂಬುದು ಸ್ಪಷ್ಟ. ಈ ನಲವತ್ತೇಳು ಲೇಖನಗಳಲ್ಲಿ ಕುವೆಂಪು ಅವರ 'ರಾಮಾಯಣ ದರ್ಶನಂ' ಬಿಟ್ಟರೆ ಆಧುನಿಕಸಾಹಿತ್ಯದ ಬಗ್ಗೆ ಮತ್ತೊಂದು ಲೇಖನವಿಲ್ಲ. ನನ್ನ ಕುತೂಹಲವೆಂದರೆ ಶಾಸ್ತ್ರಿಗಳಿಗೊಬ್ಬರಿಗೆ ಅನ್ವಯಿಸಿ

ಮಾತ್ರವಲ್ಲ, ಒಟ್ಟಾರೆ ಸಂಶೋಧಕರಿಗೇ ಅನ್ವಯಿಸಿ ಹೇಳಬಹುದಾದ ಮಾತೆಂದರೆ, ಆಧುನಿಕತೆಯ ಬಗ್ಗೆ ಏಕೆ ಅವರಿಗೆ ಆಸಕ್ತಿಯಿಲ್ಲ? ಸಂಶೋಧನೆ ಎಂದರೆ ಪ್ರಾಚೀನ ಎಂದೇ ಅರ್ಥವೇ? ಸಂಶೋಧನೆಯ ನಮ್ಮ ಪರಿಕಲ್ಪನೆಯಲ್ಲಿಯೇ ಹೀಗಾಗಿದೆಯೇ? ಹಿರಿಯ ತಲೆಮಾರಿನವರಿರಲಿ, ಈಗ ಸಂಶೋಧನಕ್ಷೇತ್ರದಲ್ಲಿ ಆಸಕ್ತಿ ಇರುವವರೂ ಈ ಬಗ್ಗೆ ಚಿಂತಿಸಬೇಕಾಗಿದೆ. ಸಾಹಿತ್ಯವನ್ನು ಸಮಗ್ರವಾಗಿ ನೋಡುವ ಶಕ್ತಿಯನ್ನೇ ನಾವು ಕಳೆದುಕೊಂಡುಬಿಡುತ್ತಿದ್ದೇವೆಯೇ? ಇದು ಆಧುನಿಕ ಸಾಹಿತ್ಯವನ್ನು ಅಧ್ಯಯನ ಮಾಡುತ್ತಿರುವವರಿಗೂ ಅನ್ವಯಿಸುವಂಥದು. ಪ್ರಾಚೀನ ಸಾಹಿತ್ಯದ ಬಗ್ಗೆ ಇವರ ತಿಳಿವಳಿಕೆ ಯಾವ ಮಟ್ಟದ್ದು? ನಮ್ಮ ಸಾಹಿತ್ಯಪರಂಪರೆಯ ಬಗ್ಗೆ ಆಧುನಿಕರಿಗೂ ಇರುವ ಅಜ್ಞಾನ ಗೊತ್ತಿರುವಂಥದೇ.

ಶಾಸ್ತ್ರಿಗಳ ಲೇಖನಗಳಲ್ಲಿ ನಾವು ಗಮನಿಸಲೇಬೇಕಾದ ಹಲವಾರು ಅಂಶಗಳಿವೆ. ಹಳಗನ್ನಡ ಕವಿಗಳಲ್ಲಿ ಶೃಂಗಾರ, ವಿನೋದ, ಧರ್ಮಚಿಂತನೆ, ಸಾಮಾಜಿಕನಿಲುವು, ಜೀವನದರ್ಶನ ಹೇಗೆ ಅಭಿವ್ಯಕ್ತಿ ಪಡೆದಿತ್ತು ಎಂಬ ಬಗ್ಗೆ ಅವರು ಅಧ್ಯಯನಪೂರ್ಣ ಮಾಹಿತಿಗಳನ್ನು ನಮಗೆ ಒದಗಿಸುತ್ತಾರೆ. ಇದನ್ನು ನಾವು ಚರ್ಚೆಯ ಮೂಲಕ ಬೆಳೆಸಲು ಅವಕಾಶವಿದೆ. ಶಾಸ್ತ್ರಿಗಳ ಈ ಲೇಖನಗಳ ಬಗ್ಗೆ ಪ್ರತ್ಯೇಕವಾದ ಲೇಖನವನ್ನೇ ಬರೆದಾಗ ಅವುಗಳ ಮಹತ್ತ್ವವನ್ನು ಚರ್ಚಿಸಲು ಸಾಧ್ಯ.

ಗ್ರಂಥಾಂತರಂಗ ಶಾಸ್ತ್ರಿಗಳ ಕೃತಿಗಳ ಅವಲೋಕನ. ಇವು ಈಗಾಗಲೇ ಪ್ರಕಟವಾಗಿರುವಂಥವು. ಅವುಗಳಲ್ಲಿ ಕೆಲವನ್ನು ಆಯ್ದು ಇಲ್ಲಿ ಸಂಕಲಿಸಲಾಗಿದೆ. ಇಲ್ಲಿಯೂ ಈ ಕೃತಿಗೆಂದೇ ಬರೆದ ಲೇಖನಗಳಿಲ್ಲದಿರುವುದು ಗಮನಾರ್ಹ. ಬೇರೆ ಬೇರೆ ಸಂದರ್ಭಗಳಲ್ಲಿ ಇವು ಬರೆದ ಲೇಖನಗಳಾದ್ದರಿಂದ ಅವೆಲ್ಲವೂ ಸಾಕಷ್ಟು ವಸ್ತುನಿಷ್ಠವಾಗಿಯೇ ಇರುವುದು ಸಾಧ್ಯ. ಶಾಸ್ತ್ರಿಗಳ ಸಾಹಿತ್ಯಸಾಧನೆಯ ಅಧ್ಯಯನಕ್ಕೆ ಇವು ನೆರವಾಗುತ್ತವೆ.

'ಶ್ರೀಮುಖ' ಒಂದು ಕಾಲಮಾನದ ವಿದ್ವತ್ತಿಗೆ ಸಂದ ಮನ್ನಣೆ. ವಿದ್ವತ್ತು, ಪಾಂಡಿತ್ಯ ಮೊದಲಾದವುಗಳ ಬಗ್ಗೆ ಅನುಮಾನವಿರುವ ಸಂದರ್ಭದಲ್ಲಿ, ಅವು ಶುಷ್ಕವೆಂದೂ ಒಳನೋಟಗಳಿಲ್ಲದವೆಂದೂ ಹೇಳುತ್ತಿರುವ ಸಂದರ್ಭದಲ್ಲಿ ಈ ಗ್ರಂಥ ಪ್ರಕಟವಾಗಿದೆ; ಸಂಪಾದಕರು ಇದನ್ನು ಶ್ರದ್ದೆಯಿಂದ, ಅಚ್ಚುಕಟ್ಟಾಗಿ, ಔಚಿತ್ಯದ ಹದಗೆಡದಂತೆ ಸಂಪಾದಿಸಿ ಪ್ರಕಟಿಸಿದ್ದಾರೆ.

'ಪಾಂಡಿತ್ಯ'ದ ಪರಿಕಲ್ಪನೆಯ ಚರ್ಚೆಗೆ ಈ ಕೃತಿ ಈಗ ಅವಕಾಶ ಮಾಡಿಕೊಡಲಿ ಎಂದು ಆಶಿಸುತ್ತೇನೆ.*

---

* ಮಯೂರ, ನವೆಂಬರ್ ೧೯೯೭

ಕನ್ನಡ ಭಾಷಾಲಕ್ಷಣಶಾಸ್ತ್ರಮಕುಟ

ಕೊತ್ತಪಲ್ಲಿ ಶೇಖರ

ಪ್ರಾಚೀನ ಭಾಷೆ, ಛಂದಸ್ಸು, ಅಲಂಕಾರ ಮುಂತಾದ ವಿಷಯಗಳನ್ನು ತಮ್ಮ ವಿಶೇಷ ಆಸಕ್ತಿಯ ಕ್ಷೇತ್ರವನ್ನಾಗಿ ಮಾಡಿಕೊಂಡು, ಕನ್ನಡ ಭಾಷೆಯ, ಶಾಸ್ತ್ರಸಾಹಿತ್ಯದ ಶೋಧನೆ ಬರವಣಿಗೆಯಲ್ಲಿ ಪರಿಶ್ರಮಪಡುತ್ತ, ದೀರ್ಘಕಾಲದ ಶ್ರಮವನ್ನು ಅಪೇಕ್ಷಿಸುವ ಗ್ರಂಥಗಳನ್ನೆ ರಚನೆಮಾಡುತ್ತ ಕನ್ನಡ ವಿದ್ವತ್‌ಕ್ಷೇತ್ರವನ್ನು ಶ್ರೀಮಂತಗೊಳಿಸುತ್ತಿರುವ ಕೆಲವೇ ವಿದ್ವಾಂಸರ ಪೈಕಿ ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿಗಳು ಅಗ್ರಗಣ್ಯರು. ಶಾಸ್ತ್ರ ಸಾಹಿತ್ಯ ಇವರ ಪ್ರೀತಿಯ ವಿಹಾರಕ್ಷೇತ್ರ. ಈ ವಲಯದಲ್ಲಿ ಡಾ.ಶಾಸ್ತ್ರಿಗಳಷ್ಟು ಕೃಷಿ ಮಾಡಿದವರು ವಿರಳವೆಂದೇ ಹೇಳಬೇಕು. 'ಹಳಗನ್ನಡದ ಬಗೆಗೆ ಏನಾದರೂ ವಿವಾದ, ಸಮಸ್ಯೆ ತಲೆದೋರಿದರೆ ಡಾ.ಶಾಸ್ತ್ರಿಗಳ ಅಭಿಪ್ರಾಯ ನಿಲುವಾಗುವುದಿಲ್ಲ, ತೀರ್ಪು ಆಗುತ್ತದೆ' ಎನ್ನುವಷ್ಟರಮಟ್ಟಿಗೆ ಇವರ ವಿದ್ವತ್ತಿನ ಪ್ರೌಢತೆ. ಇದೀಗ 'ಶಾಸ್ತ್ರಮೇರು' ಡಾ.ಶಾಸ್ತ್ರಿಗಳಿಗೆ ಅರುವತ್ತು ತುಂಬುತ್ತಿದೆ(ಜನನ : ಆಗಸ್ಟ್ ೨೬, ೧೯೩೩).

ಸುಸಂಸ್ಕೃತ ಪರಿಸರದಲ್ಲಿ ಬೆಳೆದ ಶಾಸ್ತ್ರಿಗಳು ಬಾಲ್ಯದಲ್ಲೆ ರಾಮಾಯಣ ಮಹಾಭಾರತಗಳನ್ನು, ನಮ್ಮ ಪರಂಪರೆಯ ಸಾತ್ವಿಕತೆಯನ್ನು ಮೈಗೂಡಿಸಿಕೊಂಡರು. ಅನಂತರ ಗಳಗನಾಥರ ಕಾದಂಬರಿಗಳ ಓದಿನಿಂದ ಸಾಹಿತ್ಯಪ್ರೀತಿ, ಪುಸ್ತಕಪ್ರೇಮ ಬೆಳೆಸಿಕೊಂಡರು. ಕುವೆಂಪು, ಡಿ.ಎಲ್.ಎನ್., ರಾಳ್ಲಪಲ್ಲಿ ಅನಂತಕೃಷ್ಣಶರ್ಮರಂಥ ದಿಗ್ಗಜಗಳ ಗರಡಿಯಲ್ಲಿ ಅಧ್ಯಯನ ನಡೆಸಿದರು.

ಡಾ.ಶಾಸ್ತ್ರಿಗಳು ಈವರೆಗೆ ನಲವತ್ತಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಇವರ ನೂರಾರು ಸಂಶೋಧನಪ್ರಬಂಧಗಳು ವಿದ್ವತ್‌ಪತ್ರಿಕೆಗಳಲ್ಲಿ ಬೆಳಕುಕಂಡಿವೆ. ಇವರ ಬಹುಪಾಲು ಕೃತಿಗಳು ಇವರಿಗೆ ಒಲಿದ ಕ್ಷೇತ್ರಗಳಾದ ಗ್ರಂಥಸಂಪಾದನೆ, ಛಂದಸ್ಸು, ಅಲಂಕಾರಶಾಸ್ತ್ರ ಇತ್ಯಾದಿಗಳಿಗೆ ಸಂಬಂಧಿಸಿದವು. ಇವರು ನಾಲ್ಕು ನಾಟಕಗಳನ್ನೂ ಬರೆದಿದ್ದಾರೆ.

ಶಬ್ದಾರ್ಥವಿಹಾರಿ

ಡಾ.ಶಾಸ್ತ್ರಿಗಳದು ಗ್ರಂಥಸಂಪಾದನಾಕ್ಷೇತ್ರದಲ್ಲಿ ಬಹುದೊಡ್ಡ ಹೆಸರು. ಪ್ರಾಚೀನ ಸಾಹಿತ್ಯದಲ್ಲಿ, ಶಾಸನಗಳಲ್ಲಿ ಹಲವೊಮ್ಮೆ ತಲೆದೋರುವ ಶಬ್ದಕ್ಲೇಶ, ಅರ್ಥಕ್ಲೇಶಗಳನ್ನು ನಿವಾರಿಸಿಕೊಳ್ಳಲು ಆಯಾ ಸಾಹಿತ್ಯಭಾಗದ ನಿಖರಗ್ರಂಥಪಾಠ ರೂಪಿಸುವುದು

ಅವಶ್ಯ ಎಂದು ಈ ನಿಟ್ಟಿನಲ್ಲಿ ಡಾ.ಶಾಸ್ತ್ರಿಗಳು ತಮ್ಮ ಅಭ್ಯಾಸದ ಸಮಯದಲ್ಲಿ ವಿಚಾರಕ್ಕೆ ಆಕರವಾದ ಹಲವು ಸಾಹಿತ್ಯಗ್ರಂಥಗಳ, ಶಾಸನಗಳ ಭಾಗಗಳನ್ನು ಚರ್ಚಿಸಿ ಹಲವಾರು ಲೇಖನಗಳನ್ನು ಬರೆದಿದ್ದಾರೆ. ಈ ರೀತಿ ಚರ್ಚೆಗೆ ಗ್ರಾಸವಾಗುವ ಲೇಖನ ಗಳನ್ನೇ 'ಶಬ್ದಾರ್ಥವಿಹಾರ' (೧೯೭೯) ಎಂಬ ಹೆಸರಿನಲ್ಲಿ ಸಂಕಲಿಸಿ ಪ್ರಕಟಿಸಿದ್ದಾರೆ.

"ಕುತೂಹಲ ಹೊಸ ಶೋಧಗಳ ತಾಯಿ. ಕುತೂಹಲದಿಂದ ಮನಸ್ಸಿಗೆ ವ್ಯಾಯಾಮ, ರಂಜನೆ. ಕುತೂಹಲಕ್ಕೆ ಎಲ್ಲೆಕಟ್ಟಿಲ್ಲ; ಆಯ್ಕೆಯಲ್ಲಿ ನಿರ್ಬಂಧವಿಲ್ಲ. ಉಪಯುಕ್ತವೂ ಉದಾತ್ತವೂ ಆದ ವಿಷಯಗಳಲ್ಲಿ, ಭಾವನೆಗಳಲ್ಲಿ ಕುತೂಹಲವನ್ನು ಹರಿಯಬಿಡು ವುದು ಯಾವುದಕ್ಕೂ ಒಳ್ಳೆಯದು" ಎಂದು ಡಾ.ಶಾಸ್ತ್ರಿಗಳೇ ಒಂದೆಡೆ ಹೇಳಿದ್ದಾರೆ.

ಡಾ.ವೆಂಕಟಾಚಲ ಶಾಸ್ತ್ರಿಗಳು ರಾ.ನರಸಿಂಹಾಚಾರ್ಯ, ಎಸ್.ಜಿ.ನರಸಿಂಹಾಚಾರ್ಯ ಇವರುಗಳ ಬರಹಗಳನ್ನು ಉಪಯುಕ್ತ ಪ್ರಸ್ತಾವನೆಗಳೊಡನೆ ಸಂಪಾದಿಸಿ ಪ್ರಕಟಿಸಿದ್ದಾರೆ.

ಹೊಸಗನ್ನಡ ಆರಂಭಕಾಲದಲ್ಲಿ ಮಕ್ಕಳ ಸಾಹಿತ್ಯ, ಅನುವಾದ, ಗ್ರಂಥಸಂಪಾದನೆಗಳ ಕ್ಷೇತ್ರದಲ್ಲಿ ಸ್ಥಿರವಾಗಿ ಉಳಿಯುವ ಕೆಲಸಮಾಡಿದ ಎಸ್.ಜಿ.ನರಸಿಂಹಾಚಾರ್ಯರ(೧೮೬೨-೧೯೦೭) ಸಮಗ್ರ ಕವಿತೆಗಳ ಸಂಪುಟವನ್ನು 'ಎಸ್.ಜಿ.ನರಸಿಂಹಾಚಾರ್ಯರ ಕವಿತೆಗಳು' ಎಂಬ ಹೆಸರಿನಿಂದ ಡಾ.ಶಾಸ್ತ್ರಿಗಳು ಅಚ್ಚುಕಟ್ಟಾಗಿ ಸಂಪಾದಿಸಿದ್ದಾರೆ(೧೯೮೭).

ಡಾ.ಡಿ.ವಿ.ಗುಂಡಪ್ಪನವರು ತಮ್ಮ 'ಜ್ಞಾಪಕಚಿತ್ರಶಾಲೆ'ಯಲ್ಲಿ ಎಸ್.ಜಿ. ನರಸಿಂಹಾಚಾರ್ಯರ ಬಗೆಗೆ ಬರೆಯುತ್ತ "ಎಸ್.ಜಿ.ನರಸಿಂಹಾಚಾರ್ಯರ ಬರವಣಿಗೆಯನ್ನೆಲ್ಲ ಸಂಗ್ರಹಮಾಡಿ ಪ್ರಕಟಿಸುವವರು ಕನ್ನಡ ಲೋಕಕ್ಕೆ ಭಾಷೆಯ ದೃಷ್ಟಿಯಿಂದಲೂ ಮಹೋಪಕಾರ ಮಾಡುತ್ತಾರೆ" ಎಂದಿದ್ದರು. ಈ ಮಹೋಪಕಾರವನ್ನು ಆಗಮಾಡಿ ದ್ದಾರೆ ಡಾ.ಶಾಸ್ತ್ರಿಗಳು.

ಡಾ.ಶಾಸ್ತ್ರಿಗಳು ನರಸಿಂಹಾಚಾರ್ಯರ ಸ್ವತಂತ್ರ, ಅನುವಾದಿತ ಕವಿತೆಗಳನ್ನು ಅತ್ಯಂತ ಶ್ರಮವಹಿಸಿ ಸಂಕಲಿಸಿದ್ದಾರೆ. ಚಿಕ್ಕಂದಿನಲ್ಲಿ ಪ್ರಾಥಮಿಕ ಪಠ್ಯಪುಸ್ತಕಗಳಲ್ಲಿ ಓದಿದ್ದ ಎಸ್.ಜಿ.ನರಸಿಂಹಾಚಾರ್ಯರ 'ಇಟ್ಟರೆ ಸಗಣಿಯಾದೆ ತಟ್ಟಿದರೆ ಕುರುಳಾದೆ...' ಎಂಬ 'ಗೋವಿನ ಬಾಳು' ಕವಿತೆಯೂ ಈ ಸಂಕಲನದಲ್ಲಿ ಸಂಚಯನಗೊಂಡಿದ್ದು ಓದಿದಾಗ ಖುಷಿಯಾಗುತ್ತದೆ.

'ಕನ್ನಡ ಚಿತ್ರಕಾವ್ಯ'

'ಚಿತ್ರಕಾವ್ಯ' ತುಂಬ ಸಂಕೀರ್ಣವಾದ ಚಮತ್ಕಾರಿಕ ಕಾವ್ಯರಚನೆಯ ಒಂದು ಪ್ರಕಾರ. ಈ ಪ್ರಕಾರದ ಕಾವ್ಯ ಸಂಸ್ಕೃತಸಾಹಿತ್ಯದಲ್ಲಿ ಸಮೃದ್ಧ. ಪ್ರಾಚೀನ ಕನ್ನಡ ಸಾಹಿತ್ಯದಲ್ಲೂ ಲಭ್ಯ. ಆದರೆ ಅವನ್ನು ಹುಡುಕಿ ತೆಗೆಯಲು ತಾಳ್ಮೆ, ಶ್ರಮ, ಚತುರತೆ, ಪ್ರಭುತ್ವ ಬೇಕಷ್ಟೆ. ಅಲ್ಲಿ ಇಲ್ಲಿ ಬೆರಳೆಣಿಕೆಗೆ ಸಿಗುವಷ್ಟು ಬಿಡಿಲೇಖನಗಳು ಪ್ರಕಟವಾಗಿರುವುದನ್ನು ಬಿಟ್ಟರೆ ಕನ್ನಡದಲ್ಲಿ ಇದುವರೆಗೆ ಚಿತ್ರಕಾವ್ಯಕ್ಕೆ ಸಂಬಂಧಿಸಿದಂತೆ ಡಾ.ಶಾಸ್ತ್ರಿಗಳಂತೆ ವಿಸ್ತೃತ ಅಧ್ಯಯನ, ಪ್ರಚುರಣ ಮಾಡಿದವರು ಇಲ್ಲ.

ಸುಮಾರು ೫೫೦ ಪುಟಗಳಷ್ಟು ದೊಡ್ಡ ಗಾತ್ರದಲ್ಲಿ ಚಿತ್ರಕಾವ್ಯದ ಬಗೆಗೆ ಕೂಲಂಕಷ ವಿಷಯನಿರೂಪಣೆಯೊಡಗೂಡಿ ೧೯೮೭ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಪ್ರಕಟವಾದ ಡಾ.ವೆಂಕಟಾಚಲ ಶಾಸ್ತ್ರಿಗಳ 'ಕನ್ನಡ ಚಿತ್ರಕಾವ್ಯ' ಹೆಬ್ಬೊತ್ತಿಗೆ ಕನ್ನಡದಲ್ಲಿ ಈ ಪ್ರಕಾರಕ್ಕೆ ಪ್ರಥಮ ಗ್ರಂಥ, ಆಚಾರ್ಯಕೃತಿ. ಈ ಪಂಡಿತಕೃತಿಗೆ ಸರಿಸಮನಾಗಿ ನಿಲ್ಲಬಲ್ಲ ಕೃತಿಗಳು ಬಹುಶಃ ಇತರ ಭಾಷೆಗಳಲ್ಲೂ ವಿರಳ ಎಂದರೆ ಅದು ಅತ್ಯುಕ್ತಿಯಾಗದು.

ವರ್ಣಚಿತ್ರ, ಶ್ಲೇಷಚಿತ್ರ, ಗರ್ಭಕವಿತ್ವ, ಗೂಢಚಿತ್ರ, ಪ್ರಹೇಳಿಕೆ, ಬಂಧಚಿತ್ರ, ಗತಿಚಿತ್ರ ಮೊದಲಾದ ಚಿತ್ರಕಾವ್ಯದ ಲಕ್ಷಣ ಸ್ವರೂಪಗಳ ಆಮೂಲಾಗ್ರವಿವೇಚನೆ ಒಂಬತ್ತು ಅಧ್ಯಾಯಗಳಲ್ಲಿ ಡಾ.ಶಾಸ್ತ್ರಿಗಳ ಈ ಕೃತಿಯಲ್ಲಿ ಹರಡಿಕೊಂಡಿದೆ. ಶಬ್ದಾರ್ಥಗಳನ್ನು ಬಿಡಿಸುವ ಚತುರತೆ, ವಿಶ್ಲೇಷಣಕೌಶಲ, ಸರ್ವಕುತೂಹಲಿ ಮನಸ್ಸುಗಳಿಂದ ಕೂಡಿದ ಡಾ.ಶಾಸ್ತ್ರಿಗಳಲ್ಲಿ ಪ್ರತಿಭೆ ಪಾಂಡಿತ್ಯ ಪರಿಶ್ರಮಗಳು ಮುಪ್ಪುರಿಗೊಂಡಿರುವುದು ಈ ಗ್ರಂಥದಲ್ಲಿ ಸುಸ್ಪಷ್ಟ. ಚಿತ್ರಕಾವ್ಯದ ಯಾವುದೇ ಲಕ್ಷಣ ಭೇದಗಳನ್ನು ವಿವರಿಸುವಾಗಲೂ ಇದಕ್ಕೆ ಸಂಬಂಧಿಸಿದಂತೆ ಸಂಸ್ಕೃತ, ಕನ್ನಡ ಗ್ರಂಥಗಳಿಂದ ಯಥೋಚಿತ ಉದಾಹರಣೆಗಳನ್ನು ಕೊಡುತ್ತಾ ಅರ್ಥಗ್ರಹಣಕ್ಕೆ ಅನುವು ಮಾಡಿ ಕೊಡುತ್ತಾರೆ. ಇಂಥೆಡೆಗಳಲ್ಲೆಲ್ಲ ಡಾ.ಶಾಸ್ತ್ರಿಗಳ ವ್ಯಾಪಕ ವಿದ್ವತ್ತು, ಬಹುಭಾಷಾಭಿಜ್ಞತೆ ಎದ್ದುಕಾಣುತ್ತದೆ.

ಚಿತ್ರಕಾವ್ಯದ ಒಂದೆರಡು ಉದಾಹರಣೆಗಳನ್ನು ಕೊಟ್ಟರೆ, ಈ ಕೃತಿಯ ಶ್ರೇಷ್ಠತೆ ಮತ್ತು ಡಾ.ಶಾಸ್ತ್ರಿಗಳ ಪಾಂಡಿತ್ಯ ಪ್ರತಿಭೆಯ ಅರಿವಾಗುತ್ತದೆ.

ತಿರಿವುದು ಬೈಕಂಗೊಳ್ಳದು
ಮೊರೆವುದು ಮರಿದುಂಬಿಯಲ್ತು ಕತ್ತರಿಗಾಳಂ
ಬೆರಸಿ ತನುಗೊಂದಿ ದೊರೆಕೊಂ
ಡಿರೆಯುಂ ಕೆಸಱಂಕಮಲ್ಲಿದಾವುದೊ ಪೇೞಿಂ

ಇದು 'ಕಾವ್ಯಾವಲೋಕನ'ದ ಒಂದು ಪ್ರಹೇಳಿಕೆ. ಇದರ ಅರ್ಥ "ಸುತ್ತುವುದು, ಆದರೆ ಭಿಕ್ಷೆ ಬೇಡುವುದಿಲ್ಲ. ಮೊರೆಯುವುದು, ಆದರೆ ಮರಿದುಂಬಿಯಲ್ಲ. ಕತ್ತರಿಗಾಳ ವೆಂಬ ಮಲ್ಲಯುದ್ಧದ ಒಂದು ಬಗೆಯ ವರಸೆಯಿಂದ ಕೂಡಿ ದೇಹಕ್ಕೆ ಸೇರಿಕೊಂಡಿದೆ ಯಾದರೂ ಕೆಸರಂಕವಲ್ಲ(ಅಖಾಡವಲ್ಲ). ಇದು ಯಾವುದು ಹೇಳಿ?"

ಇದಕ್ಕೆ ಉತ್ತರ 'ಗಾಣ'. ಡಾ.ಶಾಸ್ತ್ರಿಗಳು ಇದನ್ನು ಬಿಡಿಸುವುದು ಹೀಗೆ: "ಗಾಣ ತಿರುಗುತ್ತದೆ, ಭಿಕ್ಷೆ ಬೇಡುವುದಿಲ್ಲ; ಗಾಣ ಸದ್ದು ಮಾಡುತ್ತದೆ, ಮರಿದುಂಬಿಯಲ್ಲ; ಕುಳಿತುಕೊಳ್ಳುವ ಭಾಗವನ್ನುಳ್ಳ ಗಾಣ ಗಾಣಿಗನ ಶರೀರಕ್ಕೆ ಅಂಟಿರುತ್ತದೆ, ಅಖಾಡ ವಲ್ಲ."

ಇನ್ನೊಂದು, 'ವರ್ಣಚಿತ್ರ' ಪ್ರಕರಣದಲ್ಲಿ ಬರುವ ಜಾಣ್ಮೆಯಿಂದ ಕೂಡಿದ 'ಕರ್ನಾಟಕ ಚಂದ್ರಾಲೋಕ'ದಲ್ಲಿನ ಏಕಾಕ್ಷರಿಯ ಪದ್ಯ ಹೀಗಿದೆ :

ನನ್ನನ್ನನೆನ್ನನೇನೇ-
ನನ್ನೋನೆನನಿನನನನನನಾಂ ನಾನ್ಯೆನೋ-
ನುನ್ನಂ ನಾನಾ ನನನೇ
ನನ್ನನುನೆನೆ ನೀನಿನೇನನೀನನನೇನಂ ||

ಈ ಪದ್ಯವನ್ನು ಶಾಸ್ತ್ರಿಗಳು ತುಂಬ ಸಲೀಸಾಗಿ ಹೀಗೆ ಪದವಿಭಾಗ ಮಾಡುತ್ತಾರೆ. "ನನ್ನನ್ನಂ, ಎನ್ನಂ, ಏನೇನಂ, ನೋನೆಂ, ಅನಿನಂ, ಅನನನಂ, ಆಂ, ನಾನ್ಯೆನೋನುನ್ನಂ, ನಾನಾ ನನನೇ, ನನ್ನನುನೆನೆ, ನೀಂ, ಇನೇನಂ, ಈನಂ, ಅನೇನಂ."

"ನಾನು ಸ್ವಲ್ಪವೂ ವ್ರತ ಮಾಡಿಲ್ಲ, ಅನಾಥನು, ಜೀವವಿಲ್ಲದವನು, ನಾನಾ ವಿಧವಾದ ಪಾಪಗಳಿಂದ ಪೀಡಿತನಾದವನು. ಆದುದರಿಂದ ನನ್ನಂಥವನು ಯಾವ ಪ್ರಯೋಜನಕ್ಕೆ ಬಂದ ಮನುಷ್ಯ? ನೀನು ರಾಜರಾಜನು, ನಿರ್ದೋಷನಾದವನು, ಲಕ್ಷ್ಮೀಪತಿಯು. ಎಲೈ ಸಹಸ್ರಮುಖವುಳ್ಳ ವಿಷ್ಣುವೇ, ನನ್ನ ಸ್ತೋತ್ರವನ್ನು (ನನ್ನ ರೀತಿಯನ್ನು) ಚಿತ್ತಕ್ಕೆ ತಂದುಕೋ"- ಎಂದು ಅರ್ಥೈಸುತ್ತಾರೆ.

ಬರೆಯಲು, ಉಚ್ಚರಿಸಲು ಪ್ರಯಾಸಪಡಬೇಕಾದ ಇಂಥ ಪಾಂಡಿತ್ಯಪೂರ್ಣ ಒಗಟುಗಳನ್ನು ಲೀಲಾಜಾಲವಾಗಿ ಬಿಡಿಸುವ ಸಾಹಿತ್ಯಕ್ರೀಡೆ ಡಾ.ಶಾಸ್ತ್ರಿಗಳಂಥ ಚತುರಮಲ್ಲರಿಗೇ ಮೀಸಲು.

ಜೈನಸಾಹಿತ್ಯ

ವ್ಯಾಕರಣ, ಛಂದಸ್ಸು, ಗ್ರಂಥಸಂಪಾದನೆ, ನಿಘಂಟು ರಚನೆಗಳಂತೆಯೇ ಡಾ. ಶಾಸ್ತ್ರಿಗಳಿಗೆ ಬಹು ಪ್ರಿಯವಾದ ಇನ್ನೊಂದು ವಿಷಯ ಜೈನಸಾಹಿತ್ಯ. ಈ ಕ್ಷೇತ್ರದಲ್ಲಿ ಶಾಸ್ತ್ರಿಗಳ ಸಾಧನೆ ಗಮನೀಯವಾದ್ದು. 'ಚಾವುಂಡರಾಯ', 'ಜೈನ ಭಾಗವತ ಭಾರತಗಳು: ಒಂದು ಸಮೀಕ್ಷೆ' ಮುಂತಾದವು ಉಲ್ಲೇಖಾರ್ಹ ಕೃತಿಗಳು. ಪ್ರೊ.ಡಿ.ಎಲ್.ನರಸಿಂಹಾಚಾರ್ ಮತ್ತು ಡಾ.ಹಾ.ಮಾ.ನಾಯಕರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ ಪಿಎಚ್.ಡಿ. ಪ್ರೌಢನಿಬಂಧ 'ಕನ್ನಡ ನೇಮಿನಾಥ ಪುರಾಣಗಳು- ತೌಲನಿಕ ಅಧ್ಯಯನ'. ೧೯೬೪ರಲ್ಲಿ ಆರಂಭಿಸಿ ೧೯೬೭ರವರೆಗೆ ಕೈಗೊಂಡ ಸತತ ಅಧ್ಯಯನದ ಫಲವಾಗಿ ಈ ಪ್ರೌಢನಿಬಂಧ ಸಿದ್ಧಗೊಂಡಿತು. ಈ ಕೃತಿಗೆ ಮೈಸೂರು ವಿಶ್ವವಿದ್ಯಾಲಯ ಪಿಎಚ್.ಡಿ ಪದವಿ ನೀಡಿತು. ೧೯೭೩ರಲ್ಲಿ ಈ ಪ್ರಬಂಧ ಗ್ರಂಥರೂಪದಲ್ಲಿ ಪ್ರಕಟವಾಯಿತು.

ಈ ಪ್ರಬಂಧದ 'ಅರಿಕೆ'ಯಲ್ಲಿ ಹೇಳಿರುವ ಡಾ.ಶಾಸ್ತ್ರಿಗಳ ಈ ಮಾತುಗಳು ಈ ಪ್ರಬಂಧದ ಮಹತ್ವವನ್ನು ತಿಳಿಸುತ್ತವೆ. "ಕನ್ನಡ ನೇಮಿನಾಥ ಚರಿತ್ರೆಗಳ ಮೇಲೆ, ಈ ವರೆಗೆ(೧೯೬೯), ಒಂದೊಂದು ಕೃತಿಯನ್ನೂ ಕುರಿತಂತೆ ಸ್ವತಂತ್ರವಾಗಿಯಾಗಲಿ ಒಟ್ಟಿಗೆ ತೌಲನಿಕವಾಗಿಯಾಗಲಿ ಯಾವ ಕೆಲಸವೂ ನಡೆದಿರಲಿಲ್ಲ. ಒಂದೆರಡು ವಿಮರ್ಶಾತ್ಮಕ

ಲೇಖನಗಳು ಮಾತ್ರ ಕಾಣಿಸಿಕೊಂಡಿದ್ದವಷ್ಟೇ. ಈ ಕಾರಣದಿಂದ ಅನೇಕವೂ ವಿಸ್ತಾರವೂ ಆಗಿರುವ ಕನ್ನಡ ನೇಮಿನಾಥ ಚರಿತ್ರೆಗಳಲ್ಲಿ ಆದಿಯ ಕೆಲವು ಕೃತಿಗಳನ್ನಾದರೂ ತೆಗೆದು ಕೊಂಡು ಅವುಗಳ ಮೂಲ, ಸಂಪ್ರದಾಯ, ಪರಸ್ಪರ ಸಂಬಂಧ, ಕನ್ನಡ ಸಾಹಿತ್ಯದಲ್ಲಿ ಅವುಗಳ ಸ್ಥಾನ, ಕರ್ತೃಗಳ ವೈಯಕ್ತಿಕವಾದ ಕಾವ್ಯಪದ್ಧತಿ ಮತ್ತು ಕಾವ್ಯಶಕ್ತಿ ಇತ್ಯಾದಿ ವಿಷಯಗಳ ಬಗೆಗೆ ತೌಲನಿಕದೃಷ್ಟಿಯಿಂದ ಕೆಲಸಮಾಡುವ ಅಗತ್ಯ ಬಹಳವಾಗಿದ್ದಿತು.''

ಇಷ್ಟೊಂದು ವಿಶಾಲವ್ಯಾಪ್ತಿಯ ವಿಷಯವನ್ನು ಆಯ್ಕೆ ಮಾಡಿಕೊಂಡು ಒಂಬತ್ತು ಅಧ್ಯಾಯಗಳಲ್ಲಿ ಸಂಸ್ಕೃತ, ಪ್ರಾಕೃತ ಮತ್ತು ಕನ್ನಡ ಸಾಹಿತ್ಯದಲ್ಲಿ, ದಿಗಂಬರ ಮತ್ತು ಶ್ವೇತಾಂಬರ ಸಂಪ್ರದಾಯಗಳಲ್ಲಿ ಕಂಡುಬರುವ ನೇಮಿಕಥೆಗಳ ಸ್ವರೂಪ, ವಿಶಿಷ್ಟತೆ, ಅವುಗಳ ಕರ್ತೃಗಳ ಕಾಲದೇಶಾದಿ ವಿವರಗಳು ಹೀಗೆ ಹತ್ತು ಹಲವು ನೆಲೆಗಳಲ್ಲಿ ಶಾಸ್ತ್ರಿಗಳು ಮಾಡಿರುವ ಅಧ್ಯಯನ ಮೌಲಿಕವಾದ್ದು; ವಿಶಿಷ್ಟವಾದ್ದು.

'ಕನ್ನಡ ಚೆನ್ನುಡಿ'

"ಸಂಪದ್ಭರಿತವಾದ ಸಂಸ್ಕೃತ ಸಾಹಿತ್ಯದಲ್ಲಿ ಸುಭಾಷಿತಗಳು, ಸುಭಾಷಿತ ಸಂಕಲನಗಳು ಗಳಿಸಿದ ಪ್ರಾಶಸ್ತ್ಯವನ್ನೂ ಪಡೆದಿರುವ ಪ್ರಾಚುರ್ಯವನ್ನೂ ಗಮನಿಸಿದಾಗಲೆಲ್ಲ, 'ಕನ್ನಡ ಸಾಹಿತ್ಯದಲ್ಲಿಯ ಸುಭಾಷಿತಗಳಿಗೆ, ಸುಭಾಷಿತಸಂಕಲನಗಳಿಗೆ ಅಂತಹ ಪ್ರಾಶಸ್ತ್ಯ ಪ್ರಾಚುರ್ಯಗಳು ಏಕಿಲ್ಲ?'' ಎಂದು ಯೋಚನೆ ಬಂದಾಗ, ಅತಿ ವಿಸ್ತಾರವೂ ಅಲ್ಲದ, ಹ್ರಸ್ವವೂ ಅಲ್ಲದ, ಗಣ್ಯಗಾತ್ರದ ಸುಭಾಷಿತಸಂಗ್ರಹವೊಂದನ್ನು ಸಿದ್ಧಪಡಿಸಲು ಡಾ. ಶಾಸ್ತ್ರಿಗಳು ಆರಂಭಿಸಿದರು. ಅದರ ಫಲವೇ 'ಕನ್ನಡ ಚೆನ್ನುಡಿ' ಎಂಬ ಪ್ರಾತಿನಿಧಿಕ ಸುಭಾಷಿತಗಳ ಸಂಗ್ರಹಗ್ರಂಥ.

ಕವಿಕಾವ್ಯ ಪ್ರಶಂಸೆ, ವಿದ್ಯಾಭ್ಯಾಸ, ಸಂಸಾರ, ಸಿರಿತನ-ಬಡತನ, ಸುಜನ-ದುರ್ಜನ, ಕುಲ, ದೈವ-ಪೌರುಷ, ಸುಗುಣ-ದುರ್ಗುಣ, ದಾನ, ಧರ್ಮ-ಅಧರ್ಮ ಹೀಗೆ ಹಲವು ವಿಷಯಗಳಲ್ಲಿ ವರ್ಗೀಕರಿಸಿ ಹಳಗನ್ನಡ ಕಾವ್ಯಗಳು, ಪುರಾಣಗಳು, ಲಕ್ಷಣಶಾಸ್ತ್ರ ಗ್ರಂಥಗಳು ಮೊದಲಾದ ೧೩೦ ಕೃತಿಗಳಿಂದ ೨,೪೦೦ ಉತ್ತಮ ನೀತಿಪದ್ಯಗಳನ್ನು ಈ ನೀತಿಕೋಶದಲ್ಲಿ ಸಂಗ್ರಹಿಸಿಕೊಡಲಾಗಿದೆ.

"ಈ ಗ್ರಂಥ ಕತೆ ಕಾದಂಬರಿಯಲ್ಲ; ಕಾವ್ಯವೋ ನಾಟಕವೋ ಅಲ್ಲ; ಸಂಶೋಧನೆ ಯಾಗಲಿ, ವಿಮರ್ಶೆಯಾಗಲಿ ಅಲ್ಲ. ಇದೊಂದು ನೀತಿವಾಕ್ಯಗಳ ಸಂಪುಟ; ಚೆನ್ನುಡಿಗಳ ಚೆನ್ನಮಣೆ!'' ಎನ್ನುವ ಡಾ.ಶಾಸ್ತ್ರಿಗಳು "ಮಕ್ಕಳು ಮೊದಲುಗೊಂಡು ಮುದುಕರ ವರೆಗೆ, ನನ್ನ ಕನ್ನಡ ಜನ ಈ 'ಕನ್ನಡ ಚೆನ್ನುಡಿ'ಯನ್ನು ಯಾವ ಕಾಲಕ್ಕೂ ಓದಿ ಸಂತೋಷ ಪಡುತ್ತಿರಲಿ, ಇಲ್ಲಿ ಪ್ರಕಟವಾಗಿರುವ ನೈತಿಕ, ವ್ಯಾವಹಾರಿಕ ಜ್ಞಾನದಿಂದ ಪ್ರಯೋಜನ ಪಡೆಯುತ್ತಿರಲಿ ಎಂಬ ಸದಾಶಯದಿಂದ ಈ ಕೃತಿಯನ್ನು ಕನ್ನಡ ಜನತೆಗೆ ಒಪ್ಪಿಸು ತ್ತಿದ್ದೇನೆ'' ಎನ್ನುತ್ತಾರೆ. ಜೀವನಮೌಲ್ಯಗಳು ಕುಸಿಯುತ್ತಿರುವ ಇಂದಿನ ದಿನಗಳಲ್ಲಿ

ಶೀಲ, ಚಾರಿತ್ರಗಳನ್ನು ರೂಡಿಸಿಕೊಳ್ಳಲು ಪ್ರೇರಣೆ ನೀಡುವ ಈ ನೀತಿಕರಂಡಿಗೆ ಪ್ರತಿಯೊಂದು ಮನೆಯಲ್ಲೂ, ಸ್ಥಾನಗಳಿಸಿಕೊಳ್ಳುವ ಅರ್ಹತೆ ಪಡೆದಿರುವ ಒಂದು ಮಹತ್ವಪೂರ್ಣ ಜ್ಞಾನಕೋಶ.

ಪ್ರಬಂಧ, ವ್ಯಕ್ತಿಚಿತ್ರ

ಹಿರಿಯ ಸಾಹಿತಿಗಳಿಂದ, ಚಿಂತಕರಿಂದ ಚಿಂತನಪ್ರಧಾನ, ನೀತಿಬೋಧಕ ಕಿರು ಭಾಷಣಗಳನ್ನು ಬರೆಯಿಸಿ ಪ್ರಸಾರಮಾಡುವ ಪರಿಪಾಠ ಆಕಾಶವಾಣಿಯದು. ಹೀಗೆ ಪ್ರಸಾರವಾದ ಭಾಷಣಗಳು ಒಂದು ಪ್ರತ್ಯೇಕ ಸಾಹಿತ್ಯಪ್ರಕಾರವಾಗಿ ಕನ್ನಡದಲ್ಲಿ ರೂಪುಪಡೆದದ್ದು ಇತ್ತೀಚೆಗೆ. ಈ ರೀತಿಯ ಕಿರುಚಿಂತನಪ್ರಬಂಧಗಳನ್ನು ಕನ್ನಡದಲ್ಲಿ ಮೊದಲ ಬಾರಿಗೆ ಪ್ರಕಟಿಸಿ, ಈ ಪ್ರಕಾರಕ್ಕೆ ಶ್ರೀಕಾರ ಹಾಕಿದ ಶ್ರೇಯಸ್ಸು ಡಾ.ಹಾ.ಮಾ. ನಾಯಕರಿಗೆ ಸಲ್ಲುತ್ತದೆ. ಅವರು ೧೯೭೮ರಲ್ಲಿ 'ಸೂಲಂಗಿ' ಎಂಬ ಪ್ರಬಂಧ ಸಂಕಲನವನ್ನು ಹೊರತಂದರು. ಆನಂತರ ಇದುವರೆಗೆ ಹತ್ತಿರಹತ್ತಿರ ಐವತ್ತು ಚಿಂತನ ಪ್ರಬಂಧ ಸಂಕಲನಗಳು ಹೊರಬಂದಿವೆ. ಡಾ.ಸಿದ್ಧಯ್ಯ ಪುರಾಣಿಕ, ಡಾ.ದೇಜಗೌ, ಡಾ.ಸಿ.ಪಿ.ಕೆ. ಮುಂತಾದ ಹಲವು ಮಂದಿ ಖ್ಯಾತನಾಮರು ತಮ್ಮ ಪ್ರಬಂಧ ಸಂಕಲನಗಳನ್ನು ಪ್ರಕಟಿಸಿದ್ದಾರೆ. ೧೯೯೦ರಲ್ಲಿ ಪ್ರಕಟವಾದ ಡಾ.ವೆಂಕಟಾಚಲ ಶಾಸ್ತ್ರಿಗಳ 'ಮೆಲುಗಾಳಿಯ ಮಾತುಗಳು' ಈ ಪ್ರಕಾರಕ್ಕೆ ಇತ್ತೀಚಿನ ಒಂದು ಗಣನೀಯ ಸೇರ್ಪಡೆ.

"ಇಲ್ಲಿ ಸಮಾವೇಶಗೊಂಡಿರುವ ಬರಹಗಳು ನಮ್ಮ ಕಾಲದ ಜನಜೀವನವನ್ನು ಕುರಿತದ್ದು; ಜನಸಾಮಾನ್ಯರ ನಡೆನುಡಿಗಳಿಗೆ ಸಂಬಂಧಿಸಿದುದು. ಎಂದರೆ ಇಲ್ಲಿ ನಮ್ಮದೇ ಆದ ದಿನದ ಬದುಕು, ಆಚಾರವಿಚಾರಗಳು, ಆಶೋತ್ತರಗಳು, ಧ್ಯೇಯಾದರ್ಶಗಳು, ಮೌಲ್ಯಗಳು ಪ್ರಸ್ತಾಪಗೊಂಡಿವೆ; ಅಲ್ಲದೆ ಕಾಲಪ್ರವಾಹಗತಿಯಲ್ಲಿ ಅವು ಹೇಗೆ ಏರಿಳಿತಗಳಿಗೆ ಸಿಕ್ಕಿವೆ, ಏನು ಪರಿಣಾಮಗಳನ್ನು ಉಂಟುಮಾಡಿವೆ ಎನ್ನುವವು ಚರ್ಚೆಯ ವಿಷಯಗಳಾಗಿವೆ" ಎಂದು ಈ ಪ್ರಬಂಧಗಳ ಹರಹನ್ನು ಡಾ.ಶಾಸ್ತ್ರಿಗಳೇ ಸೂಚಿಸಿದ್ದಾರೆ.

ಇಲ್ಲಿ ಸಮಾವೇಶಗೊಂಡಿರುವ ಪ್ರಬಂಧಗಳು ವಿಷಯವೈವಿಧ್ಯದಿಂದ ಗಮನಸೆಳೆಯುತ್ತವೆ. ಪ್ರಸ್ತಾವಿತ ವಿಷಯಕ್ಕೆ ಇನ್ನಷ್ಟು ಮೆರಗು ಕೊಡುವ ಪ್ರಾಚೀನ, ನವೀನ ಆರ್ಯೋಕ್ತಿಗಳು, ಕವಿವಾಣಿಗಳು ಡಾ.ಶಾಸ್ತ್ರಿಗಳ ರುಚಿಶುದ್ಧತೆಯನ್ನೂ ಬಹುಶ್ರುತತೆಯನ್ನೂ ದೃಢಪಡಿಸುತ್ತವೆ. ಡಾ.ಶಾಸ್ತ್ರಿಗಳ ಗದ್ಯ ಸುಪುಷ್ಟವಾದ್ದು, ಸುಭಗವಾದ್ದು ಚಿಂತನಶೀಲವಾದ್ದು. ಇಲ್ಲಿ ಶಬ್ದಾಡಂಬರದ ಮೇಲಾಟವಿಲ್ಲ. ಪ್ರಬಂಧಗಳು ಮತ್ತೆಮತ್ತೆ ಮೆಲುಕುಹಾಕುವ ಸುಭಾಷಿತಗಳಂತೆ ಆಪ್ಯಾಯಮಾನವಾಗಿವೆ. ಅಧಃಪತನಗೊಳ್ಳುತ್ತಿರುವ ಪೌರಪ್ರಜ್ಞೆಯನ್ನು ಕಂಡು 'ಇದು ಹೀಗಲ್ಲ, ಹೀಗೆ' ಎಂದು ತೋರಿಸುತ್ತ, ನೀತಿವಂತಸಮಾಜ ನಿರ್ಮಾಣಗೊಳ್ಳಬೇಕೆಂದು ಆಶಿಸುವುದೇ ಈ ಪ್ರಬಂಧಗಳ ಪ್ರಧಾನ ಕಾಳಜಿ. ಇವು ಕೆಲವು ಉದಾಹರಣೆಗಳು:

"ಮನೆಯ ಕಟ್ಟಡದ ಕಲೆಗಾರಿಕೆ, ಒಳಗಿನ ಒಪ್ಪ ಓರಣ, ಅಲ್ಲಿ ವಾಸಿಸುವವರ ಅಂತಸ್ತು, ಅಭಿರುಚಿಗಳಿಗೆ ಕನ್ನಡಿ ಹಿಡಿಯಬಹುದು. ಆದರೆ ಮನಸ್ಸು ಹೃದಯಗಳೆಂಬ ಅವಳಿಮನೆಗಳು ಎಷ್ಟು ಶುಭ್ರವಾಗಿವೆ, ಎಷ್ಟು ವಿಶಾಲವಾಗಿವೆ ಎನ್ನುವುದರ ಮೇಲೆ ಮಾನವತ್ವದ ಹಿರಿಮೆ ನಿಂತಿರುವುದು ಎನ್ನುವುದನ್ನು ನಾವು ಮರೆಯಲಾಗದು."

"ಪ್ರಾಣಿಪ್ರಪಂಚದ ವೈಚಿತ್ರ್ಯಗಳನ್ನು ಗುರುತಿಸಿದ ಮನುಷ್ಯ ತನ್ನ ಶೋಧನೆಗಳ ದುರ್ಲಾಭವನ್ನು ಪಡೆದು ತಾನು ಪುಷ್ಟನಾದ, ಬಲಿಷ್ಠನಾದ; ಪ್ರಾಣಿಗಳು ಮಾತ್ರ ಬಡವಾದವು, ಬಲಿಯಾದವು. ಬಹುಶಃ ಪ್ರಾಣಿಗಳ ಬಹುದೊಡ್ಡ ಶತ್ರು ಸಹಜವೈರದ ಮತ್ತೊಂದು ಪ್ರಾಣಿಯಲ್ಲ; ಅನಿಮಿತ್ತ ವೈರದ, ವಿಕೃತಚಿತ್ತದ ಮಾನವನೇ!"

"ಒಳ್ಳೆಯ ಭಾಷೆ ಒಳ್ಳೆಯ ಸಂಸ್ಕೃತಿಯ ಲಕ್ಷಣ ಹೇಗೋ, ಒಳ್ಳೆಯ ಸಂಸ್ಕೃತಿ ಒಳ್ಳೆಯ ಭಾಷೆಯ ಫಲ ಎನ್ನುವುದೂ ಹಾಗೆಯೇ."

"ಮಿತಿ-ಅತಿಗಳ ಸಂಗಮಸ್ಥಾನದಲ್ಲಿ ವಿಹರಿಸುವ ಜೀವನಪಥಿಕನಿಗೆ ಈ ಲೋಕ ತಣ್ಣನೆಯ ಕೊಳವಾಗಬಹುದು, ಹೂ ಹಣ್ಣುಗಳ ತೋಟವಾಗಬಹುದು."

"ಯುಕ್ತಿಯ ಒಂದು ಸೂಜಿಮೊನೆಗೆ ಬೆಟ್ಟದಷ್ಟು ಶಕ್ತಿ ಮಣಿಯುವುದು ಸಾಧ್ಯವಿದೆ."

ಕನ್ನಡ ಅರುಣೋದಯದ ಆದ್ಯರಲ್ಲಿ ಪ್ರಮುಖರಾದ ಎಸ್.ಜಿ.ನರಸಿಂಹಾಚಾರ್ಯ, ಆಲೂರು ವೆಂಕಟರಾವ್, ಬಿ.ಎಂ.ಶ್ರೀ, ರಾಳ್ಳಪಲ್ಲಿ ಅನಂತಕೃಷ್ಣಶರ್ಮ, ಡಿ.ಎಲ್. ನರಸಿಂಹಾಚಾರ್ ಹೀಗೆ ಹದಿನೈದು ಮಂದಿ ಕನ್ನಡ ನುಡಿಭಕ್ತರ ಸೊಗಸಾದ ವ್ಯಕ್ತಿಚಿತ್ರಗಳನ್ನು 'ಸಾಹಿತ್ಯ ಶಿಲ್ಪಿಗಳು' ಎಂಬ ಹೆಸರಿನಲ್ಲಿ ಡಾ.ಶಾಸ್ತ್ರಿಗಳು ಪ್ರಕಟಿಸಿದ್ದಾರೆ. ಈ ವ್ಯಕ್ತಿಗಳ ಪಾಂಡಿತ್ಯ ಪ್ರತಿಭೆಗಳ ಎತ್ತರ ಬಿತ್ತರಗಳನ್ನೂ ಅಧ್ಯಯನ ಅಧ್ಯಾಪನಗಳ ಶ್ರೇಷ್ಠತೆಯನ್ನೂ ವಿನಯ ಸಜ್ಜನಿಕೆ ಸೌಜನ್ಯಗಳಿಂದ ಕೂಡಿದ ಉನ್ನತಾದರ್ಶದ ಬದುಕನ್ನೂ ಅತ್ಯಂತ ಸ್ಫುಟವಾಗಿ, ಆಕರ್ಷಕವಾಗಿ ಡಾ.ಶಾಸ್ತ್ರಿಗಳು ಚಿತ್ರಿಸಿದ್ದಾರೆ. ಅದರಲ್ಲೂ ರಾಳ್ಳಪಲ್ಲಿ ಅನಂತಕೃಷ್ಣಶರ್ಮ, ಡಿ.ಎಲ್.ನರಸಿಂಹಾಚಾರ್, ಎಸ್.ಶ್ರೀಕಂಠಶಾಸ್ತ್ರಿಗಳನ್ನು ಕುರಿತ ಬರಹಗಳು ಮಾದರಿವ್ಯಕ್ತಿಚಿತ್ರಗಳಾಗಿವೆ. ಈ ಮಹನೀಯರುಗಳ ಬಹುಮುಖ ಪ್ರತಿಭೆ, ಬಹುಭಾಷಾಭಿಜ್ಞತೆ, ವ್ಯಾಸಂಗಶ್ರದ್ಧೆ, ಪಾಂಡಿತ್ಯ, ಸಹೃದಯತೆಗಳನ್ನು ಸಂದರ್ಭಾನುಸಾರ ಸ್ವಾರಸ್ಯಕರಪ್ರಸಂಗಗಳ ಮೂಲಕ ನಿದರ್ಶನಪಡಿಸಿರುವ ರೀತಿ ಅತ್ಯಂತ ಮೋಹಕವಾಗಿದೆ.

ಭಾಷಾಪ್ರೇಮ

ಸುಮಾರು ನಾಲ್ಕು ದಶಕಗಳಿಂದ ರಾಜ್ಯದಲ್ಲಷ್ಟೇ ಅಲ್ಲದ ರಾಜ್ಯದ ಹೊರಗೂ ಅಧ್ಯಾಪನಕಾರ್ಯದಲ್ಲಿ ತೊಡಗಿ ಅಪಾರ ಅನುಭವ ಪಡೆದಿರುವ ಶಾಸ್ತ್ರಿಗಳು ಶಿಕ್ಷಣ ಕ್ಷೇತ್ರದ ಒಳಹೊರಗುಗಳನ್ನು ಚೆನ್ನಾಗಿ ಬಲ್ಲವರು.

ಸತ್ತ್ವಪೂರ್ಣ ಇಂಗ್ಲಿಷ್ ಭಾಷೆಯ ಸ್ಥಾನಮಾನದಲ್ಲಿ ವ್ಯತ್ಯಯವಾದರೆ ವಿದ್ಯೆಯ ಮಟ್ಟ ಏರುಪೇರಾಗುತ್ತದೆಂಬ ಚಿಂತೆ, ಹಿಂದಿನ ಬಾಗಿಲಿನಿಂದ ಹಿಂದಿಯನ್ನು ಹೇರುವ ಸಂಚು ಇತ್ಯಾದಿ ತೊಡಕುಗಳ ಮಧ್ಯೆ ನಮ್ಮ ತಾಯಿನುಡಿ, ರಾಜ್ಯಭಾಷೆ ಶಿಕ್ಷಣರಂಗದಲ್ಲಿ ತಲೆಯೆತ್ತುವುದು ಹೇಗೆ? ಎಂಬ ವಿಷಯವಾಗಿ ಡಾ.ಶಾಸ್ತ್ರಿಗಳು ಆಡಿರುವ ದಿಟ್ಟ, ಸ್ಪಷ್ಟ ಮಾತುಗಳು ಇವು.

"ವಿಶ್ವದ ಮುಂದುವರಿದ ದೇಶಗಳಾದ ರಷ್ಯ, ಜಪಾನ್ ಮೊದಲಾದವುಗಳಲ್ಲಿ ಆಯಾ ದೇಶಭಾಷೆ ಅಥವಾ ಭಾಷೆಗಳೇ ಅಲ್ಲಿಯ ಶಿಕ್ಷಣದ ಬೋಧನಮಾಧ್ಯಮ ವಾಗಿರುವುದು ನಮಗೆ ತಿಳಿದಿದೆ. ಅವು ಸಾಧಿಸಿರುವ ಪ್ರಗತಿಗೆ ಆಯಾ ದೇಶದ ಸ್ವಭಾಷೆ ಗಳು ಸಹಕಾರಿಗಳೇ ಆಗಿವೆಯಲ್ಲದೆ ಅಡ್ಡಿಯಾಗಿಲ್ಲ. ನಮಗೆ ಮಾತ್ರ ಇಂಗ್ಲಿಷ್ ಮೋಹ, ಹಿಂದಿ, ಸಂಸ್ಕೃತಗಳ ಕಡೆ ಕಣ್ಣು."

"ಇಂಗ್ಲಿಷ್ ನಮ್ಮ ಉದ್ಧಾರದ ಜ್ಯೋತಿ ಎನ್ನುವುದು ಒಂದು ಭ್ರಮೆ. ಪ್ರಾಚೀನ ಭಾರತದಲ್ಲಿ ಸಂಸ್ಕೃತದ ಬಗೆಗೆ, ಐರೋಪ್ಯ ದೇಶಗಳಲ್ಲಿ ಲ್ಯಾಟಿನ್ ಬಗೆಗೆ, ಇಂಗ್ಲಿಷ್ ಜನರಲ್ಲಿ ಫ್ರೆಂಚ್ ಬಗೆಗೆ ಇಂತಹುದೇ ಭ್ರಮೆಗಳು ಒಂದು ಕಾಲಕ್ಕೆ ಇದ್ದವು. ಆ ಪೊರೆ ಈಗ ಹರಿದಿದೆ. ಐರ್ಲೆಂಡ್‌ನಂತಹ ಚಿಕ್ಕದೇಶ ಸ್ವಾತಂತ್ರ್ಯ ಗಳಿಸಿದ ಮೇಲೆ ತನ್ನ ಮೂಲಭಾಷೆ ಗ್ಯಾಲಿಕ್‌ಗೆ ಜೀವವಿತ್ತು, ಶಾಲೆ ಆಡಳಿತಗಳಲ್ಲಿ ಇಂಗ್ಲಿಷ್‌ನ ಸ್ಥಾನದಲ್ಲಿ ಅದನ್ನು ಸ್ಥಾಪಿಸಿದೆ. ಕೆನಡಾ ತನ್ನ ಜನಸಂಖ್ಯಾಸಾಂದ್ರತೆಗೆ ಅನುಗುಣವಾಗಿ ಫ್ರೆಂಚ್, ಇಂಗ್ಲಿಷ್ ಎರಡನ್ನೂ ಶಿಕ್ಷಣಮಾಧ್ಯಮದಲ್ಲಿ ಅಧಿಕೃತ ಭಾಷೆಯಾಗಿ ಮಾನ್ಯ ಮಾಡಿದೆ. ಕನ್ನಡ ನಾಡಿನ ಶಿಕ್ಷಣರಂಗದಲ್ಲಿ ಕನ್ನಡ ಭಾಷೆಯೇ ಬೋಧನಮಾಧ್ಯಮವಾಗುವುದು ಅತ್ಯಂತ ಸೂಕ್ತವಾದ ಕ್ರಮ."

ಇದಕ್ಕೆ ಇರುವ ತೊಡಕುಗಳೇನು? ಡಾ.ಶಾಸ್ತ್ರಿಗಳು ಹೇಳುತ್ತಾರೆ: "ಮುಖ್ಯವಾದ ಕೊರತೆಯೆಂದರೆ, ತತ್‌ಕ್ಷಣವೇ ಕಾರ್ಯಪ್ರವೃತ್ತವಾಗಲು ಬೇಕಾದ ಕ್ರಿಯಾಸಂಕಲ್ಪ ಹಾಗೂ ಸಾಹಸಪ್ರವೃತ್ತಿ. ಕೆಲವು ನಿಜವಾದ ತೊಡಕುಗಳು, ತೊಂದರೆಗಳು; ಇನ್ನು ಕೆಲವು ಭ್ರಮೆಗಳು, ಸಲ್ಲದ ಚಿಂತೆಗಳು. ಇವೆಲ್ಲವನ್ನೂ ಮೀರಿಸುವಂತಹುದು ಎಂದರೆ ರಾಜಕೀಯ ಚದುರಂಗದಾಟ. ಭಾವಶುದ್ಧಿಯಿಲ್ಲದೆ, ಸರಿಯಾದ ಮುನ್ನೋಟವಿಲ್ಲದೆ ಪ್ರಜೆಯ ಅಭ್ಯುದಯ ಸಾಧ್ಯವಿಲ್ಲ. ಅಪೇಕ್ಷೆ ಸಾಧುವಾದುದಾದರೆ, ಉದ್ದೇಶವನ್ನು ಸಾಧಿಸಲು ಧೈರ್ಯದಿಂದ ಸಾಗುವುದರಲ್ಲಿ ಯಾವ ತಪ್ಪೂ ಇಲ್ಲ. ಸ್ಥಿತ್ಯಂತರದ ಅವಧಿ ಯಲ್ಲಿ ಈಗ ನಮಗೆ ಬೇಕಾಗಿರುವುದು ಉತ್ಕಟ ಕನ್ನಡಪ್ರೇಮದ ಉದಾತ್ತನಾಯಕತ್ವ."

ಡಾ.ಶಾಸ್ತ್ರಿಗಳ 'ಸಾಹಿತ್ಯಮಂಥನ', 'ಕನ್ನಡ ಛಂದಸ್ಸು' ಕೃತಿಗಳಿಗೆ ದೇವರಾಜ ಬಹದ್ದೂರ್ ಬಹುಮಾನ, 'ಕನ್ನಡ ಛಂದಸ್ಸ್ವರೂಪ' ಗ್ರಂಥಕ್ಕೆ ಮೈಸೂರು ವಿಶ್ವವಿದ್ಯಾನಿಲಯದ ಸುವರ್ಣ ಮಹೋತ್ಸವ ಪ್ರಶಸ್ತಿ ದೊರೆತಿದೆ. 'ಕನ್ನಡ ಚಿತ್ರಕಾವ್ಯ'

ಕೃತಿಗೆ ೧೯೮೭ರ ಗ್ರಂಥಲೋಕದ 'ವರ್ಷದ ಲೇಖಕ' ಪ್ರಶಸ್ತಿ, ಐ.ಬಿ.ಎಚ್.ಶಿಕ್ಷಣ ಟ್ರಸ್ಟ್ ಪ್ರಶಸ್ತಿ, ೧೯೮೮ರಲ್ಲಿ ರಾಜ್ಯೋತ್ಸವ ಗೌರವ, ಸಾಹಿತ್ಯ ಅಕಾಡೆಮಿ ಬಹುಮಾನ ಸಾಹಿತ್ಯ ಪರಿಷತ್ತಿನ ವಜ್ರಮಹೋತ್ಸವ ಸನ್ಮಾನ ಹೀಗೆ ಹತ್ತು ಹಲವು ಪ್ರಶಸ್ತಿಗಳು ಶಾಸ್ತ್ರಿಗಳ ಕೊರಳನ್ನು ಅಲಂಕರಿಸಿವೆ.

ಡಾ.ಶಾಸ್ತ್ರಿಗಳ ಜೀವನದೇವತೆ ಶ್ರೀಮತಿ ಲಕ್ಷ್ಮಿ. ಡಾ.ಶಾಸ್ತ್ರಿಗಳ ಅಧ್ಯಯನ ಅಧ್ಯಾಪನ ಕಾರ್ಯಗಳಿಗೆ ಎಂದೂ ತೊಡಕಾಗದಂತೆ ಉದ್ದಕ್ಕೂ ಒತ್ತಾಸೆ ನೀಡುತ್ತ ಬಂದಿರುವ ಸಹಧರ್ಮಿಣಿಗೆ ತಮ್ಮ ಪಿಎಚ್.ಡಿ ಪ್ರಬಂಧವನ್ನು ಒಲುಮೆಯ ಕಿರು ಕಾಣಿಕೆಯಾಗಿ ನೀಡಿದ್ದಾರೆ. ಇವರಿಗೆ ಮೂವರು ಹೆಣ್ಣುಮಕ್ಕಳು, ಒಬ್ಬ ಮಗ. ಸುಖೀ ಕುಟುಂಬ.

ಡಾ.ಶಾಸ್ತ್ರಿಗಳು ಹೀಗೆಯೇ ಒಲುಮೆಯ ಸುಖೀಜೀವನವನ್ನು ನಡೆಸುತ್ತ ನಾಡು-ನುಡಿಗೆ ನೂರ್ಕಾಲ ಮಹತ್ತರ ಸೇವೆ ಮಾಡುತ್ತಿರಲಿ ಎಂದು ಅರುವತ್ತರ ಹುಟ್ಟುಹಬ್ಬದ ಸಂದರ್ಭದಲ್ಲಿ ಹಾರೈಸುತ್ತೇವೆ.*

---

* ಉತ್ಥಾನ, ಆಗಸ್ಟ್ ೧೯೯೩

ಸಾಹಿತ್ಯಶೋಧ

ವಿ.ಚಂದ್ರಶೇಖರ ನಂಗಲಿ

ಟಿ.ವಿ.ವೆಂಕಟಾಚಲ ಶಾಸ್ತ್ರೀ ಅವರ 'ಶಾಸ್ತ್ರೀಯ' ಸಂಪುಟಮಾಲೆಯ ಆರನೆಯ ಕೃತಿ 'ಸಾಹಿತ್ಯಶೋಧ'. ಇದರಲ್ಲಿ ೧. ಲೇಖನಗಳು-ಭಾಷಣಗಳು ೨. ಪೀಠಿಕೆಗಳು-ಮುನ್ನುಡಿಗಳೆಂಬ ಎರಡು ಭಾಗಗಳಿದ್ದು ಒಟ್ಟು ೧೨+೭೧೧ ಪುಟಗಳಿವೆ. ನನ್ನ ಸಹೋದ್ಯೋಗಿಗಳೂ ಪ್ರಿಯಮಿತ್ರರೂ ಆದ ಶ್ರೀ ಎಲ್.ಎಸ್.ಶಿವಮೂರ್ತಿ ಅವರು ಡಾ.ಟಿ.ವಿ.ವಿ. ಅವರ ಅಳಿಯನಾಗಿರುವುದರಿಂದ ನನ್ನೊಂದಿಗೆ ಮಾತನಾಡುತ್ತಾ ಸಹಜವಾಗಿಯೇ ಡಾ.ಟಿ.ವಿ.ವಿ.-೭೫ರ ಯೋಜನೆಯನ್ನು ವಿವರಿಸುತ್ತಾ ನನ್ನದೊಂದು ಲೇಖನವನ್ನು ಕೋರಿದರು. ಡಾ.ಟಿ.ವಿ.ವಿ. ಅವರ ವಿದ್ವತ್ಪೂರ್ಣ ಬರೆಹಗಳ ಅಭಿಮಾನಿಯಾಗಿರುವ ನಾನು ಕೃತಿಸಮೀಕ್ಷೆಗಾಗಿ ಶ್ರೀ ಶಿವಮೂರ್ತಿಯವರ ಮನೆಗೆ ಹೋಗಿ ಸ್ವತಃ ಆಯ್ಕೆ ಮಾಡಿಕೊಂಡ ಕೃತಿಯೇ ಮೇಲೆ ಪ್ರಸ್ತಾಪಿಸಿದ 'ಸಾಹಿತ್ಯ ಶೋಧ'ವೆಂಬ ಸಂಪುಟಗ್ರಂಥ. ಈ ಬೃಹತ್ ಗ್ರಂಥವನ್ನು ಪರೀಕ್ಷಿಸುವ ಅಥವಾ ವಿಮರ್ಶಿಸುವ ವಿದ್ವತ್ತು ಮತ್ತು ಅನುಭವಗಳ ಕೊರತೆಯಿರುವ ನಾನು, ಪ್ರಸ್ತುತ, ಇದರ ಓದಿನಿಂದ ಲಭ್ಯವಾದ ಒಳನೋಟಗಳು ಮತ್ತು ಸಾಂಸ್ಕೃತಿಕವಾಗಿ ಮುಖ್ಯವೆನಿಸುವ ಕೆಲವಂಶಗಳನ್ನು ಸಹೃದಯರೊಂದಿಗೆ ಈ ಮೂಲಕ ಹಂಚಿಕೊಳ್ಳಲು ಇಚ್ಛಿಸುತ್ತೇನೆ.

ಈ ಗ್ರಂಥದಲ್ಲಿ ನನ್ನ ಮನಸೆಳೆದ ಎರಡು ಲೇಖನಗಳೆಂದರೆ ೧. ಬದ್ಧ ಪ್ರಮೀತ್ಯೂಸ್ ೨. ಕನ್ನಡ ಕವಿಗಳು ಕಂಡ ಗೊಮ್ಮಟೇಶ್ವರ. ಮೊಳೆ-ಸರಪಳಿಗಳಿಂದ ಹೆಬ್ಬಂಡೆಗೆ ಜಡಿಯಲ್ಪಟ್ಟ ಪ್ರಮೀತ್ಯೂಸ್ ಮತ್ತು ಎಲ್ಲ ಪಾಶಗಳನ್ನು ಕಿತ್ತೊಗೆದು ಬಿಚ್ಚುಗತ್ತಿಯಂತೆ ಮುಕ್ತನಾಗಿರುವ ಗೊಮ್ಮಟೇಶ್ವರ ಇವೆರಡೂ ಪುರಾಣಮೂಲವಾದ ಮಹಾನ್ ಕಾವ್ಯಪ್ರತಿಮೆಗಳು. ಒಂದು ಅನ್ಯ ಸಂಸ್ಕೃತಿಯದು; ಮತ್ತೊಂದು ಸ್ವಂತ ಸಂಸ್ಕೃತಿಯದು. ಆಯಾ ನುಡಿ-ನಾಡು-ನಾಡವರ ಮಹತ್ ಸ್ವಪ್ನಗಳೂ ಆಗಿರುವ ಪ್ರಮೀತ್ಯೂಸ್ ಮತ್ತು ಗೊಮ್ಮಟೇಶ್ವರರ ಬಗ್ಗೆ ಡಾ.ಟಿ.ವಿ.ವಿ. ಅವರು ಕಲೆಹಾಕಿರುವ ಅಧಿಕೃತ ಮಾಹಿತಿ ಮತ್ತು ಉಪಯುಕ್ತ ವಿವರಣೆ ವಿಶ್ಲೇಷಣೆಗಳು ಅಪೂರ್ವವಾಗಿವೆ. ಈಸ್ಕಿಲಸ್ ಮಹಾಕವಿ ಸೃಜಿಸಿದ 'ಬದ್ಧ ಪ್ರಮೀತ್ಯೂಸ್' ನಾಟಕದ ಕಥನವು ಬೆಳೆದು ಬಂದ ಬಗೆ, ಮೌಖಿಕ ಪರಂಪರೆಯನ್ನು ಆಧರಿಸಿ ಈಸ್ಕಿಲಸ್ ಸೃಷ್ಟಿಸಿದ ಕುಸುರಿಕಲೆಯನ್ನು ಡಾ.ಟಿ.ವಿ.ವಿ. ಮನಮುಟ್ಟುವಂತೆ ನಿರೂಪಿಸಿದ್ದಾರೆ. ಮನುಕುಲದ ಕಲ್ಯಾಣಕ್ಕಾಗಿ 'ಅಗ್ನಿವಾಹಕ'ನಾಗುವ ಪ್ರಮೀತ್ಯೂಸ್, ಸ್ಯೂಸ್‌ದೇವನ ಆಗ್ರಹಕ್ಕೆ ತುತ್ತಾಗಿ ಮೊಳೆ

ಸರಪಳಿಗಳಿಂದ ಹೆಬ್ಬಂಡೆಗೆ ಜಡಿಯಲ್ಪಟ್ಟು ಬಂಧಿತನಾಗುವುದು ಸಹೃದಯರ ಮನಕಲಕುವ ವೃತ್ತಾಂತವಾಗಿದೆ. ಆರಂಭದ ಆಗ್ರಹವೇ ಮುಂದೆ ಅನುಗ್ರಹವಾಗಿ ಪರಿಣಮಿಸುವುದು ಗ್ರೀಕ್ ನಾಟಕಗಳ ವೈಶಿಷ್ಟ್ಯವೆಂಬುದನ್ನು ತಿಳಿಸಲಾಗಿದೆ. ಇದನ್ನು ಸುಪ್ರಸಿದ್ಧ ಆಂಗ್ಲ ವಿಮರ್ಶಕ ಗಿಲ್ಬರ್ಟ್ ಮರ್‍ರೆಯವರ ನಿರೂಪಣೆಗಳನ್ನಾಧರಿಸಿ ನೀಡಿದ್ದಾರೆಂಬುದು ಗಮನಾರ್ಹ! ಅಂತೆಯೇ, ಲೋಕಕಲ್ಯಾಣದ ಸಿದ್ಧಿಯಾಗಬೇಕಾದರೆ ಎಲ್ಲ ಪಾಶಗಳನ್ನು ಕಿತ್ತೊಗೆದು ಬೆಟ್ಟದ ತುತ್ತತುದಿಯಲ್ಲಿ ತಂಬಿಟ್ಟಿನ ದೀಪದ ಕುಡಿಯಂತೆ ಪ್ರತಿಮಾಯೋಗದಲ್ಲಿ ನಿಂತು 'ಗಗನಚುಂಬಿ'ಯಾಗಿಬಿಡುವ ಗೊಮ್ಮಟೇಶ್ವರನ ಶಿಲ್ಪ ಮತ್ತು ಕಥನಗಳ ಸುವಿಸ್ತರ ಹಿನ್ನೆಲೆಯನ್ನು ಡಾ.ಟಿ.ವಿ.ವಿ. ಶಿಸ್ತಾಗಿ ಒದಗಿಸಿದ್ದಾರೆ. ಐಹೊಳೆ, ಬಾದಾಮಿ, ಎಲ್ಲೋರಾ ಗುಹೆಗಳಲ್ಲಿರುವ ಗೊಮ್ಮಟೇಶ್ವರನ ಉಬ್ಬುಶಿಲ್ಪಗಳಿಂದ ಹಿಡಿದು ತೀರ ಇತ್ತೀಚೆಯ ಧರ್ಮಸ್ಥಳದ ಗೊಮ್ಮಟೇಶ್ವರನವರೆಗೆ, ಜಿನಸೇನ-ಪಂಪಮಹಾಕವಿಯಿಂದ ಹಿಡಿದು ಆಧುನಿಕ ಸಾಹಿತ್ಯದವರೆಗೆ ಕನ್ನಡ ಕವಿಗಳು ಕಂಡ ಗೊಮ್ಮಟೇಶ್ವರನನ್ನು ಸರ್ವಗ್ರಾಹಿಯಾಗಿ ನಿರೂಪಿಸಿರುವುದೊಂದು ವಿಶೇಷವಾಗಿದೆ. ಕವಿಗಳೆನಿಸಿಕೊಂಡವರು ಬದ್ಧ ಪ್ರಮೀತ್ಯೂಸ್ ಮತ್ತು ಗೊಮ್ಮಟೇಶ್ವರನನ್ನು ಹೋಲಿಸಿ ಖಂಡಕಾವ್ಯ ಮಹಾಕಾವ್ಯಗಳನ್ನೇ ರಚಿಸುವಷ್ಟು ಸ್ಫೂರ್ತಿಯ ಸೆಲೆಗಳು ಇವೆರಡು ಲೇಖನಗಳಲ್ಲಿವೆ. ಗೊಮ್ಮಟೇಶ್ವರನ ಶಿಲ್ಪಕ್ಕೆ ಸಂಬಂಧಪಟ್ಟಂತೆ ನಾನು ಗಮನಿಸಿರುವ, ಡಾ.ಟಿ.ವಿ.ವಿ. ಅವರು ಪ್ರಸ್ತಾಪಿಸಿಲ್ಲದ ಸಣ್ಣ ಮಾಹಿತಿಯೊಂದು ಹೀಗಿದೆ: ಶೃಂಗೇರಿಯಲ್ಲಿರುವ ಪ್ರಾಚೀನ ದೇವಸ್ಥಾನದ ಗೋಪುರದಲ್ಲಿ ಗೊಮ್ಮಟೇಶ್ವರನ ಉಬ್ಬು ಶಿಲ್ಪವನ್ನು ನಾನು ಕಂಡಿದ್ದೇನೆ. ಬಾದಾಮಿ ಐಹೊಳೆಯ ಗುಹಾಂತರ ದೇವಾಲಯಗಳ ಗೋಡೆಗಳ ಮೇಲಿರುವ ಗೊಮ್ಮಟೇಶ್ವರನ ಉಬ್ಬು ಶಿಲ್ಪವೂ ಗಮನಾರ್ಹವೆಂದು ನನ್ನ ಅಭಿಪ್ರಾಯ. ಗೊಮ್ಮಟೇಶ್ವರನ ಕಥನಕ್ಕೆ ಸಂಬಂಧಿಸಿ ಕನ್ನಡದಲ್ಲಿ ಪಂಪ ಮತ್ತು ರತ್ನಾಕರವರ್ಣಿಯರ ಭಿನ್ನ ಕಥಾಸಂಪ್ರದಾಯಗಳಿವೆಯೆಂಬ ರೂಢಿಗತ ಅಭಿಪ್ರಾಯವನ್ನು ಹೋಲುವಂತೆ ಡಾ.ಟಿ.ವಿ.ವಿ. ಅವರು ವಿವರಿಸಿರುವುದುಂಟು.

"... (ಚದುರ ಚಂದ್ರಮನು) ರತ್ನಾಕರವರ್ಣಿಯ ಹಾಗೆ ಸಂಪ್ರದಾಯದ ಕಥೆಗೆ ಸಮ್ಮತವಾದ ಸರಣಿಯನ್ನು ಎಲ್ಲಿಯೂ ಬದಲಾಯಿಸಿಲ್ಲ ಎನ್ನುವುದನ್ನು ವಿಶೇಷವಾಗಿ ಗಮನಿಸಬೇಕು. ಚಂದ್ರಮನು 'ಭರತೇಶ ವೈಭವ'ವನ್ನು ಓದಿರುವ ಸಾಧ್ಯತೆಯೇನೋ ಅಲ್ಲಲ್ಲಿ ಕಾಣುತ್ತದೆ. ಆದರೆ ಅಲ್ಲಿಯ ಹಾಗೆ ಹಠಮಾರಿಯೂ ಅಸಹನಶೀಲನೂ ಆಗಿ ಕಾಣುವ ಬಾಹುಬಲಿಯ ಚಿತ್ರಣ ಅವನ ಮನಸ್ಸಿಗೆ ಹಿಡಿಸಿಲ್ಲ; ಭ್ರಾತೃವತ್ಸಲನೂ ಉದಾರಹೃದಯನೂ ಆದ ಭರತನ ಎದುರಿನಲ್ಲಿ ಬಾಹುಬಲಿಯನ್ನು ಕುಬ್ಜಗೊಳಿಸುವುದಂತೂ ಅವನಿಗೆ ಸಾಧ್ಯವಾಗದ ಮಾತು...."(ಪುಟ ೫೬೭).

ಪಂಪ ಮತ್ತು ರತ್ನಾಕರವರ್ಣಿಯರ ನಿರೂಪಣೆಗಳಲ್ಲಿ ಮೂಲಭೂತ ವ್ಯತ್ಯಾಸವೇನೂ ಇಲ್ಲ. ಪಂಪನ ನಿಜವಾದ ಸಹೃದಯನೆಂದರೆ ರತ್ನಾಕರವರ್ಣಿಯೆಂದೇ

ಹೇಳಬೇಕು. ಪಂಪನಲ್ಲಿ ಬೀಜರೂಪಿಯಾಗಿದ್ದ ವಸ್ತುವಿಚಾರವನ್ನು ರತ್ನಾಕರವರ್ಣಿಯು ಸಸಿಯಾಗಿ ನೆಟ್ಟು ಬೆಳೆಸಿ ಹೆಮ್ಮರವನ್ನಾಗಿ ಮಾಡಿದ್ದಾನೆಂಬುದಕ್ಕೆ 'ಆದಿಪುರಾಣ'ದ ಈ ಪದ್ಯವನ್ನು ಸೂಕ್ಷ್ಮವಾಗಿ ಮನನ ಮಾಡಿಕೊಳ್ಳಬೇಕಾಗಿದೆ :

> ಕಿಸುಸಂಜೆವೆರಸು ಕಟ್ಟಲೆ ಪಸರಿಸಿದಪುದು ಎನಿಸಿ
> ಕಣ್ಣ ಕೆಂಪುಂ ಭ್ರುಕುಟಿ ಪ್ರಸಾರಾಂಧಕಾರಮುಂ
> ದೆಸೆದೆಸೆಗೆ ಎಸೆದುದು
> ಬಾಹುಬಲಿ ನೃಪಾಸ್ಥಾಯಿಕೆಯೊಳ್- ೧೪. ೮೨

ಪಂಪನ ಸರಳ ಆದಿಪುರಾಣ - ಎಲ್.ಬಸವರಾಜು

> ಕೆಂಬಣ್ಣದ ಸಂಜೆಬೆರಸು ಕತ್ತಲೆ ಹಬ್ಬುತ್ತಿದೆಯೆಂಬಂತೆ (ಬಾಹುಬಲಿಯ)
> ಕಣ್ಣಿನ ಕೆಂಪೂ, ಹುಬ್ಬಿನಾಟದ ಕತ್ತಲೂ ದಿಕ್ಕು ದಿಕ್ಕಿಗೆ ತೆಕ್ಕೆಗೊಂಡಿತು ಆ
> ಬಾಹುಬಲಿ ನೃಪನ ಆಸ್ಥಾನದಲ್ಲಿ- (೧೪.೮೨)

ಪಂಪನ ಆದಿಪುರಾಣ ಕಥಾಮೃತ - ಎಲ್.ಬಸವರಾಜು

ರಾಯಭಾರಿಯಾದ ವೃದ್ಧ ಮಹತ್ತರ ಮತ್ತು ಬಾಹುಬಲಿಯ ಸಂವಾದದ ನಂತರ, ಸೂರ್ಯಾಸ್ತದ ಕೆಂಬಣ್ಣ (=ಬಾಹುಬಲಿಯ ಕೆಂಗಣ್ಣು) ಮತ್ತು ದಿಗಂತವ್ಯಾಪಿ ಕತ್ತಲೆ (=ಬಾಹುಬಲಿಯ ಕಗ್ಗಪ್ಪು ಹುಬ್ಬು)ಗಳನ್ನು ವರ್ಣಿಸುತ್ತಿರುವ ಈ ಪದ್ಯ ಪಂಪನ ಹಿತಮಿತ ಮೃದುವಚನದ ಪರಿಪಕ್ವಫಲವಾಗಿದೆ. ಸಂಜೆಗೆಂಪಿನೊಡನೆ ದಟ್ಟವಾದ ಕತ್ತಲೆ ಹಬ್ಬುತ್ತಿರುವುದೋ ಎಂಬಂತೆ ಬಾಹುಬಲಿಯ ಮುಖದಲ್ಲಿ ಕೆಂಗಣ್ಣು ಸಹಿತವಾಗಿ ಕಪ್ಪುಬಣ್ಣದ ಹುಬ್ಬುಗಳು ಮೇಲಕ್ಕೇರುತ್ತಾ ರಾಜಾಸ್ಥಾನದಲ್ಲೆಲ್ಲ ಕೋಪದ ಕಿಡಿಗಳನ್ನುಗುಳಿದವು ಎಂಬುದೇ ಬೀಜರೂಪಿಯಾದ ಗ್ರಹಿಕೆ. ಬಾಹುಬಲಿಯ ಹೃದಯ ಮುಖದ ಕತ್ತಲೆ, ಸಂಜೆಗೆಂಪಿನ ದಿಗಂತವ್ಯಾಪಿ ಕತ್ತಲೆ, ರಾಜಾಸ್ಥಾನದಲ್ಲೆಲ್ಲ ಕವಿದ ಕತ್ತಲೆ -ಹೀಗೆ ಕತ್ತಲೆಯ ಒಳಗು-ಹೊರಗುಗಳನ್ನು ಪಂಪಕವಿ ಅದ್ಭುತವಾಗಿ ಚಿತ್ರಿಸಿದ್ದಾನೆ. ಪಂಪನ ಕಣ್ನೋಟದ ಸೂಚನೆಗಳನ್ನು ಸರಿಯಾಗಿ ಗ್ರಹಿಸಿದ ಸಹೃದಯನಾದ ರತ್ನಾಕರ ವರ್ಣಿ 'ಭರತೇಶವೈಭವ'ದ ಮೂಲಕ ಬೀಜ-ವೃಕ್ಷ ನ್ಯಾಯವನ್ನು ಸಾಕ್ಷಾತ್ಕಾರಗೊಳಿಸಿದ್ದಾನೆ. ಆದ್ದರಿಂದ, ಗೊಮ್ಮಟೇಶ್ವರನ ಕಥನಕ್ಕೆ ಸಂಬಂಧಪಟ್ಟಂತೆ ಕನ್ನಡದಲ್ಲಿ ಭಿನ್ನಮತವಿಲ್ಲ; ಎಲ್ಲ ಕವಿಗಳಲ್ಲೂ ಘನವಾದ ಐಕಮತ್ಯವೊಂದೇ ಕಾಣುತ್ತದೆ.

'ಹೊಸಗನ್ನಡ ವ್ಯಾಕರಣ'ವೆಂಬ ಪುಸ್ತಕಕ್ಕೆ ಬರೆದ ಮುನ್ನುಡಿಯಲ್ಲಿ ಡಾ. ಟಿ.ವಿ.ವಿ. ಅವರು ಒಪ್ಪಿಕೊಂಡು ಉಲ್ಲೇಖಿಸಿರುವ (=ಇದು ಮೂಲತಃ ಆರ್.ನರಸಿಂಹಾಚಾರ್ ಅವರು ಬಳಸಿರುವ, ನ್ಯೂಯಾರ್ಕ್ ಪತ್ರಿಕೆಯೊಂದರಲ್ಲಿ ಪ್ರಕಟವಾಗಿದ್ದ ಉಲ್ಲೇಖ) ಆಯ್ದ ಇಂಗ್ಲಿಷ್ ವಿವರಣೆಯ ಕನ್ನಡಾನುವಾದವನ್ನು ಡಾ.ಟಿ.ವಿ.ವಿ. ಅವರೇ ಒದಗಿಸಿದ್ದಾರೆ:

"....ಯಾವನು ಒಂದು ಗ್ರಾಮ್ಯವಾದ ವಾಗ್ರೂಢಿಯನ್ನು ಒಂದು ಅಶುದ್ಧ ರೂಪವನ್ನು ಗುರುತಿಸಿ ಅದನ್ನು ಅಂಕೆಗೆ ತರುತ್ತಾನೆಯೋ ಅವನೊಬ್ಬ ಜನೋಪಕಾರಿ. ವಿದ್ಯಾವಂತನಾಗಿ ತನ್ನ ಮೇಲಿರುವ ಪವಿತ್ರವಾದ ಜವಾಬ್ದಾರಿಯ ನಿರ್ವಹಣೆಯಲ್ಲಿ ತನ್ನ ರಾಷ್ಟ್ರದ ಕ್ಷೇಮ ಮತ್ತು ಘನತೆಯ ರಕ್ಷಾಪ್ರಾಕಾರದ ಕಟ್ಟಡದ ನಿರ್ಮಾಣದಲ್ಲಿ ತಾನು ಸಹ ಒಂದು ಇಟ್ಟಿಗೆ ಇಟ್ಟ ಹಾಗೆಯೇ ಇದರಿಂದ ಆಗುತ್ತದೆ." ಪು. ೭೦೩

ಭಾಷೆಗೆ ಕಾಯಕಲ್ಪ ಚಿಕಿತ್ಸೆ ನೀಡುವ ವ್ಯಾಕರಣಕಾರರಿಗೂ ಭಾಷೆಗೆ ಸಂಬಂಧಪಟ್ಟ ಕಾಯಕಧರ್ಮ ನಿರ್ವಹಿಸುವ ಭಾಷಾವಿಜ್ಞಾನಿಗಳಿಗೂ ನಡುವೆ ಇರುವ ಸಂಘರ್ಷವು ಡಾ.ಟಿ.ವಿ.ವಿ. ಅವರಿಗೆ ಚೆನ್ನಾಗಿ ಗೊತ್ತಿದೆ. ಇದೇ ಗ್ರಂಥದಲ್ಲಿರುವ 'ಭಾಷಾಶಾಸ್ತ್ರ ಅಧ್ಯಯನದ ಸವಾಲುಗಳು' ಮತ್ತು 'ದ್ರಾವಿಡ ಭಾಷಾಧ್ಯಯನ' ಎಂಬ ಎರಡು ಲೇಖನಗಳಲ್ಲಿ ಇಂಥ ಸಂಘರ್ಷವನ್ನು ಸಾದ್ಯಂತವಾಗಿ ಗುರುತಿಸಿದ್ದಾರೆ. ಆದರೆ ವ್ಯಾಕರಣ ಪುಸ್ತಕಕ್ಕೆ ಬರೆದ ಮುನ್ನುಡಿಯಲ್ಲಿ ಮೇಲಿನ ಉಲ್ಲೇಖವಿತ್ತು ತಮ್ಮ ಇಷ್ಟಪಕ್ಷವೇನೆಂಬುದನ್ನು ತೋರಿಸಿಕೊಂಡಿದ್ದಾರೆ. ಭಾಷಾವಿಜ್ಞಾನಿಗಳ ಮಾರ್ಗವು ಕಿವಿ ಕೇಂದ್ರಿತವಾದದ್ದು(=ಶ್ರಾವಣ ಪಕ್ಷ); ವ್ಯಾಕರಣಕಾರರ ಮಾರ್ಗವು ಕಣ್ಣು ಕೇಂದ್ರಿತವಾದದ್ದು (=ಚಾಕ್ಷುಷಪಕ್ಷ). ಕುಮಾರವ್ಯಾಸಭಾರತದ ಪ್ರಕಾರ ಸತ್ಯದ ಸಾಕ್ಷಾತ್ಕಾರವನ್ನು ಇಂಗಿತ ಮಾಡಿಕೊಳ್ಳುವುದು ಉತ್ತಮ; ಕಿವಿಯಿಂದ ಕೇಳಿ ಗ್ರಹಿಸುವುದು ಮಧ್ಯಮ; ಕಣ್ಣಿಂದ ನೋಡಿ ತಿಳಿಯುವುದು ಅಧಮ ಎಂದು ಉದ್ಯೋಗಪರ್ವ ಹೇಳುತ್ತದೆ. 'ವಸ್ತುನಿಷ್ಠ' ವಿವೇಚನೆಗೆ ಹೆಸರಾದ ಡಾ.ಟಿ.ವಿ.ವಿ. ಅವರು ಇಷ್ಟಜನರಿಗೆ ಬರೆದ ಮುನ್ನುಡಿಯಲ್ಲಿ ವ್ಯಕ್ತಿನಿಷ್ಠ ಅಭಿಪ್ರಾಯ ಕೊಟ್ಟಿರುವುದು ಉಚಿತವೆನಿಸುವುದಿಲ್ಲ.

ಮನುಕುಲದ ಕ್ರಿಯೆ ಕಾಲ ದೇಶಗಳ ಉಪಾಧಿಗೊಳಪಟ್ಟ 'ವೈಚಾರಿಕತೆ'ಯನ್ನು ವಿವೇಚಿಸುವಾಗ ಎಚ್ಚರ ತುಂಬ ಅಗತ್ಯ. ಗುಬ್ಬಿಯಲ್ಲಿ 'ಚಿದಂಬರಾಶ್ರಮ'ವನ್ನು ರೂಪಿಸಿದ ಶ್ರೀ ಚಿದಂಬರರ ಸ್ಮರಣಸಂಚಿಕೆಗೆ ಬರೆದಿರುವ ಮುನ್ನುಡಿಯಲ್ಲಿ ಡಾ.ಟಿ.ವಿ.ವಿ. ಅವರು ಹೀಗೆ ಹೇಳಿದ್ದಾರೆ:

"ಪ್ರಾಚೀನ ಸ್ಮೃತಿಕಾರರು ಮಾಡಿದ ಹಾಗೆಯೇ ನಾವು ಸಹ ಉಪಾದೇಯವಾದುದನ್ನು ಇಟ್ಟುಕೊಳ್ಳೋಣ; ಅನುದಾರವಾದುದನ್ನು, ದೂಷ್ಯವೆಂದು ಕಾಣುವುದನ್ನು ಬಿಟ್ಟುಕೊಡೋಣ. ಇದೇ ಶ್ರೇಯಸ್ಕರವಾದ ಮಾರ್ಗ." ಪು. ೭೦೬

ಡಾ.ಟಿ.ವಿ.ವಿ. ಅವರು ಹೇಳಿರುವ ಮಾರ್ಗವನ್ನು 'ಕುವೆಂಪು ಮಾರ್ಗ'ವೆಂದು ಕರೆದರೆ ತಪ್ಪಿಲ್ಲ. 'ಋಷಿವಾಣಿ' ಮತ್ತು 'ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ' ಎಂಬ ಎರಡು ಕಿರು ಹೊತ್ತಿಗೆಗಳನ್ನು ೧೯೪೦ರ ದಶಕದಲ್ಲೆ ಪ್ರಕಟಿಸಿರುವ ಕುವೆಂಪು ಅವರು ಸಂಸ್ಕೃತ ಭಾಷಾವಾಙ್ಮಯದಿಂದ ನಾವು ಪಡೆದುಕೊಳ್ಳಬೇಕಾದದ್ದು ಏನೆಂಬುದನ್ನು ಖಚಿತವಾಗಿ ತೋರಿಸಿಕೊಟ್ಟಿದ್ದಾರೆ. ಕುವೆಂಪು ಮಾರ್ಗವನ್ನು ಆಯ್ಕೆ ಮಾಡಿಕೊಂಡಿರುವ ಡಾ.ಟಿ.ವಿ.ವಿ. ಅವರು ಜನಿವಾರಧಾರಣೆಯ ಬಗ್ಗೆ ನಡೆಸಿರುವ ವಿವೇಚನೆಯಿದು:

"ಶೂದ್ರರಿಗೆ ಸ್ತ್ರೀಯರಿಗೆ ಅದರ (=ಜನಿವಾರ) ನಿರಾಕರಣೆ ಏಕೆ? ಎಂಬುದನ್ನು ವಿವರಿಸುವಾಗ ಮುಖ್ಯವಾಗಿ ಶೂದ್ರರ ವಿಷಯದಲ್ಲಿ ಸಮರ್ಥನೆ ಅಷ್ಟು ಸ್ಫುಟವಾಗಿ ಮನವರಿಕೆಯಾಗುವಂತಿಲ್ಲ." ಪು. ೭೦೧

ಕರ್ಲಮಂಗಲಂ ಶ್ರೀಕಂಠಯ್ಯನವರ ಲೇಖನಮಾಲೆಗಳನ್ನು ಕುರಿತು ವಿವೇಚಿಸುತ್ತಾ 'ಯಜ್ಞೋಪವೀತ ಧಾರಣೆಗೆ ವೇದಶಾಸ್ತ್ರಾಧಾರಗಳು' ಎಂಬ ಲೇಖನವನ್ನು ಗಮನಿಸಿ ಡಾ. ಟಿ.ವಿ.ವಿ. ಅವರು ಹೇಳಿರುವ ಮಾತುಗಳಿವು. ಸ್ತ್ರೀಯರಿಗೆ, ಶೂದ್ರರಿಗೆ ಜನಿವಾರ ಧಾರಣೆಯ ಹಕ್ಕುಬಾಧ್ಯತೆಗಳ ಮಾತು ಒತ್ತೊಟ್ಟಿಗಿರಲಿ! ಶೂದ್ರರಿಗೆ ಶಾಸ್ತ್ರೀಯವಾಗಿಯೇ ಜನಿವಾರಧಾರಣೆಯ ನಿರಾಕರಣೆಯಿರುವುದನ್ನು ಡಾ.ಟಿ.ವಿ.ವಿ. ಅವರು ಪ್ರಶ್ನಿಸುತ್ತಿದ್ದಾರೆಂಬುದಿಲ್ಲಿ ಮುಖ್ಯ! (=ಜನಿವಾರಧಾರಣೆಯಿಂದ ಜಾತಿಪದ್ಧತಿಯ ತಾರತಮ್ಯಗಳು ನಿವಾರಣೆಗೊಳ್ಳುವುದಿಲ್ಲವೆಂಬುದು ಬೇರೆ ಮಾತು -ಲೇಖಕ) ಇದೇ ಸಂದರ್ಭದಲ್ಲಿ 'ಶ್ರೀ ಶಂಕರರು: ಜೀವನ, ಸಂದೇಶ' ಎಂಬ ಲೇಖನವನ್ನು ಪ್ರಸ್ತಾಪಿಸಬಹುದು. ತಾಯಿಗೆ ಕೊಟ್ಟ ಮಾತನ್ನು ಈಡೇರಿಸುವ ಸಲುವಾಗಿ ಶ್ರೀ ಶಂಕರರು ಸಂನ್ಯಾಸದೀಕ್ಷೆಗೆ ವಿರುದ್ಧವಾಗಿ ನಡೆದು, ರೂಢಿಯನ್ನು ಮುರಿದರೆಂಬುದು ಮಾನವತಾವಾದಿ ದೃಷ್ಟಿಕೋನ ದಿಂದ ಮೆಚ್ಚಿಕೊಳ್ಳಬೇಕಾದ ಸಂಗತಿಯಾಗಿದೆ. ಆದರೆ, ಸನಾತನಧರ್ಮದ ಏಳ್ಗೆಗಾಗಿ ಪರವಿಚಾರ ಮತ್ತು ಪರಧರ್ಮಗಳ ತಂಟೆಗೆ ಹೋದುದು ಸಮರ್ಥನೀಯವಲ್ಲ. ಡಾ.ಟಿ.ವಿ.ವಿ. ಅವರು ಶ್ರೀ ಶಂಕರರು ನಡೆಸಿದ ಸುಧಾರಣಾಕ್ರಮಗಳನ್ನು ಕುರಿತು ವಿವರಿಸುತ್ತಾ ಹೀಗೆ ಹೇಳಿದ್ದಾರೆ:

"...ಮುಂದೆ ಮಾಹಿಷ್ಮತಿಯಿಂದ ತೆರಳಿ, ಮಹಾರಾಷ್ಟ್ರ ಆಂಧ್ರದ ಜನರಲ್ಲಿ ಆಚರಣೆಯಲ್ಲಿದ್ದ ವಿಹಿತವಲ್ಲದ ಆಚರಣೆಗಳನ್ನು ತಿದ್ದಿದ್ದು..." ಪು ೨೩೭

ಆಂಧ್ರದ 'ನಾಗಾರ್ಜುನಕೊಂಡ'ದಲ್ಲಿ ನಡೆದದ್ದೇನು? ಎಂಬುದನ್ನು ಸ್ವಾಮಿ ವಿವೇಕಾನಂದರು ಮತ್ತು ಕೆ.ಎಸ್.ಭಗವಾನ್ ತಮ್ಮ ಭಾಷಣ-ಬರೆಹಗಳಲ್ಲಿ ದಾಖಲಿಸಿರುವುದನ್ನು ಇಲ್ಲಿ ಸ್ಮರಿಸಿಕೊಳ್ಳಬೇಕು. ಇಂಥ ವಿವಾದಾಸ್ಪದ ವಿಚಾರಗಳನ್ನು ಸಂಶೋಧಕನು ವಸ್ತುನಿಷ್ಠದೃಷ್ಟಿಯನ್ನು ಕಾಯ್ದುಕೊಳ್ಳುವ ಸಲುವಾಗಿ ಅಡಿಟಿಪ್ಪಣಿ ಗಳಲ್ಲಾದರೂ ಸೂಚಿಸಬೇಕಾಗುತ್ತದೆ. ಇಲ್ಲದಿದ್ದರೆ, ಆತನ ಬರೆಹ ಇಷ್ಟಾನಿಷ್ಟವಾದ 'ವ್ಯಕ್ತಿನಿಷ್ಠ' ವಿಚಾರಗಳ ವಕ್ತಾರನಾಗಿಬಿಡುತ್ತದೆ. "ಕಸವರಮೆಂಬುದು ನೆಱೆ ಸೈರಿಸಲಾರ್ಪೊಡೆ ಪರವಿಚಾರಮನ್, ಪರಧರ್ಮಮುಮನ್" ಎಂಬುದನ್ನು ಗ್ರಂಥಾದಿಯಲ್ಲೆ ಉಲ್ಲೇಖಿಸಿರುವ ಸದಭಿರುಚಿಯ ಡಾ.ಟಿ.ವಿ.ವಿ.ಅವರು 'ಶ್ರೀಶಂಕರರು: ಜೀವನ, ಸಂದೇಶ'ವೆಂಬ ಲೇಖನದಲ್ಲಿ ತೋರಿರುವ ಏಕಪಕ್ಷೀಯತೆ ಪ್ರಶ್ನಾರ್ಹವಾಗಿದೆ.

'ಶ್ರೀ ಶಿವಾರ್ಪಣಂ' ಎಂಬ ಅಭಿನಂದನಗ್ರಂಥದ ಪ್ರಸ್ತಾವನೆಯನ್ನು ಡಾ. ಟಿ.ವಿ.ವಿ. ಸಿದ್ಧಪಡಿಸಿದ್ದಾರೆ. ಕನ್ನಡದ ಅಭಿನಂದನಗ್ರಂಥಗಳ ಸಾಲಿನಲ್ಲೆ ಅತ್ಯಂತ ವಿಶಿಷ್ಟವಾದ ವಿನೂತನಗ್ರಂಥವಿದು. ಏಕೆಂದರೆ ಇಲ್ಲಿ ಅಭಿನಂದನೆಯನ್ನು ಅರ್ಪಿಸುತ್ತಿರುವುದು

'ಮನುಜರ ಮೇಲೆ, ಸಾವವರ ಮೇಲೆ, ಕನಿಷ್ಠರ ಮೇಲೆ' ಅಲ್ಲ! ಆ ಪರಮೇಶ್ವರನಿಗೆ ಇಲ್ಲಿ ಅಭಿನಂದನೆ, ಅಭಿವಂದನೆ. ಇದೇ ಈ ಗ್ರಂಥದ ಅಗ್ಗಳಿಕೆ. ಶಿವಸ್ವರೂಪ ಮತ್ತು ಶಿವತತ್ತ್ವಗಳ ಅನ್ವೇಷಣೆಯಲ್ಲಿ ತೊಡಗಿದ ಜ್ಞಾನಜಿಜ್ಞಾಸುಗಳೆಲ್ಲ ಸೇರಿ ನಡೆಸಿದ ಅಕ್ಷರಯಜ್ಞವಿದು. ವೇದೋಪನಿಷತ್ತುಗಳು, ಸಂಹಿತೆಗಳು, ಬ್ರಾಹ್ಮಣಗಳು, ಆಗಮ ಪುರಾಣಾದಿಗಳು, ಸಂಸ್ಕೃತ ಸಾಹಿತ್ಯ ಪರಂಪರೆ, ಕನ್ನಡ ಸಾಹಿತ್ಯ ಪರಂಪರೆ, ಶಾಸನಗಳು, ಜನಪದ ಗೀತೆಗಳು, ಸಂಗೀತ, ವಾಸ್ತುಶಿಲ್ಪ, ತಮಿಳಿನ ತೇವಾರಂ ಗೀತೆಗಳು- ಹೀಗೆ ಬಹು ವಿಸ್ತೃತವಾದ ನೆಲೆಗಳಲ್ಲಿ ಶಿವಸ್ವರೂಪ ಮತ್ತು ಶಿವತತ್ತ್ವಗಳ ವಿವೇಚನೆಯನ್ನು ಇಲ್ಲಿ ಮನಗಾಣಬಹುದೆಂದು ಡಾ.ಟಿ.ವಿ.ವಿ. ಅವರು ಹೇಳಿದ್ದಾರೆ. ಡಾ.ಪು.ತಿ.ನ ಅವರ ರಚನೆಗಳಲ್ಲಿ ಮೂಡಿರುವ ಶಿವನ ಭವ್ಯವರ್ಣನೆಗಳ ನಿರೂಪಣೆಯನ್ನು ಡಾ.ಟಿ.ವಿ.ವಿ. ಪ್ರಸ್ತಾಪಿಸಿದ್ದಾರೆ. ಆದರೆ, ನನಗೆ ಕುವೆಂಪು ಅವರ 'ಶಿವತತ್ತ್ವ' ನಿರೂಪಣೆಯು ಎಲ್ಲೂ ಕಂಡುಬರಲಿಲ್ಲ. ಕುವೆಂಪು ಅವರ ಜಲಗಾರಶಿವ, ಅದ್ರಿಶಿವ, ಅರಣ್ಯಶಿವನ ಕಲ್ಪನೆಗಳು ಬಹುಮುಖ್ಯವೂ ಅತಿವಿಶಿಷ್ಟವೂ ಆಗಿ ತೋರಿದೆ. ಸಾಂಸ್ಕೃತಿಕ ದೃಷ್ಟಿಯಿಂದಲೂ ಇದನ್ನು ಪ್ರಸ್ತಾಪಿಸಬಹುದಿತ್ತೆನಿಸುತ್ತದೆ.

ಸಾಹಿತ್ಯಕೃತಿಗಳ ನೇರ ಚರ್ಚೆಯಲ್ಲಿ ಡಾ.ಟಿ.ವಿ.ವಿ. ಅವರು ನೀಡುವ ಒಳನೋಟಗಳು ಬಹುಮುಖ್ಯವಾದವು. ಉದಾಹರಣೆಗೆ ಪಂಪ ರನ್ನರು ರಚಿಸಿದ ಭಾರತ ಕಥೆಯಲ್ಲಿ ತಮ್ಮ ಅನುಕೂಲಕ್ಕೆ ತಕ್ಕಂತೆ ಪಂಚವಲ್ಲಭೆಯಾಗಿದ್ದ ದ್ರೌಪದಿಯನ್ನು 'ಏಕಪತ್ನಿ'ಯಂತೆ ಚಿತ್ರಿಸಿದ್ದಾರೆಂಬುದು ನನ್ನ ಇದುವರೆಗಿನ ತಿಳುವಳಿಕೆಯಾಗಿತ್ತು. ಡಾ.ಟಿ.ವಿ.ವಿ.ಅವರು ಜಿನಸೇನಾಚಾರ್ಯರ 'ಹರಿವಂಶ ಪುರಾಣ'ವನ್ನು ವಿವೇಚಿಸುತ್ತಾ ಹೇಳಿರುವ ಮಾತುಗಳಿವು: "ದ್ರೌಪದಿ ಅರ್ಜುನನ ಪತ್ನಿ ಮಾತ್ರವೆಂಬಂತೆ ಜಿನಸೇನಾಚಾರ್ಯರು ಚಿತ್ರಿಸಿದ್ದಾರೆ ಮತ್ತು ಎಚ್ಚರಿಸಿದ್ದಾರೆ. ಇದು ಪಂಪನಿಗೆ ಪ್ರೇರಕವಾಗಿರಬಹುದು"(ಪು. ೬೪೫). ನನ್ನ ಓದಿನ ಮಿತಿಯಲ್ಲಿ ತಿಳಿಯದೇ ಇದ್ದ ವಿಚಾರವೊಂದು ಡಾ.ಟಿ.ವಿ.ವಿ. ಅವರ ವಿವರಣೆಗಳಿಂದ ತಿಳಿದುಬಂದು ನನ್ನ ಅರಿವು ಹೆಚ್ಚಿತು. ಇಂಥ ಎಷ್ಟೋ ಉಪಯುಕ್ತ ವಿಚಾರಗಳನ್ನು ನಾನು ಡಾ.ಟಿ.ವಿ.ವಿ. ಅವರ ಬರೆಹಗಳಿಂದ ಪಡೆದುಕೊಂಡಿದ್ದೇನೆ. 'ಚಾಮರಸ' ಎಂಬ ಲೇಖನದಲ್ಲಿ "ನಿಜವಾಗಿ ನೋಡಿದರೆ ಅಲ್ಲಮಪ್ರಭು ವಚನಧರ್ಮಸಂಸ್ಥಾಪಕ" ಎಂಬ ಎಂ.ಆರ್.ಶ್ರೀನಿವಾಸಮೂರ್ತಿ ಅವರ ಅಭಿಪ್ರಾಯವನ್ನು ಉಲ್ಲೇಖಿಸುತ್ತಾ ಡಾ.ಟಿ.ವಿ.ವಿ. ಅವರು ಹೇಳುವ ಪ್ರತಿವಿಮರ್ಶೆಯ ಮಾತುಗಳು ಸರ್ವಥಾ ಸ್ವೀಕಾರಯೋಗ್ಯವಾಗಿದೆ:

"ಅಲ್ಲಮಪ್ರಭು ನಿರ್ದಿಷ್ಟವಾದ ಒಂದು ಧರ್ಮದ ಕಟ್ಟುಕಟ್ಟಳೆಗಳಿಗೆ ಸಿಕ್ಕದವನು. ಮತಾವರಣದಲ್ಲಿ ಇದ್ದು ಇಲ್ಲದವನು. ತನ್ನ ಹಾಗೆಯೇ ಇತರರೂ ಅಂತಹ ಸಂಕಲೆಗಳಿಗೆ, ಸಂಕೋಚಗಳಿಗೆ ಬಂಧಿಗಳಾಗಬಾರದೆಂದು ತನ್ನ ಹಿತೋಪದೇಶಗಳ ಮೂಲಕ ಶ್ರಮಿಸಿದವನು." ಪು. ೬೯೧

‘ಸಂಶೋಧಕ’ರೆಂಬ ಪ್ರಸಿದ್ಧಿ ಪಡೆದಿರುವ ಡಾ.ಟಿ.ವಿ.ವಿ. ಅವರ ಮೂಲಭೂತ ಕಾಳಜಿಯಲ್ಲಿ ಜಲದ ಕಣ್ಣುಗಳಿವೆ. “ದೇಶ ಸ್ವತಂತ್ರವಾದ ಮೇಲೆ ಏನಾಗಿದೆ? ಇದಕ್ಕೆ ಸಮರ್ಪಕ ಉತ್ತರ ಬೇಕೆನ್ನುವವರು ನಮ್ಮ ದೇಶದ ಹಳ್ಳಿಗಳಲ್ಲಿ ಸುತ್ತಾಡಿ ಬರಬೇಕು. ಅವೇ ಮುರುಕಲು ಮನೆಗಳು, ಹಳೆಯ ಚರಂಡಿಗಳು, ಬಡಕಲು ಮನುಷ್ಯರು, ಸೊರಗಿದ ಎತ್ತುಗಳು, ಒಣಗಿದ ಕೆರೆಗಳು, ಬತ್ತಿದ ಬಾವಿಗಳು. ನಾವು ನಗರಗಳನ್ನು ಬೆಳೆಸಿದ್ದೇವೆ, ಹಳ್ಳಿಗಳನ್ನು ಬೆಂಗಾಡು ಮಾಡಿದ್ದೇವೆ. ನಮ್ಮ ಜನದಲ್ಲಿ ಮೊದಲಿನ ಸಾಮರಸ್ಯ ಸಹಕಾರ ಬುದ್ಧಿಗಳು ಉಳಿದಿವೆಯೇ?”(ಪು.೨೨೫) ಈ ಬಗೆಯ ಕಾಳಜಿಯಿಂದ, ಜಲದ ಕಣ್ಣುಗಳಿಂದ ನೋಡುವಾಗ ಭಾವಶುದ್ಧಿ ಮತ್ತು ವಿಚಾರಶುದ್ಧಿಗಳು ಅನ್ಯೋನ್ಯವಾಗಿರುತ್ತವೆ. ನಡೆಯುವವರು ಎಡಹುವುದು ಸಹಜ! ಆದರೆ, ಕುಳಿತವರು ಎಡಹುತ್ತಾರೆಯೇ? ಎಂಬ ರಾಘವಾಂಕನ ಪ್ರಶ್ನೆ ತುಂಬ ಯಥೋಚಿತವಾಗಿದೆ. ಇದನ್ನು ಕಾಲ್ನಡಿಗೆ ಮತ್ತು ಮಾನಸಿಕವಾದ ಪಯಣ ಎಂಬ ಎರಡೂ ಅರ್ಥಗಳಲ್ಲಿ ಸ್ವೀಕರಿಸಬೇಕು. ಆದ್ದರಿಂದಲೇ ಡಾ.ಟಿ.ವಿ.ವಿ. ಅವರ ಎಡಹುಗಳು ನಮಗೆ ಮುಖ್ಯವೆನಿಸುವುದಿಲ್ಲ. ಅವರು ಕ್ರಮಿಸಿದ ಹಾದಿ ಮತ್ತು ತಲುಪಿದ ಎತ್ತರಗಳು ಬಹುಮುಖ್ಯವಾಗಿದೆ. ಈ ದಿಸೆಯಲ್ಲಿ ‘ಸಾಹಿತ್ಯ ಶೋಧ’ವು ಬುಧಜನಾಮೋದಕಾರಿ ಯಾದ ಆಕರಗ್ರಂಥವಾಗಿದೆ. ನನಗೆ ಬಹುಪ್ರಿಯರಾದ ಡಾ.ಟಿ.ವಿ.ವಿ. ಅವರ ಅಭಿನಂದನೆಗೊಂದು ಅವಕಾಶವಿತ್ತು, ನನ್ನೊಂದಿಗೆ ಸಹಕರಿಸಿದ ಪ್ರಿಯಮಿತ್ರರಾದ ಶ್ರೀ ಎಲ್.ಎಸ್.ಶಿವಮೂರ್ತಿ ಅವರಿಗೆ ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸಿ ಇಲ್ಲಿಗೆ ವಿರಮಿಸುತ್ತೇನೆ.*

---

* ಹಾಯ್ ಬೆಂಗಳೂರು ೨೬.೭.೨೦೦೨

ಈ ಪುಸ್ತಕಕ್ಕೊಂದು ಜಾತಿಹೊದಿಕೆ ಇಲ್ಲದೆ ಹೋಗಿದ್ದಿದ್ದರೆ...

ರವಿ ಬೆಳಗೆರೆ

ಒಂದೇ ಜಾತಿಯಲ್ಲಿ ಸರ್ ಎಂ.ವಿಶ್ವೇಶ್ವರಯ್ಯ, ಕುಣಿಗಲು ರಾಮಶಾಸ್ತ್ರೀ, ವ್ಯಾಕರಣ ನರಸಿಂಹಶಾಸ್ತ್ರೀ, ತಳುಕಿನ ವೆಂಕಣ್ಣಯ್ಯ, ತ.ಸು.ಶಾಮರಾಯ, ತ.ರಾ.ಸು., ವೀರಕೇಸರಿ ಸೀತಾರಾಮಶಾಸ್ತ್ರೀ, ದೇವುಡು, ಎಂ.ರಾಮರಾವ್, ಎಂ.ರಾಮಮೂರ್ತಿ, ಕವಿ ಯೋಗಾನರಸಿಂಹ, ಎಚ್.ವಿ.ಸಾವಿತ್ರಮ್ಮ, ಇ.ಆರ್.ಸೇತೂರಾಂ, ಕಿಡಿ ಶೇಷಪ್ಪ, ಎಚ್.ವೈ. ಶಾರದಾಪ್ರಸಾದ್, ಸಾರೋಟ್ ಅಶ್ವಥ್, ಉದಯಕುಮಾರ್, ಕಣಗಾಲ್ ಪ್ರಭಾಕರ ಶಾಸ್ತ್ರೀ, ಪುಟ್ಟಣ್ಣ ಕಣಗಾಲ್, ಕು.ರಾ.ಸೀತಾರಾಮಶಾಸ್ತ್ರೀ, ವಿಜಯನಾರ ಸಿಂಹ, ಮಂಜುಳಾ ಗುರುರಾಜ್, ಎಂ.ಪಿ.ಎಲ್.ಶಾಸ್ತ್ರೀ, ಮಂತ್ರಿ ಅನಂತಕುಮಾರ್... ಇತ್ಯಾದಿಗಳೆಲ್ಲ ಹುಟ್ಟಿದರೆ ಆ ಜಾತಿ ಶ್ರೇಷ್ಠವಾದುದಾ? ಇಷ್ಟೇ ದೊಡ್ಡ ಅಥವಾ ಇದಕ್ಕಿಂತ ದೊಡ್ಡ ಸಂಖ್ಯೆಯ ಮಹನೀಯರು ಬೇರೆ ಜಾತಿಗಳಲ್ಲಿ ಹುಟ್ಟಿಲ್ಲವಾ? ಮುಸ್ಲಿಮರಲ್ಲಿ, ಕುರುಬರಲ್ಲಿ, ಲಿಂಗಾಯತರಲ್ಲಿ, ದಲಿತರಲ್ಲಿ ಹೀಗೆ ಎಲ್ಲ ಜಾತಿಗಳಲ್ಲೂ ಕಣ್ಣಿಟ್ಟು ಹುಡುಕಿದರೆ ಪ್ರತಿಷ್ಠಿತರದೊಂದು ಗುಂಪು ಸಿಕ್ಕೇ ಸಿಗುತ್ತದಲ್ವಾ? ಅಂಥದರಲ್ಲಿ ಬ್ರಾಹ್ಮಣರ, ಅದರ ಉಪಪಂಗಡವಾದ ಸ್ಮಾರ್ತರ, ಆ ಪೈಕಿ ಮತ್ತೊಂದು ಉಪಪಂಗಡವಾದ ಮುಲಕನಾಡು ಬ್ರಾಹ್ಮಣರ ಜಾತಿಯಲ್ಲಿ ಮೇಲೆ ವಿವರಿಸಿದಂಥ ಘಟಾನುಘಟಿಗಳು ಹುಟ್ಟಿದರೆಂಬ ಕಾರಣಕ್ಕೆ ಅದೊಂದು ಶ್ರೇಷ್ಠಜಾತಿ, ಅದರ ಪರಿಚಯಕ್ಕಾಗಿ ನಾನ್ನೂರ ಇಪ್ಪತ್ತೊಂದು ಪುಟಗಳ ಪುಸ್ತಕ, ಈ ಪುಸ್ತಕವನ್ನು ಮುಲಕನಾಡು ಬ್ರಾಹ್ಮಣರೆಲ್ಲ ಖರೀದಿಸಿ ಮದುವೆಮುಂಜಿಗಳಲ್ಲಿ ಪ್ರೆಸೆಂಟು ಕೊಡಿ ಎಂಬ ಸಲಹೆ-

ಇತ್ಯಾದಿಯನ್ನೆಲ್ಲ ಮಾಡಬೇಕಿತ್ತಾ?

ಈಗ್ಗೆ ಎರಡು ವಾರದ ಹಿಂದೆ ಬೆಂಗಳೂರಿನ ಗಾಯನಸಮಾಜ ಹಾಲ್‌ನಲ್ಲಿ ಕೇಂದ್ರ ಮಂತ್ರಿ ಅನಂತಕುಮಾರ್ 'ಮುಲಕನಾಡು ಮಹಾಸಂಘ'ದ ಕಾರ್ಯಕ್ರಮದಲ್ಲಿ ಇಂಥದೊಂದು ಪುಸ್ತಕ ಬಿಡುಗಡೆ ಮಾಡುತ್ತಾರೆ, ಅದಕ್ಕೆ ಅವರು ಫಂಡೂ ಕೊಟ್ಟಿದ್ದಾರೆ ಅಂತ ಕೇಳಿದಾಗ ಕೆಟ್ಟ ಮುಜುಗರವೆನ್ನಿಸಿತು. ಜಾತಿಸಂಘಟನೆ, ಅದರಲ್ಲೂ ಹೀಗೆ ಉಪಪಂಗಡ, ಗೋತ್ರವಾರು ಸಂಘಟನೆಗಳಾಗುವುದು ಯಾವ ಸಮಾಜಕ್ಕೂ ವಿಹಿತವಾದುದಲ್ಲ ಅನ್ನಿಸಿತು. 'ನೀವೂ ನಮ್ಮವರೇ, ಪುಸ್ತಕದಲ್ಲಿ ನಿಮ್ಮ ಬಗ್ಗೆಯೂ ಬರೆದಿದ್ದೇವೆ ಬನ್ನಿ' ಅಂದಾಗ ನಿಜಕ್ಕೂ ರೇಜಿಗೆಯೆನಿಸಿತ್ತು. ಸಮಾರಂಭಕ್ಕೆ ತಪ್ಪಿಸಿಕೊಂಡೆ. ಪುಸ್ತಕ ತಂದುಕೊಡುತ್ತೇವೆಂದರೆ, ಹಾಗೆ ತಂದುಕೊಡುವವರಿಂದಲೂ ತಪ್ಪಿಸಿಕೊಂಡೆ.

ಆದರೂ ಮುಲಕನಾಡು ಅಂಟು ಬಲು ಜಿಗುಟು. ಪುಸ್ತಕ ನನ್ನ ಟೇಬಲ್ಲಿಗೆ ಬಂದೂ ಬಿಟ್ಟಿತು.

ಒಂದು ಗೇಲಿಯನ್ನು ಅಂಗೈಯಲ್ಲಿಟ್ಟುಕೊಂಡೇ ಪುಸ್ತಕ ತೆರೆದೆ. ಇದನ್ನು ರೂಪಿಸಿದವರು ಮೈಸೂರು ವಿಶ್ವವಿದ್ಯಾಲಯದ ಪ್ರಮುಖ ಚಿಂತಕರಾದ ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿಗಳು. ಅವರ ಪಾಂಡಿತ್ಯದ ಬಗ್ಗೆ ನನಗೆ ಗೌರವವಿದೆ. ಆದರೂ ಜಾತಿಸಂಬಂಧಿ ಪುಸ್ತಕವನ್ನು ಬರೆಯೋದಕ್ಕಿಂತ ಡಾ.ಟಿ.ವಿ.ವಿ.ಶಾಸ್ತ್ರಿಗಳು ಬೇರೇನಾದರೂ ಬರೆದಿದ್ದಿದ್ದರೆ ಸಂತೋಷಪಡಬಹುದಿತ್ತು. ಎಲ್ಲ ಬಿಟ್ಟು ಈ ಮುಲಕನಾಡು ಮೂಲಕ್ಕೇಕೆ ಗಂಟು ಬಿದ್ದರೋ ಎಂದುಕೊಂಡೆ.

ಪುಸ್ತಕ ಓದುತ್ತ ಹೋದಂತೆಲ್ಲ ಗೇಲಿ ಮರೆಯಾಯಿತು. ಒಬ್ಬ ಶ್ರದ್ಧಾವಂತ ಇತಿಹಾಸದ ವಿದ್ಯಾರ್ಥಿ, ಒಂದು ಇತಿಹಾಸಸಂಬಂಧಿ ಸಂಶೋಧನೆಯನ್ನು ಓದುವಷ್ಟೆ ಶ್ರದ್ಧೆಯಿಂದ ಅದನ್ನು ಓದಿ ಮುಗಿಸಿದೆ. ಸರ್ ಎಂ.ವಿಶ್ವೇಶ್ವರಯ್ಯನವರಿಂದ ಹಿಡಿದು ಅನಂತಕುಮಾರ್ ತನಕ ಎಲ್ಲ ಮುಲಕನಾಡು ಬ್ರಾಹ್ಮಣ ಮಹನೀಯರ ಪರಿಚಯ ಮಾಡಿ, ಪರಾಕು ಹೇಳಿದ್ದಿದ್ದರೆ ವೆಂಕಟಾಚಲ ಶಾಸ್ತ್ರಿಗಳ ಗ್ರಂಥದ ಬಗ್ಗೆ ಒಂದೇ ಒಂದು ಸಾಲು ಬರೆಯುವುದಕ್ಕೂ ನನಗೆ ಮನಸ್ಸಾಗುತ್ತಿರಲಿಲ್ಲ. ಆದರೆ ಶಾಸ್ತ್ರಿಗಳ ಗಮನಿಕೆಗಳು ತುಂಬ ಸೂಕ್ತ ಮತ್ತು ಸೂಕ್ಷ್ಮವಾದವು.

ಈ ಮುಲಕನಾಡು ಸ್ಮಾರ್ತ ಬ್ರಾಹ್ಮಣರಿದ್ದಾರಲ್ಲ? ಇವರು ಆಂಧ್ರದ ರಾಯಲ ಸೀಮೆಯಿಂದ ವಿಜಯನಗರದ ಪತನಾನಂತರ ಕರ್ನಾಟಕಕ್ಕೆ ವಲಸೆಬಂದರು. ಇವರ ತೆಲುಗು ತೆಲುಗಲ್ಲ. ದೈಹಿಕವಾಗಿ ದೊಡ್ಡ ಕಷ್ಟಜೀವಿಗಳಲ್ಲ. ಮುಂದೆಬಿದ್ದು ವ್ಯಾಪಾರ ವ್ಯವಹಾರ ಮಾಡಿಕೊಂಡು ಬಲಿಷ್ಠರಾಗುವವರೂ ಅಲ್ಲ. ಮೈತುಂಬ ಮೂಢನಂಬಿಕೆಗಳಿರುವ ಜನ. ರಾಜಾಶ್ರಯವಿಲ್ಲದೆ ಬದುಕುವವರಲ್ಲ. ಪಂಚಾಂಗವೇ ಬಂಡವಾಳ. ತಮ್ಮ ಬಗ್ಗೆ ತಮಗೇ ಕೀಳರಿಮೆ. ತಾವು ಮಾತನಾಡುವ 'ಮುಲಕ ತೆಲುಗು' ಎಷ್ಟು ಕಲಬೆರಕೆಯದು ಅಂತ ಇವರಿಗೇ ಅನಿಸುತ್ತದೆಂದರೆ, ಕಾಲಾಂತರದಲ್ಲಿ ಇವರಲ್ಲಿ ಹೆಚ್ಚಿನವರು ತೆಲುಗು ಮಾತಾಡುವುದನ್ನೇ ಬಿಟ್ಟುಬಿಡುತ್ತಾರೆ. ಇವರ ಮನೆಯ ಹೆಣ್ಣು ಮಕ್ಕಳಿಗೆ ಬೇಗ ಮದುವೆಯಾಗದು. ಅಕಸ್ಮಾತ್ ಆದರೂ, ಗಂಡ ಹೆಂಡಿರ ಮಧ್ಯೆ ವಿಪರೀತವಯಸ್ಸಿನ ಅಂತರ. ಹೀಗಾಗಿ ಪ್ರತಿ ಮನೆಯಲ್ಲೂ ವಿಧವೆಯರು. ಇದರ ಪರಿಣಾಮವೇನು ಗೊತ್ತೆ? ಮುಂಡೆಮಗನೆ, ಮುಂಡೆಗಂಡ, ಹುಚ್ಚುಮುಂಡೆ, ನಿನ್ ತಲೆಗೆ ಕೊಳ್ಳಿ ಇಡ ಮುಂತಾದವು ಮಾತ್ರ (ಅಂದರೆ ವೈಧವ್ಯಸಂಬಂಧಿ ಬೈಗಳೇ) ಈ ಕುಟುಂಬಗಳಲ್ಲಿ ಚಲಾವಣೆಯಾಗುತ್ತವೆ. ಅಡುಗೆ ಮತ್ತು ಊಟ ಬಿಟ್ಟರೆ ಮಡಿ ಮತ್ತು ದೇವರ ಪೂಜೆಗಳೇ ಇವರ ದೈನಂದಿನ full time activityಗಳು. ಹೀಗಾಗಿ ಒಂದಿಡೀ ಉಪಜಾತಿ ಶತಮಾನಗಳಿಂದಲೂ ಒಂದು ಕೀಳರಿಮೆ, ಹಿಂತೆಗೆತ, ಸಂಕೋಚಗಳಿಂದ ನರಳುತ್ತಲೇ ಇರುತ್ತದೆ. ಮುಲಕನಾಡು ಬ್ರಾಹ್ಮಣರ ಮನೆಯೆಂದರೆ, 'ವಿಧವೆ ಸಾಕಿದ

ಮಗ, ಮೂವತ್ತು ವರ್ಷಕ್ಕೆ ಮದುವೆ ಮತ್ತು ಮಧ್ಯಾಹ್ನ ಮೂರು ಗಂಟೆಗೆ ಕೂಳು' ಅಷ್ಟೆ! ಇವರ ಮನೆಗಳಲ್ಲಿ ಹೆಣ್ಣುಮಕ್ಕಳು ಅತಂತ್ರರು, ಪರಾಧೀನರು, ಯಾರದೋ ಕೃಪೆಗೆ ಅವಲಂಬಿತರು.

ವೆಂಕಟಾಚಲ ಶಾಸ್ತ್ರಿಗಳು ಬದ್ಧ ವಿದ್ವಾಂಸರಂತೆ ಮುಲಕನಾಡು ಬ್ರಾಹ್ಮಣರ ಮೂಲ, ಅವರ ವಲಸೆಗೆ ಕಾರಣ, ಅವರು ಎಲ್ಲೆಲ್ಲಿ ನೆಲೆಗೊಂಡರು ಮುಂತಾದವುಗಳನ್ನೆಲ್ಲ ವಿವರಿಸುತ್ತ ಹೋಗುವುದು ದೊಡ್ಡ ಕೆಲಸವೆನ್ನಿಸುವುದಿಲ್ಲ. ಅವರಿಗೆ ಇತಿಹಾಸಕಾರನ ಪಟ್ಟುಗಳು ಕರಗತವಾಗಿವೆ. ಆದರೆ ಈ ಸ್ಮಾರ್ತ ಉಪಕುಲದ ಒಳಮನೆಗಳ ಜೀರ್ಣ ಸ್ಥಿತಿಯ ಬಗ್ಗೆ ಅವರು ಹಾಯಿಸುವ ದೃಷ್ಟಿ ಇದೆಯಲ್ಲ? ಈ ಕೆಲಸ ಮಾಡಬಲ್ಲ ಯಾವುದೇ ಜಾತಿಯ, ಯಾವುದೇ ಪಂಡಿತ ತನ್ನ ಜಾತಿಯ ಜನರ ಕಷ್ಟ, ಕೀಳರಿಮೆ, ಬಲಹೀನತೆ, ಮೂರ್ಖತನ ಇತ್ಯಾದಿಗಳನ್ನು ಗುರುತಿಸುವುದಾದರೆ ಅದು ಅಭಿನಂದನೀಯ ಅನ್ನಿಸಿಬಿಡುತ್ತದೆ.

ವೆಂಕಟಾಚಲ ಶಾಸ್ತ್ರಿಗಳ ಅಧ್ಯಯನ, ಹುಡುಕಾಟ ಮತ್ತು ಮಾನವೀಯ ಸಂವೇದನೆಗಳು ಪ್ರಖರವಾಗಿರುವುದರಿಂದಲೇ ಮುಲಕನಾಡು ಬ್ರಾಹ್ಮಣರ ಔರ್ಯತ್ಯವನ್ನಷ್ಟೇ ಗುರುತಿಸದೆ ವಿಶ್ವೇಶ್ವರಯ್ಯನವರಂಥ ಹಿರಿಯ ವ್ಯಕ್ತಿಯ ತಂದೆ ಎಂಥ ದಾರುಣವಾದ ಅಂತ್ಯ ಕಂಡರು ಎಂಬಂತಹ ಸಂಗತಿಗಳನ್ನು ಹುಡುಕಾಡಿ ದಾಖಲಿಸಿದ್ದಾರೆ. ಅದರ ಪ್ರಕಾರ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರ ತಂದೆ ಶ್ರೀನಿವಾಸಶಾಸ್ತ್ರಿಗಳು 'ತಮ್ಮ ಅರವತ್ತನೆಯ ವಯಸ್ಸಿನವರೆಗೂ ಜೀವಿಸಿದ್ದರು. ಕಡೇ ಕಾಲಕ್ಕೆ ಸಾಲಗಳ ಕಾಟ-ಮಕ್ಕಳು ಮರಿಗಳು, ದೊಡ್ಡ ಸಂಸಾರ-ಬಡತನ-ಹೆಂಡತಿ ಅನುಕೂಲಳಲ್ಲ. ಒಂದು ದಿನ ತನ್ನ ಹೆಂಡತಿಯೊಂದಿಗೆ ವ್ಯಾಜ್ಯವಾಡಿ ಕಾಲುನಡಿಗೆಯಿಂದ ಕಾಶಿಗೆ ಪ್ರಯಾಣಮಾಡಿ ಹೋಗುತ್ತಾ ದಾರಿಯಲ್ಲಿ ರಾಯಚೂರು ಗ್ರಾಮದ ಶಿವದೇವಸ್ಥಾನದಲ್ಲಿ 'ಎಂಡ ಪಿಡುಗು' ಎಂಬ ಬಿಸಿಲಿನ ತಾಪದಿಂದಾಗಿ ಪ್ರಾಣಬಿಟ್ಟರು...!'

ಅಂಥವರ ನಿರ್ಗತಿಕ ಮಗ ಮುಂದೆ ನಾಡನ್ನೇ ಕೈಹಿಡಿದು ನಡೆಸಿದ ಸರ್ ಎಂ. ವಿಶ್ವೇಶ್ವರಯ್ಯನವರಾದರು ಎಂಬಂತಹ ವಿವರಣೆ ಸಂತಸ ನೀಡುತ್ತದಾದರೂ, ಸದರಿ ವಿಶ್ವೇಶ್ವರಯ್ಯನವರು ಮುಲಕನಾಡು ಸ್ಮಾರ್ತರಾಗಿದ್ದರು ಎಂಬುದನ್ನು ದಾಖಲಿಸಿದಾಗ, ಅಷ್ಟರಮಟ್ಟಿಗೆ ಪುಸ್ತಕದ ವಿಸ್ತಾರ ಸಂಕುಚಿತವಾಗಿ ಬಿಡುತ್ತದೆ.

ಅದೇನು ವೆಂಕಟಾಚಲ ಶಾಸ್ತ್ರಿಗಳು ತಮಾಷೆಗೇ ಮಾಡಿದರೋ ಅಥವಾ ಅಂಥದೊಂದು ದಾಖಲೆಯೇ ಅವರ ಕೈಗೆ ತಂತಾನೆ ಸಿಕ್ಕಿತೋ ಗೊತ್ತಿಲ್ಲ. ೧೮೬೩ರಲ್ಲಿ ವೆಂಕಟರಂಗೋ ಕಟ್ಟಿ ಎಂಬ ಪಂಡಿತರು ಸರ್ಕಾರಿ ಗೆಝೆಟ್‌ನ ಪ್ಯಾರಾ ಒಂದನ್ನು ಅನುವಾದಿಸುತ್ತಾ, ಈ ಮುಲಕನಾಡು ಬ್ರಾಹ್ಮಣರ ಬಗ್ಗೆ ಬರೆದಿರುವುದನ್ನು ಯಥಾವತ್ತು ಪ್ರಕಟಿಸಿದ್ದಾರೆ. ಅದರ ಪ್ರಕಾರ,

'ಇವರು ತೆಲುಗರು. ಕಸುವುಳ್ಳವರು. ಮೈಬಣ್ಣ ಕಪ್ಪು. ನಿಲುವಿಕೆ ಯೆತ್ತರ. ಒಳ್ಳೆ ತಿನ್ನಬಾಕರು. ಹುಳಿಯ ಮೇಲೆ ಪ್ರೀತಿ ಬಹಳ. ಇವರು ನಿರ್ಮಲರೂ, ಸೋಮಾರಿಗಳೂ, ಜಗಳಗಂಟರೂ, ಸಿಟ್ಟಿನವರೂ, ಧರ್ಮನಿಷ್ಠರೂ, ಜಿಪುಣರೂ ಇರುತ್ತಾರೆ... ಇವರು ಮಕ್ಕಳನ್ನು ಶಾಲೆಗೆ ಕಳಿಸುವರು. ಇವರಿಗೆ ಹೊಸ ಉದ್ಯೋಗಗಳು ಸೇರುವುದಿಲ್ಲ!'

ಒಂದು ಉಪಜಾತಿಯನ್ನು ಪರಿಚಯಿಸುವುದಕ್ಕೆ ಇದಕ್ಕಿಂತ ಸೂಕ್ತ ಶೈಲಿ ಉಂಟೆ? ಒಟ್ಟಿನಲ್ಲಿ ಈ ಪುಸ್ತಕಕ್ಕೊಂದು ಜಾತಿಹೊದಿಕೆ ಇರದೆಹೋಗಿದ್ದಿದ್ದರೆ, ಕೆಲವೆಡೆ ವೆಂಕಟಾಚಲ ಶಾಸ್ತ್ರಿಗಳು ಈ ಬ್ರಾಹ್ಮಣರ ಸಕಾಲಿಕ ಬದಲಾವಣೆಗಳನ್ನು ತಿರಸ್ಕರಿಸದೆ ಇದ್ದಿದ್ದರೆ ಈ ಕೃತಿ ಇತಿಹಾಸದ ಪುಸ್ತಕಗಳ ಗೂಡಿನಲ್ಲಿ ಹೆಚ್ಚು ನಿಖರವಾಗಿ ಕೂತಿರುತ್ತಿತ್ತು.*

---

* ಹಾಯ್ ಬೆಂಗಳೂರು, ೬.೧೦.೨೦೦೦

ಮೆಲುಗಾಳಿಯ ಮಾತುಗಳು

ಎ.ಎಸ್.ವೇಣುಗೋಪಾಲ ರಾವ್

ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿಗಳ ಈ ಕೃತಿ ಬೇರೊಂದು ಬಗೆಯದು. ಕ್ಷಣಕ್ಷಣದ ಸ್ಮಾರಕಗಳಾಗಬಲ್ಲ ಐವತ್ತು ಹೃದ್ಯವಾದ ಚಿಂತನಲಹರಿಗಳು ಇಲ್ಲಿವೆ. ಮೈಸೂರು ಆಕಾಶವಾಣಿಯಿಂದ ಬಿತ್ತರಿಸಲ್ಪಟ್ಟ ಈ ಲಹರಿಗಳ ಸಂಕಲನಕ್ಕೆ "ಮೆಲುಗಾಳಿಯ ಮಾತುಗಳು" ಎಂಬುದು ಸಾರ್ಥಕ ಸುಂದರ ಶೀರ್ಷಿಕೆ. ನಾಲ್ಕೈದು ನಿಮಿಷಗಳ ಅವಧಿಯ ಮಾತುಗಾರಿಕೆ ವಸ್ತುವಿನ್ಯಾಸಕ್ಕೆ ತುಂಬ ಪರಿಮಿತಿಯನ್ನು ಒಡ್ಡುತ್ತದೆ ಎಂಬುದು ಅಂಥ ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲರ ಅನುಭವ. ಆದರೆ ಈ ಅಸೌಕರ್ಯವೇ ಒಂದು ಬಗೆಯ ಸವಾಲು ಎನಿಸಿ, ಅನುಭವದ ಅಭಿವ್ಯಕ್ತಿಗೆ ಸಾಂದ್ರತೆಯನ್ನು ತಂದುಕೊಡುತ್ತದೆ. ಶಾಸ್ತ್ರಿಗಳು ತಮ್ಮ ವಿದ್ವತ್ತು-ಪಾಂಡಿತ್ಯಗಳಿಗೆ ಹೆಸರಾದವರು. ವ್ಯುತ್ಪತ್ತಿ ಶ್ರೀಮಂತರು. ಅಂಥವರು ಈ ಸವಾಲನ್ನು ಸರಿಯಾಗಿಯೇ ಸ್ವೀಕರಿಸಿದ್ದಾರೆ. ಗೆದ್ದಿದ್ದಾರೆ. ಕಾಲ, ವಾಕ್‌ಶುದ್ಧಿ, ಸ್ವಾಧ್ಯಾಯ ಇಂಥ ಗಂಭೀರವಿಷಯಗಳು, ಕುತೂಹಲ, ಪರೋಪದೇಶಪಾಂಡಿತ್ಯ, ಜಾಹಿರಾತು ಇಂಥ ಲಹರಿಗಳು ಬದುಕಿನ ಮಾನವಮನಸ್ಸಿನ ವಿಪುಲತೆ ವೈವಿಧ್ಯಗಳನ್ನು ಒಳಗೊಂಡು ರೋಚಕವಾಗುತ್ತವೆ. ಶಾಸ್ತ್ರಿಗಳಲ್ಲಿ ಪ್ರಾಚೀನತೆಯ ಪ್ರೀತಿ ಎದ್ದು ಕಾಣುವಂತಹುದು. ಸಂಸ್ಕೃತ-ಕನ್ನಡ ಪ್ರಾಚೀನ ಕಾವ್ಯಗಳಲ್ಲಿನ ಉದ್ಧೃತಿಗಳಿಂದ ತಮ್ಮ ಚಿಂತನಗಳಿಗೆ ಅವರು ಹೊಳಪು ತಂದಿದ್ದಾರೆ. ಆದರೆ ಒಂದೆರಡು ಕಡೆ ಇವು ಕಿರುಪ್ರಬಂಧದಲ್ಲಿ ಭಾರವೆನಿಸಿ ಬಹುಭಾಗವನ್ನು ಕಬಳಿಸಿ ಬಿಡುತ್ತವೆ. "ದೊಡ್ಡವರ ದಾರಿ"ಯಲ್ಲಿ ಹರಿಹರನ ರಗಳೆಯಿಂದ ೧೬ ಸಾಲುಗಳಷ್ಟು, 'ಸ್ಪರ್ಧೆ'ಯಲ್ಲಿ ಪಂಪ ಭಾರತದ ಪೂರ್ಣವೃತ್ತ ಪ್ರಾಯಶಃ ಕೈಬಿಡಬಹುದಿತ್ತು. ಅದೇ ಅರ್ಥದ ವ್ಯಾಸಭಾರತದ ಶ್ಲೋಕವೇ ಅಲ್ಲಿ ಉಂಟಲ್ಲ. 'ಎಂಥ ಸಾಹಿತ್ಯ?'ದ ನಾಗಚಂದ್ರನ ವೃತ್ತದಲ್ಲಿ 'ಬಿತ್ತಿ ಬೆಳೆವಂತಕ್ಕುಂ ವಿಷೋದ್ಯಾನಮಂ' ಎಂಬ ಸೂಕ್ತಿಯನ್ನು ಉಳಿಸಿಕೊಂಡು ಉಳಿದ ಸಾಲುಗಳನ್ನು ಗದ್ಯದಲ್ಲಿ ಹೇಳಬಹುದಿತ್ತು. 'ವಿದ್ಯೆ'ಯ ಕಡೆಯ ಪ್ಯಾರಾದಲ್ಲಿ ಉದ್ಧೃತಿಗಳೇ ಗಿಡಿದಿವೆ. ಅಲ್ಪ ಅವಕಾಶದಲ್ಲಿ ಇಂಥವೇ ತುಂಬಿದಾಗ ಸ್ವಂತ ಮಾತುಗಳು ತೇಲಿಹೋಗುತ್ತವೆ. ಉದ್ಧೃತಿಗಳ ವ್ಯಾಮೋಹದಿಂದ ಬಿಡಿಸಿಕೊಂಡ ಪ್ರಾಣಿಚರ್ಯೆ, ಅಚ್ಚುಕಟ್ಟು ಇಂತಹ ಪ್ರಬಂಧಗಳು ಎಷ್ಟು ಹೃದ್ಯವಾಗಿ ಲೇಖಕರ ತಿಳಿಮನಸ್ಸಿನ ಕನ್ನಡಿಯಾಗಿವೆ ಎಂದು ನೋಡಬಹುದು. 'ಕುತೂಹಲ'ವೂ ಅಂಥದೇ ಒಳ್ಳೆಯ ಲಹರಿ. ಶಾಸ್ತ್ರಿಗಳಲ್ಲಿ ತೋರುವ ಸಂಸ್ಕೃತಿಪ್ರೀತಿ ಆಧುನಿಕ ಆಕ್ರೋಶಗಳನ್ನು ಗುಮಾನಿಯಿಂದ

ನೋಡುವುದು ಸಹಜವೇ. ವ್ಯವಸ್ಥೆಯೆಂದರೆ ಸಿಡಿದೇಳುವ ಆಧುನಿಕ ಕ್ರಾಂತಿಪುರುಷರಿಗೆ ಅವರು ವಿವೇಕ ಹೇಳುತ್ತಾರೆ. 'ಸಿಡಿಮಿಡಿಗೊಂಡು ಜಾತಿ ವರ್ಗ ದ್ವೇಷಗಳನ್ನು ಪ್ರಚೋದಿಸಿ ಹಿಂಸೆ ಪ್ರತಿಹಿಂಸೆಗಳಿಗೆ ಎಡೆಮಾಡಿಕೊಡುವುದರಿಂದ ಪ್ರಯೋಜನವಿಲ್ಲ, ಅದು ತನ್ನನ್ನು ತಾನೇ ಇರಿದುಕೊಂಡಂತೆ... ಇದು ಕಲಿತ ಪಾಠವಲ್ಲವೆ? ಮತ್ತೇಕೆ ಹುಯಿಲು?' (ಪು. ೬೩) ಭಾಷೆಯಲ್ಲಾಗುವ ಸುಧಾರಣೆಗಳು ಸಹಜವಾಗಿ ಸಾವಕಾಶವಾಗಿ ಆಗಬೇಕು. ಒತ್ತಾಯದಿಂದ ಮಿದಿದು ಹಣ್ಣು ಮಾಡಿದ ಹಾಗೆ ದುಡುಕಿ ಮಾಡಿದ ಸುಧಾರಣೆಗಳಿಂದ ಭಾಷೆ ಹದಗೆಡುತ್ತದೆ. ಗೊಂದಲ ಹುಟ್ಟುತ್ತದೆ. (ಪು. ೬೬) ಇತ್ಯಾದಿ. ಆದರೆ ಶಾಸ್ತ್ರಿಗಳ ಮನಸ್ಸು ನಿಂತನೀರಲ್ಲ. ಸತತ ಚಿಂತನಪರವಾದದ್ದು ತೆರೆದುಕೊಂಡದ್ದು ಎಂಬುದನ್ನು 'ಪ್ರಶ್ನೆಗಳು' ಪ್ರಬಂಧ ಸಮರ್ಥಿಸುತ್ತದೆ. "ಆತ್ಮ ದೇವರು ಅಧ್ಯಾತ್ಮ ಮೋಕ್ಷ ಎನ್ನುವುವು ಒಣಕಲು ತತ್ತ್ವಚಿಂತನೆಯ ವಿಷಯಗಳಾಗುವ ಅಪಾಯ ತಪ್ಪ ಬೇಕು. ಸಂಪ್ರದಾಯದ ಕಟ್ಟಳೆಗಳಾಗುವುದೂ ಹೋಗಬೇಕು. ಮಾನವೀಯತೆಯೆಂಬ ಪರಮ ಮೌಲ್ಯವನ್ನು ಪೋಷಿಸುವ ಜೀವಧಾತುಗಳಾಗಬೇಕು ಅವು" ಎಂಬ ಆರೋಗ್ಯ ಕರದೃಷ್ಟಿಯನ್ನು ಗಮನಿಸಬೇಕು. "ನಿಜ ಮತ್ತು ಅದರ ಆಭಾಸ" ಗಂಭೀರ ಚಿಂತನೆಯ ನ್ನೊಳಗೊಂಡು ಇಂದಿನ ವಿದ್ಯಾಭ್ಯಾಸಪದ್ಧತಿಯ ನಿರರ್ಥಕತೆಯನ್ನು ಬಯಲುಮಾಡು ತ್ತದೆ.

ವ್ಯಾಪಕ ಅನುಭವ, ವಿಸ್ತಾರವಾದ ವ್ಯಾಸಂಗದ ಫಲವಾದ ಶಾಸ್ತ್ರಿಗಳ ಚಿಂತನ ತುಂಬ ಮೌಲಿಕವಾದದ್ದು. ಪಾಂಡಿತ್ಯಪ್ರೀತಿ, ಪ್ರಾಚೀನತೆಯ ಗೌರವ, ಅಬ್ಬರ-ಆಕ್ರೋಶ ಗಳಿಂದ ದೂರವಾದ ಚಿಂತನಪರ ಮನಸ್ಸು ಇಲ್ಲಿ ಕೆಲಸ ಮಾಡುತ್ತಿದೆ. ಸಂಸ್ಕೃತಿ ಸಂವರ್ಧನೆಗೆ ಬದಲು ಆಧುನಿಕತೆಯ ಹೆಸರಿನಲ್ಲಿ ದ್ವೇಷವರ್ಧನೆ, ಭಾಷಾಶಿಥಿಲತೆ, ಭಾವಶಬಲತೆಗಳು ಬೆಳೆಯುತ್ತಾ ಮಾನವೀಯತೆಗೆ ಎರವಾಗುತ್ತಿದೆ ಎಂಬ ಸಾತ್ವಿಕ ವಿಷಾದ ಈ ಬರಹಗಳ ಒಟ್ಟು ದನಿಯಾಗಿ ತೋರುತ್ತದೆ.

ಸಮಕಾಲೀನ ಸಂಗತಿಗಳನ್ನು ಚಿಂತಿಸುವಾಗಲೂ ಶಾಸ್ತ್ರಿಗಳ ಪಾಂಡಿತ್ಯದ ನೆಳಲು ಇಣುಕುವುದನ್ನೂ ಶಾಸ್ತ್ರವಿಷಯಗಳ ವಿವೇಚನೆಯ ನಡುವೆಯೂ ಭಾವವಿಲಾಸ ಜಾಗರ ವಾಡುವುದನ್ನೂ ಗಮನಿಸಿದಾಗ, ಪ್ರತಿಯೊಂದು ಸಾಹಿತ್ಯಕೃತಿಯೂ ಕೃತಿಕಾರನ ವ್ಯಕ್ತಿತ್ವದ ದರ್ಪಣವೇ ಆಗುತ್ತದೆ ಎಂಬುದು ಸ್ಪಷ್ಟವಾಗುತ್ತದೆ. ಆಯ್ಕೆಯ ವಿಷಯದ ಮೇಲೆಯೇ ಕೃತಿಯನ್ನು ಸಾಹಿತ್ಯಕ ಅಸಾಹಿತ್ಯಕ, ಸೃಜನಶೀಲ ಅಸೃಜನಶೀಲ ಎಂದು ಹಣೆಪಟ್ಟಿ ಹಚ್ಚುವುದು ಸತ್ಯದ ಆಭಾಸವಾದೀತೋ ಏನೋ! ಲೇಖಕನ ಮೂಲ ಮನೋಧರ್ಮ ಆತನ ಯಾವುದೇ ಪ್ರಕಾರದ ಕೃತಿಯಲ್ಲಿ ಶ್ವಾಸದಂತೆ ಆಡುತ್ತಲೇ ಇರುತ್ತದೆ.*

---

* ಪ್ರಜಾವಾಣಿ, ೯.೯.೧೯೮೦

‘ಶಬ್ದಮಣಿದರ್ಪಣಂ’

ಮಲ್ಲೇಪುರಂ ಜಿ. ವೆಂಕಟೇಶ

‘ಶಬ್ದಮಣಿದರ್ಪಣ’ದ ಮೊದಲ ಆವೃತ್ತಿ ಬಂದದ್ದು ೧೮೬೮ರಲ್ಲಿ. ಅದನ್ನು ಸಂಪಾದಿಸಿದವನು ಗ್ಯಾರೆಟ್ ಮಹಾಶಯ. ಆಮೇಲೆ ಕಿಟೆಲ್(೧೮೭೨), ಪಿ.ಮಂಗೇಶರಾವ್ (೧೯೨೦), ಎ.ವೆಂಕಟರಾವ್ ಮತ್ತು ಎಚ್.ಶೇಷಅಯ್ಯಂಗಾರ್ (೧೯೩೯), ಡಿ.ಎಲ್. ನರಸಿಂಹಾಚಾರ್(೧೯೬೪), ತ.ಸು.ಶಾಮರಾಯ ಮತ್ತು ಎಚ್.ನಂಜೇಗೌಡ(೧೯೭೫), ಡಿ.ಕೆ.ಭೀಮಸೇನರಾವ್(೧೯೭೨), ಎಲ್.ಬಸವರಾಜು (೧೯೮೬) -ಇಷ್ಟು ಆವೃತ್ತಿಗಳು ಬಂದಿವೆ. ಇದರ ಜತೆಗೆ ೧೯೨೦ರಲ್ಲಿ ‘ಪರಿಷತ್ ಪಂಡಿತರು’ ಸೇರಿ ಮಾಡಿದ ಕರ್ನಾಟಕ ಸಾಹಿತ್ಯ ಪರಿಷತ್ತಿನ ಆವೃತ್ತಿಯಲ್ಲೂ ಬಂದಿತ್ತು. ಇಷ್ಟೆಲ್ಲ ಆವೃತ್ತಿಗಳಲ್ಲಿ ಡಿ.ಎಲ್. ನರಸಿಂಹಾಚಾರ್ ಅವರದು ಈಗಲೂ ಲಭ್ಯ. ಇವುಗಳಲ್ಲದೆ, ಶಬ್ದಮಣಿದರ್ಪಣ ಸಂಗ್ರಹಗಳೂ ಇವೆ. ಅವೆಲ್ಲ ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡು ಸಂಪಾದಿತವಾಗಿವೆ.

ಈ ಹಿನ್ನೆಲೆಯಲ್ಲಿ ಟಿ.ವಿ.ವೆಂಕಟಾಚಲ ಶಾಸ್ತ್ರೀ ಅವರು ಸಂಪಾದಿಸಿರುವ ಕೇಶಿರಾಜನ ‘ಶಬ್ದಮಣಿದರ್ಪಣಂ’ ಕೃತಿಯು ಬಹುಮಟ್ಟಿಗೆ ವಿಶಿಷ್ಟವಾಗಿದೆ. ಇದಕ್ಕೆ ಕೆಲವು ಕಾರಣಗಳುಂಟು. ಅವುಗಳನ್ನು ಒಂದೊಂದಾಗಿ ಪರಿಶೀಲಿಸಬಹುದು:

೧. ಶಬ್ದಮಣಿದರ್ಪಣದ ಸೂತ್ರಪಾಠದ ವಿಷಯದಲ್ಲಿ ಸಾಮಾನ್ಯವಾಗಿ ಹೆಚ್ಚಿನ ಪಾಠಭೇದಗಳೇನೂ ಇಲ್ಲ. ಅಲ್ಲಲ್ಲಿ ಕಂಡುಬರುವ ಪಾಠಭೇದಗಳನ್ನು ಸೂತ್ರಪಾಠಕ್ಕಿರುವ ಮಹತ್ವದ ಕಾರಣದಿಂದಾಗಿ ಪ್ರಕೃತ ಮುದ್ರಣದಲ್ಲಿ ಅಡಿಟಿಪ್ಪಣಿಗಳಲ್ಲಿ ತೋರಿಸಿದ್ದಾರೆ.

೨. ಸೂತ್ರಕ್ಕೆ ಬರೆದಿರುವ ವೃತ್ತಿಯಲ್ಲಿ ಪಾಠಭೇದಗಳು ಅಲ್ಲಲ್ಲಿ ಇವೆ. ಆದರೆ ಇಲ್ಲಿ ಕವಿಪಾಠನಿರ್ಣಯ ಕಡುಕಷ್ಟ. ಆದರೂ ಪ್ರಧಾನವಾಗಿ ಡಿ.ಎಲ್.ಎನ್. ಅವರ ಪರಿಷ್ಕರಣ ಒಪ್ಪಿದ್ದರೂ ಅಲ್ಲಲ್ಲಿ ಬೇರೆ ಬೇರೆ ಪರಿಷ್ಕರಣಗಳ ನೆರವನ್ನು ಶಾಸ್ತ್ರಿಗಳು ಪಡೆದಿದ್ದಾರೆ. ಕೆಲವು ಕಡೆ ಅಡಿಟಿಪ್ಪಣಿಗಳಲ್ಲಿ ಸಂಕ್ಷೇಪವಾಗಿ ವಿಮರ್ಶಿಸಿ ರುವುದೂ ಉಂಟು. ಉದಾ: ಸೂತ್ರ ೨೦೭. ೨೪೫ ಇಂಥವು.

೩. ‘ಶಬ್ದಮಣಿದರ್ಪಣ’ದ ಪ್ರಯೋಗಗಳ ಪಾಠವು ದೋಷಗಳಿಗೆ ಗುರಿಯಾಗಿದೆ. ಶಾಸ್ತ್ರಿಗಳು ಪ್ರಸ್ತುತ ಪರಿಷ್ಕರಣದಲ್ಲಿ ಅವನ್ನು ಸಾಧ್ಯವಾದಮಟ್ಟಿಗೂ ಪರಿಹರಿಸಲು ಯತ್ನಿಸಿದ್ದಾರೆ. ಆಕರಗಳು ದೊರೆಯುವಂತಿದ್ದರೆ, ಅಂತಹ ಕಡೆ ಪ್ರಯೋಗಗಳನ್ನು

ಅವುಗಳ ಮೂಲದೊಂದಿಗೆ ತಾಳೆನೋಡಿ ಶುದ್ಧ ಪಾಠವನ್ನು ಗೊತ್ತುಮಾಡಿದ್ದಾರೆ. ಇಷ್ಟು ಮಾತ್ರವಲ್ಲ ಪೂರ್ಣಪದ್ಯವನ್ನೇ ಕೊಟ್ಟಿದ್ದಾರೆ. ಇದಲ್ಲದೆ ಪ್ರಯೋಗಗಳ ವ್ಯಾಕರಣಾಂಶ ಗಳು ಗೊತ್ತಾಗಲೆಂದು ಪ್ರಯೋಗದೊಳಗಿನ ಆ ಭಾಗವನ್ನೇ ದಪ್ಪಕ್ಷರಗಳಲ್ಲಿ ತೋರಿಸಿ ದ್ದಾರೆ. ಲಕ್ಷ್ಯಪದ್ಯಗಳ ಪಾದವಿಭಜನೆಮಾಡಿ ಆಯಾ ಛಂದಸ್ಸಿನ ಹೆಸರನ್ನು ಅಲ್ಲಲ್ಲಿ ಸೂಚಿಸಿದ್ದಾರೆ. ಸಂಶಯ ಬಂದ ಕೆಲವು ಕಡೆ ಛಂದಸ್ಸನ್ನು ಹೇಳದೆ ಬಿಟ್ಟುಬಿಟ್ಟಿದ್ದಾರೆ. ಪ್ರಯೋಗಗಳ ಮೂಲ ಆಕರಗಳನ್ನು ಪತ್ತೆಹಚ್ಚಿ ಉದ್ಧೃತ ಭಾಗದಲ್ಲೇ ವಿವರಗಳನ್ನು ನೀಡಿರುವುದು ಶಾಸ್ತ್ರಿಗಳ ವೈಶಿಷ್ಟ್ಯ. ಪ್ರಯೋಗಗಳ ಸಂಬಂಧವಾಗಿ ಏನಾದರೂ ಮುಖ್ಯ ಸಮಸ್ಯೆಗಳಿದ್ದರೆ, ಅವನ್ನು ಅಡಿಟಿಪ್ಪಣಿಗಳಲ್ಲಿ ಸಂಕ್ಷೇಪವಾಗಿ ಚರ್ಚಿಸಿದ್ದಾರೆ. ಉದಾ. ಪುಟಗಳು ೨೨೩, ೧೫೪, ೧೪೫, ೧೨೦ ಇತ್ಯಾದಿ.

೪. ಪ್ರಸ್ತುತ ಪರಿಷ್ಕರಣಕ್ಕೆ ವಿಸ್ತಾರವೂ ನಿರ್ದಿಷ್ಟವೂ ಖಚಿತವೂ ಆದ ವ್ಯಾಕರಣ ವಸ್ತುವಿನ ಸಂಕ್ಷಿಪ್ತವಿಮರ್ಶೆಯಿರುವುದು ಉಪಯುಕ್ತವಾಗಿದೆ. ಅದರಲ್ಲಿ ಶಾಸ್ತ್ರಿಗಳು, ಕೇಶಿರಾಜನ ಸಾಧನೆಗಳನ್ನೂ ಅವನ ಸೀಮಿತ ಪ್ರವೃತ್ತಿಗಳನ್ನೂ ಗುರುತಿಸುವ ತಿದ್ದುಪಡಿ ಗಳನ್ನೂ ಸೇರ್ಪಡೆಗಳನ್ನೂ ಸೂಕ್ತವಾಗಿ ಅಳವಡಿಸಿದ್ದಾರೆ. ಈ ಭಾಗವನ್ನು ಬರೆಯುವಾಗ ಅವರ ಆಳವಾದ ಕನ್ನಡ ವ್ಯಾಕರಣದ ಪರಿಣತಿ ಅಡಿಗಡಿಗೆ ಮನವರಿಕೆಯಾಗುತ್ತದೆ.

ಮೇಲಿನ ನಾಲ್ಕು ಸಂಗತಿಗಳನ್ನು ಗಮನಿಸಿದರೆ ಶಾಸ್ತ್ರಿಗಳು ಪ್ರತಿಯೊಂದು ಭಾಗಕ್ಕೂ ವಿಶೇಷವಾದ ಲಕ್ಷ್ಯವನ್ನು ಕೊಟ್ಟಿದ್ದಾರೆ ಎಂದು ತಿಳಿಯುತ್ತದೆ. ಯಾವುದೊಂದನ್ನೂ ಗೌಣವೆಂದು ಪರಿಗಣಿಸಿಲ್ಲ. ಪ್ರತಿಯೊಂದು ಅಂಶವನ್ನೂ ಮುಖ್ಯವೆಂದೇ ಪರಿಗಣಿಸಿ ದ್ದಾರೆ. ಶಾಸ್ತ್ರಿಗಳು ನಡೆಸಿರುವ ಹಳಗನ್ನಡವ್ಯಾಕರಣ ಕುರಿತ ಸಾಂಪ್ರದಾಯಿಕ ಅಧ್ಯಯನ ಎಷ್ಟೊಂದು ಖಚಿತವೂ ಸ್ವಾರಸ್ಯಪೂರ್ಣವೂ ಆಗಿದೆಯೆಂದರೆ ಅವರು ಬರೆದಿರುವ ಉಪೋದ್ಘಾತದ ಭಾಗವನ್ನೇ ಓದಬೇಕು. ಶಾಸ್ತ್ರಿಗಳಿಗೆ ಶಬ್ದಮಣಿದರ್ಪಣದಲ್ಲಿ ತೊಡಕಾಗಿ ಕಾಣಿಸಿರುವ ಅಂಶಗಳನ್ನು ಬಿಡಿಸುತ್ತಾ ಹೋಗಿದ್ದಾರೆ. ಇದು ಶಾಸ್ತ್ರಿಗಳು ಬರೆದಿರುವ ಉಪೋದ್ಘಾತದ ವೈಶಿಷ್ಟ್ಯ. ವಿದ್ಯಾರ್ಥಿಗಳಿಗೂ, ಅಧ್ಯಾಪಕರಿಗೂ ಈ ಬಗೆಯ ವಿಶ್ಲೇಷಣೆ ಅನುಕೂಲವಾಗುತ್ತದೆಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ಕೇಶಿರಾಜನ ಶಬ್ದಮಣಿದರ್ಪಣ ಬಹಳ ಸುಂದರವಾಗಿ ಮುದ್ರಣಗೊಂಡಿದೆ. ಹೊರಗೂ ಒಳಗೂ ಸುಂದರವಾಗಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಒಳ್ಳೆಯ ಪ್ರಕಟಣೆಗಳಲ್ಲಿ ಇದೂ ಒಂದು. ಶಾಸ್ತ್ರಿಗಳ ಶಾಸ್ತ್ರಮುಖದ ಗ್ರಂಥಸರಣಿಗೆ ಈ ಕೃತಿ ಚಿನ್ನದ ಗರಿಯೇ ಹೌದು.*

---

* ಪುಸ್ತಕ ಮಾಹಿತಿ, ಆಗಸ್ಟ್ ೧೯೯೪

ಕನ್ನಡ ಚಿತ್ರಕಾವ್ಯ

ಹೀ.ಚಿ.ಶಾಂತವೀರಯ್ಯ

ಕಾವ್ಯಪ್ರಕಾರಗಳಲ್ಲಿ ಒಂದಾದ 'ಚಿತ್ರಕಾವ್ಯ' ಭಾರತೀಯ ಕಾವ್ಯಮೀಮಾಂಸೆಯ ಕ್ಷೇತ್ರದಲ್ಲಿ ಪ್ರಾರಂಭದಿಂದಲೂ ವಿಮರ್ಶಕರ ದೃಷ್ಟಿಗೆ ಗುರಿಯಾಗಿ ದಾಪುಗಾಲು ಹಾಕುತ್ತ, ಕಾವ್ಯಗಳಲ್ಲಿ ಬೆಳೆದುಬಂದಿದೆ. ಈ ಕಾವ್ಯಪ್ರಕಾರವನ್ನು ಸಮಗ್ರವೂ ಸುಂದರವೂ ಆಗಿ ನೋಡಿದವರು ಬಹಳಿಲ್ಲ. ಪ್ರಸ್ತುತ 'ಕನ್ನಡ ಚಿತ್ರಕಾವ್ಯ'*ದ ಸ್ವರೂಪ, ಇತಿಹಾಸ ಮತ್ತು ವಿಮರ್ಶೆಯನ್ನು ನಾಡಿನಲ್ಲಿಯೇ ಪ್ರಸಿದ್ಧ ವಿದ್ವಾಂಸರೂ ಖ್ಯಾತ ಸಂಶೋಧಕರೂ ನೆಚ್ಚಿನ ಪ್ರಾಧ್ಯಾಪಕರೂ ಸರಳರೂ ಸಂಪನ್ನರೂ ಆದ ಡಾ.ಟಿ.ವಿ. ವೆಂಕಟಾಚಲ ಶಾಸ್ತ್ರೀ ಅವರು ಬೃಹತ್ ಗ್ರಂಥರೂಪದಲ್ಲಿ ರಚಿಸಿ ಕನ್ನಡ ನಾಡು ಮತ್ತು ನುಡಿಗೆ ಮಹೋಪಕಾರ ಮಾಡಿದ್ದಾರೆ. ಅವರೇ ತಿಳಿಸಿರುವಂತೆ ವರ್ಣಮಯ ಚಿತ್ರಕಾವ್ಯ ಪ್ರಪಂಚದ ಭೇದೋಪಭೇದಗಳ ರಚನೆ ಪಾಲನೆ ಪೋಷಣೆಗಳಲ್ಲಿ ಸಂತೋಷಿಸಿದ ಸಂಸ್ಕೃತ ಕನ್ನಡ ವಿದ್ವತ್‌ಪರಂಪರೆಯನ್ನು ಅವರು ಸ್ಮರಿಸಿದ್ದಾರೆ. ಮುಂದೆ ಚಿತ್ರಕಾವ್ಯದ ಸ್ವರೂಪ, ಇತಿಹಾಸ ಮತ್ತು ವಿಮರ್ಶೆಯನ್ನೇ ಸಮಗ್ರವಾಗಿ ರಚಿಸಿ, ಸಂಗ್ರಹಿಸಿ, ಸಂಪಾದಿಸಿ, ಕನ್ನಡ ವಿದ್ವತ್ ಪರಂಪರೆಗೆ ಅಭೂತಪೂರ್ವ ಗ್ರಂಥವೊಂದನ್ನು ಕೊಟ್ಟು ಡಾ.ಟಿ.ವಿ. ವೆಂಕಟಾಚಲ ಶಾಸ್ತ್ರೀ ಅವರು ಸ್ಮರಣೀಯರಾಗಿದ್ದಾರೆ.

ಇರುವ ಒಂಬತ್ತು ಭಾಗಗಳು ಅಂದರೆ: ಪೀಠಿಕೆ; ಅನುಪ್ರಾಸ; ಯಮಕ; ವರ್ಣಚಿತ್ರ; ಶ್ಲೇಷಚಿತ್ರ, ಗರ್ಭಕವಿತ್ವ; ಗೂಢಚಿತ್ರ; ಪ್ರಹೇಳಿಕೆ; ಗತಿಚಿತ್ರ; ಬಂಧಚಿತ್ರ ಮತ್ತು ಒಟ್ಟು ನೋಟಗಳ ವಿಸ್ತಾರವಾದ ಸ್ವರೂಪ, ಇತಿಹಾಸ ಮತ್ತು ವಿಮರ್ಶೆಯನ್ನೊಳಗೊಂಡಿವೆ. 'ಚಿತ್ರಕಾವ್ಯ' ಪ್ರಪಂಚದಲ್ಲಿ ಇದೊಂದು ಮಹತ್ತರವಾದ ಮೈಲಿಗಲ್ಲು. ಇದುವರೆಗೆ ಬಹು ಜನರಿಗೆ ಕಬ್ಬಿಣದ ಕಡಲೆಯಾಗಿದ್ದ ಈ ಮೇಲಿನವುಗಳನ್ನು ಶಾಸ್ತ್ರೀ ಅವರು ಹುರಿದ ಕಡಲೆಯನ್ನು ಮಾಡಿಕೊಡುವುದರ ಜೊತೆಗೆ ಮಧುರವಾದ ಶೈಲಿಯಲ್ಲಿ ಸವಿಯಾದ ಬೆಲ್ಲವನ್ನೂ ಇತ್ತು ಓದುಗರಿಗೆ 'ಸವಿದಾನ' ಮಾಡಿದ್ದಾರೆ. ಶಾಸ್ತ್ರಿಗಳು ನೀಡಿರುವ ಉದಾಹರಣೆಗಳನ್ನು ನೋಡಿದರೆ ಅವರ 'ಕಾವ್ಯವಿದ್ಯಾಪ್ರಚಯಪರಿಚಯ' ಎಷ್ಟಿದೆಯೆಂಬುದು ಅರಿವಾಗಿ ದಿಗ್ಭ್ರಮೆಯಾಗುತ್ತದೆ. ಸುಮಾರು ಎಂಟು ಪುಟಗಳ (೫೦೩ರಿಂದ ೫೧೦) ಆಧಾರಸಾಹಿತ್ಯದ ಗ್ರಂಥಸೂಚಿಯಿದೆ ಎಂದಮೇಲೆ 'ಪಲವುಂ ನಾಲಗೆಯುಳ್ಳವ'ನಾದರೂ ಇದನ್ನು ವರ್ಣಿಸಲು ಭಯಪಡಬೇಕಾಗುತ್ತದೆ.

ಭಾಗಗಳಲ್ಲಿ ೬ನೆಯದಾದ 'ಪ್ರಹೇಳಿಕೆ' ಬಹುದೊಡ್ಡದು. ಸುಮಾರು ೧೨೮ ಪುಟಗಳಷ್ಟಿದೆ. ಇದರಲ್ಲಿ ಚದುರ್, ಜಾಣ್, ಬೆಡಂಗು(=ಬೆಡಗು), ಪದಿರ್, ಮುಂಡಿಗೆ, ಒಗಂಟು(=ಒಗಟು), ಬೆಡಗಿನ ವಚನಗಳು, ಮುಂಡಿಗೆಯ ಕೀರ್ತನೆಗಳು, ಸರ್ವಜ್ಞನ ತ್ರಿಪದಿಗಳು ಒಗಟುಗಳು, ಸಂಖ್ಯಾತ, ಪಾರಿಹಾರಿಕಿ ಅಥವಾ ಯೋಗಮಾಲೆ, ನುಸುಳ್, ನಾಮಾಂತರಿತ, ಸಂಕಲ್ಪ, ಪ್ರಶ್ನಗಳು, ಸಮಸ್ಯೆಗಳು, ಸಾಮಾನ್ಯ ಉಭಯಚಿತ್ರಗಳು ಮೊದಲಾದವುಗಳ ಸ್ವರೂಪ ಮತ್ತು ಇತಿಹಾಸ ವಿಮರ್ಶೆಯಿದೆ.

ಶಬ್ದಮೂಲವಾದ ಚಮತ್ಕಾರ ತೋರುವ ರಚನೆ 'ಶಬ್ದಚಿತ್ರ', ಅರ್ಥಮೂಲವಾದುದು 'ಅರ್ಥಚಿತ್ರ'. ಶಬ್ದಾರ್ಥ ಎರಡೂ ಇರುವುದಕ್ಕೆ 'ಉಭಯಚಿತ್ರ', ಈ ಉಭಯಚಿತ್ರಗಳೆಂಬವು ಪ್ರಹೇಳಿಕೆ(ಒಗಟು), ಕೂಟ(ಗೂಢರೀತಿಯ ಕಾವ್ಯಚಮತ್ಕಾರ). ಪ್ರಹೇಳಿಕೆಯ ಕೆಲವು ಬಗೆಗಳು, ಪ್ರಶ್ನಗಳು, ಅಕ್ಷರಗಳನ್ನು ಅಡಗಿಸುವುದು, ಸ್ಥಾನದಲ್ಲಿ ಕೂರಿಸುವುದು, ಚ್ಯುತಮಾಡುವುದು, ಮುಂತಾದ ಶಾಬ್ದಿಕ ಚಮತ್ಕಾರಗಳು ಸೇರಿವೆ.

ದಂಡಿ ಪ್ರಹೇಳಿಕೆಗಳನ್ನು ಸತ್‌ಪ್ರಹೇಳಿಕೆ, ದುಷ್‌ಪ್ರಹೇಳಿಕೆ ಎಂದು ಎರಡು ಗುಂಪುಗಳಾಗಿ ಮಾಡಿ ಹೇಳಿದ್ದಾನೆ. ಅವು ೧೬ ಮತ್ತು ೧೪ ಎಂದು ತಿಳಿಸಿದ್ದಾನೆ. ಅವೇ ಸಮಾಗತಾ, ವಂಚಿತಾ, ವ್ಯುತ್ಕ್ರಾಂತಾ, ಪ್ರಮುಷಿತಾ, ಸಮಾನರೂಪಾ, ಪರುಪಾಸಂಖ್ಯಾತ, ಪ್ರಕಲ್ಪಿತಾ, ನಾಮಾಂತರಿತಾ, ನಿಭೃತಾ, ಸಮಾನಶಬ್ದಾ, ಸಮ್ಮೂಢ, ಪಾರಿಹಾರಿಕಿ (ಯೋಗಮಾಲಾ), ಏತಚ್ಛನ್ನಾ, ಉಭಯಚ್ಛನ್ನಾ, ಮತ್ತು ಸಂಕೀರ್ಣ.

'ಪ್ರಹೇಳಿಕೆ'ಯಲ್ಲಿನ 'ಸಮಸ್ಯೆ'ಗಳಲ್ಲಿ ಕನ್ನಡ ಸಾಹಿತ್ಯದಲ್ಲಿ ಪ್ರಸಿದ್ಧರಾಗಿರುವ 'ಕಂತಿ ಹಂಪ'ರ ಸಮಸ್ಯೆಗಳನ್ನು ಇಲ್ಲಿ ತಂದಿದ್ದಾರೆ.

...'ಕನ್ನಡ ಚಿತ್ರಕಾವ್ಯ' ಗ್ರಂಥ ಗತಿ ಮತ್ತು ಬಂಧಚಿತ್ರಗಳು ಮೊತ್ತಮೊದಲಿಗೆ ಒಂದೆಡೆ ಲಭ್ಯವಾಗುವ ಕೋಶದಂತಿದೆ. ಇದುವರೆಗೆ ಹರಡಿಕೊಂಡಿದ್ದ ಚಿತ್ರಗಳನ್ನು ಟಿ.ವಿ.ವೆಂ. ಅವರು ಬಹಳ ಸಾಹಸದಿಂದ ಸಂಗ್ರಹಿಸಿ ಸೋದಾಹರಣವಾಗಿ ಉದಾಹರಿಸಿ ಓದುಗರಿಗೆ ಮಹೋಪಕಾರಮಾಡಿದ್ದಾರೆ. 'ನರಪತಿಚರಿತ', 'ವೀರಶೈವಾಮೃತ ಮಹಾಪುರಾಣ', ಮೊದಲಾದವುಗಳಿಂದ ಕೊಡೆ, ಬೀಸಣಿಗೆ, ಕನ್ನಡಿ, ಹಲಗೆ, ದೀಪ, ಕಳಸ, ಮಾಲೆ, ಕತ್ತಿ, ಚಕ್ರ, ತ್ರಿಶೂಲ, ಬಿಲ್ಲು, ಕೊಡಲಿ, ಮುಸಲ, ಬಾಣ, ಮುರಜ, ನೇಗಿಲು, ಪದ್ಮವ್ಯೋಮ, ಸರ್ಪ, ಯಾನ ಮೊದಲಾದ ಬಂಧಗಳನ್ನು ವಿವರಿಸಿ ಅಚ್ಚರಿಯುಂಟು ಮಾಡಿದ್ದಾರೆ.

'ಕನ್ನಡ ಚಿತ್ರಕಾವ್ಯ' ಕನ್ನಡ ಸಾಹಿತ್ಯಕ್ಕೆ ಅಪರೂಪವಾದ ಕೊಡುಗೆ. ಇದುವರೆಗೆ ಗುಪ್ತವಾಗಿ ಅಡಗಿದ್ದ ನಿಧಿಯನ್ನು ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರೀ ಅವರು ತೋರಿಸಿ ಕೊಟ್ಟು ಕನ್ನಡಿಗರು ಶ್ರೀಮಂತರಾಗುವಂತೆ ಮಾಡಿದ್ದಾರೆ. ಕನ್ನಡ ರಾಜರಾಜೇಶ್ವರಿಯ ಸಿರಿಮಕುಟಕ್ಕೆ ಅನರ್ಘ್ಯರತ್ನವೊಂದನ್ನು ಸೇರಿಸಿ, ಸಾಹಿತ್ಯದ ಬೆಲೆಯನ್ನು ನೂರ್ಮಡಿ ಹೆಚ್ಚಿಸಿದ್ದಾರೆ. ಇದುವರೆಗೆ ಬಂದಿರುವ ಕಾವ್ಯಮೀಮಾಂಸೆ ಗ್ರಂಥಗಳಲ್ಲಿ ಈ ವಿಷಯ

ಗಳಿಗೆ ಸಂಬಂಧಿಸಿದಂತೆ ಇದು ಆದಿಗ್ರಂಥ. 'ಕನ್ನಡ ಚಿತ್ರಕಾವ್ಯ' ನಿಜವಾಗಿಯೂ ಅನ್ವರ್ಥವಾಗಿದೆ. ಚಿತ್ರಕಾವ್ಯದ ಬಗ್ಗೆ ಸಮಗ್ರ ಮತ್ತು ಸುಂದರವಾದ ವಿವರಣೆಯಿಂದ ಕೂಡಿರುವ ಈ ಗ್ರಂಥ ನಿಜಕ್ಕೂ ಕನ್ನಡ ನಾಡು ಮತ್ತು ನುಡಿಗೆ ಹೆಮ್ಮೆತರುತ್ತದೆ. ಕನ್ನಡದಲ್ಲಿ ಏಕೆ? ಇಡೀ ಭಾರತೀಯ ಭಾಷೆಯಲ್ಲಿಯೇ ಈ ತೆರನ ಪುಸ್ತಕಗಳಲ್ಲಿ ಇದು ಮೊದಲನೆಯದೆಂದು ಹೇಳಲು ಬಹುಹೆಮ್ಮೆಯಾಗುತ್ತದೆ. 'ಕನ್ನಡ ಚಿತ್ರಕಾವ್ಯ' ಎಂದಿದ್ದರೂ ಇಡೀ ಭಾರತದ ಕಾವ್ಯಗಳ ಚಿತ್ರಕಾವ್ಯವನ್ನೊಳಗೊಂಡಿರುವ ಗ್ರಂಥ.

'ಕನ್ನಡ ಚಿತ್ರಕಾವ್ಯ' ಕನ್ನಡ ಪುಸ್ತಕಪ್ರಪಂಚದಲ್ಲಿ ಕಳೆದ ಮೂರು ದಶಕಗಳಲ್ಲಿ ಬಂದಿರುವ ಅತಿಹೆಮ್ಮೆಯ ಪುಸ್ತಕ. ಭಾರತೀಯ ಕಾವ್ಯಮೀಮಾಂಸೆಗೆ ಈ ಗ್ರಂಥ ತನ್ನ ಅನುಪಮ ಸೇವೆಯನ್ನು ಸಲ್ಲಿಸಲಿದೆ ಎಂದರೆ ಅತಿಶಯೋಕ್ತಿ ಅಲ್ಲ. ಇಂತಹ ಅಪರೂಪಗ್ರಂಥವನ್ನು ರಚಿಸಿದ ಡಾ.ಟಿ.ವಿ. ವೆಂಕಟಾಚಲ ಶಾಸ್ತ್ರೀ ಅವರು ಅಭಿನಂದನಾರ್ಹರು.*

* ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ೧೯೮೮

ಗಜಶಾಸ್ತ್ರಶಬ್ದಕೋಶ

ಸ.ಕಾರ್ತಿಕ್

ಕನ್ನಡದಲ್ಲಿ ಪ್ರಾಣಿವಾಚಕ ಶಬ್ದಕೋಶಗಳ ಅಗತ್ಯ ಬಹಳ ಕಾಲದಿಂದಲೂ ಇದೆ. ಸಂಸ್ಕೃತ ಭಾಷೆಯಲ್ಲಿ ಈ ತೆರನಾದ ಗ್ರಂಥಗಳು ಹೇರಳವಾಗಿವೆ. ಕನ್ನಡದಲ್ಲಿ ಇವುಗಳ ಕೊರತೆ ಕಣ್ಣೊತ್ತುತ್ತದೆ. ಕನ್ನಡದಲ್ಲಿ ಅಶ್ವಶಾಸ್ತ್ರಕ್ಕೆ ಸಂಬಂಧಿಸಿದ ಕೃತಿಗಳು ರಚಿತವಾಗಿವೆ. ಕೆಲವು ಮೂಲಕೃತಿಯ (ಶಾಲಿಹೋತ್ರನ ಅಶ್ವಶಾಸ್ತ್ರ) ಟೀಕೆಗಳು. ಆದರೂ ಅಶ್ವಶಾಸ್ತ್ರ ಶಬ್ದಕೋಶದ ಅಗತ್ಯ ಇದ್ದೇ ಇದೆ. ಇನ್ನು ಗಜಶಾಸ್ತ್ರದ ಕೃತಿಗಳು ಸಂಸ್ಕೃತದಲ್ಲಿ ಅನೇಕವಿವೆ. ಕನ್ನಡದಲ್ಲಿ ಸ್ವತಂತ್ರ ಕೃತಿಗಳು ಒಂದೂ ಇಲ್ಲವಾಗಿವೆ.(ಸ್ವತಂತ್ರ ಕೃತಿ ಎಂದರೂ ಪೂರ್ವಾಚಾರ್ಯರ ಋಣ ಇದ್ದೇ ಇರುತ್ತದೆ.) ಕನ್ನಡಿಗರಾದ ಗಂಗದೊರೆಗಳು ಗಜಯುದ್ಧಗಳಲ್ಲಿ ನಿಷ್ಣಾತರಾಗಿದ್ದರಾಗಿ ಅವರು ಗಜಶಾಸ್ತ್ರಕೃತಿಗಳನ್ನು ಸಂಸ್ಕೃತದಲ್ಲಿ ರಚಿಸಿರುವುದಾಗಿ ತಿಳಿದುಬಂದಿದೆ. ಒಬ್ಬ ದೊರೆಯ (ಸೈಗೊಟ್ಟ ಶಿವಮಾರ) ಒಂದು ಪ್ರಕರಣವಷ್ಟೇ ಇರುವ ಕೃತಿಯನ್ನು ಹೊರತುಪಡಿಸಿದರೆ ಇನ್ನಾವ ಕೃತಿಗಳೂ ಲಭ್ಯವಿಲ್ಲ. ಇನ್ನು ಕನ್ನಡ ಕವಿಗಳು ತಮ್ಮ ತಮ್ಮ ಕೃತಿಗಳಲ್ಲಿ ಗಜಶಾಸ್ತ್ರದ ವಿವರಗಳನ್ನು ಕುರಿತು ತಮ್ಮ ಅರಿವನ್ನು ಪ್ರದರ್ಶಿಸಿದ್ದಾರೆ. ಅನೇಕ ಕನ್ನಡ ಶಾಸ್ತ್ರಕಾರರು ತಮ್ಮ ಕೃತಿಗಳಲ್ಲಿ ಗಜಶಾಸ್ತ್ರದ ವಿವರಗಳನ್ನು ನೀಡಿದ್ದಾರೆ. ಉದಾ. ಇಮ್ಮಡಿ ಚಾವುಂಡರಾಯನ ಲೋಕೋಪಕಾರಂ(ಕ್ರಿ.ಶ.ಸು. ೧೦೨೫), ಇಮ್ಮಡಿ ನಾಗವರ್ಮನ ಅಭಿಧಾನ ವಸ್ತುಕೋಶ (ಕ್ರಿ.ಶ.೧೦೪೨), ಇಮ್ಮಡಿ ಮಂಗರಾಜನ ಅಭಿನವಾಭಿಧಾನಂ(ಕ್ರಿ.ಶ.೧೩೯೮). (ಇನ್ನೂ ಹಲವು ಕೃತಿಗಳಲ್ಲಿನ ವಿವರಗಳಿಗೆ ನೋಡಿ: ಲೌಕಿಕ ಶಾಸ್ತ್ರ ಗ್ರಂಥಗಳ ಹಸ್ತಪ್ರತಿಗಳು -ಡಾ. ವೈ.ಸಿ.ಭಾನುಮತಿ, ಹಸ್ತಪ್ರತಿ ವ್ಯಾಸಂಗ -2, ಹಂಪಿ, ವಿಶ್ವವಿದ್ಯಾಲಯ ೨೦೦೬)

ಈಗ ಲಭ್ಯವಾಗಿರುವಂತೆ ಕನ್ನಡದಲ್ಲಿರುವ ಏಕಮಾತ್ರ ಗಜಶಾಸ್ತ್ರಕೃತಿ ವೀರಭದ್ರರಾಜನು ಪಾಲಕಾಪ್ಯನ ಹಸ್ತ್ಯಾಯುರ್ವೇದಕ್ಕೆ ಬರೆದ ಕನ್ನಡಟೀಕೆ. (ಮೇಲೆ ಉಲ್ಲೇಖಿಸಿರುವ ವೈ.ಸಿ.ಭಾನುಮತಿಯವರ ಲೇಖನದಲ್ಲಿ ವೀರಭದ್ರರಾಜನ ಹೆಸರೇ ಇಲ್ಲ. ಬರಿಯ ಕೃತಿ ಮಾತ್ರ ಉಲ್ಲೇಖಗೊಂಡಿದೆ.) ಇದು ಪ್ರಕಟವಾಗದಿರುವುದು ಒಂದು ದೌರ್ಭಾಗ್ಯ. ಈತ ರಾಜವಂಶಸ್ಥನೆಂದೂ ನೃಸಿಂಹರಾಜ-ವೀರಾಂಬೆಯರು ತಂದೆ ತಾಯಿಗಳೆಂದೂ, ಕಾಲ ಕ್ರಿ.ಶ.ಸು ೧೬೦೦ ಎಂದೂ ಕವಿಚರಿತೆಯಿಂದ ತಿಳಿದುಬರುತ್ತದೆ. (ಕವಿಚರಿತೆಯಲ್ಲಿ ಈ ಕೃತಿಯ ಗದ್ಯಭಾಗವನ್ನು ಉಲ್ಲೇಖಿಸಿದೆ)(ಈ ಕೃತಿಯ ವಿವರ

ಗಳಿಗೆ ನೋಡಿ: ಕರ್ಣಾಟಕ ಕವಿಚರಿತೆ -ಸಂಪುಟ-೨, ರಾ.ನರಸಿಂಹಾಚಾರ್ಯ, ೧೯೧೯ರ ಪ್ರಥಮ ಮುದ್ರಣ, ಪುಟ ೩೪೩-೩೪೪). ಇದರ ಹಸ್ತಪ್ರತಿ ಈಗ ಮೈಸೂರು ವಿಶ್ವವಿದ್ಯಾನಿಲಯದಲ್ಲಿದೆ. (ಸಂಖ್ಯೆ- ಕೆ.೧೫೮೫, ಓಲೆಪ್ರತಿ ಮೈಸೂರು ವಿ.ವಿ. ಹಸ್ತಪ್ರತಿಸೂಚಿ-೯) ಇದು ಸಂಪಾದಿತವಾಗಿ ಪ್ರಕಟವಾಗಬೇಕಾದುದು ಅತ್ಯವಶ್ಯಕ.

ಸೈಗೊಟ್ಟ ಶಿವಮಾರನು ಗಂಗವಂಶದ ದೊರೆ. ಇವನ ಕಾಲ ಕ್ರಿ.ಶ.ಸು.೮೦೦. ಈತನ 'ಗಜಾಷ್ಟಕ'ವೆಂಬ (ಬಹುಶಃ ಕನ್ನಡದಲ್ಲಿರಬಹುದಾದ) ಕೃತಿ ಲಭ್ಯವಿಲ್ಲ. ಸಂಸ್ಕೃತದಲ್ಲಿ ಈತನಿಂದ ರಚಿತವಾದ 'ಕಲ್ಪನಾರತ್ನ'ವೆಂಬ ಕೃತಿಯ ಒಂದು ಪ್ರಕರಣ ಮಾತ್ರ ಲಭ್ಯವಿದೆ. (ಇದರ ಬಗ್ಗೆ ವಿವರಗಳಿಗೆ ನೋಡಿ: ಸೈಗೊಟ್ಟ ಶಿವಮಾರನ ಕಲ್ಪನಾರತ್ನ -ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರೀ, ಶಾಸ್ತ್ರೀಯ -೬, ಸಪ್ನ ಬುಕ್ ಹೌಸ್, ಬೆಂಗಳೂರು -೨೦೦೫, ಪುಟ ೨೭೧-೨೭೯) ಈ ಕೃತಿಯನ್ನು ಡಾ. ಟಿ.ವಿ.ವೆಂಕಟಾಚಲ ಶಾಸ್ತ್ರಿಗಳು ವಿದ್ವಾನ್ ಎಚ್.ವಿ.ನಾಗರಾಜರಾವ್ ಅವರೊಂದಿಗೆ ಸೇರಿ ಕನ್ನಡ ತಾತ್ಪರ್ಯಸಮೇತವಾಗಿ ಸಂಪಾದಿಸಿದ್ದಾರೆ. (ಪ್ರಕಟನೆ: ಕರ್ನಾಟಕರಾಜ್ಯಪತ್ರಾಗಾರ -೨೦೦೭)

ಇದನ್ನು ಬಿಟ್ಟರೆ, ೧೯೯೪ರಲ್ಲಿ ಕಾವ್ಯಾಲಯ, ಮೈಸೂರಿನಿಂದ ಪ್ರಕಟವಾಗಿರುವ ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿಗಳ 'ಗಜಶಾಸ್ತ್ರ ಶಬ್ದಕೋಶ'ವೇ ಲಭ್ಯವಾದುದು. ಈ ಕೋಶವನ್ನು ತಯಾರಿಸುವಲ್ಲಿ ಶಾಸ್ತ್ರಿಗಳು ಸಂಸ್ಕೃತದ ಪಾಲಕಾಪ್ಯನ ಹಸ್ತ್ಯಾಯುರ್ವೇದ, ನೀಲಕಂಠನ ಮಾತಂಗಲೀಲಾ, ಮುಮ್ಮಡಿ ಸೋಮೇಶ್ವರನ ಮಾನಸೋಲ್ಲಾಸ ಹಾಗೂ ಇನ್ನೂ ಹಲವು ಸಂಸ್ಕೃತ ಕೃತಿಗಳನ್ನು ಬಳಸಿಕೊಂಡಿದ್ದಾರೆ. ಜೊತೆಗೆ ಸಂಸ್ಕೃತ, ಕನ್ನಡ ನಿಘಂಟುಗಳು ಮತ್ತು ಕಾವ್ಯಗಳನ್ನೂ ಉಪಯೋಗಿಸಿಕೊಂಡಿದ್ದಾರೆ. ಕನ್ನಡ ಕಾವ್ಯಗಳಲ್ಲಿ ಮಾತ್ರ ಕಂಡುಬರುವ ಗಜಶಾಸ್ತ್ರ ಸಂಬಂಧಿ ಪ್ರಯೋಗಗಳನ್ನೂ ಸೇರಿಸಿಕೊಂಡಿದ್ದಾರೆ. ಬಹುತೇಕ ಕನ್ನಡ ಕಾವ್ಯ ಮತ್ತು ಶಾಸ್ತ್ರಕೃತಿಗಳಲ್ಲಿ ಈ ಭಾಗಗಳ ಪಾಠ ಕೆಟ್ಟುಹೋಗಿದೆ. ಶಾಸ್ತ್ರಿಗಳು ಈ ಕೋಶದಲ್ಲಿ ಅವುಗಳನ್ನು ಪರಿಷ್ಕರಿಸಿ ಪಾಠಕ್ಲೇಶಗಳನ್ನು ನಿವಾರಿಸಿದ್ದಾರೆ. ಉದಾಹರಣೆಗೆ ಹರಿಹರ ಕವಿಯ ನಂಬಿಯಣ್ಣನ ರಗಳೆಯ (ಸಂ.ತೀ.ನಂ.ಶ್ರೀಕಂಠಯ್ಯ, ಕಾವ್ಯಾಲಯ, ೧೯೮೯, ಪುಂ.ಮು.) ಎರಡನೆಯ ಸ್ಥಲದಲ್ಲಿ ಬರುವ ಈ ಭಾಗವನ್ನು ನೋಡಬಹುದು, "ನರಸಿಂಗಮೊನೆಯರ ಪಟ್ಟದಾನೆ ಸಂಚಿತತಿಲಕಿತ ಅರ್ಧಕಪೋಳಿತ ಅತಿವರ್ತಿತ ಅಧೋನಿಬಂಧಿನಿ ಕ್ರೋಧಿನಿ ಗಂಧಚಾರಿಣಿಯೆಂಬ ಸಪ್ತಾವಸ್ಥೆಯ ಮದದಿಂ" ಎಂಬ ಭಾಗದಲ್ಲಿ ಸಪ್ತಾವಸ್ಥೆಯ ಮದದ ಹೆಸರುಗಳು ಕ್ರಮವಾಗಿಲ್ಲ. ಒಂದರ ಹೆಸರು ಕೂಡ ಬಿಟ್ಟುಹೋಗಿದೆ. ಸಂಚಿತ ತಿಲಕಿತ ಎಂಬುದು ಸಂಜಾತತಿಲಕಿತ ಎಂದು ಇರಬೇಕು; ಅರ್ಧಕಪೋಳಿತ ಆರ್ದ್ರಕಪೋಳಿತ ಎಂದು ಇರಬೇಕು. ತೀ.ನಂ.ಶ್ರೀ ಅವರು (ಆರ್ದ್ರ) ಕಪೋಳಿತ ಇರಬೇಕು ಎಂದು ಅಡಿಟಿಪ್ಪಣಿಯಲ್ಲಿ ಸಂದೇಹಿಸಿದ್ದಾರೆ. ಆದರೆ ಸಂದೇಹ ಅನಾವಶ್ಯಕವಾಗಿತ್ತು. ಶಾಸ್ತ್ರಿಗಳು ಈ ಕ್ಲೇಶಗಳನ್ನು ಗಮನಿಸಿ ಇಲ್ಲಿನ ಪಾಠವನ್ನು "ನರಸಿಂಗ ಮೊನೆಯರ ಪಟ್ಟದಾನೆ ಸಂಜಾತತಿಲಕಿತ, ಆರ್ದ್ರಕಪೋಳಿತ,

ಅಧೋನಿಬಂಧಿನಿ, ಗಂಧಚಾರಿಣಿ, ಕ್ರೋಧಿನಿ, ಅತಿವರ್ತಿನಿ, ಸಂಭಿನ್ನಮದ ಮರ್ಯಾದೆಯೆಂಬ ಸಪ್ತಾವಸ್ಥೆಯ ಮದದಿಂ" ಎಂದು ಕ್ರಮಾನುಸಾರವಾಗಿ ಪರಿಷ್ಕರಿಸಿದ್ದಾರೆ. ಇದಕ್ಕವರಿಗೆ ಪಾಲಕಾಪ್ಯನ ಹಸ್ತ್ಯಾಯುರ್ವೇದ ಮುಂತಾದ ಗ್ರಂಥಗಳು ಸಹಾಯಕವಾಗಿವೆ. ಮತ್ತೊಂದು ಉದಾಹರಣೆಯನ್ನು ನೋಡಬಹುದು. ಇಮ್ಮಡಿ ಮಂಗರಾಜನ ಅಭಿನವಾಭಿಧಾನಂ ನಿಘಂಟಿನಲ್ಲಿ (ಸಂ.ಎಂ.ಮರಿಯಪ್ಪ ಭಟ್ಟ, ಮದ್ರಾಸ್ ವಿಶ್ವವಿದ್ಯಾಲಯ-೧೯೫೨) "ವಶಾ ಕರಿಣಿ ರೇಣು ಕರೇಣು ಪಿಡಿಯೆನಲು ಪೆಣ್ಣಾನೆ" (ಮೃಗವರ್ಗ-೧, ಪುಟ-೫೬) ಎಂದಿದೆ. ರೇಣು ಎಂದರೆ ಏನು? ಇಲ್ಲಿ ಪಾಠ ಕೆಟ್ಟಿದೆ. ಶಾಸ್ತ್ರಿಗಳು ಇದನ್ನು "ವಶಾ ಕರಿಣಿ ಧೇನು ಕರೇಣು ಪಿಡಿಯೆನಲು ಪೆಣ್ಣಾನೆ" ಎಂದು ಪರಿಷ್ಕರಿಸಿದ್ದಾರೆ. ಈ ಸಾಲಿನಲ್ಲಿ ಬರುವ ಎಲ್ಲವೂ ಹೆಣ್ಣಾನೆಗಳ ಹೆಸರುಗಳಾಗಿವೆ. ಧೇನು ಎಂಬುದು ಕೆಟ್ಟು ರೇಣು ಎಂದಾಗಿದೆ. ಧೇನು ಎಂಬುದೇ ಸರಿಯಾದ ಪಾಠ. ಧೇನು ಎಂದರೆ ಹೆಣ್ಣಾನೆ. ಈ ಪರಿಷ್ಕರಣಕ್ಕೆ ಮಂಗರಾಜನಿಗೆ ಮೂಲ ಆಕರವಾದ ಹಲಾಯುಧ ನಿಘಂಟಿನಲ್ಲಿಯೂ ಆಧಾರವಿದೆ.

ಚೂಡಾಶಿಖೇ ಶಿರಸ್ಯಪಿ ಹಸ್ತಿನ್ಯಾಂ ಧೇನುಕಾ ಗಣಿಕೇ

(-ಅಭಿಧಾನ ರತ್ನಮಾಲಾ, ಸಾಮಾನ್ಯಕಾಂಡ -೧೩ ಮದ್ರಾಸ್ ವಿ.ವಿ. ೧೯೪೦)

ಇವುಗಳೇ ಅಲ್ಲದೆ ಪಂಪ, ಪೊನ್ನ, ರನ್ನ, ನಾಗಚಂದ್ರ ಇನ್ನೂ ಮುಂತಾದ ಕವಿಗಳ ಗ್ರಂಥಗಳಲ್ಲಿನ ಕ್ಲೇಶಗಳನ್ನೂ ನಿವಾರಿಸಿದ್ದಾರೆ. ಇದರಿಂದ ಈ ಕೃತಿ ನಿಘಂಟುಕ್ಷೇತ್ರಕ್ಕೆ ಮಾತ್ರವಲ್ಲದೆ ಗ್ರಂಥಸಂಪಾದನಕ್ಷೇತ್ರಕ್ಕೂ ಒಂದು ಆಕರಗ್ರಂಥವಾಗಿ ಪರಿಣಮಿಸಿದೆ. ಇಷ್ಟೇ ಅಲ್ಲದೆ ಇನ್ನೂ ಅನೇಕ ಕಾವ್ಯಗಳಲ್ಲಿ ಬಹಳ ಕ್ಲೇಶಗಳಿವೆ. ಅವುಗಳಲ್ಲಿನ ಕ್ಲೇಶಗಳನ್ನು ಈ ಕೋಶದ ಸಹಾಯದಿಂದ ಪರಿಷ್ಕರಿಸಬಹುದಾಗಿದೆ. ಉದಾ.

ಏನ ಹೇಳುವೆ ಗಜಘಟಾಪ್ರತಿ
ಮಾನದಲಿ ಕೋದಂಬುಗಳು ಹಿಂ
ಡಾನೆಗಳನೇಳೆಂಟನೊದೆದೋಡಿದವು 'ಪಂಚಕವ'.

-ಕುಮಾರವ್ಯಾಸ ಭಾರತ -ಶಲ್ಯಪರ್ವ -೩-೧೫

ಇದು ಮೈಸೂರು ಓರಿಯಂಟಲ್ ಲೈಬ್ರರಿ (ಸಂ.ಎನ್.ಅನಂತರಂಗಾಚಾರ್, ೧೯೭೦ ತೃ.ಮು.) ಮತ್ತು ಕುವೆಂಪು-ಮಾಸ್ತಿ ವೆಂಕಟೇಶ ಅಯ್ಯಂಗಾರ್ (ಮೈಸೂರು ವಿ.ವಿ. ತೃ.ಮು. -೧೯೮೮) ಅವರ ಪರಿಷ್ಕರಣಗಳ ಪಾಠ. ಇಲ್ಲಿ ತೃತೀಯ ಪಾದದಲ್ಲಿ 'ಪಂಚಕವ' ಎಂದಿದೆ. ಪಂಚಕ ಎಂದರೆ ಏನು? ಓರಿಯಂಟಲ್ ಲೈಬ್ರರಿ ಆವೃತ್ತಿಯಲ್ಲಿ 'ಪೆಂಚಕವ' ಎಂದು ಪಾಠಾಂತರವಿದೆ. ಇದೂ ಕೂಡ ಅರ್ಥವಾಗುವುದಿಲ್ಲ. ಅಲ್ಲಿನ ಪಾಠ 'ಪೇಚಕವ' ಎಂದು ಇರಬೇಕು. 'ಪೇಚಕ' ಎಂದರೆ ಆನೆಯ ಬಾಲದ ಬುಡ

ಅಥವಾ ಬುಡದ ಸಮೀಪಸ್ಥಾನ. ಪೇಚಕ ಎಂಬುದು ಕೆಟ್ಟು ಪಂಚಕ ಎಂದಾಗಿದೆ. ಇದು ಲಿಪಿಕಾರಸ್ಖಾಲಿತ್ಯದ ಫಲ, ಅಕ್ಷರ ಸ್ಖಾಲಿತ್ಯವೂ ಹೌದು. ತೆರಕಣಾಂಬಿ ಬೊಮ್ಮರಸನ 'ಜೀವಂಧರ ಚರಿತೆ'ಯಲ್ಲಿ "ಗುಣೆಯ ಲಾವಣ್ಯದ ಕಣೆಯ ಕಾಮುಕ ಗಜ ಶೃಣಿಯ ರತ್ನಾಭರಣಗಳ" (ಸಂ. ಜಿ.ಜಿ.ಮಂಜುನಾಥನ್ ಮೈಸೂರು ವಿ.ವಿ. ೧೯೭೬, ಪು. ೭೬, ೧೦ನೆಯ ಸಂಧಿ, ೩೨ನೆಯ ಪದ್ಯ) ಎಂದಿದೆ. ಇಲ್ಲಿನ ಶೃಣಿ ಎಂಬುದಕ್ಕೆ ಅಲ್ಲಿನ ಅರ್ಥಕೋಶದಲ್ಲಿ ಅಂಕುಶ ಎಂದು ಅರ್ಥವನ್ನು ಹೇಳಲಾಗಿದೆ. ಇಲ್ಲಿನ ಶೃಣಿ ಎಂಬುದು ಸೃಣಿ ಎಂಬುದಕ್ಕೆ ಲಿಪಿಕಾರನ ಅಪಪಾಠವಾಗಿದೆ. ಸೃಣಿ ಎಂದರೆ ಅಂಕುಶ.

ಈ ಕೋಶದಲ್ಲಿ ಸೇರಬಹುದಾಗಿದ್ದ ಇನ್ನೂ ಕೆಲವು ಪದಗಳಿವೆ. ಉದಾ.

೧. ಪೊರಜೆ>ಹೊರಜೆ = ಆನೆಯ ಕೊರಳ ಹಗ್ಗ = ಹೊನ್ನ ಹೊರಜೆ ಹೊಕ್ಕುಳ ಘಂಟೆ (ದೇವಪ್ಪ ಕವಿಯ ರಾಮವಿಜಯಕಾವ್ಯ ೪-೧೧೬, (ಸಂ) ಟಿ.ಕೇಶವಭಟ್ಟ, ಭಾರತೀಯ ಜ್ಞಾನಪೀಠ ಪ್ರಕಾಶನ -೧೯೬೯).

೨. ತುಂಬಿಲ್ =ಆನೆಯ ಸೊಂಡಿಲು =ತುಂಬಿಲೊಳಿಂಬುಗೊಂಡ ತುಂಬುನೀರಂ ಪೂತ್ಕರಿಸಿದಪುವೆಂಬಂತಿರೆ (ಮುದ್ದಣನ ರಾಮಾಶ್ವಮೇಧ. ಪ್ರಥಮಾಶ್ವಾಸಂ, ಪುಟ ೧೦೪, ಮುದ್ದಣ ಭಂಡಾರ ಸಂಪುಟ -೨, (ಸಂ) ಜಿ.ವೆಂಕಟಸುಬ್ಬಯ್ಯ, ಕನ್ನಡ ಸಂಸ್ಕೃತಿ ನಿರ್ದೇಶನಾಲಯ -೧೯೮೭). ತುಂಬಿಕೆಯೊಳಿಂಬುಗೊಂಡ ಎಂದು ತೆಕ್ಕುಂಜ ಗೋಪಾಲಕೃಷ್ಣಭಟ್ಟರ ವ್ಯಾಖ್ಯಾನಸಮೇತವಾದ ರಾಮಾಶ್ವಮೇಧದ ಆವೃತ್ತಿಯಲ್ಲುಂಟು. ಭಟ್ಟರು ತುಂಬಿಕೆ = ತುಂಬಿಸಿಕೊಳ್ಳುವ ಸಾಧನ, ಸೊಂಡಿಲು ಎಂದು ಅರ್ಥೈಸಿದ್ದಾರೆ.(ನೋಡಿ: ಶ್ರೀರಾಮಾಶ್ವಮೇಧಂ -ತೆಕ್ಕುಂಜ ಗೋಪಾಲಕೃಷ್ಣಭಟ್ಟ, ೧೯೭೨ ಪುಟ ೧೧-೧೨)

೩. ಪುಷ್ಕರಿ = ಆನೆ: ಪುಷ್ಕರಿಗಳು ಭರದಿ ತಮ್ಮ ಪುಷ್ಕರವನು ತಿರುಪತದರ (ಮುದ್ದಣನ ಕುಮಾರವಿಜಯ-೬೦, ಪುಟ ೧೦೬, ಮುದ್ದಣ ಭಂಡಾರ, ಸಂಪುಟ-೧). ಇಲ್ಲಿನ ಅರ್ಥಕೋಶದಲ್ಲಿ ಮದದಾನೆ ಎಂದು ಅರ್ಥ ಹೇಳಿದೆ. ಪುಷ್ಕರ =ಸೊಂಡಿಲು, ಪುಷ್ಕರಿ =ಸೊಂಡಿಲುಳ್ಳದ್ದು, ಆನೆ.

೪. ಮತ್ತವಾರಣ =ಮದಿಸಿದ ಆನೆ =ಇತ್ತಲಸುರೇಶ್ವರನು ರಥ ಹಯ ಮತ್ತವಾರಣ (ಮುದ್ದಣನ ಕುಮಾರ ವಿಜಯ-೨೦೩, ಪುಟ ೧೬೦, ಮುದ್ದಣ ಭಂಡಾರ, ಸಂಪುಟ-೧)

೫. ವೈಣುಕ =ಆನೆಯನ್ನು ಹೊಡೆಯುವ ಕೋಲು (ಆನೆಯನ್ನು ಶಿಕ್ಷಿಸುವ ತಿವಿಗೋಲು): ತೋತ್ರಂ ವೈಣುಕಮಾಲಾನಂ ಬಂಧಸ್ತಂಭೇಥ ಶೃಂಖಲೇ(ಅಮರಕೋಶ, ಕ್ಷತ್ರಿಯ ವರ್ಗ-೫೦೬, ಮೈಸೂರು ವಿ.ವಿ. ಪ್ರಕಟಣೆ, ೧೯೮೯, ಪುಟ ೧೧೮). ಮುಮ್ಮಡಿ ಕೃಷ್ಣರಾಜ ಪ್ರಭುಗಳ (ಕ್ರಿ.ಶ.ಸು. ೧೮೫೦) ಶ್ರೀ ಚಾಮುಂಡಿಕಾ ಲಘುನಿಘಂಟಿನಲ್ಲಿ ಗಜಶಾಸ್ತ್ರದ ಹಲವು ಶಬ್ದಗಳಿಗೆ ಅರ್ಥಗಳನ್ನು ಹೇಳಲಾಗಿದೆ. ಈ ಉಲ್ಲೇಖಗಳು

(ಅರ್ಥಗಳು) ಅತ್ಯಂತ ವಿಚಾರಣೀಯವೂ, ಕುತೂಹಲಕಾರಿಯೂ ಆಗಿದೆ. ಕೆಲವು ಅರ್ಥಗಳು ಆ ಕಾಲದಲ್ಲಿನ ಪ್ರಚಲಿತ ಅರ್ಥಗಳೆಂದು ತೋರುತ್ತದೆ. ಇವುಗಳನ್ನು ಮೂಲಶ್ಲೋಕ ಮತ್ತು ಟೀಕೆಯೊಡನೆ ಕೆಳಗೆ ನೀಡಲಾಗಿದೆ. ಇಲ್ಲಿ ಉಪಯೋಗಿಸಿಕೊಂಡಿರುವ ಪ್ರತಿ ೧೮೮೪ರಲ್ಲಿ ಮೈಸೂರು ಅರಮನೆ ಧರ್ಮಾಧಿಕಾರಿ ಚಕ್ರವರ್ತ್ಯಯ್ಯಂಗಾರ್ಯರಿಂದ ಮೈಸೂರು ವಿದ್ಯಾತರಂಗಿಣೀ ಮುದ್ರಾಕ್ಷರ ಶಾಲೆಯಲ್ಲಿ ಮುದ್ರಿತವಾದ ಪ್ರತಿ. ಈ ಕೆಳಗೆ ನೀಡಲಾದ ಶ್ಲೋಕಗಳೂ ಟೀಕೆಯೂ ದ್ವಿತೀಯ ಪ್ರಕರಣದಲ್ಲಿವೆ. ೧೯೫೬ರಲ್ಲಿ ಎಂ.ಎಸ್.ಸುಬ್ರಹ್ಮಣ್ಯಶಾಸ್ತ್ರಿಗಳಿಂದ ಸಂಪಾದಿತವಾಗಿ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಕಟವಾಗಿರುವ ಪರಿಷ್ಕರಣದಲ್ಲಿ ಈ ಶ್ಲೋಕಗಳೂ ಟೀಕೆಯೂ ಕಂಡುಬರುವುದಿಲ್ಲ. ೧೮೮೪ರ ಮುದ್ರಣದಲ್ಲಿ ಅಚ್ಚಿನ ತಪ್ಪುಗಳೂ, ಇತರ ದೋಷಗಳು ಹೇರಳವಾಗಿ ಇರುವಂತಿದೆ. ಹೆಚ್ಚಿನ ಹಸ್ತಪ್ರತಿಗಳ ಸಹಾಯ ಪಡೆದು ಈ ನಿಘಂಟನ್ನು ಪರಿಷ್ಕರಿಸಬೇಕಾದ ಅಗತ್ಯವಿದೆ(೧೮೮೪ರ ಮುದ್ರಿತ ಪ್ರತಿಯ ಬಗೆಗೆ ನೋಡಿ: ಶ್ರೀ ಚಾಮುಂಡಿಕಾ ಲಘು ನಿಘಂಟು: ಒಂದು ಪರಿಶೀಲನೆ -ಪ್ರೊ.ಜಿ.ಅಶ್ವತ್ಥನಾರಾಯಣ, ರಂಗಾಭಿನಂದನ -೧೯೯೪, ಈ ಬರಹದಲ್ಲಿ ೧೮೮೪ರ ಪರಿಷ್ಕರಣವನ್ನು ಕಲ್ಲಚ್ಚಿನ ಮುದ್ರಣವೆಂದು ಬಗೆದಿದೆ. ಆದರೆ ಇದು ಕಲ್ಲಚ್ಚಿನ ಮುದ್ರಣ ಅಲ್ಲ). ಈ ಶ್ಲೋಕ ಟೀಕೆಗಳನ್ನು ಮುದ್ರಿತ ಪ್ರತಿಯಲ್ಲಿರುವಂತೆಯೇ ನೀಡಲಾಗಿದೆ. ತಿದ್ದಲು ಹೋಗಿಲ್ಲ.

ಶ್ಲೋಃ ......ಯೂಥಪಃ ॥ ಕಲಭೋ ವಿಕ್ಕಃ ಪ್ರೋತಕುಬ್ಜೇಭಕುಂಜರಾಃ ॥ ೨-೩೮

ಟೀ ॥ ಯೂಥಪಃ = ಸಲಗ ಆನೆ, ಕಲಭಃ = ೩೦ ವರ್ಷದ ಆನೆ, ವಿಕ್ಕಃ =೨೦ ವರ್ಷದ ಆನೆ, ಪೋತಃ = ೧೦ ವರ್ಷದ ಆನೆ, ಕುಬ್ಜೇಭಃ = ಗುಂಗೂನಾನೆ, ಕುಂಜರಃ = ೬೦ ವರ್ಷದ ಆನೆ.

ಶ್ಲೋ ॥ ಉದ್ವಾಂತಬಾಲೌ ವವಾಹ್ಯಾಶ್ಚತುರ್ದಂತೋಮದೋತ್ಕಟಃ ।
ಊರ್ಧ್ವಾಗ್ರದಂತಸ್ಸಂಕೀರ್ಣೋದ್ವೀವದುತಾವಳೋಮೃಗಃ ॥ ೨ -೩೯

ಟೀ ॥ ಉದ್ವಾಂತಃ = ಮದ ಇಳಿದ ಆನೆ, ಬಾಲಃ = ೫ ವರ್ಷದ ಆನೆ, ಔಪವಾಹ್ಯಃ =ಪಟ್ಟದ ಆನೆ, ಚತುರ್ದಂತಃ = ೪ ಕೊಂಬಿನ ಆನೆ, ಮದೋತ್ಕಟಃ = ಮದ್ದಾನೆ, ಊರ್ಧ್ವಾಗ್ರದಂತಃ = ಪಲಕದಂತ ಆನೆ, ಸಂಕೀರ್ಣಃ = ಮಿಶ್ರಜಾತೀ ಆನೆ, =ದ್ವೀಪದಂತಾವಳಃ = ದ್ವೀಪಾಂತ್ರ ಆನೆ, ಮೃಗಃ = ಸಹ್ಯ ಪರ್ವತ ಕರ್ನಾಟದೇಶದ ಆನೆ.

ಶ್ಲೋ ॥ ನಿರ್ದಂತಃ ಕರಿಣೀ ಶ್ವೇತಪೀಲು ಗಂಭೀರವೇದಿನಾ ಏ।
ಕದಂತೋ ಭದ್ರಮಂದ್ರೌಭೇದಾವಾಜೀ ಭಯೋರ್ಕೃತಾಃ ॥೪೦॥

ಟೀ ॥ ನಿರ್ದಂತಃ = ಮಕಣಾ ಆನೆ, ಕರಿಣೀ = ಹೆಣ್ಣಾನೆ, ಶ್ವೇತಪೀಲುಃ = ಬಿಳೀ ಆನೆ, ಗಂಭೀರವೇದಿ = ಯುದ್ಧದಲ್ಲಿ ಹಿಮ್ಮೆಟ್ಟಿದ ಆನೆ, ಏಕದಂತಃ = ಒಂಟಿಕೊಂಬಿನ ಆನೆ, ಭದ್ರಃ = ಹಿಮವತ್ಪರ್ವತದ ಆನೆ, ಮಂದ್ರಃ = ವಿಂಧ್ಯಪರ್ವತದ ಆನೆ.

ಈ ಮೇಲಿನ ಅರ್ಥಗಳನ್ನು ಪುನರ್ವಿಮರ್ಶಿಸಬೇಕಾದ ಅಗತ್ಯ ಇದ್ದು (ಜೊತೆಗೆ ಈ ನಿಘಂಟು ಪುನಸ್ಸಂಪಾದಿತವಾಗಬೇಕಾದ ಅಗತ್ಯವೂ ಹೆಚ್ಚಿನದಾಗಿ ಇದೆ.) ಆ ಅರ್ಥಗಳಿಗೆ ಆಧಾರಗಳನ್ನು ಕೂಡ ಸೂಚಿಸಬೇಕಾಗಿದೆ.

ಶಾಸ್ತ್ರಿಗಳು ಕನ್ನಡ ಕಾವ್ಯಗಳಲ್ಲಿ ಮಾತ್ರ ಕಂಡುಬರುವಂತಹ ಗಜಸಂಬಂಧಿ ಶಬ್ದಗಳನ್ನೂ ಗಜಶಾಸ್ತ್ರ ಶಬ್ದಕೋಶದಲ್ಲಿ ಸೇರ್ಪಡೆಗೊಳಿಸಿದ್ದಾರೆ. ಉದಾ.

ಆನೆಗದುಪು = ಆನೆಗಳ ಹಿಂಡು.

ಆನೆಗಂಪಲ್ = ಆನೆ ಹೂತು ಹೋಗುವ ಕೆಸರುದಾಣ.

ಶಾಸ್ತ್ರಿಗಳು ಈ ಕೋಶದ ಆರಂಭದಲ್ಲಿ ತಾವು ಕೋಶಸಿದ್ಧತೆಗೆ ಬಳಸಿರುವ ಆಕರಗಳನ್ನು ಸಂಕೇತಸೂಚಿಯೊಡನೆ ನೀಡಿದ್ದಾರೆ. ಅನುಬಂಧದಲ್ಲಿ ಪಾಲಕಾಪ್ಯನ ಹಸ್ತ್ಯಾಯುರ್ವೇದದಲ್ಲಿನ ಹಸ್ತಿಪ್ರದೇಶಜ್ಞಾನವೆಂಬ ಇಪ್ಪತ್ತೊಂಬತ್ತನೆಯ ಅಧ್ಯಾಯದ ಕನ್ನಡಾನುವಾದವಿದೆ, ಮೂಲದೊಡನೆ. ಈ ಭಾಗದ ಅನುವಾದಕರು ಮೈಸೂರು ಪ್ರಾಚ್ಯ ವಿದ್ಯಾ ಸಂಶೋಧನಾಲಯದ ಸಹಾಯಕ ಸಂಶೋಧಕರಾದ ವಿದ್ವಾನ್ ಟಿ.ವಿ. ಸತ್ಯನಾರಾಯಣ ಅವರು. ಈ ಭಾಗದಿಂದಾಗಿ ಮೂಲಗ್ರಂಥದ ಸ್ವರೂಪ ಅಲ್ಲಿನ ವಿಚಾರಧಾರೆ ಇವುಗಳನ್ನು ನಾವು ಅರಿಯಬಹುದಾಗಿದೆ. ಈ ಕೃತಿಯಲ್ಲಿ ಅಚ್ಚಿನ ತಪ್ಪುಗಳು ೪-೫ ಮಾತ್ರ ಇವೆ ಎಂದರೆ ಅದಕ್ಕೆ ಕಾರಣ ಕರಡಚ್ಚು ನೋಡುವಲ್ಲಿ ತೋರಿರುವ ಶ್ರದ್ಧೆ. ಒಟ್ಟಿನಲ್ಲಿ ಈ ಗ್ರಂಥ ಕನ್ನಡ ನಿಘಂಟು ಮತ್ತು ಸಂಶೋಧನಾಕ್ಷೇತ್ರಕ್ಕೆ ಅತ್ಯಂತ ಬೆಲೆಯುಳ್ಳ ಕೊಡುಗೆ.

ನಮ್ಮಲ್ಲಿ ಗ್ರಂಥಸಂಪಾದಕರೂ ಸಂಶೋಧಕ ವಿದ್ವಾಂಸರೂ ಇಂತಹ ಗ್ರಂಥಗಳನ್ನು ನೋಡುವುದೇ ಇಲ್ಲ. ಈ ಕಾರಣದಿಂದ ಆಯಾ ಕೃತಿಗಳಲ್ಲಿ ಕ್ಲೇಶಗಳು ಹಾಗೆಯೇ ಉಳಿದುಬಿಡುತ್ತವೆ. ಕನ್ನಡ ಶಾಸ್ತ್ರಸಾಹಿತ್ಯದ ಕೃತಿಗಳಲ್ಲಿ ಈ ಗ್ರಂಥದ ಸ್ಥಾನ ಮೇಲಾದುದು.

ಕನ್ನಡ ಸಾಹಿತ್ಯಸಂಶೋಧನೆಯ ತ್ರಿವಿಕ್ರಮ

ಹೊರೆಯಾಲ ದೊರೆಸ್ವಾಮಿ

ಕನ್ನಡ ಸಾಹಿತ್ಯಚರಿತ್ರೆಯ ಆಳ ಹರಹುಗಳನ್ನು ವಿಶ್ಲೇಷಿಸಿದಾಗ ಎರಡು ಪ್ರಮುಖ ಪ್ರಭೇದಗಳು ಸ್ಪಷ್ಟವಾಗಿ ಕಾಣುತ್ತವೆ. ಒಂದು ಸೃಜನಶೀಲ ಸಾಹಿತ್ಯ, ಮತ್ತೊಂದು ಶಾಸ್ತ್ರ ಸಾಹಿತ್ಯ ಅಥವಾ ಸಂಶೋಧನ ಸಾಹಿತ್ಯ. ಈ ಪೈಕಿ ಮೊದಲನೆಯದಾದ ಸೃಜನ ಶೀಲ ಸಾಹಿತ್ಯ ತನ್ನೊಳಗೆ ಹುದುಗಿರುವ ಸೃಜನಾತ್ಮಕ ಕಾರಣಗಳಿಂದಾಗಿ ಹೆಚ್ಚೆಚ್ಚು ಜನರನ್ನು ಆಕರ್ಷಿಸಿದರೆ, ಎರಡನೆಯದಾದ ಶಾಸ್ತ್ರಸಾಹಿತ್ಯ ಹೆಚ್ಚೆಚ್ಚು ಪರಿಶ್ರಮ, ತಾಳ್ಮೆ ಮುಂತಾದವುಗಳನ್ನು ವಿಶೇಷವಾಗಿ ಅಪೇಕ್ಷಿಸುವ ಕಾರಣದಿಂದಲೇ ಇರಬೇಕು, ಆ ಪ್ರಮಾಣದಲ್ಲಿ ಜನರನ್ನು ಸಹೃದಯರನ್ನು ಆಕರ್ಷಿಸುವುದಕ್ಕೆ ಆಗದೆ ಇರುವುದು. ಅದರಲ್ಲೂ ಸೃಜನಾತ್ಮಕಸಾಹಿತ್ಯಕ್ಕೆ ನಾನಾ ಪ್ರಚಾರಮಾಧ್ಯಮಗಳು ಇರುವ ಈ ಹೊತ್ತಿನಲ್ಲಿ ಆ ಕರೆಗೆ ಮಾರುಹೋಗದೆ, ಶಾಸ್ತ್ರಸಾಹಿತ್ಯ ಅಥವಾ ಸಂಶೋಧನ ಸಾಹಿತ್ಯದತ್ತ ಗಮನಹರಿಸಿರುವವರು ಕೇವಲ ಬೆರಳೆಣಿಕೆಯ ಮಂದಿ ಎಂಬುದೂ ಸಾಮಾನ್ಯವಾಗಿ ಎಲ್ಲರಿಗೂ ಗೊತ್ತಿರುವ ಸಂಗತಿ. ಆದರೂ ನಿರಂತರವಾದ ಹುಮ್ಮಸ್ಸು, ತನ್ಮಯತೆ, ತಾದಾತ್ಮ್ಯ ಭಾವನೆಯಿಂದ ಈ ಕ್ಷೇತ್ರದಲ್ಲಿ ಇಂದಿಗೂ ದುಡಿಯುತ್ತಿರುವ ಕೆಲವು ಮಂದಿಯಾದರೂ ನಮ್ಮ ನಡುವೆ ಇರುವುದು ಸಮಾಧಾನಕರ.ಆ ಕೆಲವೇ ಕೆಲವು ಮಂದಿಗಳಲ್ಲಿ ಒಬ್ಬರು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನಸಂಸ್ಥೆಯ ಪ್ರಾಧ್ಯಾಪಕ, ೧೯೮೭ರ ಗ್ರಂಥಲೋಕದ 'ವರ್ಷದ ಲೇಖಕ' ಪ್ರಶಸ್ತಿ ಹಾಗೂ ೧೯೮೮ರ 'ಇಂಡಿಯಾ ಬುಕ್ ಹೌಸ್ ಪ್ರಶಸ್ತಿ'ಯನ್ನು ಪಡೆದ ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರೀ ಅವರು.

ವಿದ್ವನ್ಮಣಿ

ಇಂದು ಕನ್ನಡ ವಿದ್ವತ್‌ಪ್ರಪಂಚದಲ್ಲಿ ಅವಿರತವಾಗಿ ದುಡಿಯುತ್ತ ಸಾಗಿರುವ ಡಾ. ವೆಂಕಟಾಚಲ ಶಾಸ್ತ್ರೀ ಕನ್ನಡ ವಿದ್ವತ್‌ಪ್ರಪಂಚದ ಧೀಮಂತರಾದ ಆರ್. ನರಸಿಂಹಾಚಾರ್, ಡಿ.ಎಲ್.ನರಸಿಂಹಾಚಾರ್, ತೀ.ನಂ.ಶ್ರೀಕಂಠಯ್ಯ, ಎಂ.ಮರಿಯಪ್ಪ ಭಟ್ಟ, ಡಿ.ಕೆ. ಭೀಮಸೇನರಾವ್, ಆ.ನೇ.ಉಪಾಧ್ಯ, ಶಂ.ಬಾ.ಜೋಶಿ ಈ ಮುಂತಾದವರು ನಿರ್ಮಿಸಿದ ವಿದ್ವತ್‌ಪರಂಪರೆಯಲ್ಲಿ ಅನ್ವೇಷಕದೃಷ್ಟಿಯಿಂದ ಸಾಗುತ್ತಿದ್ದಾರೆ.

ಚಿಕ್ಕಂದಿನಿಂದಲೂ ಮನೆಯ ಸಾಂಸ್ಕೃತಿಕ ವಾತಾವರಣ ಬಾಲಕ ಡಾ.ಶಾಸ್ತ್ರಿಯವರ ಮೇಲೆ ಅಪಾರವಾದ ಪ್ರಭಾವ ಬೀರಿತು. ಅದರಲ್ಲೂ ತಂದೆಯವರ ಪ್ರಭಾವವೇ ಒಂದು ಕೈ ಮೇಲು ಅನ್ನಬಹುದು. ಹಿಂದೂಧರ್ಮದ ಪ್ರಾತಿನಿಧಿಕಕೃತಿಯಾದ ರಾಮಾಯಣವನ್ನಲ್ಲದೆ, ರಾಮಕೃಷ್ಣಾಶ್ರಮಕ್ಕೆ ಸಂಬಂಧಿಸಿದ ಕೃತಿಗಳನ್ನು ಮತ್ತು ಗಳಗನಾಥರ ಅನೇಕ ಐತಿಹಾಸಿಕ ಕಾದಂಬರಿಗಳನ್ನು ಓದುವ ಅವಕಾಶ ತಂದೆಯ ಮೂಲಕ ಬಾಲಕ ಡಾ.ಶಾಸ್ತ್ರಿಯವರಿಗೆ ಧಾರೆಯಾಗಿ ಬಂದುದೂ, ಕನ್ನಡದ ಬಗ್ಗೆ ಸಾಂಸ್ಕೃತಿಕ ಸಾಹಿತ್ಯಿಕಗಳ ಬಗ್ಗೆ ವಿಶೇಷ ಆಸಕ್ತಿತಳೆಯಲು ಸಾಧಕವಾಯಿತು.

ಡಾ.ಶಾಸ್ತ್ರಿಯವರು ವಿಶೇಷವಾಗಿ ಶಾಸ್ತ್ರಸಾಹಿತ್ಯ ಅಥವಾ ಸಂಶೋಧನ ಸಾಹಿತ್ಯದತ್ತ ಗಮನಹರಿಸುವುದಕ್ಕೆ ಅಂದಿನ ಅಧ್ಯಾಪಕವಾತಾವರಣವೂ ಬಹುಮಟ್ಟಿಗೆ ಕಾರಣ ವಾಗಿತ್ತು. ಅವರು ಹೇಳುತ್ತಾರೆ. 'ಆಗ ನಮ್ಮ ಮುಂದೆ ಇದ್ದುದು ಎರಡೇ ಮಾರ್ಗಗಳು. ಒಂದು ಪುಟ್ಟಪ್ಪನವರ (ಕುವೆಂಪು) ಹಾಗೆ ಸೃಜನಾತ್ಮಕ ದಾರಿಯಲ್ಲಿ ಸಾಗುವುದು, ಇನ್ನೊಂದು ಡಿ.ಎಲ್. ನರಸಿಂಹಾಚಾರ್ಯರ ಹಾಗೆ ಸಂಶೋಧನ ಕ್ಷೇತ್ರದಲ್ಲಿ ತೊಡಗು ವುದು.' ಆದರೆ ಡಾ.ಶಾಸ್ತ್ರಿಯವರಿಗೆ ಡಿ.ಎಲ್.ನರಸಿಂಹಾಚಾರ್ಯರ ಒಡನಾಟ ಹೆಚ್ಚಾದ ಕಾರಣ, ಸಂಶೋಧನ ಕ್ಷೇತ್ರವೇ ಅವರಿಗೆ ಹೆಚ್ಚು ಹತ್ತಿರವಾಯಿತು.

ಉನ್ನತ ಶಿಕ್ಷಣರಂಗದಲ್ಲಿ ದೀರ್ಘಕಾಲ ಸೇವೆ ಸಲ್ಲಿಸಿರುವ ಡಾ.ಶಾಸ್ತ್ರಿಯವರು ಗ್ರಂಥರಚನೆಗೆ ಗಮನ ಕೊಟ್ಟರು.

ಡಾ.ಶಾಸ್ತ್ರಿಯವರ ಪ್ರಮುಖ ಆಸಕ್ತಿ ನಾವು ಮೊದಲೇ ಗಮನಿಸಿದ ಹಾಗೆ, ಶಾಸ್ತ್ರ ಸಂಬಂಧವಾದ ಸಾಹಿತ್ಯದತ್ತಲೇ ಇರುವುದರಿಂದ ಅವರ ಬಹುಪಾಲು ಪ್ರಕಟಣೆಗಳು ಆ ಕುರಿತೇ ಆಗಿವೆ. ಮಹಾಕಾವ್ಯಲಕ್ಷಣ, ಕನ್ನಡಛಂದಸ್ಸು, ಶ್ರೀವತ್ಸನಿಘಂಟು, ಶಬ್ದಾರ್ಥ ವಿಹಾರ, ಸಾಹಿತ್ಯಮಂಥನ, ಕನ್ನಡ ಚಿತ್ರಕಾವ್ಯ, ನಮ್ಮ ಕರ್ನಾಟಕ ಇತ್ಯಾದಿ ಕನ್ನಡ ಶಾಸ್ತ್ರಪ್ರಕಾರವನ್ನು ಕುರಿತಾದ ಪ್ರಕಟಣೆಗಳಾದರೆ, ಪಂಪ, ಮೂರು ಸಮೀಕ್ಷೆಗಳು, ಹೊಸಗನ್ನಡ ಸಾಹಿತ್ಯದ ಕೆಲವು ನೋಟಗಳು ಇತ್ಯಾದಿ ಕೃತಿಗಳು ಸಾಹಿತ್ಯ ಸಮೀಕ್ಷೆ ಯನ್ನು ಕುರಿತಾಗಿವೆ. ಅಲ್ಲದೆ ಬದ್ಧ ಪ್ರಮಿತ್ಯೂಸ್, ಟ್ರಾಕಿಯ ಪೆಣ್ಗಳ್, ಹೊಸಗನ್ನಡ ಮಿತ್ರವಿಂದಾ ಗೋವಿಂದಾ ಇವು ಅನುವಾದಿತ ನಾಟಕಗಳಾಗಿದ್ದರೆ, ಕಂಸ ಒಂದು ಸ್ವತಂತ್ರ ನಾಟಕ. ಸಾಹಿತ್ಯ ಶಿಲ್ಪಿಗಳು ಎಂಬ ಜೀವನಚರಿತ್ರೆಯನ್ನು ಬರೆದಿರುವ ಅವರು ಜೈನ ಭಾರತ ಭಾಗವತಗಳು: ಒಂದು ಸಮೀಕ್ಷೆ, ಪ್ರಾಚೀನ ಕನ್ನಡ ಸಾಹಿತ್ಯ -ಕೆಲವು ನೋಟಗಳು ಮತ್ತು ಕನ್ನಡ ಅಧ್ಯಯನಸಂಸ್ಥೆ ಹೊರತರುತ್ತಿರುವ ಕನ್ನಡ ಸಾಹಿತ್ಯಚರಿತ್ರೆಯ ಸಂಪುಟಗಳನ್ನು ಸಂಪಾದಿಸುವಲ್ಲೂ ತಮ್ಮ ಸಾಮರ್ಥ್ಯವನ್ನು ಮೆರೆದಿದ್ದಾರೆ. ಅಲ್ಲದೆ ಸುಮಾರು ೩೦೦ಕ್ಕೂ ಹೆಚ್ಚು ಸಾಹಿತ್ಯಿಕ ಲೇಖನಗಳು ಅವರ ಲೇಖನಿಯ ಮೂಲಕ ಹೊರಬಂದಿದ್ದು, ಅವೆಲ್ಲ ಕನ್ನಡ, ಕರ್ನಾಟಕ ಸಂಸ್ಕೃತಿಯ ಅಭ್ಯಾಸಿಗಳಿಗೆ, ಇಡಿಯಾಗಿ ಕನ್ನಡನಾಡು ನುಡಿಯಲ್ಲಿ ಆಸಕ್ತಿ ಇರುವವರಿಗೆ ಅಮೂಲ್ಯವಾದ ಕೊಡುಗೆಗಳಾಗಿವೆ.

ಡಾ.ಶಾಸ್ತ್ರಿಯವರ ಸಂಶೋಧನಬರಹ ವಸ್ತುಸಂಗ್ರಹಬಾಹುಳ್ಯದಿಂದ ಕೂಡಿರು ತ್ತದೆ. ಹೇಳುವ ಮಾತುಗಳಲ್ಲಿ ನಿರ್ದಿಷ್ಟತೆಯಿದೆ.

ಯಾವುದೇ ವಿಷಯವಾಗಲಿ, ತಲಸ್ಪರ್ಶಿಯಾಗಿ ನೋಡುವ ಅವರ ವಸ್ತುತಾದಾತ್ಮ್ಯತೆ ಇಂದು ವೆಂಕಟಾಚಲ ಶಾಸ್ತ್ರಿಗಳನ್ನು ಕನ್ನಡದ ಒಬ್ಬ ದೊಡ್ಡ ಸಂಶೋಧಕರನ್ನಾಗಿ ಮಾಡಿದೆ. ನಿದರ್ಶನಕ್ಕೆ ಪಂಪಭಾರತದ ಏಳನೆಯ ಆಶ್ವಾಸದಲ್ಲಿ 'ಕಳ್ಗೆ ಚಕ್ಕಣಮೆನಿಪ್ಪುದು' ಎಂಬ ಒಂದು ಪಾಠವನ್ನು ಹಿಂದೆ ಪಂಪಭಾರತ ಸಂಪಾದಿಸಿದವರೆಲ್ಲ ಅರ್ಥವಾಗದೆ ಹಾಗೆಯೇ ಉಳಿಸಿದ್ದರು. ಉಸ್ಮಾನಿಯಾ ವಿಶ್ವವಿದ್ಯಾನಿಲಯದಲ್ಲಿದ್ದ ಡಾ.ಶಾಸ್ತ್ರಿಯವರಿಗೆ ಕಳ್ಳು=ಹೆಂಡ ಅರ್ಥವಾಗಿತ್ತಾದರೂ ಚಕ್ಕಣದ ಅರ್ಥ ಬಾಧಿಸತೊಡಗಿತು. ಒಮ್ಮೆ ಅವರು ಹೈದ್ರಾಬಾದಿನ ಒಬ್ಬ ಸೇಂದಿ ಕಂಟ್ರಾಕ್ಟರನ್ನು ಕಂಡು ಚಕ್ಕಣದ ಬಗ್ಗೆ ಕೇಳಿದಾಗ, ಅವನಿಗೆ ಆಶ್ಚರ್ಯವೋ ಆಶ್ಚರ್ಯ, ವಿಶ್ವವಿದ್ಯಾನಿಲಯದ ಅಧ್ಯಾಪಕರಿಗೆ ಚಕ್ಕಣದ ಬಗ್ಗೆ ಏಕಿಷ್ಟೊಂದು ಆಸಕ್ತಿ ಎಂದು. ಡಾ.ಶಾಸ್ತ್ರಿಯವರ ಒತ್ತಾಯಕ್ಕೆ ಮಣಿದು ಚಕ್ಕಣ ಎಂಬುದು ಕಳ್ಳನ್ನು ಕುಡಿಯುವಾಗ ನಂಜಿಕೊಳ್ಳಲು ಬಳಸುವ ಮಾಂಸದ ಒಂದು ಮಾದರಿ ಎಂದು ತಿಳಿಸಿ, ಅದನ್ನು ತಯಾರು ಮಾಡುವ ವಿಧಾನವನ್ನೆಲ್ಲ ತಿಳಿಸಿದ. ಮತ್ತೂ ಅದರ ಮೂಲವನ್ನು ಕೆದಕಿ ನೋಡಿದಾಗ, ಅದು ಪರ್ಷಿಯಾದಿಂದ ಕನ್ನಡಕ್ಕೆ ಭಾರತಕ್ಕೆ ಆಮದಾದುದೆಂದು ಸಂಶೋಧಿಸಿದ ಡಾ.ಶಾಸ್ತ್ರಿಯವರು ತಮ್ಮ ಸಂಶೋಧನೆಯಲ್ಲಿ ಜಯಶೀಲರಾಗಿ, ಪ್ರಶ್ನಾರ್ಥಚಿಹ್ನೆ ತೆಗೆದುಹಾಕಿದರು. ಪಂಪನಲ್ಲಿ ಬಂದಿರುವ ಚಕ್ಕಣವೇ ಕನ್ನಡದ ಚಾಕಣವೆಂಬುದನ್ನು ಕಂಡುಹಿಡಿದರು. ಇದು ಅವರ ಸಂಶೋಧನತ್ಮಕ ಮನಸ್ಸಿನ ಮಜಲನ್ನು ತೋರಿಸುವ ಒಂದು ಘಟನೆಯಷ್ಟೇ.

ಸಂಶೋಧನೆಯಲ್ಲಿ ಆಸಕ್ತಿ

ಇಂದಿಗೂ ತಮ್ಮ ಸಂಶೋಧನಕಾರ್ಯದಲ್ಲಿ ಅದೇ ಆಸಕ್ತಿಯಿಂದ ಮುಂದುವರಿದುಕೊಂಡು ಹೋಗುತ್ತಿರುವ ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿಯವರಿಗೆ ಈವರೆಗೆ ಹಲವಾರು ಪ್ರಶಸ್ತಿಗಳು ಬಂದಿವೆ. ಕನ್ನಡ ಸಾಹಿತ್ಯ ಅಕಾಡಮಿ ಪ್ರಶಸ್ತಿ, ಧಾರವಾಡದ ವಿದ್ಯಾವರ್ಧಕ ಸಂಘದ ಪ್ರಶಸ್ತಿ, ರಾಜ್ಯಸರ್ಕಾರದ ದೇವರಾಜ ಬಹದ್ದೂರ್ ಸ್ಮಾರಕ ಪ್ರಶಸ್ತಿ, ಗ್ರಂಥಲೋಕದ ಪ್ರಶಸ್ತಿ, ಇಂಡಿಯಾ ಬುಕ್ ಹೌಸ್ ಪ್ರಶಸ್ತಿ ಇತ್ಯಾದಿ.

ಕನ್ನಡ ಚಿತ್ರಕಾವ್ಯ ಸಾಗಿಬಂದ ದಾರಿಯನ್ನು ಗುರುತಿಸುವ ಪುಸ್ತಕ ಡಾ.ಶಾಸ್ತ್ರಿಯವರ ಪರಿಶ್ರಮಕ್ಕೊಂದು ನಿದರ್ಶನ. ಸಂಸ್ಕೃತ ಚಿತ್ರಕಾವ್ಯ ಹೇಗೆ ಬೆಳೆದು ಸಮೃದ್ಧವಾಗಿದೆಯೋ ಹಾಗೆಯೇ ಕನ್ನಡ ಚಿತ್ರಕಾವ್ಯವನ್ನು ಗುರುತಿಸಲು ಅವರು ನಡೆಸಿರುವ ಪ್ರಯತ್ನ ಸ್ತುತ್ಯರ್ಹವಾಗಿದೆ. ಈ ಕುರಿತು ಕನ್ನಡದ ಹಲವಾರು ವಿದ್ವಾಂಸರು ಉತ್ತೇಜಿತ ಮಾತುಗಳನ್ನಾಡಿದ್ದಾರೆ. ಬಂದಿರುವ ಈ ಪ್ರಶಸ್ತಿಗಳಿಂದ ಶಾಸ್ತ್ರಿಯವರೇನು ಬೀಗುತ್ತಿಲ್ಲ. ಹಾಗೆ ನೋಡಿದರೆ, ಈ ಪ್ರಶಸ್ತಿ ನೀಡಿದವರು ಒಬ್ಬ ಸಮರ್ಥ ವಿದ್ವಾಂಸನನ್ನು ಗುರುತಿಸಿ ತಮ್ಮ ಸಾಹಿತ್ಯಗುಣವಾಂಛಲ್ಯವನ್ನು ಪ್ರಕಟಪಡಿಸಿದ್ದಾರೆ ಅನ್ನಬಹುದು.

ಮೈಸೂರಿನ ಜಯಲಕ್ಷ್ಮೀಪುರಂ ಬಡಾವಣೆಯ ಅಷ್ಟಾಗಿ ಸದ್ದು ಗದ್ದಲವಿಲ್ಲದ ವಾತಾವರಣದಲ್ಲಿ ಮತ್ತು ಕನ್ನಡ ಅಧ್ಯಯನಸಂಸ್ಥೆಯ ಪರಂಪರಾಗತ ವಾತಾವರಣ ದಲ್ಲಿ ಕನ್ನಡ ಸಂಸ್ಕೃತಿಯನ್ನು ಹೆಕ್ಕಿ ತೆಗೆಯುವ, ಹೊಕ್ಕು ಅಗೆಯುವ ದೊಡ್ಡ ಕೆಲಸದಲ್ಲಿ ಡಾ.ವೆಂಕಟಾಚಲ ಶಾಸ್ತ್ರೀ ಅವರು ತನ್ಮಯರಾಗಿದ್ದಾರೆ. ಅವರ ಕೆಲಸಗಳಿಗೆ ಪೂರಕವಾಗಿ ಕನ್ನಡ ಅಧ್ಯಯನಸಂಸ್ಥೆಯ ನಿರ್ದೇಶಕರಾದ ಪ್ರಾಧ್ಯಾಪಕ ಜೀ.ಶಂ.ಪರಮಶಿವಯ್ಯ, ಪ್ರಾಧ್ಯಾಪಕ ಹಾ.ಮಾ.ನಾಯಕ, ಪ್ರಾಧ್ಯಾಪಕ ಸಿ.ಪಿ.ಕೃಷ್ಣಕುಮಾರ್(ಸಿ.ಪಿ.ಕೆ.), ಪ್ರಾಧ್ಯಾಪಕ ಜಿ.ಎಚ್.ನಾಯಕ ಅವರಂಥವರೂ ಇದ್ದಾರೆ. ಮನೆಯಲ್ಲಿ ಹೆಂಡತಿ ಶ್ರೀಮತಿ ಲಕ್ಷ್ಮಿ ಅವರ ಬರೆಹದ ಕೆಲಸಗಳಿಗೆ ಬೆಂಬಲವಾಗಿದ್ದಾರೆ. ಡಾ.ಶಾಸ್ತ್ರೀ ದಂಪತಿಗಳಿಗೆ ಮೂವರು ಹೆಣ್ಣುಮಕ್ಕಳು, ಒಬ್ಬ ಗಂಡು ಮಗ ಇದ್ದಾರೆ. ಅವರದು ತುಂಬು ಬದುಕು. ಸಾಂಸ್ಕೃತಿಕ ಸಂಪನ್ನತೆಯಿಂದ ಕೂಡಿರುವ ಡಾ.ಶಾಸ್ತ್ರಿಯವರ ಬದುಕು ಬರಹದಿಂದ ಕನ್ನಡಿಗರಾದ ನಾವೆಷ್ಟು ತುಂಬಿಕೊಳ್ಳುತ್ತೇವೆಯೊ ಅಷ್ಟಷ್ಟು ನಮ್ಮ ಸಾಂಸ್ಕೃತಿಕ ಸಂಪತ್ತು ಹೆಚ್ಚುತ್ತಾ ಹೋಗುತ್ತದೆ.*

---

* ಪ್ರಜಾಮತ, ಜುಲೈ ೯, ೧೯೮೯; ತರಂಗ, ಜುಲೈ ೧೦, ೧೯೮೮

ವಿದ್ವಾಂಸಲೋಕದ ದಿಗ್ಗಜ

ಚಂದ್ರಯ್ಯ ನಾಯ್ಡು

ಎಣ್ಣೆಗಪ್ಪಿನ ಬಣ್ಣ, ವಿದ್ವತ್ತಿನ ಭಾರದಿಂದ ಸ್ವಲ್ಪ ಬಾಗಿದ ಬೆನ್ನು, ಉಲ್ಲಾಸಭರಿತ ಮಂದಹಾಸ, ಒಂದು ಕೈಯಲ್ಲಿ ಪುಸ್ತಕ, ಲೇಖನಸಾಮಗ್ರಿಗಳ ಕೈಚೀಲ, ಇನ್ನೊಂದು ಕೈಯಲ್ಲಿ ಕೊಡೆ, ಸದಾ ತಲೆಬಾಗಿ ನಡೆವ ವಿದ್ವಾಂಸ.

ಮೈಸೂರು ವಿ.ವಿ.ಯದ ಕನ್ನಡ ಅಧ್ಯಯನಸಂಸ್ಥೆಯ ಒಂದನೆಯ ಮಹಡಿಯ ಎಡಭಾಗದ ಕೊನೆಯ ಚಿಕ್ಕದಾದ ಕೋಣೆ. ಇಕ್ಕೆಲಗಳಲ್ಲೂ ಪುಸ್ತಕ, ಹಸ್ತಪ್ರತಿಗಳ ರಾಶಿ ರಾಶಿ. ಮಧ್ಯೆ ಕುರ್ಚಿಯಲ್ಲಿ ಕುಳಿತ ಈ ವ್ಯಕ್ತಿ ಕರಡನ್ನು ತಿದ್ದುತ್ತಲೋ, ಬರವಣಿಗೆಯನ್ನು ಮುಂದುವರಿಸುತ್ತಲೋ, ಏನಾದರೂ ಬರವಣಿಗೆ ಅಧ್ಯಯನಕಾರ್ಯದಲ್ಲಿ ನಿರತರಾಗಿರುವ ಪ್ರಾಧ್ಯಾಪಕ.

ಅಷ್ಟಾಗಿ ಯಾವ ವಿದ್ಯಾರ್ಥಿಗಳನ್ನೂ ಹಚ್ಚಿಕೊಳ್ಳದೆ ನಿಷ್ಠೆಯಿಂದ ತಮ್ಮ ಪಾಲಿನ ಕೆಲಸವನ್ನು ಮಾಡುತ್ತಾ, ತುಂಬಾ ಸೊಗಸಾಗಿ, ಸ್ವಾರಸ್ಯವಾಗಿ ಬೋಧಿಸುತ್ತಾ, ನಿಷ್ಪಕ್ಷಪಾತವಾಗಿ ವರ್ತಿಸುವ ಪ್ರಾಧ್ಯಾಪಕ. ಸರಳವಾದ ಉಡುಪು, ಸಾಮಾನ್ಯ ರೀತಿ ನಡಿಗೆ. ಗೊತ್ತಿದ್ದವರಿಗೇ ಗೊತ್ತು, ಇವರು ಹಿರಿಯ ವಿದ್ವಾಂಸ ಟಿ.ವಿ.ವೆಂಕಟಾಚಲ ಶಾಸ್ತ್ರೀ ಎಂದು.

ಟಿ.ವಿ.ವಿ. ಎಂದೇ ಪ್ರಸಿದ್ಧರಾಗಿರುವ ತೋಗೆರೆ ವೆಂಕಟಸುಬ್ಬಶಾಸ್ತ್ರೀ ವೆಂಕಟಾಚಲ ಶಾಸ್ತ್ರೀ ಅವರು ಮೈಸೂರು ವಿ.ವಿ. ಮಾನಸಗಂಗೋತ್ರಿಯಲ್ಲಿ ಕನ್ನಡ ಪ್ರಾಧ್ಯಾಪಕರು. ಇಂಥವರಿಂದ ಗೌರವ, ಭೂಷಣ, ಶೋಭೆ. ಪ್ರಾಧ್ಯಾಪಕರಾಗಿ ಅವರು ತುಂಬ ಜನಪ್ರಿಯರಾಗಿದ್ದಾರೆ. ನಡೆ-ನುಡಿಗಳಿಂದ ಹಲವು ದಂತಕತೆಗಳಿಗೆ ಕಾರಣರಾಗಿದ್ದಾರೆ. ತಮ್ಮ ನಿಷ್ಪಕ್ಷಪಾತವರ್ತನೆ, ಸತತ ಅಧ್ಯಯನ ಬರಹಗಳಿಂದ, ಉತ್ತಮ ಬೋಧನೆಯಿಂದ ಅವರು ಆದರ್ಶ ಪ್ರಾಧ್ಯಾಪಕರೆನಿಸಿಕೊಂಡಿದ್ದಾರೆ, ನಿಸ್ಪೃಹ, ನಿಸ್ವಾರ್ಥ, ನಿಗರ್ವಿ ಪಂಡಿತ ಶಾಸ್ತ್ರೀಜಿಯವರು.

ವಿದ್ಯಾರ್ಥಿಗಳೆಲ್ಲರ ಬಹುಮೆಚ್ಚುಗೆಗೆ ಪಾತ್ರರಾಗಿರುವ ಟಿ.ವಿ.ವಿ. ವಿದ್ಯಾರ್ಥಿಗಳನ್ನು ಗೌರವಭಾವದಿಂದಲೇ ಕಾಣುತ್ತಾರೆ. ಆದರೆ ಒಂದು ಆರೋಪ ಮಾತ್ರ ಟಿ.ವಿ.ವಿ. ಅವರ ಮೇಲೆ ಇದೆ. ಅದೇನೆಂದರೆ ಪರೀಕ್ಷೆಗಳಲ್ಲಿ ಹೆಚ್ಚು ಅಂಕ ಕೊಡುವುದಿಲ್ಲ ಎಂಬುದು. ಈ ಒಂದು ವಿಷಯವನ್ನು ಹೊರತುಪಡಿಸಿದರೆ ಡಾ.ಶಾಸ್ತ್ರಿಗಳು ಮತ್ತು ವಿದ್ಯಾರ್ಥಿಗಳ ನಡುವೆ ಅತ್ಯಂತ ಗೌರವಭಾವನೆ, ಪೂಜ್ಯ ಭಾವನೆಯೇ ಚಾಲ್ತಿಯಲ್ಲಿದೆ.

ಡಾ.ವೆಂಕಟಾಚಲ ಶಾಸ್ತ್ರಿಯವರು ಕನ್ನಡ ಸಾಹಿತ್ಯಲೋಕದ ಮಹಾ ವಿದ್ವಾಂಸರು. ಕನ್ನಡ ಭಾಷೆ, ವ್ಯಾಕರಣ, ಛಂದಸ್ಸು, ಗ್ರಂಥಸಂಪಾದನೆ, ನಿಘಂಟುರಚನೆ, ಅಲಂಕಾರ ಶಾಸ್ತ್ರ ಮುಂತಾದವು ಅವರಿಗೆ ಪ್ರಿಯವಾದ ಸಂಶೋಧನಕ್ಷೇತ್ರಗಳು. ಪ್ರಬಂಧ, ನಾಟಕ, ವ್ಯಕ್ತಿಚಿತ್ರ ಅವರ ಸೃಜನಶೀಲ ಕ್ಷೇತ್ರಗಳು. ನಲವತ್ತಕ್ಕೂ ಹೆಚ್ಚು ಕೃತಿಗಳು, ಹನ್ನೆರಡು ಸಂಶೋಧನಕೃತಿ, ನಾಲ್ಕು ನಾಟಕಗಳು, ಒಂದು ಪ್ರಬಂಧ ಸಂಕಲನ, ಹಲವು ಸಂಪಾದಿತ ಕೃತಿಗಳು, ನೂರಾರು ಸಂಶೋಧನಲೇಖನಗಳು.

ಶಾಸ್ತ್ರಿಗಳನ್ನು ಕುರಿತು ಅವರ ಶಿಷ್ಯ-ಸಹೋದ್ಯೋಗಿ ಡಾ.ಎನ್.ಎಸ್.ತಾರಾನಾಥ ಗ್ರಂಥಲೋಕದಲ್ಲಿ (ಸಂ.೧೨, ಸಂಚಿಕೆ ೬) ಹೀಗೆ ಬರೆಯುತ್ತಾರೆ: "ಕನ್ನಡ ಸಂಶೋಧನ ಕ್ಷೇತ್ರದಲ್ಲಿ ಡಾ.ಶಾಸ್ತ್ರಿಗಳದು ಗಣ್ಯ ಹಾಗೂ ಚಿರಸ್ಮರಣೀಯ ಹೆಸರು. ಹಳೆಗನ್ನಡ ಭಾಷೆ, ಸಾಹಿತ್ಯಗಳ ಬಗ್ಗೆ, ಶಾಸ್ತ್ರ ವಿಷಯಗಳಾದ ವ್ಯಾಕರಣ ಛಂದಸ್ಸುಗಳ ಬಗ್ಗೆ ಅಧಿಕಾರ ವಾಣಿಯಿಂದ ಮಾತನಾಡಬಲ್ಲ ಕೈಬೆರಳೆಣಿಕೆಯ ಸಮಕಾಲದ ವಿದ್ವಾಂಸರಲ್ಲಿ ಅವರು ಮೊದಲಿಗರು. ಹಳಗನ್ನಡದ ಬಗ್ಗೆ ಏನಾದರೂ ವಿವಾದ, ಸಮಸ್ಯೆ ಉಂಟಾದಲ್ಲಿ ಡಾ.ಶಾಸ್ತ್ರಿಗಳ ಅಭಿಪ್ರಾಯ ನಿಲುವಾಗುವುದಿಲ್ಲ, ತೀರ್ಪು ಆಗುತ್ತದೆ. ಅವರ ಈಚಿನ ಕೃತಿಯಾದ 'ಕನ್ನಡ ಚಿತ್ರಕಾವ್ಯ'ದಲ್ಲಿ ಅವರ ಪ್ರತಿಭೆ, ಪಾಂಡಿತ್ಯ, ಪರಿಶ್ರಮಗಳು ಹೆಪ್ಪುಗಟ್ಟಿವೆ. ಇದು ಶಾಸ್ತ್ರಿಗಳ ವಿದ್ವತ್ತಿನ ಮುಡಿಮಾಣಿಕ್ಯ. ಹಾಗೆಯೇ ಕನ್ನಡ ಸಂಶೋಧನಕ್ಷೇತ್ರದ ಕಲಶ." ಇದಕ್ಕಿಂತ ಶಾಸ್ತ್ರಿಗಳ ವ್ಯಕ್ತಿತ್ವದ ಬಗೆಯನ್ನು ಬಣ್ಣಿಸುವುದಾದರೂ ಹೇಗೆ?

'ಶಾಸ್ತ್ರ' ವಿಷಯಗಳ ಮೇಲೆ ಶಾಸ್ತ್ರಿಗಳು ತುಂಬಾ ಕೆಲಸಮಾಡಿದ್ದಾರೆ. ಅಲಂಕಾರ, ಛಂದಸ್ಸು ಈ ವಿಷಯಗಳ ಮೇಲಿನ ಕೆಲಸದಿಂದಾಗಿ ಅವರು 'ಛಂದಸ್ಸಿನ ಶಾಸ್ತ್ರಿ'ಗಳೆಂದೇ ಖ್ಯಾತರಾಗಿದ್ದಾರೆ. ಕನ್ನಡ ಛಂದಸ್ಸು ಕನ್ನಡ ಛಂದಃಸ್ವರೂಪ ಇವು ಛಂದಸ್ಸಿನ ವಲಯದ ತಲೆದಿಂಬುಗಳು. ಶಾಸ್ತ್ರೀ ಅವರ ಪಿಹೆಚ್.ಡಿ ಮಹಾಪ್ರಬಂಧ 'ನೇಮಿನಾಥ ಪುರಾಣಗಳ ತೌಲನಿಕ ಅಧ್ಯಯನ', ಶಾಸ್ತ್ರನಿಷ್ಕೃಷ್ಟತೆ, ಪುರಾಣಜಿಜ್ಞಾಸೆ, ಜೈನಪುರಾಣಗಳ ಆಮೂಲಾಗ್ರಪರಿಶೀಲನೆ, ವಿಶ್ಲೇಷಣೆ, ಸಂಶೋಧನೆ, ತೌಲನಿಕ ಅಧ್ಯಯನ ಒಳಗೊಂಡಿರುವ ಮಹಾಗ್ರಂಥ.

ಶಾಸ್ತ್ರಿಗಳನ್ನು ಮೈಸೂರು ವಿ.ವಿ.ಯಲ್ಲಿ ಉಳಿಸಿಕೊಂಡ ಕೀರ್ತಿ ಡಾ.ಹಾ.ಮಾ. ನಾಯಕ್ ಅವರಿಗೆ ಸಲ್ಲಬೇಕು. ಅವರ ಪರಿಶ್ರಮವಿಲ್ಲದಿದ್ದರೆ ಶಾಸ್ತ್ರಿಗಳು ಮಂಗಳೂರು ವಿ.ವಿ.ಸೇರುತ್ತಿದ್ದರು. ಒಂದು ವಿದ್ವಾಂಸಸ್ಥಾನ ಪಲ್ಲಟವಾಗುತ್ತಿತ್ತು. ನಾವು ಶಾಸ್ತ್ರಿಗಳ ವಿದ್ಯಾರ್ಥಿಗಳೆಂದು ಹೇಳಿಕೊಳ್ಳುವ ಸೌಭಾಗ್ಯ ತಪ್ಪುತ್ತಿತ್ತು. ಮಂಗಳೂರಿಗೆ ಬದಲಾಗಿ ಮೈಸೂರಿನಲ್ಲಿ ಉಳಿದದ್ದೇ ನಮ್ಮ ಸುಯೋಗ.

ಡಾ.ಶಾಸ್ತ್ರಿಗಳ ಅಪಾರ ಸಾಹಿತ್ಯಸೇವೆಗೆ ನಾಡು-ನುಡಿ ಅವರನ್ನು ಗೌರವಿಸಿ ಪುರಸ್ಕರಿಸಿದೆ. ಹಲವು ಪ್ರಶಸ್ತಿ ಹಾಗೂ ಬಹುಮಾನಗಳು ಬಂದಿವೆ. ಅವರ 'ಸಾಹಿತ್ಯ

ಮಂಥನ' ಮತ್ತು 'ಕನ್ನಡ ಛಂದಸ್ಸು'ಗಳಿಗೆ ದೇವರಾಜ ಬಹದ್ದೂರ್ ಬಹುಮಾನ ಬಂದಿದೆ. 'ಕನ್ನಡ ಛಂದಸ್ಸು' ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ ಬಂದಿದೆ. 'ಕನ್ನಡ ಛಂದಃಸ್ವರೂಪ'ಕ್ಕೆ ಮೈಸೂರು ವಿ.ವಿ. ಸುವರ್ಣಮಹೋತ್ಸವ ಪ್ರಶಸ್ತಿ ಲಭಿಸಿದೆ. ಕನ್ನಡ ಸಾಹಿತ್ಯ ಪರಿಷತ್ತು ವಜ್ರಮಹೋತ್ಸವಸಂದರ್ಭದಲ್ಲಿ ಅವರನ್ನು ಸನ್ಮಾನಿಸಿ ಗೌರವಿಸಿದೆ. ೧೯೮೭ರ 'ಗ್ರಂಥಲೋಕ'ದ ವರ್ಷದ ಲೇಖಕ ಪ್ರಶಸ್ತಿ ಪಡೆದು ನಾಡಿನಾದ್ಯಂತ ಪ್ರಸಿದ್ಧಿಯಲ್ಲಿದ್ದಾರೆ. ಹೋಮಿ ಎಂ.ಇರಾನಿ ಚಿನ್ನದ ಪದಕ ಸಹಿತ ಅವರಿಗೆ ಸಂದಿದೆ. ೧೯೮೭ರಲ್ಲಿ ಪ್ರಕಟವಾದ 'ಕನ್ನಡ ಚಿತ್ರಕಾವ್ಯ' ಸಂಶೋಧನೆಯ ಕೃತಿಗೆ ಗ್ರಂಥಲೋಕದ ಪ್ರಶಸ್ತಿ ಬಂದಿದೆ (ಶಾಸ್ತ್ರೀಜಿಯವರಿಗೆ ಕನ್ನಡಿಗ ರೆಲ್ಲರ ಹೃದಯ ತುಂಬಿದ ಅಭಿನಂದನೆ). ಐ.ಬಿ.ಹೆಚ್.ಪ್ರಶಸ್ತಿ ಹಾಗೂ ೮೮ರ ರಾಜ್ಯೋತ್ಸವ ಪ್ರಶಸ್ತಿಗಳೂ ಬಂದಿವೆ.

ಜುಲೈ ೨೪, ೧೯೮೮ರ ಪ್ರಜಾವಾಣಿಯ ಸಂಪ್ರತಿಯಲ್ಲಿ ಹಾಮಾನಾ ಅವರು ಶಾಸ್ತ್ರಿ ಗಳನ್ನು ಕುರಿತು ಬರೆಯುತ್ತಾ ''ಡಾ.ಕೆ.ಕೃಷ್ಣಮೂರ್ತಿಯವರು ಶಾಸ್ತ್ರಿಗಳಿಗೆ 'ವರ್ಷದ ಲೇಖಕ' ಪ್ರಶಸ್ತಿಯನ್ನು ನೀಡುತ್ತಾ 'ಶಾಸ್ತ್ರಿಗಳು ವಿದ್ವಾಂಸರಲ್ಲಿ ರತ್ನ' ಎಂದು ಪ್ರಶಂಸಿ ಸಿದರು. ತಮ್ಮ ಭಾಷಣದಲ್ಲಿ ಅವರು ಪಂಡಿತರಾಜ ಜಗನ್ನಾಥನು ಮಾಡಿರುವ ನಾಯಕರ ವಿಭಾಗಕ್ರಮದಲ್ಲಿ ಧರ್ಮವೀರ, ದಾನವೀರ, ಯುದ್ಧವೀರ ಮುಂತಾದವರಿಗೆ ಸಮಾನ ವಾಗಿ 'ಪಾಂಡಿತ್ಯವೀರ'ನಿಗೂ ಸ್ಥಾನವಿದೆ ಎಂಬುದಾಗಿ ಹೇಳಿದರು. ನಮ್ಮ ವೆಂಕಟಾಚಲ ಶಾಸ್ತ್ರಿಗಳು ಕನ್ನಡದ ಅಂಥ ಒಬ್ಬ 'ಪಾಂಡಿತ್ಯವೀರ'ರೆಂದು ಹೇಳಿದರೂ ಉತ್ಪ್ರೇಕ್ಷೆ ಯಾಗುವುದಿಲ್ಲ'' ಎಂದು ಬರೆದಿರುವುದು ಶಾಸ್ತ್ರಿಗಳ ವಿದ್ವತ್ತಿಗೆ ತೊಡಿಸಿದ ಬಂಗಾರದ ಕಿರೀಟವಾಗಿದೆ.

ವಿದ್ವಾಂಸಲೋಕದ ಅಗ್ರಗಣ್ಯ ಡಾ.ಶಾಸ್ತ್ರೀಜಿಯವರಿಗೆ ಈಗ ಅರುವತ್ತು ವರ್ಷ. ಅವರಿಂದ ಕನ್ನಡ ಸಾಹಿತ್ಯ ಭಂಡಾರ ಇನ್ನೂ ಸುಗ್ಗಿಯಾಗಲಿ. ಅವರಿಗೆ ಭಗವಂತನು ಎಲ್ಲ ಶುಭಗಳನ್ನು ಕರುಣಿಸಲೆಂಬುದೇ ಅವರ ಶಿಷ್ಯಸಮೂಹದ ಪ್ರಾರ್ಥನೆ.

ಹಳಗನ್ನಡದಲ್ಲಿಯೇ ಕೃತಿರಚನೆ ಮಾಡುವ ಸಾಮರ್ಥ್ಯ ಅವರಿಗುಂಟು. ಸಂಶೋಧನ ಕ್ಷೇತ್ರದಲ್ಲಿ ಅವರ ಪತ್ತೇದಾರಿ ಸಾಹಸದಿಂದ ಅನೇಕ ಕೆಲಸಗಳು ಖುಲಾಸೆಯಾಗಿವೆ. ಕನ್ನಡದಲ್ಲಿ ಇಂದು ಅವರಿಗೆ ಸರಿದೊರೆಯಾದ ಇನ್ನೊಬ್ಬ ವಿದ್ವಾಂಸರನ್ನು ಹುಡುಕು ವುದು ಸುಲಭವಲ್ಲ. ಕನ್ನಡ ಭಾಷೆ ಮತ್ತು ಸಾಹಿತ್ಯಗಳಿಗೆ ಸಂಬಂಧಿಸಿದಂತೆ ಅವರು ಅದ್ವಿತೀಯ ವಿದ್ವಾಂಸರು.

ಶ್ರೀಯುತರು ವಿಷಯ ವಿಶ್ವಕೋಶದ ಉಪ ಸಮಿತಿಯ ಸದಸ್ಯರು, ಎಪಿಗ್ರಾಫಿಯ ಕರ್ನಾಟಕ ಪರಿಷ್ಕರಣ ಮತ್ತು ಪುನರ್ಮುದ್ರಣ ಯೋಜನೆಯಲ್ಲಿ ಗೌರವ ಸ್ಥಾನ ಪಡೆದವರು. ಕನ್ನಡ ಅಧ್ಯಯನಸಂಸ್ಥೆಯ 'ಕ.ಸಾ.ಚರಿತ್ರೆ' ಯೋಜನೆಯ ಸಂಪಾದಕರು, ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟುಮಂಡಳಿ ಸದಸ್ಯರು. ವಿವಿಧ ಪಠ್ಯಪುಸ್ತಕಗಳ ಮಂಡಳಿಯ ಸದಸ್ಯರು.

ಕನ್ನಡ ವಿದ್ವತ್ಪತ್ರಿಕೆಗಳಲ್ಲಿ, ಸ್ಮರಣೆ ಮತ್ತು ಸಂಭಾವನೆ ಗ್ರಂಥಗಳಲ್ಲಿ ಅನೇಕ ಸಂಶೋಧನಲೇಖನಗಳನ್ನು ಶ್ರೀಯುತರು ಪ್ರಕಟಿಸಿದ್ದಾರಲ್ಲದೆ ವಿದ್ವತ್ ಸಮಾವೇಶ ಗಳಲ್ಲಿ ಪ್ರಬಂಧಗಳನ್ನು ಮಂಡಿಸಿದ್ದಾರೆ. ನಾಡಿನ ವಿವಿಧ ಸಾಂಸ್ಕೃತಿಕ ಸಂಘ-ಸಂಸ್ಥೆಗಳಲ್ಲಿ ಸದಸ್ಯರಾಗಿ ದುಡಿಯುತ್ತಿದ್ದಾರೆ.

ಶಾಸ್ತ್ರೀ ಅವರ ಇತ್ತೀಚಿನ ಕೃತಿ 'ಕನ್ನಡ ಚೆನ್ನುಡಿ'. ಇದು ಮೂಲ ತಾತ್ಪರ್ಯಸಹಿತ ಕನ್ನಡ ಸುಭಾಷಿತಗಳ ಒಂದು ಹೆಬ್ಬೊತ್ತಿಗೆ. ಸುಮಾರು ೨೩೦ ಕೃತಿಗಳಿಂದ ಆಯ್ದ ಎರಡೂವರೆ ಸಾವಿರಕ್ಕೂ ಮೇಲ್ಪಟ್ಟ ಹಳಗನ್ನಡ ಭಾಷೆಯ ನೀತಿಪದ್ಯಗಳನ್ನು ಕವಿ ಕಾವ್ಯಪ್ರಶಂಸೆ, ವಿದ್ಯಾಭ್ಯಾಸ, ಸಂಸಾರ, ಸಿರಿತನ ಬಡತನ ಮೊದಲಾದ ಹದಿನಾಲ್ಕು ವಿಭಾಗಗಳಲ್ಲಿ ಸಂಗ್ರಹಿಸಲಾಗಿದೆ. ಈ ಪದ್ಯಗಳನ್ನು ಕಾವ್ಯ, ಪುರಾಣ, ಲಾಕ್ಷಣಿಕ ಸಾಹಿತ್ಯ ಕೃತಿ, ಲೌಕಿಕ ಶಾಸ್ತ್ರಗ್ರಂಥ, ಕಾವ್ಯಸಂಕಲನ, ಶತಕ ಹಾಗೂ ಪ್ರಾಚೀನ ಆಧುನಿಕ ನೀತಿ ಸಾರಗಳಂತಹ ಗ್ರಂಥಗಳಿಂದ ಸಂಗ್ರಹಿಸಿದೆ. ಮನೆಮನೆಯಲ್ಲಿ ಕೊಂಡಾಡಬೇಕಾದ ಒಂದು ಅಮೂಲ್ಯರತ್ನ 'ಕನ್ನಡ ಚೆನ್ನುಡಿ'.

ಸಾಹಿತ್ಯ, ಸಂಶೋಧನಕ್ಷೇತ್ರದ ಸಾಧಕ

ಶ್ರೀಧರ ಎಚ್.ಜಿ.

ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರೀ ಇವರದು ಕನ್ನಡ ವಿದ್ವತ್‌ಪ್ರಪಂಚದಲ್ಲಿ ಬಹು ದೊಡ್ಡ ಹೆಸರು. ಮೈಸೂರು ವಿಶ್ವವಿದ್ಯಾನಿಲಯದ ಅಂದಿನ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಕನ್ನಡ ಪ್ರಾಧ್ಯಾಪಕರಾಗಿ, ನಿರ್ದೇಶಕರಾಗಿ ವೃತ್ತಿಯಿಂದ ನಿವೃತ್ತರು, ಪ್ರವೃತ್ತಿಯಿಂದ ಸದಾ ಕ್ರಿಯಾಶೀಲರು. ಮೆದುವಾದ ಮಾತು. ಮೃದುವಾದ ದಾಟಿ. ಆಕರ್ಷಕ ಅಂಗಸೌಷ್ಠವ. ಕನ್ನಡಕದ ಹಿಂದಿನ ಕಣ್ಣುಗಳಲ್ಲಿ ಸದಾ ಹೊಳಪು. ಓದು ಬರಹ ಎರಡರಲ್ಲಿಯೂ ಅಚ್ಚುಕಟ್ಟು. ಬಹಳಷ್ಟು ಮಂದಿ ಪ್ರವೇಶಿಸಲು ಅಪೇಕ್ಷಿಸದ ಸಾಹಿತ್ಯ ಚರಿತ್ರೆ, ಹಳಗನ್ನಡ, ಛಂದಸ್ಸು, ವ್ಯಾಕರಣದಂತಹ ಶಾಸ್ತ್ರಸಾಹಿತ್ಯಕ್ಷೇತ್ರದಲ್ಲಿ ಲೀಲಾಜಾಲವಾಗಿ ಬರೆಯಬಲ್ಲರು. ಉತ್ತಮ ಅನುವಾದಕ. ಹಲವು ಕೃತಿಗಳ ಸಂಪಾದಕ, ಶಾಸ್ತ್ರಸಾಹಿತ್ಯ ಮತ್ತು ಸಂಶೋಧನಕ್ಷೇತ್ರದ ಅನನ್ಯ ಸಾಧಕ. ನಿಘಂಟುಕರ್ತೃ. ಬರವಣಿಗೆಯಲ್ಲಿ ಸ್ಪಷ್ಟತೆ, ನಿಖರತೆ, ವಿಚಾರಮಂಡನೆಗೆ ಅವರದೇ ಆದ ಶೈಲಿ. ಮುನ್ನೂರಕ್ಕಿಂತಲೂ ಹೆಚ್ಚಿನ ಲೇಖನಗಳು, ಸ್ವತಂತ್ರವಾಗಿ, ಸಹಕರ್ತೃವಾಗಿ ಐವತ್ತಕ್ಕಿಂತಲೂ ಹೆಚ್ಚಿನ ಕೃತಿಗಳು ಶಾಸ್ತ್ರಿಗಳ ಸಾಹಿತ್ಯಸಂಪತ್ತು.

ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರೀ (ಆಗಸ್ಟ್ ೨೬, ೧೯೩೩) ಇವರಿಗೆ ಪ್ರಸ್ತುತ ಅರವತ್ತೈದರ ಹರೆಯ. ತಂದೆ ತೋಗೆರೆ ವೆಂಕಟಸುಬ್ಬಶಾಸ್ತ್ರಿಗಳು. ತಾಯಿ ಶ್ರೀಮತಿ ಸುಬ್ಬಮ್ಮ. ಇಂದು ಕನಕಪುರವೆಂದು ಕರೆಯುವ ಬೆಂಗಳೂರು ಜಿಲ್ಲೆಯ ಕಾನಕಾನಹಳ್ಳಿ ಇವರ ಸ್ವಂತ ಊರು. ಪ್ರಸ್ತುತ ಮೈಸೂರಿನ ಜಯಲಕ್ಷ್ಮಿಪುರಂನಲ್ಲಿ ವಾಸ. ಮನೆಯಲ್ಲಿ ಸಾಂಸ್ಕೃತಿಕ ವಾತಾವರಣದ ಪರಿಸರ. ಎಳವೆಯಲ್ಲಿಯೇ ರಾಮಾಯಣ, ಮಹಾಭಾರತ, ರಾಮಕೃಷ್ಣಾಶ್ರಮದ ಕೃತಿಗಳು. ಗಳಗನಾಥರ ಕಾದಂಬರಿಗಳ ದಟ್ಟಪ್ರಭಾವ. ಸಾಹಿತ್ಯದ ಬಗೆಗೆ ವಿಶೇಷ ಕುತೂಹಲ, ಅಭಿರುಚಿ. ವಿದ್ಯಾರ್ಥಿದೆಸೆ ಹಲವರ ಬದುಕಿನಲ್ಲಿ ಮಹತ್ವದ ಸಮಯ. ಪ್ರಾಥಮಿಕ ಮತ್ತು ಪ್ರೌಢಶಾಲೆಯ ಪರಿಸರ, ವ್ಯಕ್ತಿತ್ವದ ಅರಳುವಿಕೆಗೆ ಕಾರಣವಾಗುತ್ತದೆ. ಶಾಸ್ತ್ರಿಗಳ ಬದುಕಿನಲ್ಲಿ ಇದೇ ಆದದ್ದು. ಕನಕಪುರದ ಶಾಲೆಯಲ್ಲಿ ಅಧ್ಯಾಪಕರಾಗಿದ್ದ ರಾಘವೇಂದ್ರರಾವ್, ಎಚ್.ಪಿ.ಶಿವರಾಮಯ್ಯನವರ ವ್ಯಕ್ತಿತ್ವದ ದಟ್ಟ ಪ್ರಭಾವಕ್ಕೆ ಡಾ.ಶಾಸ್ತ್ರಿಗಳು ಒಳಗಾದರು. ಕನಕಪುರ, ಮೈಸೂರಿನ ಯುವರಾಜ ಮತ್ತು ಮಹಾರಾಜ ಕಾಲೇಜುಗಳಲ್ಲಿ ಹೆಚ್ಚಿನ ಅಧ್ಯಯನ. ಮಹಾರಾಜ ಕಾಲೇಜಿನ ಅವಧಿ ಶಾಸ್ತ್ರಿಗಳ ಪಾಲಿಗೆ ಸ್ಮರಣೀಯವಾದುದು. ಕನ್ನಡದ ಅಧ್ವರ್ಯುಗಳಾದ ಮಹಾಕವಿ ಕುವೆಂಪು, ಪಾಂಡಿತ್ಯ ವಿದ್ವತ್ತಿನ ಪ್ರತಿರೂಪವಾಗಿದ್ದ ಡಿ.ಎಲ್.ನರಸಿಂಹಾ

ಚಾರ್, ಮೊದಲಾದವರ ನೇತೃತ್ವದಲ್ಲಿ ಕನ್ನಡದ ಪಾಠ ಕಲಿತರು. ಸಾಹಿತ್ಯದಲ್ಲಿ ಆಳವಾದ ಆಸಕ್ತಿಯನ್ನು ಬೆಳೆಸಿಕೊಂಡರು. ಅವರ ಆದರ್ಶದ ಬದುಕು ಶಾಸ್ತ್ರಿಗಳ ಬದುಕಿನ ದಾರಿದೀಪವಾಯಿತು.

೧೯೫೪ರಲ್ಲಿ ಕನ್ನಡದಲ್ಲಿ ಸ್ನಾತಕೋತ್ತರ ಪದವಿ ಮುಗಿಸಿ ಕನಕಪುರದ ರೂರಲ್ ಕಾಲೇಜಿನಿಂದ ತಮ್ಮ ಅಧ್ಯಾಪಕವೃತ್ತಿಯನ್ನು ಆರಂಭಿಸಿದರು. ಬೆಂಗಳೂರಿನ ಸೇಂಟ್ ಜೋಸೆಫ್ ಕಾಲೇಜಿನಲ್ಲಿ ಕೆಲವು ಕಾಲ ಅಧ್ಯಾಪನ. ೧೯೫೫ರಿಂದ ೧೯೬೮ರವರೆಗೆ ಹೈದರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸಿದರು. ೧೯೬೮ರಿಂದ ಮೈಸೂರಿನ ಕನ್ನಡ ಅಧ್ಯಯನಸಂಸ್ಥೆಯಲ್ಲಿ ಅಧ್ಯಾಪಕರಾಗಿ ಸೇರಿ ಪ್ರಾಧ್ಯಾಪಕರಾಗಿ, ನಿರ್ದೇಶಕರಾಗಿ ನಿವೃತ್ತರಾದರು. ಅಧ್ಯಾಪನದಲ್ಲಿ ಶಿಸ್ತು, ಅಚ್ಚುಕಟ್ಟು, ನಿರರ್ಗಳ ಉಪನ್ಯಾಸ, ವಿದ್ಯಾರ್ಥಿಗಳಿಗೆ ವಿದ್ವತ್ತಿನ ರಸದೌತಣ. 'ಕನ್ನಡ ನೇಮಿನಾಥ ಪುರಾಣಗಳು- ತೌಲನಿಕ ಅಧ್ಯಯನ' ಪ್ರೌಢ ಪ್ರಬಂಧಕ್ಕೆ ಡಾಕ್ಟರೇಟ್ ಪದವಿ. ಇದನ್ನು ಸಿದ್ಧಪಡಿಸಲು ಡಿ.ಎಲ್.ನರಸಿಂಹಾಚಾರ್, ಡಾ.ಹಾ.ಮಾ.ನಾಯಕರ ಮಾರ್ಗದರ್ಶನ.

ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿಗಳ ಸಾಹಿತ್ಯಿಕ ಬದುಕು ಕಾದಂಬರಿಗಳ ಮೂಲಕ ಆರಂಭವಾಗುತ್ತದೆ. ಎಳವೆಯಲ್ಲಿ ಎರಡು ಪತ್ತೇದಾರಿ ಕಾದಂಬರಿಗಳನ್ನು ಬರೆದರು. ಆದರೆ ಅವು ಪ್ರಕಟಗೊಳ್ಳಲಿಲ್ಲ. ಉಸ್ಮಾನಿಯಾ ವಿಶ್ವವಿದ್ಯಾನಿಲಯದಲ್ಲಿ ಇರುವ ಸಮಯದಲ್ಲಿ 'ಎ ಡಿಸ್‌ಕ್ರಿಪ್‌ಟಿವ್ ಕೆಟಲಾಗ್ ಆಫ್ ದ ಕನ್ನಡ ಮ್ಯಾನ್ಯುಸ್ಕ್ರಿಪ್‌ಟ್ಸ್ ಇನ್ ದ ಉಸ್ಮಾನಿಯಾ ಯೂನಿವರ್ಸಿಟಿ' ಎಂಬ ವಿಷಯದ ಮೇಲೆ ಕೆಲಸ ಮಾಡಿದರು. ಗ್ರೀಕ್ ಭಾಷೆಯ ಈಸ್ಕಿಲಸ್‌ನ 'ಬದ್ಧ ಪ್ರಮಿತ್ಯೂಸ್' ಕೃತಿಯನ್ನು ಕನ್ನಡಕ್ಕೆ ಅನುವಾದಿಸಿದರು. ಹಳಗನ್ನಡದಲ್ಲಿರುವ ಇದು ಅವರ ಪ್ರಕಟಿತ ಮೊದಲ ಕೃತಿ. 'ಕಂಸ' ಎಂಬ ನಾಟಕ ಇವರ ಸ್ವತಂತ್ರ ಕೃತಿ. ಇಲ್ಲಿಂದ ಮುಂದೆ ಡಾ.ಶಾಸ್ತ್ರಿಗಳ ಕೃತಿಗಳಲ್ಲಿ ವಿದ್ವತ್ತಿನ ಮಹಾಪೂರವೇ ಹರಿದುಬರುತ್ತದೆ. ಮಹಾಕಾವ್ಯ ಲಕ್ಷಣ, ಕನ್ನಡ ಛಂದಸ್ಸು, ಕನ್ನಡ ಛಂದಸ್ಸಿನ ಸ್ವರೂಪ, ಶಬ್ದಾರ್ಥವಿಹಾರ, ಸಾಹಿತ್ಯಮಂಥನ, ಶ್ರೀವತ್ಸ ನಿಘಂಟು, ಪ್ರಾಚೀನ ಕನ್ನಡ ಸಾಹಿತ್ಯ, ನಮ್ಮ ಕರ್ನಾಟಕ, ಕನ್ನಡ ಕವಿಗಳು ಕಂಡ ಗೋಮಟೇಶ್ವರ, ಕನ್ನಡ ಚೆನ್ನುಡಿ, ಕನ್ನಡ ಚಿತ್ರಕಾವ್ಯ, ಅವರು ಸಂಪಾದಿಸಿದ 'ಕೇಶಿರಾಜನ ಶಬ್ದಮಣಿ ದರ್ಪಣಂ' ಕನ್ನಡದ ಛಂದೋಮೀಮಾಂಸೆ ಮೊದಲಾದವು ಅವರ ಮೇರುಕೃತಿಗಳು. ಈ ದಿಸೆಯಲ್ಲಿ ಒಂದೆರಡು ಕೃತಿಗಳನ್ನು ಗಮನಿಸಬಹುದು.

'ಶ್ರೀ ವತ್ಸ ನಿಘಂಟು' ಒಂದು ಅಪೂರ್ವ ಕೃತಿ. ಅವರ ಪ್ರತಿಭೆ, ಶಕ್ತಿ, ಸಾಮರ್ಥ್ಯದ ದ್ಯೋತಕ. ಸುಮಾರು ೪೦೦೦ ಸಂಖ್ಯಾವಿಶಿಷ್ಟ ಪದಗಳಿಗೆ ವಿವರಣೆ ನೀಡುವ ಇದನ್ನು ರಚಿಸಲು ಸುಮಾರು ೧೦೦ ಆಕರ ಗ್ರಂಥಗಳನ್ನು ಪರಿಶೀಲಿಸಿದ್ದಾರೆ. ಕಾವ್ಯ, ಇತಿಹಾಸ, ಪುರಾಣ, ವಿಶ್ವಕೋಶ, ನಿಘಂಟು, ಉಪನಿಷತ್ತು, ತತ್ವಶಾಸ್ತ್ರ, ತರ್ಕಶಾಸ್ತ್ರ, ಅಲಂಕಾರ ಶಾಸ್ತ್ರ, ಛಂದಶ್ಶಾಸ್ತ್ರ, ಅಶ್ವಶಾಸ್ತ್ರ, ಗಜಶಾಸ್ತ್ರ, ವೈದ್ಯಶಾಸ್ತ್ರ, ಜ್ಯೋತಿಶ್ಶಾಸ್ತ್ರ, ಕಾಮಶಾಸ್ತ್ರ,

ವ್ಯಾಕರಣ, ಸುಭಾಷಿತ, ಶಾಸನ ಮೊದಲಾದ ಗ್ರಂಥಗಳು ಪರಿಶೀಲನೆಗೆ ಒಳಗೊಂಡಿವೆ. ವ್ಯಾಪಕ ಅಧ್ಯಯನ, ಸೂಕ್ಷ್ಮಗ್ರಹಿಕೆ ಕೃತಿಯಲ್ಲಿ ಕಂಡುಬರುತ್ತದೆ ಉದಾ. ಒಂದು ಪದವನ್ನು ಗಮನಿಸಬಹುದು. ವೀಳ್ಯಪರಿಕರಗಳು-೧೩: ಎಲೆ, ಅಡಿಕೆ, ಸುಣ್ಣ, ಕಾಚು, ಲವಂಗ, ಏಲಕ್ಕಿ, ಜಾಯಿಕಾಯಿ, ಜಾಯಿಪತ್ರೆ, ಕಂಕೋಲ, ಕೇಸರಿ, ಕೊಬ್ಬರಿ, ಬಾದಾಮಿ, ಕರ್ಪೂರ. ಪ್ರತಿಯೊಂದು ಪದದ ವಿವರಣೆಗೂ ನಿಖರವಾದ ಆಧಾರಗಳು ಕೃತಿಯಲ್ಲಿವೆ.

ಸಂಸ್ಕೃತ ಕನ್ನಡ ವಿದ್ವತ್ಕವಿಪರಂಪರೆಗೆ ಅಭಿಮಾನಪೂರ್ವಕವಾಗಿ ಸಮರ್ಪಿತವಾದ 'ಕನ್ನಡ ಚಿತ್ರಕಾವ್ಯ' ಇವರ ಒಂದು ಮಹತ್ವದ ಕೃತಿ. ಚಿತ್ರಕಾವ್ಯದ ಸ್ವರೂಪ, ಇತಿಹಾಸದ ಬಗೆಗೆ ಶಾಸ್ತ್ರೀಯವೂ ವ್ಯಾಪಕವೂ ಸಮಗ್ರವೂ ಆದ ವಿವೇಚನೆ ಇಲ್ಲಿದೆ. ಈ ಕೃತಿಯ ಹಿಂದೆ ಅವರ ಹಲವು ವರ್ಷಗಳ ಅಧ್ಯಯನ, ಚಿಂತನ ಮತ್ತು ಸಂಶೋಧನೆಯ ಶ್ರಮವಿದೆ. ಚಿತ್ರಕಾವ್ಯದ ಅಭ್ಯಾಸ ಸುಲಭವಲ್ಲ. ಇದರ ಅಭ್ಯಾಸದ ಸಂದರ್ಭದಲ್ಲಿ ವಿಶಿಷ್ಟ ಮಾದರಿಗಳ ಸ್ವರೂಪ ತಿಳಿಯುವುದು ಒಂದು ಕಷ್ಟವಾದರೆ, ಪಾಠ ಮತ್ತು ಅರ್ಥಕ್ಲೇಶಗಳನ್ನು ಬಗೆಹರಿಸುವುದು ಇನ್ನೊಂದು ಕಷ್ಟ. ಅವರೇ ಹೇಳುವಂತೆ ಈ ರೀತಿಯ ಎಲ್ಲಾ ಕಷ್ಟಗಳನ್ನೂ ಇಷ್ಟದಿಂದಲೇ ಭರಿಸಿದ್ದಾರೆ. ಶಾಸ್ತ್ರಿಗಳ ವ್ಯಕ್ತಿತ್ವದ ವಿಶಿಷ್ಟತೆಯಿದು. 'ಕನ್ನಡ ಚಿತ್ರಕಾವ್ಯ' ಕೃತಿಯನ್ನು ಕೈಗೆತ್ತಿಕೊಂಡು ಒಮ್ಮೆ ಕಣ್ಣಾಡಿಸಿದರೆ ಕೃತಿರಚನೆಗೆ ಅವರು ಪಟ್ಟ ಶ್ರಮದ ಸ್ವರೂಪದ ಅರಿವಾಗುತ್ತದೆ. ಪ್ರತಿಯೊಂದು ಅಂಶಕ್ಕೂ ಆಧಾರಗಳನ್ನು ಹುಡುಕಿ ನೀಡುತ್ತಾ ಹೋಗುವ ಅವರ ವಿದ್ವತ್ತಿನ ಪರಿ ಬೆರಗನ್ನುಂಟುಮಾಡುತ್ತದೆ.

ಡಾ.ಶಾಸ್ತ್ರಿಗಳು ಸಂಪಾದಿಸಿದ ಕನ್ನಡ ಚೆನ್ನುಡಿ ಒಂದು ಅಪರೂಪದ ಕೃತಿ. ಇದೊಂದು ನೀತಿವಾಕ್ಯಗಳ ಸಂಪುಟ. ಚೆನ್ನುಡಿಗಳ ಚೆನ್ನಮಣಿ, ಕನ್ನ ಡ ಸುಭಾಷಿತಗಳ ರತ್ನಭಂಡಾರ. ೧೦ ವರ್ಷಗಳ ಕೆಲಸದ ಫಲವಿದು. ಕೃತಿಗೆ ಅವರು ಬರೆದ ಪೀಠಿಕೆ ಕನ್ನಡ ಸುಭಾಷಿತ ಗ್ರಂಥಗಳ ಸಾಹಿತ್ಯಚರಿತ್ರೆಯಾಗಿದೆ. ಸು. ೧೩೦ ಕೃತಿಗಳಿಂದ ಆಯ್ದುಕೊಂಡ, ೨೬೦೦ಂಕ್ಕೆ ಮೇಲ್ಪಟ್ಟು ನೀತಿಪದ್ಯಗಳನ್ನು ಅವುಗಳ ಅನುವಾದಸಹಿತ ಇಲ್ಲಿ ಸಂಯೋಜಿಸಿದೆ.

ಡಾ.ಶಾಸ್ತ್ರಿಯವರ ಸಂಪಾದಕತ್ವದಲ್ಲಿ ಹೊರಬಂದ 'ಕೇಶಿರಾಜ ವಿರಚಿತ ಶಬ್ದಮಣಿ ದರ್ಪಣಂ' ಇನ್ನೊಂದು ಗಮನೀಯ ಕೃತಿ. ಇದುವರೆಗೂ ಬಂದಿರುವ ಎಲ್ಲಾ ಪರಿಷ್ಕರಣ, ಅವುಗಳ ಕೆಲವು ಪುನರ್ಮುದ್ರಣಗಳನ್ನು ಗಮನಿಸಿ ಪ್ರಯೋಗಗಳನ್ನು ಒಳಗೊಂಡಂತೆ ಸೂತ್ರ ವೃತ್ತಿಗಳ ಪಾಠವಿಚಾರದಲ್ಲಿ ಸಂಪಾದಕೀಯ ವಿವರಣೆಗಳನ್ನು ನೀಡಿದ್ದಾರೆ. ಮಾತ್ರವಲ್ಲ, ಶಬ್ದಮಣಿದರ್ಪಣದಲ್ಲಿ ಎದುರಾಗುವ ಹಲವು ಸಮಸ್ಯೆಗಳಿಗೆ ತಮ್ಮ ದೀರ್ಘವಾದ ಉಪೋದ್ಘಾತದಲ್ಲಿ ಉತ್ತರಿಸಿದ್ದಾರೆ. ಪ್ರಾಚೀನ ಕನ್ನಡ ವ್ಯಾಕರಣದ ಬಗೆಗೆ ಅವರಿಗಿರುವ ಆತ್ಮೀಯತೆ ಆದರಭಾವಕ್ಕೆ ಈ ಕೃತಿಯೇ ಸಾಕ್ಷಿ. ಅವರ ಕೃತಿಗಳನ್ನು ಗಮನಿಸುತ್ತಾ ಬಂದರೆ ಒಂದು ಅಂಶ ಸ್ಪಷ್ಟವಾಗುತ್ತದೆ. ಅವರೇ ಹೇಳುವಂತೆ "ನನ್ನ ಸಾಹಿತ್ಯಕೃಷಿ ವಿಶೇಷವಾಗಿ ಪ್ರಾಚೀನ ಕನ್ನಡ ಕಾವ್ಯ ಮತ್ತು ಶಾಸ್ತ್ರಗಳ

ಕ್ಷೇತ್ರಗಳಿಗೆ ಸಂಬಂಧಿಸಿದ್ದಾಗಿದೆ." ಇತ್ತೀಚೆಗೆ ಅವರ ಸ್ನೇಹಿತರು ವಿದ್ಯಾರ್ಥಿಗಳು, ಅಭಿಮಾನಿಗಳು ಅವರಿಗೆ ಸಮರ್ಪಿಸಿದ ಅಭಿನಂದನಗ್ರಂಥ 'ಶ್ರೀಮುಖ' ಅವರ ಬದುಕಿನ ಸಾಧನೆಯ ಮೆಟ್ಟಿಲುಗಳನ್ನು ಸುಂದರವಾಗಿ ಗುರುತಿಸುತ್ತದೆ. ಇದಕ್ಕಿಂತಲೂ ಮಿಗಿಲಾಗಿ ಇದರಲ್ಲಿರುವ ಅವರ ಅಪ್ರಕಟಿತ ಲೇಖನಗಳು ಸಾಹಿತ್ಯಚರಿತ್ರೆಯ ದೃಷ್ಟಿಯಿಂದ ಮಹತ್ವದವು. "ಯಾವುದೇ ವಿಷಯವನ್ನು ನಿಷ್ಕೃಷ್ಟವಾಗಿ ತಿಳಿದವನು, ತಿಳಿಸಬಲ್ಲವನು ವಿದ್ವಾಂಸ" ಎಂಬ ರೂಢಿಗೆ ಅರ್ಥ ಸಂಪೂರ್ಣ ಹೊಂದಿಕೆಯಾಗುವ ಅಪರೂಪದ ವ್ಯಕ್ತಿ ಇವರೆಂದರೆ ಉತ್ಪ್ರೇಕ್ಷೆಯಲ್ಲ. ಆದ್ದರಿಂದಲೇ ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸುವ ಕನ್ನಡ ನಿಘಂಟಿನ ಪ್ರಧಾನಸಂಪಾದಕರಾಗಿ ನೇಮಕಗೊಂಡ ಗೌರವ ಅವರದು. ಕನ್ನಡ ಅಧ್ಯಯನಸಂಸ್ಥೆ ಪ್ರಕಟಿಸಿದ ಕನ್ನಡ ಸಾಹಿತ್ಯಚರಿತ್ರೆಯ ಸಂಪುಟಗಳು ಹೊರಬರುವಲ್ಲಿ ಡಾ.ಶಾಸ್ತ್ರಿಗಳ ಶ್ರಮವಿರುವುದು ಉಲ್ಲೇಖನೀಯ.

ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿಯವರ ಪಾಂಡಿತ್ಯ, ಪ್ರತಿಭೆ, ಸಂಶೋಧನೆ, ಸಾಹಿತ್ಯ ಸೇವೆಯನ್ನು ಹುಡುಕಿಕೊಂಡು ಬಂದ ಪ್ರಶಸ್ತಿಗಳು ಹಲವು. ಕರ್ನಾಟಕ ಸರ್ಕಾರದ ರಾಜ್ಯಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಶ್ರೇಷ್ಠ ಸೃಜನೇತರ ಸಾಹಿತ್ಯ ಪ್ರಶಸ್ತಿ, ಮೈಸೂರು ವಿಶ್ವವಿದ್ಯಾನಿಲಯದ ಸುವರ್ಣ ಮಹೋತ್ಸವ ಪ್ರಶಸ್ತಿ, ತೀನಂ ಶ್ರೀಕಂಠಯ್ಯ ಸ್ಮಾರಕ ಬಹುಮಾನ, ಕನ್ನಡ ಸಾಹಿತ್ಯ ಪರಿಷತ್ತಿನ ವಜ್ರಮಹೋತ್ಸವ ಪ್ರಶಸ್ತಿ, ಐಬಿಎಚ್ ಶಿಕ್ಷಣ ಟ್ರಸ್ಟ್ ಪ್ರಶಸ್ತಿ, ದೇವರಾಜ ಬಹದ್ದೂರ್ ಪ್ರಶಸ್ತಿ, ಗ್ರಂಥಲೋಕದ ವರ್ಷದ ಲೇಖಕ ಪ್ರಶಸ್ತಿ ಮೊದಲಾದ ಹಲವು ಪ್ರಶಸ್ತಿಗಳು, ಬಹುಮಾನಗಳು ಬಂದಿವೆ. ಜೈನ ಮತ್ತು ವೈದಿಕ ಗುರುಪೀಠಗಳಿಂದಲೂ ಸಾರ್ವಜನಿಕ ಸಂಘ ಸಂಸ್ಥೆಗಳಿಂದಲೂ ಮನ್ನಣೆ ಪಡೆದಿದ್ದಾರೆ. ಇದೀಗ ಅವರಿಗೆ ಸಲ್ಲುತ್ತಿರುವ 'ಸೇಡಿಯಾಪು ಪ್ರಶಸ್ತಿ' ವಿದ್ವತ್ತಿಗೆ ಸಲ್ಲುವ ಮನ್ನಣೆ; ಅವರಿಗೆ ಬಂದಿರುವ ಪ್ರಶಸ್ತಿಗಳಿಗೆಲ್ಲ ಕಳಶಪ್ರಾಯವಾದುದು.

ಡಾ.ವೆಂಕಟಾಚಲ ಶಾಸ್ತ್ರೀ ಇವರದು ತೃಪ್ತಿಕರ ಸಾಂಸಾರಿಕ ಬದುಕು. ಪತ್ನಿ ಶ್ರೀಮತಿ ಲಕ್ಷ್ಮೀ ಸೌಜನ್ಯದ ಮೂರ್ತಿ. ಮೂವರು ಹೆಣ್ಣುಮಕ್ಕಳು. ಒಬ್ಬ ಗಂಡು ಮಗ. ತಂದೆಯ ಸಾಹಿತ್ಯದ ಕೃಷಿಯಲ್ಲಿ ಇವರೆಲ್ಲರಿಗೂ ಅಭಿರುಚಿ, ಆಸಕ್ತಿ, ಅಭಿಮಾನ.

ಡಾ.ಶಾಸ್ತ್ರಿಗಳ ಸಜ್ಜನಿಕೆ, ಜ್ಞಾನಸಂಪತ್ತು ನನ್ನನ್ನು ವಿದ್ಯಾರ್ಥಿದೆಸೆಯಿಂದಲೇ ಆಕರ್ಷಿಸಿತ್ತು. ನಾನು ನನ್ನ ಎಂ.ಎ. ಪರೀಕ್ಷೆಗಳನ್ನು ಮುಗಿಸಿ ಊರಿಗೆ ಹೊರಡುವ ತಯಾರಿಯಲ್ಲಿದ್ದೆ. ಅವರ ಕೊಠಡಿಗೆ ಹೋಗಿ ಊರಿಗೆ ಹೊರಡುತ್ತಿರುವುದಾಗಿ ತಿಳಿಸಿದೆ. ಒಂದು ಕ್ಷಣ ಮೌನವಾಗಿದ್ದ ಅವರು, "ನೀನು ಪಿಎಚ್.ಡಿ ಮಾಡುವುದಿದ್ದರೆ ನಾನು ಮಾರ್ಗದರ್ಶಕನಾಗುತ್ತೇನೆ" ಎಂದು ತಟ್ಟನೆ ಹೇಳಿದರು. ೧೯೮೭ರಲ್ಲಿ ನಾನು ಒಪ್ಪೊತ್ತಿನ ವಿದ್ಯಾರ್ಥಿಯಾಗಿ ಅವರ ಮಾರ್ಗದರ್ಶನದಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಡಾಕ್ಟರೇಟ್ ಪದವಿಗೆ ಹೆಸರು ನೋಂದಾಯಿಸಿದೆ. ಡಾ.ಶಾಸ್ತ್ರಿಗಳು ನನ್ನ ಮಾರ್ಗದರ್ಶಕರೆಂದು ತಿಳಿದು ಮಿತ್ರರಿಗೆ ಆಶ್ಚರ್ಯ. "ಶಾಸ್ತ್ರಿಗಳು ಸಖತ್ತಾಗಿ ಕೆಲಸ ಮಾಡಿಸುತ್ತಾರೆ. ಅವರಿಗೆ ಸಮ್ಮತವಾಗುವಂತೆ ಬರೆಯುವುದು ಸುಲಭವಲ್ಲ" ಎಂದು ಹೆದರಿಸಿದರು.

ಇದರಿಂದ ನಾನೇನೂ ವಿಚಲಿತನಾಗಲಿಲ್ಲ. ಅವರು ಮಾರ್ಗದರ್ಶಕರಾಗಲು ಒಪ್ಪಿದ್ದು ನನ್ನ ಅದೃಷ್ಟವೆಂದೇ ಭಾವಿಸಿದ್ದೆ. ಅದರಲ್ಲಿಯೂ ಒಪ್ಪೊತ್ತಿನ ವಿದ್ಯಾರ್ಥಿಗಳದು ಹಲವು ಸಮಸ್ಯೆಗಳು. ವಿದ್ಯಾರ್ಥಿಗಳು ಬರೆದು ಕಳಿಸಿದ ಬರಹವನ್ನು ಮಾರ್ಗದರ್ಶಕರು ನೋಡಿರುವುದಿಲ್ಲ. ನೋಡಿದ್ದರೂ ನಾವು ಹೋದಾಗ ಅವರು ಇರುವುದಿಲ್ಲ. ಇದ್ದರೂ ನಮ್ಮಲ್ಲಿ ಮಾತಾಡುವುದಕ್ಕೆ, ಚರ್ಚಿಸುವುದಕ್ಕೆ ಬಿಡುವಿರುವುದಿಲ್ಲ. ಪೂರ್ಣಾವಧಿ ವಿದ್ಯಾರ್ಥಿಗಳಿಗೂ ಈ ಸಮಸ್ಯೆಗಳು ಇದ್ದೇ ಇವೆ. ಆದರೆ ನನ್ನ ಪಾಲಿಗೆ ಈ ಯಾವುದೇ ಸಮಸ್ಯೆಗಳು ಎದುರಾಗಲಿಲ್ಲ. ಏಕೆಂದರೆ ಸಮಯಪಾಲನೆ ಶಾಸ್ತ್ರಿಗಳ ಬಹುದೊಡ್ಡ ಗುಣ. ನಾನು ಅಂಚೆಯಲ್ಲಿ ಕಳಿಸಿದ ಬರಹವನ್ನು ಅಚ್ಚುಕಟ್ಟಾಗಿ ತಿದ್ದಿ ಅಲ್ಲಲ್ಲಿ ಸಲಹೆ ಸೂಚನೆಗಳನ್ನು ಬರೆದಿರುತ್ತಿದ್ದರು. ಪರಾಮರ್ಶನಕ್ಕೆ ಅಗತ್ಯವಿರುವ ಗ್ರಂಥಗಳನ್ನು ಅವರೇ ನೀಡುತ್ತಿದ್ದರು. ಮಾತ್ರವಲ್ಲ, ತಮ್ಮ ಕುಟುಂಬದ ಒರ್ವ ಸದಸ್ಯನಂತೆ ನಡೆಸಿ ಕೊಂಡಿದ್ದು ನನ್ನ ನೆನಪಿನಲ್ಲಿ ಸದಾ ಹಸಿರು. ಹೀಗಾಗಿ ಶಾಸ್ತ್ರಿಗಳಂತಹ ಸರಳ ಮನಸ್ಸಿನ ಸುಸಂಸ್ಕೃತ ಮಾರ್ಗದರ್ಶಕರು ಸಿಗುವುದು ಸುಲಭವಲ್ಲ. ಈ ಹಿನ್ನೆಲೆಯಲ್ಲಿ ಡಾ. ಶಾಸ್ತ್ರಿಗಳು ನನ್ನ ಗುರುಗಳು, ಮಾರ್ಗದರ್ಶಕರು ಎಂಬುದು ನನಗೆ ಅಭಿಮಾನದ ವಿಷಯ.

ಡಾ.ಶಾಸ್ತ್ರಿಗಳದು ಸದಾ ಸಂಶೋಧನಾತ್ಮಕ ಮನಸ್ಸು. ಪ್ರತಿಯೊಂದನ್ನೂ ಸೂಕ್ಷ್ಮ ವಾಗಿ ಗಮನಿಸುವುದು ಅವರ ಗುಣ. ಹಳಗನ್ನಡಕಾವ್ಯಗಳಲ್ಲಿ ಪ್ರಕ್ಷಿಪ್ತವಾಗಿರುವ, ಅರ್ಥಸ್ಪಷ್ಟತೆಯಿಲ್ಲದ ಹಲವು ಪದ ವಾಕ್ಯಗಳ ಬಗೆಗೆ ಅವರು ತಮ್ಮ ಲೇಖನಗಳಲ್ಲಿ ಚರ್ಚಿಸಿದ್ದಾರೆ.

ಒಟ್ಟಿನಲ್ಲಿ ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರೀ ಇವರದು ನಿರಂತರ ಹುಡುಕಾಟದ ಮನಸ್ಸು. ತಲಸ್ಪರ್ಶಿ ಅಧ್ಯಯನ ಅವರ ಗುಣ. ಅವರ ಗ್ರಂಥಗಳು ಅನರ್ಘ್ಯರತ್ನಗಳು. ವಿದ್ವತ್ತು, ಪ್ರತಿಭೆ, ಅಧ್ಯಯನ ಅವರ ವ್ಯಕ್ತಿತ್ವದಲ್ಲಿ ಸಮನ್ವಯಗೊಂಡಿದೆ. ಅಪಾರ ಅನುಭವ, ಪಕ್ವಗೊಂಡ ಮನಸ್ಸು, ಮಾಗಿದ ವ್ಯಕ್ತಿತ್ವ ಅವರದು. ಇಂತಹ ಸುಸಂಸ್ಕೃತ ಸಜ್ಜನ ಪ್ರತಿಭಾಸಂಪನ್ನ ವ್ಯಕ್ತಿಗೆ ಈ ವರ್ಷದ ಸೇಡಿಯಾಪು ಪ್ರಶಸ್ತಿ ಬಂದಿರುವುದು ಅವರ ಅಭಿಮಾನಿಗಳೆಲ್ಲರಿಗೂ ಹೆಮ್ಮೆ ಮತ್ತು ಅಭಿಮಾನದ ವಿಷಯ. 'ಸಂಶೋಧನ ಸಾಧಕ' ಸೇಡಿಯಾಪು ಹೆಸರಿನಲ್ಲಿರುವ ಪ್ರಶಸ್ತಿ 'ಸಂಶೋಧನ ತಪಸ್ವಿ' ಡಾ.ಟಿ.ವಿ. ವೆಂಕಟಾಚಲ ಶಾಸ್ತ್ರೀ ಇವರಿಗೆ ಸಲ್ಲುತ್ತಿರುವುದು ಗಮನೀಯ ಅಂಶ. ಡಾ.ಶಾಸ್ತ್ರಿಗಳಿಗೆ ಬಂದಿರುವ ಪ್ರಶಸ್ತಿಗಳಲ್ಲೆಲ್ಲ ಇದು ಉನ್ನತವಾದುದು. ತಿಲಕಪ್ರಾಯವಾದುದು.*

---

* ಉದಯವಾಣಿ, ೦೭.೦೬.೧೯೯೮

ಗ್ರಂಥಸಂಪಾದನೆ : ಟಿ.ವಿ.ವಿ. ಅವರ ಸಾಧನೆ

ಎಸ್.ಎಸ್.ಅಂಗಡಿ

೧

ಆಧುನಿಕಪೂರ್ವಸಾಹಿತ್ಯ, ಭಾಷಾಚರಿತ್ರೆ, ವ್ಯಾಕರಣ, ಛಂದಸ್ಸು, ಕೋಶರಚನೆ ಮುಂತಾದ ಸಾಹಿತ್ಯ ಪ್ರಕಾರಗಳಲ್ಲಿ ಕಾರ್ಯ ನಿರತರಾದವರಿಗೆ ಕವಿಕೃತಿಯ ಒಪ್ಪಿತಪಾಠದ ಅವಶ್ಯಕತೆ ಎಷ್ಟಿದೆ ಎಂಬುದು ವಿದ್ವಾಂಸರು ತಿಳಿದಿರುವ ವಿಷಯ. ನಮ್ಮ ಪೂರ್ವ ಸಾಹಿತ್ಯ ಸಂಪತ್ತು ಬಹುಮಟ್ಟಿಗೆ ಓಲೆಗರಿ ಮತ್ತು ಕಾಗದ ಪ್ರತಿಗಳಲ್ಲಿ ಉಳಿದುಕೊಂಡು ಬಂದಿದೆ. ಈ ಹಸ್ತಪ್ರತಿಗಳಲ್ಲಿ ಅನೇಕ ಕಾರಣಗಳಿಂದ ಮೂಲಪ್ರತಿಯ ಪಾಠವು ಕೆಟ್ಟು ಹೋಗಿರುವುದೂ ಅನೇಕ ಪಾಠಾಂತರಗಳಿರುವುದೂ ಬಹುಮಟ್ಟಿಗೆ ಕಂಡುಬರುತ್ತದೆ. ಆದ್ದರಿಂದ ಗ್ರಂಥಸಂಪಾದಕನು ಹಸ್ತಪ್ರತಿಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿ ಕವಿಕೃತಿಗೆ ಹತ್ತಿರವಾದ ಪಾಠವನ್ನು ಒದಗಿಸಿಕೊಡಲು ಸರ್ವಪ್ರಯತ್ನ ಮಾಡಬೇಕಾಗುತ್ತದೆ. ಈ ರೀತಿ ಪಾಠಪರಿಷ್ಕರಣದ ಮೂಲಕ ಕವಿಕೃತಿಯ ಮೂಲಪಾಠವನ್ನು ನಿಷ್ಕರಿಸುವುದಕ್ಕೆ 'ಗ್ರಂಥಸಂಪಾದನೆ' ಎಂದು ಹೇಳಬಹುದು. ಕನ್ನಡ ಗ್ರಂಥಸಂಪಾದನೆಯ ರಚನೆಗೆ ಶತಮಾನದ ಚರಿತ್ರೆಯಿದೆ. ಅದು ತನ್ನದೇ ಆದಂತಹ ವೈಧಾನಿಕತೆಯನ್ನು ರೂಢಿಸಿ ಕೊಂಡು ಒಂದು ಶಾಸ್ತ್ರವಾಗಿ ಪರಿಣಮಿಸಿದೆ.

ಕನ್ನಡ ಗ್ರಂಥಸಂಪಾದನೆಯ ಆರಂಭಹಂತದ ಸಂಪಾದಕರಾದ ಹರ್ಮನ್ ಮೋಗ್ಲಿಂಗ್, ಎಫ್.ಕಿಟ್ಟೆಲ್, ಬಿ.ಎಲ್.ರೈಸ್, ಆರ್.ನರಸಿಂಹಾಚಾರ್, ಎಸ್.ಜಿ. ನರಸಿಂಹಾಚಾರ್, ಎಂ.ಎ.ರಾಮಾನುಜಯ್ಯಂಗಾರ್, ಬಿ.ಮಲ್ಲಪ್ಪ ಮೊದಲಾದ ವಿದ್ವಾಂಸರು ಸಂಪಾದನೆಯ ಕ್ಷೇತ್ರಕ್ಕೆ ಅಪಾರಸೇವೆ ಸಲ್ಲಿಸಿದ್ದಾರೆ. ನಿಜ. ಆದರೆ ಈ ವಿದ್ವಾಂಸರು ಪಾಠಪರಿಷ್ಕರಣ, ಪಾಠಸಂಕಲನದ ಕಡೆಗೆ ಹೆಚ್ಚು ಗಮನ ಕೊಡಲಿಲ್ಲ. ಅನಾಥಸ್ಥಿತಿಯಲ್ಲಿದ್ದ ಪ್ರಾಚೀನಗ್ರಂಥಗಳನ್ನು ತ್ವರಿತವಾಗಿ ಬೆಳಕಿಗೆ ತರುವ ಏಕೈಕ ಉದ್ದೇಶದಿಂದ ಅವರ ಸಂಪಾದನೆ ಸಾಗಿತ್ತು. ಹೀಗಾಗಿ ಅವರ ಸಂಪಾದಿತಕೃತಿಗಳಲ್ಲಿ ಪಾಠಸಮಸ್ಯೆ, ಅಕ್ಷರಸ್ಖಾಲಿತ್ಯಗಳು ಹೇರಳವಾಗಿ ಕಂಡುಬರುತ್ತವೆ. ಸಂಪಾದನೆಯ ಆರಂಭಘಟ್ಟದ ಆ ವಿದ್ವಾಂಸರು ಗ್ರಂಥಸಂಪಾದನೆಗೆ ತಮ್ಮದೇ ಆದ ಪರಿಸರವನ್ನು ಸಿದ್ಧಪಡಿಸಿ, ಆ ಕ್ಷೇತ್ರಕ್ಕೆ ಅಡಿರಚನೆ ಹಾಕಿ ಮುಂದಿನವರಿಗೆ ಮಾರ್ಗದರ್ಶಕರಾದರು.

ಮೊದಲ ಪೀಳಿಗೆಯ ಆ ಗ್ರಂಥಸಂಪಾದಕರ ಅನಂತರ ಸಂಪಾದನೆಯ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಿರುವವರಲ್ಲಿ ಟಿ.ಎಸ್.ವೆಂಕಣ್ಣಯ್ಯ, ಎ.ಆರ್.ಕೃಷ್ಣಶಾಸ್ತ್ರೀ, ಕೆ.ಜಿ.ಕುಂದಣಗಾರ, ಶಿ.ಶಿ.ಬಸವನಾಳ, ತೀ.ನಂ.ಶ್ರೀಕಂಠಯ್ಯ, ಡಿ.ಎಲ್.ನರಸಿಂಹಾಚಾರ್, ಎಲ್.ಬಸವರಾಜು ಇವರು ಅಗ್ರಮಾನ್ಯರು. ಕವಿಹೃದಯವನ್ನು ತಿಳಿಯಬಲ್ಲ ಸಹೃದಯತೆ, ಕವಿಪ್ರಯೋಗವನ್ನು ಅರ್ಥಯಿಸಬಲ್ಲ ಪಾಂಡಿತ್ಯ, ಪಾಠಾಂತರಗಳನ್ನು ಆಯ್ದುಕೊಂಡು ಸಂದೇಹಕ್ಕೆ ಅವಕಾಶವಿರುವ ಕಡೆ ಕೊಡುವ ವಿಚಕ್ಷಣತೆ ಇವೇ ಮೊದಲಾದ ಗ್ರಂಥಸಂಪಾದನೆ ಕಾರ್ಯವನ್ನು ನಿರ್ವಹಿಸುವುದಕ್ಕೆ ಬೇಕಾದ ಎಲ್ಲ ಸಾಮರ್ಥ್ಯಗಳೂ ಅವರಲ್ಲಿದ್ದುವು.

ಮೊದಲ ಮತ್ತು ಎರಡನೆಯ ಪೀಳಿಗೆಯ ಗ್ರಂಥಸಂಪಾದಕರ ನಂತರ ಆ ಕಾರ್ಯವನ್ನು ಯಶಸ್ವಿಯಾಗಿ ಮುನ್ನಡೆಸಿದವರ ಪಂಕ್ತಿಯಲ್ಲಿ ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರೀ ಅವರು ಕಾಣಿಸುತ್ತಾರೆ. ಕನ್ನಡದಲ್ಲಿ ಅತ್ಯಂತ ನಿರ್ದುಷ್ಟವಾದ ತಿಳವಳಿಕೆ, ಸಂಸ್ಕೃತ, ತೆಲುಗುಗಳಲ್ಲಿ ಆಳವಾದ ಜ್ಞಾನ, ಡಿ.ಎಲ್.ಎನ್.ಅವರಂತಹ ಉನ್ನತ ವಿದ್ವಾಂಸರ ಸಹವಾಸ, ವ್ಯಾಕರಣ ಛಂದಸ್ಸುಗಳ ತಲಸ್ಪರ್ಶಿಯಾದ ಅಧ್ಯಯನ, ವೈಜ್ಞಾನಿಕ ದೃಷ್ಟಿ ಹಾಗೂ ಪಾಂಡಿತ್ಯಕ್ಕೆ ಬೇಕಾದ ಸಂಯಮ ಇವು ಶಾಸ್ತ್ರೀ ಅವರಲ್ಲಿ ಹೆಪ್ಪುಗಟ್ಟಿರುವುದರಿಂದ ಪ್ರಾಚೀನ ಕೃತಿಗಳನ್ನು ಶಾಸ್ತ್ರೀಯವಾಗಿ ಪರಿಷ್ಕರಿಸಲು, ಪಾಠ ನಿಷ್ಕರ್ಷಿಸಲು ಅವರಿಗೆ ಸಾಧ್ಯವಾಯಿತು. ಈ ಕ್ಷೇತ್ರದಲ್ಲಿ ಅವರ ಸಾಧನೆಯನ್ನು ಮೂರು ರೀತಿಯಾಗಿ ವಿಂಗಡಿಸಬಹುದು.

೧. ಕೃತಿಗಳ ಪರಿಷ್ಕರಣ ಮತ್ತು ಸಂಪಾದನೆ

೨. ಪಾಠನಿಷ್ಕರ್ಷೆ

೩. ಶಬ್ದಾರ್ಥವಿವೇಚನೆ

ವೆಂಕಟಾಚಲ ಶಾಸ್ತ್ರೀ ಅವರ ಗ್ರಂಥಸಂಪಾದನೆಯ ವೈಶಿಷ್ಟ್ಯವೆಂದರೆ ಹೆಚ್ಚಿನ ಮಾತೃಕೆಗಳ ಪ್ರಯೋಜನವನ್ನು ಪಡೆದುಕೊಂಡು ಮೊದಲ ಪೀಳಿಗೆಯ ಸಂಪಾದಕರು ಸಂಪಾದಿಸಿದ ಕೃತಿಗಳನ್ನು ಪರಿಷ್ಕರಿಸಿ, ಪಾಠಕ್ಲೇಶಗಳನ್ನು ನಿವಾರಿಸಿ ಅವುಗಳಿಗೆ ಉನ್ನತ ವಿಮರ್ಶೆಯ ಪೀಠಿಕೆಗಳನ್ನು ಸೇರಿಸಿರುವುದು ಅವರ ಸಂಪಾದನೆಯಲ್ಲಿ ಕಂಡುಬರುತ್ತದೆ. ಪಠ್ಯಸಂಪಾದನೆಯ ಜೊತೆಗೆ ಪಠ್ಯದಲ್ಲಿ ಏನಿದೆ ಎಂಬುದರ ಹುಡುಕಾಟ ಅವರಿಗೆ ಮುಖ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ಶಾಸ್ತ್ರಿಗಳು ಪರಿಷ್ಕರಿಸಿದ 'ಆದಿಪುರಾಣ', 'ಶಬ್ದಮಣಿದರ್ಪಣ' ಮತ್ತು 'ಮುದ್ರಾಮಂಜೂಷ' ಕೃತಿಗಳ ವೈಧಾನಿಕತೆಯನ್ನು ಪರಿಶೀಲಿಸಬಹುದಾಗಿದೆ.

'ಆದಿಪುರಾಣ'ವನ್ನು ಮೊದಲಬಾರಿಗೆ ಸಮಗ್ರವಾಗಿ ಸಂಪಾದಿಸಿ, ಪ್ರಕಟಿಸಿದ ಕೀರ್ತಿ ಎಸ್.ಜಿ.ನರಸಿಂಹಾಚಾರ್ಯರಿಗೆ ಸಲ್ಲುತ್ತದೆ(೧೯೦೦). ಎಸ್.ಜಿ.ಎನ್. ಅವರು

ಸಂಪಾದನೆಯ ಕಾರ್ಯಕ್ಕೆ ನಾಲ್ಕು ಹಸ್ತಪ್ರತಿಗಳನ್ನು ಅವಲಂಬಿಸಿದ್ದಾರೆ. ಶ್ರವಣಬೆಳಗೊಳ ಜೈನಮಠದ ಒಂದು ಪ್ರತಿಯನ್ನು ಆಧಾರವಾಗಿಟ್ಟುಕೊಂಡು ಮಿಕ್ಕವುಗಳನ್ನು ಪಾಠಾಂತರ ಗಳಲ್ಲಿ ತೋರಿಸಿದ್ದಾರೆ. ಪಂಪಕವಿಯ ಕಾಲ, ದೇಶ, ಪರಿಸರ ಹಾಗೂ ಕಾವ್ಯವಿಮರ್ಶೆ ಕುರಿತು ಅಭ್ಯಾಸಪೂರ್ಣ ಪ್ರಸ್ತಾವನೆಯಿದೆ. ಅನೇಕ ಕಡೆ ಗ್ರಂಥಪಾಠಗಳಲ್ಲಿ ಪಾಠಕ್ಲೇಶ ಗಳು, ಅಕ್ಷರಸ್ಖಾಲಿತ್ಯಗಳು ಹೇರಳವಾಗಿವೆ. ಇದು ಆದಿಪುರಾಣದ ಪ್ರಥಮ ಆವೃತ್ತಿ ಯಾಗಿರುವುದರಿಂದ ಕೆಲವು ಕೊರತೆಗಳಿರುವುದು ಸಹಜ. ಎಸ್.ಜಿ.ಎನ್. ಆವೃತ್ತಿಯು ನಂತರ ಆದಿಪುರಾಣದ ಸಂಪಾದಕರಾದ ಕೆ.ಜಿ.ಕುಂದಣಗಾರ, ಎಲ್.ಗುಂಡಪ್ಪ, ಎಲ್. ಬಸವರಾಜು ಅವರ ಪರಿಷ್ಕರಣಗಳಿಗೆ ಆಧಾರವಾಯಿತು ಎಂಬುದು ಉಲ್ಲೇಖನೀಯ. ಈಗ ದುರ್ಲಭವಿರುವ ಎಸ್.ಜಿ.ಎನ್. ಆವೃತ್ತಿಯನ್ನು ಶಾಸ್ತ್ರೀ ಅವರು ಶಾಸ್ತ್ರೀಯವಾಗಿ ಪರಿಷ್ಕರಿಸಿ ಸಂಪಾದಿಸಿದ್ದಾರೆ(೧೯೭೫). ಅದು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶ ನಾಲಯದ 'ಜನಪ್ರಿಯ ಪ್ರಾಚೀನ ಸಾಹಿತ್ಯಮಾಲೆ'ಯ ಐದನೆಯ ಕೃತಿಯಾಗಿ ಪ್ರಕಟ ವಾಗಿದೆ.

ಆದಿಪುರಾಣ ಪರಿಷ್ಕರಣೆಯಲ್ಲಿ ಶಾಸ್ತ್ರೀ ಅವರು ಅನುಸರಿಸಿದ ವಿಧಾನಗಳನ್ನು ಸಂಗ್ರಹವಾಗಿ ಹೇಳುವುದಾದರೆ ಎಸ್.ಜಿ.ಎನ್. ಆವೃತ್ತಿಯಲ್ಲಿ ಪ್ರತಿಕಾರರ ಸ್ಖಾಲಿತ್ಯ ಗಳಿಂದ ಉಂಟಾದ ಪಾಠದೋಷಗಳನ್ನು ಹಾಗೂ ಪಾಠಸಮಸ್ಯೆಗಳಲ್ಲಿ ಉಂಟಾದ ತೊಡಕುಗಳನ್ನು ಕೆಲಮಟ್ಟಿಗಾದರೂ ಪರಿಹರಿಸಿದ್ದಾರೆ. ಕೆಲವು ತೊಡಕುಗಳ ಪರಿಹಾರಕ್ಕಾಗಿ ಹೆಚ್ಚಿನ ಶೋಧ ಅಗತ್ಯವೆಂದು ಸೂಚಿಸಿದ್ದಾರೆ. ಆದಿಪುರಾಣದ ಕೆಲವು ಪದ್ಯಗಳ ಕವಿಪಾಠನಿಷ್ಕರ್ಷೆಯ ಬಗ್ಗೆ ಚರ್ಚಿಸಿದ್ದಾರೆ. ಎಸ್.ಜಿ.ಎನ್. ಅವರು ಒಪ್ಪಿರುವ ಪಾಠವನ್ನೇ ಸಾಮಾನ್ಯವಾಗಿ ಒಪ್ಪಿ ಮುದ್ರಿಸಿದೆ. ಅವಶ್ಯವೆಂದು ತೋರಿದ ಕಡೆಗಳಲ್ಲಿ ಇತರ ಪರಿಷ್ಕರಣಗಳನ್ನೂ ಪೂರ್ವಪುರಾಣದಂತಹ ಅನ್ಯಕೃತಿಗಳನ್ನೂ ಊಹಾತ್ಮಕಪರಿಷ್ಕರಣದಿಂದ ತಿದ್ದುಪಡಿ ಮಾಡಿದ್ದಾರೆ. ಅಂತಹ ಸಂದರ್ಭದಲ್ಲಿ ಎಸ್.ಜಿ.ಎನ್. ಅವರ ಪಾಠವನ್ನು ಗ್ರಂಥದ ಅಡಿಯಲ್ಲಿ ತೋರಿಸಿದ್ದಾರೆ. ಓದುಗರಿಗೆ ಸಹಾಯಕವಾಗುವಂತೆ ಅರ್ಥಕೋಶ, ಜೈನ ಪಾರಿಭಾಷಿಕಶಬ್ದಸಂಗ್ರಹ, ಪದ್ಯಗಳ ಅಕಾರಾದಿಸೂಚಿ ಮತ್ತು ಅಭ್ಯಾಸಸೂಚಿಗಳೆಂಬ ನಾಲ್ಕು ಅನುಬಂಧಗಳಿವೆ.

ಹಳಗನ್ನಡ ವ್ಯಾಕರಣ ಗ್ರಂಥಗಳಲ್ಲಿ 'ಶಬ್ದಮಣಿದರ್ಪಣ' ಶ್ರೇಷ್ಠವಾದುದು. ಅದು ಹೆಚ್ಚಿನ ವಿಮರ್ಶೆಗೆ, ಪರಿಷ್ಕರಣಕ್ಕೆ ಗುರಿಯಾದುದು ಅದರ ವಿದ್ವಜ್ಜನಪ್ರೀತಿಗೆ ಸಾಕ್ಷಿ. ಇದೇ ಗ್ರಂಥ ೧೯೭೪ರಲ್ಲಿ ವೆಂಕಟಾಚಲ ಶಾಸ್ತ್ರೀ ಅವರಿಂದ ಪರಿಷ್ಕರಣಗೊಂಡು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಜನಪ್ರಿಯ ಸಾಹಿತ್ಯಮಾಲೆಯ ಒಂದನೆಯ ಗ್ರಂಥವಾಗಿ ಪ್ರಕಟವಾಯಿತು. ಶಾಸ್ತ್ರೀ ಅವರು ಡಿ.ಎಲ್.ಎನ್. ಆವೃತ್ತಿಯನ್ನು ಆಧಾರ ವಾಗಿಟ್ಟುಕೊಂಡು ಅಗತ್ಯವೆಂದು ತೋರಿದ ಕಡೆಗಳಲ್ಲಿ ಮಿಕ್ಕ ಪರಿಷ್ಕರಣಗಳ ನೆರವು

ಪಡೆದು ಶಾಸ್ತ್ರೀಯವಾಗಿ ಪರಿಷ್ಕರಿಸಿದ್ದಾರೆ. ಆ ಪರಿಷ್ಕೃತಪಠ್ಯದಲ್ಲಿ ಶಾಸ್ತ್ರೀ ಅವರು ಅನುಸರಿಸಿದ ಕ್ರಮಗಳು. ೧. ಆಕರಗಳು ದೊರೆಯುವಂತಿದ್ದರೆ ಅಂತಹ ಕಡೆ ಪ್ರಯೋಗ ಗಳನ್ನು ಅವುಗಳ ಮೂಲದೊಂದಿಗೆ ಹೋಲಿಸಿ ಶುದ್ಧಪಾಠವನ್ನು ಗೊತ್ತು ಮಾಡಿದ್ದಾರೆ. ೨. ಸೂತ್ರ, ವೃತ್ತಿ, ಪ್ರಯೋಗಗಳಲ್ಲಿ ಗಮನಾರ್ಹವಾದ ಪಾಠವ್ಯತ್ಯಾಸಗಳಿದ್ದರೆ ಸಮರ್ಪಕವಾಗಿ ತಿದ್ದಿದ್ದಾರೆ. ವ್ಯಾಕರಣಸಮಸ್ಯೆಗಳಿದ್ದರೆ ಅಡಿಟಿಪ್ಪಣಿಯಲ್ಲಿ ಸಂಕ್ಷಿಪ್ತ ವಾಗಿ ಚರ್ಚಿಸಿದ್ದಾರೆ. ಅಭ್ಯಾಸಪೂರ್ಣವಾದ ಉಪೋದ್ಘಾತದಲ್ಲಿ ಶಬ್ದಮಣಿ ದರ್ಪಣದ ೮ ಪ್ರಕರಣಗಳ ಸಂಕ್ಷಿಪ್ತವಾದ ವಿಮರ್ಶೆಯಿದೆ. ಗ್ರಂಥಾಂತ್ಯದಲ್ಲಿ ಸೂತ್ರ ಹಾಗೂ ಪ್ರಯೋಗಗಳ ಅಕಾರಾದಿಗಳೆಂಬ ಎರಡು ಅನುಬಂಧಗಳಿವೆ. ಪ್ರಸ್ತುತ ಪರಿಷ್ಕರಣವು ವಿದ್ಯಾರ್ಥಿಗಳಿಗೆ, ವಿದ್ವಾಂಸರಿಗೆ ತುಂಬ ಉಪಯುಕ್ತವಾಗಿದೆ.

ಶಾಸ್ತ್ರೀ ಅವರು ಸಂಪಾದಿಸಿದ ಮೂರನೆಯ ಕೃತಿ ಕೆಂಪುನಾರಾಯಣನ 'ಮುದ್ರಾ ಮಂಜೂಷ'. ಈ ಕೃತಿಯು ಪಾಠಸಂಕಲನ, ಪೀಠಿಕೆ ಯಾವುದೂ ಇಲ್ಲದೆ ಮೂಲದ ಭಾಷೆ ಶೈಲಿಗಳೂ ಮುದ್ರಣದಿಂದ ಮುದ್ರಣಕ್ಕೆ ಬದಲಾವಣೆಗೊಳ್ಳುತ್ತ ಹೋಗಿ ಒಂದು ರೀತಿಯಲ್ಲಿ ಪೇಟೆಯ ಮುದ್ರಣದಂತೆ ಚಾಲ್ತಿಯಲ್ಲಿದ್ದುದು ತಿಳಿದ ವಿಷಯ. ಕನ್ನಡದ ಮೊದಲ ಚಾರಿತ್ರಿಕ ಕಾದಂಬರಿಯಾದ ಈ ಕೃತಿಯ ಭಾಷೆ ಶೈಲಿಯ ದೃಷ್ಟಿಯಿಂದ ಗಮನಿಸಿದರೆ ತುಂಬ ಅನನ್ಯವಾಗಿದೆ. ಇಂತಹ ಕೃತಿ ವೆಂಕಟಾಚಲ ಶಾಸ್ತ್ರೀ ಅವರ ದೃಷ್ಟಿಗೆ ಬಿದ್ದುದು ಕನ್ನಡದ ಅದೃಷ್ಟ. ಶಾಸ್ತ್ರಿಗಳು ಮೂಲಕೃತಿಪಾಠಗಳನ್ನು ಶೋಧಿಸಿ, ಸವಿಮರ್ಶ ಪರಿಷ್ಕರಣದೊಂದಿಗೆ ಸಂಪಾದಿಸಿದ್ದಾರೆ(೧೯೯೮). ಸಂಪಾದನೆಯ ಕಾರ್ಯಕ್ಕೆ ಮೂರು ಹಸ್ತಪ್ರತಿಗಳನ್ನು ಬಳಸಿಕೊಂಡಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನಸಂಸ್ಥೆಯಲ್ಲಿನ ಹಸ್ತಪ್ರತಿಯನ್ನು ಮುಖ್ಯ ಆಧಾರವಾಗಿಟ್ಟುಕೊಂಡು ಮಿಕ್ಕವು ಗಳನ್ನು ಸಮಯೋಚಿತವಾಗಿ ಉಪಯೋಗಿಸಿಕೊಂಡಿದ್ದಾರೆ. ಈ ಕೃತಿಗೆ ಕವಿಕಾವ್ಯವನ್ನು ಕುರಿತು ಅಭ್ಯಾಸಪೂರ್ಣ ಪ್ರಸ್ತಾವನೆಯಿದೆ.

ಶಾಸ್ತ್ರಿಗಳು ಮೇಲಿನ ಸಂಪಾದನೆಗೆ ಬರೆದ ಪೀಠಿಕೆಗಳು ಉನ್ನತ ವಿಮರ್ಶೆಗೆ ಉತ್ತಮ ಮಾದರಿಗಳು. ಉನ್ನತ ವಿಮರ್ಶೆಯಲ್ಲಿ ಇರಲೇಬೇಕಾದ ವಿಷಯಗಳೆಂದರೆ ಕೃತಿಕಾರನ ಕಾಲ, ದೇಶ ಇತ್ಯಾದಿ ವೈಯಕ್ತಿಕ ವಿಚಾರಗಳು; ಕೃತಿಯ ಆಕರಗಳು, ಕೃತಿಕಾರನ ಮೇಲೆ ಬಿದ್ದಿರುವ ಪ್ರಭಾವಗಳು, ಕೃತಿಕಾರ ಮುಂದಿನ ಕೃತಿಕಾರರ ಮೇಲೆ ಬೀರಿರುವ ಪ್ರಭಾವ ಗಳು, ಕೃತಿಯ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ವಿಶ್ಲೇಷಣೆ. ಶಾಸ್ತ್ರೀ ಅವರು ತಮ್ಮ ಪ್ರಸ್ತಾವನೆಗಳಲ್ಲಿ ಕೃತಿಕಾರನ ಸರ್ವಮಗ್ಗಲುಗಳನ್ನು ಪರಿಶೀಲಿಸಿದ್ದಾರೆ. ಆ ಸಂದರ್ಭದಲ್ಲಿ ಅವರ ಸಂಶೋಧನಪ್ರವೃತ್ತಿ ಮೇಲ್ತರಗತಿಯದು.

ಶಾಸ್ತ್ರಿಗಳು ಸಂಕಲಿಸಿದ ಕನ್ನಡ ಸುಭಾಷಿತಗಳ ಸಂಪುಟ 'ಕನ್ನಡ ಚೆನ್ನುಡಿ'(೧೯೯೧). ಇದರಲ್ಲಿ ಹಳಗನ್ನಡ ಗದ್ಯ ಪದ್ಯ ಚಂಪೂ ಕೃತಿಗಳಲ್ಲಿಯ ಸುಭಾಷಿತಗಳನ್ನು ಉಚಿತ

ಪ್ರಮಾಣದಲ್ಲಿ ಸಂಯೋಜಿಸಲಾಗಿದೆ. ಕನ್ನಡ ಕಾವ್ಯಪ್ರಶಂಸೆ, ವಿದ್ಯಾಭ್ಯಾಸ, ಸಂಸಾರ, ಸಿರಿತನ, ಬಡತನ, ಸುಜನ ದುರ್ಜನ, ಧರ್ಮ ಅಧರ್ಮ, ಕುಲ, ದೈವ ಪೌರುಷ, ಸುಗುಣ ದುರ್ಗುಣ, ರಾಜನೀತಿ, ದಾನ, ವಿವೇಕ, ವೈರಾಗ್ಯ ಮತ್ತು ಸಾಮಾನ್ಯನೀತಿಗಳಿಗೆ ಸಂಬಂಧಿಸಿದ ಸ್ವೋಪಜ್ಞ ಚಿಂತನೆಗಳು ಮೂಲತಾತ್ಪರ್ಯ ಸಹಿತವಾಗಿ ಸಂಕಲಿಸಿದ್ದಾರೆ.

ಶಾಸ್ತ್ರಿಗಳು ಹೈದರಾಬಾದದ ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಉಪಾಧ್ಯಾಯರಾಗಿದ್ದಾಗ ಡಾ.ಬಿ.ರಾಮಚಂದ್ರರಾವ್ ಅವರ ಜೊತೆ ಸೇರಿ 'ಉಸ್ಮಾನಿಯಾ ವಿಶ್ವವಿದ್ಯಾಲಯದ ಕನ್ನಡ ಹಸ್ತಪ್ರತಿಗಳ ವಿವರಣಾತ್ಮಕ ಸೂಚಿ'ಯನ್ನು ಸಿದ್ಧಪಡಿಸಿದ್ದರು (೧೯೬೬). ವಚನಸಾಹಿತ್ಯಕ್ಕೆ ಸಂಬಂಧಿಸಿದಂತೆ ಅಪೂರ್ವ ಹಸ್ತಪ್ರತಿಯ ವಿವರಗಳು ಈ ಸೂಚಿಯಲ್ಲಿವೆ. ಆಸಕ್ತರು ಆ ಸೂಚಿಯನ್ನು ಗಮನಿಸಬೇಕಾಗಿದೆ.

೨

ಪಾಠ ಪರಿಷ್ಕರಣದ ಮೂಲಕ ಕವಿಕೃತಿಯ ಮೂಲಪಾಠವನ್ನು ನಿಷ್ಕರ್ಷಿಸುವುದೇ ಗ್ರಂಥಸಂಪಾದನೆಯ ಮುಖ್ಯ ಉದ್ದೇಶ. ಒಬ್ಬ ಕವಿಯನ್ನು ಕುರಿತು ವಿದ್ವತ್‌ಚರ್ಚೆಗೆ ಅನುಕೂಲವಾಗುವಂತೆ ಶುದ್ಧಪಾಠವನ್ನು ಒದಗಿಸಿಕೊಡುವುದರ ಮೂಲಕ ಸಾಹಿತ್ಯ ಸ್ವರೂಪದ ಸ್ಪಷ್ಟತೆಯನ್ನು ರೂಪಿಸುವಲ್ಲಿ ಗ್ರಂಥಸಂಪಾದಕ ಕಾರಣನಾಗುತ್ತಾನೆ. ಶಾಸ್ತ್ರೀ ಅವರಿಂದ ಪಾಠಪರಿಷ್ಕರಣೆಯ ಕಾರ್ಯ ಅತ್ಯಂತ ಶ್ರದ್ಧೆ ಮತ್ತು ಶ್ರಮದಿಂದ ನಡೆಯಿತೆಂದು ಆ ಕುರಿತು ಅವರ ಬರೆಹಗಳನ್ನು ಅವಲೋಕಿಸಬಹುದು.

ವಡ್ಡಾರಾಧನೆಯ 'ಗುರುದತ್ತ ಭಟ್ಟಾರಕರ ಕಥೆ'ಯಲ್ಲಿ ಬರುವ 'ಪುಳುಂಗಾರಂ' ಪದಕ್ಕೆ 'ಹಕ್ಕಿಯನ್ನು ಬಲೆಬೀಸಿ ಹಿಡಿಯುವ ಬೇಟೆಗಾರ' ಎಂಬರ್ಥವಿದೆ. ಅದನ್ನು ಪೋಷಿಸುವ ಆಧಾರವನ್ನು ಬಾಲಚಂದ್ರನ ತತ್ವರತ್ನ ಪ್ರದೀಪಿಕೆಯಲ್ಲಿ ಬರುವ 'ಪುಟುಗಾಱಂ' ಎನ್ನುವ ಪದದೊಡನೆ ತೌಲನಿಕವಾಗಿ ವಿವೇಚಿಸಿದ್ದಾರೆ. ವಡ್ಡಾರಾಧನೆಯಲ್ಲಿಯ ಇನ್ನೊಂದು ವಾಕ್ಯ ವಿಚಾರನೀಯವಾಗಿದೆ. 'ಲಾವುಗೆಯಂಕೆ ಕೊರಸುಂ' ಎಂಬುದರಲ್ಲಿ ಬರುವ 'ಲಾವುಗೆ', 'ಉಂಕೆ', 'ಕೆಕೊರಸು' ಇವು ವಿಚಾರಣೀಯ ಶಬ್ದಗಳು. ಮಲ್ಲಿಕಾರ್ಜುನನ ಸೂಕ್ತಿಸುಧಾರ್ಣವದಲ್ಲಿ 'ಕೇಕೊರಸು' ಎಂಬ ರೂಪವಿದೆ. ಅದರ ಪರಿಶೀಲನೆಯಿಂದ ಅದುವೇ ಶುದ್ಧರೂಪ ಇರಬಹುದೆಂದು ಊಹಿಸಲಾಗಿದೆ. ಆದ್ದರಿಂದ ಮೇಲಿನ ಪಾಠವನ್ನು 'ಲಾವುಗೆಯುಂ ಕೇಕೊರಸುಂ' ಎಂದು ಸರಿಪಡಿಸಿದ್ದಾರೆ.

'ಆದಿಪುರಾಣ'ದ ಆರನೇ ಆಶ್ವಾಸದಲ್ಲಿ 'ವರದತ್ತಂ ಮೊದಲಾಗೆ... ನೆರೆದರನಿತೀ ಸುರಲೋಕಂ' (ಎಸ್.ಜಿ.ನ ಆವೃತ್ತಿ ೬-೧೪) ಎಂಬ ತ್ರಿಪದಿಯ ಮೂರನೆಯ ಚರಣದಲ್ಲಿ ಪಾಠಕ್ಲೇಶವಿದೆ. ಅದರ ಬಗ್ಗೆ ಒಂದು ಬರೆಹದಲ್ಲಿ ಚರ್ಚಿಸಿದ್ದಾರೆ. ಅದೇ ಚರಣ ಎಲ್.ಬಸವರಾಜು ಅವರ ಆವೃತ್ತಿಯಲ್ಲಿ 'ನೆರಪಿದರೆ ನಿತೀ (ಪಾಠಾಂತರ

ನೆರೆದರ ನಿತೀ) ಸುರಲೋಕಂ' ಎಂದಿದೆ. ಸುರಲೋಕವನ್ನು ಎಷ್ಟು ತುಂಬಿದರು? ಎಷ್ಟು ಸಲ ತುಂಬಿದರು? ಎಂಬುದಕ್ಕೆ ಅರ್ಥವಿಲ್ಲ. ಈ ಸಮಸ್ಯೆಗೆ ಶಾಸ್ತ್ರೀ ಅವರು ಕೃತಿಯಲ್ಲಿಯ ಆಧಾರಗಳನ್ನು, ಲಿಪಿಕಾರಲೇಖನಸಂಭಾವ್ಯತೆ, ಧರ್ಮಾಮೃತ ಹಾಗೂ ಶಬ್ದಮಣಿದರ್ಪಣದ ಧಾತುಪಾಠ ಇಂತಹ ಕೃತಿಗಳ ಅಂತಸ್ಸಂಭಾವ್ಯತೆ ಮತ್ತು ಬಾಹ್ಯಸಾಕ್ಷ್ಯಗಳ ನೆರವಿನಿಂದ ಆ ಪಾಠವನ್ನು 'ನೆರೆದರ ನೀತಿ ಸುರಲೋಕಂ' ಎಂದು ಪರಿಷ್ಕರಿಸಿದ್ದಾರೆ. ಆಗ ಅರ್ಥ ವರದತ್ತ ಮೊದಲಾಗಿ ಆ ರಾಜರೆಲ್ಲ ಒಟ್ಟಿಗೆ ಕೂಡಿ ಸುರಲೋಕವನ್ನು ಸೇರಿ ಸುಖ ಅನುಭವಿಸಿದರು. ಪಾಠಸಮಸ್ಯೆಯನ್ನು ಪರಿಹರಿಸುವಾಗ ಅಲ್ಲಿಯ ವಸ್ತುಸ್ಥಿತಿಗೂ ಕವಿಯ ಪ್ರತಿಭೆಗೂ ಅನ್ಯಾಯವಾಗದಂತೆ ಎಚ್ಚರವಹಿಸುತ್ತಾರೆ. ಯೋಗ್ಯಪಾಠವನ್ನು ನಿರ್ಣಯಿಸಿ, ನಿರ್ಣಯಿಸಿದ ಪಾಠವನ್ನು ಸರಿಯಾಗಿ ಅರ್ಥೈಸಿ, ಆ ಅರ್ಥದ ಹಿಂದಿನ ತಾತ್ವಿಕತೆಯನ್ನು ಹೇಳುತ್ತಾರೆ.

'ಆದಿಪುರಾಣ'ದ ನವಮಾಶ್ವಾಸದ ೧೦೨ನೆಯ ಪದ್ಯದ ಎರಡನೆಯ ಚರಣದಲ್ಲಿ ಪಾಠಕ್ಲೇಶವಿದೆ. ಎಸ್.ಜಿ.ನ ಆವೃತ್ತಿಯಲ್ಲಿ 'ಕಾರಣಮಿಲ್ಲ... ನಿಮ್ಮ ಕಿತ್ತಮ್ಮಮಿದೇಂ', ಕುಂದಣಗಾರ ಆವೃತ್ತಿಯಲ್ಲಿ 'ಕೀರ್ತ್ತನಮಿದೇಂ ಕಿತ್ತನೆವ ಮಿದೇಂ' ಎಂಬ ಪಾಠ ಭೇದಗಳಿವೆ. ಎಲ್.ಬಸವರಾಜು ಆವೃತ್ತಿಯಲ್ಲಿ 'ಕಿತ್ತಿನಿವ ಮಿದೇಂ' ಎಂಬ ಪಾಠವಿದೆ. ಇವು ಸರಿಯಾದ ಅರ್ಥಕೊಡುವುದಿಲ್ಲ. ಶಾಸ್ತ್ರಿಗಳು ಆ ಪಾಠಕ್ಕೆ ಕಿತ್ತನಿವಂ (ಕಿಱಿದು+ ಅನಿವಂ) ಎಂಬರ್ಥವನ್ನು ಕೊಟ್ಟಿದ್ದಾರೆ. ಅದರರ್ಥ ಕಿರುಕುಳ, ಕಾಟ, ಒತ್ತಾಯವೆಂದು ತಿಳಿಯಬಹುದು. ಆಗ ಅರ್ಥಕ್ಲೇಶ ಪರಿಹಾರವಾಗುತ್ತದೆ. ಆ ಪದ್ಯದ ಅರ್ಥ "ಮಹನೀಯವಾದ ಆದಿನಾಥನಿಗೆ ಜಗದ ಜಂಜಡಕ್ಕೆ ಅವಕಾಶವಿಲ್ಲ. ನಿಮ್ಮ ಕಿರುಕುಳ ಇದೇನು? ವಿಷಯಕಾಂಕ್ಷಿಗಳಿಗೆ ಯುಕ್ತಾಯುಕ್ತ ವಿಚಾರ ಸಾಧ್ಯವಿಲ್ಲವೆನ್ನುವುದನ್ನು ನಿಜ ಮಾಡುತ್ತಿರುವಿರಲ್ಲ" ಎಂದಾಗುತ್ತದೆ, ಪ್ರಾಚೀನಕಾವ್ಯಗಳಲ್ಲಿ ಈ ರೂಪ ಬಳಕೆಯಲ್ಲಿದೆ. ಶಬ್ದಮಣಿದರ್ಪಣದಲ್ಲಿಯೇ ಈ ರೂಪ ಬಳಕೆಯಾಗಿದೆ(ಸೂತ್ರ ೧೯೨). ಕೇಶಿರಾಜ ಆದಿಪುರಾಣದಿಂದ ಆ ರೂಪವನ್ನು ತೆಗೆದುಕೊಂಡಿರಬಹುದೆಂಬುದು ಬಹುಮಟ್ಟಿಗೆ ಸಂಭಾವ್ಯವಾದದ್ದು. ಪಾಠಪರಿಷ್ಕರಣವು ಗ್ರಂಥಸಂಪಾದನೆಯ ಕೊನೆಯ ಘಟ್ಟ. ಇದೊಂದು ಎಚ್ಚರಿಕೆಯಿಂದ ಮಾಡಬೇಕಾದ ಕೆಲಸ. ಅಂತಹ ಸಂದರ್ಭದಲ್ಲಿ ಸಂಶೋಧಕನ ಬಹುಶ್ರುತತ್ವ, ಸಾಮಾನ್ಯಜ್ಞಾನಗಳೆರಡೂ ಪರೀಕ್ಷೆಗೆ ಗುರಿಯಾಗುತ್ತವೆ ಎಂಬುದು ಶಾಸ್ತ್ರೀ ಅವರ ಇಂತಹ ಬರೆಹಗಳಿಂದ ವೇದ್ಯವಾಗುತ್ತವೆ.

ಪಂಪಭಾರತದಲ್ಲಿ ಬರುವ 'ಭಗವತಿಯೇಱು ಮತ್ತು ದೇವೀಸಂಗರಂ' ಎಂಬ ಪ್ರಯೋಗಗಳು ಪಡೆಯುವ ಅರ್ಥದ ಬಗ್ಗೆ ಒಂದು ಲೇಖನದಲ್ಲಿ ವಿವೇಚಿಸಿದ್ದಾರೆ. ಈ ಕುರಿತು ಎಂ.ಚಿದಾನಂದಮೂರ್ತಿ ಅವರು ಭಗವತಿಯೇಱು ಎಂದರೆ 'ಭಗವತಿ ಉತ್ಸವದ ಸಂದರ್ಭದಲ್ಲಿ ನಡೆಯುವ ತೋರಿಕೆಯ ಕಾಳಗ' ಎಂದು ಒಂದು

ಲೇಖನದಲ್ಲಿ ಅರ್ಥೈಸಿದ್ದಾರೆ(ಕರ್ನಾಟಕ ಭಾರತಿ ೫-೧, ೧೯೭೨). ಶಾಸ್ತ್ರೀ ಅವರು ಚಿದಾನಂದಮೂರ್ತಿ ಅವರ ಅಭಿಪ್ರಾಯವನ್ನು ಪೋಷಿಸುವ ಒಂದು ಉಲ್ಲೇಖವನ್ನು ವಿವರಿಸುತ್ತಾರೆ. ರೋಣ ಶಾಸನದಲ್ಲಿ (೧೧೭೯-೮೦) ಕಿಸುಕಾಡುನಾಡಿನ ಪ್ರಭುವಾಗಿದ್ದ ಚಾವುಂಡರಾಜನ ಶೌರ್ಯವನ್ನು, ಶತ್ರುರಾಜನ ಅಪಕರ್ಷವನ್ನು ಪ್ರದರ್ಶಿಸುವಾಗ ಮೇಲಿನ ಶಬ್ದಗಳು ವಿನೋದದ ಸಂದರ್ಭದಲ್ಲಿ ಬಳಕೆಯಾಗಿವೆ. ಇವು ಸಾಂಸ್ಕೃತಿಕವಾಗಿ ಮಹತ್ವ ಪಡೆದ ರೂಪಗಳೆಂದು ಗಮನಿಸಬೇಕಾದ ಸಂಗತಿ.

'ಅಜಿತನಾಥ ಪುರಾಣ'ದ ಒಂದು ಪದ್ಯದ (೧-೪೪) ಪಾಠದ ಬಗ್ಗೆ ಒಂದು ಲೇಖನ ದಲ್ಲಿ ವಿವೇಚಿಸಿದ್ದಾರೆ. 'ಮಕ್ಕಳಕರುವಾಗರಂ' ಎಂದಾಗ ಅರ್ಥಕ್ಲೇಶವಾಗುತ್ತದೆ. ಅದನ್ನು 'ಮಕ್ಕಳ 'ಕ(ಱು)ವಾ(ಸು)ರಂ' ಎಂದು ಸರಿಪಡಿಸಿದ್ದಾರೆ. ಅದರಂತೆ ಗದಾಯುದ್ಧದ ಸಪ್ತಾಮಾಶ್ವಾಸದ ಮೂರು ಪದ್ಯಗಳ (೪೨, ೪೫ ಮತ್ತು ೪೯) ಪಾಠಕ್ಲೇಶ ಮತ್ತು ಅರ್ಥಕ್ಲೇಶಗಳನ್ನು ಪರಿಹರಿಸಿ ಕವಿಪಾಠಕ್ಕೆ ಹತ್ತಿರವಾಗುವ ಪಾಠಶೋಧಿಸಿದ್ದಾರೆ. ದುರ್ಗಸಿಂಹನ 'ಕರ್ಣಾಟಕ ಪಂಚತಂತ್ರ'ದಲ್ಲಿ 'ಖಲ್ವಾಯಿತನಂತೆ ಗಂಗಾಜಲವನ್ನು ತಂದು ತಳಿಯುವ ಬಿಳಿಯ ಮುಗಿಲುಗಳನ್ನು...' ಎಂಬಲ್ಲಿ ಬರುವ 'ಖಲ್ವಾಯಿತ' ಎಂಬುದು ಸಂಸ್ಕೃತಶಬ್ದದಂತೆ ಕಂಡರೂ ಅಲ್ಲಿಯ ಯಾವ ನಿಘಂಟಿನಲ್ಲಿಯೂ ಇಲ್ಲ. ಪರಿಷತ್ತು ನಿಘಂಟಿನಲ್ಲಿ ಮನೆ ಸಾರಿಸುವವನು, ಕಸಗುಡಿಸುವವನು ಎಂದು ಪ್ರಶ್ನೆ ಚಿಹ್ನೆಯೊಂದಿಗೆ ಅರ್ಥ ಹೇಳಿದೆ. 'ಖಲ್ಲ' ಎಂಬ (ಸಂಸ್ಕೃತ ಇಲ್ಲವೆ ಪ್ರಾಕೃತ) ಶಬ್ದಕ್ಕೆ ಕನ್ನಡದ ತದ್ಧಿತ ಪ್ರತ್ಯಯವಾದ 'ಆಯಿತ' ಸೇರಿ 'ಖಲ್ಲಾಯಿತ' ಎಂದಿಟ್ಟುಕೊಂಡರೆ ಅದರರ್ಥ ಚರ್ಮದಿಂದ ಮಾಡಿದ ನೀಲಿ ಚೀಲ (ಖಲ್ಲ+ಆಯಿತ) ಎಂದಾಗುತ್ತದೆ. ಶಾಸ್ತ್ರಿಗಳು ತುಂಬ ಶ್ರಮವಹಿಸಿ ಎಷ್ಟೋ ಕ್ಲಿಷ್ಟ ಪಾಠಗಳನ್ನು ಇದ್ದುದರಲ್ಲಿ ಸಮರ್ಪಕ ವಾಗಿ ನಿರ್ಣಯಿಸಿದ್ದಾರೆ.

ಮದನತಿಲಕದಲ್ಲಿಯ ಷಟ್ಪದದ (ಅಂಶಷಟ್ಪದಿ) ಪದ್ಯಪಾಠ ಅದೇ ಕೃತಿಯ ಇತರ ಹಸ್ತಪ್ರತಿಗಳಲ್ಲಿ ವಿಕ್ಷಿಪ್ತಗೊಂಡಿದೆ. ಅದರ ಪಾಠವನ್ನು ಕೊಕ್ಕೋಕನ ರತಿರಹಸ್ಯದ ನೆರವಿನಿಂದ ಪರಿಷ್ಕರಿಸಿದ್ದಾರೆ. ಅದರ ಅರ್ಥ "ಹಡೆದು ತಿಂಗಳಾದವಳು, ಆರು ತಿಂಗಳ ಗರ್ಭಿಣಿ, ಕೋಪಗೊಂಡವಳು, ಆಗತಾನೆ ಜ್ವರದಿಂದ ಬಳಲಿ ಚೇತರಿಸಿಕೊಂಡವಳು, ಚೆನ್ನಾಗಿ ನರ್ತಿಸುವವಳು", ಇವರಿಗೆ ಕಾಮಸುಖವೂ ಕೂಟವೂ ಕಾಲೋಚಿತವಾದ್ದು, ಇದಕ್ಕೆ ಸದೃಶ ಪದ್ಯಗಳು ಮನ್ಮಥ ವಿಜಯ, ಜನವಶ್ಯ ಇಂತಹ ಶಾಸ್ತ್ರ ಮತ್ತು ಕಾವ್ಯ ಗ್ರಂಥಗಳಲ್ಲಿ ಕಾಣಿಸಿಕೊಂಡಿವೆ. ಇಂತಹ ಸಂದರ್ಭಗಳಲ್ಲಿ ಶಾಸ್ತ್ರಿಗಳ ತೌಲನಿಕದೃಷ್ಟಿ ಮೆಚ್ಚತಕ್ಕದ್ದು.

ಕರ್ಣಪಾರ್ಯನ ನೇಮಿನಾಥ ಪುರಾಣದ ಕೆಲವು ಅಂಕಿತನಾಮ ಪಾಠಗಳ ಸಮಸ್ಯೆ ಗಳನ್ನೂ ಸ್ಖಾಲಿತ್ಯಗಳನ್ನೂ ಸಂಗ್ರಹವಾಗಿ ಪರಿಶೀಲಿಸಿ ಹರಿವಂಶ ಪುರಾಣ,

ಚಾವುಂಡರಾಯ ಪುರಾಣ ಇಂತಹ ಬಾಹ್ಯ ಸಾಕ್ಷ್ಯಗಳ ನೆರವು ಪಡೆದು ಅವುಗಳ ಶುದ್ಧ ಪಾಠವನ್ನು ನಿರ್ಣಯಿಸುವ ಪ್ರಯತ್ನ ಒಂದು ಬರೆಹದಲ್ಲಿ ಮಾಡಿದ್ದಾರೆ. ಆಶ್ವಾಸ ೧ ಪದ್ಯ ೬೩ರಲ್ಲಿ 'ಇಭದತ್ತವಸುದತ್ತೆಯರೆಂಬ ವೈಶ್ಯದಂಪತಿಗಳಿಗೆ 'ಇನಕೇತು'ವೆಂಬ ಪುತ್ರನಾದನೆಂದು ಹೇಳಿದೆ'. ಅರ್ಧನೇಮಿಪುರಾಣದಲ್ಲಿ 'ಇಭ್ಯಕೇತು' ಎಂದಿದೆ. ಲಿಪಿಕಾರನ ಸ್ಖಾಲಿತ್ಯದಿಂದ 'ಇನಕೇತು' ಆಗಿದೆ. 'ಇಭಕೇತು' ಸರಿಯಾದ ರೂಪ. ಅದರಂತೆ ಹೈಮತ-ಹೈಮಮತ, ಅಗ್ನಿಭೂಪತಿ-ಅಗ್ನಿಭೂತಿ, ಸೋಮಭೂಪತಿ-ಸೋಮಪತಿ, ಇಂತಹ ೨೬ ವ್ಯಕ್ತಿನಾಮಗಳನ್ನು ಶಾಸ್ತ್ರಿಗಳು ಪುನಾರಚಿಸಿದ್ದಾರೆ. ಅರ್ಧ ನೇಮಿಪುರಾಣದ ಮೂರು ಪರಿಷ್ಕರಣಗಳು ಪ್ರಕಟವಾದರೂ ಪಾಠಕ್ಲೇಶಗಳು ಉಳಿದಿವೆ. ಪ್ರಥಮಾಶ್ವಾಸದಲ್ಲಿ -೮, ದ್ವಿತೀಯಾಶ್ವಾಸದಲ್ಲಿ ೨, ತೃತೀಯಾಶ್ವಾಸದಲ್ಲಿ ೬, ಸಪ್ತಮಾಶ್ವಾಸದಲ್ಲಿ ೬ ಅಷ್ಟಮಾಶ್ವಾಸದಲ್ಲಿ ೫ ಪಾಠಸಮಸ್ಯೆಗಳನ್ನು ಆಂತರಿಕ ಹಾಗೂ ಬಾಹ್ಯ ಆಧಾರಗಳಿಂದ ಹಾಗೂ ಸ್ವಂತ ವಿವೇಚನೆಯಿಂದ ಸೂಕ್ತಪಾಠವನ್ನು ಗೊತ್ತು ಮಾಡಿದ್ದಾರೆ.

ಅರ್ಧನೇಮಿಪುರಾಣದ 'ಕಾನೊಳಗೆ ಕನಪುಂಸಾ ನಗಂತಬ್ಯಂ....' ತ್ರಿಪದಿಯ (೩-೩೮/೩೯) ಪಾಠವನ್ನು ವಿದ್ವಾನ್ ಎನ್.ರಂಗನಾಥ ಶರ್ಮ ಅವರು ಪಾಠವಿಮರ್ಶೆ ಮಾಡಿದ್ದಾರೆ. ಶಾಸ್ತ್ರೀ ಅವರು ಅದನ್ನು ಪುನರ್ವಿಮರ್ಶೆಗೆ ತೆಗೆದುಕೊಂಡು ಅಂತಸ್ಸಂಭಾವ್ಯತೆ ಮತ್ತು ಬಾಹ್ಯ ಆಧಾರಗಳ ನೆರವಿನಿಂದ ಆ ಪಾಠವನ್ನು 'ಕಾನೊಳಗೇಕಪುಂಸಾ ನಗಂತ(ವ್ಯ)ಂ' ಎಂದು ನಿಷ್ಕರ್ಷಿಸಿದ್ದಾರೆ. ಹೀಗೆ ಚಂಪೂ ಕಾವ್ಯಗಳಲ್ಲಿಯ ಸಂಶಯಗ್ರಸ್ತ ಪಾಠಗಳನ್ನು ಶಾಸ್ತ್ರೀ ಅವರು ತಮ್ಮ ಬಹುಶ್ರುತ ಪಾಂಡಿತ್ಯದಿಂದ ವಿವೇಚಿಸಿದ್ದಾರೆ.

ಶಬ್ದಮಣಿದರ್ಪಣದ 'ಸಂಗಡಿಸಿ ಸರ್ವನಾಮದ...' ಎಂಬ ಸೂತ್ರದ (೧೦೬) ಲಕ್ಷ್ಯದ ಸಂದರ್ಭದಲ್ಲಿ ಬರುವ 'ಬಿರಯಿಗಳ ಸುಯ್ಗಳೊಡನೆಯೆ' ಪ್ರಯೋಗಕ್ಕೆ ಕೆಲವು ಪಾಠಭೇದಗಳಿವೆ. ನಾಗವರ್ಮನ ವೀರವರ್ಧಮಾನ ಪುರಾಣದಲ್ಲಿ (೯-೫೧) ಆ ಪ್ರಯೋಗಕ್ಕೆ 'ವಿರಹಿಗಳ ಸುಯ್ಗಳೊಡನೆಯೆ' ಎಂದಿದೆ. ಅದುವೇ ಶಬ್ದಮಣಿ ದರ್ಪಣದ ಸೂತ್ರಕ್ಕೆ ಲಕ್ಷ್ಯವಾಗಿರಬಹುದೆಂದು ಊಹಿಸಿದ್ದಾರೆ. ದರ್ಪಣದ ಇನ್ನೊಂದು ಲಕ್ಷ್ಯಪದ್ಯ ಪಾಠವನ್ನು ವಿವೇಚಿಸಿದ್ದಾರೆ. ವಾಕ್ಯಸಂಧಿಯ ಸಂದರ್ಭವನ್ನು ವಿವರಿಸುವಾಗ 'ಬಹುಳತೆಯಿಂ ವಾಕ್ಯಕ್ಕೆ ವತ್ವಂ' ಇದರ ಲಕ್ಷ್ಯ ಮದ್ರಾಸ ವಿಶ್ವವಿದ್ಯಾಲಯದ ಆವೃತ್ತಿಯಲ್ಲಿ 'ದಿವಿಜಾಂಗನೆಯರ್ ಕೆಲಚಕ್ಕೆ' ಎಂಬ ಪಾಠವನ್ನು 'ದಿವದಿಂ ಕೆಲಸಕ್ಕೆ ವರ್ಷ ದಿವಿಜಾಂಗನೆಯರ್' ಎಂದು ತಿದ್ದಿದ್ದಾರೆ. ಹಳಗನ್ನಡ ವ್ಯಾಕರಣಕಾರರ ಹಾಗೂ ವಿದ್ವಾಂಸರ ಗಮನ ಸೆಳೆಯದ 'ತೆ' ಎಂಬ ಅವ್ಯಯ ಪ್ರಾಚೀನ ಸಾಹಿತ್ಯಕೃತಿಗಳಲ್ಲಿ ಅಲ್ಲಲ್ಲಿ ಕಂಡುಬಂದಿದೆ. ಪಂಪಭಾರತದ (೬-೫೨) 'ಮುಳಿದು... ನುಡಿದಂತೆ ಕಳೆಕಳೆ' ಇಲ್ಲಿ ನುಡಿದಂತೆ ಎಂಬುದನ್ನು ತೆಗೆದುಕೊಂಡರೆ ಅರ್ಥ ವಿಲಕ್ಷಣವಾಗುತ್ತದೆ.

ನುಡಿದಂ+ತೆ ಎಂದು ಹಾಗೆಯೇ ಬಿಡಿಸಿದರೆ ಅರ್ಥ ಪ್ರಾಪ್ತವಾಗುತ್ತದೆ. ಇಲ್ಲಿ 'ತೆ' ಎಂಬುದು 'ಛೀ' ಎಂಬ ಜುಗುಪ್ಸೆ ಅರ್ಥ ಕೊಡುವ ನಿಪಾತಾವ್ಯಯ. ಇದೇ ಅವ್ಯಯ ಅಜಿತನಾಥಪುರಾಣ, ಜಗನ್ನಾಥ ವಿಜಯ, ಲೀಲಾವತಿ ಪ್ರಬಂಧ ಮುಂತಾದ ಪ್ರಾಚೀನ ಕಾವ್ಯಗಳಲ್ಲಿ ಬಳಕೆಯಾಗಿದೆ. ಈ ಅವ್ಯಯ ಕನ್ನಡೇತರ ದ್ರಾವಿಡ ಭಾಷೆಗಳಲ್ಲಿ ಕಂಡು ಬರುವುದಿಲ್ಲವಾದುದರಿಂದ ಅದು ಕನ್ನಡಭಾಷೆಗೆ ವಿಶಿಷ್ಟವಾಗಿದೆ.

ಮಲ್ಲಕವಿಯ 'ಕಾವ್ಯಸಾರ'ದಲ್ಲಿ ಜನ್ನನ 'ಅನುಭವ ಮುಕುರ'ದ ಪದ್ಯಗಳಿವೆ ಯೆಂದು ಒಂದು ಬರೆಹದಲ್ಲಿ ಗುರುತಿಸಿದ್ದಾರೆ. 'ರನ್ನ ಕವಿಯ ಕೃತಿಗಳು, ಕೃತಿಪಾಠಗಳು' ಎಂಬ ಲೇಖನದಲ್ಲಿ ಅಜಿತನಾಥ ಪುರಾಣ, ಗದಾಯುದ್ಧಗಳ ಪದ್ಯಗಳು, ಕನ್ನಡ ಲಕ್ಷಣಗ್ರಂಥಗಳು ಮತ್ತು ಸಂಕಲನ ಗ್ರಂಥಗಳಲ್ಲಿ ಸೇರ್ಪಡೆಯಾದಾಗ ಆಗುವ ಪಾಠ ವ್ಯತ್ಯಾಸಗಳನ್ನು ಕುರಿತು ತೌಲನಿಕವಾಗಿ ವಿವೇಚಿಸಿದ್ದಾರೆ.

ಕುಮಾರವ್ಯಾಸ ಭಾರತದ (ಈಗ ನಾವು ಬಳಸುತ್ತಿರುವ) ಇನ್ನಷ್ಟು ಹಸ್ತಪ್ರತಿಗಳು ದೊರೆತಲ್ಲಿ ಮತ್ತೊಮ್ಮೆ ಪುನರ್‌ಪರಿಷ್ಕರಣ ಮಾಡಬೇಕಾದ ಅಗತ್ಯವಿದೆ. ಅದರ ಸವಿಮರ್ಶ ಪರಿಷ್ಕರಣದ ಸಿದ್ಧತೆಯಲ್ಲಿ ಅನುಸರಿಸಬಹುದಾದ ವಿಧಿ-ವಿಧಾನಗಳನ್ನು ಕುರಿತು ಎರಡು ಲೇಖನಗಳಲ್ಲಿ ಸಲಹೆ ಕೊಟ್ಟಿದ್ದಾರೆ. ವ್ಯಾಸನ ಮಹಾಭಾರತದ ಪಾಠ ಸಂಕಲನಕ್ಕೆ ವಿ.ಎಸ್.ಸುಕಥಂಕರ್ ಅವರು ಅನುಸರಿಸಿದ ವಿಧಾನವನ್ನೇ ಕುಮಾರವ್ಯಾಸ ಭಾರತಕ್ಕೂ ಅನ್ವಯಿಸಬೇಕಾಗಿದೆ. ಗದುಗಿನ ಸುತ್ತಮುತ್ತಣ ಪ್ರದೇಶದಲ್ಲಿ ದೊರೆಯ ಬಹುದಾದ ಹಸ್ತಪ್ರತಿಗಳನ್ನು ಸಂಗ್ರಹಿಸಿ, ಪೀಳಿಗೆಗಳ ರಚನೆಯಾಗಬೇಕೆಂದು ಸೂಚಿಸಿದ್ದಾರೆ. ಕುಮಾರವ್ಯಾಸನ ಸವಿಮರ್ಶ ಪರಿಷ್ಕರಣ ಬಂದರೆ ಆತನ ಪ್ರತಿಭೆ ಗೊತ್ತಾಗುತ್ತದೆ. ಇದನ್ನು ಗಮನಿಸಿದರೆ ಗ್ರಂಥಸಂಪಾದನೆಯ ಕಾರ್ಯ ಎಷ್ಟು ಗುರುತರ ವಾದುದು ಎಂದು ತಿಳಿಯುತ್ತದೆ. ಕುಮಾರವ್ಯಾಸ ಭಾರತದ ಆದಿಪರ್ವದ ಪೀಠಿಕಾ ಸಂಧಿಯ ಕೊನೆಯ ಪದ್ಯದಲ್ಲಿ 'ವೇದಪುರುಷನ ಸುತನ ಸುತನ ಸಹೋದರನ ಹೆಮ್ಮಗನ ಮಗನ...' ಎಂಬ ಬಾಂಧವ್ಯಸೂಚಕ ಸರಣಿಯೇ ಬರುತ್ತದೆ. ಎರಡನೆಯ ಚರಣದಲ್ಲಿ ಪಾಠವ್ಯತ್ಯಾಸವಿದೆ. ತಮಗೆ ಸರಿಕಂಡ ಪಾಠವನ್ನು ತಮ್ಮ ಬಹುಶ್ರುತ ಪಾಂಡಿತ್ಯದಿಂದ ಪರಿಷ್ಕರಿಸಿದ್ದಾರೆ.

'ಕನ್ನಡ ಲಕ್ಷಣಗ್ರಂಥಗಳ ಸಂಪಾದನೆ' ಎಂಬ ಬರೆಹದಲ್ಲಿ ಮೂರು ಹಳಗನ್ನಡ ವ್ಯಾಕರಣಗಳು, ಐದು ಛಂದೋಗ್ರಂಥಗಳ ಹಾಗೂ ಹನ್ನೊಂದು ಅಲಂಕಾರಶಾಸ್ತ್ರ ಗ್ರಂಥಗಳ ಬಗ್ಗೆ ನಡೆದ ಪರಿಷ್ಕರಣವಿಧಾನಗಳನ್ನು ಕುರಿತು ವಿಮರ್ಶಾತ್ಮಕವಾಗಿ ವಿವೇಚಿಸಿದ್ದಾರೆ. ಕಿಟೆಲ್‌ರು ಸಂಪಾದಿಸಿದ 'ಛಂದೋಂಬುಧಿ', ರೈಸರು ಸಂಪಾದಿಸಿದ 'ಪಂಪರಾಮಾಯಣ'ಗಳನ್ನು ಕೇಂದ್ರವಾಗಿಟ್ಟುಕೊಂಡು ಗ್ರಂಥಸಂಪಾದನೆಯಲ್ಲಿ ಆ ಇಬ್ಬರು ಮಿಷನರಿ ವಿದ್ವಾಂಸರು ಅನುಸರಿಸಿದ ವಿಧಾನಗಳನ್ನು ಹಾಗೂ ಗ್ರಂಥ

ಸಂಪಾದನೆಯ ಆರಂಭಕಾಲೀನ ಚರಿತೆಯಲ್ಲಿ ಅವರ ಪಾತ್ರವನ್ನು ಒಂದು ಬರೆಹದಲ್ಲಿ ಚರ್ಚಿಸಿದ್ದಾರೆ. ಹೆಚ್.ಎಂ.ಶಂಕರನಾರಾಯಣರಾಯರು ಸಿದ್ಧಪಡಿಸಿದ 'ಹರಿಶ್ಚಂದ್ರಕಾವ್ಯ ಸಂಗ್ರಹ', 'ಚಂಡಶಾಸನ ಕಥಾಸಂಗ್ರಹ', 'ಗದಾಯುದ್ಧದ ನಾಟಕದ ಕೈಪಿಡಿ' ಈ ಮೂರು ಹಳೆಯ ಕಾವ್ಯಗಳ ಕೈಪಿಡಿಗಳನ್ನು ಕುರಿತು ಒಂದು ಲೇಖನದಲ್ಲಿ ಪರಿಶೀಲಿಸಿದ್ದಾರೆ.

ಪ್ರಾಚೀನ ಗ್ರಂಥಸಂಪಾದನೆಯ ಅವಶ್ಯಕ ಅಂಗ. ಶಬ್ದಾರ್ಥ ವಿಚಾರ ಕವಿಪಾಠಗಳ ನಿಷ್ಕರ್ಷೆಯ ಸಂದರ್ಭದಲ್ಲಿ ಶಾಸ್ತ್ರಿಗಳು ಶಬ್ದಾರ್ಥಗಳ ವಿವೇಚನೆಯನ್ನು ಉತ್ಸಾಹದಿಂದ ನಡೆಸಿಕೊಂಡು ಬಂದಿದ್ದಾರೆ.

ಕವಿಪಾಠವನ್ನು ನಿರ್ಣಯಿಸುವಾಗ ಕ್ಲಿಷ್ಟಪದಗಳ ಅರ್ಥನಿರ್ಣಯದ ಮೇಲೆಯೇ ಪಾಠದ ಅರ್ಥ ನಿಲ್ಲುವುದು. ಶಾಸ್ತ್ರೀ ಅವರು ಪಂಪಭಾರತದಲ್ಲಿಯ ಅರ್ಥಕ್ಲೇಶವಿರುವ ಪದ್ಯಗಳ ಪಾಠಗಳ ಬಗೆಗೆ ಒಂದು ಬರೆಹದಲ್ಲಿ ಚರ್ಚಿಸಿದ್ದಾರೆ. 'ಚಕ್ಕಣಂ' (೪-೮೭) ಶಬ್ದಕ್ಕೆ ಗ್ರಂಥಾಧಾರ ಮತ್ತು ನಿಘಂಟುವಿನ ಉಲ್ಲೇಖಗಳು ದುರ್ಲಭವಾಗಿವೆ. ಈ ಶಬ್ದ ಕಳ್ಳಂಗಡಿಯಲ್ಲಿ ಕಳ್ಳಿನಷ್ಟೇ ಸುಪರಿಚಿತ. 'ಚಕ್ಕಣ' ಎಂದರೆ ಕಳ್ಳಿನೊಡನೆ ರುಚಿಗಾಗಿ ನೆಂಜಿಕೊಳ್ಳುವ ಮಾಂಸದ ಒಂದು ವ್ಯಂಜಕ ದ್ರವ್ಯ(ಸಂ.). ಚಕ್ಷಣಂ>ಚಕ್ಕಣ ಎಂದು ತದ್ಭವವಾಗಿರಬಹುದು. 'ಎಲೆಮಿಡುಕು' (೬-೫೯) ಈ ನುಡಿಗಟ್ಟು, ಎಲೆಯಷ್ಟು ಕೂಡ ಅಲುಗಾಡದೆ ಎಂಬರ್ಥ ಕೊಡುತ್ತದೆ. ಈ ರೂಪ ಸ್ತಬ್ಧತೆಯನ್ನು ಸೊಗಸಾಗಿ ಧ್ವನಿಸುವುದರಿಂದ ಅದನ್ನೇ ಮೂಲಪಾಠವನ್ನಾಗಿ ಪರಿಗಣಿಸಬೇಕೆಂದು ಸಕಾರಣವಾಗಿಯೇ ಹೇಳಿದ್ದಾರೆ. ಈ ರೂಪ ಯಶೋಧರಚರಿತೆ, ಕುಮಾರವ್ಯಾಸಭಾರತಗಳಲ್ಲಿಯೂ ಇದೇ ಅರ್ಥವನ್ನೇ ಕೊಡುತ್ತದೆ. 'ಅಜರ' (೯-೨೭) ಎಂಬುದಕ್ಕೆ ಅಜನನ್ (ಅಜರನ್+ಅನ್) 'ರ'ಕಾರದ 'ಜ' ವೃತ್ತಾನುಪ್ರಾಸವಿರುವುದರಿಂದ ಕವಿಪಾಠ 'ವಿದುರನ ಜರನನ್' ಎಂದೇ ಇದ್ದಿರುವುದು ಅಸಂಭವವಲ್ಲ. 'ಸಡಹುಡನಪ್ಪ ಕಟ್ಟೆಕೊಡೆ' (೯-೧೦೩) ಎಂಬ ಪ್ರಯೋಗದಲ್ಲಿಯ 'ಕಟ್ಟೆಕೊಡೆ' ಸಮಾನಶಬ್ದವಲ್ಲ, ಕಟ್ಟೆ ಬೇರೆ, ಕೊಡೆ ಬೇರೆ ಎಂದು ತೋರಿಸಿದ್ದಾರೆ.

ಶಬ್ದಾರ್ಥವಿವೇಚನೆಯಲ್ಲಿ ಕಾವ್ಯ, ಶಾಸನಗಳಲ್ಲಿ ಪದಗಳ ಹರಿದಾಟ ಹಾಗೂ ಅವು ಪಡೆಯುವ ಅರ್ಥಛಾಯೆವನ್ನು ಗುರುತಿಸುತ್ತಾರೆ. 'ಖಡ್ಗ'ವನ್ನು 'ನೀಲ' ವೆನ್ನುವುದು ಪ್ರಸಿದ್ಧ ಕವಿಪರಂಪರೆಯಲ್ಲಿ ಇದೆಯೇ ಇಲ್ಲವೇ ಎಂಬ ಸಂದೇಹವನ್ನು ನಿವಾರಿಸಿ, ಇದೆ ಎಂದು ಒಂದು ಲೇಖನದಲ್ಲಿ ತೀರ್ಮಾನಿಸಿದ್ದಾರೆ. ಹಳಗನ್ನಡ ಕಾವ್ಯಗಳಲ್ಲಿ ಬರುವ 'ಬಳಮದ್ದು' ಎಂಬುದು ಸಿಡಿಮದ್ದು ಅಲ್ಲ. ಅಪರೂಪವಾಗಿ ಶೃಂಗಾರ ಸನ್ನಿವೇಶಗಳಲ್ಲಿ ಬರುತ್ತಿರುವುದರಿಂದ ಅದು ಶಕ್ತಿವರ್ಧಕ ಔಷಧ ಅಥವಾ ವೀರ್ಯವರ್ಧಕ ಔಷಧವೆಂದು ಒಂದು ಲೇಖನದಲ್ಲಿ ತಿಳಿಸಿದ್ದಾರೆ. 'ಬಾಳ್ಗಟ್ಟು' ಎಂಬುದು

ಯುದ್ಧದಲ್ಲಿ ಜಯಶೀಲನಾದ ರಾಜ ತನ್ನ ಖಡ್ಗವನ್ನು ರಾಜಬೀದಿಯಲ್ಲಿ ಮೆರವಣಿಗೆ ಮಾಡಿ ಆ ದಿನ ಹಬ್ಬ ಆಚರಿಸುವುದು. ಆ ಪದದ ಹಿಂದೆ ಒಂದು ಆಚರಣೆಯಿದೆ ಎಂದು ಒಂದು ಲೇಖನದಲ್ಲಿ ವಿವೇಚಿಸಿದ್ದಾರೆ. ಅದರಂತೆ 'ರಾಗಿ', 'ಗಂಧವಾರಣ' ಶಬ್ದಗಳ ಅರ್ಥದ ರಹಸ್ಯವನ್ನು ಭೇದಿಸಿದ್ದಾರೆ. 'ಹಲ್ಮಿಡಿ ಶಾಸನ', 'ಬಾದಾಮಿ ಶಾಸನ' ಹಾಗೂ 'ಕುರ್ಕ್ಯಾಲ ಶಾಸನ'ಗಳ ಪಾಠ ಮತ್ತು ಅರ್ಥವನ್ನು ಕುರಿತು ಮೂರು ಲೇಖನಗಳಲ್ಲಿ ಪರಿಶೀಲಿಸಿದ್ದಾರೆ. ಈಗಾಗಲೇ ಈ ಶಾಸನಗಳ ಬಗ್ಗೆ ಹಿಂದಿನ ವಿದ್ವಾಂಸರು (ಎಂ.ಎಚ್.ಕೃಷ್ಣ, ಜಿ.ಎಸ್.ಗಾಯಿ ಮುಂತಾದವರು) ಅರ್ಥಯಿಸಿದ್ದರೂ ಶಾಸ್ತ್ರಿಗಳ ವಿಶೇಷಾಧ್ಯಯನದಿಂದ ಅವುಗಳ ವಿಶಿಷ್ಟ ತಾತ್ಪರ್ಯ ಮತ್ತಷ್ಟು ಸ್ಪಷ್ಟವಾಗುತ್ತದೆ.

ಶಾಸ್ತ್ರಿ ಅವರು ಪರಿಷ್ಕರಿಸಿದ ಶಬ್ದಾರ್ಥ ವಿಚಾರಗಳನ್ನು ನಂತರದ ಸಂಪಾದಕರು ತಮ್ಮ ಸಂಪಾದನೆಯಲ್ಲಿ ಸರಿಯಾಗಿ ಬಳಸಿಕೊಳ್ಳಬೇಕಾಗಿದೆ. ಅಂತಸ್ಸಂಭಾವ್ಯತೆ, ಲಿಪಿಕಾರ ಲೇಖನಸಂಭಾವ್ಯತೆ, ಬಾಹ್ಯಸಾಕ್ಷ್ಯಗಳು ಹೇಗೆ ಶಬ್ದಾರ್ಥನಿಷ್ಕರ್ಷೆಯಲ್ಲಿ ನೆರವಾಗುತ್ತವೆ ಎಂಬುದನ್ನು ಶಾಸ್ತ್ರಿಗಳು ಬಲ್ಲರು.

ಶಾಸ್ತ್ರಿಗಳು ಪಾಠ ಪರಿಷ್ಕರಿಸುವಾಗ ಅನ್ಯಪ್ರತಿಗಳ ಪಾಠ, ಆಕೃತಿಯ ಆಂತರಿಕ ಪಾಠ, ಪದ್ಯಗಳ ಆಕರ, ವ್ಯಾಕರಣ ಮತ್ತು ಛಂದೋವೈಚಿತ್ರ್ಯ ಇಂತಹ ವಿಶ್ಲೇಷಣೆಯ ಕ್ರಮಗಳನ್ನು ಹಾಗೂ ತೌಲನಿಕ ಮತ್ತು ಪುನಾರಚನೆಯ ವಿಧಾನಗಳನ್ನು ಬಳಸಿಕೊಂಡು ಒಪ್ಪಿತ ಪಾಠವನ್ನು ನಿರ್ಣಯಿಸುತ್ತಾರೆ. ಅಂತಹ ಸಂದರ್ಭದಲ್ಲಿ ಅವರ ಬಹುಶ್ರುತ ಪಾಂಡಿತ್ಯ ಕಾರ್ಯರಂಗಕ್ಕಿಳಿಯುತ್ತದೆ. ಕಾವ್ಯವನ್ನು ಹಲವಾರು ರೀತಿಯಲ್ಲಿ ಪರಿಶೀಲಿಸಿ ಕವಿಯ ಮೂಲಕ್ಕೆ ಹತ್ತಿರವಾಗುವಂತೆ ಅವರು ಪಾಠಗಳನ್ನು ನಿರ್ಧರಿಸುತ್ತಿದ್ದ ರೀತಿ ತುಂಬ ಶ್ರಮದಾಯಕವಾದದ್ದು. ಅಪಾರಪಾಂಡಿತ್ಯದಿಂದ ಮಾತ್ರ ಸಾಧ್ಯವಾಗುವಂತ ಹದ್ದು. ಗ್ರಂಥಸಂಪಾದನೆಯು ಹೇಗೆ ಶಾಸ್ತ್ರದ ಜ್ಞಾನವನ್ನು ನಿರೀಕ್ಷಿಸುವುದೋ ಹಾಗೆಯೇ ಪಾಠನಿರ್ಣಯದಲ್ಲಿ ಕವಿಯನ್ನು ಅರ್ಥಮಾಡಿಕೊಳ್ಳಬೇಕಾದ ಪ್ರತಿಭೆಯ ಪ್ರಕಾಶವನ್ನು ಬಯಸುವಂತಹದ್ದು. ಶಾಸ್ತ್ರೀ ಅವರಿಗೆ ಎರಡೂ ಇವೆ ಎಂಬುದರ ಸಂದೇಹವಿಲ್ಲ. ಒಟ್ಟಿನಲ್ಲಿ ಗ್ರಂಥಸಂಪಾದನೆ ಮತ್ತು ಪಾಠಪರಿಷ್ಕರಣೆ ಕ್ಷೇತ್ರದಲ್ಲಿ ಕೆಲಸ ಮಾಡುವ ವರಿಗೆ ವೆಂಕಟಾಚಲ ಶಾಸ್ತ್ರೀ ಅವರು ಮುಖ್ಯ ಮಾದರಿಯಾಗಿದ್ದಾರೆ.

ಭಾಷೆ ಮತ್ತು ನಿಘಂಟುವಿನ ಅಧ್ಯಯನಕ್ಕೆ ಟಿ.ವಿ.ವೆಂಕಟಾಚಲ ಶಾಸ್ತ್ರೀ ಅವರ ಕೊಡುಗೆ

ಎಸ್.ಎಸ್.ಅಂಗಡಿ

ಕನ್ನಡಕ್ಕೆ ತನ್ನದೇ ಆದ ಭಾಷಾಧ್ಯಯನ ಪರಂಪರೆಯಿದೆ. ಆಧುನಿಕ ಭಾಷಾ ವಿಜ್ಞಾನದ ದೃಷ್ಟಿಯಿಂದಲೂ ಕನ್ನಡ ಹಿಂದುಬಿದ್ದಿಲ್ಲ. ಆ ದಿಸೆಯಲ್ಲಿ ಕನ್ನಡವನ್ನು ಮೊದಲು ನಡೆಸಿದ ಶ್ರೇಯಸ್ಸು ಮಿಶನರಿ ವಿದ್ವಾಂಸರಿಗೆ ಸಲ್ಲುತ್ತದೆ. ಹದಿನೆಂಟನೆಯ ಶತಮಾನದ ಉತ್ತರಾರ್ಧದಲ್ಲಿ ಜರ್ಮನಿಯಿಂದ ಬಂದ ಮಿಶನರಿ ವಿದ್ವಾಂಸರು ಕನ್ನಡ ಭಾಷೆಗೆ ವ್ಯಾಕರಣಗಳನ್ನು, ಮುಖ್ಯವಾಗಿ ಇಂಗ್ಲಿಷಿನಲ್ಲಿ ಕೆಲವೊಮ್ಮೆ ಕನ್ನಡದಲ್ಲಿ, ಬರೆಯುವುದರಿಂದ ಹೊಸ ದಿಕ್ಕಿನಲ್ಲಿ ಕನ್ನಡ ಭಾಷಾಧ್ಯಯನ ಆರಂಭಿಸಿದರು. ಅದೇ ವೇಳೆಯಲ್ಲಿ ದೇಶೀಯ ಪಂಡಿತರು (ಶ್ರೀರಂಗಪಟ್ಟಣದ ಕೃಷ್ಣಮಾಚಾರ್ಯ, ಬಿ. ಮಲ್ಲಪ್ಪ) ಕನ್ನಡ ಭಾಷೆಗೆ ತಕ್ಕ ವ್ಯಾಕರಣರಚನೆಯನ್ನು ಮಾಡಿದರು. ಆದರೆ ಕನ್ನಡ ಭಾಷೆಯ ಸ್ವರೂಪವನ್ನು ದೃಷ್ಟಿಯಲ್ಲಿರಿಸಿಕೊಂಡು ತಕ್ಕ ಹದ-ಹರವುಗಳೊಂದಿಗೆ ರಚಿತ ವಾಗಿರುವ ಭಾಷೆ ವ್ಯಾಕರಣ ಕೃತಿಗಳು ಸಾಮಾನ್ಯವಾಗಿ ಕಂಡುಬರುವುದಿಲ್ಲ. ಇಂತಹ ಸಂದರ್ಭದಲ್ಲಿ ವೆಂಕಟಾಚಲ ಶಾಸ್ತ್ರೀ ಅವರ ಬರೆಹಗಳು ಅಧ್ಯಯನಾರ್ಥಿಗಳ ಗಮನ ಸೆಳೆಯುತ್ತವೆ.

೧

ವ್ಯಾಕರಣ ಶಾಸ್ತ್ರಿಗಳ ಉಸಿರು. ಸಾಹಿತ್ಯ, ಶಾಸ್ತ್ರ, ಛಂದಸ್ಸು, ನಿಘಂಟು ಈ ಅಧ್ಯಯನ ಕ್ಷೇತ್ರಗಳಲ್ಲಿಯೂ ಅವರು ಮಿಂಚಿನಂತೆ ಕಾರ್ಯಮಾಡಿದ್ದಾರೆ. ಹಳಗನ್ನಡ ಪದಗಳ ರಚನೆ, ವಿಕಲ್ಪ, ಐತಿಹಾಸಿಕ ಬೆಳವಣಿಗೆ ಇತ್ಯಾದಿ ತಿಳವಳಿಕೆಗಳು ಅವರಲ್ಲಿ ಸ್ಪರ್ಧಾತ್ಮಕವಾಗಿ ಕೆಲಸಮಾಡಿವೆ. ಅವರ ಭಾಷಾಧ್ಯಯನವನ್ನು ಕುರಿತು ಯೋಚಿಸುವಾಗ ಅವರ ಗಟ್ಟಿ ಹಿಡಿತ ವ್ಯಾಕರಣವಾಗಿದೆ. ಅವರ ವ್ಯಾಕರಣವಿಚಾರಗಳೂ ಭಾಷಾವಿಜ್ಞಾನದ ದೃಷ್ಟಿಕೋನವನ್ನು ಹೊಂದಿವೆ. ಈ ಭಾಗದಲ್ಲಿ ಶಾಸ್ತ್ರೀ ಅವರ ಭಾಷೆ ವ್ಯಾಕರಣ ಸಂಬಂಧಿ ಬರೆಹಗಳನ್ನು ಪುನರ್ ಅವಲೋಕಿಸಲಾಗಿದೆ.

ಹೊಸಗನ್ನಡದ ರಚನೆಯನ್ನು ಅನುಲಕ್ಷಿಸಿ ಕನ್ನಡ ವ್ಯಾಕರಣದ ಕೊರತೆಯನ್ನು ಮನಗಂಡು ಬಿ.ಎಂ.ಶ್ರೀ ಪ್ರತಿಷ್ಠಾನವು ಶಾಸ್ತ್ರೀ ಅವರಿಗೆ 'ಹೊಸಗನ್ನಡದ ವ್ಯಾಕರಣ' ರಚಿಸಬೇಕೆಂದು ಸೂಚಿಸಿತು. ಆ ಪ್ರಕಾರ ಶಾಸ್ತ್ರೀ ಅವರು ಹೊಸಗನ್ನಡದ ಪದರಚನೆ

ಮತ್ತು ಆಡುನುಡಿಯನ್ನು ಗಮನದಲ್ಲಿಟ್ಟುಕೊಂಡು ಹೊಸಗನ್ನಡ ವ್ಯಾಕರಣವನ್ನು ರಚಿಸಿದರು(೧೯೯೦). ಅದರ ಶಿಲ್ಪ ಈ ಮೊದಲಿನ ಶಾಲಾವ್ಯಾಕರಣಗಳ ಹಾಗೆಯೇ ಇದ್ದರೂ ಕೆಲವು ಅಂಶಗಳಲ್ಲಿ ಅವುಗಳ ವ್ಯಾಪ್ತಿಯನ್ನು ಹಿಗ್ಗಿಸಲು ಯತ್ನಿಸಲಾಗಿದೆ. ಸಾಂಪ್ರದಾಯಿಕ ವಿವೇಚನೆಯ ಜೊತೆಗೆ ಭಾಷಾಶಾಸ್ತ್ರೀಯ ನಿರೂಪಣಾಕ್ರಮವನ್ನು ಅಲ್ಲಿ ಕಾಣಬಹುದಾಗಿದೆ. ಈ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಅವರ ಪ್ರಕಟಿತ ಲೇಖನಗಳ ("ಶಾಸ್ತ್ರೀಯ"-ಸಂ.೧) ಪರಿಚಯವನ್ನಿಲ್ಲಿ ನೋಡಬಹುದು.

ಹಿಂದಿನ ವ್ಯಾಕರಣಗಳು ಬರೆಹದ ಭಾಷೆಯನ್ನು ಅನುಲಕ್ಷಿಸಿ ರಚಿತವಾದರೆ ಪ್ರಸ್ತುತ ವ್ಯಾಕರಣ ಕೃತಿ ಕನ್ನಡದ ಆಡುರೂಪಗಳನ್ನು ಮಾನ್ಯ ಮಾಡಿದೆ. ಉದಾ- ಮೈಸೂರು ಪ್ರಾಂತದಲ್ಲಿ ಬಳಕೆಯಲ್ಲಿರುವ ಹೆಂಗಸ್ರು, ಮನೆಗ್ಳು, ಗುರುಗ್ಳು, ಅತ್ತೇರು, ಮಾವಿನ್ಮರ, ಒಲೆಬೂದಿ ಇಂತಹ ಪದರೂಪಗಳು ಈ ವ್ಯಾಕರಣದಲ್ಲಿ ಬಳಕೆಯಾಗಿವೆ. ಇದು ತುಂಬ ಮಹತ್ವದ ವಿಷಯ. ಬರೆಹದ ಕನ್ನಡ, ಆಡುಕನ್ನಡ ಇವು ಕನ್ನಡದ ಬಳಕೆಯ ಎರಡು ಮುಖಗಳು. ಎರಡಕ್ಕೂ ಸಮಾನವಾದ ಸ್ಥಾನವಿದೆ.

ಈ ವ್ಯಾಕರಣದ ರಚನೆಯನ್ನು ಕುರಿತು ಹೇಳುವುದಾದರೆ ಹೊಸಗನ್ನಡದ ರಚನೆಯನ್ನು ಸೂತ್ರದಲ್ಲಿ ಹೇಳಿ, ಅನಂತರ ಸೂತ್ರದಲ್ಲಿ ಒಳಗೊಳ್ಳುವ ವ್ಯಾಕರಣ ಪ್ರಕ್ರಿಯೆಗಳನ್ನು ಉದಾಹರಣೆ ಸಮೇತವಾಗಿ ಚರ್ಚಿಸಲಾಗಿದೆ. ನಿಯಮದಿಂದ ಉದಾಹರಣೆ, ಉದಾಹರಣೆಗಳಿಂದ ನಿಯಮ ರೂಪಿಸುವ ಭಾಷಾಶಾಸ್ತ್ರದ ನೀತಿ ನೆನಪಾಗುತ್ತದೆ. ಇದರಿಂದಾಗಿ ತೀ.ನಂ.ಶ್ರೀ ಅವರ 'ಕನ್ನಡ ಮಧ್ಯಮ ವ್ಯಾಕರಣ'ದ ನಂತರ ಶಾಸ್ತ್ರೀ ಅವರ ಈ ಗ್ರಂಥ ವ್ಯಾಕರಣ ಮತ್ತು ಭಾಷಾವಿಜ್ಞಾನ ಕ್ಷೇತ್ರದಲ್ಲಿ ಮಹತ್ವದ ಕೃತಿಯಾಗಿ ಹೆಚ್ಚು ಜನಾದರಣೀಯಾಗಿದೆ.

'ತೆ' ಎಂಬ ಅವ್ಯಯವಿಚಾರ ಎಂಬ ಸಂಪ್ರಬಂಧದಲ್ಲಿ 'ತೆ' ಎಂಬ ಅವ್ಯಯ ಪಂಪಭಾರತ, ಅಜಿತಸಾಥಪುರಾಣ, ಜನಗನ್ನಾಥವಿಜಯ ಇಂತಹ ಪ್ರಾಚೀನ ಕಾವ್ಯಗಳಲ್ಲಿ ಅಲ್ಲಲ್ಲಿ ವಿರಳವಾಗಿ ಕಂಡುಬಂದಿದೆ. ಕೇಶಿರಾಜನನ್ನು ಒಳಗೊಂಡು ಎಲ್ಲ ಹಳಗನ್ನಡ ವೈಯಾಕರಣಿಗಳ ಕಣ್ಣು ತಪ್ಪಿಸಿರುವ ಈ ಅವ್ಯಯವನ್ನು ಶಾಸ್ತ್ರೀ ಅವರು ವಿದ್ವಾಂಸರ ಗಮನಕ್ಕೆ ತಂದಿದ್ದಾರೆ. 'ತೆ' ಇದು ಬಹುಮಟ್ಟಿಗೆ 'ಛೀ' ಎಂಬರ್ಥ ಕೊಡುವ ನಿಪಾತಾವ್ಯಯ. ಅದರ ಸ್ವರೂಪವನ್ನು ಹೇಳಿ ಈ ಅವ್ಯಯವನ್ನು ಹೋಲುವ ಯಾವ ರೂಪವೂ ದ್ರಾವಿಡಭಾಷೆಗಳಲ್ಲಿ ಕಂಡುಬರುವುದಿಲ್ಲ. ಈ ನಿಪಾತಾವ್ಯಯ ಕನ್ನಡಕ್ಕೆ ವಿಶಿಷ್ಟವಾಗಿದೆ ಎಂಬುದನ್ನು ಸೋದಾಹರಣವಾಗಿ ತೋರಿಸಿಕೊಟ್ಟಿದ್ದಾರೆ.

'ತವು' ಎಂಬ ಧಾತು ಕ್ಷಯಿಸು, ಕುಗ್ಗು, ಸವೆ, ನಾಶವಾಗು, ವ್ಯಯವಾಗು ಮುಂತಾದ ಹಲವು ಅರ್ಥಗಳನ್ನು ಕೊಡುತ್ತದೆ. ಆ ಧಾತುವಿನ ಕ್ರಿಯೆ ಮತ್ತು ಕಾರಕ ರೂಪಗಳನ್ನು ನಿಷ್ಪನ್ನಗೊಳಿಸುವಾಗ ಪ್ರಾಚೀನ ಮತ್ತು ಅರ್ವಾಚೀನ ವ್ಯಾಕರಣಕಾರರು ಸಂದಿಗ್ಧ ರೂಪ ಭೇದಗಳನ್ನು ಕಾಣಿಸಿ ಸಾಕಷ್ಟು ಗೊಂದಲವನ್ನುಂಟುಮಾಡಿದ್ದಾರೆ. ಶಾಸ್ತ್ರೀ ಅವರು ಆ

ಸಂದಿಗ್ಧತೆಯ ಸ್ಥಾನಗಳನ್ನು ಪರಿಶೀಲಿಸಿ ಆ ಧಾತುವಿನ ರೂಪಭೇದಗಳನ್ನು 'ತವು ಧಾತುವಿನ ವ್ಯಾಕರಣ ವಿಚಾರ' ಎಂಬ ಸಂಪ್ರಬಂಧದಲ್ಲಿ ವಿಶದೀಕರಿಸಿದ್ದಾರೆ.

ಹಳಗನ್ನಡದ ಶ್ರೇಷ್ಠ ವ್ಯಾಕರಣಗ್ರಂಥವಾದ ಶಬ್ದಮಣಿದರ್ಪಣ (೧೨೬೦) ರಚಿತವಾದ ಮೇಲೆ, ನಂತರ ಈ ಗ್ರಂಥದ ಅಭ್ಯಾಸ ಎಷ್ಟರಮಟ್ಟಿಗೆ ನಡೆದಿದೆ, ಅದರ ಪ್ರಯೋಜನವನ್ನು ಕವಿಗಳು, ಕೋಶಕಾರರು, ಇತರರು ಹೇಗೆ ಪಡೆದುಕೊಂಡಿದ್ದಾರೆ ಎಂಬುದನ್ನು 'ಶಬ್ದಮಣಿದರ್ಪಣ ಮತ್ತು ಉತ್ತರಕಾಲೀನ ಸಾಹಿತ್ಯ' ಎಂಬ ಸಂಪ್ರಬಂಧದಲ್ಲಿ ವಿವೇಚಿಸಿದ್ದಾರೆ. ಶಬ್ದಮಣಿದರ್ಪಣದ ಮಂಗಲಶ್ಲೋಕವಾದ 'ಶ್ರೀ ವಾಗ್ದೇವಿಗೆ ಶಬ್ದದಿ/ನಾವಾವಿಂದ್ರಿಯದ ವಿಷಯಮಂ ಶ್ರೋತ್ರದೊಳ್...' ಇಲ್ಲಿ 'ಆವಾವಿಂದ್ರಿಯದ' ಎಂಬ ವಾಕ್ಯಭಾಗವನ್ನು ನಿಟ್ಟೂರ ನಂಜಯ್ಯ ಆದಿಯಾಗಿ ಬಹುಪಾಲು ದರ್ಪಣದ ಪರಿಷ್ಕರಣದ ಸಂಪಾದಕರು 'ಆ ಆ ಇಂದ್ರಿಯದ ವಿಷಯಂ' ಎಂದೇ ಉಪಾದೇಯವೆಂದು ಒಪ್ಪಿದ್ದಾರೆ. ಶಾಸ್ತ್ರೀ ಅವರು ಆ ವಾಕ್ಯಭಾಗವನ್ನು ಪರಿಶೀಲಿಸಿ 'ಆವಾವ (ಆವ+ಆವ) ಇಂದ್ರಿಯದ ವಿಷಯಮಂ' ಎಂದು ಪರಿಷ್ಕರಿಸಿದ್ದಾರೆ. 'ಆವಾವ' (ಒಂದೊಂದು/ಸಮಸ್ತ) ಈ ಶಬ್ದ ಹಳಗನ್ನಡ ಕಾವ್ಯಪ್ರಯೋಗದಲ್ಲಿ ವಿಶೇಷವಾಗಿ ಕಂಡುಬರುತ್ತದೆ. ಅದು ದರ್ಪಣಕ್ಕೂ ಅನ್ವಯವಾಗುತ್ತದೆ ಎಂದು 'ಶಬ್ದಮಣಿದರ್ಪಣ'ದ ಮಂಗಲ ಶ್ಲೋಕದ ಒಂದು ವ್ಯಾಕರಣಾಂಶ ಎಂಬ ಲೇಖನದಲ್ಲಿ ನಿರ್ಣಯಿಸಿದ್ದಾರೆ.

ಇಮ್ಮಡಿ ನಾಗವರ್ಮನು ಕಾವ್ಯಾವಲೋಕನ, ಕರ್ಣಾಟ ಭಾಷಾಭೂಷಣ, ಅಭಿಧಾನ ವಸ್ತುಕೋಶ, 'ಕಾವ್ಯಾವಲೋಕನ', ಛಂದೋವಿಚಿತಿ ಹೆಸರಿನಿಂದ ಅಲಂಕಾರ, ವ್ಯಾಕರಣ, ನಿಘಂಟು, ಛಂದಸ್ಸು ಗ್ರಂಥಗಳನ್ನು ಬರೆದ. ಈತನೊಬ್ಬ ಸಮಷ್ಟಿಶಾಸ್ತ್ರಜ್ಞ. ಅವನ ಕೃತಿಗಳನ್ನು 'ನಾಗವರ್ಮನ ಲಕ್ಷಣಗ್ರಂಥಗಳು' ಎಂಬ ಲೇಖನದಲ್ಲಿ ಶಬ್ದಕೋಶ ರಚನೆ, ಸಂಧಿಗಳು ಮತ್ತು ಸಂಧಿಕಾರ್ಯಗಳು, ಕ್ರಿಯಾಪದ ರಚನೆ, ವಾಕ್ಯರಚನೆಯ ಭೇದಗಳು, ವಿರಾಮ ಚಿಹ್ನೆಗಳು ಈ ಎಲ್ಲ ಅಂಶಗಳು ಕ್ರಮವಾಗಿ ಚರ್ಚಿಸಲ್ಪಟ್ಟಿವೆ. ಶಾಸ್ತ್ರೀ ಅವರು ಅನೇಕ ವ್ಯಾಕರಣ ಸಮಸ್ಯೆಗಳ ಮೇಲೆ ಹೊಸ ಬೆಳಕು ಚೆಲ್ಲಿದ್ದಾರೆ.

ಶಾಸ್ತ್ರಿಗಳು 'ಶಬ್ದಮಣಿದರ್ಪಣ'ದ ಉತ್ತಮ ಆವೃತ್ತಿಯನ್ನು ಹೊರತಂದಿದ್ದಾರೆ (೧೯೬೪). ಪ್ರಸ್ತುತ ಪರಿಷ್ಕರಣದ ಪಠ್ಯದಲ್ಲಿ ಅವರು ಅನುಸರಿಸಿದ ಕ್ರಮಗಳು ಹೀಗಿವೆ: (೧) ಆಕರಗಳು ದೊರೆಯುವಂತಿದ್ದರೆ ಅಂತಹ ಕಡೆ ಪ್ರಯೋಗಗಳನ್ನು ಅವುಗಳ ಮೂಲದೊಂದಿಗೆ ಹೋಲಿಸಿ ಒಪ್ಪಿತ ಪಾಠವನ್ನು ಗೊತ್ತುಮಾಡಿದ್ದಾರೆ. (೨) ಸೂತ್ರ, ವೃತ್ತಿ, ಪ್ರಯೋಗಗಳಲ್ಲಿ ಗಮನಾರ್ಹವಾದ ಪಾಠವ್ಯತ್ಯಾಸಗಳಿದ್ದರೆ ಸಮರ್ಪಕವಾಗಿ ತಿದ್ದಿದ್ದಾರೆ. ವ್ಯಾಕರಣಸಮಸ್ಯೆಗಳಿದ್ದರೆ ಅಡಿಟಿಪ್ಪಣಿಯಲ್ಲಿ ಚರ್ಚಿಸಿದ್ದಾರೆ. ಅಭ್ಯಾಸಪೂರ್ಣ ಉಪೋದ್ಘಾತದಲ್ಲಿ ಶಬ್ದಮಣಿದರ್ಪಣದ ಎಲ್ಲ ಪ್ರಕರಣಗಳ ಸಾರವನ್ನು ಸಂಕ್ಷಿಪ್ತವಾಗಿ

ಸಮೀಕ್ಷೆಮಾಡಿದ್ದಾರೆ. ಗ್ರಂಥಾಂತ್ಯದಲ್ಲಿ ಸೂತ್ರ ಮತ್ತು ಪ್ರಯೋಗಗಳ ಅಕಾರಾದಿಯನ್ನೊಳಗೊಂಡ ಎರಡು ಅನುಬಂಧಗಳಿವೆ. ಪ್ರಸ್ತುತ ಪರಿಷ್ಕರಣವು ವಿದ್ಯಾರ್ಥಿಗಳಿಗೂ ವಿದ್ವಾಂಸರಿಗೂ ತುಂಬ ಉಪಯುಕ್ತವಾಗಿದೆ.

ಹಳಗನ್ನಡ ವ್ಯಾಕರಣ ಗ್ರಂಥಗಳಲ್ಲಿ ಶಬ್ದಮಣಿದರ್ಪಣವು ಶ್ರೇಷ್ಠವಾದುದು. ಅದು ಹೆಚ್ಚಿನ ವಿಮರ್ಶೆಗೆ, ಪರಿಷ್ಕರಣಕ್ಕೆ ಗುರಿಯಾದುದು ಅದರ ವಿದ್ವಜ್ಜನಪ್ರೀತಿಗೆ ಸಾಕ್ಷಿ. ಅದರ ನೇರ ಅಧ್ಯಯನ ಸಾಂಪ್ರದಾಯಿಕ ಹಾಗೂ ಆಧುನಿಕ ದೃಷ್ಟಿಯಿಂದ ಗಣನೀಯ ಪ್ರಮಾಣದಲ್ಲಿ ನಡೆಯುತ್ತಲಿದೆ. ಶಾಸ್ತ್ರೀ ಅವರ 'ದರ್ಪಣವಿವರಣ'(೨೦೦೧)ವು ಶಬ್ದಮಣಿದರ್ಪಣದ ಎಲ್ಲ ಸೂತ್ರ ಮತ್ತು ವೃತ್ತಿಗಳ ವಸ್ತುವಿವರಣೆಯನ್ನು ಸುಲಭವಾಗಿ ಅರ್ಥವಾಗುವಂತೆ ಹೊಸಗನ್ನಡದಲ್ಲಿ ನಿರೂಪಿಸುತ್ತದೆ. ಈ ಕೃತಿ ವಿದ್ಯಾರ್ಥಿಗಳಿಗೆ ತುಂಬ ಉಪಯುಕ್ತವಾಗಿರುತ್ತದೆ. ಇದರ ಹಿಂದಿನ ಅಭ್ಯಾಸದ ಗಾತ್ರವನ್ನು ಊಹಿಸಿದರೆ ಯಾರಿಗೂ ಗೌರವಾದರಗಳು ಹುಟ್ಟುತ್ತವೆ. ಭಾಷೆ-ವ್ಯಾಕರಣಕ್ಕೆ ಸಂಬಂಧಪಟ್ಟಂತೆ ಅವರ ಸಂಪ್ರಬಂಧದಲ್ಲಿ ಸ್ಥೂಲವಾಗಿ ಪರಿಚಯಿಸಿದ್ದಾರೆ. ಭಾಷೆ ಹಾಗೂ ಸಾಹಿತ್ಯದ ದೃಷ್ಟಿಯಿಂದ ಗಮನಾರ್ಹಕೃತಿಗಳಲ್ಲಿ ವಡ್ಡಾರಾಧನೆಯೂ ಒಂದು. ಅಲ್ಲಿ ಬಳಕೆಯಾದ ಬಂಧುವಾಚಕಗಳು, ಪ್ರಾಣಿವಾಚಕಗಳು, ಆಹಾರವಾಚಕಗಳು, ನುಡಿಗಟ್ಟುಗಳು ಹೆಚ್ಚಾಗಿ ದೇಸೀಯಮೂಲವಾಗಿವೆ. ಇವುಗಳ ಸ್ವರೂಪವನ್ನು ಕುರಿತ 'ವಡ್ಡಾರಾಧನೆಯ ದೇಸಿ' ಎಂಬ ಸಂಪ್ರಬಂಧದಲ್ಲಿ ಸಾಧಾರವಾಗಿ ತೋರಿಸಿದ್ದಾರೆ. ಪ್ರಾಚೀನ ಕನ್ನಡ ಶಾಸ್ತ್ರ ಕೃತಿಗಳಲ್ಲಿ ಕನ್ನಡ ಪಾರಿಭಾಷಿಕ ಪದಗಳು ದೊರೆಯುತ್ತವೆ. ಕೇಶಿರಾಜ ವರ್ಣಮಾಲೆಯನ್ನು ಸುದ್ದಗೆ (ಸಂ<ಶುದ್ಧಕಾ) ಎಂದಿದ್ದಾನೆ. ಅಲ್ಲಿ ಲಭಿಸುವ ದಡ್ಡಕ್ಕರ (<ದ್ವಿತ್ವ) ಪೂರ್ವಕ್ಕೆ ಪೆಱಗು, ಪಿಂತೆ, ಮೊದಲು ಎಂಬ ರೂಪಗಳು ಉತ್ತರಕ್ಕೆ ಇದಿರ್, ಎರಡು ಎಂಬುದನ್ನು ಅಂತ್ಯಕ್ಕೆ ಕಡೆ ಎಂದು ಕೇಶಿರಾಜ, ನಾಗವರ್ಮರು ಬಳಸಿದ್ದಾರೆ. ಅದರಂತೆ ಛಂದಸ್ಸು ಮತ್ತು ಅಲಂಕಾರಶಾಸ್ತ್ರ ಕೃತಿಗಳಲ್ಲಿಯೂ ಅನೇಕ ಕನ್ನಡ ಪಾರಿಭಾಷಿಕ ಶಬ್ದಗಳು ದೊರೆಯುತ್ತವೆಂಬುದನ್ನು 'ಪ್ರಾಚೀನ ಕನ್ನಡ ಲಕ್ಷಣಗ್ರಂಥಗಳಲ್ಲಿ ಕನ್ನಡ ಪಾರಿಭಾಷಿಕ ಶಬ್ದಗಳು' ಎಂಬ ಸಂಪ್ರಬಂಧದಲ್ಲಿ ಕಲೆಹಾಕಿ ಅವುಗಳ ಸ್ವರೂಪವನ್ನು ಕುರಿತು ವಿವೇಚಿಸಿದ್ದಾರೆ. ಈ ಲೇಖನದ ಹಿಂದೆ ಶಾಸ್ತ್ರೀ ಅವರ ವ್ಯಾಪಕ ಓದು ಸಹೃದಯ ಓದುಗರ ಗಮನಕ್ಕೆ ಬಾರದೆ ಇರದು. ಕನ್ನಡದಲ್ಲಿ ಪ್ರಕಟವಾದ ವ್ಯಾಕರಣಸಾಹಿತ್ಯವನ್ನು ಕುರಿತು 'ಕನ್ನಡ ವ್ಯಾಕರಣ ಸಾಹಿತ್ಯ' ಎಂಬ ಲೇಖನದಲ್ಲಿ ಸೋದಾಹರಣವಾಗಿ ನಿರೂಪಿಸಿದ್ದಾರೆ. ಈ ಲೇಖನ ಸಾಕಷ್ಟು ಮಾಹಿತಿಗಳಿಂದ ಕೂಡಿದ್ದು ದೀರ್ಘಚರ್ಚೆಗೆ ಅವಕಾಶ ಮಾಡಿಕೊಡುತ್ತದೆ. ಪ್ರಾಚೀನ ಕಾವ್ಯ ಮತ್ತು ಕಾವ್ಯೇತರ ಸಂದರ್ಭದಲ್ಲಿ 'ಗಮಕ' ಶಬ್ದದ ಅರ್ಥಛಾಯೆಗಳನ್ನು ಕುರಿತು 'ಗಮಕ: ಒಂದು ಶಬ್ದಾರ್ಥವಿವೇಚನೆ' ಎಂಬ ಲೇಖನದಲ್ಲಿ ಚರ್ಚಿಸಿದ್ದಾರೆ. ಗಮಕ ಶಬ್ದದ ಭಾಷಾವೈಜ್ಞಾನಿಕ ಶೋಧದೊಡನೆ ಸಾಂಸ್ಕೃತಿಕಶೋಧವೂ ಈ ಲೇಖನದಲ್ಲಿ ನಡೆದಿದೆ ಎಂಬುದು ಗಮನಿಸಬೇಕಾದ ಸಂಗತಿ.

ಭಾಷಾವ್ಯವಹಾರದಲ್ಲಿ ಬಳಕೆಯಾಗುವ ವಾಗ್ರೂಢಿಗಳಲ್ಲಿ ಯಮಳಶಬ್ದಗಳೂ (ಕೂಡುನುಡಿಗಳು) ಪ್ರಮುಖವಾಗಿವೆ. ಹಳ್ಳಿಗಳಲ್ಲಿ ಮಾತುಮಾತಿಗೆ ಕೂಡುನುಡಿಗಳು ಬಳಕೆಯಾಗುತ್ತವೆ. ಪ್ರಾಚೀನ ಕಾಲದಲ್ಲಿಯೂ ಅವು ಇಂದಿನಂತೆ ಬಳಕೆಯಾಗುತ್ತಿದ್ದವು. ಅವುಗಳ ಸ್ವರೂಪವನ್ನು 'ಕನ್ನಡ ಯಮಳ ಶಬ್ದಗಳು' ಎಂಬ ಸಂಪ್ರಬಂಧದಲ್ಲಿ ವಿವೇಚಿಸಿದ್ದಾರೆ. ರಪಣ, ಜಲ್ಲಮಲ್ಲ, ಅಚ್ಚಭಲ್ಲ, ಹಣ್ಣುಹಂಪಲ, ಗುಡಿಗುಂಡಾರ, ಕಪ್ಪಕಾಣಿಕೆ ಮುಂತಾದ ಯಮಳ ಶಬ್ದಗಳ ಸ್ವರೂಪವನ್ನು, ಅವು ಸ್ಪಷ್ಟಪಡಿಸುವ ಹೊಸ ಅರ್ಥ ಛಾಯೆಗಳನ್ನು ಕುರಿತು ಚರ್ಚಿಸಿದ್ದಾರೆ.

ಭಾಷಾಬಳಕೆಗೆ ಎರಡು ದಾರಿಗಳಿರುತ್ತವೆ (೧) ಆಡುಮಾತು (೨) ಬರೆಹ. ಬಳಕೆಯ ಔಪಚಾರಿಕ ಮತ್ತು ಅನೌಪಚಾರಿಕ ಸಂದರ್ಭದಲ್ಲಿ ಆಡುಮಾತಿನ ವ್ಯಾಪ್ತಿ ವಿಶಾಲವಾಗಿದೆ. ಶಾಸ್ತ್ರಿಗಳು 'ಕನ್ನಡ ಆಡುಮಾತು ಬರವಣಿಗೆಗಳಲ್ಲಿ ವಿಕಲ್ಪರೂಪಗಳು, ಸಾಮಾನ್ಯ ಪ್ರಮಾದಗಳು' ಎಂಬ ಲೇಖನದಲ್ಲಿ ಬರವಣಿಗೆಯ ಕೆಲವು ವಿಕಲ್ಪಗಳನ್ನು ಅಪಪ್ರಯೋಗಗಳೆಂದು ಕರೆಯುತ್ತಾರೆ. ಉದಾ: ಅಲ್ಪಪ್ರಾಣ-ಮಹಾಪ್ರಾಣ (ಕಡ್ಗ<ಖಡ್ಗ) ಅವರ ದೃಷ್ಟಿಯಲ್ಲಿ ಕಡ್ಗ ಅಪಪ್ರಯೋಗ. ಇದರಂತೆ ಅಂಕಿತನಾಮಗಳು, ಕಾಲವಾಚಕಗಳು, ನಾಮವಾಚಕಗಳಲ್ಲಿ ವಿಭಕ್ತಿಸಂಘಟನೆ ಮುಂತಾದ ೧೩ ಅಂಶಗಳನ್ನು ಪಟ್ಟಿಮಾಡಿದ್ದಾರೆ. ಆದರೆ ಬರೆಹದ ಭಾಷೆ ಮತ್ತು ಆಡುಭಾಷೆ ಇವು ಭಾಷಾಬಳಕೆಯ ಎರಡು ಮುಖಗಳೇ ವಿನಾ ಅಪಪ್ರಯೋಗದ ಪ್ರಶ್ನೆಯೇ ಬರುವುದಿಲ್ಲ. ಆಡುಮಾತಿನ ಅನೇಕ ಅಂಶಗಳು ಈಗ ಬರೆಹದ ಭಾಷೆಯಲ್ಲಿ ನುಸುಳಿವೆ. ಅದು ಸಹಿತ ಭಾಷಾ ಬೆಳವಣಿಗೆಯ ಲಕ್ಷಣವಾಗಿದೆ. ಭಾಷೆಯಲ್ಲಿ ಶುದ್ಧಾಶುದ್ಧತೆಯ ಪ್ರಶ್ನೆ ಬಹುಜಟಿಲವಾದುದು. ವ್ಯಾಕರಣಕ್ಕೆ ಸರಿಯಾಗಿ ಭಾಷೆಯನ್ನು ಬಳಸಬೇಕು ಎಂಬ ಕಲ್ಪನೆ ಹಿಂದೆ ಇದ್ದಿತು. ಭಾಷಿಕ ಪ್ರಪಂಚದಲ್ಲಿ ಮುಖ್ಯವಾದುದು ಅದನ್ನು ಆಡುವ ವ್ಯಕ್ತಿ, ಆತನು ಆಡಿದುದು ಇನ್ನೊಬ್ಬರಿಗೆ ಅರ್ಥವಾದರೆ ಅದು ವ್ಯಾಕರಣಬದ್ಧವಾದ, ಶುದ್ಧವಾದ ಭಾಷೆ ಎಂದೇ ಅರ್ಥ.

ಭಾಷಾಬದಲಾವಣೆಯ ತಂತ್ರಗಳಲ್ಲಿ ವರ್ಣಪಲ್ಲಟವೂ ಒಂದು. ಆಕೃತಿಮಾದಲ್ಲಿಯ ಧ್ವನಿಮಾಗಳ ಸ್ಥಾನಾಂತರವೇ ವರ್ಣಪಲ್ಲಟ. ಶಾಸ್ತ್ರಿಗಳು 'ಕನ್ನಡದಲ್ಲಿ ವರ್ಣಪಲ್ಲಟದ ಕೆಲವಂಶಗಳು' ಎಂಬ ಸಂಪ್ರಬಂಧದಲ್ಲಿ ವರ್ಣಪಲ್ಲಟದ ಎರಡು ಪ್ರಕ್ರಿಯೆಗಳನ್ನು ಗುರುತಿಸಿದ್ದಾರೆ. ಅವು ಸ್ವರಪಲ್ಲಟ ಮತ್ತು ವ್ಯಂಜನಪಲ್ಲಟ. ಸ್ವರಧ್ವನಿಮಾಗಳು ಸ್ಥಾನಾಂತರವಾದರೆ ಸ್ವರಪಲ್ಲಟ ಉದಾ: ಆದಿನಿ>ದಾನಿ, ಇದಿನಿ>ದೀನಿ ಮುಂತಾದುವು. ವ್ಯಂಜನ ಧ್ವನಿಮಾಗಳು ಸ್ಥಾನಾಂತರವಾದರೆ ವ್ಯಂಜನಪಲ್ಲಟ. ಉದಾ: ಅಸಗ>ಅಗಸ, ಅಗಳು>ಅಳುಗ ಮುಂತಾದವು. ವರ್ಣಪಲ್ಲಟ ಪ್ರಕ್ರಿಯೆಯ ನಿರ್ದಿಷ್ಟ ಪರಿಸರಗಳನ್ನು ಅನೇಕ ಉದಾಹರಣೆಗಳ ಮೂಲಕ ಗುರುತಿಸಿದ್ದಾರೆ. ಈ ಲೇಖನವು ಕನ್ನಡ ಧ್ವನಿಚರ್ಚೆಯಲ್ಲಿ ಅತಿ ಮಹತ್ವದ ಲೇಖನವಾಗಿದೆ.

ನವರತ್ನ ರಾಮರಾಯರ 'ಕೆಲವು ನೆನಪುಗಳು' ಎಂಬ ಗದ್ಯಕೃತಿಯು ಶೈಲಿ ಮತ್ತು ಭಾಷಾದೃಷ್ಟಿಯಿಂದ ಗಮನಾರ್ಹವಾಗಿದೆ. ಆ ಕೃತಿಯಲ್ಲಿಯ ದೇಶ್ಯ ಅನ್ಯದೇಶ್ಯ ಗ್ರಾಮ್ಯ ಮೂಲದ ರೂಪಗಳನ್ನು, ಕೂಡುನುಡಿ ನುಡಿಗಟ್ಟುಗಳನ್ನು ಹಾಗೂ ಚಿಂತನ ಯೋಗ್ಯ ಮಾತುಗಳನ್ನು ಒಂದೆಡೆ ಕಲೆಹಾಕಿದ್ದಾರೆ. ಅವುಗಳ ವಿವೇಚನೆಯನ್ನು ಮುಂದಿನ ಅವಕಾಶಕ್ಕಾಗಿ ಬಿಟ್ಟುಕೊಟ್ಟಿದ್ದಾರೆ. ಕರ್ನಾಟಕದಲ್ಲಿ ಪೂರ್ವ ಪ್ರಾಥಮಿಕದಿಂದ ಹಿಡಿದು ಉನ್ನತ ಶಿಕ್ಷಣದವರೆಗೆ ಶಿಕ್ಷಣದ ಎಲ್ಲ ಹಂತಗಳಲ್ಲಿಯೂ ಕನ್ನಡವೇ ಬೋಧನಾ ಮಾಧ್ಯಮವಾಗಬೇಕೆಂದು ಶಾಸ್ತ್ರಿಯವರು 'ಶಿಕ್ಷಣರಂಗದಲ್ಲಿ ಕನ್ನಡ' ಎಂಬ ಲೇಖನ ದಲ್ಲಿ ಪ್ರತಿಪಾದಿಸಿದ್ದಾರೆ. ಆ ಬಗ್ಗೆ ಎಂಟು ಉಪಯುಕ್ತ ಸಲಹೆಗಳನ್ನು ನೀಡಿದ್ದಾರೆ.

ಶಾಸ್ತ್ರೀ ಅವರ ಭಾಷಾಧ್ಯಯನಕ್ಕೆ ಸಂಬಂಧಿಸಿದ ಕೃತಿಗಳು ಮತ್ತು ಸಂಶೋಧನೆಯ ಪ್ರಬಂಧಗಳು ಒಳನೋಟಗಳಿಂದ ಕೂಡಿವೆ. ಪ್ರತಿಬರೆಹದಲ್ಲಿಯೂ ಅವರು ಕೊಡುವ ಅಡಿಟಿಪ್ಪಣಿಗಳು, ಪರಿಶಿಷ್ಟಗಳು, ಗ್ರಂಥ/ಲೇಖನಸೂಚಿಗಳು ಮುಂದಿನ ಅಧ್ಯಯನಕ್ಕೆ ಪ್ರೇರಣೆ ಕೊಡುತ್ತವೆ. ಕನ್ನಡ ಭಾಷೆ ವ್ಯಾಕರಣಕ್ಷೇತ್ರದಲ್ಲಿ ಶಾಸ್ತ್ರಿಗಳು ಮಾಡಿದ ಕೆಲಸ ಮೂಲಭೂತವಾದುದು. ಆ ಕ್ಷೇತ್ರದಲ್ಲಿ ಅವರು ತೋರಿಸಿಕೊಟ್ಟ ಮಾರ್ಗ ಅದ್ವಿತೀಯವಾಗಿದೆ.

೨

ವೆಂಕಟಾಚಲ ಶಾಸ್ತ್ರೀ ಅವರು ಕನ್ನಡನಿಘಂಟುಕ್ಷೇತ್ರಕ್ಕೆ ಅನುಪಮವಾದ ಕೊಡುಗೆಗಳನ್ನು ನೀಡಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ನಿಘಂಟುರಚನೆಗಾಗಿ ನೇಮಿಸಿದ ಸಲಹಾಸಮಿತಿಯ ಸದಸ್ಯರಾಗಿಯೂ ಪ್ರಾಧ್ಯಾಪಕವೃತ್ತಿಯಿಂದ ನಿವೃತ್ತರಾದ ಮೇಲೆ ನಿಘಂಟುಪರಿಷ್ಕರಣದ ಪ್ರಧಾನಸಂಪಾದಕರಾಗಿಯೂ ಕೆಲಸ ಮಾಡಿದ್ದಾರೆ. ತಮ್ಮ ಅಧ್ಯಯನದ ಬಹುಮಟ್ಟಿನ ಸಮಯವನ್ನು ಅವರು ನಿಘಂಟು ರಚನೆಗೆ ಧಾರೆಯೆರೆದಿದ್ದಾರೆ. ನಿಘಂಟುರಚನೆಗೆ ಬೇಕಾಗಿರುವುದು ಬೇಸರರಹಿತ ಶ್ರಮ; ತಾಳ್ಮೆ, ಹಲವಾರು ಭಾಷೆಗಳ ಪರಿಚಯ, ಕೆಲವಾರು ಭಾಷೆಗಳಲ್ಲಿ ಪಾಂಡಿತ್ಯ. ಅವರಿಗೆ ದ್ರಾವಿಡ ಭಾಷೆಗಳ ಪರಿಚಯವೂ ಇಂಗ್ಲಿಷ್ ಭಾಷೆಯಲ್ಲಿ ಆಳವಾದ ಪಾಂಡಿತ್ಯವೂ ಇದೆ. ಜೊತೆಗೆ ಭಾಷಾಶಾಸ್ತ್ರದಲ್ಲಿ ಉತ್ತಮವಾದ ತಿಳಿವಳಿಕೆಯಿದೆ. ಹೀಗಾಗಿ ಯಾವುದೇ ಉಲ್ಲೇಖವನ್ನು ತೆಗೆದುಕೊಂಡರೂ ಅದನ್ನು ಸಮಗ್ರವಾಗಿ ಸಿದ್ಧಪಡಿಸುವ ಸಾಧನ ಸಂಪತ್ತು ಅವರಲ್ಲಿದೆ.

ನಿಘಂಟು ಅಧ್ಯಯನಕ್ಕೆ ಶಾಸ್ತ್ರೀ ಅವರ ಸಾಧನೆಯನ್ನು ಎರಡು ರೀತಿಯಾಗಿ ವಿಂಗಡಿಸಬಹುದು. ೧. ಎರಡು ವಿಶಿಷ್ಟ ನಿಘಂಟುಗಳ ರಚನೆ ೨. ನಿಘಂಟುರಚನೆಗೆ ಸಂಬಂಧಿಸಿದ ಸಂಪ್ರಬಂಧಗಳು. ಸಾಮಾನ್ಯನಿಘಂಟುಗಳಲ್ಲಿ ವಿಶಿಷ್ಟವಿಷಯಗಳಿಗೆ ಸಂಬಂಧಿಸಿದ ಪದಗಳು ದಾಖಲಾಗಿರುವುದು ತುಂಬ ಕಡಿಮೆ. ಒಂದು ವೇಳೆ ದಾಖ

ಲಾದರೂ ಅದು ಯಾವ ಅರ್ಥ ಕೊಡಬೇಕಾಗಿತ್ತೋ ಆ ಅರ್ಥ ಕೊಡುವುದಿಲ್ಲ. ಇದು ಸಾಮಾನ್ಯ ನಿಘಂಟಿನ ಮಿತಿಯೂ ಆಗಿದೆ. ವಿಶಿಷ್ಟ ವಿಷಯಕ್ಕಾಗಿಯೇ ಪ್ರತ್ಯೇಕ ನಿಘಂಟುಗಳನ್ನು ರಚಿಸಬೇಕಾಗುತ್ತದೆ. ಇದನ್ನು ಮನಗಂಡ ಶಾಸ್ತ್ರಿಗಳು ಎರಡು ವಿಶಿಷ್ಟ ವಿಷಯಕ್ಕೆ ಸಂಬಂಧಿಸಿದ ನಿಘಂಟುಗಳನ್ನು ರಚಿಸಿದ್ದಾರೆ.

ಶ್ರೀವತ್ಸ ನಿಘಂಟು (೧೯೭೧, ದ್ವಿ.ಮು. ೧೯೯೯) ಇದು ಸಂಖ್ಯಾವಿಶಿಷ್ಟ ಪಾರಿಭಾಷಿಕ ಪದಗಳನ್ನು ಒಳಗೊಂಡಿರುವ ವಿಶಿಷ್ಟಕೋಶ. ಸಾಹಿತ್ಯ, ಕಲೆ, ಧರ್ಮ, ತತ್ವಶಾಸ್ತ್ರ, ರಾಜ್ಯಶಾಸ್ತ್ರ, ವೈದ್ಯಶಾಸ್ತ್ರ ಮೊದಲಾದ ಜ್ಞಾನಶಾಖೆಗಳಲ್ಲಿ ಬಳಕೆಯಾಗಿ ಸಾಮಾನ್ಯ ವಿವರಣೆಯಿಲ್ಲದೆ ವ್ಯವಹಾರಗೊಳ್ಳುತ್ತಿರುವ ಸಂಖ್ಯಾವಿಶಿಷ್ಟಪದಗಳ ವಿಷಯ ಪ್ರತಿಪಾದನೆಯನ್ನು ಈ ಕೋಶದಲ್ಲಿ ಮಾಡಲಾಗಿದೆ. ಸಂಖ್ಯಾವಿಶಿಷ್ಟಪದಗಳಲ್ಲಿ ಸಂಖ್ಯೆಗೆ ಒಂದು ಎರಡು ವಿವರಣೆಯನ್ನು ಹುಡುಕುವುದು ಸುಲಭ. ಆದರೆ, ಸಂಖ್ಯೆಗೆ ಮೂರಕ್ಕಿಂತ ಹೆಚ್ಚು ಅರ್ಥಗಳಿದ್ದರೆ ಅವುಗಳಿಗೆ ವಿವರಣೆಯನ್ನು ಹುಡುಕುವುದು ತುಂಬ ಕಷ್ಟ. ಅಂತಹ ಸಂದರ್ಭದಲ್ಲಿ ಸಂಖ್ಯಾವಿಶಿಷ್ಟಕೋಶಗಳು ಅಧ್ಯಯನಕಾರರ ನೆರವಿಗೆ ಬರುತ್ತವೆ. ಈ ದಿಶೆಯಲ್ಲಿ ಶಾಸ್ತ್ರಿಗಳ 'ಶ್ರೀವತ್ಸ ನಿಘಂಟು' ಆ ಬಗೆಯ ಒಂದು ಸಹಾಯಕಕೋಶ. ಇದರಲ್ಲಿ ಸುಮಾರು ನಾಲ್ಕು ಸಾವಿರ ಸಂಖ್ಯಾವಿಶಿಷ್ಟಪದಗಳಿಗೆ ವಿವರಣೆ ದೊರೆಯುತ್ತದೆ.

ಈ ಕೋಶದಲ್ಲಿ ಸಂಖ್ಯಾವಿಶಿಷ್ಟಪದವನ್ನು ಮುಖ್ಯ ನಮೂದನ್ನಾಗಿಸಿ ವಿವರಣೆ ಕೊಡಲಾಗಿದೆ. ನಂತರ ಅದು ಬರುವ ಆಕರವನ್ನು ಕೊಡಲಾಗಿದೆ. ಉದಾ: ಅಂಗ-೬೪: ಮುಖಸಂಧಿಯ ೧೨ ಅಂಗಗಳು, ಪ್ರತಿಮುಖ ಸಂಧಿಯ ೧೩ ಅಂಗಗಳು, ಗರ್ಭಸಂಧಿಯ ೧೨ ಅಂಗಗಳು, ಅಮುಮರ್ಶಸಂಧಿಯ ೧೩ ಅಂಗಗಳು, ನಿರ್ವಹಣಸಂಧಿಯ ೧೪. ಅಂಗ-೫, ಅಂಗ-೬, ಅಂಗ-೭, ಕಲಾ-೬೪, ಕಲಾ-೭೨ ಇಂತಹ ನಮೂದುಗಳ ವಿವರಣೆ ಪುಟಗಟ್ಟಲೆ ನಿರೂಪಿತವಾಗಿದೆ. ನಮೂದುಗಳನ್ನು ಅಕಾರಾದಿಯಾಗಿ ಜೋಡಿಸಲಾಗಿದೆ. ಕೋಶಸಿದ್ಧತೆಯಲ್ಲಿ ಶಾಸ್ತ್ರಿಗಳ ಆಳವಾದ ವಿದ್ವತ್ತು, ನೂರಾರು ಆಕರಗಳಿಂದ ಸಂಖ್ಯಾ ವಿಶಿಷ್ಟಪದಗಳನ್ನು ಹೆಕ್ಕಿ ತೆಗೆಯುವಲ್ಲಿ ಅವರ ತಾಳ್ಮೆ, ಖಚಿತನಿರೂಪಣೆ ಎಲ್ಲವೂ ಮೇಲ್ಮಟ್ಟದ್ದು.

ಶಾಸ್ತ್ರೀ ಅವರು ಸಿದ್ಧಪಡಿಸಿದ ಇನ್ನೊಂದು ವಿಶಿಷ್ಟಪದಗಳ ಕೋಶ 'ಗಜಶಾಸ್ತ್ರ ಶಬ್ದಕೋಶ'(೧೯೯೪). ಪ್ರಾಚೀನ ಕನ್ನಡ ಸಾಹಿತ್ಯದ ಕೃತಿಗಳನ್ನು ಅಭ್ಯಾಸ ಮಾಡುವಾಗ ಪುರ, ಪರ್ವತ, ಯುದ್ಧ ಮೊದಲಾದ ವರ್ಣನೆಗಳ ಭಾಗವಾಗಿ ಬರುವ ಆನೆಗಳ ದೇಹಾಕೃತಿ, ಗುಣ ಸ್ವಭಾವಕ್ಕೆ ಸಂಬಂಧಿಸಿದ ಪದಗಳ ಅರ್ಥಗಳನ್ನು ತಿಳಿದುಕೊಳ್ಳಲು ಹಾಗೂ ಆನೆಗೆ ಸಂಬಂಧಿಸಿದ ಅರ್ಥಕ್ಲೇಶದ ಪದಗಳನ್ನು ನಿವಾರಿಸಲು ಈ ಕೋಶ ನೆರವಾಗುತ್ತದೆ. ವಿಶಿಷ್ಟ ಪದಗಳನ್ನು ಮುಖ್ಯ ನಮೂದನ್ನಾಗಿರಿಸಿ ಅದರ ಅರ್ಥವನ್ನು ಸರಳ ಕನ್ನಡದಲ್ಲಿ ನೀಡಿದ್ದಾರೆ. ಪದಜೋಡಣೆಯಲ್ಲಿ ಅಕಾರಾದಿಕ್ರಮವನ್ನು ಅನು

ಸರಿಸಿದ್ದಾರೆ. ಉದಾ: ಅಂಸ: ಆನೆಯ ಹೆಗಲು, ಅಕ್ಷಿಗುಹ : ಕಣ್ಣಿನ ಒಂದು ಅಂಗ ಭಾಗ. ಅಜಕುಕ್ಷಿ: ಆಡಿನ ಹೊಟ್ಟೆಯಂತೆ ತೆಳ್ಳಗಿರುವ ಹೊಟ್ಟೆಯುಳ್ಳ ಆನೆ 'ಸಮ ಪಾರ್ಶ್ವನುಂ ಅಜಕುಕ್ಷಿಯುಂ'(ಆದಿಪುರಾಣ ೧೨-೫೬). ಅನುಗತಬಂಧ, ಅವಗ್ರಹ, ಅವಪಾತಬಂಧ, ಮಂದ, ಭದ್ರ ಇಂತಹ ನಮೂದುಗಳ ವಿವರಣೆ ಪುಟಗಟ್ಟಲೆ ಸಾಗುತ್ತದೆ. ಆಯಾ ನಮೂದುಗಳ ಅಂತ್ಯದಲ್ಲಿ ಆ ಪದದ ಆಕರವನ್ನೂ ಕೊಟ್ಟಿದ್ದಾರೆ.

ಈ ಕೋಶದಲ್ಲಿ ಆನೆಯ ಪ್ರಕಾರಗಳು, ಅಂಗಾಂಗಗಳು, ಆನೆಯನ್ನು ಪಳಗಿಸುವ ಕ್ರಿಯೆ, ಅದನ್ನು ನಿಯಂತ್ರಿಸುವ ಸಾಧನಗಳು, ಯುದ್ಧಕ್ಕೆ ಆನೆಯನ್ನು ಸಿದ್ಧಪಡಿಸುವ ಕ್ರಮ ಇತ್ಯಾದಿಗಳಿಗೆ ಸಂಬಂಧಿಸಿದ ಪದಗಳ ವಿವರಣೆಯಿದೆ. ಈ ಕೋಶಸಿದ್ಧತೆಗೆ ಶಾಸ್ತ್ರಿಗಳು ಸಂಸ್ಕೃತ ಮತ್ತು ಕನ್ನಡ ಭಾಷೆಗಳ ಸಾಮಾನ್ಯ ನಿಘಂಟುಗಳನ್ನು, ಪ್ರಾಚೀನ ಕನ್ನಡ ಕಾವ್ಯಗಳನ್ನು ಹಾಗೂ ಆನೆಗೆ ಸಂಬಂಧಿಸಿದ ಶಾಸ್ತ್ರಕೃತಿಗಳನ್ನು ಪರಿಶೀಲಿಸಿದ್ದಾರೆ. ಪಾಲಕಾಪ್ಯ ಮುನಿಯ 'ಹಸ್ತ್ಯಾಯುರ್ವೇದ' ಎಂಬ ಉದ್ಗ್ರಂಥದ ಪ್ರಯೋಜನವನ್ನು ಈ ಕೋಶಸಿದ್ಧತೆಯಲ್ಲಿ ಬಹುವಾಗಿ ಪಡೆಯಲಾಗಿದೆ. 'ಹಸ್ತ್ಯಾಯುರ್ವೇದ'ದ ಶಲ್ಯ ಸ್ಥಾನದೊಳಗಿನ ಹಸ್ತಿ ಪ್ರದೇಶ ಜ್ಞಾನವೆಂಬ ಅಧ್ಯಾಯದ ಅನುವಾದಭಾಗವನ್ನು ಅನುಬಂಧದಲ್ಲಿ ಕೊಟ್ಟಿದ್ದಾರೆ. ನಮಗೆ ತಿಳಿದಿರುವ ಮಟ್ಟಿಗೆ ಭರತ ಖಂಡದ ಯಾವುದೇ ಭಾಷೆಯಲ್ಲಿ ಇಲ್ಲಿಯ ವರೆಗೆ ಆನೆಗೆ ಸಂಬಂಧಿಸಿದ ವಿಶಿಷ್ಟಶಬ್ದಕೋಶ ರಚಿತವಾಗಿಲ್ಲ. ಇದು ಮೊದಲನೆಯದು.

ಶಾಸ್ತ್ರಿಯವರು ತುಂಬ ಶ್ರಮವಹಿಸಿ 'ಶ್ರೀವತ್ಸನಿಘಂಟು', 'ಗಜಶಾಸ್ತ್ರ ಶಬ್ದಕೋಶ' ಈ ನಿಘಂಟುಗಳನ್ನು ರಚಿಸಿದ್ದಾರೆ. ಇದರಿಂದ ಕನ್ನಡ ಭಾಷೆ ಮತ್ತು ಸಾಹಿತ್ಯ ವಿದ್ಯಾರ್ಥಿಗಳಿಗೆ ಒಂದು ಸಿದ್ಧ ಆಕರಸಾಮಗ್ರಿ ದೊರೆತಂತೆ ಆಗಿದೆ. ತನ್ಮೂಲಕ ಕನ್ನಡ ದಲ್ಲಿ ವಿಶಿಷ್ಟವಿಷಯಗಳ ಕೋಶ ರಚನೆಗೆ ವೆಂಕಟಾಚಲ ಶಾಸ್ತ್ರಿಗಳು ಮೇಲ್‌ಪಂಕ್ತಿ ಹಾಕಿದ್ದಾರೆ. ಶಾಸ್ತ್ರಿಗಳು ನಿಘಂಟುಸಾಹಿತ್ಯ-ನಿಘಂಟು ರಚನೆಗೆ ಸಂಬಂಧಿಸಿದಂತೆ ಅನೇಕ ಸಂಪ್ರಬಂಧಗಳನ್ನು ಪ್ರಕಟಿಸುವುದರ ಮೂಲಕ ಆ ಕ್ಷೇತ್ರದ ಎಲ್ಲೆಯನ್ನು ಹಿಗ್ಗಿಸಿದ್ದಾರೆ. ಅವರ ಸಂಪ್ರಬಂಧಗಳ ಸ್ವರೂಪವನ್ನು ಗಮನಿಸೋಣ.

'ಕರ್ಣಾಟಕ ನಿಘಂಟು' ಎಂಬ ಸಂಪ್ರಬಂಧದಲ್ಲಿ ಆ ನಿಘಂಟಿನ ಕರ್ತೃ ಮತ್ತು ಕಾಲ ಯಾವುದೆಂಬುದಾಗಲಿ ತಿಳಿಯದು. ಈ ನಿಘಂಟಿನಲ್ಲಿ ನಡುಗನ್ನಡ ಶಬ್ದರೂಪಗಳು ಬಳಕೆಯಾಗಿರುವುದರಿಂದ ಅದು ಸು.೧೪೦೦ರಲ್ಲಿ ರಚಿತವಾಗಿರಬೇಕೆಂದೂ ನಿಘಂಟಿನಲ್ಲಿ ಶಿವಪರವಾದ ಪರ್ಯಾಯಶಬ್ದಗಳು ಬಂದಿರುವುದರಿಂದ ಕೋಶಕಾರ ಶೈವನೋ ವೀರಶೈವನೋ ಇರಬಹುದೆಂದು ಊಹಿಸಿದ್ದಾರೆ. ಈ ನಿಘಂಟು ದೇಶ್ಯ ಮತ್ತು ತದ್ಭವ ಶಬ್ದಗಳಿಗೆ ಸರಳವಾಗಿ ಅರ್ಥ ಹೇಳುವ ಒಂದು ಲಘುನಿಘಂಟು(ಕನ್ನಡ-ಕನ್ನಡ ನಿಘಂಟು). ಅದರಲ್ಲಿ ೯೮ ವೃತ್ತ ಕಂದಗಳಿವೆ. ಈ ಲೇಖನದಲ್ಲಿ ಆ ನಿಘಂಟಿನ ಸ್ವರೂಪ ವನ್ನು ಪರಿಶೀಲಿಸಿದ್ದಾರೆ.

'ಕರ್ಣಾಟಕ ಶಬ್ದಸಾರ' ಎಂಬ ಸಂಪ್ರಬಂಧದಲ್ಲಿ ಆ ನಿಘಂಟಿನ ಕರ್ತೃ ಮತ್ತು ಕಾಲ ಯಾವುದೆಂಬುದಾಗಲಿ ತಿಳಿಯದು. ಅದರಲ್ಲಿ ಬಳಕೆಯಾದ ನಡುಗನ್ನಡ ಶಬ್ದ ರೂಪಗಳಿಂದ ಆ ನಿಘಂಟು ಸು.೧೪೦೦ರಲ್ಲಿ ರಚಿತವಾಗಿರಬೇಕೆಂದೂ ಆ ನಿಘಂಟಿನಲ್ಲಿ ಈಶ್ವರ, ಪಾರ್ವತಿ ಇತ್ಯಾದಿ ಶೈವದೇವತೆಗಳ ಉಲ್ಲೇಖ ಬಂದಿರುವುದರಿಂದ ಅದರ ಕರ್ತೃ ವೀರಶೈವ ಇದ್ದಿರಬಹುದೆಂದೂ ಊಹಿಸಿದ್ದಾರೆ. ಆ ನಿಘಂಟಿನ ಸ್ವರೂಪವನ್ನು ಕುರಿತು ಪರಿಶೀಲನೆ ಮಾಡಿದ್ದಾರೆ.

'ಮಂಗರಾಜ II' (೧೩೯೮) ಎಂಬ ಸಂಪ್ರಬಂಧದಲ್ಲಿ ಮಂಗರಾಜನ ಕಾಲ, ದೇಶ, ಮತ ಇತ್ಯಾದಿ ಅಂಶಗಳನ್ನು (ಇತಿವೃತ್ತ) ಕುರಿತು ಚರ್ಚಿಸಿ ಅವನ ನಿಘಂಟು 'ಅಭಿನವಾಭಿಧಾನಂ'ಅನ್ನು ಕುರಿತು ಕೂಲಂಕಷವಾಗಿ ಪರಿಶೀಲಿಸಿದ್ದಾರೆ. ಮಂಗರಾಜನ ಈ ನಿಘಂಟು ನಾಗವರ್ಮನ 'ಅಭಿಧಾನ ವಸ್ತುಕೋಶ'ದ ಬಳಿಕ ಎರಡನೆಯ ಪ್ರಸಿದ್ಧ ಸಂಸ್ಕೃತ-ಕನ್ನಡ ನಿಘಂಟು. ಇದರಲ್ಲಿ ಸ್ವರ್ಗ, ಭೂಮಿ, ಪಾತಾಳ, ಸಾಮಾನ್ಯ ಮತ್ತು ನಾನಾರ್ಥ ಎಂಬ ೫ ಕಾಂಡಗಳಿವೆ. ಒಟ್ಟು ೫೩೬ ವಾರ್ಧಕ ಷಟ್ಪದಿಗಳಿವೆ. ಈ ನಿಘಂಟಿನ ರಚನೆಯ ಶಿಲ್ಪವನ್ನು ಕುರಿತು ಉದಾಹರಣೆ ಸಮೇತ ವಿವೇಚಿಸಿದ್ದಾರೆ. ಮಂಗರಾಜ ನಿಘಂಟನ್ನು ಕೇಂದ್ರವಾಗಿಟ್ಟುಕೊಂಡು ಹಳಗನ್ನಡನಿಘಂಟುಗಳನ್ನು ಕುರಿತು ಅಧ್ಯಯನ ನಡೆಯಬೇಕೆಂದು ಸೂಚಿಸಿದ್ದಾರೆ.

ಸಂಸ್ಕೃತ ಮತ್ತು ಕನ್ನಡ ನಿಘಂಟುಸಾಹಿತ್ಯದ ಸ್ಥೂಲಸಮೀಕ್ಷೆಯನ್ನು ಒಂದು ಸಂಪ್ರಬಂಧದಲ್ಲಿ ಮಾಡಿದ್ದಾರೆ. ಸಂಸ್ಕೃತದ ಬಹು ಪ್ರಾಚೀನವಾದ ವೈದಿಕನಿಘಂಟು, ಅಮರಸಿಂಹನ ಅಮರಕೋಶ, ಹೇಮಚಂದ್ರನ ಅಭಿಧಾನ ಚಿಂತಾಮಣಿ ಮೊದಲು ಗೊಂಡು ಈಚಿನ ಆಪ್ಟೆ ಕೋಶದ ತನಕ ಈ ಲೇಖನದಲ್ಲಿ ಚರ್ಚಿಸಿದ್ದಾರೆ. ಅದರಂತೆ ರನ್ನಕಂದ ಆದಿಯಾಗಿ ಸೂರ್ಯಕವಿಯ ಕವಿಕಂಠಹಾರದ ವರೆಗೆ, ರೀವ್ ಆದಿಯಾಗಿ ಕ.ಸಾ.ಪ. ನಿಘಂಟಿನ ತನಕ ಎಲ್ಲ ಕನ್ನಡ ನಿಘಂಟುಗಳ ರಚನೆ, ರಚನಾಕ್ರಮವನ್ನು ಕುರಿತು ಶಾಸ್ತ್ರೀ ಅವರು ಕೂಲಂಕಷವಾಗಿ ಚರ್ಚಿಸಿದ್ದಾರೆ. ನಿಘಂಟಿನ ಮೂಲದ್ರವ್ಯ ಗಳಾದ ಶಬ್ದಗಳು ಕೋಶರಚನೆಯಲ್ಲಿ ಅವು ಪಡೆದುಕೊಳ್ಳುವ ಅರ್ಥಾಂತರ ಮತ್ತು ಅರ್ಥಛಾಯೆಗಳನ್ನು ಕುರಿತು 'ಕನ್ನಡ ನಿಘಂಟುರಚನೆಯಲ್ಲಿ ಶಬ್ದಾರ್ಥವಿಚಾರದ ಕೆಲವಂಶಗಳು' ಎಂಬ ಲೇಖನದಲ್ಲಿ ವಿವೇಚಿಸಿದ್ದಾರೆ. ನಿಘಂಟುರಚನೆಯ ತಾತ್ವಿಕಾಂಶ ಗಳನ್ನೊಳಗೊಂಡಿರುವ ಈ ಲೇಖನ ಶಬ್ದಸಮಸ್ಯೆಗಳ ಎಲ್ಲ ಮೈಗಳನ್ನೂ ಬಿಡಿಸಿ ತೋರಿ ಸುತ್ತದೆ. ಪ್ರಾಸಂಗಿಕವಾಗಿ ನಿಘಂಟಿನ ಪ್ರಯೋಜನ, ನಿಘಂಟುಕಾರನ ಲಕ್ಷಣಗಳನ್ನು ಕುರಿತು ಹೇಳಿದ್ದಾರೆ.

ಪ್ರಾಣಿವಾಚಕಗಳು ಕನ್ನಡ ಜನಜೀವನ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳಲಿಕ್ಕೆ ಸಹಾಯಕವಾಗಿವೆ. ಕನ್ನಡ ನಿಘಂಟಿನಲ್ಲಿ ಅವುಗಳ ದಾಖಲಾತಿಗೆ ಅಗ್ರಸ್ಥಾನವಿದೆ. ಸಾಮಾನ್ಯನಿಘಂಟುವಿನಲ್ಲಿ ಪ್ರಾಣಿವಾಚಕಗಳ ದಾಖಲಾತಿಗಿರುವ ಇತಿಮಿತಿಗಳನ್ನು

ಉದಾಹರಣೆ ಸಮೇತವಾಗಿ ತೋರಿಸಿಕೊಟ್ಟಿದ್ದಾರೆ. 'ಆನೆ' ಎಂಬ ಶಬ್ದದ ಅರ್ಥ ಸುಲಭ ಮತ್ತು ಸರಳ. ಇದು ಸಾಮಾನ್ಯನಿಘಂಟಿನಲ್ಲಿ ನಿಶ್ಚಿತವಾಗಿಯೂ ದಾಖಲಾಗುತ್ತದೆ. ಆದರೆ ಆನೆಯ ವಸ್ತುಪ್ರಪಂಚ ವಿಶಾಲವಾದುದು. ಅದರ ಅಂಗೋಪಾಂಗಗಳು, ರೋಗ -ರುಜಿನಗಳು, ಪ್ರಕಾರಗಳು ಅವುಗಳನ್ನು ನಿರ್ದೇಶಿಸುವ ಶಬ್ದಗಳು ಸಾಮಾನ್ಯ ನಿಘಂಟಿನಲ್ಲಿ ದಾಖಲಾಗಿರುವುದಿಲ್ಲ. ಒಂದು ವೇಳೆ ದಾಖಲಾದರೂ ತುಂಬ ಕಡಿಮೆ. ಆಗ ಆನೆಗೆ ಸಂಬಂಧಿಸಿದ ವಿಶಿಷ್ಟಪದಕೋಶವನ್ನು ಸಿದ್ಧಪಡಿಸಬೇಕಾಗುತ್ತದೆ ಎಂಬ ಶಾಸ್ತ್ರಿಯವರ ಈ ಸಲಹೆ ನಿಸ್ಸಂಶಯವಾಗಿಯೂ ಮೌಲಿಕವಾದುದು.

ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟುರಚನೆಯ ಮುನ್ನ ಕಿಟೆಲ್‌ರ ನಿಘಂಟು ಸಾರ್ವಜನಿಕ ಜೀವನದಲ್ಲಿ ಪ್ರಚಲಿತವಾಗಿತ್ತು. ಕನ್ನಡ ಭಾಷೆಯ ಚಾರಿತ್ರಿಕ ಬೆಳವಣಿಗೆ ಹಾಗೂ ಆಧುನಿಕ ಭಾಷಾಶಾಸ್ತ್ರದ ಹಿನ್ನೆಲೆಯಲ್ಲಿ ಇನ್ನೊಂದು ನಿಘಂಟಿನ ಅಗತ್ಯತೆಯೂ ಇತ್ತು. ಕನ್ನಡ ಸಾಹಿತ್ಯ ಪರಿಷತ್ತು ಆ ಕೆಲಸವನ್ನು ಹಮ್ಮಿಕೊಂಡು ಪೂರ್ತಿಗೊಳಿಸಿದೆ (೮ ನಿಘಂಟುಗಳು ಪ್ರಕಟವಾಗಿವೆ). ಶಾಸ್ತ್ರಿಗಳು 'ಕನ್ನಡ ಸಾಹಿತ್ಯಪರಿಷತ್ತಿನ ಕನ್ನಡ ನಿಘಂಟು' ಎಂಬ ಸಂಪ್ರಬಂಧದಲ್ಲಿ. ಕ.ಸಾ.ಪ. ನಿಘಂಟಿನ ಆರಂಭಿಕ ಚಟುವಟಿಕೆಗಳು, ಶಬ್ದಸಂಗ್ರಹಕಾರ್ಯ, ಆ ನಿಘಂಟಿನ ಸ್ವರೂಪ, ವ್ಯಾಪ್ತಿ, ಪರಿಷ್ಕರಣೆ ಹಾಗೂ ಪ್ರಯೋಜನಗಳನ್ನು ಕುರಿತು ಸ್ಥೂಲವಾಗಿ ವಿವೇಚಿಸಿದ್ದಾರೆ. ಕನ್ನಡ ನಾಡು-ನುಡಿಯ ಅಭಿವೃದ್ಧಿಗಾಗಿ ಶ್ರಮಿಸಿದ ವಿದೇಶಿ ಪಂಡಿತರಲ್ಲಿ ಕಿಟೆಲರು ಪ್ರಮುಖರು. 'ರೆ|| ಎಫ್. ಕಿಟೆಲ್ ಸ್ಮರಣೆ' ಎಂಬ ಲೇಖನದಲ್ಲಿ ಶಾಸ್ತ್ರೀ ಅವರು ಕಿಟೆಲ್‌ರ ಜೀವನವೃತ್ತಾಂತ ಹಾಗೂ ಅವರ ಅಧ್ಯಯನಕ್ಷೇತ್ರಗಳಾದ ವ್ಯಾಕರಣ, ಛಂದಸ್ಸು, ನಿಘಂಟು, ಗ್ರಂಥ ಸಂಪಾದನೆ ಹಾಗೂ ಇಂಡಿಯನ್ ಆಂಟಿಕ್ವರಿ ಪತ್ರಿಕೆಯ ಲೇಖಕರಾಗಿ ಅವರ ಸಾಧನೆ ಇವನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಿದ್ದಾರೆ.

ಹೀಗೆ ಭಾಷೆ ಮತ್ತು ನಿಘಂಟು ಕ್ಷೇತ್ರದಲ್ಲಿ ವೆಂಕಟಾಚಲ ಶಾಸ್ತ್ರೀ ಅವರ ಶ್ರಮ, ಮಾಡಿದ ಆಲೋಚನೆ ಅಪಾರ. ಭಾಷಾಧ್ಯಯನಕ್ಷೇತ್ರಕ್ಕೆ ಅವರು ನೀಡಿರುವ ಕಾಣಿಕೆ ಮೌಲಿಕವಾದುದು. ಆ ಕ್ಷೇತ್ರದಲ್ಲಿ ಅವರ ಕೃತಿಗಳು, ಸಂಪ್ರಬಂಧಗಳು ಅಧ್ಯಯನಕಾರರಿಗೆ ಹೊಸ ದಿಗಂತವನ್ನು ತೋರಿಸಿದುವು ಎಂಬುದರ ಬಗ್ಗೆ ಸಂದೇಹವಿಲ್ಲ. ಶಾಸ್ತ್ರೀ ಅವರು ಮಾಡಿರುವ ವಿವೇಚನೆಯನ್ನು ಮುಂದಿನವರು ಬೆಳೆಸಬೇಕಾಗಿದೆ. ಅದುವೇ ನಾವು ಶಾಸ್ತ್ರೀ ಅವರಿಗೆ ಸಲ್ಲಿಸುವ ನುಡಿಗೌರವವಾಗಿದೆ.

ಹಿರಿಯರೊಡನೆ ಒಂದು ಹರಟೆ

ಎಂ.ರಾಜಗೋಪಾಲಾಚಾರ್ಯ

ಉಡುಪಿಯಲ್ಲಿ ಕಳೆದ ಮೇ ತಿಂಗಳ ಕೊನೆಗೆ ತುಳು ನಿಘಂಟು ಯೋಜನೆಯಡಿಯಲ್ಲಿ ಕೋಶರಚನೆಯ ಬಗೆಗೆ ಒಂದು ಕಾರ್ಯಾಗಾರ ನಡೆಯಿತು. ಅದರಲ್ಲಿ ಉಪನ್ಯಾಸಕರಾಗಿ, ಸಲಹೆಗಾರರಾಗಿ ಹಲವಾರು ಕಡೆಗಳಿಂದ ಹಲವು ಮಂದಿ ವಿದ್ವಾಂಸರು ಆಹೂತರಾಗಿದ್ದರು. ಅವರಲ್ಲಿ ಶ್ರೀಮಾನ್ ಜಿ.ವೆಂಕಟಸುಬ್ಬಯ್ಯನವರು, ಡಾ.ಟಿ.ವಿ. ವೆಂಕಟಾಚಲ ಶಾಸ್ತ್ರಿಗಳು ಮುಂತಾದ ವಿದ್ವನ್ಮಣಿಗಳೂ ಇದ್ದರು. ನನ್ನ ಹಿರಿಯ ಮಿತ್ರರೂ ಹಳೆಯ ವಿದ್ವಾಂಸರೂ ಆದ ವೆಂಕಟಸುಬ್ಬಯ್ಯನವರನ್ನೂ ಶಾಸ್ತ್ರಿಗಳನ್ನೂ ನೋಡಿಬರೋಣ ಎಂದು ಹೋದೆ. ಅವರೊಡನೆ ಒಂದೆರಡು ಗಂಟೆ ಕಳೆದ ರಸನಿಮಿಷಗಳನ್ನೂ ಅಲ್ಲಿ ನಡೆದ ಪುಟ್ಟ ಚರ್ಚೆಯನ್ನೂ ನಿಮ್ಮ ಮುಂದಿಡುತ್ತೇನೆ. ನಮ್ಮಲ್ಲಿ ಹಲವರಿಗೆ ಬದುಕಿನ ಹತ್ತಾರು ಸಮಸ್ಯೆಗಳು ತಲೆಯಲ್ಲಿ ತುಂಬಿರುತ್ತವೆ. ಅದರಲ್ಲೂ ಸನಿಹದ ನಾಳೆಯ ಚಿಂತೆ ಬಲವಾಗಿರುತ್ತದೆ. ಮನೆಗೆ ಸಾಮಾನು ಎಲ್ಲಿಂದ ಕೊಳ್ಳಬೇಕು? ಟಿ.ವಿ. ಯಾವ ಕಡೆ ಹಾಕೋಣ? ಯಾವ ಬ್ರಾಂಡಿನ ಕಾರು ತೆಗೆದುಕೊಳ್ಳುವುದು? ಹೆಂಡತಿಗೆ ಸೀರೆ ಕೊಳ್ಳಬೇಕು, ಮಕ್ಕಳಿಗೆ ಕಾಲೇಜಿನಲ್ಲಿ ಸೀಟು ಹೇಗೆ ದೊರಕಿಸಬೇಕು? ಗ್ಯಾಸ್ ಖರ್ಚಾಗಿದೆ. ಬಾಡಿಗೆ ಯಾವಾಗ ಕೊಡಬೇಕು? ಸಾಲ ಕೇಳಲು ಬಂದವರಿಗೆ ಯಾವ ರೀತಿ ಸುಳ್ಳು ಹೇಳಲಿ? ಹೀಗೆ ನೂರಾರು ಯೋಜನೆಗಳು ಎಲ್ಲರನ್ನೂ ಕಾಡುವಂಥವು. ಇವೆಲ್ಲದರ ಮಧ್ಯದಲ್ಲೂ ಈ ಕವಿ ತನ್ನ ಕಾವ್ಯದಲ್ಲಿ ಈ ಒಂದು ಪದವನ್ನು ಎಷ್ಟು ಅರ್ಥವತ್ತಾಗಿ ಬಳಸಿದ್ದಾನೆ ನೋಡಿ ಎಂದು ಆ ಪದ್ಯವನ್ನು ಹೇಳಿ, ಪದ್ಯದ ಭಾವವನ್ನು ಬಿಡಿಸಿ, ಅದರಲ್ಲೇ ತನ್ಮಯರಾಗಿ ಈ ಲೋಕವನ್ನೇ ಮರೆತಿರುವಂಥವರನ್ನು ನೋಡಿದ್ದೀರಾ? ಅಂಥವರು ನಮ್ಮ ಸ್ನೇಹಿತರು.

ಒಬ್ಬ ಸುಭಾಷಿತಕಾರ ಹೇಳಿದ:

> ಸಂತಃ ಸದಾಭಿಗಂತವ್ಯಾ ಯದಿ ನೋಪದಿಶಂತ್ಯಪಿ ।
> ಯಾಸ್ತು ಸ್ವೈರಕಥಾಸ್ತೇಷಾಮುಪದೇಶಾ ಭವಂತಿ ತಾಃ ॥

ವಿದ್ವಾಂಸರು, ಹಿರಿಯರು ಸುಮ್ಮನೆ ಹರಟೆಹೊಡೆಯುತ್ತಿದ್ದರೂ ಅದು ಉಪದೇಶವೇ ಆಗುತ್ತದೆ ಎಂದು ಈ ಮಾತಿನ ಅರ್ಥ. ಸಜ್ಜನರ ಸಹವಾಸದಿಂದ ಆಗುವ ಲಾಭ ಅಮೂಲ್ಯವಾದ್ದು. ಇದೇನು? ಕೆಲಸಕ್ಕೆ ಬಾರದ ಶಬ್ದಗಳನ್ನು ಹಿಂಜುತ್ತಾ

ಕುಳಿತರೆ ಹೇಗೆ? ಒಬ್ಬ ಕವಿ ಏನೋ ಅವರ ತಲೆಗೆ ಬಂದದ್ದನ್ನು ಬರೆದ. ಅದಕ್ಕಾಗಿ ನಾವು ತಲೆಕೆಡಿಸಿಕೊಳ್ಳುವುದರಿಂದ ಏನು ಸಾರ್ಥಕ? ಅದರಿಂದ ನಮ್ಮ ಹೊಟ್ಟೆ ತುಂಬುವುದೆ? ಎಂದು ನೀವು ಕೇಳಬಹುದು. ಹೌದು. ಖಂಡಿತ ತುಂಬುವುದಿಲ್ಲ. ಹಾಗೆ, ಹೊಟ್ಟೆ ತುಂಬಿಸಿಕೊಳ್ಳುವವರೂ ಇದ್ದಾರೆ. ಬಲ್ಲಿರಾ? ಒಮ್ಮೆ ನಾನು ನಮ್ಮ ಗುರುಗಳೊಡನೆ ಒಂದು ಸಂಗೀತ ಕಚೇರಿಗೆ ಹೋಗಿದ್ದೆ. ಸಂಗೀತ ಚೆನ್ನಾಗಿಯೇ ಇತ್ತು. ಕಚೇರಿ ಮುಗಿದು ಬಂದ ಮೇಲೆ ಗುರುಗಳ ಮನೆಯಲ್ಲೆ ನಮಗೆ ಊಟ ಸಿದ್ಧವಾಗಿತ್ತು. ಊಟಕ್ಕೆ ಬನ್ನಿ ಎಂದು ಕರೆದಾಗ, ಇನ್ನೇಕೆ ಊಟ? ಈ ಸಂಗೀತದಿಂದಲೇ ಹೊಟ್ಟೆ ತುಂಬಿದೆ. ಇದೇ ಸಾಕು ಎಂದು ಹಾಗೇ ಮಲಗಿದರು. ಒಂದು ಗಂಟೆಯ ಮೇಲೆ ಎದ್ದರು. ಆ ಸಂಗೀತವಿದ್ವಾಂಸ ಹಾಡಿದ ಎಲ್ಲ ವರಸೆಗಳನ್ನೂ ಪಿಟೀಲಿನಲ್ಲಿ ನುಡಿಸತೊಡಗಿದರು. ನಮಗೆ ಅಚ್ಚರಿ. ಅವರಿಗೆ ಆ ದಿನ ಹೊಟ್ಟೆ ತುಂಬಿದ್ದಕ್ಕಿಂತ ಹೆಚ್ಚು ಆರಾಮವಾಗಿತ್ತು. ಇಂಥವರೂ ಇದ್ದಾರೆ. ಇವರ ಸಾಲಿಗೆ ನಾವು ಸೇರುವವರಲ್ಲ. ಆದ್ದರಿಂದ ಈ ಕಾಡು ಹರಟೆ ಬೇಡ ಎಂದು ನಿಮಗೆ ಕಂಡರೆ, ಇಲ್ಲಿಯೇ ನಿಲ್ಲಿಸಿ. ಮುಂದಕ್ಕೆ ಓದದಿದ್ದರೂ ಚಿಂತೆ ಇಲ್ಲ. ಬಿಡುವಿದ್ದಾಗ, ನಿದ್ದೆ ಬಾರದಿದ್ದರೆ ಓದಿದರಾಯಿತು.

ರಾ : ನಮಸ್ಕಾರ ಶಾಸ್ತ್ರಿಗಳೇ, ವೆಂಕಟಸುಬ್ಬಯ್ಯನವರೆ!

ವೆಂ : ನಮಸ್ಕಾರ, ಬನ್ನಿ, ನೀವು ಈಗ ಸುಗುಣಮಾಲಾದ ಸಂಪಾದಕರಲ್ಲವೆ? ಅದನ್ನು ನಾನೂ ತರಿಸ್ತೀನಿ. ನೋಡಿ! ಅದರಲ್ಲಿ ನಿಮ್ಮ ಸಂಸ್ಕೃತಸಂಭಾಷಣೆ ಮತ್ತು ತ್ರಿಭಾಷಾಸೂಕ್ತಿಗಳು ತುಂಬ ಚೆನ್ನಾಗಿವೆ. Really your Sanskrit Language is powerful and precise. ನಮ್ಮ ಹುಡುಗರಿಗೆ ಸ್ವಲ್ಪ ಅದನ್ನು follow ಮಾಡ್ರೋ ಎಂದು ಹೇಳಿದ್ದೀನಿ.

ರಾ : ನಿಮ್ಮಂಥವರಿಗೆ ಅದು ಮೆಚ್ಚಿಕೆಯಾದರೆ ಶ್ರೀಗಳವರ ಶ್ರಮ ಸಾರ್ಥಕ ಎನ್ನಿಸುತ್ತೆ. ಧನ್ಯೋಽಸ್ಮಿ. ಶಾಸ್ತ್ರಿಗಳೇ, ಈಗ ತಾವು ಏನು ಬರೆಯುತ್ತಿದ್ದೀರಿ?

ಶಾ : ನಮ್ಮದೇನ್ ಕೇಳ್ತೀರಾ, ಇದ್ದದ್ದೆ. 'ಕನ್ನಡ ಚೆನ್ನುಡಿ' ಎಂಬುದೊಂದು ಸಂಕಲನ ಮಾಡಿದೆ. ಅದರಲ್ಲಿ ಕವಿರಾಜಮಾರ್ಗದಿಂದ ಹಿಡಿದು ನಮ್ಮ ಕಾಲದವರೆಗಿನ ಕಾವ್ಯ ಪುರಾಣಗಳಿಂದ ಆರಿಸಿ ಸುಮಾರು ೩೦೦೦ ಪದ್ಯಗಳನ್ನು chronologyಯ ಕ್ರಮದಲ್ಲಿ, ವಿವೇಕ, ಕುಲ, ಸಿರಿತನ, ನೀತಿ, ಸಂಸಾರ, ವೈರಾಗ್ಯ ಮುಂತಾದ ತಲೆಬರಹದ ಅಡಿಯಲ್ಲಿ ಜೋಡಿಸಿ ಬರೆದಿದ್ದೇನೆ. ಇದಕ್ಕೊಂದು ಚಿಕ್ಕದಾದ ಉಪೋದ್ಘಾತವನ್ನೂ ಬರೆದೆ. ಇದಕ್ಕಾಗಿ ಸುಮಾರು ೨೦೦ ಪುಸ್ತಕ ಓದಬೇಕಾಯಿತು.

ರಾ : ಇದು ಒಳ್ಳೆಯ ಕೆಲಸ, ಬಹಳ ಶ್ರಮದ ಕೆಲಸವೂ ಹೌದಲ್ಲವೆ?

ಶಾ : ೧೯೮೭ರಲ್ಲಿ ನನ್ನ 'ಕನ್ನಡ ಚಿತ್ರಕಾವ್ಯ'ಕ್ಕೆ ಗ್ರಂಥಲೋಕ ಪ್ರಶಸ್ತಿ ಲಭಿಸಿತು. ಇದರಲ್ಲಿ ಕವಿರಾಜಮಾರ್ಗದಿಂದ ಹಿಡಿದು ಪ್ರಸಿದ್ಧಗ್ರಂಥಗಳಲ್ಲಿ ಬರುವ ಪ್ರಹೇಳಿಕೆ, ಬಂಧಚಿತ್ರಗಳನ್ನೆಲ್ಲಾ ಕಲೆಹಾಕಿ, ಬಿಡಿಸಿ ವಿವರಿಸಿದ್ದೇನೆ. ಭಾರತೀಯ ಚಿತ್ರಕಾವ್ಯದ

ಇತಿಹಾಸವನ್ನು ಸಂಸ್ಕೃತದ ಹಿನ್ನೆಲೆಯಲ್ಲಿ ವಿವರಿಸುವ ಪ್ರಯತ್ನವಿದು. ಇದಕ್ಕೆ ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆಯಲ್ಲಿ ಪ್ರಕಟವಾದ 'ಒಗಟುಗಳು ಮತ್ತು ಪ್ರಹೇಳಿಕೆಗಳು' ಎಂಬ ನಿಮ್ಮ ಲೇಖನವನ್ನೂ ಸಂಪೂರ್ಣವಾಗಿ ಉಪಯೋಗಿಸಿಕೊಂಡಿದ್ದೇನೆ. ನನ್ನ ೩೦ನೇ ವಯಸ್ಸಿನಿಂದ ಬರೆಯುತ್ತಿದ್ದೇನೆ, ತೃಪ್ತಿಯಿಲ್ಲ. ಏನಾದರೂ ಅಪೂರ್ವವಾದ್ದನ್ನು ಕೊಡಬೇಕು, ಅದೇ ಜೀವನಸಾಫಲ್ಯ. I am second to none ಎಂಬಂತಾಗಬೇಕು. ಹೇಗೂ ಈ ಜೀವ ನಾಳೆ ಈ ಮಣ್ಣಿನಲ್ಲಿ ಬೆರೆಯುತ್ತದೆ. ಆಗ ನಮಗೆ 'ಅತ್ಯತಿಷ್ಠದ್ದಶಾಂಗುಲಂ' ಎಂಬಂತೆ ನಮ್ಮ ಕೃತಿ ಇದೆಲ್ಲವನ್ನೂ ಮೀರಿನಿಂತರೆ ಅದೇ ಜೀವನಸಾಫಲ್ಯ. ನಮ್ಮ ಹಿರಿಯರು ಎಷ್ಟು ದೊಡ್ಡ ಕೆಲಸ ಮಾಡಿದ್ದರು, ಆ ಆದರ್ಶ ನಮ್ಮ ಮುಂದಿರಬೇಕು. ದುರ್ಯೋಧನ ಹೇಳಿದಂತೆ ಆ ಮಹನೀಯರ 'ನಿಜಸಾಹಸೈಕದೇಶಾನುಮರಣಮೆಮಗಕ್ಕೆ ಗಡಾ'. ಇದು ನನ್ನ ಗುರಿ.

ರಾ : ಈ ಕೆಲಸದಲ್ಲಿ ನಿಮಗೆ ಒಮ್ಮೆಯೂ ಬೇಸರ ಆಗಲ್ವೆ?

ಶಾ : ಬೇಸರ ಆಗುವ ಹೊತ್ತಿಗೆ ಅದನ್ನು ಕಳೆಯುವ ಮಾತೊಂದು ಬರುತ್ತದೆ. ಮೊನ್ನೆ ಬಸವರಾಜು ಹೇಳಿದ್ರು: 'ಏನು ಚೊಕ್ಕವಾದ ಬರವಣಿಗೆ ಬರೆಯುತ್ತೀರಿ ನೀವು?' ಸಾಕಲ್ವೆ! ಮೊನ್ನೆ ಗುರುಬಸವಯ್ಯ ಹೇಳಿದ್ರು; ಬಿಳಿಗಿರಿಯವರು ಹೇಳಿದ್ದು ಜ್ಞಾಪಕಕ್ಕೆ ಬರುತ್ತೆ. "ಶಾಸ್ತ್ರೀ ಚೆನ್ನಾಗಿ ಕೆಲ್ಸ ಮಾಡ್ತಾನೆ. ಅವನು ಸತ್ತುಹೋದಮೇಲೆ ಏನು ಮಾಡ್ಲಿ" ಎಂದಿದ್ದರಂತೆ, ಎಂಥವರಿಗೆ ನನ್ನ ಸತ್ತ ಮೇಲಿನ ಚಿಂತೆ ನೋಡಿ! ಆಗ ಆದ ಬೇಸರವೆಲ್ಲ ಮಾಯವಾಗಿಬಿಡುತ್ತೆ. ಈಗ ವೆಂಕಟಸುಬ್ಬಯ್ಯನವರು ನಿಮ್ಮ ಬರೆವಣಿಗೆ ಮೆಚ್ಚಿಕೊಂಡಾಗ ನಿಮ್ಮ ಶ್ರಮ ಸಾರ್ಥಕ ಎನಿಸಲಿಲ್ಲವೇ? ಹಾಗೆ. ಛಂದಸ್ಸಿನ ಮೇಲೆ, ಶಾಸನಗಳ ಮೇಲೆ, ಭಾಷಾಶಾಸ್ತ್ರದ ಮೇಲೆ ಸುಮಾರು ೪೫ ಪುಸ್ತಕಗಳನ್ನು ಪ್ರಕಟಿಸಿದೆ. ಇಷ್ಟಾದರೂ ಈ ಶಾಸ್ತ್ರೀ ಪ್ರಸ್ತುತಕ್ಕೆ ಸ್ಪಂದಿಸುತ್ತಾ ಇಲ್ಲ. An outdated man ಎಂಬ ಅಪಪ್ರಥೆಯೂ ಇದೆ. ಏನು ಮಾಡಲಿ? ಇವತ್ತಿನ ಸಮಾಜದ ಮಧ್ಯೆ ಬದುಕುತ್ತಿದ್ದೇವೆ. ಜನರ ಜ್ಞಾನದ ಮಟ್ಟ ಹೆಚ್ಚುವ ರೀತಿಯಲ್ಲಿ ಬರೆಯುತ್ತೇವೆ. ಇನ್ನೇನು ಮಾಡಲಿ? ಹೇಳಿ. ಆದರೂ ನಾವು ರೆಲವೆಂಟ್ ಆಗಿಲ್ಲವಂತೆ. ಬಿಡಿ.

ರಾ : ಕನ್ನಡದ ಛಂದೋಮೀಮಾಂಸೆಯ ಮೇಲೆ, ಶಾಸನಗಳ ಮೇಲೆ ನೀವು ಸಂಶೋಧಿಸಿದ ಭಾಗ ಯಾವುದು? ಅದರಲ್ಲಿ ನಿಮಗೆ ಒಲವುಂಟಾಗಲು ಕಾರಣವೇನು?

ಶಾ : ಛಂದಸ್ಸು ಬರೇ ಲೆಕ್ಕಾಚಾರದ ಅಕ್ಷರಪುಂಜಗಳಲ್ಲ. ಕವಿ ಅದರಲ್ಲಿ ರಸ ಭಾವಗಳನ್ನು ಹೇಗೆ ತರುತ್ತಾನೆ ಎಂದು ಊಹಿಸುವುದು, ಹಳೆಯ ಶಾಸನಗಳ ಶುದ್ಧಪಾಠ ಹುಡುಕಿ ಅದರಿಂದ ನಿಜದ ಅರ್ಥವನ್ನು ತೋರಿಸುವುದು ಇವೇ ಮುಂತಾದುವನ್ನು ಈಗ ನಾವು ಮಾಡದೆ ಹೋದರೆ, ಮುಂದೆ ಅವು ಹಾಗೇ ಅಪಪಾಠವಾಗಿ ಉಳಿಯುವ ಸಂಭವವಿದೆ. ತ್ರಿಪದಿಗಳಲ್ಲಿ ಅತ್ಯಂತ ಪ್ರಾಚೀನವೆನಿಸಿದ ಕಪ್ಪೆ ಅರಭಟ್ಟನ ಶಾಸನದ ಪದ್ಯವನ್ನು ಕೇಳಿದ್ದೀರಲ್ಲ:

ಸಾಧುಗೆ ಸಾಧು | ಮಾಧುರ್ಯಂಗೆ ಮಾಧುರ್ಯಂ
ಬಾಧಿಪ್ಪ ಕಲಿಗೆ ಕಲಿಯುಗ ವಿಪರೀತನ್
ಮಾಧವನೀತನ್ ಪೆಱನಲ್ಲ ||

ಇದರ ನಿಜವಾದ ಪಾಠ ತಿಳಿಯದೆ, ಅರ್ಥ ಗೊತ್ತಾಗದೆ, ಮಾಧವನೆಂಬವನು ಸಾಧುವಿಗೆ ಸಾಧು, ಮಧುರ ಸ್ವಭಾವದವನಿಗೆ ಅಂತಹವನೇ ಆಗಿದ್ದ. ಹೀಗೇ ಅರ್ಥ ಮೊದಲಿಂದಲೂ ನಡೆದುಕೊಂಡು ಬಂದಿತ್ತು, ನನಗೆ ಇದು ಸರಿಯೆನಿಸಲಿಲ್ಲ. ಮಾಧುರ್ಯ ಎಂಬುದು ಭಾವನಾಮ. ಇದಕ್ಕೆ ಮಧುರಸ್ವಭಾವದವನೆಂದು ಹೇಗೆ ಅರ್ಥವಾಗುವುದು? ಅಲ್ಲದೆ ಸಾಧು ಮತ್ತು ಮಾಧುರ್ಯ ಪದಗಳ ಅರ್ಥಗಳಲ್ಲಿ ಬಹಳ ವ್ಯತ್ಯಾಸವೇನಿಲ್ಲ. ಒಮ್ಮೆ ಸೇಡಿಯಾಪು ಕೃಷ್ಣಭಟ್ಟರು ಮಾಧುರ್ಯ ಎಂಬುದು ಮಧುರಸ್ಯ ಭಾವಃ ಎಂಬ ವ್ಯುತ್ಪತ್ತಿಯಿಂದ ಬಂದದ್ದಲ್ಲ. ಅದು ಕನ್ನಡದ ಪದ. ಸಂಸ್ಕೃತ ಧುರ್ಯ(ಧುರೀಣ)ಕ್ಕೆ 'ಮಹಾ' ಸೇರಿ ತದ್ಭವದಲ್ಲಿ ಮಾಧುರ್ಯ ಎಂದಾಗಿರ ಬೇಕು; ಮಾದೇವ ಸಾದೇವ ಎಂದಿರುವಂತೆ ಎಂದರು. ಧುರ್ಯವೂ ತದ್ಭವವಾಗದಿದ್ದ ಕಾಲವದು. ನನಗೆ ಒಂದು ಎಳೆ ಸಿಕ್ಕಿದಂತಾಯಿತು. ಈಗ ಅದರ ಅರ್ಥ ನಿಚ್ಚಳವಾಗಿ ಹೊಳೆಯಿತು. ಸಾಧುವಿಗೆ ಸಾಧು, ಶೂರನಿಗೆ ಶೂರ, ಬಾಧಿಪ್ಪ ಕಲಿಗೆ ಕಲಿಯುಗ ವಿಪರೀತನ್ ಅಂದರೆ ಕೃತಯುಗದ ಸ್ವಭಾವದವನಂತೆ ಸಜ್ಜನನಾಗಿಯೇ ಇರುವಾತ.

ವೆಂ : ಇದರಲ್ಲಿ ನನ್ನ ಅಭಿಪ್ರಾಯ ತುಸು ಭಿನ್ನವಾಗಿದೆ. ಕಲಿಗೆ ಕಲಿ ಎಂದರೆ ದುಷ್ಟನಿಗೆ ದುಷ್ಟನೇ ಆಗಿದ್ದ ಆತ ಯುಗವಿಪರೀತನ್. ಈ ಯುಗಕ್ಕೆ ತೀರ ವಿಪರೀತಸ್ವಭಾವದವ ಎಂದಷ್ಟೆ ಅಭಿಪ್ರಾಯಭೇದ.

ಶಾ : ಹೌದು. ವೆಂಕಟಸುಬ್ಬಯ್ಯನವರು ಹಾಗೆ ತೀರ್ಮಾನಿಸಿದ್ದಾರೆ. ಇರಲಿ. ಪುಲಿಕೇಶಿ ಎಂಬ ಶಬ್ದ ಕೇಳಿದ್ದೀರಲ್ಲ! ಇದರ ಅರ್ಥವೇನು ಎಂದು ತಿಳಿಯಲು ಹಲವಾರು ಗ್ರಂಥಗಳನ್ನೂ ಶಾಸನಗಳನ್ನೂ ನೋಡಬೇಕಾಯಿತು. ಈ ಸಂಶೋಧನೆಯಲ್ಲಿ ಒಂದು ತರದ ಸುಖವೂ ಇದೆ. ಹಲವಾರು ಪುಸ್ತಕಗಳನ್ನು ನೋಡುವ ಒಂದು ಸದವಕಾಶವಿದೆ. ಪುಲಿಕೇಶಿಗೆ ಸಮಾನಾಂತರವಾಗಿ ಬೆಣ್ಣೆಕೇಸಿ (ಬೆಣ್ಣೆಕೃಷ್ಣ) ಎಳೆಕೇಸಿ (ಬಾಲಕೃಷ್ಣ) ಮುಂತಾದ ಪದಗಳು ದೊರಕುತ್ತವೆ. ಪುಲಿ, ಪೊಲಿ, ಪೊಲ ಮುಂತಾದುವು ಸಜಾತೀಯ ಸಂಬಂಧವುಳ್ಳವು, ಪೊಲಿಯುವ ಅಥವಾ ಪೊಲಿದ(ಕಟ್ಟಿದ) ತಲೆಗಂಟುಳ್ಳವ (ಕಾಕಪಕ್ಷಧರ ಕೃಷ್ಣ) ಎಂಬ ಅರ್ಥವಾಗಬಹುದು. ಹೀಗೆ ವಿಚಾರ ಸಾಗುತ್ತದೆ.

ವೆಂ : ಶಬ್ದದ ಚರಿತ್ರೆಯ ಬೆನ್ನುಹತ್ತಿ ಹೋದಾಗ ನಿಬ್ಬೆರಗಾಗುವಂತಹ ವಿಷಯಗಳೂ ಸಿಗುತ್ತವೆ ಆಚಾರ್ಯರೆ! ಮನುಷ್ಯನ ಆತ್ಮಚರಿತ್ರೆಗೊಂದು ಮಿತಿಯಿದೆ. ಪದಗಳ ಚರಿತ್ರೆ ನಮಗಿಂತ ಮೊದಲು ಎಂದೋ ಆರಂಭವಾಗಿದ್ದು ನಮ್ಮ ನಂತರವೂ ನಿರಂತರ ಸಾಗಿರು ತ್ತದೆ. ನಿಘಂಟುವಿನ ಕೆಲಸದಲ್ಲಿ ತೊಡಗಿದ ನನಗೆ ಅನೇಕಬಾರಿ ಇಂತಹ ವಿಸ್ಮಯ ವಾದದ್ದಿದೆ. ಬನಿಯನ್ ಎಂಬ ಇಂಗ್ಲಿಷ್ ಪದದ ಮೂಲ ಸಂಸ್ಕೃತದ ವಣಿಕ್ ಶಬ್ದ.

ಇದು ಹಿಂದಿಯಲ್ಲಿ ಬನಿಯಾ ಆಗಿ, ಇಂತವರು ಹಾಕಿಕೊಳ್ಳುವ ಒಳ ಅಂಗಿ ಎಂಬರ್ಥದಲ್ಲಿ ಇಂಗ್ಲಿಷಿಗೆ ಹೋಗಿ ಅಲ್ಲಿ ಬನಿಯನ್ ಆಗಿ ಆ ನಿಘಂಟಿಗೆ ಸೇರಿಹೋಗಿದೆ. ಇದು ತೀರ ಅಚ್ಚರಿಯ ಸಂಗತಿಯಲ್ಲವೆ?

ರಾ : ಚೆನ್ನಾಗಿದೆ. ಹೀಗೆ ನೋಡಿದರೆ ಎಲ್ಲಾ ಪದಗಳೂ ಒಂದಕ್ಕೊಂದು ತೀರ ಹತ್ತಿರದವು ಎಂದು ಕಾಣುತ್ತದೆ. ನಿಮಗೆ ಈ ಸಂಶೋಧನೆಯಲ್ಲಿ ಒಲವು ಹೇಗುಂಟಾಯಿತು?

ವೆಂ : ನೋಡಿ! ನಮ್ಮ ಗುರುಗಳು ಬಿ.ಎಂ.ಶ್ರೀಕಂಠಯ್ಯನವರು, ಎ.ಆರ್.ಕೃಷ್ಣಶಾಸ್ತ್ರಿಗಳು ಮೊದಲಾದ ಕನ್ನಡದ ದಿಗ್ಗಜಗಳು. ಇವರು ನಮಗೆ ವಿದ್ಯೆಗಿಂತ ಹೆಚ್ಚಾಗಿ ನಮ್ಮ ಕೆಲಸವನ್ನು ಪ್ರೀತಿಸಲು ಕಲಿಸಿದರು. ಈಗಿನ ಹುಡುಗರಿಗೆ ಮನೋರಂಜನೆ ಮಾತ್ರ ಸಾಕು. ಒಂದು ವಿದ್ಯೆಯನ್ನು ಸ್ವಾಯತ್ತಮಾಡಿಕೊಂಡು ಅದರಿಂದ ಆನಂದ ಪಡೆಯಬೇಕೆಂದು ತಿಳಿದಿಲ್ಲ. ನಮಗೆ ಎಂ.ಎ. ಪರೀಕ್ಷೆಯಾಗುವಾಗ ಒಂದು ವಿದಾಯ ಸಮಾರಂಭ ಏರ್ಪಡಿಸಿದ್ದೆವು. ಅದರಲ್ಲಿ ನಮ್ಮ ಗುರುಗಳು ನಮಗೆ ಕನ್ನಡದ ದೀಕ್ಷೆ ಕೊಟ್ಟರು. ಅವರು ಹೇಳಿದರು: ನಮಗೆ ಈಗ ನೀವು ಗುರುದಕ್ಷಿಣೆಯನ್ನು ತನು ಮನ ಧನಗಳಿಂದ ಕೊಡಬೇಕಾಗಿದೆ. ಅದೇನಂದರೆ, ಕನ್ನಡವನ್ನು ನಿಮ್ಮ ಕೈಯಲ್ಲಿಡುತ್ತೇವೆ. ನೀವು ಅದನ್ನು ಅಭಿವೃದ್ಧಿಗೊಳಿಸಬೇಕು. ಅದಕ್ಕೆ ಯೋಗ್ಯತೆಯನ್ನು ಸಂಪಾದನೆ ಮಾಡಿಕೊಳ್ಳಿ ಎಂದು ನಮಗೆ ಕನ್ನಡದ ದೀಕ್ಷೆ ಕೊಟ್ಟರು. ಅದಕ್ಕೆ ನಾನು ತಮಾಷೆಗಾಗಿಯೆಂಬಂತೆ ಹೇಳಿದೆ: ತನುಮನಗಳಿಂದ ನಾವು ಕನ್ನಡದ ಸೇವೆಯನ್ನು ಮಾಡಬಲ್ಲೆವು. ನಾವೇ ಈಗ ವರದಕ್ಷಿಣೆ ಕೇಳುವ ಸ್ಥಿತಿಯಲ್ಲಿದ್ದೇವೆ. ಇನ್ನು ಗುರುದಕ್ಷಿಣೆ ಹೇಗೆ ಕೊಡಲಿ? ಎಂದು. ಅಲ್ಲಿಂದ ನಾನು ಬಿ.ಎಂ.ಶ್ರೀಯವರು ಹಾಕಿಕೊಟ್ಟ ದಾರಿಯಲ್ಲಿ ನಡೆದೆ. ಕನ್ನಡದ ಪ್ರಚಾರಕ್ಕಾಗಿ ಶಾಲಾಕಾಲೇಜುಗಳಲ್ಲಿ ಕನ್ನಡ ಸಂಘಗಳನ್ನು ಸ್ಥಾಪಿಸಲು ಪ್ರಯತ್ನಿಸಿದೆ. ಬೆಂಗಳೂರು ಆಗ ತಮಿಳಿನವರ ಕೇಂದ್ರವಾಗಿತ್ತು. ಕನ್ನಡ ಸಾಹಿತ್ಯಪರಿಷತ್ತಿನ ಕಾರ್ಯದರ್ಶಿಯಾಗಿ ಕನ್ನಡದ ಪ್ರಚಾರ ಮಾಡಿದೆ. ಮತ್ತೆ ಕನ್ನಡ ನಿಘಂಟುವಿನ ಕೆಲಸದಲ್ಲಿ ಸೇರಿಕೊಂಡೆ. ಆಗ ಕೃಷ್ಣಶಾಸ್ತ್ರಿಗಳೂ ಇದ್ದರು. ಅವರು ಹೇಳಿದ್ದರು: ವೆಂಕಟಸುಬ್ಬಯ್ಯನವರೆ, ಈ ನಿಘಂಟು ನಮ್ಮ ಕಾಲದಲ್ಲಿ ಮುಗಿವಂಥದಲ್ಲ. ನಿಮ್ಮ ಕಾಲದಲ್ಲಾದರೂ ಮುಗಿಯುವಂತೆ ನೋಡಿಕೊಳ್ಳಿ ಎಂದು. ಇದರ ನಾಲ್ಕು ಸಂಪುಟಗಳು ಪ್ರಕಟವಾಗಿವೆ. ಐದನೆಯದು ಅಚ್ಚಿನಲ್ಲಿದೆ. ಆರನೆಯದು ಮುದ್ರಣಕ್ಕೆ ತಯಾರಾಗಿದೆ. ಏಳನೆಯದರಲ್ಲಿ ಮುಗಿಯಬಹುದೋ ಏನೋ!

ರಾ : ನಿಘಂಟುವಿನ ಕೆಲಸದಲ್ಲಿ ನಿಮಗಾದ ಅನುಭವವೆಂಥದು?

ವೆಂ : ನಮ್ಮ ಸಮಿತಿಯಲ್ಲಿ ದೊಡ್ಡ ವಿದ್ವಾಂಸರಿದ್ದಾರೆ. ಒಂದೊಂದು ಪದ ಕುರಿತು ಸಭೆಯಲ್ಲಿ ಚರ್ಚೆ ನಡೆದಾಗ ತುಂಬ ಖುಷಿಯಾಗುತ್ತೆ, ಪದಗಳ ಅರ್ಥವ್ಯಾಪ್ತಿ, ಪ್ರಯೋಗ ಮುಂತಾದವುಗಳಿಗೆ ಉಂಟಾಗುವ ಸಮಸ್ಯೆಯನ್ನು ಬಿಡಿಸಬೇಕಾದರೆ ನಿರುಕ್ತ,

ಮತ್ತು ಇತರ ಕಾವ್ಯಭಾಗಗಳ ಪರಿಶೀಲನೆ ಮಾಡಬೇಕು. ಇದಕ್ಕೆ ಪಡತಕ್ಕ ಶ್ರಮ ಸಾರ್ಥಕ ಅನ್ನಿಸುತ್ತೆ, ಸಾಹಿತ್ಯಸಂಗ್ರಹದ ಪ್ರಯೋಜನ ಇಲ್ಲಿ ಆಗುತ್ತೆ. ಒಮ್ಮೊಮ್ಮೆ ನನಗೆ ಹತ್ತಾರು ಗ್ರಂಥಗಳನ್ನು ಬರೆಯಬಹುದಿತ್ತು, ಹಾಗೆ ಬರೆಯಲಿಲ್ಲವಲ್ಲಾ ಅಂತ ವ್ಯಥೆಯೂ ಆಗುತ್ತೆ. ಆದರೂ 'ಸಾಹಿತ್ಯಜೀವಿ' ಎಂಬ ಹೆಸರಿನಲ್ಲಿ ಹಲವಾರು ಲೇಖನಗಳನ್ನು ಬರೆದಿದ್ದೇನೆ. ಬೆಂಗಳೂರು-ಕರ್ಣಾಟಕ-ಮೈಸೂರು ವಿಶ್ವವಿದ್ಯಾನಿಲಯ ಗಳಲ್ಲಿ ನನ್ನ ಹೆಸರಿನಲ್ಲಿ ಸುವರ್ಣಪದಕಗಳನ್ನಿಟ್ಟಿದ್ದಾರೆ. ಆಯಾ ವರ್ಷದಲ್ಲಿ ಆ ಸುವರ್ಣಪದಕಗಳನ್ನು ಗೆದ್ದುಕೊಂಡ ವಿದ್ಯಾರ್ಥಿಗಳು ನನ್ನಲ್ಲಿ ಬಂದು, ನನಗೆ ಈ ಬಾರಿ ನಿಮ್ಮ ಪದಕ ಸಿಕ್ಕಿತು ಎಂದು ನಗುಮೊಗದಿಂದ ತಿಳಿಸಿ ಹೋಗುತ್ತಾರೆ. ಏನೋ ಒಂದು ತೃಪ್ತಿ ಮೂಡುತ್ತದೆ.

ನಾವು ಕೋಶದಲ್ಲಿ ಪದಗಳನ್ನು ಸೇರಿಸುವಾಗ, ಆ ಪದಗಳನ್ನು ಯಾವ ಯಾವ ಸಂದರ್ಭದಲ್ಲಿ ಬಳಸಿದ್ದಾರೆಂದು ನೋಡಬೇಕಾಗುತ್ತದೆ. ಆಗ ನಮಗೆ ತೀರ ಅಪರಿಚಿತ ವಾದ ಕಾವ್ಯಭಾಗದಲ್ಲಿ ಆ ಪದ ಹೇಗೆ magic wordನ ಹಾಗೆ ಅರ್ಥವನ್ನು ಉದ್ದೀಪನ ಗೊಳಿಸುತ್ತದೆಯೆಂದು ನೋಡಿದಾಗ ವಿಸ್ಮಯವಾಗುತ್ತದೆ.

ಶಾ : ಇನ್ನೊಂದು ನೋಡಿ ಆಚಾರ್ಯರೆ, ನಮ್ಮ ಹಿಂದಿನ ಕವಿಗಳು ಛಂದಸ್ಸನ್ನು ಬಹಳ ಚೆನ್ನಾಗಿ ಬಳಸಿಕೊಂಡಿದ್ದಾರೆ ಅನ್ನಿಸುತ್ತದೆ. ಕ್ರೋಧದಲ್ಲಿ ಶಾರ್ದೂಲ ವಿಕ್ರೀಡಿತ, ಸಂತಸದಲ್ಲಿ ವಸಂತತಿಲಕ ಇತ್ಯಾದಿ. ಹಿಡಿದ ನೀಳವಾದ ಕತ್ತಿಯು ರಾಕ್ಷಸಿಯ ರಕ್ತ ರಂಜಿತವಾದ ಜಿಹ್ವೆಯಂತಿದೆಯೆನ್ನುವಾಗ ಆ ಛಂದಸ್ಸಿನಲ್ಲಿ ದೀರ್ಘಾಕ್ಷರಗಳು ಒಂದಿಪ್ಪತ್ತಾದರೂ ಬಂದಿರುತ್ತವೆ. ಇವೆಲ್ಲಾ ಮನಸ್ಸಿಗೆ ಖುಶಿ ಕೊಡುವ ಅಂಶಗಳಲ್ಲವೆ? ಖ್ಯಾತಕರ್ಣಾಟಕವೆಂಬ ಆರು ವೃತ್ತಗಳಲ್ಲಿ ಉತ್ಪಲಮಾಲೆ, ಮತ್ತೇಭವಿಕ್ರೀಡಿತ, ಮಹಾಸ್ರಗ್ಧರೆ ಇವು ಸಂಸ್ಕೃತದಲ್ಲಿ ಅಪೂರ್ವ. ಪ್ರಾಚೀನ ಸಂಸ್ಕೃತ ಛಂದೋಗ್ರಂಥಗಳಲ್ಲಿ ಇವುಗಳ ಲಕ್ಷಣವಿಲ್ಲ. ಕನ್ನಡ ಛಂದಸ್ಸಿನ ಪರಿಚಯವಿದ್ದ ಸಂಸ್ಕೃತ ಕವಿಗಳು ಮಾತ್ರ ಕೆಲವೆಡೆ ಉಪಯೋಗಿಸಿದ್ದಾರೆ. ದಾಕ್ಷಿಣಾತ್ಯರಾದ ಅಪ್ಪಯ್ಯ ದೀಕ್ಷಿತರು ಮತ್ತೇಭವಿ ಕ್ರೀಡಿತವನ್ನು ಬಳಸಿ ಸಂಸ್ಕೃತದಲ್ಲಿ ಬರೆದಿದ್ದಾರೆ, ಆದರೆ ಅದು ಸಂಸ್ಕೃತದಲ್ಲಿದ್ದ ಛಂದಸ್ಸಲ್ಲ. ಹೀಗೆ ಕೆಲವು ಅಪೂರ್ವವಾದ ವಿಷಯಗಳು ಸಂಶೋಧನೆಯಲ್ಲಿ ಬೆಳಕಿಗೆ ಬರುತ್ತವೆ.

ಈ ಮಧ್ಯದಲ್ಲಿ ಹೆಚ್.ಕೃಷ್ಣಭಟ್ಟರು ಬಂದು, ಊಟಕ್ಕಾಯಿತು, ಹೋಗೋಣ ಎಂದು ಕರೆದರು. ನಮ್ಮ ಸಂಲಾಪ (ಅಥವಾ ಒಣಹರಟೆ ಎನ್ನಿ) ಅಲ್ಲಿಗೇ ನಿಂತಿತು. ಅಂತೂ ಈ ರೀತಿಯ ಹರಟೆಯಿಂದಲೂ ಹೊಟ್ಟೆತುಂಬುತ್ತದೆಯೆಂದು ಈಗಲಾದರೂ ನಿಮಗೆ ಖಾತ್ರಿಯಾಯಿತಲ್ಲ!*

---

* ಸುಗುಣಮಾಲಾ, ಉಡುಪಿ, ಸೆಪ್ಟೆಂಬರ್ ೧೯೮೮

ಶಾಸ್ತ್ರಿಯವರೊಂದಿಗೆ ಒಂದು ಸಂದರ್ಶನ

ವಿ.ರಘು

ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರೀ ಅಧ್ಯಯನಶೀಲ ಅಧ್ಯಾಪಕರು. ಮಧ್ಯಮವರ್ಗದ ಕುಟುಂಬದಲ್ಲಿ ಜನಿಸಿ ಬಡತನದ ಬೇಗೆಯ ನಡುವೆ ಬೆಳೆದು ಅನಂತರದ ವೃತ್ತಿಜೀವನ ದಲ್ಲಿಯೂ ಸಾಕಷ್ಟು ತೊಂದರೆಗಳ ನಡುವೆಯೇ ಬೆಳೆದವರು. ಸಂಶೋಧನೆ, ಅಧ್ಯಯನ ಗಳಲ್ಲಿನ ಅವರ ಆಸಕ್ತಿಯೇ ಅವರನ್ನು ಈ ಎಲ್ಲದರಿಂದ ದಾಟಿಸಿ ಕನ್ನಡ ನಾಡು-ನುಡಿಗಳ ಸೇವೆಗೆ ಮುಡಿಪಾಗಿಸಿದೆ.

ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿಯವರು ಹೈದರಾಬಾದಿನ ಉಸ್ಮಾನಿಯ ವಿಶ್ವ ವಿದ್ಯಾಲಯದಲ್ಲಿ ಅಧ್ಯಾಪಕವೃತ್ತಿ ಆರಂಭಿಸಿ ಬಳಿಕ ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಸಂಸ್ಥೆಯಲ್ಲಿ ಕ್ರಮವಾಗಿ ಅಧ್ಯಾಪಕ, ರೀಡರ್, ಪ್ರೊಫೆಸರ್, ನಿರ್ದೇಶಕ, ಕಲಾವಿಭಾಗದ ಡೀನ್ ಆಗಿ ಕಾರ್ಯನಿರ್ವಹಿಸಿದರು. ೧೯೯೪ರಲ್ಲಿ ನಿವೃತ್ತಿ ಹೊಂದಿದರೂ ಅವರ ಅಧ್ಯಯನಾಸಕ್ತಿ ಕುಂದಿಲ್ಲ. ಮನೆಯಲ್ಲಿ ಅವರ ಅಧ್ಯಯನ ಕೊಠಡಿ ಕಂಡಾಗ ಶಾಸ್ತ್ರಿಗಳ ಅಭ್ಯಾಸ ಮತ್ತಷ್ಟು ಭರದಿಂದ ಸಾಗಿದೆ ಎಂದು ತಿಳಿಯುತ್ತದೆ.

ಡಾ.ಟಿ.ವಿ. ವೆಂಕಟಾಚಲ ಶಾಸ್ತ್ರಿಯವರ ಶೈಕ್ಷಣಿಕಸಾಧನೆ, ರಚಿಸಿದ ಗ್ರಂಥಗಳು, ಸಂಶೋಧನಲೇಖನಗಳ ಪಟ್ಟಿ (ಮುದ್ರಿತ) ಮೂವತ್ತು ಸಾವಿರ ಪುಟಗಳನ್ನು ಮೀರುತ್ತದೆ! ವ್ಯಾಕರಣ, ಛಂದಸ್ಸು, ಕಾವ್ಯಮೀಮಾಂಸೆ, ನಿಘಂಟು, ಗ್ರಂಥಸಂಪಾದನೆ, ಸಾಹಿತ್ಯ ವಿಮರ್ಶೆ, ಸಂಶೋಧನೆ, ನಾಟಕ, ಜೀವನಚರಿತ್ರೆ, ಪ್ರಬಂಧ, ಅನುವಾದ, ಶಾಸನ, ಇತಿಹಾಸ, ಶಿಕ್ಷಣ, ಕಾವ್ಯಚಿತ್ರ ಹೀಗೆ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿ ಇವರ ಬರೆಹ ವಿದೆ. ಇನ್ನೂ ಕೃತಿ ಲೇಖನಗಳು ಇವರಲ್ಲಿ ಪ್ರಕಟಣೆಗೆ ತಯಾರಾಗುತ್ತಿವೆ ಎಂದರೆ ಇವರ ಅಭ್ಯಾಸದ ಆಳದ ಅರಿವಾದೀತು.

ವಿವೇಕಹಂಸದ ಕೋರಿಕೆಯನ್ನು ಮನ್ನಿಸಿ ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರಿಯವರು ಸಂದರ್ಶನನೀಡಿ ಸಹಕರಿಸಿದ್ದಾರೆ. ಅವರಿಗೆ ವಿವೇಕಹಂಸ ಬಳಗದ ಹೃತ್ಪೂರ್ವಕ ವಂದನೆಗಳು.

ಸಾಮಾಜಿಕಮೌಲ್ಯಗಳಲ್ಲಿ ಕುಸಿತ ಕಾಣುತ್ತಿದೆ, ಏಕೆ?

ಹಿಂದೆ ಆದರ್ಶಗಳಿದ್ದವು. ಈಗ ಆಕರ್ಷಣೆಗಳಿವೆ. ಆ ಕಾಲದ ಜನ, ಅಂದರೆ ಹಿರಿಯರು, ಸಾಹಿತಿಗಳು, ಶಿಕ್ಷಕರು, ರಾಜಕೀಯ ಮುಖಂಡರು ಒಂದು ಧ್ಯೇಯಕ್ಕಾಗಿ

ಬಾಳುವವರಾಗಿದ್ದರು. ಅಂತಹ ಉದಾಹರಣೆಗಳು ಕಣ್ಣೆದುರಿಗೇ ಇದ್ದುದರಿಂದ ಸಮಾಜದಲ್ಲೂ ಮೌಲ್ಯಗಳು ನೆಲೆಸುತ್ತಿದ್ದವು. ಈಗ ದಿನಪತ್ರಿಕೆಯನ್ನು ನೋಡಿದರೆ ನಮ್ಮ ಯೋಗ್ಯತೆ ತಿಳಿಯುತ್ತದೆ. ಪ್ರಸ್ತುತದಲ್ಲಿ, ಒಳ್ಳೆಯ ಉದಾಹರಣೆಗಳು ಇಲ್ಲದಿರುವುದೇ ಮೌಲ್ಯಗಳ ಕುಸಿತಕ್ಕೆ ಕಾರಣ.

ವಿದ್ಯಾಭ್ಯಾಸ ಅಂದು ಆಸಕ್ತಿಯನ್ನು ಅವಲಂಬಿಸಿತ್ತು. ಇಂದಿನ ವಿದ್ಯಾರ್ಜನೆಯ ಉದ್ದೇಶವೇ ಬೇರೆ. ತನ್ನ ಕ್ಷೇತ್ರಕ್ಕೆ ಏನಾದರೂ ಹೊಸತನ್ನು ನೀಡಬೇಕೆನ್ನುವ ಉತ್ಸಾಹದಿಂದ ಅಂದಿನ ವಿದ್ಯಾಸಕ್ತರು ವಿಷಯಗಳನ್ನು ಆಯ್ದುಕೊಳ್ಳುತ್ತಿದ್ದರು. ಅಶೈಕ್ಷಣಿಕ ಕಾರಣಗಳೇ (Non-academic reasons) ಈಗ ಹೆಚ್ಚಾಗಿವೆ.

ಶಿಕ್ಷಣದ ಉದ್ದೇಶ ಏನಾಗಿರಬೇಕು ಎಂದು ನಿಮ್ಮ ಅನಿಸಿಕೆ?

ಶಿಕ್ಷಣದಿಂದ ವ್ಯಕ್ತಿತ್ವ ವಿಕಾಸವಾಗಬೇಕು. ಜೊತೆಗೆ ಜ್ಞಾನವನ್ನು ಬೆಳೆಸಿಕೊಳ್ಳಬೇಕು. ಒಂದು ಕ್ಷೇತ್ರಕ್ಕೆ ತನ್ನನ್ನೇ ಅರ್ಪಿಸಿಕೊಂಡು ಅದಕ್ಕೆ ತನ್ನದೊಂದು ಕೊಡುಗೆಯನ್ನು ಕೊಡಬೇಕೆಂಬ ಅಭೀಪ್ಸೆ ಇರಬೇಕು. ಉದ್ಯೋಗಾವಕಾಶದಾಚೆಗೂ ವಿದ್ಯೆಯ ಬೆಳಕು ವಿಸ್ತರಿಸಬೇಕು. ಸ್ಪರ್ಧೆ ಎನ್ನುವುದು ವಾಣಿಜ್ಯ ವ್ಯವಹಾರ ಕ್ಷೇತ್ರಗಳಿಗೆ ಸಹಜ. ಆದರೆ ಶಿಕ್ಷಣರಂಗದಲ್ಲೂ ಅದು ತುಂಬಿಕೊಳ್ಳಬಾರದು. ಪ್ರತಿಭೆಗೆ ಪುರಸ್ಕಾರ ದೊರೆಯುವಂತಾದಾಗ ಶಿಕ್ಷಣದರ್ಜೆ ಅಥವಾ ಶಿಕ್ಷಣದ ಮಟ್ಟ ಹೆಚ್ಚುತ್ತದೆ.

ಅಸಾಂಪ್ರದಾಯಿಕಶಿಕ್ಷಣ ಬಯಸುವವರಿಗೆ ಅದು ದೊರೆಯುವಂತಾಗಬೇಕು. ಅಲ್ಲಾದರೂ ಅರ್ಹತೆಯ ಮಾನದಂಡಗಳನ್ನು ಬಿಗಿಪಡಿಸಬೇಕು.

ಕಡೇಪಕ್ಷ ಶಿಕ್ಷಣಕ್ಷೇತ್ರದಲ್ಲಾದರೂ ಅರ್ಹರಿಗೆ ಮಾತ್ರ ಅವಕಾಶ ಇರಬೇಕು. ಕೇವಲ ಪದವಿಪತ್ರ, ಅಶೈಕ್ಷಣಿಕ ಕಾರಣಗಳ ಆಧಾರದ ಮೇಲೆ 'ಶಿಕ್ಷಕ ವೃತ್ತಿ'ಗೆ ಆಯ್ಕೆ ಮಾಡಬಾರದು. ಎಲ್ಲರಿಗೂ ಶಿಕ್ಷಣ ಬೇಕೇ ಬೇಡವೇ ಎಂಬುದು ಮೊದಲು ನಿರ್ಧಾರವಾಗಬೇಕು. ಅವಶ್ಯವಿದ್ದವರಿಗೆ, ಆಸಕ್ತರಿಗೆ ಶಿಕ್ಷಣ ಸಾಕು. ಉಳಿದವರು ತಮ್ಮ ತಮ್ಮ ಆಸಕ್ತಿಗೆ ತಕ್ಕ ಕಾರ್ಯಕ್ಷೇತ್ರಗಳನ್ನು ಆರಿಸಿಕೊಂಡರೆ ಶಿಕ್ಷಣರಂಗದ ಮೇಲಿರುವ ಅನಾವಶ್ಯಕ ಒತ್ತಡ ಮರೆಯಾಗುವುದು.

ಸಾಹಿತ್ಯ ಮತ್ತು ಶಿಕ್ಷಣದ ಸಂಸ್ಕಾರ ವ್ಯಕ್ತಿಯನ್ನು ಹೇಗೆ ರೂಪಿಸುತ್ತದೆ?

ಮಹಾಕಾವ್ಯ, ಪ್ರಸಿದ್ಧಪುರುಷರ ಜೀವನಚರಿತ್ರೆ, ಒಳ್ಳೆಯ ವಿಚಾರಗಳ ಅಧ್ಯಯನದಿಂದ ವ್ಯಕ್ತಿತ್ವ ಬೆಳೆಯುತ್ತದೆ. ರಾಷ್ಟ್ರವನ್ನು ಪ್ರೀತಿಸುವ, ಪರಂಪರೆಯನ್ನು ಪ್ರೇಮಿಸುವ (Love of their nation, love of their heritage) ಶಿಕ್ಷಣ ಕೊಡಬೇಕು. ಮಾನವೀಯ ಗುಣಗಳು ಬೆಳೆಯುವುದೇ ಸಾಹಿತ್ಯಾಧ್ಯಯನದಿಂದ.

ಒಂದು ಪ್ರಸಂಗ ನೆನಪಾಗುತ್ತಿದೆ: ಎಂ.ಎಚ್.ಗೋಪಾಲ್ ಎಂಬ ಹಿರಿಯ ಪ್ರೊಫೆಸರ್ ಇದ್ದರು. ಅವರದು ಅಧ್ಯಯನಶೀಲ ಮನೋಭಾವ. ಅರ್ಥಶಾಸ್ತ್ರ ಅವರ

ವಿಷಯ ವಾದರೂ ಸಾಹಿತ್ಯದಲ್ಲಿಯೂ ಆಸಕ್ತರು. ಡಿ.ವಿ.ಜಿ.ಯವರ ಜೀವನಧರ್ಮ ಯೋಗ ಗ್ರಂಥವನ್ನು ಅವರು ಒಮ್ಮೆ ನನ್ನಿಂದ ಪಡೆದು ಓದಿದ್ದರು. ಅದಾದ ವರ್ಷಗಳ ಬಳಿಕ ಹೃದ್ರೋಗ ಚಿಕಿತ್ಸೆಗೆಂದು ಆಸ್ಪತ್ರೆ ಸೇರಿದ್ದಾಗ ಮತ್ತೆ ಆ ಪುಸ್ತಕ ಬೇಕೆಂದು ಹೇಳಿಕಳಿಸಿದರು. ಅವರಿದ್ದುದು ವಿಶೇಷಶುಶ್ರೂಷಾ ಕೊಠಡಿಯಲ್ಲಿ. ಅಲ್ಲಿಗೆ ಯಾರನ್ನೂ ಬಿಡುತ್ತಿರಲಿಲ್ಲ. ಅಂತಹ ಸನ್ನಿವೇಶದಲ್ಲೂ ಅವರು ಈ ಜೀವನಧರ್ಮಯೋಗ ಪುಸ್ತಕ ಓದಬೇಕೆಂದು ಬಯಸಿದ್ದು ವಿಶೇಷ. ವೃತ್ತಪತ್ರಿಕೆ, ನಿಯತಕಾಲಿಕೆ ಅಥವಾ ಅವರ ವಿಷಯವಾದ ಅರ್ಥಶಾಸ್ತ್ರವನ್ನು ಬಿಟ್ಟು 'ಜೀವನಧರ್ಮಯೋಗ' ನೀಡುವ ಸಾಂತ್ವನ ಅವರಿಗೆ ಬೇಕಾಗಿತ್ತು ಎಂದು ಕಾಣುತ್ತದೆ. ಸಾಹಿತ್ಯದ ಶಕ್ತಿ ಅಂಥದ್ದು.

ನಿಮ್ಮ ಜೀವನದಲ್ಲಿ ಮರೆಯಲಾಗದ ಘಟನೆ, ಸ್ವಾರಸ್ಯವಾದ ಸಂದರ್ಭ ಇದ್ದರೆ ತಿಳಿಸಿ.

ನಾನು ಹೈದರಾಬಾದಿನಲ್ಲಿ ಮಹಿಳಾ ಕಾಲೇಜಿನಲ್ಲಿ ಅಧ್ಯಾಪಕನಾಗಿದ್ದ ಸಂದರ್ಭ. ಆ ಕಾಲೇಜಿಗೆ ನಾನೇ ಮೊದಲ ಪುರುಷ ಅಧ್ಯಾಪಕ. ಅದು ಮಹಿಳಾಕಾಲೇಜು ಎಂದೆನಲ್ಲವೆ? ಅಲ್ಲಿ ಮಹಿಳಾ ಅಧ್ಯಾಪಕಿಯರೇ ಹೆಚ್ಚು. ಅಲ್ಲಿನ ಪ್ರಾಂಶುಪಾಲರು ಉಪಕುಲಪತಿಗಳಿಗೆ ನನ್ನನ್ನು ಬದಲಿಸಿ ಮಹಿಳಾ ಅಧ್ಯಾಪಕಿಯನ್ನೇ ನೇಮಿಸುವಂತೆ ಕೇಳಿಕೊಂಡರಂತೆ. ಆದರೆ ಅದಕ್ಕೆ ಕುಲಪತಿಗಳು ಒಪ್ಪಲಿಲ್ಲ. ನಾನು ಕಾಲೇಜಿನಲ್ಲಿ ವೃತ್ತಿಯನ್ನಾರಂಭಿಸಿ ಒಂದು ವಾರದ ಬಳಿಕ ಪ್ರಾಂಶುಪಾಲರು ನನ್ನನ್ನು ಕರೆಸಿದರು. "ನೋಡಿ ನಿಮಗೆ ತರಗತಿಗಳಿದ್ದಾಗ ಮಾತ್ರ ನೀವು ಕಾಲೇಜಿನಲ್ಲಿರಿ, ಉಳಿದಂತೆ ನೀವು ಇಲ್ಲಿರದಿದ್ದರೂ ನಡೆಯುತ್ತದೆ" ಎಂದರು. ಮಹಿಳಾಮಣಿಗಳ ಮಧ್ಯೆ ನಾನೊಬ್ಬನೇ ಗಂಡುಪ್ರಾಣಿ! ಅವರಿಗೂ ಸಂಕೋಚ, ನನಗೂ ಸಂಕೋಚ. ಪ್ರಾಂಶುಪಾಲರ ಈ ಮಾತನ್ನು ಪಾಲಿಸಲು ನಾನಂತೂ ಸಿದ್ಧನಾದೆ. ಏಕೆಂದರೆ ಇದರಿಂದ ನನಗೆ ಓದಲು, ಬರೆಯಲು ಹೆಚ್ಚಿನ ಸಮಯ ದೊರೆಯುತ್ತಿತ್ತು. ಐದು ವರ್ಷ ಆ ಕಾಲೇಜಿನಲ್ಲಿ ಅಧ್ಯಾಪನವೃತ್ತಿ ಮಾಡಿದೆ. ಆ ಕಾಲದಲ್ಲಿ ಹೆಚ್ಚಿಗೆ ಅಧ್ಯಯನ ನಡೆಸಲು ಸಾಧ್ಯ ವಾಯಿತು. ಆನಂತರ ಹೈದರಾಬಾದ್ ಪ್ರಾಂತ್ಯದಲ್ಲಿ ಹತ್ತು ವರ್ಷ ಸೇವೆ ಸಲ್ಲಿಸಿದ ಬಳಿಕ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಬಂದಿದ್ದು ಕೂಡ ಅವಿಸ್ಮರಣೀಯ ಘಟನೆ.

ಯುವಜನತೆಗೆ ನಿಮ್ಮ ಸಂದೇಶವೇನು?

ನಿಮ್ಮ ಜೀವನದ ಆಸಕ್ತಿಕ್ಷೇತ್ರಗಳನ್ನು ಪ್ರವೇಶಿಸಿ ಶ್ರಮವಹಿಸಿ ಕೆಲಸಮಾಡಿ. ಪುರಸ್ಕಾರಗಳನ್ನು ಬಯಸದೆ, ನಿಮ್ಮ ಭವಿಷ್ಯದ ನಿರ್ಮಾಪಕರು ನೀವೇ ಎಂದು ತಿಳಿದು ಮುಂದುವರಿಯಿರಿ. ಯಶಸ್ಸು, ಗೌರವಗಳು ಪ್ರತಿಭಾವಂತರನ್ನು ತಾವಾಗೇ ಹಿಂಬಾಲಿ ಸುತ್ತವೆ.*

---

* ವಿವೇಕಹಂಸ, ಮೇ ೨೦೦೦

ಭಾಗ - ೨

ಅನುಬಂಧಗಳು

ಪ್ರಶಸ್ತಿ - ಪುರಸ್ಕಾರ

ಪುಸ್ತಕ ವಿಮರ್ಶೆ

ಗ್ರಂಥ - ಲೇಖನಸೂಚಿ

ಅನುಬಂಧ - ೧

ಪ್ರಶಸ್ತಿ - ಪುರಸ್ಕಾರ

ಅಧಿಕಾರವಾಣಿಯ ವಿದ್ವಾಂಸರು

ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿಯವರು ಕನ್ನಡ ಭಾಷೆ, ವ್ಯಾಕರಣ, ಛಂದಸ್ಸು, ಗ್ರಂಥಸಂಪಾದನೆ, ನಿಘಂಟುರಚನೆ ಮೊದಲಾದ ಶಾಸ್ತ್ರವಿಷಯಗಳಲ್ಲಿ ಗಾಢವಾದ ಪರಿಶ್ರಮ ಪಡೆದಿದ್ದಾರೆ. ಈ ವಿಷಯಗಳ ಬಗ್ಗೆ ಅಧಿಕಾರವಾಣಿಯಿಂದ ಮಾತಾಡಬಲ್ಲ ಕೈಬೆರಳೆಣಿಕೆಯ ಕೆಲ ವಿದ್ವಾಂಸರಲ್ಲಿ ಒಬ್ಬರು. ಕನ್ನಡದ ವಿದ್ವತ್ ಪತ್ರಿಕೆಗಳಲ್ಲಿ ಸ್ಮರಣ ಮತ್ತು ಸಂಭಾವನ ಗ್ರಂಥಗಳಲ್ಲಿ ಅನೇಕ ಸಂಶೋಧನ ಲೇಖನಗಳನ್ನು ಪ್ರಕಟಿಸಿದ್ದಾರೆ, ವಿದ್ವತ್ ಸಮಾವೇಶಗಳಲ್ಲಿ ಪ್ರಬಂಧಗಳನ್ನು ಮಂಡಿಸಿದ್ದಾರೆ.

ಡಾ.ವೆಂಕಟಾಚಲ ಶಾಸ್ತ್ರೀ ಅವರು ಕನ್ನಡ ಸಾಹಿತ್ಯಪರಿಷತ್ತಿನ ವಜ್ರಮಹೋತ್ಸವದ ಸಂದರ್ಭದಲ್ಲಿ ಕನ್ನಡ ಸಂಶೋಧನಕ್ಷೇತ್ರದಲ್ಲಿ ತಾವು ಸಲ್ಲಿಸಿರುವ ಸೇವೆಗಾಗಿ ಸನ್ಮಾನಿತರಾಗಿದ್ದಾರೆ. ಕನ್ನಡ ಅಧ್ಯಯನಸಂಸ್ಥೆಯ 'ಕನ್ನಡ ಸಾಹಿತ್ಯಚರಿತ್ರೆ' ಯೋಜನೆಯ ಸಂಪಾದಕರೂ ಕನ್ನಡ ಸಾಹಿತ್ಯಪರಿಷತ್ತಿನ ಕನ್ನಡ ನಿಘಂಟು ಸಂಪಾದಕಮಂಡಲಿಯ ಸದಸ್ಯರೂ ಆಗಿದ್ದಾರೆ.

ಸ್ವತಂತ್ರವಾಗಿ, ಸಹಕರ್ತೃವಾಗಿ ಈವರೆಗೆ ಶಾಸ್ತ್ರೀ ಅವರು ಸುಮಾರು ೫೦ ಪುಸ್ತಕಗಳನ್ನು ರಚಿಸಿದ್ದಾರೆ, ಸಂಪಾದಿಸಿದ್ದಾರೆ. ಮಹಾಕಾವ್ಯ ಲಕ್ಷಣ, ಕನ್ನಡ ಛಂದಸ್ಸು, ಶ್ರೀವತ್ಸ ನಿಘಂಟು, ಸಾಹಿತ್ಯ ಮಂಥನ, ಕನ್ನಡ ನೇಮಿನಾಥಪುರಾಣಗಳ ತೌಲನಿಕ ಅಧ್ಯಯನ, ಕನ್ನಡ ಛಂದಃಸ್ವರೂಪ, ಶಬ್ದಾರ್ಥವಿಹಾರ, ಕನ್ನಡ ಚಿತ್ರಕಾವ್ಯ ಇವು ಅವರ ಗಮನಾರ್ಹ ಗ್ರಂಥಗಳಲ್ಲಿ ಕೆಲವು. ಇವುಗಳಲ್ಲಿ ಕೆಲವು ಬಹುಮಾನಿತ ಗ್ರಂಥಗಳು.

'ಕನ್ನಡ ಛಂದಸ್ಸು' ಕೃತಿಗೆ ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿಯ ಬಹುಮಾನ ದೊರಕಿದೆ. 'ಸಾಹಿತ್ಯ ಮಂಥನ' ಕೃತಿ ದೇವರಾಜ ಬಹದ್ದೂರ್ ಬಹುಮಾನವನ್ನು ಗಳಿಸಿದೆ.

ಕನ್ನಡ ಸಾಹಿತ್ಯ ಸಂಶೋಧನಕ್ಷೇತ್ರಕ್ಕೆ ಶಾಸ್ತ್ರೀ ಅವರ ಕೊಡುಗೆ ಸ್ಮರಣೀಯ.

(ಕನ್ನಡ ರಾಜ್ಯೋತ್ಸವ ಪ್ರಶಸ್ತಿ-೮೮ : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಮಾಹಿತಿ ಕೈಪಿಡಿ)

Manasagangothri

Prof. T.V.Venkatachala Shastri, Professor in Kannada Department of Manasa Gangothri has secured Karnataka State Award for his extraordinary contribution to the field of research. The other noteworthy awards he has earned in his career are- "Writer of the year Award" and "Education Trust Award" during the year 1986- 87.

Prof. Venkatachala Shastri has written a number of books and also lent his services to numerous research projects which have been noteworthy in the field of Kannada.

(Manasagangothri, Dec 14-1988)

ವಿದ್ವತ್‌ಪರಂಪರೆ

ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರೀ ಬೆಂಗಳೂರು ಜಿಲ್ಲೆಯ ಕನಕಪುರದಲ್ಲಿ ೧೯೩೩ರಲ್ಲಿ ಜನಿಸಿದರು. ಮೈಸೂರು ವಿಶ್ವವಿದ್ಯಾನಿಲಯದಿಂದ ಕನ್ನಡ ಎಂ.ಎ. ಹಾಗೂ ಪಿಎಚ್.ಡಿ ಪದವಿ ಗಳಿಸಿದರು. ಶ್ರೀಯುತರು ಕನ್ನಡ, ತೆಲುಗು, ಸಂಸ್ಕೃತ, ಇಂಗ್ಲಿಷ್ ಮತ್ತು ಹಿಂದಿ ಭಾಷೆಗಳಲ್ಲಿ ಪರಿಣತರು. ಉಪನ್ಯಾಸಕರಾಗಿ ವೃತ್ತಿಜೀವನ ಆರಂಭ. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನಸಂಸ್ಥೆಯ ನಿರ್ದೇಶಕರಾಗಿ, ಕಲಾವಿಭಾಗದ ಡೀನ್ ಆಗಿ ದಕ್ಷತೆಯಿಂದ ಸೇವೆ ಸಲ್ಲಿಸಿದ ಧೀಮಂತ ಬದುಕು ಅವರದು.

'ಪ್ರಬುದ್ಧ ಕರ್ಣಾಟಕ', 'ಕನ್ನಡ ಅಧ್ಯಯನಸಂಸ್ಥೆಯ ಕನ್ನಡ ಸಾಹಿತ್ಯಚರಿತ್ರೆ'ಯ ಸಂಪಾದಕರಾಗಿ ದುಡಿದಿದ್ದಾರೆ. ಅನೇಕ ವಿಶ್ವವಿದ್ಯಾಲಯಗಳ ಸಂಪರ್ಕವುಳ್ಳವರು. ಇತ್ತೀಚೆಗಷ್ಟೇ ನಿವೃತ್ತಿ ಹೊಂದಿದರೂ ಅವರ ಜೀವನಕ್ಕೆ ನಿವೃತ್ತಿ ಎಂಬುದಿಲ್ಲ. ಈಗ ಕನ್ನಡದ ನಿಘಂಟಿನ ಸಂಪಾದಕರು.

ಅರವತ್ತು ಕೃತಿಗಳನ್ನು ಪ್ರಕಟಿಸಿರುವ ಶ್ರೀಯುತರು ಕನ್ನಡದ ಮೊದಲ ಪಂಕ್ತಿಯ ವಿದ್ವಾಂಸರ ಕಾರ್ಯವನ್ನು ಮುಂದುವರಿಸುತ್ತಿರುವ ಪ್ರತಿಭಾನ್ವಿತರು. ಹಳಗನ್ನಡ ಸಾಹಿತ್ಯದ ಶಾಸ್ತ್ರೀಯ ಅಧ್ಯಯನದಲ್ಲಿ ವಿದ್ಯಾರ್ಥಿಗಳಿಗೆ ಆಸಕ್ತಿ ಮೂಡುವಂತೆ ಮಾರ್ಗದರ್ಶನ ನೀಡಿದ್ದಾರೆ. ಜೈನ ಸಾಹಿತ್ಯದ ಆಳ ಅಧ್ಯಯನ, ಛಂದಸ್ಸು, ವ್ಯಾಕರಣ, ಅಲಂಕಾರಗಳಂಥ ವಿಷಯಗಳನ್ನು ಸರಳವಾಗಿ ಬೋಧಿಸುವ, ಬರೆಯುವ ವಿದ್ವತ್ತು ಶ್ರೀಯುತರ ಅಧ್ಯಯನವ್ಯಾಪ್ತಿಗೆ ನಿದರ್ಶನವಾಗಿದೆ. 'ಕನ್ನಡ ಚಿತ್ರಕಾವ್ಯ' ಅವರ ವಿದ್ವತ್ತಿಗೆ ವಜ್ರದ ಸಿರಿಗುಚ್ಛ.

ತಮ್ಮ ಕೆಲವು ಕೃತಿಗಳಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನವಲ್ಲದೆ, ದೇವರಾಜ ಬಹದ್ದೂರ್ ಬಹುಮಾನ ರಾಜ್ಯ ಪ್ರಶಸ್ತಿಗಳನ್ನು ಶ್ರೀಯುತರು ಗಳಿಸಿದ್ದಾರೆ. ಕನ್ನಡ ವಿದ್ವತ್‌ಲೋಕದ ಪರಂಪರೆಯನ್ನು ತಮ್ಮ ಮಾತು ಬರಹಗಳ ಮೂಲಕ

ಜೀವಂತವಾಗಿ ಇರಿಸಿರುವ ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರೀ ಅವರನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ೧೯೯೭ರ ಗೌರವಪ್ರಶಸ್ತಿ ನೀಡುವ ಮೂಲಕ ಗೌರವಿಸಲು ತುಂಬ ಸಂತೋಷ ಪಡುತ್ತದೆ.

(ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವಪ್ರಶಸ್ತಿ ಮತ್ತು ಪುಸ್ತಕ ಬಹುಮಾನ ಪ್ರದಾನ ಸಮಾರಂಭ - ೧೯೯೭ರ ಮಾಹಿತಿ ಕೈಪಿಡಿ: ೨೦.೦೩.೧೯೯೮)

Bhasha Samman

Born in 1933 in Kanakapura, Bangalore District, Karnataka State, T.V. Venkatachala Sastry did his M.A. in Kannada and got his Ph.D for a comparative study of *Neminathapuranas* in Kannada from Mysore University. He knows Kannada, Telugu, Sanskrit, Hindi and English. His translations of two Greek plays in Kannada were published in 1960 and 1966. In a 40- year teaching career, he served in many prestigious institutions and retired as Dean, Faculty of Arts. He has edited *Prabuddha Karnataka,* Mysore University Kannada Quarterly, Mysore, (1970-75), headed prestigious projects such as *History of Kannada Literature* Project, Institute of Kannada Studies, Mysore, Revision and Reprint of *Kannada-Kannada- English Dictionary,* Kannada Sahitya Parishat, Bangalore and *Mulakanadu Mahaneeyaru* Series(biographies of Mulkanadu luminaries). He has been member of several literary and culural organisations. He has authored and edited more than 75 books, besides more than 400 papers. He has received several awards and honours which include Karnataka State Sahitya Academy Award, Devaraj Bahadur Award, University of Mysore Golden Jubilee Award, Vidyavardhaka Sangha Award, Writer of the Year Award by Granthaloka, Mysore, I.B.H. Education Trust Award, and Best Book Award (Non-Creative) by Karnataka State Sahitya Akademy.

Sahitya Akademi feels honoured to confer the *Bhasha Samman* on Sri. T.V.Venkatachala Sastry for his unique contribution to Classical and Medieveal Literature.

(ಭಾಷಾ ಸಮ್ಮಾನ್ ಪ್ರಶಸ್ತಿ-೨೦೦೧, ಕೇಂದ್ರ ಸಾಹಿತ್ಯ ಅಕಾಡೆಮಿ ಮಾಹಿತಿ ಕೈಪಿಡಿ)

ಚಿದಾನಂದಪ್ರಶಸ್ತಿಯ ಘನತೆ!

ಟಿ.ವಿ.ವಿ.ಶಾಸ್ತ್ರೀ ಎಂದೊಡನೆ ನೆನಪಾಗುವುದು ಶಾಸ್ತ್ರಸಾಹಿತ್ಯ. ವ್ಯಾಕರಣ, ಛಂದಸ್ಸು, ಗ್ರಂಥಸಂಪಾದನೆ, ಕಾವ್ಯಮೀಮಾಂಸೆ, ಭಾಷಾಶಾಸ್ತ್ರ, ನಿಘಂಟು. ವಿಶೇಷವಾಗಿ ಶಾಸ್ತ್ರಕ್ಷೇತ್ರದಲ್ಲಿ, ಉಳಿದಂತೆ ಸಾಹಿತ್ಯಕ್ಷೇತ್ರದಲ್ಲಿ ಶಾಸ್ತ್ರಿಗಳ ಸಂಶೋಧನೆಯ ಹರಹು. ಕನ್ನಡ ಛಂದಸ್ಸು, ಕನ್ನಡ ಛಂದಃಸ್ವರೂಪ, ಕನ್ನಡ ಛಂದೋವಿಹಾರ ಹೀಗೆ ಒಂದಾದ ನಂತರ ಒಂದು ಛಂದಶ್ಶಾಸ್ತ್ರದ ಉತ್ತಮ ಕೃತಿಗಳು. ಪ್ರತಿಯೊಂದರಲ್ಲೂ ಈ ಮೊದಲು ಈ ಕ್ಷೇತ್ರದಲ್ಲಿ ನಡೆದ ಸಂಶೋಧನೆಗಿಂತ ಮುಂದೆ ಹೋಗಿ ಹೊಸ ಅಂಶಗಳನ್ನು ಕಾಣಿಸಿದ್ದಾರೆ. ಸಂಸ್ಕೃತ, ಪ್ರಾಕೃತ, ಕನ್ನಡ, ತೆಲುಗು, ಇಂಗ್ಲಿಷ್ ಭಾಷೆಗಳಲ್ಲಿನ ಇವರ ಪರಿಣತಿ ಸಂಶೋಧನಕ್ಕೆ ಹೊಸ ಶಕ್ತಿಯನ್ನು ನೀಡಿದೆ. ಕೇಶಿರಾಜನ ಶಬ್ದಮಣಿದರ್ಪಣವನ್ನು ಹಲವು ವಿದ್ವಾಂಸರು ಸಂಪಾದಿಸಿ ಪ್ರಕಟಿಸಿದ್ದಾರೆ. ಆದರೆ ಶಾಸ್ತ್ರಿಗಳು ಬರೀ ಪಾಠ ಗುರುತಿಸುವುದಕ್ಕಷ್ಟೇ ಸೀಮಿತಗೊಳಿಸದೆ ೧೪೩ ಪುಟಗಳ ಉಪೋದ್ಘಾತ ಬರೆದು ಪ್ರತಿಯೊಂದು ಸೂತ್ರವನ್ನೂ ಸೂಕ್ಷ್ಮಾತಿಸೂಕ್ಷ್ಮವಾಗಿ ಪರಿಶೀಲಿಸಿ ಸಂಪಾದಿಸಿದ್ದಾರೆ. ಕನ್ನಡ ರತ್ನಕೋಶ, ಗಜಶಬ್ದಕೋಶ, ಶ್ರೀವತ್ಸನಿಘಂಟುಗಳನ್ನು ಅತ್ಯುತ್ತಮವಾಗಿ ಸಂಪಾದಿಸಿದ್ದಾರೆ. ಹದಿನಾಲ್ಕು ಶಾಸ್ತ್ರಗಳು ಹಾಗೂ ತಮ್ಮ ಅಪಾರ ಶಾಸ್ತ್ರವಿಷಯಕ ಜ್ಞಾನದಿಂದ ನಾಲ್ಕು ಸಾವಿರ ಸಂಖ್ಯಾವಿಶಿಷ್ಟ ಪದಗಳನ್ನು ಪ್ರಯೋಗಕೋಶವಾಗಿ ನಿರ್ಮಿಸಿಕೊಟ್ಟಿದ್ದಾರೆ. 'ಕನ್ನಡ ನೇಮಿನಾಥ ಪುರಾಣಗಳ ತೌಲನಿಕ ಅಧ್ಯಯನ' ಎಂಬುದು ಇವರ ಪಿಎಚ್.ಡಿ ಸಂಶೋಧನಪ್ರಬಂಧ. ಈ ಸಂಪ್ರಬಂಧದ ಶೀರ್ಷಿಕೆ ಕನ್ನಡ ಕೃತಿಗಳಿಗೆಂದಿರಬೇಕೆಂದು ಹೇಳುತ್ತಿದ್ದರೂ ಶಾಸ್ತ್ರಿಗಳು ಸಂಸ್ಕೃತ ಪ್ರಾಕೃತ ಭಾಷೆಗಳಲ್ಲಿರುವ ಮೂಲಕೃತಿಗಳೊಂದಿಗೆ ತೌಲನಿಕವಾಗಿ ವ್ಯಾಖ್ಯಾನಿಸಿರುವಲ್ಲಿ ಅವರ ಸಂಶೋಧನೆಯ ಹೆಗ್ಗಳಿಕೆ ಎದ್ದುತೋರುತ್ತದೆ. ಹದಿನಾಲ್ಕು ಶಾಸನಗಳಲ್ಲಿನ ಸಂದೇಹಕ್ಕೆಡೆಮಾಡಿದ ವಿಶಿಷ್ಟ ಪದಗಳ ಸರಿಯಾದ ವಿಗ್ರಹ ಅರ್ಥವಿವರಣೆ ಅವರ 'ಶಬ್ದಾರ್ಥವಿಹಾರ'ದಲ್ಲಿ ಒಪ್ಪುವಂತಿವೆ. ಅವರ ನೂರಾರು ಸಂಶೋಧನ ಲೇಖನಗಳು 'ಶಾಸ್ತ್ರೀಯ' ಎಂಬ ಹೆಸರಿನಲ್ಲಿ ಬೃಹತ್ ನಾಲ್ಕು ಸಂಪುಟಗಳಲ್ಲಿ ಪ್ರಕಟವಾಗಿರುವುದೇ ಅವರ ಸಂಶೋಧನಕ್ಷೇತ್ರದ ವಿರಾಟ್‌ಸ್ವರೂಪವನ್ನು ಪರಿಚಯಿಸುತ್ತದೆ. 'ಕನ್ನಡ ಚಿತ್ರಕಾವ್ಯ' ಅವರ ಸಂಶೋಧನೆಯ ಅಗಾಧಶಕ್ತಿಯನ್ನು ಕಾಣಿಸಿರುವ ಶ್ರೇಷ್ಠ ಕೃತಿ. ಬಹುಶ್ರುತಪಾಂಡಿತ್ಯ ಸಂಶೋಧನೆಗೆ ಹೇಗೆ ಕಾಮಧೇನುವಾಗುತ್ತದೆಂಬುದಕ್ಕೆ ವೆಂಕಟಾಚಲ ಶಾಸ್ತ್ರಿಗಳು ತಕ್ಕ ಉದಾಹರಣೆಯಾಗಿದ್ದಾರೆ. ವ್ಯಾಖ್ಯಾನ, ವಿಶ್ಲೇಷಣ, ನಿಷ್ಪತ್ತಿ, ತೌಲನಿಕಮುಖೀ ಸಂಶೋಧನೆಗೆ ಒತ್ತುಕೊಟ್ಟು ಬರೆದ ಶಾಸ್ತ್ರಿಗಳ ಬರವಣಿಗೆ ಕನ್ನಡಕ್ಕೆ ವಿಶಿಷ್ಟವಾಗಿದೆ.

ಅವರ ವಿದ್ವತ್ತಿಗೆ ಕಿರೀಟಪ್ರಾಯವಾಗಿ ಅವರ ಸದುವಿನಯ, ಸಹೃದಯತೆ, ಸರಳ ಬದುಕು ಇವೆ. 'ಶ್ರೀಮುಖ' ಎಂಬ ಅಭಿನಂದನ ಗ್ರಂಥವನ್ನು ಅವರಿಗೆ ಅರ್ಪಿಸಲಾಗಿದೆ.

ಮಹಾಕಾವ್ಯ ಲಕ್ಷಣ, ಶ್ರೀವತ್ಸ ನಿಘಂಟು, ಶಬ್ದಾರ್ಥವಿಹಾರ, ಸಾಹಿತ್ಯ ಮಂಥನ, ನಮ್ಮ ಕರ್ನಾಟಕ, ಪ್ರಾಚೀನ ಕನ್ನಡಸಾಹಿತ್ಯ, ಕನ್ನಡ ಚಿತ್ರಕಾವ್ಯ, ಕನ್ನಡ ಚೆನ್ನುಡಿ, ಕನ್ನಡ ರಾಮಾಯಣ ಗ್ರಂಥಸೂಚಿ ಇವೇ ಮುಂತಾಗಿ ೫೦ಕ್ಕೂ ಹೆಚ್ಚು ಕೃತಿಗಳು ಶಾಸ್ತ್ರಿಗಳ ಬಹುಶ್ರುತತೆಯನ್ನು ಜಾಹೀರುಗೊಳಿಸಿವೆ.

ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಹೀಗೆ ಹಲವು ಪ್ರಶಸ್ತಿಗಳು ಇವರಿಗೆ ಲಭಿಸಿವೆ. ಪ್ರಾಯಃ ಅವೆಲ್ಲಕ್ಕಿಂತ ಹೆಚ್ಚು ಮಹತ್ವದ ಪ್ರಶಸ್ತಿ ಎಂದರೆ ಶ್ರೇಷ್ಠಸಂಶೋಧಕರಿಗೆ ನೀಡಲ್ಪಡುವ ಚಿದಾನಂದ ಪ್ರಶಸ್ತಿ. ಕುಮಾರವ್ಯಾಸ ಕವಿ 'ತಿಣುಕಿದನು ಫಣಿರಾಯ ರಾಮಾಯಣದ ಕವಿಗಳ ಭಾರದಲಿ' ಎಂದಿದ್ದಾನೆ. ಅದನ್ನೀಗ ನಾವು 'ತಿಣುಕಿದನು ಫಣಿರಾಯ ಕನ್ನಡ ಪ್ರಶಸ್ತಿಗಳ ನೀಡುವವರ ಭಾರದಲಿ' ಎಂದ ತಿದ್ದಿಕೊಳ್ಳುವಷ್ಟು ಪ್ರಶಸ್ತಿಗಳ ಸಂದಣಿ ಇದೆ. ಅಂತೆಯೇ ಶಾಸ್ತ್ರಿಗಳು ಚಿದಾನಂದ ಪ್ರಶಸ್ತಿ ಘೋಷಣೆ ಆದೊಡನೆ ಸ್ವೀಕರಿಸಲೇ ಬೇಡವೇ ಎಂದು ಮುಜುಗರಗೊಂಡರಂತೆ; ನಂತರ ಚಿದಾನಂದ ಪ್ರಶಸ್ತಿಯ ಘನತೆಯನ್ನು ಅನುಲಕ್ಷಿಸಿ ಸ್ವೀಕರಿಸಿದರಂತೆ.

ಲಾಬಿಗಳಿಗೆ, ರಾಜಕೀಯ ಪಕ್ಷ ಒತ್ತಡಗಳಿಗೆ ಈಡಾಗಿ ಕಲೆ, ಕಾದಂಬರಿ, ಕವನಗಳ ಸಾಹಿತಿಗಳಿಗೆ ನೀಡಲ್ಪಡುವ ನೂರಾರು ಪ್ರಶಸ್ತಿಗಳಿಗಿಂತ ವಿದ್ವತ್‌ಮಂಡಲಿಯ ಒಮ್ಮತದಿಂದ ಆಯ್ಕೆಯಾಗುವ ಶ್ರೇಷ್ಠ ಸಂಶೋಧಕರಿಗೆ ನೀಡಲ್ಪಡುವ ಸರಕಾರೇತರ 'ಚಿದಾನಂದಪ್ರಶಸ್ತಿ' ಘನತೆವೆತ್ತ ಪ್ರಶಸ್ತಿಯಾಗಿದೆ. ಇಂಥ ಪ್ರಶಸ್ತಿಯನ್ನು ಪಡೆದ ಡಾ.ವೆಂಕಟಾಚಲ ಶಾಸ್ತ್ರೀ ಅವರಿಗೆ ಸಂಶೋಧನ ವ್ಯಾಸಂಗ ಅಭಿನಂದಿಸುತ್ತದೆ. ಶಾಸ್ತ್ರ ಸಾಹಿತ್ಯಕ್ಷೇತ್ರದ ದಿಗ್ಗಜರಿಗೆ ನೀಡಲಿರುವ 'ವಿದ್ವತ್‌ಪ್ರಶಸ್ತಿ'ಯೊಂದು ಶಾಸ್ತ್ರಿಗಳ ಹೆಸರಿನಲ್ಲಿ ಸ್ಥಾಪಿತಗೊಂಡಿದೆ.

(ಸಂಶೋಧನ ವ್ಯಾಸಂಗ: ಮೇ-ಜೂನ್ ೨೦೦೧)

ಅನುಬಂಧ - ೨

ಪುಸ್ತಕ ವಿಮರ್ಶೆ

ವರ್ಷದ ಲೇಖಕ 'ಕನ್ನಡ ಚಿತ್ರಕಾವ್ಯ'

ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರೀ ಬೆಂಗಳೂರು ಜಿಲ್ಲೆಯ ಕನಕಪುರದಲ್ಲಿ ೧೯೩೩ರ ಆಗಸ್ಟ್ ೨೬ರಂದು ಜನಿಸಿದರು. ಅವರ ತಂದೆಯ ಹೆಸರು ವೆಂಕಟಸುಬ್ಬಶಾಸ್ತ್ರೀ. ತಾಯಿಯ ಹೆಸರು ಸುಬ್ಬಮ್ಮ. ತಮ್ಮ ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಾಲೆಗಳ ಅಭ್ಯಾಸವನ್ನು ಡಾ. ಶಾಸ್ತ್ರಿಗಳು ಕನಕಪುರದಲ್ಲೇ ಮುಗಿಸಿದರು. ಮುಂದೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ತಮ್ಮ ಬಿ.ಎ.(ಆನರ್ಸ್), ಎಂ.ಎ ಮತ್ತು ಪಿಎಚ್.ಡಿ ಪದವಿ ಗಳನ್ನು ಪಡೆದರು. 'ಕನ್ನಡ ನೇಮಿನಾಥಪುರಾಣಗಳ ತೌಲನಿಕಅಧ್ಯಯನ' ಅವರ ಪಿಎಚ್.ಡಿ ಪದವಿಯ ಕೃತಿ. ಡಾ. ಶಾಸ್ತ್ರಿಗಳು ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ೧೯೫೯ರಿಂದ ೧೯೬೮ರವರೆಗೆ ಕನ್ನಡ ಅಧ್ಯಾಪಕರಾಗಿದ್ದರು. ೧೯೬೮ರಿಂದ ಈಚೆಗೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಅಧ್ಯಾಪಕರಾಗಿ, ರೀಡರ್ ಆಗಿ, ಪ್ರಸ್ತುತ ಪ್ರಾಧ್ಯಾಪಕರಾಗಿದ್ದಾರೆ.

ಡಾ.ಶಾಸ್ತ್ರಿಗಳು ಈವರೆಗೆ ೪೦ಕ್ಕೂ ಹೆಚ್ಚು ಕೃತಿಗಳನ್ನು ಸ್ವತಂತ್ರವಾಗಿ, ಇತರರೊಂದಿಗೆ ಸೇರಿ ರಚಿಸಿದ್ದಾರೆ. ನೂರಾರು ಸಂಶೋಧನ ಲೇಖನಗಳನ್ನು ಬರೆದಿದ್ದಾರೆ. ಕನ್ನಡ ಭಾಷೆ, ವ್ಯಾಕರಣ, ಛಂದಸ್ಸು, ಗ್ರಂಥಸಂಪಾದನೆ, ನಿಘಂಟುರಚನೆ, ಅಲಂಕಾರಶಾಸ್ತ್ರ, ಜೈನಸಾಹಿತ್ಯ ಅವರಿಗೆ ಒಲಿದು ಬಂದಿರುವ ಸಂಶೋಧನಕ್ಷೇತ್ರಗಳು. ಪ್ರಬಂಧ, ನಾಟಕ, ವ್ಯಕ್ತಿಚಿತ್ರ ಅವರು ಒಲಿಸಿಕೊಂಡಿರುವ ಸೃಜನಶೀಲಕ್ಷೇತ್ರಗಳು. ಈವರೆಗೆ ಅವರು ೧೨ ಸಂಶೋಧನ ಕೃತಿ, ೪ ನಾಟಕ ಹಾಗೂ ೧ ಪ್ರಬಂಧ ಸಂಕಲನ ಪ್ರಕಟಿಸಿದ್ದಾರೆ. ಆರ್.ನರಸಿಂಹಾಚಾರ್ಯ, ಎಸ್.ಶ್ರೀಕಂಠಶಾಸ್ತ್ರೀ ಮತ್ತು ಎಸ್.ಜಿ.ನರಸಿಂಹಾಚಾರ್ಯರ ಬರೆಹಗಳನ್ನೂ ಅವರು ಸಂಪಾದಿಸಿದ್ದಾರೆ.

ಡಾ.ಶಾಸ್ತ್ರಿಗಳ ಅನೇಕ ಕೃತಿಗಳು ಬಹುಮಾನ, ಪ್ರಶಸ್ತಿಗಳಿಗೆ ಪಾತ್ರವಾಗಿವೆ. ಅವರ 'ಸಾಹಿತ್ಯ ಮಂಥನ' 'ಕನ್ನಡ ಛಂದಸ್ಸು'ಗಳಿಗೆ ದೇವರಾಜ ಬಹದ್ದೂರ್ ಬಹುಮಾನ ಬಂದಿದೆ. 'ಕನ್ನಡ ಛಂದಸ್ಸು' ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ ಬಂದಿದೆ. 'ಕನ್ನಡ ಛಂದಃಸ್ವರೂಪ'ಕ್ಕೆ ಮೈಸೂರು ವಿಶ್ವವಿದ್ಯಾನಿಲಯದ ಸುವರ್ಣ ಮಹೋತ್ಸವ ಪ್ರಶಸ್ತಿ ಬಂದಿದೆ. ಕನ್ನಡ ಸಂಶೋಧನ ಕ್ಷೇತ್ರದಲ್ಲಿ ಅವರು ಸಲ್ಲಿಸಿರುವ

ಸೇವೆಗೆ ಕನ್ನಡ ಸಾಹಿತ್ಯ ಪರಿಷತ್ತು ತನ್ನ ವಜ್ರಮಹೋತ್ಸವ ಸಂದರ್ಭದಲ್ಲಿ ಅವರನ್ನು ಸನ್ಮಾನಿಸಿದೆ.

ಕನ್ನಡ ಸಂಶೋಧನಕ್ಷೇತ್ರದಲ್ಲಿ ಡಾ.ಶಾಸ್ತ್ರಿಗಳದು ಗಣ್ಯ ಹಾಗೂ ಚಿರಸ್ಮರಣೀಯ ಹೆಸರು. ಹಳಗನ್ನಡ ಭಾಷೆ ಸಾಹಿತ್ಯಗಳ ಬಗ್ಗೆ, ಶಾಸ್ತ್ರವಿಷಯಗಳಾದ ವ್ಯಾಕರಣ ಛಂದಸ್ಸುಗಳ ಬಗ್ಗೆ ಅಧಿಕಾರವಾಣಿಯಿಂದ ಮಾತನಾಡಬಲ್ಲ ಕೈಬೆರಳೆಣಿಕೆಯ ಸಮಕಾಲದ ವಿದ್ವಾಂಸರಲ್ಲಿ ಅವರು ಮೊದಲಿಗರು. ಹಳಗನ್ನಡದ ಬಗ್ಗೆ ಏನಾದರೂ ವಿವಾದ ಸಮಸ್ಯೆ ಉಂಟಾದಲ್ಲಿ ಡಾ.ಶಾಸ್ತ್ರಿಗಳ ಅಭಿಪ್ರಾಯ ನಿಲುವಾಗುವುದಿಲ್ಲ, ತೀರ್ಪು ಆಗುತ್ತದೆ. ಅವರ ಈಚಿನ ಕೃತಿಯಾದ 'ಕನ್ನಡ ಚಿತ್ರಕಾವ್ಯ'ದಲ್ಲಿ ಅವರ ಪ್ರತಿಭೆ, ಪಾಂಡಿತ್ಯ, ಪರಿಶ್ರಮಗಳು ಹೆಪ್ಪುಗಟ್ಟಿವೆ. ಇದು ಡಾ.ಶಾಸ್ತ್ರಿಗಳ ವಿದ್ವತ್ತಿನ ಮುಡಿಮಾಣಿಕ್ಯ. ಹಾಗೆಯೇ ಕನ್ನಡ ಸಂಶೋಧನಕ್ಷೇತ್ರದ ಕಲಶ.

'ಕನ್ನಡ ಚಿತ್ರಕಾವ್ಯ'ದ ಮೂಲಕ 'ಗ್ರಂಥಲೋಕ'ದ 'ವರ್ಷದ ಲೇಖಕ ಪ್ರಶಸ್ತಿ' ಗಳಿಸಿರುವ ಡಾ.ಶಾಸ್ತ್ರಿಗಳಿಗೆ ನಮ್ಮ ಓದುಗರ ಹಾಗೂ ಬಳಗದ ಪರವಾಗಿ ಬೆಚ್ಚನೆಯ ಅಭಿನಂದನೆಗಳು.

-ಎಸ್.ಎಸ್.ತಾರಾನಾಥ

(ಗ್ರಂಥಲೋಕ ೧-೬-೧೯೮೮)

KANNADA NEMINATHA PURANAGALA ADHYAYANA

Neminatha is the twenty second thirthankara of the Jainas. The Jaina writers borrowed from the Vaidika Puranas and Ithihasas such useful stories as suited their purpose of propagating Jainism and wrote longish poems. No wonder that the Ramayana, the Mahabharatha and the Bhagavatha attracted their attention. The story of Krishna has always been an engrossing one. The Jains accepted this Krishna, but wanted to create another, better in every respect. Thus emerages Neminatha. Like Krishna he is all -knowing, all -powerful and all -good only to a better degree. Since he is a Thirthankara, he passes through several births before being born as Neminatha. Poets in Sanskrit, Prakrit and Kannada have been charmed by his story and so, a number of poems have been composed on him. The earliest work, probably, is Harivamsha by Vimalasuri, of the first century A.D. This book has not come down to us.

But Harivamsha of Jinasena I is a famous later work, which has influenced all writers on Nemi.

There are two versions of the Neminatha story -the digambara and the svethambara. In Kannada, however, only the digambara version is popular with the poets. Nemi is depicted as the prophet of kindness to animals. Nemi's story is so prominent that it has become a subject of sculpture also.

All writers on Nemi in Kannada have borrowed freely from several sources in Sanskrit and Prakrit. It is difficult to pin down the source.

In Kannada, Gunavarma, wrote a Harivamsha, according to the grammarian Keshiraja. Chavundaraya and Karnaparya are the other writers. But Nemichandra's Ardhanemipurana is out and out the best. It is a pity that this could not be completed by the writer.

Dr. T.V.Venkatachala Sastry has done a penetrating study of the Nemi stories in Kannada- tracing the origin into the Sanskrit and Prakrit works. This is a thorough study meeting the requirements of the scholars. The poetic charms of Nemichandra could have been dealt with in greater detail. The book lacks indices. A table of contents in the several Nemi works would have been handy.

The Doctorate thesis has been got up very well and does credit to the Mysore University.

-G.Venkatasubbaiah

(The Hindu : 3.11.74)

ಪಂಪ

'ಪಂಪ' ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಕಟಣೆ. 'ಭಾರತೀಯ ಸಾಹಿತ್ಯದ ನಿರ್ಮಾಪಕರು' ಮಾಲಿಕೆಯಲ್ಲಿ ಬಂದ ಕೃತಿ. ಇದರ ಉದ್ದೇಶ ಸ್ಪಷ್ಟವಿದೆ. ಕನ್ನಡ ಬಾರದವರಿಗಾಗಿ ಕನ್ನಡ ಸಾಹಿತ್ಯನಿರ್ಮಾಪಕರನ್ನು ಪರಿಚಯಿಸುವುದಾಗಿದೆ. ಅದರ ಕನ್ನಡ ಪ್ರಕಟಣೆಯೂ ಹೊರಬರುತ್ತದೆ. ಅಂಥವುಗಳಲ್ಲಿ 'ಪಂಪ' ಒಂದು.

ಇಲ್ಲಿ 'ಪಂಪ'ನ ವಿವರವಾದ ಅಭ್ಯಾಸ ಮುಖ್ಯವಲ್ಲ. ಅದರ ಪುಟ ಸಹ ಸೀಮಿತವಾದುದು. ಪ್ರಸ್ತುತ ಕೃತಿ ನೂರಾಹನ್ನೆರಡು ಪುಟದ ವ್ಯಾಪ್ತಿ ಹೊಂದಿದೆ.

‘ಪಂಪ’ನಂಥ ಮಹಾಕವಿಯ ಬಗ್ಗೆ ಬರೆಯಬೇಕೆಂದರೆ ಈ ಸೀಮಿತ ಬರಹ ದೊಡ್ಡ ಆನೆಯನ್ನು ಚಿಕ್ಕ ಕನ್ನಡಿಯಲ್ಲಿ ಹಿಡಿದ ಹಾಗೆ! ಇದು ಆಡಿಕೊಂಡಷ್ಟು ಸುಲಭವೇನೂ ಅಲ್ಲ. ಪುಸ್ತಕ ಸಮಗ್ರವೂ ಆಗಿರಬೇಕು, ಕೃತಿಯ ಕುರಿತಾಗಿ ಹೇಳುವ ಮಾತುಗಳು ಆಯ್ಕೆಯಾಗಿರಬೇಕು, ಕಿರಿದಾದರೂ ಅಲ್ಲಿ ಪಂಪನೇ ಕಾಣಬೇಕು. ಆ ದೃಷ್ಟಿಯಿಂದ ವೆಂಕಟಾಚಲ ಶಾಸ್ತ್ರಿಗಳು ಸಫಲರೇ ಆಗಿದ್ದಾರೆ.

“ಕನ್ನಡ ಭಾಷೆಯ ಪರಿಚಯ ಇಲ್ಲದವರಿಗೂ ಅನುಕೂಲವಾಗಲೆಂದು ವಿಮರ್ಶೆಯಲ್ಲಿ ಕಥನಾತ್ಮಕ ವಿಮರ್ಶೆಯ ವಿಧಾನವನ್ನು ಅನುಸರಿಸಿದೆಯೆಂದು ಇಲ್ಲಿ ಅರಿಕೆ ಮಾಡಬೇಕಾಗಿದೆ” ಎಂದು ಲೇಖಕರು ಹೇಳಿಕೊಂಡಿದ್ದಾರೆ. ಈ ವಿಧಾನ ವಿಷಯಪ್ರಸ್ತಾಪದ ದೃಷ್ಟಿಯಿಂದ ಅನಿವಾರ್ಯವಾಗಿದೆ. ಇದಾಗಿಯೂ ಶಾಸ್ತ್ರಿಗಳು ವಿಮರ್ಶಾತ್ಮಕ ಆಯ್ಕೆಯನ್ನು ಮರೆಯಲಿಲ್ಲ. ಪಂಪನ ಎರಡೂ ಕಾವ್ಯಗಳ (ಆದಿಪುರಾಣ, ವಿಕ್ರಮಾರ್ಜುನ ವಿಜಯ) ರಸಸ್ಥಳಗಳನ್ನು ಮರೆಯಲಿಲ್ಲ. ಅದರ ಧ್ವನಿಪ್ರಚುರತೆಯ ಆಯ್ಕೆಯನ್ನು ಮರೆಯಲಿಲ್ಲ. ಅದರಂತೆ ಪಂಪನ ವೈಶಿಷ್ಟ್ಯ, ಮುಖ್ಯವಾಗಿ ಭಾರತದ ಮಹತ್ವವನ್ನು ಎತ್ತಿ ತೋರಿಸುವಲ್ಲಿ ಕೃತಿಯೊಳಗಿಂದ ಸರಿಯಾಗಿಯೇ ಆಯ್ಕೆ ಮಾಡಿಕೊಂಡಿದ್ದಾರೆ. ಇದರಿಂದಾಗಿಯೇ ಪಂಪನ ಕಾವ್ಯಗುಣಕ್ಕೆ ಎಲ್ಲೂ ಊನ ಉಂಟಾಗಿಲ್ಲ.

ಆದಿಪುರಾಣದ್ದಾಗಲಿ ಅಥವಾ ವಿಕ್ರಮಾರ್ಜುನ ವಿಜಯದ್ದಾಗಲಿ ಕೇವಲ ಕಥೆಯನ್ನು ಮಾತ್ರ ಹೇಳಲಿಲ್ಲ. ಬದಲಾಗಿ ಅಂದಿನ ರಾಜಕೀಯ ಸನ್ನಿವೇಶವನ್ನು ಮೊದಲು ಚಿತ್ರಿಸಿದ್ದಾರೆ. ಇದು ತೀರ ಯೋಗ್ಯವಾದುದು. ಪಂಪನ ವೈಯಕ್ತಿಕ ಚರಿತ್ರೆಯನ್ನು ಕಟ್ಟಿಕೊಟ್ಟಿದ್ದಾರೆ. ಕಥೆಯ ಪ್ರವೇಶ ಆದನಂತರ ಕಥಾಸಾರವನ್ನು ಹೇಳಿ ಕೃತಿಸಮೀಕ್ಷೆಯನ್ನು ಮಾಡಿದ್ದಾರೆ. ‘ಪಂಪಭಾರತ’ದಲ್ಲಿ ಪಂಪ ಮಾಡಿಕೊಂಡ ಬದಲಾವಣೆಯನ್ನು ನಿರೂಪಿಸಿ ಅದರ ಔಚಿತ್ಯವನ್ನು ವಿಮರ್ಶಿಸಿದ್ದಾರೆ. ಒಟ್ಟು ನೋಟದಲ್ಲಿ ಕವಿಯ ಜೀವನ ಮೌಲ್ಯವನ್ನೂ ಕವಿಪ್ರಶಸ್ತಿಯಲ್ಲಿ ಪಂಪನ ಕವಿತಾಶಕ್ತಿಗೆ ಮುಂದಣ ಕವಿಗಳು ತೋರಿಸಿದ ಪ್ರಶಸ್ತಿಯನ್ನೂ ದಾಖಲಿಸಿದ್ದಾರೆ.

ಹೊರನಾಡಿನವರಿಗೆ ಮಾತ್ರವಲ್ಲ ಕನ್ನಡಿಗರಿಗೂ ಸಹ ಈ ಕೃತಿ ಪಂಪನ ಘನತೆಯನ್ನೂ ಕಾವ್ಯವನ್ನೂ ಕಾವ್ಯದ ಹಿರಿಮೆಯನ್ನೂ ಚೊಕ್ಕಾಗಿ ಮಾಡಿಕೊಡುತ್ತದೆ. ಪಾಂಡಿತ್ಯದಿಂದಲೋ, ಅತಿ ತರ್ಕದಿಂದಲೋ ತಿಣುಕಿ ಓದುಗನ ಬುದ್ಧಿಯನ್ನು ಮಂಕಾಗಿಸದೆ ಇದು ಒಂದು ಉತ್ತಮ ಓದನ್ನು ಒದಗಿಸುತ್ತದೆ, ಒಂದು ಹಿರಿಚೇತನದ ಸೊಗಸನ್ನು ಪರಿಚಯಮಾಡಿಕೊಡುತ್ತದೆ.

-ಆರ್.ವಿ.ಭಂಡಾರಿ

(ಮುಂಗಾರು, ೧೦.೯.೧೯೮೯)

ಮೆಲುಗಾಳಿಯ ಮಾತುಗಳು :

FLOATING WHISPERS ON FAMILIAR TOPICS

In recent years a five minute intimate talk on some thought provoking topic by a knowledgeable scholar has become an integral part of the Akashvani daily menu. Delivered almost at the commencement of the day's morning transmission the brief sermon serves as a tonic to the listener's mind: effortlessly he can tune his mind to it, imbibe the lofty thoughts and draw his own conclusions based on his experiences. It is the gentle breeze of the early morning titillating him to think.

One such scholar who has endeared himself to the listeners of Mysore Akashavani is Dr. T.V.Venkatachala Shastri, a researcher of repute in classics and ancientlore. This five-minute light talk business is totally unconnected with his field of work and medium of expression. But he has accepted it as a welcome change, and done good justice to this branch as well.

Shastri has collected fifty of his talks and strung them in a book entitled MELUGALIYA MATUGALU. The title is quite suggestive: gentle ethereal words. Yes, Akashavani communicates with you through air!

Here are a few picked examples:

In Spardhe (competition) Shastri tells us how two great scholars who had applied for the same job in a university on being told individually about the name of the other applicant immediately said that he would withdraw in favour of the other. Great minds transcend personal interests and see only community's good.

We are experts in giving advice to others. In Paropadesha Panditya, Shastri tells us "We have authorities on morality aplenty. And experts in scriptures and religious treatises? Innumerable. But where shall we find those few who are aware of their own ignorance?" Yes, one who knows one knows, knows not; one who knows one knows not, knows.

Can Achchukattu (neatness or elegance) be a topic for the early morning address? Why not asks Shastri in the piece with the same title.

Things in their proper places at appropriate times is neatness. Such an elegance can be achieved by logical thinking, proper planning and correct execution. Most of the miseries we are afflicted with are results of our own muddled approach of life's problems. Does it ring a familiar bell in your mind? Yes, it does to me at any rate.

Here are a few quotable quotes from this book:

Interrelationship kills the 1-factor and nurtures the we-force.

While gentle words are a product of a good culture, good culture is equally a product of gentle words.

Birth is beyond our control and death does not obey our commands: but the sweet interval between birth and death is our life of which we are the masters.

It is because of laziness and procrastination that this world is so full of poverty and human maneaters.

This book is a good companion for light reading and serious reflection.

-G.T.Narayana Rao
(Star of Mysore: 2-7-1990)

ಮಹತ್ವಪೂರ್ಣ ಕೃತಿ : 'ಕುಮಾರವ್ಯಾಸಭಾರತ ಸಂಗ್ರಹ'

'ಕುಮಾರವ್ಯಾಸಭಾರತ ಸಂಗ್ರಹ' ಗ್ರಂಥದ ಮತ್ತೊಂದು ಮೌಲಿಕ ಅಂಶವನ್ನು ಈ ಗ್ರಂಥದ ಉಪೋದ್ಘಾತದಲ್ಲಿ ಕಾಣಬಹುದಾಗಿದೆ. ಕನ್ನಡದ ಹಿರಿಯ ಪ್ರೊಫೆಸರ್ ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿಯವರು ಈ ಗ್ರಂಥಕ್ಕೆ ಪಾಂಡಿತ್ಯಪೂರ್ಣವಾದ ಉಪೋದ್ಘಾತವನ್ನು ಬರೆದಿದ್ದಾರೆ. ಇದು ಪುಸ್ತಕದ ಉಪಯುಕ್ತತೆಯನ್ನು ಗಮನಾರ್ಹವಾಗಿ ಹೆಚ್ಚಿಸಿದೆ. ಇದುವರೆಗೆ ಕುಮಾರವ್ಯಾಸ ಕವಿ-ಕಾವ್ಯದ ಬಗ್ಗೆ ನಡೆದಿರುವ ಸಮಸ್ತ ಸಂಶೋಧನವಿಚಾರಗಳನ್ನು ಪರ್ಯಾಲೋಚಿಸಿ, ತಮ್ಮ ತೀರ್ಮಾನವನ್ನು ಡಾ.ಶಾಸ್ತ್ರಿಗಳು ನಿರ್ದಿಷ್ಟವಾಗಿ, ನಿಷ್ಪಕ್ಷಪಾತವಾಗಿ, ಭಾವಾವೇಶವಿಲ್ಲದೆ ಅತ್ಯಂತ ಗಂಭೀರಶೈಲಿಯಲ್ಲಿ ಸಿಂಧುವೆನಿಸುವಂತೆ ಮಂಡಿಸಿದ್ದಾರೆ. ಈ ಕಾವ್ಯದ ಬಗ್ಗೆ ಯಾವ ದಿಕ್ಕುಗಳಲ್ಲಿ ಸಂಶೋಧನೆಗೆ ಅವಕಾಶ ಅಗತ್ಯವಿದೆ ಎಂಬುದನ್ನು ಬೆರಳುಮಾಡಿ ತೋರಿಸಿದ್ದಾರೆ. ಪ್ರೊ.ಎಂ.ವಿ.ಸೀ. ಅವರ ಊಹಾತ್ಮಕ ಪರಿಷ್ಕರಣಗಳಲ್ಲಿ ತಮಗೆ ಅಸಮ್ಮತವೆನಿಸಿರುವುದನ್ನು

ಸಕಾರಣವಾಗಿ ವಿವರಿಸಿದ್ದಾರೆ. ಈ ಭಾಗವು ನಿಜವಾದ ಗ್ರಂಥಸಂಪಾದನಕಾರರಿಗೆ ತುಂಬ ಪ್ರಯೋಜನವನ್ನುಂಟುಮಾಡುವಂತಿದೆ.

ಡಾ.ಕೆ.ಗೋಕುಲನಾಥ್

(ಪ್ರಜಾವಾಣಿ, ೧೪.೩.೧೯೯೩)

ಕಾವ್ಯಪ್ರೇಮಿಗಳಿಗೊಂದು ಅಪೂರ್ವಸಂಗ್ರಹ : 'ಎಸ್.ಜಿ.ನರಸಿಂಹಾಚಾರ್ಯರ ಕವಿತೆಗಳು'

ಶ್ರೀರಂಗಪಟ್ಟಣ ಗೋವಿಂದರಾಜ ನರಸಿಂಹಾಚಾರ್ಯ ೧೮೬೨ರಿಂದ ೧೯೧೧ರ ಅವಧಿಯಲ್ಲಿ ಬದುಕಿದ್ದವರು. ಹೊಸಗನ್ನಡ ಸಾಹಿತ್ಯದ ಪ್ರವರ್ತಕರಲ್ಲಿ ಒಬ್ಬರು. ತಮ್ಮ ಜೀವಿತಕಾಲದಲ್ಲೆ ಸರಳ ಸಂಭಾವಿತ ವ್ಯಕ್ತಿ, ಶ್ರೇಷ್ಠಕವಿ, ಉದ್ದಾಮವಿದ್ವಾಂಸರೆಂದು ಹೆಸರು ಪಡೆದಿದ್ದವರು. ಇವರಿಗೆ ಪ್ರಾಚೀನ ಗ್ರಂಥಗಳ ಸಂಪಾದನೆಯ ಬಗೆಗೆ ಇದ್ದ ಪ್ರೀತಿಯಷ್ಟೇ ಸಂಸ್ಕೃತದಿಂದ ಇಂಗ್ಲಿಷಿನಿಂದ ಕನ್ನಡಕ್ಕೆ ಹೊಸಹೊಸದನ್ನು ತರಬೇಕೆಂಬ ಬಯಕೆಯೂ ಇತ್ತು. ಗ್ರಂಥಸಂಪಾದನೆ, ಮಕ್ಕಳ ಸಾಹಿತ್ಯ, ಹೊಸಗನ್ನಡ ಕವಿತೆ ಈ ಮೂರೂ ಕ್ಷೇತ್ರಗಳಲ್ಲಿ ಅನನ್ಯವಾದ ಕೆಲಸವನ್ನು ಮಾಡಿ ಹೋದ ಪುಣ್ಯಾತ್ಮರು.

ಇಂಥ ಮಹನೀಯರ 'ಕವಿತೆ'ಗಳ ಒಂದು ಸಂಗ್ರಹ ಇಷ್ಟು ದೀರ್ಘಾವಧಿ ವರ್ಷದ ನಂತರ ಬರುತ್ತಿದೆ. ಎಸ್.ಜಿ.ನ ಅವರ ಕವಿತೆಗಳು ಒಟ್ಟಿಗೆ ಸಿಗುವುದಿಲ್ಲ. ಹಿಂದೆಯೂ ಒಟ್ಟಿಗೆ ಸಂಕಲನವಾದುದಿಲ್ಲ. ಅಲ್ಲಿ ಇಲ್ಲಿ ಬಿಡಿಕವಿತೆಗಳು, ಪದ್ಯ ಸಂಕಲನಗಳಲ್ಲಿ, ಪತ್ರಿಕೆಗಳಲ್ಲಿ ಅಚ್ಚಾದದ್ದು ಸರಿ. ಅದನ್ನೆಲ್ಲ ಶ್ರಮದಿಂದ ಹುಡುಕಿ ಒತ್ತಟ್ಟಿಗೆ ಒಂದುಕಡೆ ತಂದು ಸಂಕಲಿಸಿರುವ, ಟಿಪ್ಪಣಿಗಳನ್ನು ಬರೆದು, ಅನುಬಂಧ ಜೋಡಿಸಿ, ಸವಿಸ್ತಾರವಾಗಿ ಕವಿಚರಿತ್ರೆ ಬರೆದಿರುವ ಈ ಗ್ರಂಥ ಒಂದು ಅಪೂರ್ವಕೆಲಸವನ್ನು ಮಾಡಿದೆ ಎಂದು ಹೇಳಿದರೆ ಅತಿಶಯೋಕ್ತಿಯಾದ ಮಾತೇನಲ್ಲ. ಹೊಸಗನ್ನಡ ಕಾವ್ಯಚರಿತ್ರೆಯನ್ನು ಸಮಗ್ರವಾಗಿ ಪರಿಶೀಲಿಸುವವರಿಗೆ ಇದೊಂದು ಅಮೂಲ್ಯ ಆಕರಗ್ರಂಥ. ಟಿ.ವಿ. ವೆಂಕಟಾಚಲ ಶಾಸ್ತ್ರಿಗಳು ಬಹಳ ಶ್ರಮದಿಂದ ಈ ಹೊತ್ತಿಗೆಯನ್ನು ಸಿದ್ಧಪಡಿಸಿದ್ದಾರೆ. ಅವರು ತೆಗೆದುಕೊಂಡಿರುವ ಶ್ರಮ ಪುಟಪುಟಗಳಲ್ಲೂ ಇಣುಕಿ ಹಾಕುತ್ತದೆ.

ಗೋಲ್ಡ್‌ಸ್ಮಿತ್‌ನ 'ದಿ ಹರ್ಮಿಟ್' ಕಾವ್ಯದ ಅನುವಾದ 'ಪ್ರೋಷಿತಪ್ರಿಯ ಸಮಾಗಮಂ' ಕಂದಪದ್ಯದಲ್ಲಿ ರಚನೆಯಾಗಿದ್ದು ೧೯೧೧ರಲ್ಲಿ ಪುಸ್ತಕರೂಪದಲ್ಲಿ ಅಚ್ಚಾಗಿದೆ. ಕಾವ್ಯಾನುವಾದದಲ್ಲಿ ಸಂಸ್ಕೃತದಿಂದ ೧೮೯೭ರಲ್ಲಿ ಕಾಳಿದಾಸನ 'ರಘುವಂಶ'ದಿಂದ 'ದಿಲೀಪ ಚರಿತೆ' ಅನುವಾದಿಸಿ, 'ಅಜನೃಪಚರಿತ್ರೆ'ಯನ್ನೂ ಅನುವಾದಿಸಿ ಕೊಟ್ಟಿರುವ ಕಾವ್ಯಭಾಗಗಳನ್ನು ಮೊದಲಿಗೆ ಕೊಟ್ಟಿದ್ದಾರೆ. ಆಮೇಲೆ ಅವರ ಸ್ವತಂತ್ರ

ಹದಿನೇಳು ಬಿಡಿಗವಿತೆಗಳು ಸಂಕಲನಗೊಂಡಿವೆ. ಅನುವಾದಿತ ಬಿಡಿಗವಿತೆಗಳು ಸುಮಾರು ಹನ್ನೊಂದರಷ್ಟು ಇವೆ. ಇವಿಷ್ಟು ಎಸ್.ಜಿ.ನ ಅವರ ಕಾವ್ಯಸಂಪತ್ತು.

ಅನುಬಂಧದಲ್ಲಿ ಅಸಮಗ್ರವಾದ 'ಉತ್ತರ ರಾಮಚರಿತಂ' ಕನ್ನಡ ಭಾಷಾಂತರ ಬಂದಿದೆ. ಪ್ರತಿಯೊಂದು ಕವಿತೆಗೂ ಡಾ.ಟಿ.ವಿ.ವಿ. ಅವರು ಬರೆದಿರುವ ಟಿಪ್ಪಣಿ ನಿಜಕ್ಕೂ ಗಮನೀಯವಾದುದು. ಆಮೇಲೆ ಎಸ್.ಜಿ.ನರಸಿಂಹಾಚಾರ್ಯರ ಕೃತಿಸೂಚಿ, ಕೊನೆಗೆ ಚರಿತ್ರವಸ್ತುಕೋಶ ಇವೆ.

ಸುಮಾರು ೮೦ ವರ್ಷಗಳ ಕಾಲ ಕಣ್ಮರೆಯಾಗಿದ್ದ, ಇಂದಿಗೆ ದೊರಕಲು ದುಸ್ಸಾಧ್ಯವಾಗಿದ್ದ -ಎಸ್.ಜಿ.ನ ಅವರ ಕೃತಿಗಳು- ಕವಿತೆಗಳ ಸಂಪುಟವನ್ನು ಶುದ್ಧವಾಗಿ ಸಂಪಾದಿಸಿ, ವಿಸ್ತಾರವಾಗಿ ವಿಮರ್ಶಿಸಿ, ಪರಿಚಯ ಮಾಡಿಕೊಟ್ಟಿರುವ ಗ್ರಂಥ ನಿಜಕ್ಕೂ ಸಂತೋಷ ತಂದುಕೊಡುವಂತಹುದು. ಕನ್ನಡಕ್ಕಾಗಿ, ಕನ್ನಡ ಸಾಹಿತ್ಯಕ್ಕಾಗಿ ದುಡಿದ ಮಹನೀಯರಿಗೆ ಅವರ ಕೃತಿಪ್ರಕಟಣೆಯ ಮೂಲಕ ತೋರಿಸುವ ಗೌರವ ನಿಜಕ್ಕೂ ಹೆಮ್ಮೆ ತರುವಂಥದ್ದು. ಇಂಥ ಕೆಲಸ ಇನ್ನೂ ಹಲವು ಮಹನೀಯರುಗಳಿಗೆ ಸಂದಾಯವಾಗಬೇಕು. ಎಸ್.ಜಿ.ನರಸಿಂಹಾಚಾರ್ಯರ ಇತರ ಗದ್ಯಬರೆಹಗಳ ಸಂಕಲನ ಕನ್ನಡಕ್ಕೆ ತರಬೇಕು. ಪ್ರಕಟಣೆಯದೇ ದುಸ್ಸಾಧ್ಯವಾದ ಕೆಲಸವಾಗಿರುವಾಗ ಇಂದಿನ ಪರಿಸ್ಥಿತಿಯಲ್ಲಿ ಐ.ಬಿ.ಎಚ್.ನವರ ಕನ್ನಡಪ್ರೀತಿ ಇಂಥ ಪ್ರಕಟಣೆಗೆ ಅವಕಾಶ ಇತ್ತಿದೆ. ಕವಿತೆಗಳ ಸಂಕಲನ ತಂದಿರುವ ಹಾಗೆಯೇ ಗದ್ಯಬರೆಹಗಳ ಸಂಕಲನವನ್ನೂ ಹೊರತರಲಿ. ಅದನ್ನೂ ಸಂಪಾದಿಸುವ ಕೆಲಸ ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿಗಳೇ ಹೊರಲಿ, ಅವರಿಂದ ಇನ್ನಷ್ಟು ಕೆಲಸ ಮಾಡಿಸಲೆಂದು ಮನಸಾ ಹಾರೈಸುತ್ತೇನೆ.

ಕನ್ನಡ ಕಾವ್ಯಪ್ರೇಮಿಗಳೂ, ವಿದ್ವಾಂಸರೂ ಸಾಹಿತ್ಯಚರಿತ್ರಕಾರರೂ ಅಗತ್ಯವಾಗಿ ಗಮನಿಸಬೇಕಾದ ಗ್ರಂಥ ಎಸ್.ಜಿ.ನರಸಿಂಹಾಚಾರ್ಯರ ಕವಿತೆಗಳು. ಅಂದವಾದ ಮುದ್ರಣ, ಶುದ್ಧಹೊತ್ತಗೆಯ ಈ ಕೃತಿ ಕನ್ನಡದ ಈಚಿನ ಗಮನಾರ್ಹ ಪ್ರಕಟಣೆ.

ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ

(ಕನ್ನಡ ಪ್ರಭ ೧೪.೬.೧೯೮೭)

'ಕನ್ನಡ ಕವಿಗಳು ಕಂಡ ಗೊಮ್ಮಟೇಶ್ವರ'

ಕನ್ನಡಿಗರ ಪಾಲಿಗೆ ಗೊಮ್ಮಟೇಶ್ವರ ಎರಡು ದೃಷ್ಟಿಯಿಂದ ಪ್ರಸ್ತುತ. ಜೈನಪುರಾಣ ಕಾವ್ಯಗಳಲ್ಲಿ ಒಡೆದು ಮೂಡಿರುವ ಆತನ ಅನುಪಮ ಶೀಲಚಾರಿತ್ರ್ಯಗಳಿಂದ ಮತ್ತು ಅದರ ಪಡಿನೆಳಲಾಗಿ ಭವ್ಯ ಶಿಲಾಮೂರ್ತಿಯಾಗಿ ಮೂಡಿಬಂದಿದ್ದರಿಂದ. ಇದರಲ್ಲಿ ಮೊದಲನೆಯ ಅಂಶ ಇಡೀ ಜೈನವಾಙ್ಮಯಕ್ಕೆ ಸೇರಿದ್ದು. ಅದಕ್ಕೆ ಕರ್ನಾಟಕದ ಗಡಿ ಎಂಬುದೇನಿಲ್ಲ. ಪಂಪನಿಂದ ಹಿಡಿದು ಕಾಲಕಾಲಕ್ಕೆ ಕನ್ನಡ ಕವಿಗಳು, ತಮ್ಮ ಜಾಯಮಾನಕ್ಕೆ ತಕ್ಕಂತೆ, ಬಾಹುಬಲಿಯನ್ನು ಚಿತ್ರಿಸಿದ್ದಾರೆ. ಡಾ.ಶಾಸ್ತ್ರಿಗಳು ಇದರ ಸೂಕ್ತ

ಅವಲೋಕನವನ್ನು 'ಪೀಠಿಕೆ'ಯಲ್ಲಿ ಮಾಡಿಕೊಟ್ಟಿದ್ದಾರೆ. ಆದರೂ 'ಕನ್ನಡ ಕವಿಗಳು ಕಂಡ ಗೊಮ್ಮಟೇಶ್ವರ' ಎನ್ನುವಲ್ಲಿ ಒತ್ತು ಕಾವ್ಯಗಳಲ್ಲಿ ಮೂಡಿಬಂದ ಬಾಹುಬಲಿಯ ಚಿತ್ರಣದ ಮೇಲಲ್ಲ. ಬದಲಾಗಿ, ಶಿಲಾಮೂರ್ತಿಗಳಲ್ಲಿ ಮೂಡಿಬಂದ ಗೊಮ್ಮಟೇಶ್ವರನ ಮೇಲೆ.

ಬಿಜಾಪುರ ಐಹೊಳೆಗಳಲ್ಲಿ ಕಂಡುಬರುವ ಗೊಮ್ಮಟಮೂರ್ತಿಯಿಂದ ಹಿಡಿದು, ಇತ್ತೀಚೆಗೆ ಧರ್ಮಸ್ಥಳದಲ್ಲಿ ಪ್ರತಿಷ್ಠಿತವಾದ ಮೂರ್ತಿಯ ವರೆಗೂ ಸಾಕಷ್ಟು ಸಂಖ್ಯೆಯಲ್ಲಿ ಗೊಮ್ಮಟಮೂರ್ತಿ ಕಂಡುಬರುವುದನ್ನು ಡಾ.ಶಾಸ್ತ್ರಿಗಳು ಪ್ರಸ್ತಾಪಿಸಿದ್ದಾರೆ. ಆದರೆ ಇವುಗಳಲ್ಲೆಲ್ಲ ಲೋಕೋತ್ತರವಾದ ಶ್ರವಣಬೆಳಗೊಳದ ಚಾವುಂಡರಾಯ ನಿರ್ಮಿತಮೂರ್ತಿಯೇ ಇಲ್ಲಿನ ಹಲವು ಕವಿತೆಗಳ ವಸ್ತು.

'ಅತಿ ತುಂಗಾಕೃತಿ'....ಎಂದು ಪ್ರಾರಂಭವಾಗುವ ಬೊಪ್ಪಣಪಂಡಿತನ ಪದ್ಯವೇ ಬಹುಶಃ ಶ್ರವಣಬೆಳಗೊಳದ ಭವ್ಯಮೂರ್ತಿಯ ಅತ್ಯಂತ ಸಮರ್ಪಿತ ಸಾಕಾರವರ್ಣನೆ. ಇಲ್ಲಿ ಸಂಗ್ರಹಿತವಾಗಿರುವ ೫೮ ಕವಿತೆಗಳಲ್ಲಿ ಉಳಿದವು ಈ ಎತ್ತರಕ್ಕೆ ಬರುವುದಿಲ್ಲ. 'ಆರೊ ತೆಕ್ಕನೆ ತುಡುಕಿ ಬಾಯ್‌ಮುಚ್ಚಿ ಹಿಡಿದಂತೆ' ಎಂದು ಪ್ರಾರಂಭವಾಗುವ ಕುವೆಂಪು ಅವರ ಕವನದ ಮೊದಲ ಭಾಗ, ಆ ಮೂರ್ತಿಯನ್ನು ಮೊದಲ ಬಾರಿಗೆ ಕಂಡಾಗ ಉಂಟಾಗುವ ಅನುಭೂತಿಯನ್ನು ಸೆರೆಹಿಡಿಯುತ್ತದೆ. 'ಬೆಳ್ಗೊಳಕ್ಕೆ ಹೋಗುವ ಹಾಡು' ಅಜ್ಞಾತಕರ್ತೃವಿಗೆ ಸೇರಿದ್ದು, ಸಾಮಾನ್ಯಜನಗಳಲ್ಲಿ ಈ ಮೂರ್ತಿಯ ಬಗ್ಗೆ ಪ್ರೀತ್ಯಾದರಗಳಿಂದ ಉಂಟಾದ ಭಾವಕ್ಕೆ ಪುಟಕೊಡುತ್ತದೆ. ನಿರಲಂಕಾರ ಹಾಗೂ ಸರಳವಾದ ಇಲ್ಲಿನ ಅಭಿವ್ಯಕ್ತಿ ಮೆಚ್ಚುವಂಥದ್ದು! "ಬೆಳಗುಳ ನೋಡಿ ಬರುವನೆ ಗುಮ್ಮೈಶ್ವರಗೆ । ಹಾಲು ಹಣ್ಣುಗಳ ಕೊಡುವನೆ ಕನ್ನೇರ । ಸ್ವಾಮೀಯ ನೋಡಿ ಬರುವನೆ". ಸೊಡಂಕೂರು ತಿರುಮಲೇಶ್ವರ ಭಟ್ಟರ "ಕಾರ್ಕಳದ ಗೋಮಟೇಶ", ಭಾಸ್ಕರ ಭಂಡಾರಿ ಮಜಿಬೈಲು ಅವರ "ಗೋಮಟೇಶ್ವರ", ಕೆ.ಎಸ್.ಧರಣೇಂದ್ರಯ್ಯನವರ "ಶ್ರೀ ಗೋಮಟ ಜಿನಸ್ವಾಮಿಯ ಕೋಲಾಟದ ಹಾಡು", ಹಾಗೆಯೇ ಕೊನೆಯ ಪುಟದಲ್ಲಿ ಅಚ್ಚಾಗಿರುವ "ಸುಪ್ರಭಾತ ಮಂಗಳ : ಬೆಳಗಾದುದೇಳು" ಪದ್ಯಗಳು, ಈ ಕೃತಿಯ ವ್ಯಾಪ್ತಿಯನ್ನು ವಿಸ್ತರಿಸಿವೆ. ಪುತಿನ, ಕಣವಿ, ಜಿ.ಎಸ್. ಶಿವರುದ್ರಪ್ಪ, ಮಾಸ್ತಿ, ಡಿ.ವಿ.ಜಿ., ಗೋವಿಂದ ಪೈ ಅವರ ಕವಿತೆಗಳು ಈ ಕೃತಿಯ ತೂಕವನ್ನು ಹೆಚ್ಚಿಸಿವೆ. ಮೈಸೂರಿನ "ಗೋಮಟಗಿರಿ" ಗೋಮಟಗಿರಿಮೂರ್ತಿ ಜೀರ್ಣೋದ್ಧಾರಗೊಂಡು, ಮೊದಲ ಮಹಾಮಸ್ತಕಾಭಿಷೇಕ ಸಂದರ್ಭದಲ್ಲಿ ಕುವೆಂಪು ಬರೆದ "ಮಹಾಪ್ರಗಾಥ" ಇಂದಿನ ವಿಚಾರವಂತಿಕೆಯ ಹಿನ್ನೆಲೆಯಲ್ಲಿ ಚಿಂತನೀಯವಾಗಿದೆ.

ವೇಣುಗೋಪಾಲ ಸೊರಬ

(ಕನ್ನಡ ಪ್ರಭ, ೭.೧೦.೯೮೦)

‘ಮುದ್ರಾಮಂಜೂಷವು’

‘ಮುದ್ರಾಮಂಜೂಷ’ವು ಕನ್ನಡದ ಒಂದು ಉತ್ತಮ ಗದ್ಯಕೃತಿ; ಸೊಗಸಾದ ಗದ್ಯಕಥೆ. ಇದು ‘ಮುದ್ರಾರಾಕ್ಷಸ’ ನಾಟಕದ ಚೌಕಟ್ಟು ಇಟ್ಟುಕೊಂಡೂ ಸ್ವತಂತ್ರವಾಗಿ ಸನ್ನಿವೇಶಗಳನ್ನು ಕಲ್ಪಿಸಿದ ಸಾಹಿತ್ಯ ಕೃತಿ. ಈ ಕೃತಿಯು ರೆ| ಜೆ.ಸ್ಟೀವನ್‌ಸನ್ ಅವರಿಂದ ೧೮೭೩ ರಲ್ಲಿ ಮೊದಲು ಪ್ರಕಟಗೊಂಡಿತು. ಅವನು ಮೂಲಗ್ರಂಥವನ್ನು ಪ್ರಕಟಿಸಲಿಲ್ಲ. ಬದಲಾಗಿ ಅನೇಕ ಭಾಗಗಳನ್ನು ತೆಗೆದುಹಾಕಿದ್ದುದು ಉಂಟು. ಆ ವ್ಯತ್ಯಾಸವು ಪ್ರಸ್ತುತ ಸಂಸ್ಕರಣದ ತೌಲನಿಕ ಅಧ್ಯಯನದಿಂದ ತಿಳಿದುಬರುತ್ತದೆ. ಮುದ್ರಾಮಂಜೂಷವನ್ನು ಓದಿದವರಿಗೆ ಒಂದು ಅತ್ಯುತ್ತಮ ಸಂಸ್ಕರಣದ ಅವಶ್ಯಕತೆ ಇತ್ತೆಂಬುದು ದಿಟ. ಕವಿ ಯಾರು? ಕೃತಿಯ ಸ್ವರೂಪ ಇಷ್ಟೆಯೆ? ಜೆ.ಸ್ಟೀವನ್‌ಸನ್ ಸಂಪಾದಿಸಿದ ಹಸ್ತಪ್ರತಿ ಯಾವುದು? ಈ ಎಲ್ಲ ವಿಚಾರಗಳೂ ಕಾಲಗರ್ಭದಲ್ಲಿ ಹುದುಗಿಹೋಗಿತ್ತು. ಮುದ್ರಾ ಮಂಜೂಷ ಬರೆದವನ ಹೆಸರು ಕೆಂಪುನಾರಾಯಣನೋ, ಕೆಂಪುಶಾಸ್ತ್ರಿಯೊ, ನಾರಾಯಣ ಶರ್ಮನೊ ಇವೆಲ್ಲವೂ ಗೊಂದಲಕ್ಕೆ ಈಡಾಗಿತ್ತು. ಪ್ರಸ್ತುತ ಸಂಸ್ಕರಣದಿಂದ ಗ್ರಂಥಕರ್ತನ ನಿಜನಾಮ ನಾರಾಯಣಶರ್ಮ, ರೂಢಿಯ ಹೆಸರು ಕೆಂಪುಶಾಸ್ತ್ರಿಗಳು- ಎಂದು ತಿಳಿದು ಬರುತ್ತದೆ. ಕವಿಯ ಮನೆತನದವರಿಂದ ಲಭ್ಯವಾದ ಪ್ರತಿಯಿಂದ ಈ ಹೊಸ ಸಂಸ್ಕರಣ ಸಾಧ್ಯವಾಗಿದೆ. ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರೀ ಅವರು ಅತ್ಯಂತ ಪಾಂಡಿತ್ಯಪೂರ್ಣ ವಾಗಿಯೂ ತೌಲನಿಕ ಅಧ್ಯಯನದ ಫಲಶ್ರುತಿಯಾಗಿಯೂ ‘ಮುದ್ರಾಮಂಜೂಷ’ದ ಹೊಸಸಂಸ್ಕರಣವನ್ನು ನಮಗೆ ಸಿದ್ಧಪಡಿಸಿಕೊಟ್ಟಿದ್ದಾರೆ. ಐವತ್ತು ವರ್ಷಗಳಿಂದ ಈಚೆಗೆ ಇಂಥ ಸಂಸ್ಕರಣದ ಅವಶ್ಯಕತೆಯೊಂದು ಇತ್ತು. ಶ್ರೀ ಶಾಸ್ತ್ರಿಗಳು ಅದನ್ನು ಆಗುಗೊಳಿಸಿದ್ದಾರೆ.

ಮುದ್ರಾಮಂಜೂಷವು ಈ ಶತಮಾನದ ಆರಂಭದ ಗದ್ಯಕೃತಿ. ಧಾರ್ಮಿಕ ಚೌಕಟ್ಟಿನಿಂದ ಹೊರನಿಂತು ಐತಿಹಾಸಿಕ ನೆಲೆಯನ್ನು ಪಡೆದಿರುವುದು ಈ ಕೃತಿಯ ಒಂದು ವಿಶಿಷ್ಟವಾದ ಅಂಶವೆನಿಸಿದೆ. ಧಾರ್ಮಿಕ ಚೌಕಟ್ಟು ಈ ಕೃತಿಯಲ್ಲಿ ಸೂಕ್ಷ್ಮವಾಗಿ ಹಾಸುಹೊಕ್ಕಾಗಿರುವುದು ಉಂಟು. ಐತಿಹಾಸಿಕತೆ, ಭಾಷೆ, ಪಾತ್ರ, ಸನ್ನಿವೇಶ, ಸಾಮ ದಾನ ಭೇದ ಮತ್ತು ದಂಡೋಪಾಯಗಳ ಅಥವಾ ಈ ಎಲ್ಲ ಕಥನಗಳ ಹಿರಿಮೆಯಲ್ಲಿ ಮುದ್ರಾಮಂಜೂಷವು ವಿಶಿಷ್ಟವೆನಿಸಿದೆ. ಇದರ ಗದ್ಯವು ಮಣಿಪ್ರವಾಳದಂತಿದೆ. ಲಾಲಿತ್ಯ, ಗಡಸು, ಒನಪು, ಕಟೂಕ್ತಿಗಳೆಲ್ಲವೂ ಒಂದರೊಡನೊಂದು ಹಿತವಾಗಿಯೂ, ಲಲಿತವಾಗಿಯೂ ಬೆರೆತಿವೆ. ಈ ಕೃತಿಯ ಕಥೆ ತುಂಬಾ ಚಿಕ್ಕದು. ಚಾಣಕ್ಯನು ನವನಂದ ರನ್ನು ಕೊಲ್ಲಿಸಿ ರಾಕ್ಷಸನನ್ನು ಅಮಾತ್ಯನನ್ನಾಗಿ ಮಾಡಿ ಚಂದ್ರಗುಪ್ತನಿಗೆ ರಾಜ್ಯಾಭಿಷೇಕ ಮಾಡಿದ ಕಥನ ಇದರಲ್ಲಿದೆ. ಇದು ಎಂಟು ಆಶಯಗಳುಳ್ಳ ಕಥನ; ಸಾಕಷ್ಟು ದೊಡ್ಡ ಕೃತಿ. ಆದರೆ, ಕತೆಯ ಒಳಗಿರುವ ವಿವರಗಳು ‘ಮುದ್ರಾರಾಕ್ಷಸ’ದ ಪ್ರಸಂಗಗಳೇ ಆಗಿವೆ. ಜತೆಗೆ ಇದು ಹೊಸ ಪರಿಕರಗಳನ್ನೂ ಒಳಗೊಂಡಿದೆ.

ಮುದ್ರಾಮಂಜೂಷವು ನಾರಾಯಣಶರ್ಮನಿಂದ ವಿರಚಿತವಾದುದು ಎಂದು ಈ ಸಂಸ್ಕರಣದಿಂದ ಶ್ರೀಶಾಸ್ತ್ರಿಗಳು ಖಚಿತಗೊಳಿಸಿದ್ದಾರೆ. ನಮ್ಮ ಸಾಹಿತ್ಯಾಧ್ಯಯನಗಳಲ್ಲೂ ಸಾಹಿತ್ಯಚರಿತ್ರೆಯ ಸಂಪುಟಗಳಲ್ಲೂ ಕೆಂಪುನಾರಾಯಣ ಎಂದೇ ಪ್ರಸಿದ್ಧಿ ಪಡೆದಿದೆ. ಇನ್ನು ಮುಂದೆ ನಾರಾಯಣಶರ್ಮ ಎಂಬ ಹೆಸರು ಪ್ರಸಿದ್ಧಿಗೆ ಬರುತ್ತದೆ, ಬರಬೇಕಾಗಿದೆ. ರೆ| ಜೆ.ಸ್ಟೀವನ್‌ಸನ್ ತೆಗೆದುಹಾಕಿದ ಭಾಗಗಳನ್ನು ಉಂಟಾದ ತಪ್ಪುಗಳನ್ನೂ ಶಬ್ದಗಳ ಆಗಮಲೋಪಗಳನ್ನೂ ಶ್ರೀ ಶಾಸ್ತ್ರಿಗಳು ಹಲವು ಬಗೆಗಳಲ್ಲಿ ಸರಿಪಡಿಸಿದ್ದಾರೆ. ಅವರು ಈ ಗ್ರಂಥಕ್ಕೆ ಬರೆದಿರುವ ಸುಮಾರು ತೊಂಬತ್ತು ಪುಟಗಳ ಪೀಠಿಕೆಯಲ್ಲಿ ಚಂದ್ರಗುಪ್ತ-ಚಾಣಕ್ಯನ ಬಗೆಗೆ ಗ್ರೀಕ್, ಜೈನ, ವೈದಿಕ ಕಥಾಕೋಶಗಳಲ್ಲೂ ವಿಶಾಖದತ್ತನ ನಾಟಕದ ಪರಿಶೀಲನದಿಂದಲೂ ನೂರಾರು ಸಂಗತಿಗಳನ್ನು, ಹಲವಾರು ವಿವರಗಳನ್ನು ನೀಡಿದ್ದಾರೆ. ಚಂದ್ರಗುಪ್ತ-ಚಾಣಕ್ಯರ ಐತಿಹಾಸಿಕಭೂಮಿಕೆಗಳ ಪರಾಮರ್ಶೆಯೂ ತುಂಬಾ ಸೊಗಸಾಗಿದೆ. ಮುದ್ರಾಮಂಜೂಷದ ಕವಿ, ಕಾಲ, ಜೀವನವಿವರ, ಕೃತಿಯ ಪರಾಮರ್ಶೆ, ಕವಿಯ ಕಾಲ ಇತ್ಯಾದಿ ವಿವರಗಳು ಸಾಹಿತ್ಯಚರಿತ್ರೆಯ ಸಂಪುಟಗಳಿಗೆ ಹೊಸ ಆಧಾರ ವನ್ನು ಕೊಡುತ್ತವೆ. ಶಾಸ್ತ್ರಿಗಳು ಈ ಪುಸ್ತಕಕ್ಕೆ ಸುಮಾರು ಅರುವತ್ತು ಪುಟಗಳ ಟಿಪ್ಪಣಿ ಯನ್ನು ಕೊನೆಗೆ ನೀಡಿದ್ದಾರೆ. ಅದು ಕೃತಿಯ ಅಂತರಂಗಪ್ರವೇಶಕ್ಕೆ ನೆರವನ್ನು ನೀಡುತ್ತ ದೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿಗಳು ಯಾವ ಕೆಲಸ ಮಾಡಿದರೂ ಇನ್ನೊಬ್ಬರು ಆ ಬಗೆಗೆ ಕೈ ಹಚ್ಚದಂತೆ ಮಾಡಬಲ್ಲ ಪ್ರಥಮ ಪಂಕ್ತಿಯ ವಿದ್ವಾಂಸರಷ್ಟೇ. ಈ ಸಂಸ್ಕರಣವೂ ಈ ಅಂಶವನ್ನು ರುಜುವಾತುಗೊಳಿಸು ತ್ತಿದೆ.

ಪುಸ್ತಕದ ಒಟ್ಟು ವಿನ್ಯಾಸ, ಮುದ್ರಣ ಸುಂದರವಾಗಿದೆ. ಹೊರಕವಚಕ್ಕೆ ಕೆಂಪು ಶಾಸ್ತ್ರಿಗಳ ವರ್ಣಚಿತ್ರವನ್ನು ಬಳಸಲಾಗಿದೆ. ಕವಚದ ಹಿಂಬದಿಗೆ ಅರಮನೆ, ರಾಜರ ಹಾಗೂ ನೀತಿಶಾಸ್ತ್ರಜ್ಞರ ಚಿತ್ರಗಳು ಶೋಭೆಯನ್ನು ನೀಡುತ್ತಿವೆ. ಇವೆಲ್ಲವೂ ಹೀಗೆ ರೂಪುಗೊಳ್ಳುವಲ್ಲಿ ಶಾಸ್ತ್ರಿಗಳ ಕಲಾರಸಿಕತೆ, ವಿದ್ವದ್‌ರಸಿಕತೆಗಳು ಕೆಲಸಮಾಡಿವೆ ಯೆಂದರೆ ಅತಿಶಯೋಕ್ತಿಯೇನಲ್ಲ. ಸಾಹಿತ್ಯ ಅಕಾಡೆಮಿಯವರ ಪ್ರಕಟಣೆಗಳಲ್ಲಿ ಇದು ಅತ್ಯಂತಮಹತ್ವದ ಪ್ರಕಟಣೆಯಾಗಿದೆ. ಈ ಪುಸ್ತಕದೊಡನೆ ವಿಶಾಖದತ್ತನ 'ಮುದ್ರಾ ರಾಕ್ಷಸ', ಚಾಣಕ್ಯನ 'ಅರ್ಥಶಾಸ್ತ್ರ' ಇವುಗಳ ಜತೆ ತೌಲನಿಕ ಅಧ್ಯಯನಕ್ಕೆ ದಾರಿಗಳಿವೆ. ಇದರ ಜತೆಗೆ ಕಳೆದ ಶತಮಾನದ ಭಾಷೆ, ಜನಜೀವನ, ರಾಜಕೀಯ ವಿಪ್ಲವ ಮೊದಲಾದ ಸಂಗತಿಗಳನ್ನು ತಿಳಿಯಲು ಈ ಸಂಸ್ಕರಣವು ತುಂಬಾ ಉಪಯುಕ್ತವಾಗಿದೆ.

ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ

(ಪುಸ್ತಕಲೋಕ ಮೇ-ಜೂನ್ ೧೯೯೫)

ಸಂಶೋಧಕರಿಗೆ ಸವಾಲಾದ ಸರ್ವಭಾಷಾ ಕನ್ನಡಕಾವ್ಯ: 'ಸಿರಿಭೂವಲಯ'

ಅತ್ಯಂತ ಆಶ್ಚರ್ಯಕರವಾದ ಗ್ರಂಥ, ಈ 'ಸಿರಿಭೂವಲಯ.' ಇದೊಂದು ಜೈನ ಕಾವ್ಯ. ಇದು ಅಂಕಲಿಪಿಯಲ್ಲಿ ರಚಿತವಾಗಿದೆ. ಇದನ್ನು ರಚಿಸಿದ ಕುಮುದೇಂದು ಈ ಕಾವ್ಯವನ್ನು 'ಸರ್ವಭಾಷಾಮಯೀ ಕರ್ನಾಟಕಕಾವ್ಯ'ವೆಂದು ಕರೆದಿದ್ದಾನೆ. ಈ ಗ್ರಂಥ ಓದುವ ಕ್ರಮವನ್ನು ಮೊದಲು ಸಂಶೋಧನೆ ಮಾಡಿದವರು ಪಂಡಿತ ಯಲ್ಲಪ್ಪ ಶಾಸ್ತ್ರಿಗಳು. ಬಹುಕಾಲ ಕತ್ತಲಕೋಣೆಯಲ್ಲಿದ್ದ ಈ ಗ್ರಂಥವನ್ನು 'ಪುಸ್ತಕಶಕ್ತಿ'ಯ ವೈ.ಕೆ. ಮೋಹನ್ ಪ್ರಕಟಣೆ ಮಾಡಿದ್ದಾರೆ. ಈ ಗ್ರಂಥದ ಎಂಟು ಅಧ್ಯಾಯಗಳು ಪಂಡಿತರ ಸಹಾಯದಿಂದ ಪರಿಷ್ಕೃತಗೊಂಡು ಮುದ್ರಿತವಾಗಿವೆ. ಇಲ್ಲಿಯವರೆಗೆ ಅಭಿಪ್ರಾಯಗಳನ್ನು ನೀಡಿರುವ ಎಲ್ಲಾ ವಿದ್ವಾಂಸರ ಮಾತುಗಳನ್ನೂ ದಾಖಲಿಸಿ, ಡಾ.ಟಿ.ವಿ. ವೆಂಕಟಾಚಲ ಶಾಸ್ತ್ರಿಗಳ ಪರಿಷ್ಕರಣದ ವಿವರಗಳೊಂದಿಗೆ ಇದು ಕನ್ನಡಿಗರ ಮುಂದೆ ಬಂದಿದೆ.

ಪ್ರೊ.ಜಿ.ವೆಂಕಟಸುಬ್ಬಯ್ಯ

(ಪ್ರಜಾವಾಣಿ, ಸಾಪ್ತಾಹಿಕ ಪುರವಣಿ, ೧೧.೫.೨೦೦೩)

ಶ್ರೇಷ್ಠ ಪುಸ್ತಕ : 'ಕನ್ನಡ ಚಿತ್ರಕಾವ್ಯ'

ಸೃಜನಶೀಲ ಕೃತಿಗಳ ದೃಷ್ಟಿಯಿಂದ ೧೯೮೨ ತೀರ ಸಪ್ಪೆಯಾದ ವರ್ಷ. ಸೃಜನೇತರ ಕೃತಿಗಳು ಅನೇಕ ಪ್ರಕಟವಾಗಿವೆ. ಕೆಲವಾದರೂ, ಬೇರೆ ಬೇರೆ ಕಾರಣಗಳಿಂದ ಮುಖ್ಯವೆನ್ನಿಸುತ್ತವೆ. ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿಯವರ 'ಕನ್ನಡ ಚಿತ್ರಕಾವ್ಯ' ನಿಸ್ಸಂದೇಹವಾಗಿ ವರ್ಷದ ಶ್ರೇಷ್ಠಪುಸ್ತಕ. ಶಾಸ್ತ್ರಿಯವರು ನಮ್ಮ ನಡುವಿನ ಕನ್ನಡ ವಿದ್ವಾಂಸರಲ್ಲಿ ಎತ್ತರದವರು. ಅವರ ವಿದ್ವತ್ತನ್ನು ಇನ್ನೊಬ್ಬರೊಡನೆ ಹೋಲಿಸಲು ತುಂಬ ಯೋಚನೆ ಮಾಡಬೇಕಾಗುತ್ತದೆ. ಖಚಿತತೆ ಅವರ ಪಾಂಡಿತ್ಯದ ಲಕ್ಷಣ. ಅದರಿಂದ ಅವರ ಬರವಣಿಗೆಗೆ ಅಧಿಕೃತತೆಯೊದಗುತ್ತದೆ. ಶ್ಲೇಷಚಿತ್ರ, ಗರ್ಭಕವಿತ್ವ, ಗೂಢಚಿತ್ರ, ಪ್ರಹೇಳಿಕೆ ಮೊದಲಾದ ಚಿತ್ರಕಾವ್ಯದ ಅನೇಕ ಪ್ರಕಾರಗಳ ಸೋದಾಹರಣ ವಿಶ್ಲೇಷಣೆ 'ಕನ್ನಡ ಚಿತ್ರಕಾವ್ಯ'ದಲ್ಲಿ ತುಂಬಿದೆ. ಇಂಥದೊಂದು ಪುಸ್ತಕ ಕನ್ನಡದಲ್ಲಿ ಇದುವರೆಗೂ ಪ್ರಕಟವಾಗಿರಲಿಲ್ಲ; ನಿಕಟಭವಿಷ್ಯದಲ್ಲಿ ಪ್ರಕಟವಾದೀತೆಂದೂ ನಿರೀಕ್ಷಿಸುವಂತಿಲ್ಲ. "ಇಂಥ ಪುಸ್ತಕಕ್ಕೆ ಪ್ರಸ್ತುತತೆಯುಂಟೆ?" ಎಂದು ಯಾರೋ ಕೇಳಿದರಂತೆ! "ಪಾಂಡಿತ್ಯಕ್ಕೆ ಪ್ರಸ್ತುತತೆ ಏನು?" ಎಂಬುದೇ ಬಹುಶಃ ಆ ಪ್ರಶ್ನೆಗೆ ಉತ್ತರವೆನ್ನಬೇಕು. ಕನ್ನಡದಲ್ಲಿ ಇಂಥದೊಂದು ಪುಸ್ತಕ ಪ್ರಕಟವಾಯಿತಲ್ಲ ಎಂದು ನಾವೆಲ್ಲ ಸಂತೋಷಿಸಬೇಕು; ಅಭಿಮಾನ ತಾಳಬೇಕು.

ಡಾ.ಹಾ.ಮಾ.ನಾಯಕ

(ಸಂಪ್ರತಿ ೨, ಪುಟ ೨೩೬, ಕನ್ನಡ ಪುಸ್ತಕಗಳು-೧೯೮೨)

ಅನುಬಂಧ - ೩

ಗ್ರಂಥ - ಲೇಖನಸೂಚಿ

ಸಂಪಾದಿತ ಕೃತಿಗಳು - ೧

ಶ್ರೀಕಂಠಿಕಾ (ಸಹ ಸಂಪಾದಕ) (ಡಾ.ಎಸ್.ಶ್ರೀಕಂಠಶಾಸ್ತ್ರಿಗಳ ಅಭಿನಂದನಾಗ್ರಂಥ) ಗೀತಾ ಬುಕ್ ಹೌಸ್, ಮೈಸೂರು-೧, ೧೯೭೩, ಪು. xii + ೩೯೫

ಕನ್ನಡ ಅಧ್ಯಯನಸಂಸ್ಥೆಯ ಕನ್ನಡ ಸಾಹಿತ್ಯ ಚರಿತ್ರೆ, ಕನ್ನಡ ಅಧ್ಯಯನಸಂಸ್ಥೆ

ಪ್ರಥಮ ಸಂಪುಟ - ೧೯೭೪, ಪು. ೭೬೩ ಮೈಸೂರು ವಿಶ್ವವಿದ್ಯಾನಿಲಯ

ದ್ವಿತೀಯ ಸಂಪುಟ - ೧೯೭೫, ಪು. ೮೩೯

ತೃತೀಯ ಸಂಪುಟ - ೧೯೭೬, ಪು. ೯೦೭

ಚತುರ್ಥ ಸಂಪುಟ - ೧೯೭೭, ಪು. ೧೮೯೨ (ಭಾಗ ೧, ೨)

ಪಂಚಮ ಸಂಪುಟ - ೧೯೮೧, ಪು. ೮೪೦ (ಭಾಗ ೧)

ಡಾ.ಎಸ್.ಶ್ರೀಕಂಠಶಾಸ್ತ್ರಿಗಳ ಸಂಶೋಧನ ಲೇಖನಗಳು(ಇತರರೊಂದಿಗೆ), ಕನ್ನಡ ಅಧ್ಯಯನಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ ೧೯೭೫. ಪು. xxix+ ೬೩೯

ಸ್ವಸ್ತಿ (ಇತರರೊಂದಿಗೆ) (ತ.ಸು.ಶಾಮರಾಯರ ಅಭಿನಂದನಾಗ್ರಂಥ) ತ.ವೆಂ.ಸ್ಮಾರಕ ಗ್ರಂಥಮಾಲೆ, ಮೈಸೂರು, ೧೯೮೩ ಪು. xiv + ೯೬೨

ಪ್ರಾಕ್ತನ (ರಾ.ನರಸಿಂಹಾಚಾರ್ಯರ ಕನ್ನಡ ಲೇಖನಗಳು, ಭಾಷಣಗಳು) ಕನ್ನಡ ಅಧ್ಯಯನಸಂಸ್ಥೆ, ಮೈಸೂರು ವಿ.ವಿ. ಮೈಸೂರು-೬, ೧೯೮೬ ಪು. iv + ೧೩೬

ಡಿ.ಎಲ್.ನರಸಿಂಹಾಚಾರ್ಯರ ರುದ್ರನಾಟಕೋಪನ್ಯಾಸಗಳು, ವಾಗ್ದೇವಿ ಪ್ರಕಾಶನ, ಮೈಸೂರು -೧, ೧೯೮೬, ಪು. viii + ೯೪ ಪ್ರಕ, ೫೩-೩, ೪; ೫೪-೧, ೨, ೩, ೪; ಅ. ೧೯೭೨- ಜ. ೧೯೭೩ (ಸಂಪಾದಿತ)

ಚಾಮರಸ (ಇತರರೊಂದಿಗೆ) ಐ.ಬಿ.ಎಚ್.ಪ್ರಕಾಶನ, ಬೆಂಗಳೂರು-೯, ೧೯೮೭, ಪು. ೧೫೧

೩೬. **ಅಭಿಜ್ಞಾನ** (ಡಾ. ಕೆ.ಕೃಷ್ಣಮೂರ್ತಿ, ಅಭಿನಂದನಗ್ರಂಥ) ಡಿ.ವಿ.ಕೆ.ಮೂರ್ತಿ, ಮೈಸೂರು-೪, ೧೯೯೫, ಪು. ೬೧೭

ಮುಲಕನಾಡು ಬ್ರಾಹ್ಮಣರು-ಸಮುದಾಯ ಸಂಸ್ಕೃತಿ, ಮುಲಕನಾಡು ಮಹಾಸಂಘ, ಬೆಂಗಳೂರು ೪೧, ೨೦೦೦, ಪು. xxxii+೪೬+೪೨೪

ಡಾ.ಎ.ವೆಂಕಟಸುಬ್ಬಯ್ಯನವರ ಸಂಶೋಧನ ಲೇಖನಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಚಾಮರಾಜಪೇಟೆ ಬೆಂಗಳೂರು-೧೮, ೨೦೦೧, ಪು. xiv+೫೬೭

ಮುಲಕನಾಡು ಸಿರಿ, ಮೈಸೂರು ಮುಲಕನಾಡು ಸಭಾ, ಮೈಸೂರು -೧೭, ೨೦೦೨ ಪು. ೧೨೪

ಸಂಪಾದಿತಕೃತಿಗಳು - ೨

ಕಾವ್ಯ ಸಂಚಯ-೧ (ಸಹ ಸಂ) ಪು. ೨೫೨, ೧೯೭೧, ಕನ್ನಡ ಅಧ್ಯಯನಸಂಸ್ಥೆ ಮೈಸೂರು ವಿ.ವಿ., ಮೈಸೂರು

ಕಾವ್ಯ ಸಂಚಯ-೨ (ಸಹ ಸಂ) viii+೧೯೨, ೧೯೭೮, ಕನ್ನಡ ಅಧ್ಯಯನಸಂಸ್ಥೆ ಮೈಸೂರು ವಿ.ವಿ., ಮೈಸೂರು

ಎಸ್.ಜಿ.ನರಸಿಂಹಾಚಾರ್ಯರ ಕವಿತೆಗಳು, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು-೯, ೧೯೮೬ ಪು. xviii+೨೧೯

ಗಮಕ ಮಂಜೂಷ, ಕರ್ನಾಟಕ ಗಮಕಕಲಾ ಪರಿಷತ್, ಬೆಂಗಳೂರು -೨೮, ೧೯೮೭ viii+೯೫

ಗದ್ಯ ಕುಸುಮಾಂಜಲಿ (ಸಹ ಸಂ) ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು, ೧೯೮೮, ಪು. vi+೯೨

ಕನ್ನಡ ಚೆನ್ನುಡಿ, ಸುವಿದ್ಯಾ ಪ್ರಕಾಶನ, ಬೆಂಗಳೂರು -೪, ೧೯೯೧, ಪು. xliii+೫೫, ಪ್ರಿಸಂ ಬುಕ್ ಹೌಸ್, ಬೆಂಗಳೂರು, ೨೦೦೮, ಪು.೬೩೨

ಅನುಕರಣಗೀತಲಹರಿ (ಜಯರಾಯಾಚಾರ್ಯ), ಡಿ.ವಿ.ಕೆ. ಮೂರ್ತಿ, ಮೈಸೂರು-೪, ೧೯೯೧, ಪು. -೮೭

ಕಾವ್ಯವಾಹಿನಿ, ದಸರಾಮಹೋತ್ಸವ ಸಮಿತಿ, ಮೈಸೂರು, ೧೯೯೧, ಪು. xvi+೯೦

ಕಾವ್ಯಶ್ರೀರಂಗ, ದಸರಾ ಮಹೋತ್ಸವ ಸಮಿತಿ, ಮೈಸೂರು, ೧೯೯೨, ಪು. xvi + ೮೦

ಎಸ್.ಜಿ.ನರಸಿಂಹಾಚಾರ್ಯರ ಅಲ್ಲಾವುದ್ದೀನ್ ಮತ್ತು ಅದ್ಭುತ ದೀಪ, ಕಾವ್ಯಾಲಯ, ಮೈಸೂರು-೧೪, ೧೯೯೨, ಪುಟ ೩೨+೩೨+೩೧

ಕನ್ನಡ ಕವಿಗಳು ಕಂಡ ಗೊಮ್ಮಟೇಶ್ವರ, ಶ್ರವಣಬೆಳಗೊಳ -೧೯೯೨ ದ್ವಿ.ಮು. ಪುಟ ii+೧೩೧

ಪಂಪ ಕವಿ ವಿರಚಿತ ಆದಿಪುರಾಣಂ (ಸಂ. ಎಸ್.ಜಿ.ನರಸಿಂಹಾಚಾರ್) ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ -೧೯೯೫, ಪುಟ xvi+೮೦+೪೬೪, ಪರಿಷ್ಕೃತ ದ್ವಿತೀಯ ಮುದ್ರಣ.

ಮುದ್ರಾಮಂಜೂಷವು(ಕೆಂಪುನಾರಾಯಣ), ಸಾಹಿತ್ಯ ಅಕಾಡೆಮಿ, ನವದೆಹಲಿ, ೧೯೯೯, ಪುಟ cvii+೩೫೧

ಸಿರಿಭೂವಲಯ(ಕುಮುದೇಂದು), ಪುಸ್ತಕ ಪ್ರಕಾಶನ, ಬೆಂಗಳೂರು-೪, ೨೦೦೩, ಪು. ೪೮೦

ಪಂಪಸಂಪುಟ (ಆದಿಪುರಾಣ, ವಿಕ್ರಮಾರ್ಜುನ ವಿಜಯ), ಕನ್ನಡ ವಿಶ್ವವಿದ್ಯಾಲಯ, ಹಂಪಿ -೨೦೦೭, ಪು. Lvii+೯೨೪

ಬ್ರಹ್ಮಶಿವನ ಸಮಯಪರೀಕ್ಷೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ -೨೦೦೮

ಬೊಪ್ಪಣ ಪಂಡಿತನ ಗೊಮ್ಮಟ ಜಿನೇಂದ್ರ ಗುಣಸ್ತವಂ (ನಿರ್ವಾಣ ಲಕ್ಷ್ಮೀಪತಿ ನಕ್ಷತ್ರ ಮಾಲಿಕೆಯೂ ಸೇರಿದೆ) ಶ್ರವಣಬೆಳಗೊಳ ಮಠ - ೨೦೦೬, ಪು. ೭೧

ಕಾವ್ಯ ಜಿನಾಷ್ಟಕಗಳು, ಶ್ರವಣಬೆಳಗೊಳ ಮಠ - ೨೦೦೬, ಪು. ೫೬

ಸೈಗೊಟ್ಟ ಶಿವಮಾರನ ಕಲ್ಪನಾರತ್ನ(ಇತರರೊಂದಿಗೆ), ಕರ್ನಾಟಕ ರಾಜ್ಯ ಪತ್ರಾಗಾರ -೨೦೦೭

ಡಾ.ಎಸ್.ಶ್ರೀಕಂಠಶಾಸ್ತ್ರಿಗಳ ಶ್ರೀಕಂಠೇಶ್ವರ ಶತಕಂ, ಪ್ರಬುದ್ಧ ಕರ್ನಾಟಕ, ೫೭-೩, ೧೯೭೫, ಪು. ೪೯-೬೨

ಶ್ರೀ ಸಾಹಿತ್ಯ ಮಣಿಮಾಲೆ (ಬಿ.ಎಂ.ಶ್ರೀ ಅವರ ಅಸಂಕಲಿತ ಬರಹಗಳು ಭಾಷಣಗಳು) ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು, ೨೦೦೮, ಪು. ೨೪೬

ವ್ಯಾಕರಣ ಕೃತಿಗಳು - ೧

ಕೇಶಿರಾಜ ವಿರಚಿತ ಶಬ್ದಮಣಿದರ್ಪಣ *(ಸಂ) ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು-೧೮, ೧೯೯೭, ಪು. xivi+೩೦೫*

ಹೊಸಗನ್ನಡದ ವ್ಯಾಕರಣ, *ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ನ.ರಾ.ಕಾಲೋನಿ, ಬೆಂಗಳೂರು-೧೯, ೧೯೯೦ ಪ್ರ.ಮು. ಪು. viii+೧೭೧, ೨೦೦೭ ದ್ವಿ.ಮು.*

ಹೊಸಗನ್ನಡದ ವ್ಯಾಕರಣ, *ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು-೧೮, ೧೯೯೭ ಪ್ರ.ಮು. ಪುಟ. ೩೧, ೨೦೦೧ ದ್ವಿ.ಮು. ಪು. ೩೨*

ದರ್ಪಣವಿವರಣ, *ತ.ವೆಂ.ಸ್ಮಾರಕ ಗ್ರಂಥಮಾಲೆ, ಗೋಕುಲಂ ೩ನೆಯ ಹಂತ, ಮೈಸೂರು-೨, ೨೦೦೧, ಪು. viii+೨೨೪*

ನಾಟಕಗಳು

ಬದ್ಧ ಪ್ರಮೀತ್ಯೂಸ್, ಸರಸ ಸಾಹಿತ್ಯ ಪ್ರಕಾಶನ, ಮೈಸೂರು, ೧೯೬೬, ಪು.vii+ Ixxix+೧೦೦; ಪ್ರಕ. ೪೪-೨, ೩, ೧೯೬೨, ಪು. ೬೭-೯೧, ಪು. ೧೩-೩೬ (ಅನುವಾದ)

ಟ್ರಾಕಿಯ ಪೆಣ್ಗಳ್, ಸುರುಚಿ ಪ್ರಕಾಶನ, ಮೈಸೂರು-೮, ೧೯೭೮, ಪು. ೧೦೦ ಪ್ರಕ. ೪೨-೨, ೩, ೧೯೬೦, ಪು. ೭೫-೯೮, ಪು. ೧೫-೪೨ (ಅನುವಾದ)

ಕಂಸ, ತ.ವೆಂ.ಸ್ಮಾರಕ ಗ್ರಂಥಮಾಲೆ, ಮೈಸೂರು, ೧೯೭೧, ೧೯೭೨, ೧೯೭೩, ೧೯೮೩

ಹೊಸಗನ್ನಡ ಮಿತ್ರವಿಂದಾ ಗೋವಿಂದ, ಸುರುಚಿ ಪ್ರಕಾಶನ, ಮೈಸೂರು, ೧೯೮೧, ಗೀತಾ ಬುಕ್ ಹೌಸ್, ಮೈಸೂರು, ೧೯೮೭, ೧೯೮೮, ಚೇತನ ಬುಕ್ ಹೌಸ್, ಮೈಸೂರು-೨೪, ೧೯೮೯, ಜೂನ್, ೧೯೮೯ ಆಗಸ್ಟ್, ಪು. ೧೧೪

ಜೀವನ ಚರಿತ್ರೆಗಳು

ಮಹಾಮಹೋಪಾಧ್ಯಾಯ ಡಾ.ಆರ್.ಶಾಮಾಶಾಸ್ತ್ರೀ, ಐ.ಬಿ.ಎಚ್.ಪ್ರಕಾಶನ, ಬೆಂಗಳೂರು ೯, ೧೯೮೦, ಪು. ೫೨

ರಾವ್‌ಬಹದ್ದೂರ್ ಎಂ.ಶಾಮರಾವ್, ಐ.ಬಿ.ಎಚ್.ಪ್ರಕಾಶನ, ಬೆಂಗಳೂರು, ೧೯೮೨, ಪುಟ ೬೦

ಸಾಹಿತ್ಯಶಿಲ್ಪಿಗಳು, ಕಲಾ ಸಾಹಿತ್ಯ ಪ್ರಕಾಶನ, ಬೆಂಗಳೂರು-೮೬, ೧೯೮೫, ಪು. vii+೧೨೯

ಎಂ.ಶಾಮರಾಯರು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ೧೯೯೫, ಪು.೧೭+೬೬

ಎ.ಆರ್.ಕೃಷ್ಣಶಾಸ್ತ್ರೀ, ಸಾಹಿತ್ಯ ಅಕಾಡೆಮಿ, ನವದೆಹಲಿ, ೨೦೦೦, ಪು. ೧೪೦

ಉದಾರ ಚರಿತರು ಉದಾತ್ತ ಪ್ರಸಂಗಗಳು, ವಿ.ಸೀ. ಸಂಪದ, ಬೆಂಗಳೂರು-೮೫, ೨೦೦೪, ಚ.ಮು.

ಭಾರತರತ್ನ ಸರ್.ಎಂ.ವಿಶ್ವೇಶ್ವರಯ್ಯನವರ ಪೂರ್ವಜರು, ಸುಂದರ ಪ್ರಕಾಶನ, ಹನುಮಂತನಗರ, ಬೆಂಗಳೂರು ೧೯, ೨೦೦೪, ಪು. viii + ೮ + ೧೧೨

ಆಪ್ತರು ಆಚಾರ್ಯರು, ಸಂಸ್ಕೃತಿ ಪಬ್ಲಿಷಿಂಗ್ ಹೌಸ್, ಮೈಸೂರು, ೨೦೦೫, ಪು. ೧೯೬

ಸಹಜಾನಂದ ಭಾರತೀಸ್ವಾಮಿಗಳು, ಸಹಜಾನಂದ ಭಾರತೀ ಮಠ, ಕಲಾಸಿಪಾಳ್ಯ, ಬೆಂಗಳೂರು, ೨೦೦೫, ಪು. vii+೧೦೮

ಡಾ.ಎ.ವೆಂಕಟಸುಬ್ಬಯ್ಯನವರು, ಪ್ರಸಾರಾಂಗ, ಮೈಸೂರು ವಿ.ವಿ., ಮೈಸೂರು, ೨೦೦೭, ಪು. ೭೪

ಪ್ರಬಂಧ

ಕಾವ್ಯಚಿತ್ರಗಳು, ತ.ವೆಂ.ಸ್ಮಾರಕ ಗ್ರಂಥಮಾಲೆ, ಮೈಸೂರು, ೧೯೭೫, ಪು. vi+೧೬೮

ಸದ್ದೆಂತೆಂಬರ ಗಂಡ, ಮಿತ್ರ ಪ್ರಕಾಶನ, ಮೈಸೂರು-೯, ೧೯೮೨, ಪು. viii

ಮೆಲುಗಾಳಿಯ ಮಾತುಗಳು, ಅಭಿಜ್ಞಾನ, ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ, ಬೆಂಗಳೂರು, ದ್ವಿತೀಯ ವಿಸ್ತೃತ ಮುದ್ರಣ ೨೦೦೨, ಪು. vi+೧೫೦

ಅನುವಾದ

ವೇದಂ ವೆಂಕಟರಾಯಶಾಸ್ತ್ರೀ, ಸಾಹಿತ್ಯ ಅಕಾಡೆಮಿ, ನವದೆಹಲಿ, ೧೯೮೬, ಪು. ೯೬.

ಹರಿವಂಶ ಪುರಾಣಸಾರ, ಶ್ರೀ ಸಿದ್ಧಾಂತ ಕೀರ್ತಿ ಗ್ರಂಥಮಾಲೆ, ಹೊಂಬುಜ ಜೈನ ಮಠ, ಹೊಂಬುಜ, ೧೯೮೭, ಪು. xxviii + ೨೯೧

ಕರ್ಣಪಾರ್ಯನ ನೇಮಿನಾಥಪುರಾಣ ಕಥಾಸಾರ, ಶ್ರವಣಬೆಳಗೊಳ -೨೦೦೨, ಪು. xx + ೨೮೦

ಅರ್ಧನೇಮಿಪುರಾಣ ಕಥಾಸಾರ, ವಸ್ತು ವಿಮರ್ಶೆ, ಕನಕಗಿರಿ ಪ್ರಕಾಶನ ಮಲೆಯೂರು, ಚಾಮರಾಜನಗರ, ೨೦೦೨ ಪು. xvi + ೧೬೨

ನಮ್ಮ ಮಾತೃಭೂಮಿ (ಮೂಲ- ಸ್ವಾಮಿ ವಿವೇಕಾನಂದ) ಭಾರತೀಯ ವಿದ್ಯಾಭವನ, ಮೈಸೂರು -೨೦೦೭, ಪು. ೮೪

ಸೂಚಿಗಳು

A Descriptive Catalogue of the Kannada Manuscripts in the Osmania University Library (co-ed) O.U.L. Series. No-1, Osmania University Hyderabad-7, 1966, page xxi+354

A Bibliography of Karnataka Studies (co-ed) Vol-1, Prasaranga, Mysore University -1972, page - xiv+106

A Bibliography of Karnataka studies -vol-II prasaranga, Mysore V.V. 1998, page-viii+134

ಕನ್ನಡ ರಾಮಾಯಣ ಗ್ರಂಥಸೂಚಿ, ಶ್ರೀ ಪ್ರೇಮಸಾಯಿ ಪ್ರಕಾಶನ, ಬೆಂಗಳೂರು -೧೯೯೭, ಪು. ೧೩೭

ಸಮಗ್ರ ಸಂಪುಟ

ಶ್ರೀಮುಖ (ಡಾ.ಟಿ.ವಿ.ವಿ.ಅಭಿನಂದನ ಗ್ರಂಥ) -೪೭ ಬರಹಗಳು ಸೇರಿವೆ, ಅಭಿನಂದನ ಸಮಿತಿ, ಮೈಸೂರು -೧೯೯೭, ಪು. xlvii+ ೮೬೦

ಶಾಸ್ತ್ರೀಯ -೧, ೨, ೩, ೪ ಶಾಸ್ತ್ರೀಯ -೫ (ಮಾರ್ಗದರ್ಶಕ ಮಹನೀಯರು)-೨೦೦೨, ೬ (ಸಾಹಿತ್ಯ ಶೋಧ)-೨೦೦೫ (ಈ ಸಂಪುಟಗಳು ಸಪ್ನ ಬುಕ್ ಹೌಸ್, ಬೆಂಗಳೂರಿನಿಂದ ಪ್ರಕಟವಾಗಿವೆ.)

ಗ್ರಂಥಗಳ, ಲೇಖನಗಳ ಸೂಚಿ

ಆಕರಸೂಚಿ

ಎಕ: ಎಪಿಗ್ರಾಫಿಯ ಕರ್ನಾಟಕ (ಕನ್ನಡ ಅಧ್ಯಯನಸಂಸ್ಥೆಯಿಂದ ಪರಿಷ್ಕೃತ)

ಕಅಸಂ ಕಛಂಚ: 'ಕನ್ನಡ ಅಧ್ಯಯನಸಂಸ್ಥೆಯ ಕನ್ನಡ ಛಂದಸ್ಸಿನ ಚರಿತ್ರೆ'

ಕಅಸಂ ಕಸಾಚ: ಕನ್ನಡ ಅಧ್ಯಯನಸಂಸ್ಥೆಯ ಕನ್ನಡ ಸಾಹಿತ್ಯ ಚರಿತ್ರೆ

ಕನು :ಕನ್ನಡ ನುಡಿ

ಕವಿಕೋ: 'ಕನ್ನಡ ವಿಶ್ವಕೋಶ'

ಕವಿವಿ: 'ಕರ್ನಾಟಕ' -ಕನ್ನಡ ವಿಷಯ ವಿಶ್ವಕೋಶ

ಕಸಾಪ: ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ

ಕಾವ್ಯಾಚಿ: 'ಕಾವ್ಯಚಿತ್ರಗಳು'

ಗ್ರಂಲೋ: ಗ್ರಂಥಲೋಕ

ಪುಸ್ತಪು: ಪುಸ್ತಕ ಪುರವಣಿ

ಪ್ರಕ: ಪ್ರಬುದ್ಧ ಕರ್ಣಾಟಕ

ಪ್ರಕಸಾ: 'ಪ್ರಾಚೀನ ಕನ್ನಡ ಸಾಹಿತ್ಯ: ಕೆಲವು ನೋಟಗಳು'

ಮಾನಕ: ಮಾನವಿಕ ಕರ್ಣಾಟಕ

ಸಾಹಿಮಂ: 'ಸಾಹಿತ್ಯ ಮಂಥನ'

ಹೊಸಸಾ: 'ಹೊಸಗನ್ನಡ ಸಾಹಿತ್ಯ: ಕೆಲವು ನೋಟಗಳು'

EIL: Encyclopaedia of Indian Literature I-IV, Sahitya Akademi, New Delhi-1

JMU: Journal of the Mysore University (Arts), Mysore University, Mysore

ಭಾಷೆ-ವ್ಯಾಕರಣ

ಕನ್ನಡ ಆಡುಮಾತು ಬರವಣಿಗೆಗಳಲ್ಲಿ ವಿಕಲ್ಪರೂಪಗಳು, ಸಾಮಾನ್ಯ ಪ್ರಮಾದಗಳು, 'ಅಭಿಜ್ಞಾನ', ಡಿ.ವಿ.ಕೆ. ಮೂರ್ತಿ, ಕೃಷ್ಣಮೂರ್ತಿಪುರಂ, ಮೈಸೂರು, ೧೯೬೪, ಪು. ೧೦೬ -೩೬ ಶಾಸ್ತ್ರೀಯ -೧, ಪು. ೩೨೫ -೩೫೩

ಕನ್ನಡದಲ್ಲಿ ಯಮಳ ಶಬ್ದಗಳು, 'ಅಧ್ಯಯನ' ಶಂ.ಬಾ.ಜೋಶಿ ಸನ್ಮಾನ ಸಮಿತಿ, ಬೆಂಗಳೂರು. ೧೯೮೦, ಪು. ೭೪೧-೫೦. ಶಾಸ್ತ್ರೀಯ -೧, ೧೯೯೯, ಪು. ೩೦೧ -೩೦೯

ಕನ್ನಡದಲ್ಲಿ ವರ್ಣಪಲ್ಲಟದ ಕೆಲವಂಶಗಳು, 'ಉಪಾಯನ', ಪ್ರೊ.ಡಿ.ಎಲ್. ಎಸ್.ಸಂಭಾವನಾ ಗ್ರಂಥಸಮಿತಿ, ಬೆಂಗಳೂರು, ೧೯೬೭, ಪು. ೩೪೬ -೫೮, ಶಾಸ್ತ್ರೀಯ-೧, ಪು. ೩೧೦-೩೨೪

ಕನ್ನಡ ವ್ಯಾಕರಣ ಸಾಹಿತ್ಯ, ಪ್ರಕ.ಚಿನ್ನದ ಸಾಹಿತ್ಯ ಸಂಚಿಕೆ, ೧೯೬೯, ಪು.೬೭೫ -೭೨೨; 'ಮೂರು ಸಮೀಕ್ಷೆಗಳು', ೧೯೮೧, ಪು. ೯೯ -೧೫೬, ಶಾಸ್ತ್ರೀಯ -೧, ಪುಟ ೪೦೮ -೪೫೪

ಕೇಶಿರಾಜ, ಕವಿಕೋ, ಸಂ ೫, ೧೯೭೨, ಪು. ೨೬೦ -೬೧

ಕೇಶಿರಾಜನ ರಸಿಕತೆ, ಜೀವನ, ೧೪ -೩, ಜುಲೈ ೧೯೫೩, ಪು. ೯೫ -೯೭

'ತವು' ಧಾತುವಿನ ವ್ಯಾಕರಣ ವಿಚಾರ, 'ಮಾನ' ಡಾ.ಹಾ.ಮಾ.ನಾಯಕ ಅಭಿನಂದನ ಗ್ರಂಥ), ಗೀತಾ ಬುಕ್ ಹೌಸ್, ಕೆ.ಆರ್, ಸರ್ಕಲ್, ಮೈಸೂರು-೧, ಪು. ೩೦೦-೧೧, ಶಾಸ್ತ್ರೀಯ -೧, ಪು. ೩೮೪-೩೯೪

ವಡ್ಡಾರಾಧನೆಯ ದೇಸಿ, 'ಜ್ಞಾನೋಪಾಸಕ' (ಡಿ.ಎಲ್.ನರಸಿಂಹಾಚಾರ್ ಅಭಿನಂದನ ಗ್ರಂಥ) ಮೈಸೂರು, ೧೯೬೦, ಪು. ೧೫೮-೬೭; 'ಸಾಹಿತ್ಯ ಮಂಥನ', ೧೯೭೨, ಪು. ೪೩-೫೨, ಶಾಸ್ತ್ರೀಯ-೧, ಪು. ೨೭೩-೭೯

'ಶಬ್ದಮಣಿ ದರ್ಪಣ'ದ ಮಂಗಳ ಶ್ಲೋಕದ ಒಂದು ವ್ಯಾಕರಣಾಂಶ, 'ಹೊಯ್ಸಳ' ಸಂಪದ, ಕನ್ನಡ ಸಾಹಿತ್ಯ ಸಮ್ಮೇಳನ, ಹಾಸನ ೧೯೯೬, ಪು. ೭೪೧-೪೩, ಶಾಸ್ತ್ರೀಯ -೧, ಪು. ೩೭೯-೩೮೧

'ಶಬ್ದಮಣಿದರ್ಪಣ'ದ ಲಕ್ಷ್ಯ ಪದ್ಯವೊಂದರ ಅವಿದಿತ ಆಕರ, ಕ.ಸಾ.ಪ. ೧೯೯೭: ೭೫-೨ ಶಾಸ್ತ್ರೀಯ-೧ ಪು. ೧೩೮-೧೪೧

'ಶಬ್ದಮಣಿದರ್ಪಣ' ಮತ್ತು ಉತ್ತರಕಾಲೀನ ಸಾಹಿತ್ಯ, 'ಬೆಳ್ವೊಲ' (ಡಾ.ಆರ್.ಸಿ. ಹಿರೇಮಠ ಅಭಿನಂದನ ಗ್ರಂಥ), ಕನ್ನಡ ಅಧ್ಯಯನ ಪೀಠ, ಧಾರವಾಡ, ೧೯೮೧, ಪು. ೩೩೫-೪೩ ಪ್ರಾಕಸಾ., ೧೯೮೧, ಪು. ೭೫-೮೪, ಶಾಸ್ತ್ರೀಯ-೧, ಪು. ೪೦೦ -೪೦೭

ಹೊಸಗನ್ನಡ ವ್ಯಾಕರಣದ ಮೂಲಾಂಶಗಳು, ವಾಕ್ಯರಚನೆ, 'ಸವಿಗನ್ನಡ', ದ್ವಿತೀಯ ಪಿ.ಯು.ಸಿ. ಕನ್ನಡ (ಐಚ್ಛಿಕ) ಪಠ್ಯಪುಸ್ತಕ, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು ೯, ೧೯೮೮, ಪು. ೨೪೩-೭೮

ವಿಧ್ಯರ್ಥ ಪ್ರತಿಷೇಧ ಕ್ರಿಯೆಯ 'ಅಲ್' ಪ್ರತ್ಯಯ, ಪ್ರಬುದ್ಧ ಕರ್ನಾಟಕ-೨೦೦೭, ಕನ್ನಡದ ವಾಗ್ರೂಢಿಗಳು-ಎಂ. ರಾಜಗೋಪಾಲಾಚಾರ್ಯ ಸಂಸ್ಮರಣ ಗ್ರಂಥ-೨೦೦೭

ಕೇಶಿರಾಜ ವಿರಚಿತ ಶಬ್ದಮಣಿದರ್ಪಣ (ಸಂ) ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು-೨, ೧೯೯೪, ಪುಟ xvi + ೧೪೪ + ೩೨೨

ಛಂದಸ್ಸು

ಅಂಶಗಣ, ಕವಿಕೋ, ಸಂ.೧, ೧೯೬೯, ಪು. ೧೩೮-೩೯

ಅಕ್ಷರಗಣ, ಕವಿಕೋ, ಸಂ. ೧, ೧೯೬೯, ಪು. ೧೬೨-೬೩

ಅನ್ಯಗ್ರಂಥಗಳಲ್ಲಿ ಛಂದಸ್ಸಿನ ವಿಷಯಗಳು, 'ಕನ್ನಡ ಛಂದೋವಿಹಾರ', ಗೀತಾ ಬುಕ್ ಹೌಸ್, ಮೈಸೂರು-೧, ೧೯೮೯ ಪು. ೪೦-೪೮, ಶಾಸ್ತ್ರೀಯ-೨, ಪು. ೧೫೭ -೧೬೫

ಆರಂಭಕಾಲೀನ ಕನ್ನಡ ಸಾಹಿತ್ಯದ ವರ್ಣವೃತ್ತಗಳು: ಪ್ರಯೋಗ, ವೈವಿಧ್ಯ, ಕಲಿಸಂ., ಕಭಂಚ., ಸಂ. ೧, ೧೯೮೦, ಪು. ೩೪೭-೬೨. ಶಾಸ್ತ್ರೀಯ-೨, ಪು. ೧೬೬-೧೭೯

ಉದ್ದಂಡ ಷಟ್ಪದಿ, ಕವಿಕೋ,ಸಂ.೨, ೧೯೭೦, ಪು. ೬೫೯-೬೦

ಏಳೆ, ಕವಿಕೋ, ಸಂ ೩, ೧೯೭೧, ಪು.೨೪೬-೪೭

ಕಂದ, ಕವಿಕೋ, ಸಂ.೩, ೧೯೭೧, ಪು. ೫೧೨-೧೪

ಕನ್ನಡ ಛಂದಸ್ಸು, ಡಿ.ವಿ.ಕೆ.ಮೂರ್ತಿ, ಮೈಸೂರು ೪, ಪ್ರ.ಮು. ೧೯೭೦, ದ್ವಿ.ಮು. ೧೯೭೬, ತೃ.ಮು. ೧೯೯೫, ಚ.ಮು. ೨೦೦೦ ಪ.ಮು. ೨೦೦೭, ಪು. xvi + ೧೯೨

ಕನ್ನಡ ಛಂದಃಸ್ವರೂಪ, ಡಿ.ವಿ.ಕೆ.ಮೂರ್ತಿ. ಮೈಸೂರು-೪, ಪು. ಮು. ೧೯೭೮, ದ್ವಿ.ಮು. ೧೯೯೬ ಪು. xvi + ೫೮೭

ಕನ್ನಡ ಛಂದೋವಿಹಾರ, ಗೀತಾ ಬುಕ್ ಹೌಸ್, ಮೈಸೂರು-೧, ಪ್ರ.ಮು. ೧೯೮೯, ಪು. ೨೨೦

ಕನ್ನಡ ಛಂದೋಮೀಮಾಂಸೆ, ಡಿ.ವಿ.ಕೆ.ಮೂರ್ತಿ, ಮೈಸೂರು -೪, ಪ್ರ.ಮು. ೨೦೦೩, ಪು. ೨೫೬

ಕನ್ನಡ ಛಂದಸ್ಸಿಗೆ ಶ್ರೀ ಅವರ ಕೊಡುಗೆ, 'ಶ್ರೀನಿಧಿ', ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು-೧೯, ೧೯೮೫, ಪು. ೩೩೪-೫೮; 'ಕನ್ನಡ ಛಂದೋವಿಹಾರ', ೧೯೮೯, ಪು. ೧೧೯-೩೪ ಶಾಸ್ತ್ರೀಯ-೨ ಪುಟ ೪೩೬-೫೯

ಕನ್ನಡ ಛಂದಸ್ಸಿನ ಮೇಲೆ ಪ್ರಾಕೃತ ಛಂದಸ್ಸಿನ ಪ್ರಭಾವ, 'ಕನ್ನಡ ಛಂದೋವಿಹಾರ', ೧೯೮೯, ಪು. ೪೯-೬೨, ಶಾಸ್ತ್ರೀಯ-೨, ಪು. ೭೭-೮೯

ಕನ್ನಡ ಛಂದಸ್ಸಿನ ಸಾಮಾನ್ಯ ನಿರೂಪಣೆ, ಜೀವನ ೨೩-೧೦, ೧೧, ಫೆಬ್ರವರಿ, ಮಾರ್ಚ್ ೧೯೬೩, ಪು. ೩೪೨-೪೬, ಪು. ೩೭೬-೮೧; 'ಕನ್ನಡ ಛಂದಸ್ಸು', ೧೯೭೧, ಪು. ೧೪-೭೨

ಕನ್ನಡ ಛಂದಸ್ಸು, ಕವಿಕೋ, ಸಂ. ೩, ೧೯೭೧, ಪು. ೬೯೬-೭೦೨; ಕವಿವಿ, ೧೯೭೯, ಪು. ೧೪೦-೪೫

ಕನ್ನಡ ಛಂದಸ್ಸು: ಎಂವಿಸೀ., ಅವರ ಶೋಧನೆಗಳು, 'ಆಸ್ವಾದ', ಎಂ.ವಿ.ಸೀತಾರಾಮಯ್ಯ ಅಭಿನಂದನ ಗ್ರಂಥ, ಉದಯಭಾನು ಕಲಾಸಂಘ, ಬೆಂಗಳೂರು-೧೯, ೧೯೮೩, ಪು. ೨೨೯-೪೦;

'ಕನ್ನಡ ಛಂದೋವಿಹಾರ', ೧೯೮೯, ಪು.೧೭೬-೭೯, ಶಾಸ್ತ್ರೀಯ-೨, ಪು. ೪೯೧-೫೦೦

ಕನ್ನಡ ಛಂದೋಗ್ರಂಥಗಳ ಸಂಕ್ಷಿಪ್ತ ಚರಿತ್ರೆ, 'ಕನ್ನಡ ಛಂದಸ್ಸು', ೧೯೭೦, ಪು. ೧-೧೩

ಕವಿಜಿಹ್ವಾಬಂಧನಂ, ಪ್ರಕ., ೫೦-೧, ೧೯೬೮, ಪು. ೨೫೭-೭೭; 'ಎ.ಆರ್.ಕೃ. ಜೀವನ ಸಾಧನೆ', ಪ್ರಸಾರಾಂಗ, ಮೈಸೂರು, ೧೯೭೧, ಪು. ೨೦೦-೧೬; 'ಕನ್ನಡ ಛಂದಸ್ಸು', ೧೯೭೦. ಪು. ೧೦೬-೨೬. ಶಾಸ್ತ್ರೀಯ-೨, ಪು. ೧೩೯-೧೫೬

ಕವಿರಾಜಮಾರ್ಗದ ಛಂದೋವಿಚಾರಗಳು, ಕಲಿಸಂ ಕಸಾಚ., ಸಂ. ೨, ೧೯೭೫, ಪು. ೬೮೬-೯೪; 'ಕನ್ನಡ ಛಂದಸ್ಸು' (ಮೂರನೆಯ ಮುದ್ರಣ ೧೯೯೫), ಪು. ೧೦೯-೧೧೭. ಶಾಸ್ತ್ರೀಯ-೨, ಪು. ೧೮೦-೧೮೭

ಕಾವ್ಯವಿಷಯವಾಗಿ ಛಂದಸ್ಸು, 'ಸಾಹಿತ್ಯಜೀವಿ', ಪ್ರೊ.ಜಿ.ವೆಂಕಟಸುಬ್ಬಯ್ಯ ಸನ್ಮಾನ ಸಮಿತಿ, ಬೆಂಗಳೂರು, ೧೯೭೬, ಪು. ३೫-೫೬; 'ಕನ್ನಡ ಛಂದೋವಿಹಾರ', ೧೯೮೯, ಪು. ೯-३೦, ಶಾಸ್ತ್ರೀಯ-೨ ಪು. ೪೭-೬೭

ಖ್ಯಾತಕರ್ಣಾಟಕಗಳು, ಕವಿಕೋ., ಸಂ. ೫, ೧೯೭೨, ಪು. ೮೫೦-೫೧

ಗಾಯತ್ರಿ ಛಂದಸ್ಸು, ಕವಿಕೋ., ಸಂ. ೬, ೧೯೭೩, ಪು. ೨೨೩

ಗೀತಿಕೆ, ಕವಿಕೋ., ಸಂ. ೬, ೧೯೭೩, ಪು. ೨೮೯-೯೦

ಗುಣಚಂದ್ರ, ಕವಿವಿ., ೧೯೭೮, ಪು. ೪೩೫-೩೬

ಚಂಪಕಮಾಲೆ, ಕವಿಕೋ., ಸಂ. ೭, ೧೯೭೪, ಪು. ೧೧೫-೧೬

ಚಿತ್ರಾಂಗದಾ ಛಂದಸ್ಸು, 'ಚಿತ್ರಾಂಗದಾ ಸಮೀಕ್ಷೆ', ತ.ವೆಂ. ಸ್ಮಾರಕ ಗ್ರಂಥಮಾಲೆ, ೧೯೭೨. ಪು. ೧೭೪-೮೧ ಕನ್ನಡ ಛಂದೋವಿಹಾರ, ೧೯೮೯, ಪು. ೧೩೫-೪೦, ಶಾಸ್ತ್ರೀಯ-೨, ಪು. ೪೬೦-೪೬೪

ಛಂದಶಾಸ್ತ್ರ ಕ್ಷೇತ್ರದ ಸಾಧನೆ, ಕನು, ३೮-೯, ೧೯೭೫ ಪು. ೬-೧೧; 'ಕನ್ನಡ ಛಂದೋವಿಹಾರ', ೧೯೮೯, ಪು. ೭೨-೮೩, ಶಾಸ್ತ್ರೀಯ-೨, ಪು ೫३೮-೫೪೮

ಛಂದಸ್ಸಿನಲ್ಲಿ ಕವಿ ಉಕ್ತಿಯ ವಿನ್ಯಾಸ: ಕುವೆಂಪು ಛಂದೋವಿಚಾರಲಹರಿ, 'ಕಾವ್ಯಾನಂದ', ಡಾ.ಸಿದ್ಧಯ್ಯ ಪುರಾಣಿಕ ಅಭಿನಂದನ ಸಮಿತಿ, ಬೆಂಗಳೂರು-೧೮, ೧೯೮೧, ಪು. ೭೭೭-೯೯; **'ಕನ್ನಡ ಛಂದೋವಿಹಾರ',** ೧೯೮೯, ಪು. ೨೦೦-೨೦. ಶಾಸ್ತ್ರೀಯ -೨, ಪು. ೫೧೯-೫३೭

ಛಂದಸ್ಸು ಮತ್ತು ಗಮಕ, 'ಕನ್ನಡ ಛಂದೋವಿಹಾರ', ೧೯೮೯, ಪು. ೬३-೭೧, ಶಾಸ್ತ್ರೀಯ-೨ ಪುಟ ೬೮-೭೬

ಛಂದೋಂಬುಧಿಯ ವರ್ಣವೃತ್ತಗಳು ಮತ್ತು ಕೆಲವು ವೃತ್ತನಾಮಪಾಠಗಳು, 'ಕನ್ನಡ ಛಂದಸ್ಸು' ೧೯೭೦, ಪು. ೯೧-೧೦೫, 'ಶಬ್ದಾರ್ಥವಿಹಾರ', ೧೯೭೮, ಪು. ೬೮-೭೬, ಶಾಸ್ತ್ರೀಯ-೨, ಪು. ೧೦೮-೧೧೯

ಜಯಕೀರ್ತಿ, ಕವಿವಿ., ೧೯೭೮, ಪು. ೬೭೮

ನಾಗವರ್ಮ ಕೃತ 'ಛಂದೋಂಬುಧಿ', ಕಲಿಸಂ ಕಸಾಚ ಸಂ. ३, ೧೯೭೬, ಪು. ೫೪೧-೪೮; ಕವಿವಿ., ೧೯೭೮, ಪು. ೮३೧. ಶಾಸ್ತ್ರೀಯ-೨, ಪು. ೧೦೧-೧೦೭

ನಾಗವರ್ಮ ಕೃತ 'ಛಂದೋವಿಚಿತಿ', ಕಲಿಸಂ ಕಸಾಚ, ಸಂ. ३, ೧೯೭೬, ಪು. ೭೨೫-೩೯, ಶಾಸ್ತ್ರೀಯ-೨, ಪು. ೧३೬-೧३೮

ನಾಗವರ್ಮನ 'ಛಂದೋಂಬುಧಿ', ಉತ್ಥಾನ, ಜೂನ್ ೧೯೯೫, ಪು. ೯೯-೧೦೩

ಪಂಪಕವಿ ಮತ್ತು ಕನ್ನಡ ಛಂದಸ್ಸು, 'ಕನ್ನಡ ಛಂದೋವಿಹಾರ', ೧೯೮೯, ಪು. ೮೪ -೧೦೮; **'ಹಳೆಯ ಹೊನ್ನು'**, ೧೯೯೧, ಪು. ೮೫-೧೧೬, ಶಾಸ್ತ್ರೀಯ-೨, ಪು ೨೧೭ -೨೪೧

ಪು.ತಿ.ನ. ಅವರ ಕವಿತೆಗಳ ಛಂದಸ್ಸು, 'ಯದುಗಿರಿ', (ಪು.ತಿ.ನರಸಿಂಹಾಚಾರ್ಯರ ಅಭಿನಂದನ ಗ್ರಂಥ), ಮೈಸೂರು, ೧೯೮೧, ಪು. ೨೫೩-೬೭; 'ಕನ್ನಡ ಛಂದೋವಿಹಾರ', ೧೯೮೯, ಪು. ೧೫೫-೬೮ ಶಾಸ್ತ್ರೀಯ-೨, ಪು ೪೭೮-೪೯೦

ಮಾತ್ರಾಛಂದಸ್ಸುಗಳು (ಅನು), ಕಸಾಪ., ೪೪-೧, ೨, ೩, ೧೯೫೯, ೧೯೬೦, ಪು. ೧-೮, ೨೧-೩೬, ೧೩-೨೮; **'ಸಾಹಿತ್ಯ ಮಂಥನ'** ೧೯೭೨, ಪು. ೨೬೮-೩೨೬. ಶಾಸ್ತ್ರೀಯ -೨, ಪು. ೯೦-೧೦೦

ಮೊದಲ ಸಹಸ್ರಮಾನದ ಕನ್ನಡ ಶಾಸನಗಳ ಛಂದಸ್ಸಿನ ಸ್ವರೂಪ, ಮೊದಲ ಸಹಸ್ರಮಾನದ ಕನ್ನಡ ಶಾಸನಗಳು, ಸಂ. ಷ.ಶೆಟ್ಟರ್, ೨೦೦೮

ರಗಳೆ (ಸಾಹಿತ್ಯರೂಪವಾಗಿ), ಕಅಸಂ ಕಸಾಚ., ಸಂ. ೪, ಭಾಗ-೧, ೧೯೭೭, ಪು. ೩೩೩-೪೨, ಶಾಸ್ತ್ರೀಯ-೨ ಪು. ೩೨೫-೩೩೪

ರಗಳೆ (ಸಾಹಿತ್ಯರೂಪವಾಗಿ), ಕಅಸಂ ಕಸಾಚ, ಸಂ. ೫, ಭಾಗ ೧, ೧೯೮೧, ಪು. ೩೪೩-೪೬, ಶಾಸ್ತ್ರೀಯ-೨ ಪು. ೩೪೨-೪೪

ರಗಳೆ: ಉಗಮ, ಲಕ್ಷಣ, ಇತಿಹಾಸ, ಕಅಸಂ ಕಛಂಚ. ಸಂ. ೧, ೧೯೮೦, ಪು. ೫೫೩-೬೨೧

ವರ್ಣಗಣ -ಮಾತ್ರಾಗಣ -ಅಂಶಗಣ, 'ಕನ್ನಡ ಛಂದಸ್ಸು', ೧೯೭೦, ೧೨೭-೩೯, ಶಾಸ್ತ್ರೀಯ-೨, ಪು ೩೬-೪೬

ವರ್ಣಸಮವೃತ್ತಗಳ ನಾಮಾಂಕನದ ಔಚಿತ್ಯವಿಚಾರ, ಪ್ರಕ., ೭೨-೧, ೧೯೯೦, ಪು. ೧-೧೫; 'ಕನ್ನಡ ಛಂದಸ್ಸು' (ತೃ.ಮು. ೧೯೯೫) ಪು. ೯೪-೧೦೮, ಶಾಸ್ತ್ರೀಯ-೨, ಪು ೧೨-೨೪

ವಿಷಮವೃತ್ತ, ಮಾತ್ರಾ-ವರ್ಣಮಿಶ್ರವೃತ್ತ; ಸ್ವರೂಪ, ಲಕ್ಷಣ, ಪ್ರಭೇದಗಳು, ಕಅಸಂ ಕಛಂಚ., ಸಂ. ೧, ೧೯೮೦, ಪು. ೪೫೦-೮೧

ಶಾಸನಗಳ ಛಂದಸ್ಸು, ಎಪಿಗ್ರಾಫಿಯ ಕರ್ನಾಟಕ, ಸಂ. ೨, ೧೯೭೩, ಪು. lxviii - lxx (೧); ಸಂ. ೩, ೧೯೭೪ (೨) ಪು. ೯೨-೯೪; ಸಂ. ೪, ೧೯೭೫, ಪು. ciii -cv (೩); ಸಂ. ೫, ೧೯೭೬, ಪು. lxxvii -lxxx (೪); ಸಂ. ೬, ೧೯೭೭, ಪು. lxii -lxiv (೫); ಸಂ. ೭, ೧೯೭೯, ಪು lxxx -lxxxiii (೬); ಸಂ. ೮, ೧೯೮೪, ಪು. lxxi -lxxv (೭); ಸಂ. ೯, ೧೯೯೦, ಪು. lxxxiii-ixxxv (೮)

ಶಾಸನಸಾಹಿತ್ಯ: ಛಂದಸ್ಸು, ಕಲಿಸಂ ಕಸಾಚ., ಸಂ. ೨, ೧೯೭೫, ಪು. ೪೬೭-೭೪

ಶಾಸನಸಾಹಿತ್ಯ: ಛಂದಸ್ಸು, ಕಲಿಸಂ ಕಸಾಚ, ಸಂ. ೩, ೧೯೭೬, ಪು. ೨೮೪-೯೫

ಶಾಸನಸಾಹಿತ್ಯ: ಛಂದಸ್ಸು ಕಲಿಸಂ ಕಸಾಚ, ಸಂ. ೪, ಭಾಗ ೧, ೧೯೭೭, ಪು. ೨೯೦-೯೬, ಶಾಸ್ತ್ರೀಯ-೨, ಪು. ೨೦೫-೨೧೧

ಶಾಸನಸಾಹಿತ್ಯ: ಛಂದಸ್ಸು, ಕಲಿಸಂ ಕಸಾಚ., ಸಂ. ೫, ಭಾಗ ೧, ೧೯೮೧, ಪು. ೩೦೪-೯, ಶಾಸ್ತ್ರೀಯ-೨, ಪು. ೨೧೨-೧೬

ಶ್ರೀಪರಮೇಶ್ವರಭಟ್ಟರ ಕವಿತೆಗಳ ಛಂದಃಪ್ರಯೋಗಗಳು, 'ಕನ್ನಡ ಛಂದೋವಿಹಾರ', ೧೯೮೯, ಪು. ೧೮೦-೯೯, ಶಾಸ್ತ್ರೀಯ-೨, ಪು. ೫೦೧-೫೧೮

'ಶ್ರೀ ರಾಮಾಯಣದರ್ಶನಂ' 'ಛಂದಸ್ಸು', 'ಕುವೆಂಪು ಸಾಹಿತ್ಯಲೋಕ', ಸಂ.೧, ಕುವೆಂಪು ಅಧ್ಯಯನ ಕೇಂದ್ರ, ಬೆಂಗಳೂರು, ೧೯೮೩, ಪು. ೩೨೬-೪೦; 'ಕನ್ನಡ ಛಂದೋವಿಹಾರ', ೧೯೮೯, ಪು ೧೮೧-೫೪; 'ಹಳೆಯ ಹೊನ್ನು' ೧೯೯೧, ಪು. ೧೧೭-೧೩೩, ಶಾಸ್ತ್ರೀಯ-೨, ಪು. ೪೬೫-೪೭೭

ಷಟ್ಪದಿ: ಲಕ್ಷಣ, ಪ್ರಭೇದಗಳು, ಇತಿಹಾಸ, ಕಲಿಸಂ ಕಛಂಚ, ಸಂ. ೨, ೧೯೮೦, ಪು. ೧೪೩-೨೨೯, ಶಾಸ್ತ್ರೀಯ-೨, ಪು. ೩೫೯-೪೩೫

ಸಂಸ್ಕೃತ ಛಂದಸ್ಸುಗಳು: ಅವುಗಳ ವಿಕಾಸ ಮತ್ತು ವಿಭಜನೆಯ ತತ್ತ್ವಗಳು (ಅನು), ಕನ್ನಡ ಛಂದಸ್ಸು' (ತೃ.ಮು. ೧೯೯೫), ಪು. ೧೮೧-೯೨, ಶಾಸ್ತ್ರೀಯ-೨, ಪು. ೧-೧೧.

ಸಂಸ್ಕೃತದ ಎರಡು ಉತ್ಪಲಮಾಲಾವೃತ್ತಗಳು, ಪ್ರಕ., ೫೭-೪, ೧೯೭೬, ಪು. ೭೫; 'ಕನ್ನಡ ಛಂದೋವಿಹಾರ', ೧೯೮೯, ಪು. ೩೦-೩೩, ಶಾಸ್ತ್ರೀಯ-೨, ಪು. ೨೫-೩೩

ಎರಡು ಛಂದೋವೈಚಿತ್ರ್ಯಗಳು-ಭಾಷಾಸಂಗಮ (ಸಂಗಮೇಶ ಸವದತ್ತಿಮಠ ಅಭಿನಂದನ ಗ್ರಂಥ)-೨೦೦೩

ಛಂದಶ್ಶಾಸ್ತ್ರ-ವಜ್ರಕುಸುಮ (ಬಿ.ಟಿ.ಸಾಸನೂರ್ ಅಭಿನಂದನ ಗ್ರಂಥ) -೨೦೦೩

ಸಂಸ್ಕೃತದಲ್ಲಿ ಉತ್ಪಲಮಾಲೆ, ಮತ್ತೇಭವಿಕ್ರೀಡಿತ ಮತ್ತು ಮಹಾಸ್ರಗ್ಧರೆ, 'ಕನ್ನಡ ಛಂದೋವಿಹಾರ', ೧೯೮೯, ಪು. ೩೧-೩೯, ಶಾಸ್ತ್ರೀಯ-೨, ಪು. ೨೫-೩೩

ಸಂಸ್ಕೃತದಲ್ಲಿ ಮಹಾಸ್ರಗ್ಧರೆಯ ಲಕ್ಷಣ ಮತ್ತು ಲಕ್ಷ್ಯಗಳು, ಕಸಾಪ., ೬೮-೨, ೧೯೮೩, ಪು. ೯೨-೯೫; 'ಕನ್ನಡ ಛಂದೋವಿಹಾರ', ೧೯೮೯, ಪು. ೩೬-೩೯, ಶಾಸ್ತ್ರೀಯ -೨, ಪು. ೩೪-೩೫

ಸಂಸ್ಕೃತ ಶಾಸನಗಳಲ್ಲಿ ಮಹಾಸ್ರಗ್ಧರಾವೃತ್ತ ಇತ್ಯಾದಿ, ಪ್ರಕ., ೭೨-೩, ೪, ೧೯೯೧, ಪು. ೧೬೭-೭೯; 'ಶ್ರೀಮುಖ', ೧೯೯೫, ಪು. ೫೦೧-೦೩, ಶಾಸ್ತ್ರೀಯ-೨, ಪು. ೩೩

ಸಾಂಗತ್ಯ(ಸಾಹಿತ್ಯರೂಪವಾಗಿ), ಕಲಿಸಂ ಕಸಾಚ., ಸಂ. ೫, ೧೯೮೧, ಪು. ೩೭೧-೮೪, ಶಾಸ್ತ್ರೀಯ-೨, ಪು. ೩೪೬-೩೫೮

ಸಾಂಗತ್ಯ ಛಂದಸ್ಸಿನ ಸ್ವರೂಪ, ಜ್ಞಾತಿಛಂದಸ್ಸುಗಳು: 'ರತ್ನಾಕರವರ್ಣಿ', ಕವಿಕಾವ್ಯ ಪರಂಪರೆ-೧೯, ಐಬಿಎಚ್ ಪ್ರಕಾಶನ, ಬೆಂಗಳೂರು-೯, ೧೯೮೪, ಪು. ೧೨೩-೬೯

'ಸೂಕ್ತಿಸುಧಾರ್ಣವ'ದ ಛಂದಸ್ಸಿನ ಕೆಲವಂಶಗಳು, ಕನು., ೨೭-೧೨, ೧೯೬೪; 'ಸಾಹಿತ್ಯ ಮಂಥನ', ೧೯೭೨, ಪು. ೧೯೩-೯೮, ಶಾಸ್ತ್ರೀಯ-೨, ಪು. ೨೮೬-೨೮೯

ಸೊಬಗಿನ ಸೋನೆ ಮಟ್ಟು(ಸಾಹಿತ್ಯರೂಪವಾಗಿ), ಕಅಸಂ ಕಸಾಚ., ಸಂ. ೫, ೧೯೮೧, ಪು. ೩೬೯-೭೧, ಶಾಸ್ತ್ರೀಯ-೨, ಪು. ೩೪೪-೩೪೬

ಅಲಂಕಾರ

ಅಷ್ಟಾದಶವರ್ಣನೆಗಳು, ಕವಿಕೋ, ಸಂ. ೧, ೧೯೬೯, ಪು. ೫೮೮-೮೯

ಕವಿಸಮಯ, ಕನು., ೨೦-೭, ಜುಲೈ ೧೯೫೭; 'ಸಾಹಿತ್ಯಮಂಥನ', ೧೯೭೨, ಪು. ೧೮೦-೮೫

ಚಂಪು (ಸಾಹಿತ್ಯರೂಪವಾಗಿ), ಕಅಸಂ ಕಸಾಚ., ಸಂ. ೩, ೧೯೭೬, ಪು. ೩೦೦ -೩೦, ಶಾಸ್ತ್ರೀಯ-೨ ಪುಟ. ೨೯೦-೩೧೯

ಚಂಪು (ಸಾಹಿತ್ಯರೂಪವಾಗಿ), ಕಅಸಂ. ಕಸಾಚ., ಸಂ. ೪, ಭಾಗ ೧, ೧೯೭೭, ಪು. ೩೦೨-೦೮, ಶಾಸ್ತ್ರೀಯ-೨ ಪು. ೩೨೦-೩೨೫

ಚಂಪು (ಸಾಹಿತ್ಯರೂಪವಾಗಿ), ಕಅಸಂ ಕಸಾಚ., ಸಂ. ೫, ಭಾಗ ೧, ೧೯೮೧, ಪು. ೩೧೧-೧೮, ಶಾಸ್ತ್ರೀಯ-೨ ಪು. ೩೩೫ -೩೪೧

ಚಂಪು, ಕವಿಕೋ. ಸಂ. ೭, ೧೯೭೪, ಪು. ೧೧೯-೨೦

ಮಹಾಕಾವ್ಯ ಲಕ್ಷಣ, ಪ್ರಕ., ೪೮ -೨, ೩, ೧೯೬೬, ಪು. ೨೭-೫೯, ಪು. ೨-೨೩, ತ.ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು-೧೯೬೯; ಡಿ.ವಿ.ಕೆ. ಮೂರ್ತಿ, ಮೈಸೂರು -೨೦೦೧ (ದ್ವಿ.ಮು.)

ಕನ್ನಡ ಚಿತ್ರಕಾವ್ಯ, ಕನ್ನಡ ಅಧ್ಯಯನಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-೬, ೧೯೮೭, ಪು. xii + ೫೪೦

ನಿಘಂಟು

ಕನ್ನಡ ನಿಘಂಟು ರಚನೆಯಲ್ಲಿ ಶಬ್ದಾರ್ಥವಿಚಾರದ ಕೆಲವಂಶಗಳು, ಲೋಚನ, ೫ -೨, ೧೯೮೭, ಪು. ೧ -೮; 'ಹಳೆಯ ಹೊನ್ನು', ೧೯೯೧, ಪು. ೧೬೨ -೭೦, ಶಾಸ್ತ್ರೀಯ -೧, ಪು. ೪೮೬-೪೯೨

ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು: ಆಶಯಭಾಷಣ, ರೆ.ಎಫ್. ಕಿಟ್ಟೆಲ್ ನಿಘಂಟು ಶತಮಾನೋತ್ಸವ ವಿಚಾರಸಂಕಿರಣ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೩ -೧೧ -೧೯೯೪, ಎಚ್.ಎಸ್.ಕೃಷ್ಣಸ್ವಾಮಿ ಅಯ್ಯಂಗಾರ್ ಅಭಿನಂದನ ಗ್ರಂಥ, ಸಮದರ್ಶಿ, ಪ್ರತಿಭಾ ಸಂಸತ್ ಕುವೆಂಪುನಗರ, ಮೈಸೂರು, ಪು. ೯೯-೧೨೪, ಶಾಸ್ತ್ರೀಯ -೧, ಪು. ೫೦೦-೫೨೪.

ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು ಯೋಜನೆ, ಗ್ರಂಥಲೋಕ, ಏಪ್ರಿಲ್ ೧೯೮೫, ಪು. ೧೨೧-೧೨೩

ಕರ್ನಾಟಕ ನಿಘಂಟು, ಕಲಿಸಂ ಕಸಾಚ., ಸಂ. ೫, ಭಾಗ ೧, ೧೯೮೧, ಪು. ೫೬೧-೬೩, ಶಾಸ್ತ್ರೀಯ -೧ ಪು. ೪೫೫ -೪೫೭

ಕರ್ನಾಟಕ ಶಬ್ದಸಾರ, ಕಲಿಸಂ ಕಸಾಚ, ಸಂ. ೫, ಭಾಗ ೧, ೧೯೮೧, ಪು. ೫೬೩ -೬೫, ಶಾಸ್ತ್ರೀಯ -೧ ಪು ೪೫೮-೪೬೦

ಗಮಕ: ಒಂದು ಶಬ್ದಾರ್ಥ ವಿಚಾರ, 'ಗಮಕರತ್ನ', ಕೆ. ವೆಂಕಟಸುಬ್ಬಯ್ಯ ಅಭಿನಂದನ ಸಮಿತಿ, ಮೈಸೂರು, ೧೯೮೪, ಪು. ೧೧೦-೧೫, ಶಾಸ್ತ್ರೀಯ-೧, ಪು. ೩೯೫ -೩೯೯

ಪ್ರಾಚೀನ ಕನ್ನಡ ಲಕ್ಷಣ ಗ್ರಂಥಗಳಲ್ಲಿ ಕನ್ನಡ ಪಾರಿಭಾಷಿಕ ಶಬ್ದಗಳು, ಪ್ರ.ಕ. ೬೯-೪, ೧೯೮೮, ಪು. ೧೦೧-೦೮, ಶಾಸ್ತ್ರೀಯ-೧, ಪು. ೨೯೪ -೩೦೦; 'ಹಳೆಯ ಹೊನ್ನು', ೧೯೯೧, ಪು. ೧೭೧-೭೯

ಮಂಗರಾಜ ಕೃತ 'ಅಭಿನವಾಭಿಧಾನಂ', ಕಲಿಸಂ ಕಸಾಚ., ಸಂ. ೫, ಭಾಗ ೧, ೧೯೯೧, ಪು. ೫೨೭- ೩೫, ಶಾಸ್ತ್ರೀಯ -೧ ಪು. ೪೬೧ -೪೬೮

ಸಂಸ್ಕೃತ ಮತ್ತು ಕನ್ನಡ ನಿಘಂಟು ಸಾಹಿತ್ಯ, ಪ್ರಕ., ೭೦ -೧, ೧೯೮೮, ಪು. ೧-೧೯, ಶಾಸ್ತ್ರೀಯ -೧, ಪುಟ ೪೬೯ -೪೮೫

ಕನ್ನಡ ರತ್ನಕೋಶ (ಸಹಸಂಪಾದಕ) ೧೯೭೭, ಪು. xvi + ೩೪೯, ಕನ್ನಡ ಸಾಹಿತ್ಯ ಪರಿಷತ್ತು, ೧೯೯೪ ದ್ವಿ.ಮು., ಪು. xix + ೩೪೯, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು-೧

ಗಜಶಾಸ್ತ್ರ ಶಬ್ದಕೋಶ, ಕಾವ್ಯಾಲಯ, ಮೈಸೂರು-೧೪, ೧೯೯೪, ಪುಟ xvi +೧೪೮

ಶ್ರೀವತ್ಸ ನಿಘಂಟು, ೧೯೭೧, ಪುಟ xv + ೫೧೨, ಶಾರದಾ ಮಂದಿರ, ಮೈಸೂರು-೪, ೧೯೯೯. ಪು. xxii + ೪೪೭ (ದ್ವಿತೀಯ ಪರಿಷ್ಕೃತ ಮತ್ತು ತಿದ್ದಿ ಬೆಳೆಸಿದ ಮುದ್ರಣ) ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು-೧೮

ಗ್ರಂಥಸಂಪಾದನೆ

'ಅಜಿತಪುರಾಣ'ದ ಒಂದು ಪದ್ಯಪಾಠವಿಚಾರ, ಕರ್ನಾಟಕ ಲೋಚನ, ೧-೨, ಡಿ. ೧೯೮೮, ಪು. ೬೦-೨೨, ಶಾಸ್ತ್ರೀಯ -೧ ಪು. ೫೬ -೫೮

'ಅರ್ಧನೇಮಿಪುರಾಣ'ದ ಕೆಲವು ಪಾಠಗಳ ವಿಚಾರ, 'ಶಬ್ದಾರ್ಥವಿಹಾರ', ಪು. ೧೯೭೯, ಪು. ೧೦೯-೨೭, ಶಾಸ್ತ್ರೀಯ-೧, ಪು. ೧೧೫-೧೩೧

'ಅರ್ಧನೇಮಿಪುರಾಣ'ದ ತ್ರಿಪದಿಯ (೩-೩೮ /೩೯) ಪಾಠ ಮತ್ತು ಅರ್ಥ, ಲೋಚನ, ೫ -೧, ಜೂನ್ ೧೯೮೭, ಪು. ೬೪ -೬೭; 'ಹಳೆಯ ಹೊನ್ನು', ೧೯೯೧, ಪು. ೪೯ -೫೩, ಶಾಸ್ತ್ರೀಯ -೧, ಪು. ೧೩೨ -೧೩೪

'ಆದಿಪುರಾಣ'ದ ಒಂದು ಕಂದಪದ್ಯ (೯-೧೦೨) ಪ್ರಕ., ೬೮-೨, ೧೯೮೬, ಪು. ೨೧೯-೨೨; 'ಶ್ರೀಮುಖ', ೧೯೯೭, ಪು. ೪೩೩-೩೬, ಶಾಸ್ತ್ರೀಯ-೧, ಪು. ೨೫-೨೭

'ಆದಿಪುರಾಣ'ದ ತ್ರಿಪದಿಯೊಂದರ (೬-೧೩) ಪಾಠವಿಚಾರ, ಲೋಚನ, ೧-೧, ಜೂನ್ ೧೯೮೩, ಪು. ೧೦-೧೭; 'ಶ್ರೀಮುಖ', ೧೯೯೭, ಪು. ೪೨೫-೩೨, ಶಾಸ್ತ್ರೀಯ-೧ ಪು. ೧೭-೨೪

ಕನ್ನಡ ಲಕ್ಷಣಗ್ರಂಥಗಳ ಸಂಪಾದನೆ, ಕಸಾಪ., ೬೮-೧, ೧೯೮೩, ಪು. ೧-೪೨; 'ಹಸ್ತಪ್ರತಿ ಶಾಸ್ತ್ರ', ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ೧೯೮೩, ಪು. ೧೦೪-೫೩, ಶಾಸ್ತ್ರೀಯ-೧ ಪು. ೧೭೬-೨೧೪

ಕರ್ಣಪಾರ್ಯನ ನೇಮಿನಾಥ ಪುರಾಣದ ಕೆಲವು ಅಂಕಿತನಾಮ ಪಾಠಗಳು, 'ಸವಿನೆನಪು' ಪ್ರೊ.ಟಿ.ಎಸ್.ವೆಂಕಣ್ಣಯ್ಯನವರ ಸ್ಮಾರಕ ಗ್ರಂಥ, ತ.ವೆಂ.ಸ್ಮಾರಕ ಗ್ರಂಥಮಾಲೆ, ಕೃಷ್ಣಮೂರ್ತಿಪುರಂ, ಮೈಸೂರು -೪, ೧೯೭೦, ಪು. ೩೮೨ -೯೦ ಸಾಹಿತ್ಯ ಮಂಥನ, ೧೯೭೨. ಪು. ೧೯೯-೨೧೩, ಶಬ್ದಾರ್ಥವಿಹಾರ, ೧೯೭೬, ಪು. ೯೮-೧೦೮, ಶಾಸ್ತ್ರೀಯ-೧, ಪು. ೧೦೫ -೧೧೪

'ಕರ್ಣಾಟಕ ಪಂಚತಂತ್ರ'ದಲ್ಲಿ 'ಖಲ್ವಾಯಿತ', ಪ್ರಕ, ೬೯-೪, ೧೯೮೮, ಪು. ೧೩೨ -೫೯; 'ಹಳೆಯ ಹೊನ್ನು', ೧೯೯೧, ಪು. ೪೦-೪೮, ಶಾಸ್ತ್ರೀಯ -೧, ಪು. ೮೩ -೮೯

'ಕಾವ್ಯಾವಲೋಕನ' -'ಶಬ್ದಮಣಿದರ್ಪಣ'ಗಳಲ್ಲಿಯ ಒಂದು ಕ್ಲಿಷ್ಟ ಲಕ್ಷ್ಯ ಪದ್ಯದ ಅರ್ಥ, ಪ್ರಕ., ೭೧ -೩, ೪, ೧೯೮೯-೯೦ ಪು. ೧೬೭ -೭೪; 'ಶ್ರೀಮುಖ', ೧೯೯೭, ಪು. ೪೫೬ -೬೩, ಶಾಸ್ತ್ರೀಯ -೧, ಪು. ೯೦ -೯೬

ಕುಂದಕುಂದ/ಕೊಂಡಕುಂದ: ಅರ್ಥ, ನಿಷ್ಪತ್ತಿ, 'ಆರೋಹಣ', ವೀರೇಂದ್ರ ಹೆಗ್ಗಡೆಯವರ ಪಟ್ಟಾಭಿಷೇಕ ದಶಮಾನೋತ್ಸವ ಅಭಿನಂದನ ಗ್ರಂಥ, ಧರ್ಮಸ್ಥಳ, ೧೯೭೬, ಪು. ೬೫ -೬೮; 'ಶಬ್ದಾರ್ಥವಿಹಾರ', ೧೯೭೬, ಪು. ೩೩ -೩೯, ಶಾಸ್ತ್ರೀಯ -೧, ಪು. ೪ -೯

ಕುಮಾರವ್ಯಾಸ ಭಾರತ: ಸವಿಮರ್ಶ ಪರಿಷ್ಕರಣದ ಅಗತ್ಯ, ರೂಪರೇಖೆಗಳು, 'ಶ್ರೀಮುಖ', ೧೯೯೭, ಪು. ೪೭೫ -೮೫, ಶಾಸ್ತ್ರೀಯ -೧, ಪು. ೧೪೫ -೧೫೪

ಕುವಲಯಾಮಲ ಖಡ್ಗನೀಲಃ : ಒಂದು ಟಿಪ್ಪಣಿ, ಸುಬೋಧ, ೧೯೫೮; 'ಸಾಹಿತ್ಯ ಮಂಥನ' ೧೯೭೨, ಪು. ೧೮೯-೯೨; 'ಶಬ್ದಾರ್ಥವಿಹಾರ', ೧೯೭೬, ಪು. ೪೦-೪೨, ಶಾಸ್ತ್ರೀಯ -೧, ಪು. ೧-೩

ಗದಾಯುದ್ಧದ ಮೂರು ಪದ್ಯಗಳ ಪಾಠ ಮತ್ತು ಅರ್ಥ, 'ಬೆಳ್ಳಿಶಾರದೆ', ಕವಿಕಾವ್ಯ ಮಾಲೆ, ಶಾರದಾ ಮಂದಿರ, ಮೈಸೂರು, ೧೯೭೩, ಪು. ೩೧೦-೩೦, 'ಶಬ್ದಾರ್ಥವಿಹಾರ', ೧೯೭೬, ಪು. ೪೯-೫೪ ಶಾಸ್ತ್ರೀಯ -೧, ಪು ೫೯ -೭೭

ಚಕ್ಕಣಂ, ಪ್ರಕ., ೪೩-೩, ೧೯೬೧, ಪು. ೧೫೧-೫೬; 'ಸಾಹಿತ್ಯಮಂಥನ', ೧೯೭೨

ಪು. ೧೬೪ -೭೧; 'ಶಬ್ದಾರ್ಥವಿಹಾರ', ೧೯೭೯, ಪು. ೪೯-೫೪, ಶಾಸ್ತ್ರೀಯ-೧, ಪು. ೩೪-೪೬

'ತೆ' ಎಂಬ ಅವ್ಯಯದ ವಿಚಾರ, 'ನಂದನವನ', ಶ್ರೀ ರಾಘವೇಂದ್ರ ಸ್ವಾಮಿಗಳ ಅಭಿನಂದನ ಗ್ರಂಥ, ಮಲ್ಲಾಡಿಹಳ್ಳಿ, ೧೯೭೮, ಪು. ೧೬೨-೬೫; 'ಶಬ್ದಾರ್ಥವಿಹಾರ', ೧೯೭೯, ಪು. ೬೩-೬೭, ಶಾಸ್ತ್ರೀಯ-೧ ಪು. ೪೭-೫೨

'ನಂಜಿನೆರಳು' ಎಂದರೇನು? - ಸಂ. ಎಚ್.ಟಿ.ಮರುಳುಸಿದ್ಧಪ್ಪ, ಸಿದ್ಧರಾಮ ಶಿವಯೋಗಿ, -೨೦೦೭

ನಾಮಾವಳಿಯಲ್ಲಿ 'ಗಂಧವಾರಣ' ಶಬ್ದ: ಒಂದು ಟಿಪ್ಪಣಿ, ಮಾನಕ, ೧೨ -೪, ೧೯೮೨, ಪು. ೧-೯; 'ಶ್ರವಣಬೆಳ್ಗೊಳ: ಒಂದು ಸಮೀಕ್ಷೆ', ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೮೩. ಪು. ೧೪೭ -೫೫, ಶ್ರೀಮುಖ ೧೯೯೭, ಪು. ೪೬೭- ೭೪, ಶಾಸ್ತ್ರೀಯ -೧, ಪು. ೯೭ -೧೦೪

'ಪಂಪಭಾರತ'ದ ಕೆಲವು ಪದಪಾಠಗಳು, ಪ್ರಕ., ೫೦ ೨, ೧೯೬೮, ಪು. ೯೯-೧೦೮, 'ಸಾಹಿತ್ಯ ಮಂಥನ', ೧೯೭೨, ಪು. ೧೫೩ -೬೪ ಶಬ್ದಾರ್ಥವಿಹಾರ, ೧೯೭೯, ಪು. ೪೯ -೬೨, ಶಾಸ್ತ್ರೀಯ -೧, ಪು. ೩೪ -೪೬

ಪರಿಮಳ ದ್ರವ್ಯದ ನಡುವೆ ವೀಣೆ ಕ.ಸಾ.ಪ. ೭೫ -೨, ೧೯೯೭, ಶಾಸ್ತ್ರೀಯ -೧ ಪು. ೧೩೮ -೧೪೧

'ಬಳಮರ್ದು', 'ಶ್ರೀಮುಖ', ೧೯೯೭, ಪು. ೪೪೦-೪೬ ಶಾಸ್ತ್ರೀಯ-೧, ಪು. ೨೮ -೩೩

ಭಗವತಿಯೇಱು ಮತ್ತು ದೇವೀಸಂಗರಂ, ಪ್ರಕ., ೬೫ -೧, ೨, ೩, ೧೯೮೫, ಪು. ೨೫೭ -೫೯; 'ಶ್ರೀಮುಖ', ೧೯೯೭, ಪು. ೪೩೬ -೩೯, ಶಾಸ್ತ್ರೀಯ ೧, ಪು. ೫೩ -೫೫

'ಮದನತಿಲಕ'ದ ಷಟ್ಪದಿಯ ಪದ್ಯಪಾಠ ಮತ್ತು ಸದೃಶಪದ್ಯಗಳು, ಪ್ರಕ. ೬೭-೩, ೧೯೮೫, ಪು. ೧೬೯ -೭೫, ಶ್ರೀಮುಖ, ೧೯೯೭, ಪು. ೪೫೦-೫೫, ಶಾಸ್ತ್ರೀಯ -೧, ಪು. ೭೮ -೮೨

ರಾಗಿ: ಒಂದು ಕಾವ್ಯಪ್ರಯೋಗ, ಪ್ರಕ. ೬೭-೧, ೧೯೮೫, ಪು. ೧೭೩-೭೬; 'ಶ್ರೀಮುಖ', ೧೯೯೭, ಪ್ರ. ೪೬೪-೬೬, ಶಾಸ್ತ್ರೀಯ-೧, ಪು. ೧೪೨-೧೪೪

'ವಡ್ಡಾರಾಧನೆ'ಯಲ್ಲಿಯ ಒಂದು ಪಾಠವಿಚಾರ, ಪ್ರಕ., ೫೩-೨, ೧೯೭೧, ಪು. ೧೫೫ -೬೦; 'ಶಬ್ದಾರ್ಥ ವಿಹಾರ', ೧೯೭೯, ಪು. ೪೩-೪೮, ಶಾಸ್ತ್ರೀಯ-೧, ಪು. ೧೨-೧೬

'ವೇದಪುರುಷನ ಸುತನ ಸುತನ..' ಪದ್ಯದ ಪಾಠ ಮತ್ತು ಅರ್ಥ, 'ಗಮಕಮಂದಾರ' ಕರ್ನಾಟಕ ಗಮಕಕಲಾ ಪರಿಷತ್ತು, ಬೆಂಗಳೂರು, ೧೯೮೩, ಪು. ೭೩-೭೯; 'ಶ್ರೀಮುಖ', ೧೯೯೭, ಪು. ೪೮೬-೯೪, ಶಾಸ್ತ್ರೀಯ-೧ ಪು. ೧೭೦-೧೭೮

'ಹಳೆಯ ಕಾವ್ಯಗಳಿಗೆ ಕೈಗನ್ನಡಿಗಳು'; 'ಸ್ನೇಹಾಂಜಲಿ', ಎಚ್.ಎಂ.ಶಂಕರ ನಾರಾಯಣರಾವ್ ಅಭಿನಂದನ ಗ್ರಂಥ, ೧೯೭೩, ಪು. ೩೦-೩೭ ಶಬ್ದಾರ್ಥವಿಹಾರ, ೧೯೭೯, ಪು. ೧೨೮ -೩೪, ಶಾಸ್ತ್ರೀಯ -೧ ಪು. ೨೬೪ -೨೭೨

ಶಬ್ದಾರ್ಥ ವಿಹಾರ, ಅಪರ್ಣ ಪ್ರಕಾಶನ, ಮೈಸೂರು-೯, ಪ್ರ.ಮು. ೧೯೭೯, ಪು. viii+೧೫೬

ಗ್ರಂಥಸಂಪಾದನ ಪರಿಭಾಷಾ ಕೋಶ, ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಪ್ರ.ಮು. ೨೦೦೪, ಪು. ४८

ಡಿ.ಎಲ್.ಎನ್. ಕನ್ನಡ ಗ್ರಂಥ ಸಂಪಾದನೆ -ಆಚಾರ್ಯಕೃತಿ, ಶತಮಾನೋತ್ಸವ ಸಂಪುಟ, (ಅಪ್ರಕಟಿತ)

ಡಿ.ಎಲ್.ಎನ್. ಪಂಪಭಾರತ ದೀಪಿಕೆ ಶತಮಾನೋತ್ಸವ ಸಂಪುಟ, (ಅಪ್ರಕಟಿತ)

ಪ್ರಾಚೀನ ಸಾಹಿತ್ಯ : ಕವಿ, ಕೃತಿ

'ಅಜಿತತೀರ್ಥಂಕರ ಪುರಾಣ ತಿಲಕ': ಒಂದು ಐತಿಹಾಸಿಕ ಆಕರ, ಕರ್ನಾಟಕ ಲೋಚನ ೫-೧, ಜೂನ್ ೧೯೯೨, ಪು. ೨೨-೩೨; 'ಶ್ರೀಮುಖ', ೧೯೯೫, ಪು. ೧೭೧-೮೦, ಶಾಸ್ತ್ರೀಯ -೩, ಪು. ೪೮೦-೪೮೮

ಅನುಭವ ಮುಕುರ, ಕನ್ನಡಿಗ, ಸೆಯಿಂಟ್ ಜೋಸೆಫ್ಸ್ ಕಾಲೇಜು, ಬೆಂಗಳೂರು, ೧೯೫೮, ಪು. ೬೭ -೬೮

ಅನುಭವ ಮುಕುರ, ಜೀವನ, ೨೨-೧, ಮೇ ೧೯೬೧, ಪು. ೧೭; 'ಸಾಹಿತ್ಯ ಮಂಥನ', ೧೯೭೨, ಪು. ೧೨೩-೪೦, ಶಾಸ್ತ್ರೀಯ-೨, ಪು. ೨೭೪-೨೮೫

ಅನುಭವ ಮುಕುರ, ಕಅಸಂ ಕಸಾಚ. ಸಂ. ೪, ಭಾಗ-೨, ೧೯೭೭, ಪು. ೧೧೮೦ -೮೫, ಶಾಸ್ತ್ರೀಯ-೩ ಪು. ೫೬೮-೫೭೨

ಕನ್ನಮಯ್ಯ, ಕಅಸಂ ಕಸಾಚ, ಸಂ. ೩, ೧೯೭೬, ಪು. ೬೫೨ -೫೮, ಶಾಸ್ತ್ರೀಯ -೩, ಪು. ೪೭೪ -೪೭೯

ಕರ್ಣಪಾರ್ಯ, ಕವಿಕೋ, ಸಂ. ೪, ೧೯೭೨, ಪು. ೧೮ -೧೯

ಕರ್ಣಪಾರ್ಯ : ಇತಿವೃತ್ತ, ಕಅಸಂ ಕಸಾಚ, ಸಂ. ೪, ಭಾಗ ೧. ೧೯೭೭, ಪು. ४೦೯ -೧೭, ಶಾಸ್ತ್ರೀಯ -೩ ಪು. ೫೦೦ -೫೦೯

ಕರ್ನಾಟಕದ ಸಾಮಾಜಿಕ ಇತಿಹಾಸಕಾರ ದೇವಚಂದ್ರ ಕವಿ, ಹಿಂದೂಪುರ ಎಂ. ನಾರಾಯಣ ರಾವ್ ಜ್ಞಾಪಕೋಪನ್ಯಾಸ, ಗೋಖಲೆ ಸಾರ್ವಜನಿಕ ಸಂಸ್ಥೆ, ಬೆಂಗಳೂರು, ೨೪-೧ -೧೯೯೬; 'ಬರಹ ಬಾಗಿನ', ಡಾ.ಹಂಪನಾ ಗೌರವ ಗ್ರಂಥ, ಸಹನಾ ಪ್ರಕಾಶನ, ಶಿವಮೊಗ್ಗ, ಪು. ೩೩೧ -೩೪೯, ಶಾಸ್ತ್ರೀಯ -೪ ಪು. ೩೨೩ -೩೪೨

ಕಾಳಿದಾಸ ಮಹಾಕವಿಯ ಜೀವಿತ ಸಮಸ್ಯೆಗಳು (ಅನು), ಕನು., ೧೬ -೮, ಆಗಸ್ಟ್ ೧೯೫೩, ಪು. ೨೫೬; 'ಸಾಹಿತ್ಯ ಮಂಥನ', ೧೯೭೨, ಪು. ೩೩೦-೪೫

ಕುಮಾರವಾಲ್ಮೀಕಿಯ ಶ್ರೀರಾಮ, ಸಪ್ತಗಿರಿ, ಜೂನ್ ೧೯೮೧, ಪು. ೭-೮

ಕುಮಾರವ್ಯಾಸ: ಇತಿವೃತ್ತ, ಕಲಿಸಂ ಕಸಾಚ, ಸಂ. ೫, ಭಾಗ ೧, ೧೯೮೧, ಪು. ೫೮೨-೬೩೮, ಶಾಸ್ತ್ರೀಯ-೪ ಪು. ೧೧೮-೧೭೪

ಕುಮಾರವ್ಯಾಸ ಕವಿಕಾವ್ಯಪ್ರಶಂಸೆ, ಕಲಿಸಂ, ಸಂ.೫, ಭಾಗ ೧, ೧೯೮೧, ಪು. ೬೪೮ -೪೯, ಶಾಸ್ತ್ರೀಯ -೪, ಪು. ೧೧೮ -೧೭೪

ಕುಮಾರವ್ಯಾಸ: 'ಕವಿಚರಿತ್ರೆ', ಕಾವ್ಯ ಸಮೀಕ್ಷೆ, ಪರಿಷ್ಕರಣಗಳು, ಕುಮಾರವ್ಯಾಸ ಭಾರತ ಸಂಗ್ರಹ, ಸಂ.ಎಂ.ವಿ.ಸೀತಾರಾಮಯ್ಯ, ಬಿಎಂಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು-೧೯ ೧೯೯೦, ಪು. ೫-೮೨, ಸಾಹಿತ್ಯ ಶೋಧ- ಶಾಸ್ತ್ರೀಯ-೬, ಪು. ೩೪೦-೩೯೪

'ಗದಾಯುದ್ಧ'ದ ಒಂದು ಪದ್ಯ, ಪ್ರಕ, ೪೭-೩, ೧೯೬೫, ಪು. ೧೭೧-೭೭, 'ಸಾಹಿತ್ಯ ಮಂಥನ', ೧೯೭೨, ಪು. ೧೭೧-೭೯ ಶಾಸ್ತ್ರೀಯ-೧, ಪು. ೨೮೦-೨೮೫

ಗುಣನಂದಿ, ಕವಿಕೋ, ಸಂ.೬, ೧೯೭೩, ಪು. ೩೪೯ -೫೦

ಗುಣನಂದಿ, ಕಲಿಸಂ ಕಸಾಚ, ಸಂ. ೩, ೧೯೭೬, ಪು. ೩೫೫-೫೯, ಶಾಸ್ತ್ರೀಯ-೩, ಪು. ೪೧೪

ಚಂದ್ರರಾಜ, ಕವಿಕೋ, ಸಂ. ೨, ೧೯೭೪, ಪು. ೧೧೦-೧೧

ಚಂದ್ರರಾಜ, ಕವಿವಿ, ೧೯೭೯, ಪು. ೫೩೯

ಚಾವುಂಡರಾಯ : ಇತಿವೃತ್ತ, ಕಲಿಸಂ ಕಸಾಚ, ಸಂ. ೩, ೧೯೭೬, ಪು. ೫೦೭-೦೬ ಶಾಸ್ತ್ರೀಯ-೩ ಪು. ೪೪೧-೫೦

ಚಾವುಂಡರಾಯ (೧), ಕವಿವಿ., ೧೯೭೯, ಪು. ೫೬೪ -೬೫

ಚಾವುಂಡರಾಯನ ಕೃತಿಗಳು, ಪ್ರಾಕಸಾ., ೧೯೮೧, ಪು. ೧೫೯-೬೭, ಶಾಸ್ತ್ರೀಯ-೩, ಪು. ೪೫೮ -೪೬೩

'ಚಾವುಂಡರಾಯ ಪುರಾಣ' ಭಾಗವಾದ ಪಾರ್ಶ್ವನಾಥ ಚರಿತೆ, Tirthankara Parsvanatha: A study', University of Mysore, 1977, p. 72-74; ಪ್ರಾಕಸಾ. ೧೯೮೧, ಪು. ೬೧ -೬೩, ಶಾಸ್ತ್ರೀಯ- ೩, ಪು. ೪೬೪ -೪೬೬

'ಛಂದೋವಿಚಿತಿ', 'ಕಾವ್ಯಾವಲೋಕನ', 'ಅಭಿಧಾನ ವಸ್ತುಕೋಶ', 'ಕರ್ಣಾಟಕ ಭಾಷಾ ಭೂಷಣ', ಕಲಿಸಂ ಕಸಾಚ., ಸಂ. ೩, ೧೯೭೬, ಪು. ೭೨೫-೩೯, ಶಾಸ್ತ್ರೀಯ-೧ ಪು. ೩೬೪ -೩೭೮

ಜೈನಪುರಾಣವಾಗಿ 'ಮಲ್ಲಿನಾಥ ಪುರಾಣ' ಪ್ರಕ. ೬೮-೧, ೧೯೮೬, ಪು. ೪೭-೫೩; 'ಶ್ರೀಮುಖ', ೧೯೯೭, ಪು. ೧೮೧-೮೭, ಶಾಸ್ತ್ರೀಯ-೩, ಪು. ೪೮೯-೪೯೪

ಜೈನಭಾರತ: ಕಥೆ ಮತ್ತು ಸ್ವರೂಪ, 'ರಂಗಾಭಿನಂದನ', ವಿದ್ವಾನ್ ಎನ್.ರಂಗನಾಥ ಶರ್ಮಾ ಅಭಿನಂದನಗ್ರಂಥ, ಬೆಂಗಳೂರು, ೧೯೯೪, ಪು. ೧೨೨-೪೯, 'ಶ್ರೀಮುಖ', ೧೯೯೭, ಪು. ೫೫-೮೦, ಶಾಸ್ತ್ರೀಯ-೩, ಪು. ೧೦೬-೨೮

ಜೈನಸಗರೋಪಾಖ್ಯಾನ, ರಾಮರಾಜ್ಯ, ಬೆಂಗಳೂರು, ೧೯೫೩ (?)

ಜೈನ ಸಂಪ್ರದಾಯದ ಒಂದು ರಾಮಾಯಣದ ಕಥೆ

ದೇವಲಾಪುರದ ನಂಜುಂಡಕವಿ, ಬಿ.ಎಂ.ಶ್ರೀ. ಪ್ರತಿಷ್ಠಾನದ ವಿಚಾರ ಸಂಕಿರಣ, ಮೈಸೂರು, ೧೯೯೬- ಸಾಹಿತ್ಯೋಪಾಸಕರು, ಬಿ.ಎಂ.ಶ್ರೀ ಪ್ರತಿಷ್ಠಾನ ೨೦೦೧, ಶಾಸ್ತ್ರೀಯ-೪, ಪು. ೩೪೩-೩೫೦

'ಧರ್ಮನಾಥ ಪುರಾಣ', 'ಗುಮ್ಮಟಸ್ತುತಿ'(ಮಧುರ ಕವಿ), ಕಅಸಂ ಕಸಾಚ., ಸಂ. ೫ ಭಾಗ ೧, ೧೯೮೧, ಪು. ೭೨೫-೪೮, ಶಾಸ್ತ್ರೀಯ-೩, ಪುಟ. ೫೭೭-೬೦೦

ನೇಮಿಚಂದ್ರ: ಇತಿವೃತ್ತ, ಕಅಸಂ ಕಸಾಚ., ಸಂ. ೪, ಭಾಗ ೨, ೧೯೭೭, ಪು. ೯೭೨-೮೦. ಶಾಸ್ತ್ರೀಯ-೩, ಪು. ೫೧೦-೧೭

ನೇಮಿಚಂದ್ರ ಕವಿಯ ಕಾಲದೇಶ ವಿಚಾರ, ಸಾಧನ, ೫-೧, ೧೯ ೬, ಪು. ೬೬-೭೫, ಪ್ರಾಕಸಾ. ೧೯೮೧, ಪು. ೬೪-೭೩

'ನೇಮಿನಾಥ ಪುರಾಣ' (ನೇಮಿಚಂದ್ರಕೃತ), ಕಅಸಂ ಕಸಾಚ, ಸಂ. ೪, ಭಾಗ ೨, ೧೯೭೭, ಪು. ೧೦೦೩-೩೧, ಶಾಸ್ತ್ರೀಯ-೩, ಪು. ೫೧೮ -೫೪೩

ಪಂಪ: ಇತಿವೃತ್ತ, ಕಅಸಂ ಕಸಾಚ., ಸಂ. ೩, ೧೯೭೬, ಪು. ೪೦೦-೨೨ ಶಾಸ್ತ್ರೀಯ -೩ ಪು. ೪೧೮ -೪೪೦

ಪಾಂಡುರಾಜ ನಿರ್ಯಾಣ ಪ್ರಸಂಗ, ರಾಮರಾಜ್ಯ, ೧೯೫೫

ಪ್ರಭುಲಿಂಗಲೀಲೆ, ಹಿಂದೂ ವಿಶ್ವಕೋಶ

ಪ್ರಾಚೀನ ಕನ್ನಡ ಕಾವ್ಯಸಂಕಲನ ಗ್ರಂಥಗಳು, 'ವಿಭಾವ', ಎಂ.ಬಿ.ಕೊಟ್ರಶೆಟ್ಟಿ ಸ್ಮರಣ ಸಂಪುಟ, ಹೊಸಪೇಟೆ, ೧೯೯೩, ಪು. ೧೮೬-೯೯; 'ಶ್ರೀಮುಖ' ೧೯೯೭, ಪು. ೧೪೭-೫೮

ಪ್ರಾಚೀನ ಕಾವ್ಯಸಂಕಲನದಲ್ಲಿ ಜನ್ನನ 'ಅನುಭವ ಮುಕುರ'ದ ಪದ್ಯಗಳು ಶಾಸ್ತ್ರೀಯ -೧ ಪು. ೧೩೫ -೧೩೭

ಪ್ರಾಚೀನ ಸಾಹಿತ್ಯ: ದೈವಸಮನ್ವಯದೃಷ್ಟಿ 'ಅಮರವಾಣಿ', ಎಂ.ಜಿ.ನಂಜುಂಡಾರಾಧ್ಯ ಸಂಸ್ಮರಣ ಸಂಪುಟ, ಬೆಂಗಳೂರು-೧೦, ೧೯೯೪, ಪು. ೩೯೦-೯೮; 'ಶ್ರೀಮುಖ', ೧೯೯೭, ಪು. ೫೨೮-೩೬, ಶಾಸ್ತ್ರೀಯ-೩, ಪು. ೧೫೭-೧೬೪

ಬೊಪ್ಪಣ ಪಂಡಿತನ 'ಗೊಮ್ಮಟಜಿನೇಂದ್ರಗುಣಸ್ತವ', ಶ್ರವಣಬೆಳ್ಗೊಳದ ಗೊಮ್ಮಟ ಮಹಾಮಸ್ತಕಾಭಿಷೇಕ ಮಹೋತ್ಸವದ ಸ್ಮರಣ ಸಂಪುಟ, ಬೆಂಗಳೂರು, 'ಶ್ರೀಮುಖ', ೧೯೯೭, ಪು. ೧೮೮-೯೩, ಶಾಸ್ತ್ರೀಯ-೩, ಪು. ೪೯೫-೪೯೯

ಭಟ್ಟನಾರಾಯಣನ ದುರ್ಯೋಧನ, ರಾಮರಾಜ್ಯ, ಮಾರ್ಚ್ ೧೫, ೧೯೫೫, ಪು. ೨೮ -೩೨

'ಭೀಮಕವೀಶ್ವರ ರಗಳೆ', 'ಭೃಂಗಿದಂಡಕ' (ಭೀಮಕವಿ), ಕಅಸಂ ಕಸಾಚ., ಸಂ. ೫, ಭಾಗ ೧, ೧೯೮೧, ಪು. ೫೦೭ -೦೮, ಶಾಸ್ತ್ರೀಯ -೪, ಪು. ೬೦ -೬೧

ಭಾಷೆ ಮತ್ತು ಸಾಹಿತ್ಯ: ಉಪನಿಷತ್ತುಗಳು ಇತ್ಯಾದಿ(ಅನು), ಭಾರತೀಯ ವಿದ್ಯಾಭವನ, ಬೆಂಗಳೂರು -(ಮೂಲ) ಎಂ.ಎ. ಮೆಹೆಂದಳೆ, ಭಾರತೀಯ ಜನತೆಯ ಇತಿಹಾಸ ಸಂಸ್ಕೃತಿ -೨, ವೇದಯುಗ-೨, ೧೯೬೭, ಪು. ೨೭೫ -೩೧೭

'ಮದನ ತಿಲಕಂ', ಕಸಾಪ, ೪೬-೧, ೨, ೧೯೬೧, ಪು. ೧-೧೩, ಪು. ೨೮-೪೮; 'ಸಾಹಿತ್ಯ ಮಂಥನ', ೧೯೭೨, ಪು. ೭೭-೧೨೨, ಶಾಸ್ತ್ರೀಯ-೨, ಪು. ೨೪೨-೨೮೫

ಮಧುರ: ಇತಿವೃತ್ತ, ಕಅಸಂ, ಕಸಾಚ., ಸಂ. ೫, ಭಾಗ ೧, ೧೯೮೧, ಪು. ೭೨೨ -೨೫, ಶಾಸ್ತ್ರೀಯ -೩ ಪು. ೫೭೭ -೬೦೦

ಮಲ್ಲಿಕಾರ್ಜುನ: ಇತಿವೃತ್ತ, ಬಸರಾಳು ಶಾಸನ, 'ಸೂಕ್ತಿ ಸುಧಾರ್ಣವಂ', ಕಅಸಂ., ಕಸಾಚ. ಸಂ. ೪, ಭಾಗ ೨, ೧೯೭೭, ಪು. ೧೫೮೧-೧೬೦೬, ಶಾಸ್ತ್ರೀಯ -೩, ಪು. ೫೪೪-೫೬೭

ಮಹಾಕವಿ ರತ್ನಾಕರನ ಯೋಗಭೋಗ ಸಾಮರಸ್ಯ, ರಾಮರಾಜ್ಯ, ಏಪ್ರಿಲ್ ೧೯೫೫, ಪು. ೮ -೧೦

ಮಹಾಕವಿ ರತ್ನಾಕರನ ವರ್ಣನಾನೈಪುಣ್ಯ, ಮಿತ್ರ, ಶಿವಮೊಗ್ಗ ೧೯೫೨-೫೩ (?)

ಮೈಸೂರು ಜಿಲ್ಲೆಯ ಪ್ರಾಚೀನ ಕನ್ನಡ ಜೈನ ಸಾಹಿತ್ಯ, ಮೈಸೂರು ವಿಶ್ವವಿದ್ಯಾನಿಲಯದ ನೌಕರರ ಸಹಕಾರಿ ಪತ್ತಿನ ಸಂಘ(ನಿ)ದ ಸುವರ್ಣಮಹೋತ್ಸವ ಸವಿಸಂಚಿಕೆ, ಮೈಸೂರು ೧೯೯೫, ಪು. ೩೬-೩೮

ರೋಮಿಯೋ ಜೂಲಿಯೆಟ್, ರಾಮರಾಜ್ಯ, ಬೆಂಗಳೂರು, ೧೯೫೫

'ವೀರೇಶ ಚರಿತ'(ಕರ್ಣಪಾರ್ಯ ಕೃತ), ಕಅಸಂ., ಕಸಾಚ, ಸಂ. ೫, ಭಾಗ ೧, ೧೯೮೧, ಪು. ೪೬೫-೬೮, ಶಾಸ್ತ್ರೀಯ-೩, ಪು. ೫೦೦-೫೧೯

ವಿಮಲವಾಹನನ ವೈರಾಗ್ಯ ವರ್ಣನೆ, ರಾಮರಾಜ್ಯ, ಬೆಂಗಳೂರು, ೧೯೫೫

ವೃತ್ತವಿಲಾಸ : ಒಂದು ಸಮಸ್ಯೆ, ಕಅಸಂ., ಕಸಾಚ. ಸಂ. ೫, ಭಾಗ ೧, ೧೯೮೧, ಪು. ೪೬೫ -೬೮ ಶಾಸ್ತ್ರೀಯ-೩, ಪು. ೫೭೩-೫೭೬

ಶೀಲಾಂಕನ 'ಚಉಪ್ಪನ್ನ ಮಹಾಪುರಿಸ ಚರಿಯಂ': ಒಂದು ಪರಿಚಯ, ಕರ್ನಾಟಕ ಲೋಚನ ೪-೨, ಡಿಸೆಂಬರ್ ೧೯೯೧, ಪು. ೪೦-೪೩, ಶಾಸ್ತ್ರೀಯ-೩, ಪು. ೩೦೮-೩೧೦

ಶ್ರವಣಬೆಳ್ಗೊಳ ಮತ್ತು ಚಾವುಂಡರಾಯ, ಶ್ರವಣಬೆಳಗೊಳ ಮತ್ತು ಗೋಮಟೇಶ್ವರ, ಶ್ರೀಮಹಾವೀರ ಮಿಷನ್, ಬೆಂಗಳೂರು ೪, ೧೯೮೧, ಪು. ೧೮-೨೪, ಪ್ರಾಕಸಾ., ೧೯೮೧, ಪು. ೧೪೯-೫೭, ಶಾಸ್ತ್ರೀಯ-೩, ಪು. ೪೫೧-೪೫೭

ಚಾವುಂಡರಾಯ ಮತ್ತು ಬಾಹುಬಲಿ ಮೂರ್ತಿ ನಿರ್ಮಾಣ, ಶ್ರವಣಬೆಳಗೊಳದ ಮಹಾಮಸ್ತಕಾಭಿಷೇಕ ಸ್ಮರಣ ಸಂಚಿಕೆ -೨೦೦೬

ಸಾಂಗತ್ಯ ಗ್ರಂಥಗಳಲ್ಲಿ ಭರತೇಶವೈಭವದ ಸ್ಥಾನ, 'ರತ್ನಾಕರವರ್ಣಿ', ಐಬಿಎಚ್. ಪ್ರಕಾಶನ, ಬೆಂಗಳೂರು, ೧೯೮೪, ಪು. ೧೬೯-೭೯, ಶಾಸ್ತ್ರೀಯ-೪, ಪು. ೨೫೯-೨೬೪

'ಸೂಕ್ತಿಸುಧಾರ್ಣವ'ದ ಕೆಲವು ಪದ್ಯಗಳಿಗೆ ಆಕರಗಳು, ಪ್ರಕ., ೪೭-೧, ೧೯೬೫, ಪು. ೧೯೧-೯೨; 'ಸಾಹಿತ್ಯ ಮಂಥನ' ೧೯೭೨, ಪು. ೧೮೬-೮೮

'ಹರಿಭಕ್ತಿ ಸಾರ'ದಲ್ಲಿ ವ್ಯಕ್ತವಾಗಿರುವ ಭಕ್ತಿ ವೈಶಿಷ್ಟ್ಯ, 'ಕನಕ ಕಿರಣ', ಕಾಳಿದಾಸ ಸಾಂಸ್ಕೃತಿಕ ಸಂಘ, ವಿಜಯನಗರ, ಬೆಂಗಳೂರು, ೧೯೮೨, ಪು. ೧೩೭-೪೦ 'ಶ್ರೀಮುಖ', ೧೯೯೭, ಪು. ೧೯೪-೯೭, ಶಾಸ್ತ್ರೀಯ-೪ ಪು. ೨೧೩-೨೧೫

ಪ್ರಾಚೀನ ಸಾಹಿತ್ಯ : ಸಮೀಕ್ಷೆ, ಸಮಗ್ರವಿವೇಚನೆ

ಒಗಟು ಕರಡಗೆ, ೧-೨, ತಾಂಬೂಲ, ಮು. ೧೯೮೭, ಪು. ೫೯: ಜೂ. ೧೯೮೭ ಪು. ೧೨-೧೪

ಕನ್ನಡದ ಕಬ್ಬಿಗಿತಿಯರು, 'ದೇವಗಂಗೆ', ಬಿ. ಶಿವಮೂರ್ತಿ ಶಾಸ್ತ್ರೀ ಅಭಿನಂದನ ಗ್ರಂಥ, ಉತ್ಸವ ಸಮಿತಿ, ಬೆಂಗಳೂರು, ೧೯೬೮, ಪು. ೨೧೯-೪೪; 'ಸಾಹಿತ್ಯ ಮಂಥನ', ೧೯೭೨, ಪು. ೩-೪೨, ಶಾಸ್ತ್ರೀಯ-೪, ಪು ೪೬-೭೨

ಕನ್ನಡ ಕಾವ್ಯಗಳಲ್ಲಿ ಯಕ್ಷ ಯಕ್ಷಿಯರ ಸ್ತುತಿ, ಪ್ರಕ., ೬೪-೧, ೧೯೮೨, ಪು. ೫೩-೫೯, ಶಾಸ್ತ್ರೀಯ-೫ ಪು. ೩೧೧-೧೬

ಕನ್ನಡ ಗ್ರಂಥಗಳಲ್ಲಿ ಉಮಾಸ್ವಾತಿ ಪ್ರಶಸ್ತಿ, ಪ್ರಾಕಸಾ., ೧೯೮೧, ಪು. ೪೮-೫೩, ಶಾಸ್ತ್ರೀಯ-೩, ಪು. ೩೧೭-೩೨೦

ಕನ್ನಡ ಗ್ರಂಥಗಳಲ್ಲಿ ಪೂಜ್ಯಪಾದ ಪ್ರಶಸ್ತಿ, ಪ್ರಾಕಸಾ., ೧೯೮೧ ಪು. ೫೪-೫೯, ಶಾಸ್ತ್ರೀಯ-೩, ಪು. ೩೨೧-೩೨೪

ಕನ್ನಡ ಚಂಪೂಸಾಹಿತ್ಯ, ಕವಿಕೋ, ಸಂ. ೩, ೧೯೭೧, ಪು. ೬೮೮-೯೨

ಕನ್ನಡ ಜೈನಪುರಾಣಗಳಲ್ಲಿ ಸಿದ್ಧಾಂತವಿಷಯ ಪ್ರತಿಪಾದನೆ, 'ಭಾರತೀಯ ಸಾಹಿತ್ಯ: ಕೆಲವು ಅಧ್ಯಯನಗಳು', ಡಾ.ಎಚ್.ಪಿ. ಮಲ್ಲೇದೇವರು ಸಂಸ್ಮರಣ ಗ್ರಂಥ, ಮೈಸೂರು ೧೯೯೩, ಪು. ೧೨೨-೨೮; ಕಸಾಪ, ೭೧-೧, ೧೯೯೭, ಪು. ೧-೯, ಶಾಸ್ತ್ರೀಯ ೩, ಪು. ೧೨೯-೧೩೫

ಕನ್ನಡದಲ್ಲಿ ಅಕ್ಷರ ಮಾಲಿಕೆಗಳು, ಕವಿವಿ. ೧೯೭೯, ಪು. ೧೫೨

ಕನ್ನಡದಲ್ಲಿ ತಾರಾವಳಿಗಳು, 'ಜ್ಞಾನ ಗಂಗೋತ್ರಿ', ಮಕ್ಕಳ ವಿಶ್ವಕೋಶ, ಬೆಂಗಳೂರು

ಕನ್ನಡ ಪುರಾಣ ಕಾವ್ಯಗಳಲ್ಲಿ ವೃಷಭ, ಪ್ರಕ, ೬೭-೧, ೧೯೮೫, ಪು. ೧-೧೪

ಕನ್ನಡ ಪುರಾಣಗಳು, ಪುರಾಣಕಥೆಗಳು: ಸಂಸ್ಕೃತ ಕನ್ನಡ ಬಾಂಧವ್ಯ, 'ವಿಶ್ವಪ್ರಭೆ', ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳ ಅಭಿನಂದನ ಗ್ರಂಥ, ಸಂ. ೧, ಹುಬ್ಬಳ್ಳಿ, ೧೯೯೧. ಪು. ೫೪೦-೬೬

ಕನ್ನಡ-ಪ್ರಾಕೃತ, ಕಲಿಸಂ ಕಸಾಚ. ಸು. ೧, ೧೯೭೪, ಪು. ೬೭೫-೭೯

ಕನ್ನಡ-ಸಂಸ್ಕೃತ, ಕಲಿಸಂ ಕಸಾಚ., ಸಂ. ೧, ೧೯೭೪, ಪು. ೬೧೩-೭೫

ಕನ್ನಡ ಸಂಸ್ಕೃತ ಬಾಂಧವ್ಯ: ಭಾರತಗಳು, ಜೀವನ, ೩೫-೯, ಸೆ. ೧೯೭೫, ಪು. ೨೫-೩೦

ಕನ್ನಡ ಸಂಸ್ಕೃತ ಬಾಂಧವ್ಯ: ರಾಮಾಯಣಗಳು, ಜೀವನ, ೩೫-೭, ಜುಲೈ ಆಗಸ್ಟ್ ೧೯೭೫, ಪು. ೧೦-೧೫

ಕನ್ನಡ ಸಾಹಿತ್ಯಕ್ಕೆ ಮೈಸೂರು ಒಡೆಯರ ಕೊಡುಗೆ, ಪ್ರಕ., ೭೨ -೩,೪, ೧೯೯೧, ಪು. ೧-೩೯, ಶಾಸ್ತ್ರೀಯ-೪ ಪು. ೨೬೫-೯೭

ಕನ್ನಡ ಸಾಹಿತ್ಯದ ಪ್ರಾಚೀನತೆ, ಕಲಿಸಂ ಕಸಾಚ., ಸಂ. ೨, ೧೯೭೫, ಪು. ೪೭೬ ೫೫೪, ಶಾಸ್ತ್ರೀಯ-೩ ಪು. ೩೨೫-೪೦೦

ಕನ್ನಡ ಸಾಹಿತ್ಯದಲ್ಲಿ ಜೀವನದರ್ಶನ, ಅದ್ವೈತಾಮೃತ, ಏಪ್ರಿಲ್ ೧೯೮೨, ಶ್ರೀ ಶಂಕರ ಸೇವಾ ಸಮಿತಿ, ಬೆಂಗಳೂರು, ಪು. ೫-೯; 'ಶ್ರೀಮುಖ', ೧೯೯೭, ಪು. ೧೩೯-೪೬, ಶಾಸ್ತ್ರೀಯ -೩, ಪು. ೧೩೬-೧೪೨

ಕನ್ನಡ ಸಾಹಿತ್ಯದಲ್ಲಿ ಧರ್ಮಚಿಂತನೆ, ಕಸಾಪ; ೭೦-೨, ೧೯೮೫, ಪು. ೬-೨೨; 'ಶ್ರೀಮುಖ', ೧೯೯೭, ಪು. ೩೨-೪೬, ಶಾಸ್ತ್ರೀಯ-೩, ಪು. ೧೪೩-೧೫೬

ಕನ್ನಡ ಸಾಹಿತ್ಯದಲ್ಲಿ ಬಾಹುಬಲಿಯ ಕಲ್ಪನೆ, 'ರತ್ನತ್ರಯ' ಭಗವಾನ್ ಶ್ರೀ ಬಾಹುಬಲಿಸ್ವಾಮಿ

ಮಸ್ತಕಾಭಿಷೇಕ ಸಂಸ್ಮರಣ ಸಂಪುಟ, ಧರ್ಮಸ್ಥಳ, ೧೯೯೫, ಪು. ೧೮೦-೮೫

ತೊರವೆ ರಾಮಾಯಣ: ಸಸ್ಯವರ್ಗ ಪ್ರಾಣಿವರ್ಗಗಳ ಹಾಸುಹೊಕ್ಕು-ತೊರವೆ ರಾಮಾಯಣ (ಕುಮಾರವಾಲ್ಮೀಕಿ ಪ್ರಶಸ್ತಿ ಗ್ರಂಥ) -೨೦೦೭

ಕನ್ನಡ ಸಾಹಿತ್ಯದಲ್ಲಿ ಶಿವ, 'ಶ್ರೀಶಿವಾರ್ಪಣಂ', ಗೀತಾ ಬುಕ್ ಹೌಸ್, ಮೈಸೂರು, ೧೯೮೫, ಪು. ೩೧೫-೩೦, ಶಾಸ್ತ್ರೀಯ-೩, ಪು. ೧೬೫-೧೭೯

ಕನ್ನಡೇತರ ಭಾಷೆಗಳು ಮತ್ತು ಸಾಹಿತ್ಯ: ಪ್ರಾಕೃತ, ಕವಿವಿ., ೧೯೭೯, ಪು. ೨೩೭-೩೮

ಜೈನಧರ್ಮ ಮತ್ತು ಕನ್ನಡ ಸಾಹಿತ್ಯ, 'ಕರ್ನಾಟಕದಲ್ಲಿ ಜೈನಧರ್ಮ', ಮೈಸೂರು, ೧೯೭೬ ಪು. ೬೧-೬೭; ಪ್ರಾಕಸಾ., ೧೯೮೧, ಪು. ೨೩-೩೧,ಶಾಸ್ತ್ರೀಯ-೩, ಪು. ೨೭-೩೩

ತೆಲುಗು ಜಾನಪದ ಸಾಹಿತ್ಯ (ಅನು), ಪ್ರಕ., ೩೬-೩, ೧೯೫೪-೫೫, ಪು. ೧೭೮. 'ಸಾಹಿತ್ಯ ಮಂಥನ', ೧೯೭೨, ಪು. ೨೩೮-೫೯

ಪುರಾಣಪಾತ್ರ ರಚನೆಯಲ್ಲಿ ನವಪ್ರಯೋಗ ಪ್ರಥೆ, ವಿಕ್ರಮ ನ. ೩, ೧೦, ೧೯೫೫, ಪು. ೨-೫; ಕನು. ಡಿ. ೧೯೫೭. ಪು. ೩೨೯-೩೩

ಪ್ರಭುನಿಷ್ಠ ಸಾಹಿತ್ಯದಲ್ಲಿ ಸಾಮಾಜಿಕ ನಿಲುವುಗಳು, 'ಸಾಹಿತ್ಯ ಮತ್ತು ಸಾಮಾಜಿಕ ನಿಲುವುಗಳು', ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೮೯, ಪು. ೧೩೧-೪೪, ಶ್ರೀಮುಖ ೧೯೯೭ ಪು. ೨೨ -೩೧

ಪ್ರಾಚೀನ ಕನ್ನಡ ಕವಿಗಳು ಮತ್ತು ನಾಟಕ, 'ಕಬ್ಬಿನ ಹಾಲು', ಕೆ.ಪಿ. ಶಂಕರಗೌಡ ಅಭಿನಂದನ ಗ್ರಂಥ, ಮೈಸೂರು, ೧೯೭೫, ಪು. ೧೩೩-೩೬; ಪ್ರಾಕಸಾ., ೧೯೮೧, ಪು. ೮೫ -೮೯

ಪ್ರಾಚೀನ ಕನ್ನಡ ಮಹಾಕಾವ್ಯಗಳು: ಆಕರ, ವಸ್ತು ಸ್ವರೂಪ ಮತ್ತು ಛಂದಸ್ಸು, ಕಸಾಪ., ೭೩-೨, ೧೯೮೮, ಪು. ೧೩-೨೩; 'ಶ್ರೀಮುಖ', ೧೯೯೭, ಪು. ೮-೧೮, ಶಾಸ್ತ್ರೀಯ-೩, ಪುಟ ೧೦-೧೮

ಪ್ರಾಚೀನ ಕನ್ನಡ ಸಾಹಿತ್ಯದ ಅಧ್ಯಯನ ಸಮಸ್ಯೆಗಳು, ಲೋಚನ ೫-೧, ಜೂನ್ ೧೯೮೭, ಪು. ೩೩-೩೯; 'ಶ್ರೀಮುಖ', ೧೯೯೭, ಪು. ೧-೭, ಶಾಸ್ತ್ರೀಯ-೩, ಪು. ೪-೯

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಇಂದ್ರಜಾಲ, ಪ್ರ.ಕ.೭೫-೧, ೧, ೨, ೩, ೪, ೧೯೯೩-೯೪, ಶಾಸ್ತ್ರೀಯ-೩, ಪು ೨೮೭-೩೦೭

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಕುಂಬಾರನ ಚಕ್ರ, ಕುಂಬಾರ ಸಂಘದ ಸ್ಮರಣ ಸಂಚಿಕೆ, ಕುಂಬಾರ ಸಂಘ, ಬೆಂಗಳೂರು, ೧೯೭೪, ಪು. ೨೯-೨೫; ಪ್ರಾಕಸಾ., ೧೯೮೧, ಪು. ೯೪ -೧೦೩, ಶಾಸ್ತ್ರೀಯ-೩ ಪುಟ. ೨೬೫-೨೭೧

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಹಕ್ಕಿಗಳ ಸಂಸಾರಚಿತ್ರ, ಪ್ರಾಕಸಾ., ೧೯೮೧, ಪು. ೧೦೪-೨೩, ಶಾಸ್ತ್ರೀಯ-೩ ಪು. ೨೭೨-೨೮೬

ಪ್ರಾಚೀನ ಕವಿಗಳು ಕಂಡ ವಿವಾಹ ಮಂಗಳ, ಪ್ರಜಾವಾಣಿ ದೀಪಾವಳಿ ವಿಶೇಷಾಂಕ, ೧೯೮೫, ಪು. ೫೬-೬೧, ೬೫; 'ಶ್ರೀಮುಖ' ೧೯೯೭, ಪು. ೮೮-೯೩, ಶಾಸ್ತ್ರೀಯ-೩, ಪು. ೨೧೮-೨೨೨

ಬೌದ್ಧಧರ್ಮ ಮತ್ತು ಕನ್ನಡಸಾಹಿತ್ಯ, 'ಹರತಿಸಿರಿ', ಎಚ್.ವಿ.ವೀರನಾಯಕ ನೆನಪಿನ ಸಂಪುಟ, ಹರ್ತಿಕೋಟೆ, ಹಿರಿಯೂರು, ೧೯೮೭. ಪು. ೧೧೮-೨೭; 'ತುಂಬಿದಕೊಡ', ಕಾಶಿ ವಿಶ್ವನಾಥಶೆಟ್ಟಿ ಸಂಸ್ಮರಣಗ್ರಂಥ, ಚಿಕ್ಕಮಗಳೂರು, ೧೯೯೨, ಪು. ೪೦೩-೧೧; 'ಹಳೆಯ ಹೊನ್ನು' ೧೯೯೧, ಪು. ೧೩೪-೪೫, ಶಾಸ್ತ್ರೀಯ-೩, ಪು. ೧೯-೨೬

ಭಾರತೀಯ ಜೈನ ಸಾಹಿತ್ಯದ ತಿಳಿವಳಿಕೆಗೆ ಕನ್ನಡ ಸಾಹಿತ್ಯದ ನೆರವು, ಪ್ರಕ. ೫೮-೧, ೧೯೭೬, ಪು. ೭೯-೮೮; ಪ್ರಾಕಸಾ. ೧೯೮೧, ಪು. ೩೨-೪೫, 'ಹಳೆಯ ಹೊನ್ನು' ೧೯೯೧, ಪು. ೧೪೬-೧೬೧, ಶಾಸ್ತ್ರೀಯ-೩, ಪುಟ. ೯೫-೧೦೫

ಮಾರ್ಗಸಾಹಿತ್ಯದಲ್ಲಿ ವಿನೋದ, 'ಕನ್ನಡದಲ್ಲಿ ವಿನೋದ ಸಾಹಿತ್ಯ', ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೮೯, ಪು. ೧-೫೧, 'ಶ್ರೀಮುಖ' ೧೯೯೭, ಪು. ೧೦೪-೩೮, ಶಾಸ್ತ್ರೀಯ-೩, ಪು. ೨೨೩-೨೫೩

ರಾಷ್ಟ್ರಕೂಟರ ಕಾಲದ ಕನ್ನಡ ಸಾಹಿತ್ಯ, ಪ್ರಕ. ೫೭-೪, ೧೯೭೬, ಪು. ೫೧-೬೦; 'ಶ್ರೀಮುಖ' ೧೯೯೭, ಪು. ೧೫೫-೭೦, ಶಾಸ್ತ್ರೀಯ-೩, ಪು. ೪೦೪-೪೧೩

ರುದ್ರನಾಟಕ ಮತ್ತು ಹರ್ಷನಾಟಕ (ಅನು). ಕನು ೨೦-೧೦, ಅ. ೧೯೫೭, ಪು. ೨೭೮ -೮೨; 'ಸಾಹಿತ್ಯ ಮಂಥನ' ೧೯೭೨, ಪು. ೨೨೧-೨೯

ವಚನ ಸಾಹಿತ್ಯದ ಉಗವು ಮತ್ತು ವಿಕಾಸ, 'ಬಸವಪರುಷ', ಕನ್ನಡ ಅಧ್ಯಯನಸಂಸ್ಥೆ, ಮೈಸೂರು, ೧೯೭೫, ಪು. ೧-೫೩; 'ಮೂರು ಸಮೀಕ್ಷೆಗಳು', ೧೯೮೧, ಪು. ೬೨ -೯೮, ಶಾಸ್ತ್ರೀಯ-೪, ಪು ೧-೪೫

ವಚನ ಸಾಹಿತ್ಯದ ಉಗಮ ಮತ್ತು ವಿಕಾಸ: ಕೆಲವರು ವಚನಕಾರರು, ಪ್ರಾಕಸಾ. ೧೯೮೧, ಪು. ೧೨೪ -೪೮

ವೀರಶೈವ ಶಾಸ್ತ್ರಗ್ರಂಥಗಳು, 'ಸಿದ್ಧಗಂಗಾಶ್ರೀ', ಶ್ರೀ ಶಿವಕುಮಾರ ಸ್ವಾಮಿಗಳ ಅಭಿನಂದನ ಗ್ರಂಥ, ಸಿದ್ಧಗಂಗೆ, ೧೯೮೧, ಪು. ೯೬೭-೭೭, ಶಾಸ್ತ್ರೀಯ ೪, ಪು. ೭೩-೮೯, ಶಾಸ್ತ್ರೀಯ -೬, ಪು. ೮೧ -೯೭

ವೈಶಿಷ್ಟ್ಯ-ಸಾಧನೆ (ಕನ್ನಡಸಾಹಿತ್ಯ ಚರಿತ್ರೆಯ ಅವಧಿ: ಸು. ೮೫೦ ರವರೆಗೆ), ಕಲಿಸಂ ಕಸಾಚ., ಸಂ. ೨, ೧೯೭೫, ಪು. ೮೩೩-೩೯

ವೈಶಿಷ್ಟ್ಯ-ಸಾಧನೆ (ಕನ್ನಡ ಸಾಹಿತ್ಯ ಚರಿತ್ರೆಯ ಅವಧಿ: ಸು. ೧೧೫೦ರವರೆಗೆ) ಕಲಿಸಂ ಕಸಾಚ., ಸಂ. ೩, ೧೯೭೬, ಪು. ೮೯೭-೯೦೭

ವೈಶಿಷ್ಟ್ಯ-ಸಾಧನೆ (ಕನ್ನಡ ಸಾಹಿತ್ಯ ಚರಿತ್ರೆಯ ಅವಧಿ: ಸು. ೧೩೫೦ರವರೆಗೆ). ಕಲಿಸಂ. ಕಸಾಚ., ಸಂ. ೪, ೧೯೭೭, ಪು. ೧೮೨೦ -೩೨

ವೈಷ್ಣವ ಪುರಾಣಗಳು; ಕನ್ನಡ ಸಾಹಿತ್ಯ ಸಮೀಕ್ಷೆ, 'ದಾಸಮಾನಸ', ಸ್ಮರಣ ಸಂಚಿಕೆ, ೧೯೮೫, ಪು. ೫೯-೬೬

ಹಳಗನ್ನಡ ಕಾವ್ಯಗಳಲ್ಲಿ ಕೃಷ್ಣಸ್ತುತಿ ಭಕ್ತಿವೇದಾಂತ ವಿಶೇಷ ನಂಬಿಕೆ, ಇಸ್ಕಾನ್, ಬೆಂಗಳೂರು -೨೦೦೭

ಹಳಗನ್ನಡ ಕಾವ್ಯಗಳಲ್ಲಿ ಶೃಂಗಾರರಸ, ಪ್ರಕ. ೬೩ , ೧೯೮೧, ಪು. ೩೭-೪೬; 'ಶ್ರೀಮುಖ' ೧೯೯೭, ಪು. ೯೪-೧೦೩, ಶಾಸ್ತ್ರೀಯ-೩, ಪು. ೨೦೯-೨೧೭

ಹಳಗನ್ನಡ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು, ಕನು. ಜೂನ್ ೧೬, ೧೯೭೮, ಪು. ೧ -೮; ಪ್ರಾಕಸಾ., ೧೯೮೧, ಪು. ೯-೨೨, ಶಾಸ್ತ್ರೀಯ-೩, ಪು. ೧೮೯-೧೯೮

ಹಳೆಯ ಸಾಹಿತ್ಯ, ಇಂಚರ, ಐಬಿಎಚ್. ಪ್ರಕಾಶನ, ಬೆಂಗಳೂರು, ಅ. ೧೯೮೨, ಪು. ೭, ೭೬; 'ಶ್ರೀಮುಖ', ೧೯೯೭, ಪು. ೧೯-೨೧, ಶಾಸ್ತ್ರೀಯ -೩, ಪು. ೧-೩

ರನ್ನ ಕವಿಯ ಗದಾಯುದ್ಧದಲ್ಲಿ ಸಾಮಾನ್ಯಮನುಷ್ಯ (ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ, ಸ.ರಾ.ಕಾಲೋನಿಯಲ್ಲಿ ಮಾಡಿದ ಭಾಷಣ)(ಅಪ್ರಕಟಿತ).

ಆಧುನಿಕ ಸಾಹಿತ್ಯ : ಕವಿ, ಕೃತಿ

ಆಲೂರ ವೆಂಕಟರಾಯರು, 'ಸಾಹಿತ್ಯ ಶಿಲ್ಪಿಗಳು', ಬೆಂಗಳೂರು, ೧೯೮೫, ಪು. ३४-३೭

ಉಪಾಧ್ಯೇ, ಆ.ನೇ., 'ಸಾಹಿತ್ಯ ಶಿಲ್ಪಿಗಳು', ಬೆಂಗಳೂರು, ೧೯೮೫, ಪು. ೮೨-೯೬

ಉಪಾಧ್ಯೇ ಆ.ನೇ. ಮತ್ತು ಕನ್ನಡ ಸಾಹಿತ್ಯ, ಪುಸ್ತಕ ಪುರವಣಿ, ३-೧೧, ೧೨, ೧೯೭೯, ಪು. ೭-೯, ೨४

ಕನಕಪುರದ ಸಾಹಿತ್ಯೇತಿಹಾಸ, ಅರ್ಕಾವತಿ, ಜಿಲ್ಲಾ ಸಾಹಿತ್ಯ ಸಂಸ್ಮರಣ ಸಂಚಿಕೆ, ಕನಕಪುರ, ೧೯೭೧, ಪು. ೨३-३೦; ಹೊಸಸಾ., ೧೯೮೨, ಪು. ೭೦-೮೨, ಶಾಸ್ತ್ರೀಯ-४, ಪು. ೬೦೫-೬೨೫

ಕನ್ನಡದ ಅಭಿವೃದ್ಧಿ ಸಾಧಿಸುವುದು ಹೇಗೆ?, ಪ್ರಜಾವಾಣಿ, ३-೬ ೧೯೯೫, ಪು. ೬

ಕನ್ನಡದ ಒಂದು ಅಪರೂಪದ ಕೃತಿ: ದೇವಚಂದ್ರನ ರಾಜಾವಳಿ ಕಥೆ, 'ಉತ್ಥಾನ', ೨೬-೨, ಅ. ೧೯೯३, ಪು. ೯೨-೯೬

ಕನ್ನಡದ ಹೊಸ ಸಾಹಿತ್ಯದ ಬಗೆಗೆ, ಕನು. ३೮-೭, ೧೯೭೫, ಪು. ೬-೮, ಹೊಸಸಾ., ೧೯೮೨, ಪು. ೨೧-೨೫

ಕನ್ನಡದಲ್ಲಿ ರುದ್ರನಾಟಕ, ಕವಿಕೋ. ೫, ೧೯೭೧, ಪು. ೭೫೦-೫೧; ಹೊಸಸಾ., ೧೯೮೨, ಪು. ೮-೨೦

ಕನ್ನಡದಲ್ಲಿ ರುದ್ರನಾಟಕ (೧೯೬೫ರ ವರೆಗೆ) ಪ್ರ.ಕ. ೫೭-३, ೧೯೭೫, ಪು. ३೧-४೧, ಶಾಸ್ತ್ರೀಯ -४, ಪು. ೫೧೭-೨೮

ಕನ್ನಡ ನಾಟಕಗಳು, ಸುಬೋಧ, ಜನವರಿ ೧೯೫೪, ಫೆಬ್ರವರಿ ೧೯೫೪; ಹೊಸಸಾ., ೧೯೮೨, ಪು. ೧-೭, ಶಾಸ್ತ್ರೀಯ -४, ಪು. ೫೧೧-೫೧೬

ವಿ.ಸೀತಾರಾಮಯ್ಯ -ವಿ.ಸೀ. ನೂರರ ನೆನಪು, ವಿ.ಸೀ. ಸಂಪದ ೧೯೯೯, ಮಾರ್ಗದರ್ಶಕ ಮಹನೀಯರು ಪು. ३೦೧-३೦೯

ಸಿದ್ಧಾಂತಿ ಶಿವಶಂಕರ ಶಾಸ್ತ್ರಿ -ದೇ.ಜ.ಗೌ ಸಂಭಾವನಾಗ್ರಂಥ -೨೦೦೭

ರಾಜಮಂತ್ರಪ್ರವೀಣ ಎಚ್.ವಿ.ನಂಜುಂಡಯ್ಯನವರು -ಸೇವಾರ್ಕ ಪ್ರೊ.ಕೆ.ವಿ. ಅರ್ಕನಾಥ್ ಅಭಿನಂದನಗ್ರಂಥ, ಸಂಸ್ಕೃತಿ ಪಬ್ಲಿಷಿಂಗ್ ಹೌಸ್ -೨೦೦೭

ಗ್ರೀಕ್ ಪಂಡಿತ ಕ.ವೆಂ.ರಾಘವಾಚಾರ್ -ಸಂಯುಕ್ತ ಕರ್ನಾಟಕ

ಡಾ. ಎ.ಎನ್.ನರಸಿಂಹಯ್ಯ -ಡಾ.ವೀರಣ್ಣ ರಾಜೂರ ಅಭಿನಂದನಗ್ರಂಥ, ಧಾರವಾಡ -೨೦೦೭

ಹಾಸ್ಯೇಶ ಶಿವರಾಂ -ಚಿತ್ರನಟ ಶಿವರಾಂ ಗೌರವಗ್ರಂಥ -೨೦೦೭

ಜಂಗಮ ವಿಶ್ವಕೋಶ (ಎಚ್ಚೆಸ್ಕೆ) ಗುರುವಂದನೆ, ಕಾಶಿ ಶೇಷಶಾಸ್ತ್ರೀ ಮೆಮೋರಿಯಲ್ ಟ್ರಸ್ಟ್ -೨೦೦೬

ನಿತ್ಯೋತ್ಸವದ ಜನಪ್ರಿಯ ಸಾಹಿತಿ (ಕಾವ್ಯದ ಹುಲುಸು ಬೆಳೆಯ ಗಟ್ಟಿಕಾಳು)-ನಿಸಾರ್ ನಿಮಗಿದೋ ನಮನ, (ಕೆ.ಎಸ್.ನಿಸಾರ್ ಅಹಮದ್ ಅಭಿನಂದನಾಗ್ರಂಥ, ಸಪ್ನಬುಕ್ ಹೌಸ್, ಬೆಂಗಳೂರು) -೨೦೦೬, ಪುಟ ೧೩೬೧-೧೩೬೫

ಎಂ.ವಿ.ರಾಜಶೇಖರನ್ -ನಿಜಬಿಂಬ, (ಎಂ.ವಿ.ರಾಜಶೇಖರನ್ ಅಭಿನಂದನಗ್ರಂಥ) -೨೦೦೩, 'ಆಪ್ತರು ಆಚಾರ್ಯರು' -೨೦೦೫

ಜಿ.ವೆಂಕಟಸುಬ್ಬಯ್ಯ -ಶಬ್ದಸಾಗರ, (ಪ್ರೊ.ಜಿ.ವಿ.ಅಭಿನಂದನಗ್ರಂಥ) -೨೦೦೪, 'ಆಪ್ತರು ಆಚಾರ್ಯರು' -೨೦೦೫

ಪೆರಿಯಸ್ವಾಮಿ ತಿರುಮಲಾಚಾರ್ಯ -ಸದ್ವಿದ್ಯಾ ಪಾಠಶಾಲೆಯ ೧೫೦ ವರ್ಷಗಳ ಸ್ಮರಣ ಸಂಚಿಕೆ, ೨೦೦೬, 'ಆಪ್ತರು ಆಚಾರ್ಯರು' -೨೦೦೫

ಎಸ್.ಜಿ. ನರಸಿಂಹಾಚಾರ್ಯ- ಹೊಂಬಿದಿರು- ಮೂಡಬಿದರೆ ಸಾಹಿತ್ಯ ಸಮ್ಮೇಳನದ ಸ್ಮರಣಸಂಚಿಕೆ. 'ಆಪ್ತರು ಆಚಾರ್ಯರು' -೨೦೦೫

ವಾಗ್ಗೇಯಕಾರ ವಾಸುದೇವಾಚಾರ್ಯ -**ಕೆಲವು ಹೆಚ್ಚಿನ ಜೀವನ ವಿಚಾರಗಳು**-ಮಹತೀ, ಪ್ರೊ. ಆರ್.ಎನ್.ದೊರೆಸ್ವಾಮಿ ಅಭಿನಂದನಗ್ರಂಥ, ಮೈಸೂರು-೨೦೦೦, ಮಾರ್ಗದರ್ಶಕ ಮಹನೀಯರು (ಶಾಸ್ತ್ರೀಯ-೫) ೧೯೯೯, ಪು. ೧೫೬-೧೬೧

ಬಿ.ರಾಮಸ್ವಾಮಿ-ಮಧುರಸ್ಮೃತಿ-(ಬಿ.ರಾಮಸ್ವಾಮಿ ಸಂಸ್ಮರಣ ಗ್ರಂಥ) -ಬಿ.ಎಂ.ಶ್ರೀ ಪ್ರತಿಷ್ಠಾನ-೨೦೦೩ 'ಆಪ್ತರು ಆಚಾರ್ಯರು' ೨೦೦೫

ಕನ್ನಡ ವಿಭಾಗ: ಮೈಸೂರು ವಿಶ್ವವಿದ್ಯಾನಿಲಯ, ಸುಧಾ, ೧೯-೮-೧೯೭೯, ಹೊಸಸಾ. ೧೯೮೨, ಪು. ೧೧೯-೨೫, ಶಾಸ್ತ್ರೀಯ, ಸಂ. ೪

ಕನ್ನಡ ಸಾಹಿತ್ಯಕ್ಕೆ ಡಿ.ವಿ.ಜಿ. ಕೊಡುಗೆ, ಡಿವಿಜಿ., ಜನ್ಮಶತಮಾನೋತ್ಸವ ಸ್ಮರಣಸಂಚಿಕೆ, ಎಜಿಓಆರ್‌ಸಿ. ಬೆಂಗಳೂರು, ೧೯೮೮, ಪು. ೬೭-೭೧

ಕರ್ನಾಟಕ ಕಾಳಿದಾಸ ಬಸವಪ್ಪ ಶಾಸ್ತ್ರಿಗಳು, ಅಖಿಲ ಕರ್ನಾಟಕ ಗಮಕ ಸಮ್ಮೇಳನ, ಶಿವಮೊಗ್ಗ -೧೯೯೭, ಶಾಸ್ತ್ರೀಯ-೪, ಪು. ೩೬೯ -೩೭೩

ಕುವೆಂಪು : 'ಶ್ರೀರಾಮಾಯಣ ದರ್ಶನಂ', 'ಸ್ವಸ್ತಿ', ತ.ಸು. ಶಾಮರಾಯ ಅಭಿನಂದನ ಗ್ರಂಥ, ತ.ವೆಂ.ಸ್ಮಾರಕ ಗ್ರಂಥಮಾಲೆ, ಮೈಸೂರು ೨, ೧೯೮೩, ಪು. ೪೬೬-೯೧; 'ಶ್ರೀಮುಖ', ೧೯೯೭, ಪು. ೩೨೪-೪೯, ಶಾಸ್ತ್ರೀಯ-೪, ಪು. ೪೬೪-೪೮೭

ಕೆಂಪುನಾರಾಯಣ ಕವಿ: ಒಂದು ಟಿಪ್ಪಣಿ, ಸಂಶೋಧನ ವ್ಯಾಸಂಗ, ೨-೧, ವಿಶೇಷ ಸಂಚಿಕೆ, ಜ.ಫೆ. ೧೯೯೦, ಪು. ೮-೯; 'ಶ್ರೀಮುಖ', ೧೯೯೭, ಪು. ೨೩೫-೨೭, ಶಾಸ್ತ್ರೀಯ -೪, ಪು. ೩೨೦-೩೨೨

ಗೆಳೆಯ ಡಾ. ಮೂರ್ತಿ, 'ಸಂಶೋಧನ', ಡಾ.ಎಂ.ಚಿದಾನಂದಮೂರ್ತಿ ಗೌರವ ಸಂಪುಟ, ಬೆಂಗಳೂರು, ೧೯೯೧, ಪು. ೮೫೯-೪೨, ಮಾರ್ಗದರ್ಶಕ ಮಹನೀಯರು-ಶಾಸ್ತ್ರೀಯ -೫, ಪುಟ ೪೭೬ -೪೮೦

ಗೋವಿಂದ ಪೈಗಳ ಇತಿಹಾಸ ಸಂಶೋಧನೆ, ಕರ್ನಾಟಕ ಭಾರತಿ, ೧೬-೩, ೪, ೧೯೮೪, ಪು. ೮೨-೧೦೩; 'ಶ್ರೀಮುಖ', ೧೯೯೭, ಪು. ೨೭೩-೯೩, ಶಾಸ್ತ್ರೀಯ-೪, ಪು. ೪೧೪ -೪೩೨

ಗೋವಿಂದ ಪೈ: ಜೈನ ಸಾಹಿತ್ಯ ಸಂಸ್ಕೃತಿಗಳಿಗೆ ಕೊಡುಗೆ, ಜೈನ ಸಾಹಿತ್ಯಕ್ಕೆ ಜೈನೇತರ ವಿದ್ವಾಂಸರ ಕೊಡುಗೆ ವಿಚಾರ ಸಂಕಿರಣ, ಮಿಥಿಕ್ ಸೊಸೈಟಿ, ಬೆಂಗಳೂರು, ೧೯೯೭, ಶಾಸ್ತ್ರೀಯ -೪, ಪು. ೪೦೩ -೪೧೩

ಗೋವಿಂದ ಪೈಗಳ ಧರ್ಮ ಸಂಬಂಧವಾದ ಬರಹಗಳು, 'ಗೋವಿಂದಪೈ' ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೮೩, ಪು. ೧೦೧-೦೯; ಶ್ರೀಮುಖ, ೧೯೯೭, ಪು. ೨೯೪ ೩೦೧, ಶಾಸ್ತ್ರೀಯ ೪, ಪು. ೪೩೮, ೪೪೫

ಜವರೇಗೌಡ ದೇ-ಸುಲಭಸಾಧ್ಯರು, 'ಅಂತಃಕರಣ', ದೇ.ಜವರೇಗೌಡ ಅಭಿನಂದನ ಗ್ರಂಥ, ತ.ವೆಂ.ಸ್ಮಾರಕ ಗ್ರಂಥಮಾಲೆ, ಮೈಸೂರು, ೧೯೭೨, ಪು. ೧೪೬-೪೯; 'ಸಾಹಿತ್ಯಶಿಲ್ಪಿಗಳು', ಬೆಂಗಳೂರು, ೧೯೮೫. ಪು. ೧೨೨-೨೫

ಡಿ.ವಿ.ಜಿ.ಅವರ ಎರಡು ತತ್ತ್ವಪದಗಳು, 'ತುಂಗಭದ್ರ', ಮಾರ್ಕಂಡೇಯ ಅವಧಾನಿ ಮತ್ತು ಎಚ್.ಆರ್. ಕೇಶವಮೂರ್ತಿ ಅಭಿನಂದನ ಗ್ರಂಥ, ಹೊಸಹಳ್ಳಿ, ಶಿವಮೊಗ್ಗ, ೧೯೯೪, ಪು. ೧೧೦-೨೦, ಶಾಸ್ತ್ರೀಯ-೪, ಪು. ೪೫೧-೪೫೮

ತೋಗೆರೆ ನಂಜುಂಡಶಾಸ್ತ್ರೀ, ಕವಿವಿ., ೧೯೭೯, ಪು. ೭೫೬

ನರಸಿಂಹಾಚಾರ್ ಡಿ.ಎಲ್.ಕವಿಕೋ., ಸಂ. ೧೦, ೧೯೮೦, ಪು. ೧೧೪-೧೫

ನರಸಿಂಹಾಚಾರ್ ಡಿ.ಎಲ್., 'ಕನ್ನಡ ಪ್ರಭ', ೨೩-೫ -೧೯೭೧; 'ಸಾಹಿತ್ಯಶಿಲ್ಪಿಗಳು', ೧೯೮೫, ಪು. ೯೭-೧೧೬

ನರಸಿಂಹಾಚಾರ್ಯ. ಡಿ.ಎಲ್. 'ಸಾಲುದೀಪಗಳು', ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೦, ಪು. ೨೧೬-೨೨

ನರಸಿಂಹಾಚಾರ್ಯ ಎಸ್.ಜಿ., -ಎಂ.ಎ. ರಾಮಾನುಜಯ್ಯಂಗಾರ್, ಗ್ರಂಥಲೋಕ, ೭- ೫, ೧೯೮೩; 'ಸಾಹಿತ್ಯ ಶಿಲ್ಪಿಗಳು' ೧೯೮೫, ಪು. ೧೮ -೨೩

ನವರತ್ನ ರಾಮರಾಯರ 'ಕೆಲವು ನೆನಪುಗಳು' ಗ್ರಂಥದ ಶಬ್ದಪ್ರಪಂಚ, ಜೀವನ ೨೨-೬, ಅ. ೧೯೬೧, ಪು. ೨೧೦-೧೪ ಹೊಸಸಾ, ಪು. ೮೯-೯೭, ಶಾಸ್ತ್ರೀಯ-೧, ಪು. ೨೮೬-೨೯೩

ನಾಲ್ವಡಿಯವರು: ಕವಿಗಳು ಕಂಡಂತೆ, ಪ್ರಕ, ೬೮-೪, ೧೯೮೭, ಪು. ೯೭-೧೧೯: 'ಶ್ರೀಮುಖ', ೧೯೯೭, ಪು. ೩೦೨-೨೩, ಶಾಸ್ತ್ರೀಯ-೪, ಪು ೩೫೦-೩೬೮

ಪಾಠಕ್ ಕೆ.ಬಿ. ಕವಿವಿ., ೧೯೭೯, ಪು. ೯೦೦-೦೧

ಸದ್ದಿಲ್ಲದ ಸಾಧನೆ, ಬಿ.ಎಸ್.ಸಣ್ಣಯ್ಯ ಅಭಿನಂದನಗ್ರಂಥ ೨೦೦೭

ಪಾಠಕ್ ಕೆ.ಬಿ., ‘ಸಾಹಿತ್ಯ ಶಿಲ್ಪಿಗಳು’, ೧೯೮೫, ಪು. ೧-೬, ಮಾರ್ಗದರ್ಶಕ ಮಹನೀಯರು-ಶಾಸ್ತ್ರೀಯ-೫ ಪು. ೩೦-೩೪

ಪ್ರಬುದ್ಧ ಕರ್ಣಾಟಕ, ಕವಿಕೋ. ಸಂ. ೧೧, ೧೯೮೩, ಪು. ೩೯೦-೯೨, ಕವಿವಿ., ೧೯೭೯ ಪು. ೯೨೭-೨೮

ಪ್ರವಚನವತ್ಸಲರಾದ ಡಾ.ತ.ಸು.ಶಾಮರಾಯರು, ಕನ್ನಡ ನುಡಿ, ೬೧-೧, ೨, ಜ.ಫೆ. ೧೯೯೬, ಪು. ೧೨-೧೪, ಶಾಸ್ತ್ರೀಯ-೫, ಪು. ೩೬೮-೩೭೨

ಪ್ರಾತಃಸ್ಮರಣೀಯರಾದ ಪ್ರೊ.ಎ.ಆರ್.ಕೃಷ್ಣಶಾಸ್ತ್ರಿಗಳು, ಉತ್ಥಾನ, ಫೆ. ೧೯೯೬, ಪು. ೯೮ -೧೦೩, ಮಾರ್ಗದರ್ಶಕ ಮಹನೀಯರು, ಪು. ೨೭೪-೨೮೯

ಮಾನವತೆ -ಮುಗ್ಧತೆ(ಡಾ.ಸಿ.ಪಿ.ಕೃಷ್ಣಕುಮಾರ್), ‘ಸಾರ್ಥಕ’, ಡಾ.ಸಿ.ಪಿ.ಕೆ. ಅಭಿನಂದನ ಗ್ರಂಥ, ವಾಗ್ದೇವಿ ಪುಸ್ತಕಗಳು, ಮೈಸೂರು, ಪು. ೫೨-೫೪. ಮಾರ್ಗದರ್ಶಕ ಮಹನೀಯರು, ಪು. ೪೯೭ -೪೯೯

ಮುಮ್ಮಡಿ ಕೃಷ್ಣರಾಜ ಒಡೆಯರ ಪೋಷಣೆಯ ಮೂವರು ಸಂಸ್ಕೃತ ವಿದ್ವಾಂಸರು, ‘ಧನ್ಯಜೀವಿ’, ಅನಾಥ ಸೇವಾಶ್ರಮ ವಿಶ್ವಸ್ಥ ಸಮಿತಿ, ಮಲ್ಲಾಡಿಹಳ್ಳಿ, ಹೊಳಲ್ಕೆರೆ ತಾ. ೧೯೯೧, ಪು. ೨೯೫-೩೦೯, ಶಾಸ್ತ್ರೀಯ-೪, ಪು. ೨೯೮-೩೦೯

ರಾಘವಾಚಾರ್ಯ ಕ.ವೆಂ., ನಾಂದೀಪದ, ‘ನಂದಾ ನೆನಪು’. ಉಷಾ ಸಾಹಿತ್ಯ ಮಾಲೆ, ಮೈಸೂರು ೧೯೭೩; ಪು.vi-xvii ; ‘ಸಾಹಿತ್ಯ ಶಿಲ್ಪಿಗಳು’, ೧೯೮೫, ಪು. ೭೪-೮೧, ಮಾರ್ಗದರ್ಶಕ ಮಹನೀಯರು, ಪು. ೩೪೦ -೩೪೬

ರಾಳ್ಲಪಲ್ಲಿ ಅನಂತಕೃಷ್ಣಶರ್ಮ: ಗುರುವಂದನೆ, ‘ಅನಂತರಾಗಂ’, ಆರ್. ಅನಂತಕೃಷ್ಣಶರ್ಮ ಅಭಿನಂದನ ಗ್ರಂಥ, ಮೈಸೂರು, ೧೯೭೭, ಪು. ೨೬೧-೬೪; ‘ಸಾಹಿತ್ಯ ಶಿಲ್ಪಿಗಳು’, ೧೯೮೫, ಪು. ೫೪-೫೭, ಮಾರ್ಗದರ್ಶಕ ಮಹನೀಯರು ಶಾಸ್ತ್ರೀಯ -೫, ಪು ೨೯೦-೨೯೭

ರಾಳ್ಲಪಲ್ಲಿ ಅನಂತಕೃಷ್ಣಶರ್ಮ: ಜೀವನ ಸಾಧನೆ, ಪುಸ್ತಕ ಪ್ರಪಂಚ, ೪೪ -೩, ನ. ೧೯೯೩, ಪು. ೬-೧೫, ಶಾಸ್ತ್ರೀಯ -೫, ಪು. ೨೯೭ -೩೦೦

ರೆವರೆಂಡ್ ಎಫ್. ಕಿಟ್ಟೆಲ್ ಸ್ಮರಣೆ, ‘ಶ್ರೀಮುಖ’, ೧೯೯೭, ಪು. ೨೩೮-೬೭, ಶಾಸ್ತ್ರೀಯ-೧, ಪು. ೩೨೫ -೫೨

ವೃಷಭೇಂದ್ರಸ್ವಾಮಿ, ಎಸ್.ಎಂ., ‘ಸಹೃದಯಿ’, ಎಸ್.ಎಂ.ವೃಷಭೇಂದ್ರಸ್ವಾಮಿ ಅಭಿನಂದನ ಗ್ರಂಥ, ನರೇಗಲ್ಲ, ೧೯೯೭, ಪು. ೪೭೨-೭೬, ಮಾರ್ಗದರ್ಶಕ ಮಹನೀಯರು, ಪು. ೪೫೧-೪೫೪

ವೆಂಕಣ್ಣಯ್ಯ ಟಿ.ಎಸ್.: ನೆನಪುಗಳ ನೆನಪು, ಪ್ರಕ., ೬೭-೪, ೧೯೮೬, ಪು. ೧೨೯-೩೩

ವೈದ್ಯನ ವ್ಯಾಧಿ ಅಥ್ವಾ ನೆರೆಹೊರ್ಕೆ ನೆರೆಹೊರ್ಕೆನೇವೇಯೇ(ಕೈಲಾಸಂ), ಪ್ರಕ., ೬೬-೨, ೧೯೮೪, ಪು. ೨೨೫ -೩೦

ಶಾಮರಾವ್ ಎಂ: ಜೀವನ ಪರಿಚಯ, ಕಸಾಪ,. ೬೯-೨, ೧೯೮೪, ಪು. ೭೮-೮೮; 'ಸಾಹಿತ್ಯ ಶಿಲ್ಪಿಗಳು', ೧೯೮೫, ಪು. ೭-೧೭

ಶಾಮಶಾಸ್ತ್ರೀ ಆರ್. 'ಸಾಹಿತ್ಯ ಶಿಲ್ಪಿಗಳು', ೧೯೮೫, ಪು. ೨೪-೩೩

ಶಿವರುದ್ರಪ್ಪ ಜಿ.ಎಸ್.: ಎರಡು ಸಂದರ್ಭಗಳು, 'ಸ್ನೇಹಕಾರ್ತೀಕ', ಜಿ.ಎಸ್. ಶಿವರುದ್ರಪ್ಪ ಅಭಿನಂದನ ಗ್ರಂಥ, ತ.ವೆಂ.ಸ್ಮಾರಕ ಗ್ರಂಥಮಾಲೆ, ಮೈಸೂರು, ೧೯೭೭, ಪು.೯೨-೯೬; 'ಸಾಹಿತ್ಯ ಶಿಲ್ಪಿಗಳು', ೧೯೮೫, ಪು.೧೨೬-೨೯, ಮಾರ್ಗದರ್ಶಕ ಮಹನೀಯರು

ಶ್ರೀಕಂಠಯ್ಯ ಬಿ.ಎಂ., 'ಇಕ್ಷುಕಾವೇರಿ', ೪೮ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ನೆನಪಿನ ಸಂಚಿಕೆ, ಮಂಡ್ಯ, ೧೯೭೪, ಪು. ೨೩೫-೪೭; 'ಸಾಹಿತ್ಯ ಶಿಲ್ಪಿಗಳು', ೧೯೮೫, ಪು. ೩೮-೫೩

ಶ್ರೀಕಂಠಶಾಸ್ತ್ರೀ ಎಸ್., 'ಸಾಹಿತ್ಯ ಶಿಲ್ಪಿಗಳು' ೧೯೮೫, ಪು. ೬೫- ೭೩

ಶ್ರೀಯವರು ಮತ್ತು ಕನ್ನಡ ಸಾಹಿತ್ಯ ಪರಿಷತ್ತು, ಪ್ರಕ., ೬೫-೬, ೧೯೮೪, ಪು. ೨೨೫-೩೪

'ಶ್ರೀರಾಮಾಯಣದರ್ಶನಂ' ಕಾವ್ಯದಲ್ಲಿ ಕುಂಭಕರ್ಣ, 'ಸಹ್ಯಾದ್ರಿ', ಕುವೆಂಪು ಅಭಿನಂದನ ಗ್ರಂಥ, ಮೈಸೂರು, ೧೯೭೫, ಪು. ೪೪೬-೫೦; ಹೊಸಸಾ. ೧೯೮೨, ಪು. ೮೩-೮೮, ಶಾಸ್ತ್ರೀಯ-೪, ಪು. ೪೮೮-೪೯೩

ಡಿ.ಕೆ. ಭೀಮಸೇನರಾವ್, ಶಾಸ್ತ್ರೀಯ-೫, ಪು. ೩೩೭-೩೪೯

'ಶ್ರೀ ವಿದ್ಯಾರಣ್ಯ ವಿಜಯ' (ಡಿ.ವಿ.ಜಿ.) 'ಧೀಮಂತ', ಡಿವಿಜಿ. ಸಂಸ್ಮರಣ ಗ್ರಂಥ, ಗೋಖಲೆ ಸಾರ್ವಜನಿಕ ಸಂಸ್ಥೆ, ಬೆಂಗಳೂರು, ೧೯೮೮, ಪು. ೬೪೩-೪೯; 'ಡಿವಿಜಿ. ಸಮಗ್ರ ಕೃತಿಪರಿಶೀಲನೆ', ಕೋಲಾರ ೧೯೮೮, ಪು. ೨೦೬, ಶಾಸ್ತ್ರೀಯ-೪, ಪು. ೪೪೬-೪೫೦

'ಸತ್ಯ-ಅಹಿಂಸೆ' ಕೃತಿಯಲ್ಲಿ ಅಹಿಂಸೆಯ ವ್ಯಾಖ್ಯೆ, 'ಗೊರೂರು ಗೌರವ ಗ್ರಂಥ', ಮೈಸೂರು, ೧೯೭೩, ಪು. ೩೪೪-೫೦, ಶಾಸ್ತ್ರೀಯ-೪, ಪು ೫೦೧-೫೦೬

ಸಾಹಸಿ-ಸಾಧಕ (ಜೀ.ಶಂ.ಪರಮಶಿವಯ್ಯ) 'ಜಾನಪದ ಸಂಭಾವನೆ', ಡಾ.ಜೀ,ಶ. ಪರಮಶಿವಯ್ಯ ಅಭಿನಂದನ ಗ್ರಂಥ, ತ.ವೆಂ. ಸ್ಮಾರಕ ಗ್ರಂಥಮಾಲೆ, ೧೯೯೧, ಪು. ೪೪೪ -೪೮, ಶಾಸ್ತ್ರೀಯ-೫, ಪು. ೪೮೪-೪೮೭

'ಸಂಪ್ರತಿ' ಪ್ರಶಸ್ತಿಗಳ ಮೆರುಗು, ಗ್ರಂಥಲೋಕ, ೧೪-೨, ೧೯೯೦, ಪು. ೨-೩

'ಸಿಂಧುವಳ್ಳಿ ಅನಂತಮೂರ್ತಿ': ಮಿತ್ರನಿಗೊಂದು ಮುಖವರ್ಣಿಕೆ, 'ಕಲಾ ಸುರುಚಿ', ಡಾ.ಸಿಂಧುವಳ್ಳಿ ಅನಂತಮೂರ್ತಿ ಗೌರವ ಗ್ರಂಥ, ಮೈಸೂರು, ೧೯೯೧, ಪು. ೪೧-೪೩, ಶಾಸ್ತ್ರೀಯ -೫, ಪುಟ. ೪೮೧-೪೮೩

ಸುಬ್ಬರಾವ್ ತ.ರಾ.: ಅಸಾಮಾನ್ಯ ಸಾಧಕ, 'ಗಿರಿಮಲ್ಲಿಗೆ', ತರಾಸು ಸಂಸ್ಮರಣ ಗ್ರಂಥ, ಚಿತ್ರದುರ್ಗ, ೧೯೮೫, ಪು. ३೮-४೨; 'ಸಾಹಿತ್ಯ ಶಿಲ್ಪಿಗಳು', ೧೯೮೫, ಪು. ೧೧೭-೨೧

ಸೋಸಲೆ ಅಯ್ಯಶಾಸ್ತ್ರಿಗಳು: ಜೀವನ, ಕೃತಿಗಳು, ಬಿಎಂಶ್ರೀ ಪ್ರತಿಷ್ಠಾನದ ವಿಚಾರ ಸಂಕಿರಣ, ೧೯೯೫,

ಹೆಮ್ಮಿಗೆ ದೇಶಿಕಾಚಾರ್ಯ, ಜೀವನ, ೨೬-೯, ಮಾರ್ಚ್ ೧೯೬೭, ಪು. ೩೦೬-೦೯; 'ಸಾಹಿತ್ಯ ಶಿಲ್ಪಿಗಳು', ೧೯೮೫, ಪು. ೫೮-೬೪. ಮಾರ್ಗದರ್ಶಕ ಮಹನೀಯರು, ಶಾಸ್ತ್ರೀಯ-೫ ಪುಟ ೩೩೧-೩೩೬

ಆಧುನಿಕ ಸಾಹಿತ್ಯ : ಪ್ರಬುದ್ಧ ಕರ್ಣಾಟಕದ ಸಂಪಾದಕೀಯಗಳು, ಸಾಹಿತಿಗಳು

ಅಭಿನಂದನೆ: ೧೯೮೭ರ ಗಣರಾಜ್ಯೋತ್ಸವ ಕೇಂದ್ರ ಪ್ರಶಸ್ತಿಗಳು, ೫೭-೪, ೧೯೭೬, ಪು. ೮೧

ಇಂಚಲ ಎಸ್.ಡಿ. ೫೬-೨, ೧೯೭೪, ಪು. ೭೫

ಉಡುಪಿ ವೆಂಕಟಕೃಷ್ಣರಾವ್, ೫೫-೪, ೧೯೭೩, ಪು. ೧೫೨

ಉಪಾಧ್ಯೇ ಆ.ನೇ. ೫೭-೩, ೧೯೬೫, ಪು. ೬೭-೬೮

ಕೃಷ್ಣಮೂರ್ತಿ ಎಂ.ಜಿ. ೫೭-೧, ೧೯೭೫, ಪು. ೯೭

ಗುಂಡಪ್ಪ ಡಿ.ವಿ. ೫೭-೩, ೧೯೭೫, ಪು. ೬೬-೬೭

ಜಯಚಾಮರಾಜ ಒಡೆಯರ್, ೫೬-೩, ೧೯೭೪, ಪು. ೧೦೭-೦೮

ಧರಣೇಂದ್ರಯ್ಯ ಕೆ.ಎಸ್. ೫೩-೩, ೧೯೭೧, ಪು. ೧೬೨

ನಂದೀಮಠ ಶಿ.ಚೆ. ೫೭-೩, ೧೯೭೫, ಪು. ೬೯

ನರಸಿಂಹಾಚಾರ್ ಡಿ.ಎಲ್. ೫೩-೨, ೧೯೭೧, ಪು. ೧೮೮-೯೧

ನಾಗೇಶಶಾಸ್ತ್ರೀ ವೈ. ೫೭-೧, ೧೯೭೫, ಪು. ೯೭

ನಾಡಿಗ ನೀಲಕಂಠಪ್ಪ, ೫೫-೪, ೧೯೭೩, ಪು. ೧೫೧-೫೨

ನಾರಾಯಣ ಸಂಗಮ, ೫೫-೪, ೧೯೭೩, ಪು. ೧೫೨-೫೩

ನಿಕಂ ಎನ್. ಎ. ೫೬-೩, ೧೯೭೪, ಪು. ೧೦೬

ಪಂಜೆ ಮಂಗೇಶರಾವ್, ೫೫-೩, ೧೯೭೩, ಪು. ೧೨೨

ಭಾರತೀಸುತ (ಎಸ್.ಆರ್.ನಾರಾಯಣ ರಾವ್), ೫೭-೪, ೧೯೭೬, ಪು. ೮೦-೮೧

ಭೈರಪ್ಪ ಎಸ್.ಎಲ್. ೫೭-೩, ೧೯೭೫, ಪು. ೭೦

ಮಿರ್ಜಿ ಅಣ್ಣಾರಾಯ, ೫೭-೩, ೧೯೭೫, ಪು. ೬೯-೭೦

ಮೇವುಂಡಿ ಮಲ್ಲಾರಿ, ೫೭-೨, ೧೯೭೬, ಪು. ೯೭

ರಾಜ್ಯ ಸಾಹಿತ್ಯ ಅಕಾಡೆಮಿಯ ಸನ್ಮಾನಿತರು, ೫೫-೪, ೧೯೭೪, ಪು. ೧೪೫

ರುದ್ರಪ್ಪ ಜೆ. ೫೭-೩, ೧೯೭೫, ಪು. ೬೮-೬೯

ವೆಂಕಟರಾಮಯ್ಯ ಸಿ.ಕೆ. ೫೫-೧, ೧೯೭೩, ಪು. ೧೨೨

ಶಿವಮೂರ್ತಿಶಾಸ್ತ್ರೀ ಬಿ. ೫೭-೪, ೧೯೭೬, ಪು. ೭೮-೭೯

ಶಿವರಾಮಶಾಸ್ತ್ರೀ, ನಂ. ೫೫-೨, ೧೯೭೩, ಪು. ೧೩೭

ಶ್ರೀಕಂಠಶಾಸ್ತ್ರೀ ಎಸ್. ೫೬-೨, ೧೯೭೪, ಪು. ೭೫ -೭೬

ಶ್ರೀರಂಗ, ೫೪-೧, ೧೯೭೨, ಪು. ೧೦೪

ಸಚ್ಚಿದಾನಂದ ಸರಸ್ವತಿ ಸ್ವಾಮಿಗಳು, ೫೭-೨, ೧೯೭೫, ಪು. ೯೫-೯೬

ಸಂಪದ್ಗಿರಿರಾವ್ ಕೆ. ೫೫-೨, ೧೯೭೩, ಪು. ೧೩೬-೩೭

ಸಾಹಿತಿಗಳಿಗೆ ಪ್ರಶಸ್ತಿಪ್ರದಾನ, ೫೭-೧, ೧೯೭೩, ಪು. ೯೮

ಸಿದ್ಧವನಹಳ್ಳಿ ಕೃಷ್ಣಶರ್ಮ, ೫೫-೩, ೧೯೭೩, ಪು. ೧೨೦-೨೧

ಸುಬ್ಬರಾವ್ ತ.ರಾ. ೫೨-೨, ೧೯೭೦, ಪು. ೧೭೬

ಸುಬೋಧ ರಾಮರಾವ್ ೫೨-೧, ೧೯೭೯, ಪು. ೧೯೬-೯೭

ಹರ್ಡೀಕರ ನಾ.ಸು. ೫೭-೨, ೧೯೭೫, ಪು. ೯೬-೯೭

ಹಿರೇಮಠ ಆರ್.ಸಿ. ೫೨-೧, ೧೯೭೦, ಪು. ೧೯೫-೯೬

ಹುಯಿಲುಗೋಳ ನಾರಾಯಣರಾವ್, ೫೩-೨, ೧೯೭೧, ಪು. ೧೯೨

ಸಂಸ್ಥೆಯ ಕಾರ್ಯಗಳು

ಎಪಿಗ್ರಾಫಿಯ ಕರ್ನಾಟಿಕ, ಪರಿಷ್ಕರಣ ಮತ್ತು ಪುನರ್ಮುದ್ರಣ ಯೋಜನೆ, ೫೪-೩, ೧೯೭೨, ಪು. ೧೬೬-೬೫

ಎಪಿಗ್ರಾಫಿಯ ಕರ್ನಾಟಿಕ, ಎರಡನೆಯ ಸಂಪುಟ, ಕಛೇರಿ ಕೈಪಿಡಿಗಳ ಬಿಡುಗಡೆ, ೫೫-೪, ೧೯೭೪, ಪು. ೧೪೬

ಎರಡು ವಿಶ್ವಕೋಶಗಳು, ೫೩-೨, ೧೯೭೧, ಪು. ೧೯೫

ಪರಿಷ್ಕೃತ ಕಿಟ್ಟೆಲ್ ನಿಘಂಟುವಿನ ಮೂರನೆಯ ಸಂಪುಟದ ಬಿಡುಗಡೆ, ೫೩-೧, ೧೯೭೧, ಪು. ೧೫೬-೬೦

ಕನ್ನಡ ಸಾಹಿತ್ಯ ಪರಿಷತ್ತಿನ ಸುವರ್ಣಮಹೋತ್ಸವ ಭವನ, ೫೫-೪, ೧೯೭೪, ಪು. ೧೪೪

ಮಿಥಿಕ್ ಸೊಸೈಟಿಯ ವಜ್ರಮಹೋತ್ಸವ, ೫೫-೩, ೧೯೭೩, ಪು. ೧೧೯-೨೦

ಶಾಸನಾಧ್ಯಯನ, ಇತಿಹಾಸ

ಅರಿಕೇಸರಿ(೨), ಕವಿಕೋ. ಸಂ. ೧, ೧೯೬೯, ಪು. ೪೭೯-೭೧

ಆಹವಮಲ್ಲ ತೈಲಪ, ಕವಿಕೋ. ಸಂ. ೨, ೧೯೭೦, ಪು. ೧೩೯-೪೦

ಇತಿಹಾಸಕಾರ ಶಾಸನತಜ್ಞ ಡಾ.ಜಿ.ಎಸ್.ಗಾಯಿ, ಪ್ರಜಾವಾಣಿ, ೧೯-೨-೧೯೯೫, ಸಾಪ್ತಾಹಿಕ ಪುರವಣಿ, ಪು. ೫

ಇಜಿವಬೆಡಂಗ ಸತ್ಯಾಶ್ರಯ, ಕವಿಕೋ, ಸಂ. ೨, ೧೯೭೦, ಪು. ೪೧೭

ಕನ್ನಡನಾಡಿನ ಶಿಲ್ಪಕಲೆ, ತರಂಗ, ಉಸ್ಮಾನಿಯ ವಿಶ್ವವಿದ್ಯಾನಿಲಯದ ಕನ್ನಡ ಇಲಾಖೆ, ಹೈದರಾಬಾದು, ೧೯೬೫, ಪು. ೪೧-೪೪

ಕನ್ನಡನಾಡು, ಕಲಿಸಂ ಕಸಾಚ., ಸಂ. ೧, ೧೯೭೪. ಪು. ೨೦೯-೩೪

ಕನ್ನಡ ಶಾಸನಗದ್ಯ, 'ಚಿನ್ಮೂಲಾದ್ರಿ ಚೇತನ', ರಜತಮಹೋತ್ಸವ ಸ್ಮರಣಸಂಚಿಕೆ, ಚಿತ್ರದುರ್ಗ, ೧೯೮೯. ಪು. ೧೩೬-೩೯; 'ಶ್ರೀಮುಖ', ೧೯೯೭, ಪು. ೫೦೪-೧೦, ಶಾಸ್ತ್ರೀಯ-೨, ಪು. ೧೮೮-೧೯೩

ಕರ್ಣಾಟಕದ ಜಾನಾಂಗಿಕ ಹಿನ್ನೆಲೆ, ಸಮನ್ವಯ, ೧೬ ರಿಂದ ೧-೪ ಸೆ-ಡಿ, ೧೯೯೩, ಪು. ೬-೯

ಕರ್ಣಾಟಕ: ಪ್ರಾಚೀನ ಉಲ್ಲೇಖಗಳು, ಸಮನ್ವಯ, ೧೬-೫ ರಿಂದ ೭, ಜ-ಮಾ. ೧೯೯೪, ಪು. ೫-೯

ಕರ್ಣಾಟಕದ ಪ್ರಾಚೀನತೆ, 'ಅವಲೋಕನ', ಕರ್ನಾಟಕ ಪರಂಪರೆಯ ಸಮೀಕ್ಷೆ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೮೫, ಪು. ೧-೪

ಕರ್ಣಾಟಕ ವ್ಯುತ್ಪತ್ತಿ, ಕವಿಕೋ., ಸಂ. ೪, ೧೯೭೨, ಪು. ೧೯-೨೧, ಕವಿವಿ., ೧೯೭೯, ಪು. ೨೭೬-೭೮

ಕಲೆಯ ತವರು ದೇವಮಂದಿರಗಳು, ಪ್ರಜಾವಾಣಿ, ೧೭-೨ ೧೯೬೩, ಪು. ೧೦

ಕುಂತಲ, ವನವಾಸಿ, ಮಹಿಷಮಂಡಲ, ಕರ್ನಾಟಕ, ಉತ್ಥಾನ, ೨೯-೧, ಸೆ. ೧೯೯೬ ಪು. ೭೭-೮೧

ಕುಂತಳ, ಕವಿವಿ., ೧೯೭೯, ಪು. ೩೨೨-೨೩

ಕುಬ್ಜ, ಕವಿವಿ., ೧೯೭೯, ಪು. ೩೨೮

ಕೊಡಗು ಜಿಲ್ಲೆಯ ಶಾಸನಗಳು: ಕವಿಗಳು, ಲಿಪಿಕಾರರು, 'ಬ್ರಹ್ಮಗಿರಿ', ಭಾರತೀಸುತರ ಸಂಸ್ಮರಣ ಗ್ರಂಥ, ಶ್ರೀ ಕಾವೇರಿ ಪ್ರಕಾಶನ, ಮಡಿಕೇರಿ, ೧೯೭೭, ಪು. ೮೨-೮೫, ಪ್ರಾಕಸಾ. ೧೯೮೧, ಪು. ೯೦-೯೩, ಶಾಸ್ತ್ರೀಯ-೩, ಪು. ೪೦೧-೪೦೩

ಗೂಢಲೇಖ್ಯ, ಅಥವಾ ಗುಪ್ತಲೇಖನ ವಿಧಾನ (ಅನು), ಜೀವನ, ೧೪-೬, ಅ. ೧೯೫೩, ಪು. ೨೬೧-೬೩

ಚ(ಛ)ಪ್ಪನ್ನ ದೇಶಗಳು, ಪ್ರಕ., ೪೬-೨, ೧೯೬೪, ಪು. ೫೯-೬೭, 'ಸಾಹಿತ್ಯ ಮಂಥನ', ೧೯೭೨, ಪು. ೧೪೧-೫೨, ಶಾಸ್ತ್ರೀಯ ೪, ಪು ೧೧೦-೧೧೭

ಜಲಗಾರ ದಿಬ್ಬದ ಶಾಸನ, ಪುಸ್ತಕ ಪುರವಣಿ, ೨-೩, ಮಾ. ೧೯೭೮, ಪು. ೭, ೧೬

ಜಿನವಲ್ಲಭನ ಕುರ್ಕ್ಯಾಲ ಶಾಸನದ ಅರ್ಥ, Jainism: A study, University of Mysore, 1976, p. 121-27, 'ಶಬ್ದಾರ್ಥವಿಹಾರ', ೧೯೭೯, ಪು. ೨೩-೩೨, ಶಾಸ್ತ್ರೀಯ-೧, ಪು. ೨೫೫ -೨೬೩

ಬಾದಾಮಿ ಶಾಸನದ ಅರ್ಥ, 'ಶ್ರೀಕಂಠತೀರ್ಥ', ತೀ.ನಂ.ಶ್ರೀಕಂಠಯ್ಯನವರ ಸಂಸ್ಮರಣ ಗ್ರಂಥ, ಬೆಂಗಳೂರು, ೧೯೭೬, ಪು. ೬೭೯-೮೦; 'ಶಬ್ದಾರ್ಥವಿಹಾರ', ೧೯೭೯, ಪು. ೧೨-೨೨, ಶಾಸ್ತ್ರೀಯ-೧, ಪುಟ ೨೪೫ -೨೫೪

ಬಾಳ್ಗಳ್ಚು: ಒಂದು ಟಿಪ್ಪಣಿ(ಅನು), ಪ್ರಕ., ೬೩-೪, ೧೯೮೨, ಪು. ೯೪-೯೬, ಶಾಸ್ತ್ರೀಯ-೧, ಪುಟ ೧೦-೧೧

ಬೆಂಗಳೂರು ಜಿಲ್ಲೆ: ಇತಿಹಾಸ, ಸಾಹಿತ್ಯ, ಕಸಾಪ., ೫೯-೨, ೧೯೭೪, ಪು. ೨೪-೩೩ ಹೊಸಸಾ. ೧೯೮೨, ಪು. ೬೧-೬೯, ಶಾಸ್ತ್ರೀಯ-೪, ಪುಟ ೫೯೭-೬೦೪

ಭಾರತೀಯ ಜನಜೀವನ, ಮಾನಕ., ೧೦-೩, ೪, ೧೯೮೦, ಪು. ೪೭-೬೦; ೧-೨೩

ಶ್ರುತಕೇವಲಿ ಭದ್ರಬಾಹು: ಗೋವಿಂದ ಪೈ ವಿಚಾರಗಳು, ಕಸಾಪ., ೬೯-೧, ೧೯೮೪, ಪು. ೪೫-೫೦; 'ಶ್ರೀಮುಖ', ೧೯೯೭, ಪು. ೨೬೮-೭೨, ಶಾಸ್ತ್ರೀಯ-೪, ಪು. ೪೩೩-೪೩೭

ಹಲ್ಮಿಡಿ ಶಾಸನದ ಅರ್ಥ, ಮಾನಕ. ೨-೩ ಮೇ ೧೯೭೨, ಪು. ೩೯-೪೬; 'ಶಬ್ದಾರ್ಥ ವಿಹಾರ' ೧೯೭೯, ಪು. ೧-೧೧ ಶಾಸ್ತ್ರೀಯ-೧, ಪು ೨೧೫-೨೩೪

ಸಂಸ್ಕೃತಿ, ಸಂಕೀರ್ಣ

ಅಸ್ವಾಮಿನ ಅಂಕಿಯಾ ನಾಟ್ (ಅನು). ಕನು, ೨೧-೬, ಜೂನ್ ೧೯೫೮, ಪು. ೧೮೦ -೮೨; ಸಾಹಿತ್ಯಮಂಥನ ೧೯೭೨, ಪು. ೨೬೦-೬೭

ಕನ್ನಡ ಗಾದೆಗಳ ಅಪಭ್ರಂಶ, ನಗುವ ನಂದ, ದೀಪಾವಳಿ ಸಂಚಿಕೆ, ೧೯೫೮, ಪು. ೭೨-೭೬

ಕಬೀರ್, 'ಅಂಜಲಿ', ಗಾಂಧಿಭವನ, ಮಾನಸಗಂಗೋತ್ರಿ, ಮೈಸೂರು, ೧೯೭೪, ಪು. ೨೧೭-೨೮

ಕರ್ನಾಟಕದ ಯಕ್ಷಗಾನ(ಅನು), ಪ್ರಕ., ೩೬-೨, ೧೯೫೪-೫೫, ಪು. ೧೫೦, 'ಸಾಹಿತ್ಯ ಮಂಥನ', ೧೯೭೨, ಪು. ೨೩೦-೩೭

ಕರ್ನಾಟಕದ ಜೈನ ಸಾಂಸ್ಕೃತಿಕ ಪ್ರತಿಭೆ, ಕನು., ೫೦-೧೯, ೨೦, ಅ. ೧೯೮೮, ಪು. ೨-೬

ಕಲೆ ಮತ್ತು ಸಾಹಿತ್ಯ (ಅನು.) ಕನು. ೧೯೬೧, ಸಾಹಿತ್ಯ ಮಂಥನ, ೧೯೭೨, ಪು. ೨೧೬-೨೦

ಕೆಲವು ಆರೋಪಣೆಗಳು, ಕನು., ೨೦-೧೧, ನ. ೧೯೫೭, ಪು. ೩೦೫-೦೬

ತಾನು ಮತ್ತು ಸಮುದಾಯ(ಅನು.), 'ಮಹಾತ್ಮಾಗಾಂಧಿ: ೧೦೦ ವರ್ಷಗಳು', ಗಾಂಧಿ ಭವನ, ಮಾನಸಗಂಗೋತ್ರಿ, ಮೈಸೂರು, ೧೯೭೦, ಪು. ೨೭೪-೭೯

ದೀರ್ಘಜೀವಿಗಳು: ವಿಲಕ್ಷಣ ಮನೋಧರ್ಮ, 'ಪ್ರಜಾವಾಣಿ', ೧೮-೧೨-೧೯೫೫, ಪು. ೬-೭

ದಕ್ಷಿಣ ಭಾರತದ ಶೈವಸಂತರು(ಅನು.), ಯುಗಯಾತ್ರೀ ಭಾರತೀಯ ಸಂಸ್ಕೃತಿ, ಸಂ. ೪, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು -೧೯೮೮, ಪು. ೨೫೯-೬೬

ಧರ್ಮಗ್ರಂಥಗಳ ವ್ಯಾಸಂಗವಿಧಾನ (ಅನು.) ವಿಕ್ರಮ, ೩೧-೩-೧೯೫೫, ೭-೪-೧೯೫೫, ಬೆಂಗಳೂರು

ನಮ್ಮ ಪ್ರಾಚೀನ ವಾದ್ಯಯಂತ್ರಗಳು, ಜನಪ್ರಗತಿ, ಜೂನ್ ೨೧, ೧೯೫೩, ಪು. ೧೪-೧೯

ನಮ್ಮೂರಿನ ಗ್ರಾಮದೇವತೆಯರ ಉತ್ಸವ, ಜನಪ್ರಗತಿ, ಆಗಸ್ಟ್ ೨೨, ೧೯೫೪,

ಬಾಳಿಗೊಂದು ನಂಬಿಕೆ, ವಿಕ್ರಮ, ಬೆಂಗಳೂರು, ಮಾರ್ಚ್ ೨೧, ೧೯೫೭ ರಿಂದ ಮೇ ೧೯೫೭, ಪು. ೮

ಬುದ್ಧನ ಜನನ, ಕನು., ೨೧-೫, ಮೇ ೧೯೫೮, ಪು. ೧೬೩-೬೪

ಭವಿಷ್ಯದ ಬೀಜಗಳು (ಅನು.) 'ಮಹಾತ್ಮಾಗಾಂಧಿ' ೧೦೦ ವರ್ಷಗಳು, ಗಾಂಧಿ ಭವನ, ಮಾನಸಗಂಗೋತ್ರಿ, ಮೈಸೂರು, ೧೯೭೦, ಪು. ೧೩೦-೩೪

ಭಾರತೀಯ ಈಶ್ವರವಾದ(ಅನು.), ಯುಗಯಾತ್ರೀ ಭಾರತೀಯ ಸಂಸ್ಕೃತಿ, ಸಂ. ೩, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೫, ಪು. ೩೭೬ -೮೫

ಮಕರ ಸಂಕ್ರಾಂತಿ: ಅರ್ಥ, ಆಚರಣೆ, ಪ್ರಜಾವಾಣಿ, ೧೦-೧-೧೯೮೨, ಪು. i-v

ಮಹಾಶಿವರಾತ್ರಿ, ಪ್ರಜಾವಾಣಿ, ೧೯೫೫

ಶ್ರೀಶಂಕರ ಭಗವತ್ಪಾದರ ಲೋಕಸಂಗ್ರಹಕಾರ್ಯ, ಶಂಕರ ಕೃಪ, ಬೆಂಗಳೂರು

ಶ್ರೀ ಶಂಕರರು: ಜೀವನ, ಸಂದೇಶ, ಹಳ್ಳಿಯ ಸಂದೇಶ (ವಾರಪತ್ರಿಕೆ), ಬೆಳಗಾಂ, ೧೪-೧೭, ೧೫-೧-೧೯೯೬

ಸಂಕ್ರಾಂತಿ: ಅರ್ಥ, ಕ್ರಿಯಾಕಲ್ಪ, ಉತ್ಥಾನ, ಜ. ೧೯೯೭, ಪು. ೫-೧೧

ಬ್ರಾಹ್ಮಣ್ಯ: ಕೆಲವು ಚಿಂತನೆಗಳು, ಜ್ಞಾನಸುಧಾ, ವಿವೇಕಾನಂದ ಬ್ರಾಹ್ಮಣ ಮಹಾ ಸಭಾ, ಮೈಸೂರು -೧೫-೧೦-೨೦೦೩, ಪು. ೨೧-೨೨

ಶಿಕ್ಷಣ

ಕನ್ನಡದಲ್ಲಿ ಹೆಚ್ಚಿನ ಮಟ್ಟದ ಪರೀಕ್ಷೆಗಳು, ವಿದ್ಯಾದಾಯಿನಿ, ೧೯೫೫-೫೬, ಪು. ೨೬-೩೨

ಕನ್ನಡದ ಸಾಹಿತ್ಯಪ್ರಧಾನ ಪತ್ರಿಕೆಗಳು, 'ಸಾಹಿತ್ಯನಂದನ', ಸರ್ಕಾರಿ ಉಪಾಧ್ಯಾಯ ಪ್ರಶಿಕ್ಷಣ ಸಂಸ್ಥೆ, ಮೈಸೂರು, ೧೯೭೪-೭೬, ಪು. ೨-೯; ಹೊಸಸಾ. ೧೯೮೨, ಪು. ೨೬-೩೩

ಕೈ ಬರೆಹದ ಕೆಲವು ಸ್ವಾರಸ್ಯಗಳು, ವಿದ್ಯಾದಾಯಿನಿ, ೩೨-೬, ಡಿ. ೧೯೫೬, ಪು. ೧೮೯-೯೨

ಪ್ರೌಢತರಗತಿಗಳಲ್ಲಿ ಕನ್ನಡ ಪದ್ಯಪಾಠಕ್ರಮ, ವಿದ್ಯಾದಾಯಿನಿ, ೩೧-೨, ಆ. ೧೯೫೫, ಪು. ೪೭ -೫೪

ರಾಕ್‌ಫೆಲರ್ ಫೌಂಡೇಶನ್(ಅನು.), ಸುಬೋಧ, ೩೧-೭, ಜು. ೧೯೫೭, ಪು. ೧೩-೧೬

ಶಿಕ್ಷಣರಂಗದಲ್ಲಿ ಕನ್ನಡ, 'ಕನ್ನಡದ ಅಳಿವು -ಉಳಿವು', ಕನ್ನಡ ಭಾಷಾ ಅಭಿವೃದ್ಧಿಯ ಸಮೀಕ್ಷಾ ಪ್ರಕಾಶನ, ವಿಜಯನಗರ, ಬೆಂಗಳೂರು, ೧೯೮೫, ಪು. ೧೪೪-೫೫

ಸರ್ವಪಲ್ಲಿ ರಾಧಾಕೃಷ್ಣನ್: ಅಧ್ಯಾಪಕರಾಗಿ, ಉತ್ಥಾನ, ಸ. ೧೯೯೧, ಪು. ೨೬-೩೧

ಸ್ಫುಟ ಮತ್ತು ಶುದ್ಧಾಕ್ಷರಾಭ್ಯಾಸ ಕ್ರಮ, ವಿದ್ಯಾದಾಯಿನಿ, ೧೯೫೫-೫೬ ಪು. ೧೫೫-೬೦

ಸಾಹಿತ್ಯ ವಿಮರ್ಶೆ, ಸಂಶೋಧನೆ

ಕನ್ನಡ ನೇಮಿನಾಥ ಪುರಾಣಗಳ ತೌಲನಿಕ ಅಧ್ಯಯನ, ಪ್ರಸಾರಾಂಗ, ಮೈಸೂರು ವಿ.ವಿ. ಮೈಸೂರು-೬, ಪು. xiv+೫೫೪, ೧೯೭೩

ಚಾಮುಂಡರಾಯ, ಪ್ರಸಾರಾಂಗ, ಮೈಸೂರು ವಿ.ವಿ. ಪು. vii+೭೧+iv, ೧೯೭೩

ಜೈನ ಭಾಗವತ ಭಾರತಗಳು, ತ.ವೆಂ.ಸ್ಮಾರಕ ಗ್ರಂಥಮಾಲೆ, ಗೋಕುಲಂ, ಮೈಸೂರು-೪, ಪ್ರ.ಮು. ೧೯೮೦, ಪು.vi+೧೭೬

ನಮ್ಮ ಕರ್ನಾಟಕ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ೧೮, ಪು.xii+೧೬೮, ಪ್ರ.ಮು. ೧೯೮೩, ದ್ವಿ.ಮು. ೧೯೯೭, ತೃ.ಮು. ೨೦೦೧

ಪಂಪ, ಸಾಹಿತ್ಯ ಅಕಾಡೆಮಿ, ನವದೆಹಲಿ, ಪು. ೧೧೨, ೧೯೮೭, ದ್ವಿ.ಮು. ೧೯೯೬

ಪ್ರಾಚೀನ ಕನ್ನಡ ಸಾಹಿತ್ಯ-ಕೆಲವು ನೋಟಗಳು, ಗೀತಾ ಬುಕ್ ಹೌಸ್, ಮೈಸೂರು-೧, ಪು. ೧೭೬, ೧೯೮೧

ಮೂರು ಸಮೀಕ್ಷೆಗಳು, ಉಷಾ ಸಾಹಿತ್ಯಮಾಲೆ, ಮೈಸೂರು ಪು. viii+೧೫೬, ೧೯೮೧.

ಸಾಹಿತ್ಯ ಮಂಥನ, ಕರ್ನಾಟಕ ಸಹಕಾರಿ ಮುದ್ರಣಾಲಯ, ಬೆಂಗಳೂರು, ೧೯೭೨ ಪು. vi+೩೪೫

ಹಳೆಯ ಹೊನ್ನು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು-೭ ೧೯೯೧, ಪು. viii+೨೦೨

ಹೊಸಗನ್ನಡ ಸಾಹಿತ್ಯ ಕೆಲವು ನೋಟಗಳು, ಅಪರ್ಣ ಪ್ರಕಾಶನ, ಮೈಸೂರು -೧೯೮೨, ಪು. ೧೨೫

ಕನಕಪುರ ಎಂಬ ಕಾನಕಾನಹಳ್ಳಿಯ ಚರಿತ್ರೆ, ಪುಸ್ತಕ ಶಕ್ತಿ ಪ್ರಕಾಶನ, ಟಾಟಾ ಸಿಲ್ಕ್ ಫಾರ್ಮ್, ಬೆಂಗಳೂರು, ೨೦೦೭ ಪು. xx+೨೫೪+೩೦

ಡಾ. ಶಂಬಾ ಜೋಶಿ ಅಧ್ಯಯನ ಪೀಠ -ಸಂಶೋಧನ ಕಮ್ಮಟದ ಸಮಾರೋಪ ಭಾಷಣ ೧೮-೧೧-೦೫ ಅಧ್ಯಯನದ ವಿಧಿವಿಧಾನಗಳು, ಪ್ರಸಾರಾಂಗ, ಕನ್ನಡ ವಿ.ವಿ., ಹಂಪಿ, ೨೦೦೮, ಪು. ೭೭-೮೭

ಅಧ್ಯಕ್ಷಭಾಷಣ, ಕನಕಪುರ ತಾ. ಕನ್ನಡ ಸಾಹಿತ್ಯ ಸಮ್ಮೇಳನ, ಕನಕಪುರ, 'ಕನಕರಶ್ಮಿ' ನೆನಪಿನ ಸಂಚಿಕೆ, ೧೯೯೧, ಪು. ೧-೭

ಅಧ್ಯಕ್ಷಭಾಷಣ, ಮೈಸೂರು ತಾ. ಕನ್ನಡ ಸಾಹಿತ್ಯ ಸಮ್ಮೇಳನ, ಜಯಪುರ, ಮೈಸೂರು ಜಿಲ್ಲಾ ಕಸಾಪ. ಮುದ್ರಿತ ಭಾಷಣ, ೨೬-೩-೧೯೯೫, ಪು. ೧-೧೪

ಅಧ್ಯಕ್ಷಭಾಷಣ, ಬೆಂಗಳೂರು ಗ್ರಾಮಾಂತರ ಜಿಲ್ಲಾ ೧೧ನೆಯ ಕನ್ನಡ ಸಾಹಿತ್ಯ ಸಮ್ಮೇಳನ, ಕುದೂರು, ಮಾಗಡಿ ತಾಲೂಕು, ೨೦೦೮

'ಅನಂತನಾಥ ಪುರಾಣಂ ಕಾವ್ಯಸಂಗ್ರಹ', ಪ.ನಾಗರಾಜಯ್ಯ, ಸನ್ಮತಿ ಪ್ರಕಾಶನ, ಮೈಸೂರು ೧೯೯೪, ಪು. ೩-೩೧ (ಮು), ಶಾಸ್ತ್ರೀಯ -೬

'ಅರಳು ಮರಳಿ', ಶಿವರಾಮು, ಪ್ರಸನ್ನ ಪ್ರಕಾಶನ, ಚಿತ್ರದುರ್ಗ, ೧೯೭೯ (ಮು.)

ಅಶಿಸ್ತಿನ ವಿಜೃಂಭಣೆ, ಪುಸ್ತಕ ಪುರವಣಿ, ೨-೧, ಏ, ೧೯೭೯, ಪು. ೧೧, ೧೨

ಉಪೋದ್ಘಾತ (ಕವಿಚರಿತ್ರೆ, ಕಾವ್ಯ ಸಮೀಕ್ಷೆ, ಪರಿಷ್ಕರಣಗಳು), **'ಕುಮಾರ ವ್ಯಾಸಭಾರತ ಸಂಗ್ರಹ'**, ಸಂ. ಎಂ.ವಿ.ಸೀತಾರಾಮಯ್ಯ, ಬಿಎಂಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು -೧೯೯೧, ಶಾಸ್ತ್ರೀಯ-೬

'ಕನ್ನಡ ಆದಿತೀರ್ಥಂಕರ ಚರಿತೆಗಳು', ಸರಸ್ವತಿ ವಿಜಯಕುಮಾರ್, ಸವಿಪ್ರಕಾಶನ, ಮೈಸೂರು, ೧೯೯೪, ಪು. vii-xi (ಮು.)

ಕನ್ನಡದಲ್ಲಿ ಸಂಶೋಧನೆ, ಹೊಸಸಾ., ೧೯೮೨, ಪು. ೩೪ ೪೦, ಶಾಸ್ತ್ರೀಯ ೪, ಪು. ೫೪೭ ೫೫೨

'ಕನ್ನಡ ಸಾಹಿತ್ಯ ಚರಿತ್ರೆ' ರಂ.ಶ್ರೀ.ಮುಗಳಿ, ಗ್ರಂಥಲೋಕ, ಜ. ೧೯೮೧, (ವಿ); ಹೊಸಸಾ., ೧೯೮೨, ಪು. ೧೦೪-೧೬, ಶಾಸ್ತ್ರೀಯ -೪, ಪು. ೪೯೯-೫೦೦

ಕನ್ನಡ ಸಾಹಿತ್ಯ ಸಮೀಕ್ಷೆ: ಸಂಶೋಧನೆ, ಪುಸ್ತಕ ಪುರವಣಿ, ಏ, ೧೯೭೮; ಹೊಸಸಾ., ೧೯೮೨, ಪು. ೪೧-೪೨

ಕನ್ನಡ ಸಾಹಿತ್ಯ: ಸಂಶೋಧನೆ, ಗ್ರಂಥಲೋಕ, ಜ. ೧೯೮೧, ಜೂನ್ ೧೯೮೧, ಜೂನ್ ೧೯೮೨, ಜೂನ್ ೧೯೮೩, ಜೂನ್ ೧೯೮೪, ಜೂನ್ ೧೯೮೬; ಹೊಸಸಾ., ೧೯೮೨, ಪು. ೪೨-೬೦ (೧೯೭೯-೮೧), ಶಾಸ್ತ್ರೀಯ-೪, ಪು. ೫೫೩-೫೭೭

‘ಕರ್ಲಮಂಗಲಂ ಶ್ರೀಕಂಠಯ್ಯನವರ ಲೇಖನಗಳು’, ಕನ್ನಡ ಸಂಘ, ವಿವೇಕಾನಂದ ಮಹಾ ವಿದ್ಯಾಲಯ, ಪುತ್ತೂರು ದ.ಕ., ೧೯೯೩, ಪು. iii-vii(ಮು.), ಶಾಸ್ತ್ರೀಯ -೬, ಪು. ೬೯೭-೭೦೧

‘ಚಾಮರಸ’, ಕವಿಕಾವ್ಯ ಪರಂಪರೆ-೨೦, ಐಬಿಎಚ್ ಪ್ರಕಾಶನ, ಬೆಂಗಳೂರು, ೧೯೮೭, ಪು. iii-vi (ಮು) ಶಾಸ್ತ್ರೀಯ-೬, ಪು. ೬೮೯-೬೯೧

‘ಚಿಕ್ಕದೇವರಾಜ’, ಮ.ನ. ಮೂರ್ತಿ, ಕನು., ೧೭-೪, ಏ. ೧೯೫೪, ಪು. ೭೩-೭೫ (ವಿ); ಹೊಸಸಾ. ೧೯೮೨, ಪು. ೯೮-೧೦೩. ಶಾಸ್ತ್ರೀಯ-೪, ಪು. ೪೯೪-೪೯೮

‘ತಲೆಕಟ್ಟು’ ಚ. ಸುಂದರೇಶನ್, ಕನು., ೨೭-೯, ಸೆ. ೧೯೬೪, ಪು. ೨೨೭ (ವಿ)

ದೇವಚಂದ್ರನ ‘ರಾಜಾವಳಿ ಕಥೆ’(ಆಕಾಶವಾಣಿ ಭಾಷಣ), ಉತ್ಥಾನ, ಅ. ೧೯೯೩, ಪು. ೯೨-೯೬

ಯಕ್ಷಗಾನ ಛಂದಸ್ಸು -ಕಬ್ಬಿನಾಲೆ ವಸಂತಭಾರದ್ವಾಜ, ಮುನ್ನುಡಿ, ಎಂ.ಜಿ.ಎಂ. ಕಾಲೇಜ್, ಉಡುಪಿ, ೧೯೯೮, ಪು. ೯-೧೩

೧೫ನೆಯ ಚುಟುಕು ಸಮ್ಮೇಳನದ ಅಧ್ಯಕ್ಷ ಭಾಷಣ, ಚುಟುಕು ಸಾಹಿತ್ಯ ಪರಿಷತ್, ಮಾಸೂರು, ೨೦೦೫ (ಅಪ್ರಕಟಿತ)

ಪಂಪನ ಕೃತಿಗಳ ಛಂದಃಶಿಲ್ಪ -ಯು. ಶಂಕರನಾರಾಯಣಭಟ್ಟ(ಮು), ಶಾಸ್ತ್ರೀಯ-೬, ಪು. ೬೯೨-೯೬

ಕನ್ನಡ ಸಂಶೋಧನೆ ಮತ್ತು ಚಿದಾನಂದ ಮೂರ್ತಿ -ಎಸ್.ಎಸ್.ಅಂಗಡಿ (ಮು)

‘ನೇಮಿಚಂದ್ರ’ ಬಿ.ಎಸ್.ಕುಲಕರ್ಣಿ, ಪುಸ್ತಕ ಪ್ರಪಂಚ, ೨೪-೮, ಮಾ ೧೯೭೦, ಪು. ೫೯-೬೨ (ವಿ)

‘ಬೆರಗು’, ಪ್ರಭುಶಂಕರ, ಗ್ರಂಥಲೋಕ, ೭-೧೧, ನ. ೧೯೮೨, ಪು. ೧೫-೧೬ (ವಿ)

ಮಹಾಪ್ರಬಂಧ ಸಮೀಕ್ಷೆ, ‘ಕವಿಚಕ್ರವರ್ತಿ ಪೊನ್ನ ಮತ್ತು ಅವನ ಕೃತಿಗಳು’ -ಎಂ.ಆರ್. ಉಮಾದೇವಿ; **‘ನೇಮಿಚಂದ್ರ’** -ಬಿ.ಎಸ್.ಕುಲಕರ್ಣಿ; **‘ನಯಸೇನ ಮತ್ತು ಅವನ ಕೃತಿಗಳು’**-ಬಿ.ವಿ.ಮಲ್ಲಾಪುರ; **‘ಕುಮಾರರಾಮನ ಸಾಂಗತ್ಯಗಳು’**-ಜಿ. ವರದರಾಜ ರಾವ್; **ನಾಗಚಂದ್ರ: ಒಂದು ಅಧ್ಯಯನ**- ವಿಜಯಾ ದಬ್ಬೆ, ‘ಗ್ರಂಥಲೋಕ’, ೮-೧, ಜ. ೧೯೮೪, ಪು. ೫-೨೦

ಮೇಷ್ಪ್ರಚೀಲ -ರಘುಸುತ, ಪುಲಿಕೇಶಿ ಪ್ರಕಾಶನ, ಯಶವಂತಪುರ, ಬೆಂಗಳೂರು, ೧೯೭೨ (ಮು)

ರಾಘಣ್ಣನ ಕಲಿಪದಗಳು -ಗಮಕಿ ಎಂ. ರಾಘವೇಂದ್ರರಾವ್, ಕಾವ್ಯಗಾಯನ ಕಲಾಮಂದಿರ, ಬೆಂಗಳೂರು ೧೯೯೧, ಪು. vi ರಿಂದ xii (ಮು)

ವರ್ಷದ ಲೇಖಕ ಪ್ರಶಸ್ತಿಗೆ (೯-೭-೮೮) ನೀಡಿದ ಉತ್ತರ, ಗ್ರಂಥಲೋಕ, ೧೨-೮, ಆ. ೧೯೮೮, ಪು. ೫-೭

'ವಿಚಾರಕಿರಣ' -ಜಿ.ಶ್ರೀನಿವಾಸನ್, ಗ್ರಂಥಲೋಕ, ೧೪-೧೧, ೧೯೯೦, ಪು. ೧೧-೧೨
'ವ್ಯಾಕರಣಗಳು', ಕವಿಕಾವ್ಯ ಪರಂಪರೆ -೧೩, ಐಬಿಎಚ್ ಪ್ರಕಾಶನ, ಗಾಂಧಿನಗರ, ಬೆಂಗಳೂರು, ಪುಸ್ತಕ ಪುರವಣಿ, ೨-೧೧, ೧೨, ನ.ಡಿ. ೧೯೭೮, ಪು. ೧೨-೧೩ (ವಿ)
ಶ್ರೀ ದೇವೀಮಾಹಾತ್ಮ್ಯದರ್ಶನ -ಬಿ.ಎಸ್.ಎಸ್.ಕೌಶಿಕ್, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ಮೈಸೂರು-೪, ಪು. ೭-೮ (ಮು)
'ಶ್ರೀ ಶಿವಾರ್ಪಣಂ', ಗೀತಾ ಬುಕ್ ಹೌಸ್, ಮೈಸೂರು, ೧೯೮೫, ಪು ix-xv (ಪ್ರಸ್ತಾವನೆ), ಶಾಸ್ತ್ರೀಯ-೬ ಪುಟ ೬೪೭-೫೩
'ಸಂಖ್ಯೆಗಳಿಂದ ಸ್ಫೂರ್ತಿ'- ಎಸ್.ಜಿ.ನರಸಿಂಹಯ್ಯ, ಗ್ರಂಥಲೋಕ, ೮-೧೧, ನ. ೧೯೮೪ ಪು. ೭
ಸಂಪಾದಕರ ಮಾತು, ಕಅಸಂ ಕಸಾಚ., ೧೯೭೪, ೧೯೭೫, ೧೯೭೬, ೧೯೭೭, ೧೯೮೧; ಪು. ೧೭-೧೯, ೧೭-೨೧, ೧೯-೨೪, ೧೯-೨೪
'ಸಂಶೋಧನ ವಿಹಾರ' ಗುಂಡ್ಮಿ ಚಂದ್ರಶೇಖರ ಐತಾಳ, ಆನಂದಪ್ರಕಾಶನ, ಮಂಗಳಗಂಗೋತ್ರಿ, ೫೭೪೧೯೯, ದ.ಕ. ೧೯೮೯, ಪು. vii-xiii (ಪರಿಚಯ)
ಸಂಶೋಧನೆ: ಇಂದು, ಪ್ರಕ. ೭೩-೩, ೪, ೧೯೯೨, ಪು. ೧-೯, ಶಾಸ್ತ್ರೀಯ ೪, ಪು. ೫೭೭ -೫೮೩
'ಸಿರುಮನ ಚರಿತೆ' -ಗ್ರಂಥ ಕುರಿತು, 'ಕಳಲೆ ಮನೆತನದ ವೀರಶೈವ ದಳವಾಯಿಗಳು', ಜಗದ್ಗುರು ಶ್ರೀಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು, ೧೯೯೪, ಪು. ೨೫೦-೫೧ (ವಿ)
'ಸೂತ್ರದ ಬೊಂಬೆ'(ಎಸ್.ಜಿ. ಶಾಸ್ತ್ರೀ), ಎಸ್.ಜಿ. ಶಾಸ್ತ್ರೀ, ಬಿ.ಎ., ಎಂ.ಎಸ್‌ಸಿ. ಎಫ್.ಸಿ.ಎಸ್. ಸಂಕ್ಷಿಪ್ತ ಜೀವನ ಪರಿಚಯ, ಸುವಿದ್ಯಾ ಪ್ರಕಾಶನ, ಬೆಂಗಳೂರು, ೧೯೯೫, ಪು iv-xi
'ಸೂಪಶಾಸ್ತ್ರ' (ಮಂಗರಸ)-ಸಂ. ಎಸ್.ಎನ್.ಕೃಷ್ಣಜೋಯಿಸ್, ಪುಸ್ತಕ ಪ್ರಪಂಚ, ೨೫-೬, ಜ. ೧೯೭೧, ಪು. ೫೯-೬೨
ಹೊಸ ಅಧ್ಯಯನದ ಆಹ್ವಾನ, 'ಸಾರ್ಥಕ', ಎಂ. ಮರಿಯಪ್ಪ ಭಟ್ಟ, ಸಂಸ್ಮರಣ ಗ್ರಂಥ, ಮದರಾಸು, ೧೯೯೫, ಪು. ೭೭೨-೭೮, ಶಾಸ್ತ್ರೀಯ -೪, ಪು. ೫೯೧-೫೯೬

ಕಾವ್ಯಚಿತ್ರಗಳು

ಅರ್ಥಭೇದ(ಮಯೂರ), ಕಾವ್ಯಚಿ, ಮೈಸೂರು, ೧೯೭೫, ಪು. ೭೯-೮೫
ಎರಡು ಉಪಾಖ್ಯಾನಗಳು(ಅಭಿಷೇಕ), ಕಾವ್ಯಚಿ, ಪು. ೭೧-೭೮
ಕಾಳನ ಕೆರೆ(ಪುಸ್ತಕ ಪ್ರಪಂಚ), ಕಾವ್ಯಚಿ., ಪು. ೯೫-೧೦೨
ಕಿರಾತಾರ್ಜುನೀಯ(ಕನ್ನಡಿಗ, ಸೆಯಿಂಟ್ ಜೋಸೆಫ್ಸ್ ಕಾಲೇಜು, ಬೆಂಗಳೂರು), ಕಾವ್ಯಚಿ., ೧-೧೧

ಕೀಚಕ ಮುನಿಯ ಕಥೆ(ಮಯೂರ), ಕಾವ್ಯಚಿ. ಪು. ೧೩೯-೪೩

ಚಂದ್ರಹಾಸಪ್ರಿಯೆ ವಿಷಯೆ(ರಾಮರಾಜ್ಯ), ಕಾವ್ಯಚಿ., ಪು. ೨೨-೨೯

ತುಂಬಿ ಹರಿದ ಭಾಗೀರಥಿ/ಕೆರೆಗೆ ಹಾರ (ಪುಸ್ತಕ ಪ್ರಪಂಚ) ಕಾವ್ಯಚಿ, ಪು.೮೬-೯೪

ದೈವಹತ ಅಶ್ವತ್ಥಾಮ(ಪ್ರಜಾಮತ), ಕಾವ್ಯಚಿ, ಪು. ೩೦-೪೦

ಬುದ್ಧನ ಕೊನೆಯ ದಿನ(ಜನಪ್ರಗತಿ), ಕಾವ್ಯಚಿ, ಪು. ೪೧-೪೮

ಯೇಸುವಿನ ಕೊನೆಯ ದಿನ(ಜನಪ್ರಗತಿ), ಕಾವ್ಯಚಿ, ಪು. ೪೯ -೫೭

ಸೀತನ ಕೊಟ್ಟ (ಪುಸ್ತಕ ಪ್ರಪಂಚ) ಕಾವ್ಯಚಿ., ಪು. ೧೦೩ -೧೧

ಪ್ರಬಂಧಗಳು

ಅನುಪಾಲನೆ(ಚಿಂತನ), ಉತ್ಥಾನ ಡಿ. ೧೯೯೬, ಪು. ೩೨-೩೩, ಮೆಲುಗಾಳಿಯ ಮಾತುಗಳು ಪು ೮೭ -೮೮

ಕಾಲ ಕೆಡುವುದು(ಚಿಂತನ), ಉತ್ಥಾನ, ಜೂ ೧೯೯೪, ಪು. ೬೮-೬೯, ಮೆಲುಗಾಳಿಯ ಮಾತುಗಳು ಪು. ೧೧೯-೧೨೦

ಚಿಂತನ(ಆಕಾಶವಾಣಿ ಚಿಂತನಗಳು), ಮಾನಕ, ೧೩-೧, ೧೯೮೨, ಪು. ೫೫-೬೮ ಮಾನಕ, ೧೪-೨, ೧೯೮೪, ಪು. ೭೯-೮೪, ಮಾನಕ., ೧೫-೨, ೧೯೮೫, ಪು. ೯೧-೧೦೦

ಚಿಂತನ ಷಟ್ಕ(ಆಕಾಶವಾಣಿ ಚಿಂತನಗಳು), ಪ್ರಕ., ೫೯-೨, ೧೯೭೭, ಪು. ೬೫-೭೧

ನಮ್ಮ ಕುನ್ನಿ ಕೂಜ, ಕನು., ಸೆ. ೧೯೬೧, ಪು. ೨೧೩-೧೬, ಸದ್ವೆಂತೆಂಬರ ಗಂಡ

ಪಾರ್ಥೇನಿಯಂ ಪ್ರಪಂಚ (ಚಿಂತನ), ಉತ್ಥಾನ, ೨೭-೨, ಅ. ೧೯೯೪, ಪು. ೬೮-೬೯, ಮೆಲುಗಾಳಿಯ ಮಾತುಗಳು ಪುಟ ೯೫-೯೬

ಪ್ರಾಣಿಗಳ ಶೋಷಣೆ ಇ., (ಚಿಂತನ), ಮಾನಕ., ೧೮-೧, ೧೯೮೮, ಪು. ೮೧ -೮೬, ಮೆಲುಗಾಳಿಯ ಮಾತುಗಳು ಪು. ೪೮-೪೯

ಪ್ರಾಣಿದಯೆ (ಚಿಂತನ), ಉತ್ಥಾನ, ಏ. ೧೯೯೭, ಪು. ೭೦-೭೧, ಮೆಲುಗಾಳಿಯ ಮಾತುಗಳು ಪು. ೯೦-೯೧

ಬಡತನ (ಚಿಂತನ), ಉತ್ಥಾನ, ಅ. ೧೯೯೬, ಪು. ೧೬-೧೭, ಮೆಲುಗಾಳಿಯ ಮಾತುಗಳು ಪು. ೮೪-೮೫

ಭಾವುಕತೆ (ಚಿಂತನ), ಉತ್ಥಾನ ಮೇ, ೧೯೯೫, ಪು. ೧೦-೧೧, ಮೆಲುಗಾಳಿಯ ಮಾತುಗಳು ಪು. ೧೦೩

ಮರೆಯಲಾಗದ ಮರಣ, ದೂತ, ಡಿ. ೧೯೬೯, ಜ. ೧೯೯೦

ಯಥೋಚಿತ (ಚಿಂತನ) ಉತ್ಥಾನ, ಸೆ. ೧೯೯೪, ಪು. ೪೪-೪೫, ಮೆಲುಗಾಳಿಯ ಮಾತುಗಳು ಪು. ೯೮

ಶಾಕಾಹಾರ(ಚಿಂತನ), ಉತ್ಥಾನ, ನ. ೧೯೯೬, ಪು. ೧೦-೧೧, ಮೆಲುಗಾಳಿಯ ಮಾತುಗಳು ಪು. ೮೬

ಶುಚಿತ್ವ(ಚಿಂತನ), ಉತ್ಥಾನ, ಏ. ೧೯೭೫, ಪು. ೧೦೧-೦೨, ಮೆಲುಗಾಳಿಯ ಮಾತುಗಳು ಪು. ೧೦೧-೧೦೨

ಸಣ್ಣದು(ಚಿಂತನ), ಉತ್ಥಾನ, ಮಾ. ೧೯೭೭, ಪು. ೧೦-೧೧, ಮೆಲುಗಾಳಿಯ ಮಾತುಗಳು ಪು ೭೨

ಸಮಾನತೆ(ಚಿಂತನ), ಉತ್ಥಾನ, ಜು. ೧೯೭೪, ಪು. ೮-೯, ಮೆಲುಗಾಳಿಯ ಮಾತುಗಳು ಪು. ೭೭

ಸಾರ್ವಜನಿಕ ಜೀವನ (ಚಿಂತನ) ಉತ್ಥಾನ, ಫೆ. ೧೯೭೭, ಪು. ೯-೧೦, ಮೆಲುಗಾಳಿಯ ಮಾತುಗಳು, ಪು. ೮೯

ಸ್ವೀಡನ್ ದೇಶದ ಮುತ್ತಜ್ಜ(ಅನು), ಪುಸ್ತಕ ಪ್ರಪಂಚ, ೮-೫, ಡಿ. ೧೯೫೩

ಹೆಸರಿನ ಮೋಹ(ಚಿಂತನ), ಉತ್ಥಾನ, ಮೇ. ೧೯೭೪, ಪು. ೯೮-೯೯, ಮೆಲುಗಾಳಿಯ ಮಾತುಗಳು, ಪು. ೧೧೮

ಸಿದ್ಧ ಪಾಠಗಳು

ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-೬

ಕನ್ನಡ ಛಂದಸ್ಸು, ಎಂ.ಎ.ಕನ್ನಡ (ಪ್ರ) ವಿದ್ಯಾರ್ಥಿಗಳಿಗೆ 'ಛಂದಸ್ಸು ಮತ್ತು ಗ್ರಂಥ ಸಂಪಾದನೆಯ ಮೂಲತತ್ತ್ವಗಳು(ಪತ್ರಿಕೆ ೩)' ಎಂಬುದರ ಭಾಗ (೧೫ ಸಂಚಿಕೆಗಳು) ಪಂಪಕವಿ ಮತ್ತು ಅವನ ಕೃತಿಗಳು (೪ ಪಾಠಗಳು)

ಜನ್ನ ಕವಿಯ ಇತಿವೃತ್ತ, ಶಾಸನಗಳು ಮತ್ತು 'ಅನುಭವ ಮುಕುರಂ', ಎಂ.ಎ., ಕನ್ನಡ (ಪ್ರ) ವಿದ್ಯಾರ್ಥಿಗಳಿಗೆ ಪ್ರಾಚೀನ ಸಾಹಿತ್ಯ: ವಿಶೇಷ ಕವಿ (ಪತ್ರಿಕೆ ೧) ಎಂಬುದರ ಭಾಗ (ಸಂಚಿಕೆಗಳು ೯-೧೨)

ನೇಮಿಚಂದ್ರನ 'ನೇಮಿನಾಥ ಪುರಾಣ', ಎಂ.ಎ. ಕನ್ನಡ (ಪ್ರ) ವಿದ್ಯಾರ್ಥಿಗಳಿಗೆ 'ಪ್ರಾಚೀನ ಸಾಹಿತ್ಯ : ವಿಶೇಷ ಕವಿ' (ಪತ್ರಿಕೆ ೧) ಎಂಬುದರ ಭಾಗ (೧೦ ಸಂಚಿಕೆಗಳು)

ಪಂಪಕವಿ ಮತ್ತು ಅವನ ಕೃತಿಗಳು (೪ ಪಾಠಗಳು)

'ಶಬ್ದಮಣಿದರ್ಪಣಂ', ಎಂ.ಎ. ಕನ್ನಡ (ದ್ವಿ) ವಿದ್ಯಾರ್ಥಿಗಳಿಗೆ (ಮುಕ್ತ ವಿಶ್ವವಿದ್ಯಾನಿಲಯದವರಿಗೆ) ಪತ್ರಿಕೆ ೫ (ಸಂಚಿಕೆಗಳು ೧-೧೮)

ಶಾಸನಪದ್ಯಗಳು, ಎಂ.ಎ. ಕನ್ನಡ (ದ್ವಿ) ವಿದ್ಯಾರ್ಥಿಗಳಿಗೆ 'ಶಾಸನಶಾಸ್ತ್ರ: ವಿಶೇಷವಾಗಿ ಕನ್ನಡಕ್ಕೆ ಸಂಬಂಧಿಸಿದಂತೆ' (ಪತ್ರಿಕೆ ೪) ಎಂಬುದರ ಭಾಗ (ಸಂಚಿಕೆಗಳು ೧೩-೨೫)

'ಶ್ರೀ ರಾಮಾಯಣದರ್ಶನಂ', ಎಂ.ಎ. ಕನ್ನಡ (ದ್ವಿ) ವಿದ್ಯಾರ್ಥಿಗಳಿಗೆ 'ವಿಶೇಷ ಕವಿ ಅಥವಾ ಪ್ರಕಾರ: ಹೊಸಗನ್ನಡ' (ಪತ್ರಿಕೆ ೧) ಎಂಬುದರ ಭಾಗ (ಸಂಚಿಕೆಗಳು ೧೦-೧೩; ೨೫)

ಕವಿತೆಗಳು

ಚಂದ್ರಿಕಾ -ಪ್ರ.ಕ. -೩೩-೩

ಹೂ-ಮುಳ್ಳು -ಜೀವನ -೨೩-೩

ವಿರಹ-ಕನ್ನಡ ನುಡಿ ೨೫-೪, ಏಪ್ರಿಲ್ ೧೯೬೨

ಕನ್ನಡ ಸಾಹಿತ್ಯದ ಮೇಲೆ ಭಾರತೀಯ ಭಾಷೆ ಸಾಹಿತ್ಯಗಳ ಪ್ರಭಾವ (EIL, Vol.2, 1988, pp., 1679-81 ಇಂಗ್ಲೀಷ್ ಲೇಖನದ ಕನ್ನಡ ಮೂಲ)

ಕನ್ನಡ ಕವಿಗಳು ಕಂಡ ಗೋಮ್ಮಟೇಶ್ವರ (ಶ್ರವಣಬೆಳ್ಗೊಳದ ಮಠದ ವತಿಯಿಂದ ಮೈಸೂರಿನ ೫೬) ವರ್ಧಮಾನಯ್ಯ ವಿದ್ಯಾರ್ಥಿನಿಲಯದಲ್ಲಿ ಏರ್ಪಡಿಸಿದ, ಗೋಮ ಟೇಶ್ವರ ಮಹಾಮಸ್ತಕಾಭಿಷೇಕ ಸಂದರ್ಭದ ವಿಚಾರಸಂಕಿರಣದಲ್ಲಿ ಮಂಡಿಸಿದ ಪ್ರಬಂಧ, ೩೧-೧೦-೧೯೮೩

ಡಾ.ಗೋವಿಂದ ಸ್ವಾಮಿರಾವ್ ಗಾಯಿ: ಅಭಿನಂದನೆ (ಚಿದಾನಂದ ಪ್ರಶಸ್ತಿ ಪ್ರಧಾನ ಸಂದರ್ಭದಲ್ಲಿ, ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಮಾಡಿದ ಅಭಿನಂದನ ಭಾಷಣ; ೧೫-೬-೧೯೯೩), ಶಾಸ್ತ್ರಿಯ-೫, ಪು. ೪೧೪-೪೨೨

ಜೈನ ರಾಮಾಯಣ: ಕಥೆ ಮತ್ತು ಸ್ವರೂಪ (ಮೈಸೂರು ವಿಶ್ವವಿದ್ಯಾನಿಲಯದ ಜೈನಶಾಸ್ತ್ರ ಮತ್ತು ಪ್ರಾಕೃತ ವಿಭಾಗದಲ್ಲಿ ನಡೆದ ವಿಚಾರ ಸಂಕಿರಣದಲ್ಲಿ ಮಂಡಿಸಿದ ಪ್ರಬಂಧ)

ಡಾ.ಹಾ.ಮಾ.ನಾಯಕರು(ಅಭಿನಂದನ ಲೇಖನ, ಸಂ. ಸೋಮಶೇಖರಗೌಡ, ಡಾ. ಪದ್ಮಾಶೇಖರ್), ಶಾಸ್ತ್ರಿಯ-೫, ಮಾರ್ಗದರ್ಶಕ ಮಹನೀಯರು, ಪುಟ ೪೬೬-೪೭೫

ಬಾಲಸಾಹಿತ್ಯರಚಕರಲ್ಲಿ ಆದ್ಯರು ಯಾರು? 'ಅವಲೋಕನ' (ತರಂಗ, ಏಪ್ರಿಲ್ ೧೪, ೧೯೯೧) ದ ಪ್ರತಿಕ್ರಿಯೆ, ಶಾಸ್ತ್ರಿಯ-೬ ಸಾಹಿತ್ಯಶೋಧ, ಪು. ೧೩೪-೧೩೬

ಎ.ಶಾಂತಿರಾಜ ಶಾಸ್ತ್ರೀ 'ಮಹಾಪುರಾಣ'ದ ಕನ್ನಡ ಗದ್ಯಾನುವಾದದ ಪರಿಚಯ, ಬೆಂಗಳೂರು ಪುರಭವನದಲ್ಲಿ ನಡೆದ ಸಮಾರಂಭದಲ್ಲಿ (೯-೫-೧೯೯೩) ಮಾಡಿದ ಭಾಷಣ, ಮಾರ್ಗದರ್ಶಕ ಮಹನೀಯರು, ಪು. ೨೬೮-೨೭೩

ಶ್ರೀ ಸೇಡಿಯಾಪು ಕೃಷ್ಣಭಟ್ಟರು, ಎಂ.ಜಿ.ಎಂ., ಕಾಲೇಜಿನಲ್ಲಿ ನಡೆದ ೯೦ನೆಯ ವರ್ಷದ ಅಭಿನಂದನ ಸಮಾರಂಭದಲ್ಲಿ (೯-೬-೧೯೯೧) ಮಾಡಿದ ಭಾಷಣ, ಮಾರ್ಗ ದರ್ಶಕ ಮಹನೀಯರು ಪು. ೩೧೬-೩೩೦

ಸಂಸ್ಕೃತಿ, ಸಂಕೀರ್ಣ

ಆಫ್ಘನಿಸ್ಥಾನದ ವಾಸ್ತುಶಿಲ್ಪ(ಅನು), ಪ್ರಸಾರಾಂಗ, ಮೈ.ವಿ.ವಿ., ಮೈಸೂರು

ಕರ್ನಾಟಕ: ದೇಶ ಮತ್ತು ಜನ, (Encyclopaedia of the Folk culture of Karnataka, vol. I, Institute of Asian Studies, Madras-41, pp. 1991 ಇಲ್ಲಿಯ ಇಂಗ್ಲೀಷ್ ಲೇಖನದ ಕನ್ನಡ ಮೂಲ)

ಗೊಮ್ಮಟಶಿಲ್ಪ ಮತ್ತು ಕನ್ನಡ ಕವಿಗಳು, ಜೈನಧರ್ಮ ಸಾಹಿತ್ಯ ಚಿಂತನೆ ಮತ್ತು ಅತ್ತಿಮಬ್ಬೆ ಸ್ಮರಣೆ ವಿಚಾರ ಸಂಕಿರಣದಲ್ಲಿ (೩೦-೧೨-೧೯೯೩) ಮಂಡಿಸಿದ ಪ್ರಬಂಧ

ನಮ್ಮ ಮೇಷ್ಟ್ರು (ಉ.ಕಾ. ಸುಬ್ಬರಾಯಾಚಾರ್ ಸಂಸ್ಮರಣ ಗ್ರಂಥ), ಶಾಸ್ತ್ರೀಯ-೫, ಪು. ೪೩೫-೪೩೮

ನಮ್ಮ ಮೇಷ್ಟ್ರು(ಸೋ. ಕರಿಯಪ್ಪ ಸಂಸ್ಮರಣ ಲೇಖನ), ಶಾಸ್ತ್ರೀಯ-೫, ಪು. ೩೧೦ -೩೧೫

ಮಾಳವಾಡ ಸ.ಸ. ಕವಿಕೋ., ಸಂ. ೧೩

ಶ್ರೀ ಶಂಕರರು(ಶಂಕರ ಜಯಂತಿ ಪ್ರಯುಕ್ತ ಸಂಸ್ಮರಣ ಆಕಾಶವಾಣಿ ಭಾಷಣ, ೧೯೯೧), ಶಾಸ್ತ್ರೀಯ-೬

ಸಂಕ್ರಾಂತಿ(ಆಕಾಶವಾಣಿ ಚಿಂತನ), ಮೆಲುಗಾಳಿಯ ಮಾತುಗಳು, ಪು. ೧೦೦

ಆಂಗ್ಲ ಲೇಖನಗಳು

Anonymous Literature, EIL., Vol. 1, 987, pp. 183-84

Aphorisms, Maxims and Proverbs (Kannada), EIL., Vol. I, 1987, pp. 207-09

Blank verse, EIL., Vol. I, 1987, pp. 551-53

Brahmasiva, Masterpieces of IND. 1997. Literature NBT, New Delhi.

Development of Old Kannada Language and Literature, South Indian Studies(T.V.Mahalingam Comm. Vol.), Geeta Book House, Mysore, 1987, pp. 828-51

Dr. Radhakrishnan as a Teacher, JMU., Vol. L. March and September 1988, pp. 82-85

Historical Survey of Dictionaries: Sanskrit and Kannada, JMU., Vol. liv, March and Sept., 1992, pp. 163-76

Historical Survey of Ancient Kannada Literature, An Anthology of Ancient Indian Literature, Sahitya Akademi. Delhi

Influence of Modern Indian Languages on Kannada, EIL., Vol. 2, 1988, pp. 1679-81

Jaina Kannada Literature under The Patronage of the Chalukyas of Kalyana, The Chalukyas of Kalyana, The Mythic Society, Bangalore, 1983, p. 215-20

Kannada Literature of the Rashtrakuta Period, The Rashtrakutas of Malkhed: Studies in their History and Culture, Geeta Book House, Mysore-1, pp. 398-409

Kannada Ramayanas: A Bibliography, A Critical Inventory of Ramayana Studies in the World, Vol. I, Sahitya Akademi, Delhi, 1991

Kannada Technical terms in Ancient Kannada Grammatical, Prosodical and Rhetorical Works, JMU., New Series, Section A - Arts, Vol. Ii, March and sept., 1989, pp. 1-6

Karnataka Sabdanusasana, Grammatical Literature of India, Agra

Karnataka: The Land and the People, Encyclopaedia of the Folk Culture of Karnataka, pt. I, Classical Culture, Institute of Asian Studies, Madras 1991, pp. 1-13

Nagachandra, EIL., Vol. 3, 1989, pp. 2838-39

Nagavarma II, EIL., Vol 3, 1989, pp. 2842-43

Nemichandra, EIL., Vol. 4, 1991, pp. 2940-41

Prosody(Ḳannada), EIL., Vol. 4, 1991, pp. 3437-38

Ragale, EIL., Vol. 4, 1991, pp. 3489-90

Semasiological problems in the Kannada Lexicon, Studies in Indian Culture (Prof. S. Ramachandra Rao, Fel. Vol.), Felicitation Committee, Bangalore, 1986, pp. 272-78

Shama Rao M.: Life and Career, QJMS., Vol. Lxxx-No. 1-4, Jan.-Dec. 1989, pp. 219-30 ; JMU., Vol. lii, March-Sept 1990, pp. 34-42

Sloka Metre in Kannada Literature, Srikanthika (Prof. S. Srikantha Sastri Fel. Vol.), Geeta Book House, Mysore, 1973, pp. 199-205

Vaddaradhane, Masterpieces of Indian Literature, National Book Trust, India. Vol. 1, 1997, pp. 569-572.

Women Writers of Kannada Literature (C. 1100-1750), JMU., Vol. Liii-1, March 1991, pp. 1-17

ಅಪ್ರಕಟಿತ

Buddhism and Kannada Literature, The Mythic Society, Bangalore

Jaina Bharata: The plot and strutcture, The Mythic Society, Bangalore

- ಸಂಗ್ರಾಹಕ : ಸ.ಕಾರ್ತಿಕ್



ಪ್ರೊ. ಟಿ.ವಿ. ವೆಂಕಟಾಚಲ ಶಾಸ್ತ್ರಿಯವರು ನಮ್ಮ ನಾಡಿನ ಗಣ್ಯ ವಿದ್ವಾಂಸರು. ಅವರು ಪ್ರೊ ಡಿ.ಎಲ್. ನರಸಿಂಹಾಚಾರ್ ಮತ್ತು ಪ್ರೊ. ತೀ.ನಂ. ಶ್ರೀಕಂಠಯ್ಯ ಇವರ ಹಾದಿಯಲ್ಲಿ ನಡೆದು ಪ್ರಸಿದ್ಧರಾದವರು. ಪ್ರೊ. ಟಿ.ವಿ.ವಿ ಕನ್ನಡವನ್ನು ಕಟ್ಟಿದ ಕನ್ನಡ ವಿದ್ವಾಂಸರು ಮಾತ್ರವಲ್ಲ ; ನೂರು ಗ್ರಂಥಗಳನ್ನು ಪ್ರಕಟಿಸಿದ ಕನ್ನಡ ವಿದ್ವತ್ತಿನ ಧೀರರು. ಅವರ ಪ್ರತಿಯೊಂದು ಕೃತಿಗಳು ಗಣ್ಯಾತಿಗಣ್ಯವೆನಿಸಿ ನಮ್ಮ ನಾಡಿನ ಸಾಂಸ್ಕೃತಿಕ ಶ್ರೀಮಂತಿಕೆಯ ದ್ಯೋತಕಗಳಾಗಿವೆ. ಈಗ ಅವರಿಗೆ ೭೫ರ ಸಂಭ್ರಮ. ನಮ್ಮ ನಾಡಿನ ಗಣ್ಯ ವಿದ್ವಾಂಸರು, ಹಾಗೂ ಸುವಿಖ್ಯಾತ ಲೇಖಕರ ಬರಹಗಳನ್ನೊಳಗೊಂಡ 'ಕನ್ನಡಮೇರು' ಅಭಿನಂದನ ಸಂಪುಟ ೭೫ರ ಹೊತ್ತಿನಲ್ಲಿ ಶಾಸ್ತ್ರಿಯವರಿಗೆ ಅರ್ಪಿತವಾಗುತ್ತಿದೆ. ಆ ಸಂಭ್ರಮದ ಸಂಕೇತವಾಗಿ 'ಕನ್ನಡಮೇರು' ಕನ್ನಡಿಗರ ಮುಂದಿದೆ.

ಇದು ಶಾಸ್ತ್ರಿಯವರ ಒಟ್ಟು ಕೃತಿತ್ವ, ವ್ಯಕ್ತಿತ್ವ, ಮತ್ತು ವ್ಯಕ್ತಿಮತ್ವಗಳನ್ನು ಅನುಸಂಧಾನಿಸುತ್ತದೆ. ಪಾಂಡಿತ್ಯ ಮತ್ತು ಶಾಸ್ತ್ರೀಯತೆ ಟಿ.ವಿ.ವಿ. ಅವರ ಎರಡು ಕಣ್ಣುಗಳು. ಪಾಂಡಿತ್ಯವಿಲ್ಲದೆ ಶಾಸ್ತ್ರೀಯತೆ ಸಿದ್ಧಿಸಲಾರದು. ಶಾಸ್ತ್ರೀಯತೆ ಇಲ್ಲದೆ ಪಾಂಡಿತ್ಯ ದೊರಕಲಾರದು. ಇವೆರಡೂ ಅನ್ಯೋನ್ಯಾಶ್ರಯವನ್ನು ಪಡೆದಿವೆ. ಶಾಸ್ತ್ರಿಯವರನ್ನು ಕುರಿತ ಇಲ್ಲಿಯ ಬರಹಗಳಲ್ಲಿ ಈ ಅಂಶವನ್ನು ನಾವು ಕಾಣತ್ತೇವೆ.

ಈ ಸಂಪುಟದ ಬರಹಗಳಲ್ಲಿರುವ ಹಲವು ಬಗೆಯ ನೋಟಗಳು ಹಾಗೂ ಒಳನೋಟಗಳು ಭಿನ್ನಭಿನ್ನ ನೆಲೆಗಳನ್ನೊಳಗೊಂಡಿವೆ. ಪ್ರೊ. ಟಿ.ವಿ. ವೆಂಕಟಾಚಲ ಶಾಸ್ತ್ರಿಯವರ ಒಟ್ಟು ವಿದ್ವತ್ತಿನ ವ್ಯಕ್ತಿತ್ವಕ್ಕೆ ಇವು ಕನ್ನಡಿಹಿಡಿಯುತ್ತವೆ.

– ಪ್ರಧಾನ ಸಂಪಾದಕ

ಬೆಲೆ ರೂ. ೩೫೦/-

ಸಂಸ್ಕೃತಿ ಪಬ್ಲಿಷಿಂಗ್ ಹೌಸ್
ಕಾಶೀಪತಿ ಅಗ್ರಹಾರ, ಮೈಸೂರು